ಸಂಪುಟ ೨] ಶನಿವಾರ ೧-೧-೪೪ [ಸಂಚಿಕೆ ೧೪೨

ಫ್ರಾನ್ಸ್ ವಿಷ್ಯ್ಯಾ ಕದನ ದೀರ್ಘವಾಗಿರುತ್ತದೆ

ಬಾವಿ ತೋಡುತ್ತಿದ್ದಾಗ ೫೦ ಸಾವಿರ ಪೌಂಡು ನಿಧಿ

ಹಿಂದೂಸ್ಥಾನದಲ್ಲಿ ಮೋಟಾರು ಕಾರ್ಖಾನೆ ಸ್ಥಾಪನೆ

ಬಳೆಟ್ ಷಾಪ್ ಪತ್ತೆ

ಮೈಸೂರು ೩. ೧

ಮೈಸೂರು ರವಾ ವಿಲಾಸ ರಸ್ತೆ ೬೦ ನೆ ಮನೆಯಲ್ಲಿ ಕೆಲವರು ಜೂಜಿನ ಬಗ್ಗೆ ಬಕೆಟ್ ಷಾಪ್ ನಡೆಸುತ್ತಿದ್ದರೆಂಬ ಗುಮಾನಿ ಮೇಲೆ ಈ ಮಧ್ಯಾಹ್ನ 'ಬಿ' ಡಿವಿಜನ್ ಇನ್ಸ್‌ಪೆಕ್ಟರಾದ ಶ್ರೀ ಕೆ. ಜಿ. ಹನುಮಂತರಾಯರೂ, ಕೃಷ್ಣರಾಜ ಸಬ್ ಇನ್ಸ್‌ಪೆಕ್ಟರಾದ ಶ್ರೀ ಸುಬ್ಬರಾಯರೂ ಅಲ್ಲಿಗೆ ಮುತ್ತಿಗೆ ಹಾಕಿ ೬ ಜನರನ್ನು ದಸ್ತಗಿರಿ ಮಾಡಿರುವುದಾಗಿ ತಿಳಿದು ಬಂದಿದೆ.

ಶ್ರೀ ಭಾರತೀ ಸಂಘ

ಶ್ರೀ ರಾಮಕೃಷ್ಣ ಪರಮಹಂಸರ ಜ್ಞಾಪಕಾರ್ಥವಾಗಿ ಮಲ್ಲೇಶ್ವರದ ಸಂಘದ ಆಶ್ರಯದಲ್ಲಿ ಅಖಿಲ ಕರ್ನಾಟಕದ ಅಂತರ್ವಿದ್ಯಾಸಂಸ್ಥೆಗಳ ಚರ್ಚಾ ಸ್ಪರ್ಧೆಯನ್ನು ಈ ತಿಂಗಳು ೧೬ ತಾ|| ಭಾನುವಾರ ಏರ್ಪಡಿಸಿದೆ. ಈ ಚರ್ಚೆಯಲ್ಲಿ ಭಾಗವಹಿಸುವ ಸಂಸ್ಥೆಗಳು ಹೆಚ್ಚಿನ ವಿವರಗಳನ್ನು ಸಂಘದ ಕಾರ್ಯದರ್ಶಿಗಳಿಂದ ತಿಳಿದುಕೊಳ್ಳಬಹುದು.

ಪಾಕಿಸ್ಥಾನ ಖಂಡನೆ

೩ ನೇ ತಾ|| ಸೋಮವಾರ ಸಂಜೆ ೬ ಗಂಟೆಗೆ ಸುಬ್ರಹ್ಮಣ್ಯ ಛತ್ರ ಆಂಗಳದಲ್ಲಿ ಮೈಸೂರಿನ ತರುಣ ಹಿಂದೂ ಮಹಾಸಭೆಯ ಆಶ್ರಯದಲ್ಲಿ ಮದರಾಸಿನ ಶ್ರೀ ವಿ. ಮಹಾಲಿಂಗಂ ಪಿಳ್ಳೆಯವರು ಪಾಕಿಸ್ಥಾನವನ್ನು ಖಂಡಿಸಿ ಭಾಷಣ ಮಾಡುವರು. ಶ್ರೀ ಟಿ. ಎಸ್. ರಾಜಗೋಪಾಲಯ್ಯಂಗಾರ್‌ರವರು ಅಧ್ಯಕ್ಷತೆ ವಹಿಸುವರು.

ಉಪನ್ಯಾಸ

ನಾಳೆ ದಿನ ಬೆಳಗ್ಗೆ ೮½ ಗಂಟೆಗೆ ಮಹಾರಾಜ ಕಾಲೇಜಿನಲ್ಲಿ ಕರ್ನಾಟಕ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದ ಶ್ರೀ ಮಾಸ್ತಿ ... ರಾಮಚಂದ್ರ ... ರವರು, ... ವಿದ್ಯಾನಿಲಯ ಸಂಘದ ಆಶ್ರಯದಲ್ಲಿ ಉಪನ್ಯಾಸ ಮಾಡುವರು. ಸರ್ವರಿಗೂ ಆಹ್ವಾನವುಂಟು.

ರಾಷ್ಟ್ರೀಯ ರಕ್ಷಣಾ ಬಲ

ಮ|| ರಾ|| ಸಿ. ಶ್ರೀಕಂಠಯ್ಯನವರು ಕಳೆದ ... ನೇ ತಾ|| ಗಳಲ್ಲಿ ... ಕಾಲ್ಲೂರಿನಲ್ಲಿ ಪ್ರವಾಸ ಮಾಡಿ ... ಬೆಳಗೂರು ಮತ್ತು ... ಗ್ರಾಮಗಳಲ್ಲಿ ಸಾರ್ವಜನಿಕ ಸಭೆಗಳಲ್ಲಿ ರಾಷ್ಟ್ರೀಯ ರಕ್ಷಣಾಬಲದ ವಿಚಾರವಾಗಿ ಉಪನ್ಯಾಸ ಮಾಡಿದರು. ನೂರಾರು ಜನರು ಬಂದಿದ್ದರು. ... ಸೇರಲು ... ಹೆಸರನ್ನು ... ರೆಂದು ...

ಹಿಂದೂಸ್ಥಾನದಲ್ಲಿ ಮೋಟಾರು ಕೈಗಾರಿಕೆ

ಶೀಘ್ರದಲ್ಲಿಯೇ ಮೋಟಾರು ಬಿಡಿಭಾಗಗಳನ್ನೂ ಕಾರುಗಳನ್ನೂ ಹಿಂದೂಸ್ಥಾನದಲ್ಲಿ ತಯಾರಿಸಲು ಸಾಧ್ಯವಾಗಬಹುದೆಂದು ಹೇಳಲಾಗಿದೆ. ... ಈ ಉದ್ಯಮವನ್ನು ... ಸಾಧ್ಯವಾದೊಡನೆ ... ಇಂಗ್ಲೆಂಡ್ ... ಈ ... ಕಾರ್ಖಾನೆ ... ಮೋಟಾರುಗಳನ್ನು ... ತಯಾರಿಸುವರು.

ಜೈಪುರದಲ್ಲಿ ಸುಧಾರಣೆ

ಜೈಪುರದ ರಾಜ್ಯಾಂಗ ಸುಧಾರಣೆಯಲ್ಲಿ ... ಜನ ಸದಸ್ಯರನ್ನೊಳಗೊಂಡ ನ್ಯಾಯ ವಿಧಾಯಕ ಸಭೆಯು ... ಪ್ರದೇಶ ... ಚುನಾಯಿತ ಸದಸ್ಯರೆಂದೂ ಜೈಪುರ ಸಂಸ್ಥಾನದವರು ಪ್ರಕಟಿಸಿರುವರು.

ಇದಲ್ಲದೆ ... ಸದಸ್ಯರನ್ನೊಳಗೊಂಡ ಒಂದು ಪ್ರಜಾಪ್ರತಿನಿಧಿ ಸಭೆಯನ್ನು ಸ್ಥಾಪಿಸಲಾಗುವುದು. ... ಸಭೆಯಲ್ಲಿ ... ಚುನಾವಣೆಯಿಂದ ... ಹಿಂದೂ ... ಮಂತ್ರಿಗಳನ್ನು ... ಈ ಬಗ್ಗೆ ... ಮಾಡಲಾಗುವುದು.

ಮಾರ್ಷಲ್ ಟಿಟೋ ಮೇಲೆ ಮುತ್ತಿಗೆ

... ಮಾರ್ಷಲ್ ಟಿಟೋ ... ಬಾಂಬುಗಳನ್ನು ... ವಿಮಾನಗಳನ್ನು ... ವಿಮಾನಗಳು ಪತ್ತೆಯಿಲ್ಲ.

ಅಮೇರಿಕಾ ಕದನದಲ್ಲಿ ಚೀಣೀಯರು

ಅಮೇರಿಕಾ ಸರಕಾರ ... ನ್ಯೂಯಾರ್ಕಿನಲ್ಲಿ ನಡೆದ ... ಜನ ... ಭಾಗ ... ನ್ಯೂಯಾರ್ಕಿನಲ್ಲಿ ೨೦ ಸಾವಿರ ಚೀಣೀಯರು ...

ನೌಕಾ ಪಡೆಗಳ ವರ್ಗ

... ಮಿತ್ರ ನೌಕಾ ಪಡೆಗಳನ್ನು ... ಈ ವರ್ಷ ... ನಡೆಸಲಾಗುವುದಾಗಿ ಸಂಯುಕ್ತ ಸಂಸ್ಥಾನದ ನೌಕಾಧಿಕಾರಿಗಳಾದ ಅಡ್ಮಿರಲ್ ಕಿಂಗ್ ರವರು ತಿಳಿಸಿದ್ದಾರೆ.

ಗ್ಲಾಸ್ಟರ್‌ಗಾಗಿ ಹೋರಾಟ

ಗ್ಲಾಸ್ಟರ್ ಭೂಶಿರದಲ್ಲಿ ಘೋರ ಹೋರಾಟ ನಡೆಯುತ್ತಿದೆ ... ಜಪಾನೀಯರ ... ಬೆಟ್ಟಗಳನ್ನು ... ವಶಪಡಿಸಿಕೊಳ್ಳಲಾಗಿದೆ.

ಬಾವಿ ತೋಡುವಾಗ ೫೦ ಸಾವಿರ ಪೌಂಡ್ ನಿಧಿ

ಉತ್ತರ ಆಫ್ರಿಕಾದ ಅಕ್ಸೂಂ ಎಂಬಲ್ಲಿ ಇಬ್ಬರು ರೈತರು ಬಾವಿಯನ್ನು ತೋಡುತ್ತಿದ್ದಾಗ ೫೦ ಸಾವಿರ ಪೌಂಡ್ ನಿಧಿಯನ್ನು ಕಂಡರು. ... ಎಂಬ ... ರಾಜ ... ಅದರಲ್ಲಿ ... ನಾಣ್ಯಗಳೂ ಇದ್ದುವು. ... ನೇ ಶತಮಾನಕ್ಕೆ ಸೇರಿದುವೆಂದು ... ನಿಧಿಯನ್ನು ... ಅಧಿಕಾರಿಗಳು ಅವರನ್ನು ದಸ್ತಗಿರಿ ಮಾಡಿ ನಿಧಿಯನ್ನು ... ಗೋಡಿಯನ್ನು ತಮ್ಮ ವಶಕ್ಕೆ ತೆಗೆದುಕೊಂಡಿರುವರು.

ಜಪೋಸ್ಲಾವಿಯಾ ನಗರ ದಸ್ತಗಿರಿ

ರೋಂ ರೇಡಿಯೋ ... ಜುಗೋಸ್ಲಾವಿಯಾ ... ದಸ್ತಗಿರಿ ಮಾಡಿರುವುದಾಗಿ ಜರ್ಮನ್ ... ತಿಳಿಸುತ್ತದೆ. ... ಮತ್ತು ... ಹೊಸ ...

ಮಿತ್ರ ನೌಕೆಗಳು ಪೆಸಿಫಿಕ್ಕಿಗೆ

ಯೂರೋಪಿನ ... ಮಿತ್ರ ನೌಕೆಗಳನ್ನು ಪೆಸಿಫಿಕ್ಕಿಗೆ ... ವ್ಯವಸ್ಥೆಗಳು ... ಜಪಾನಿನ ... ಹೋರಾಡುವ ... ಅಮೇರಿಕದ ನೌಕಾ ... ಅಡ್ಮಿರಲ್ ... ಹೇಳಿದ್ದಾರೆ.

ಲಿಬರ್ಟಿ ದಸ್ಯ ವರ

... ಬೆಲ್ಜಿಯಂ ... ಎಂಬ ನಗರವನ್ನು ... ವರದಿ ಬಂದಿದೆ.

ಶುಭಾಶಯ

೧೯೪೪ನೇ ವರುಷದಲ್ಲಿ ಜಗದೀಶ್ವರನು ಸಕಲರಿಗೂ ಶ್ರೇಯಸ್ಸುಂಟಾಗುವಂತೆ ಮಾಡಲೆಂದು ಪ್ರಾರ್ಥಿಸುತ್ತೇವೆ. [ಸಂ.]

ನಾಜಿ ಪಿತೂರಿಗಾರರು ಬರಲಿಲ್ಲ

ಟೆಹರಾನಿನಲ್ಲಿ ಮಿತ್ರ ಪ್ರಮುಖರು ಸಮ್ಮೇಳನಕ್ಕಾಗಿ ಸೇರಿದ್ದಾಗ, ಅವರನ್ನು ಕೊಲ್ಲಲು ನಾಜಿ ಪಿತೂರಿಗಾರರು ಬಂದಿದ್ದರೆಂದು ವರದಿಯಾಗಿತ್ತಷ್ಟೆ. ದೆಹಲಿಗೆ ಈಗ ಬಂದಿರುವ ಇರಾನಿನ ಪ್ರಧಾನ ... ಅಲಿ ... ರವರು ಒಂದು ಹೇಳಿಕೆಯನ್ನು ಕೊಟ್ಟು ಟೆಹರಾನ್ ಸಮ್ಮೇಳನದ ಕಾಲದಲ್ಲಿ ಯಾವ ನಾಜಿ ಪಿತೂರಿಗಾರರುಗಳೂ ಬಂದಿಳಿಯಲಿಲ್ಲವೆಂದು ತಮ್ಮ ಸರ್ಕಾರದಿಂದ ತಿಳಿದುಬಂದಿರುವುದಾಗಿ ಹೇಳಿದರು. ಅಲ್ಲದೆ ಇರಾನಿನ ಅಧಿಕಾರಿಗಳು ಮಿತ್ರರಾಷ್ಟ್ರದವರೊಡನೆ ಸಂಪೂರ್ಣ ಸಹಕಾರದಿಂದ ಸಕಲ ರಕ್ಷಣಾ ವ್ಯವಸ್ಥೆಯನ್ನೂ ಮಾಡಿದ್ದರೆಂದೂ ಇದಕ್ಕಾಗಿ ಮಿತ್ರ ಮುಖಂಡರುಗಳು ಅವರನ್ನು ವಂದಿಸಿದರೆಂದೂ ಸಹಾ ಅವರು ತಿಳಿಸಿದರು.

ತೊಟ್ಟು ರಕ್ತವಿರುವವರೆಗೂ ಹೋರಾಟ

ದಕ್ಷಿಣ ಇಟಲಿಯಲ್ಲಿ ಹೋರಾಡುತ್ತಿರುವ ಜರ್ಮನ್ ಸೈನ್ಯಗಳಿಗೆ ಮೇಲ್ಪಟ್ಟ ಅಧಿಕಾರಿಗಳು ಒಂದು ಸಂದೇಶವನ್ನು ಕಳುಹಿಸಿ, ಅವರ ಶರೀರದಲ್ಲಿ ಒಂದು ತೊಟ್ಟು ರಕ್ತವಿರುವವರೆಗೂ ಹೋರಾಡಬೇಕೆಂದೂ, ಯಾವ ಕಾರಣದಿಂದಲೂ ಒಂದು ಅಂಗುಲ ಭೂಮಿಯನ್ನಾದರೂ ಬಿಟ್ಟುಕೊಡಕೂಡದೆಂದೂ ಆಜ್ಞೆ ಮಾಡಿರುವುದಾಗಿ ತಿಳಿಸಿರುವರು.

ನಾಜಿಗಳ ಹೊಸ ರಕ್ಷಣಾ ವ್ಯವಸ್ಥೆ

ಇಟಲಿಯಲ್ಲಿ ಮಿತ್ರ ಎಂಟನೇ ಸೈನ್ಯವು ಪಿಸ್ಕಾರಾ ರಸ್ತೆಯಲ್ಲಿ ಮುಂದುವರಿಯುತ್ತ ಒರ್ಟೋನಾ ... ಒರ್ಟೋನಾ ಸುತ್ತಲೂ ಬಲವಾದ ಸೈನ್ಯಗಳನ್ನೂ ಬಿಟ್ಟು ... ಈ ನಗರವನ್ನು ಬಿಟ್ಟು ಹೋಗುವಾಗ ಜರ್ಮನರು ಇಟ್ಟಿದ್ದ ಟೈಂ ಬಾಂಬುಗಳು ಇನ್ನೂ ಸಿಡಿಯುತ್ತಲೇ ಇವೆ. ಇಟಲಿಯಲ್ಲಿ ನಾಜಿಗಳು ಹೊಸ ರಕ್ಷಣಾ ಸಾಲುಗಳನ್ನು ರಚಿಸುತ್ತಿರುವರು.

ಬೆಂಗಳೂರು ಸ್ಟೇಷನ್ ಆಡಳಿತ ಮೈಸೂರಿಗೆ

ಇಂದಿನಿಂದ ಬೆಂಗಳೂರು ರೈಲ್ವೆ ಸ್ಟೇಷನ್ ಮೇಲಿನ ಸಂಪೂರ್ಣ ಅಧಿಕಾರವನ್ನೂ ಬೆಂಗಳೂರು ಸ್ಟೇಷನ್ನಿನ ಹಿಂದೂಪುರದವರೆಗೆ ಇರುವ ರೈಲ್ವೆ ಲೈನಿನ ಅಧಿಕಾರವನ್ನೂ ಮೈಸೂರು ಸರ್ಕಾರಕ್ಕೆ ಬಿಟ್ಟುಕೊಡಲು ಇಂಡಿಯಾ ಸರ್ಕಾರದವರು ಒಪ್ಪಿದ್ದಾರೆ. ಈ ಬಗ್ಗೆ ಮೈಸೂರು ಸರ್ಕಾರದವರು ವಿಶೇಷ ಗೆಜೆಟ್ ಪ್ರಕಟಣೆ ಹೊರಡಿರುವರು.

ಶಾಸ್ತ್ರಿ ಪ್ರೇಕ್ಷಕರ ಅರಿಕೆ

ಕಲ್ಕತ್ತೆಯಲ್ಲಿ ಇರುವ ಹಿಂದೂಸ್ಥಾನದ ಪ್ರಮುಖ ಶಾಸ್ತ್ರಿಗಳಾದ ಡಾ|| ... ರವರು ... ಸಂಬಂಧದಲ್ಲಿ ... ಭಾರತೀಯ ... ಮಾಡಿದ್ದಾರೆ.

ಕಮ್ಯೂನಿಸ್ಟರ ಮೇಲಿ ಪ್ರತಿಬಂಧಕ

ದೆಹಲಿ ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿ ಶ್ರೀ ವ್ಹಿ. ಡಿ ಪರ್ಮಾನವರು ದೆಹಲಿ ಬಿಟ್ಟು, ಸಭೆ ಮುಂತಾದುವುಗಳಲ್ಲಿ ಭಾಗವಹಿಸಕೂಡದೆಂದೂ, ಪತ್ರಿಕೆಗಳಿಗೆ ಪ್ರಕಟಣೆಗಳನ್ನು ಕೊಡಕೂಡದೆಂದೂ ಚೀಫ್ ಕಮೀಷನರು ಅವರ ಮೇಲೆ ಪ್ರತಿಬಂಧಕಾಜ್ಞೆಯನ್ನು ಜಾರಿಮಾಡಿದ್ದಾರೆ.

ಲಾಠಿ ಪ್ರಯೋಗ ವಿಚಾರಣೆ

ಡಿಸೆಂಬರ್ ೨೩ ರಲ್ಲಿ ಅಮೃತಸರದಲ್ಲಿ ಹಿಂದೂ ಮಹಾಸಭಾಧ್ಯಕ್ಷ ಮೆರವಣಿಗೆ ಆದಾಗ ಪೋಲೀಸರು ನಡೆಸಿದ ಲಾಠೀ ಪ್ರಯೋಗದ ಬಗ್ಗೆ ವಿಚಾರಣೆ ನಡೆಸಲು ಅಖಿಲ ಭಾರತ ಹಿಂದೂ ಮಹಾಸಭೆಯ ಕಾರ್ಯಕಾರಿ ಸಮಿತಿಯವರು ಒಂದು ಸಮಿತಿಯನ್ನು ರಚಿಸಿರುವರು. ಆ ಸಮಿತಿಗೂ ಶೀಘ್ರ ಕೆಲಸದ ಸಾಕ್ಷ್ಯ ತೆಗೆದುಕೊಂಡಿತು.

ಕಾಂ|| ಅಧ್ಯಕ್ಷರಿಗೆ ಸೋದರೀ ವಿಯೋಗ

ಕಾಂಗ್ರೆಸ್ ಅಧ್ಯಕ್ಷರಾದ ಮೌ|| ಅಬ್ದುಲ್ ಕಲಾಂ ಆಜಾದ್‌ರವರ ಸಹೋದರಿ ಅಬ್ರುಬೇಗಂರವರು ನೆನ್ನೆ ಮಧ್ಯಾಹ್ನ ಭೋಪಾಲ್‌ನಲ್ಲಿ ನಿಧನರಾದರು. ಇವರು ಕೆಲವು ದಿನಗಳಿಂದ ರೋಗಪೀಡಿತರಾಗಿದ್ದರು. ಅಖಿಲ ಭಾರತ ಮಹಿಳಾ ಸಮ್ಮೇಳನಗಳಲ್ಲಿ ಇವರು ಅನೇಕ ಸಾರಿ ಮುಖ್ಯ ಪಾತ್ರ ವಹಿಸಿ ಮಹಿಳಾ ಪ್ರಪಂಚಕ್ಕೆ ತುಂಬಾ ಸೇವೆ ಸಲ್ಲಿಸಿದ್ದರು.

ಕೊಚ್ಚಿಯಲ್ಲಿ ಸಂಬಳ ಹೆಚ್ಚಿಸುವುದಿಲ್ಲ

ಸಂಸ್ಥಾನದ ನೌಕರರು ತಮ್ಮ ಸಂಬಳಗಳನ್ನು ಹೆಚ್ಚಿಸಬೇಕೆಂದು ಕೇಳಿಕೊಂಡ ಪ್ರಶ್ನೆ ಕೊಚ್ಚಿ ಸರ್ಕಾರದವರು ಅಂಗೀಕರಿಸಿಲ್ಲವೆಂದು ಹೇಳಿದ್ದಾರೆ. ಈಗ ಹೆಚ್ಚಾಗಿರುವ ದಿನಸಿ ಬೆಲೆಗಳಿಗಾಗಿ ಕೊಟ್ಟ ಭತ್ಯವನ್ನು ಕೊಡಬಹುದೇ ವಿನಃ ಸಾರ್ವತ್ರಿಕವಾಗಿ ಸಂಬಳ ಹೆಚ್ಚುಮಾಡುವುದಿಲ್ಲವೆಂದು ತಿಳಿಸಿದ್ದಾರೆ.

ಢಾಕಾದಲ್ಲಿ ಅರ್ಧ ಜನರ ಮರಣ

ಢಾಕಾ ಜಿಲ್ಲೆಯಲ್ಲಿ ಮಲೇರಿಯಾ, ಸಿಡುಬು, ಕಾಲರಾ, ಮತ್ತು ಕ್ಷಾಮ ಈ ಕಾರಣಗಳಿಗಾಗಿ ಲೆಕ್ಕದ ಶೇ ೫೦ ರಷ್ಟು ಮಂದಿ ಮೃತರಾಗಿದ್ದಾರೆಂದು ಪೌರಸಭೆಯ ಸಾರ್ವಜನಿಕ ಆರೋಗ್ಯ ಸಮಿತಿ ಅಧ್ಯಕ್ಷರು ತಿಳಿಸಿದ್ದಾರೆ.

ಒಲೆಯಲ್ಲಿ ಬಾಂಬು

ಪೇಷಾವರದಲ್ಲಿ ರೈಲು ನಿಲ್ದಾಣದ ಸಮೀಪದಲ್ಲಿ ಒಂದು ಗುಡಿಸಿಲಿನಲ್ಲಿ ಒಲೆ ಹಚ್ಚುತ್ತಿದ್ದಾಗ ಒಲೆಯಲ್ಲಿ ಅಡಗಿದ್ದ ಡೈನಾಮೈಟ್ ಒಂದು ಸಿಡಿಯಿತು. ... ಆ ಸಿಡಿತಕ್ಕೆ ಸಿಕ್ಕಿ ... ಸ್ಥಳದಲ್ಲಿಯೇ ಸತ್ತರು.

Edited, printed and published by ... Nagarajan, at the ... Press ... Mysore

ಸಚಿವರ ಪ್ರವಾಸ

[ಸ್ವಂ ಸು] ಬೆಂಗಳೂರು ೩೧

ಜನವರಿ ೭ ನೇ ತಾ|| ನಿಂದ ೯ ನೇ ತಾ|| ವರೆಗೆ ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಪಬ್ಲಿಕ್ ವರ್ಕ್ಸ್ ಸಚಿವರಾದ ಎಂ|| ಜಿ ಮಹಮದ್ ಇಮಾಂರವರು ಸಂಚರಿಸುವರು.

ಮಹಿಳೆ ಅಧ್ಯಕ್ಷರಾಗಲಿ

ಬೆಂಗಳೂರು ಕಮ್ಯೂನಿಸ್ಟ್ ಪಕ್ಷದವರು ಒಂದು ಪ್ರಕಟನೆಯನ್ನು ಹೊರಡಿಸಿದ್ದಾರೆ ನಗರ ಪೌರಸಭೆಯ ಅಧ್ಯಕ್ಷ ಚುನಾವಣೆಯು ಶೀಘ್ರದಲ್ಲೇ ನಡೆಯಲಿರುವುದು. ಈ ಅಧ್ಯಕ್ಷ ಸ್ಥಾನಕ್ಕೆ ... ಒಬ್ಬ ಮಹಿಳೆಯನ್ನು ಅಧ್ಯಕ್ಷರನ್ನಾಗಿ ಚುನಾಯಿಸುವುದು ಒಳ್ಳೆಯದು. ಇದರಿಂದ ಪೌರಸಭೆಗೂ ಗೌರವವು ಹೆಚ್ಚುವುದು ಎಂದು ಹೇಳಿದ್ದಾರೆ.

ಕೊಲೆ

ಗುಂಡ್ಲುಪೇಟೆ ತಾಲ್ಲೂಕು ಬೇಗೂರು ಗ್ರಾಮದಲ್ಲಿ ಕೊಳ್ಳೇಯಪ್ಪ ... ಆತನನ್ನು ... ಎಂಬುವವನು ... ಕೊಲೆಮಾಡಿ ಸು ... ದ ಆಭರಣಗಳನ್ನು ... ಗುಂಡ್ಲುಪೇಟೆ ಪೋಲೀಸರು ... ವಿಚಾರಣೆ ನಡೆಯುತ್ತಿದೆ.

ಸಾಹಿತ್ಯೋತ್ಸವಕ್ಕೆ ಸೈಕಲ್ ಯಾತ್ರಿಕರು

ಶಿವಮೊಗ್ಗೆಯಲ್ಲಿ ನಡೆದ ಕರ್ನಾಟಕ ಸಾಹಿತ್ಯ ಸಮ್ಮೇಳನಕ್ಕೆ ಕರ್ನಾಟಕದ ನಾನಾ ಭಾಗಗಳಿಂದ ಒಟ್ಟು ೩೦೦ ಜನ ಬಂದಿದ್ದರು. ಆ ಪೈಕಿ ೧೬ ಜನ ಶಿವಮೊಗ್ಗೆಗೆ ೧೦೦ ಮೈಲಿ ಆಚೆ ಇರುವ ಊರಿನಿಂದ ಬೈಸಿಕಲ್ ಮೇಲೆ ಪ್ರಯಾಣ ಮಾಡಿಕೊಂಡು ಬಂದು ತಮ್ಮ ಕನ್ನಡ ಪ್ರೇಮವನ್ನು ವ್ಯಕ್ತಗೊಳಿಸಿದರು.

ದೀರ್ಘಕಾಲ ನಡೆಯುವುದು

ಪೂರ್ವ ಏಷ್ಯಾ ಕದನವು ಬಹಳ ದೀರ್ಘಕಾಲ ನಡೆಯುವುದು. ಇದರಿಂದ ಜಪಾನಿಗೆ ಅನುಕೂಲವಾಗುವುದು - ಎಂಬುದಾಗಿ ಫಿಲಿಪ್ಪೈನ್ಸಿನಲ್ಲಿ ನಾಯಕನಾಗಿದ್ದ ಜಪಾನೀ ಮಹಾ ದಂಡನಾಯಕರಾದ ಲೆ|| ಜ|| ... ತಿಳಿಸಿರುವರು.

ಅಮೃತ

ಪಿತ್ತದ ಜ್ವರ, ಮಲೇರಿಯಾ ಜ್ವರ, ಜ್ವರದ ಗೆಡ್ಡೆ, ಇವುಗಳ ಮೇಲೆ ಬಹಳ ಚೆನ್ನಾಗಿ ಕೆಲಸ ಮಾಡುತ್ತದೆ.

ಪಂಡಿತ

ಕೆ. ವಿ. ವೆಂಕಟರಾಮಯ್ಯ

ಡಿ|| ಬೋರ್ಡ್ ವೈದ್ಯಶಾಲಾ,

ಅರಕಲಗೂಡು (ಹಾಸನ ಜಿಲ್ಲೆ).

ಬೆನಿಫಿಟ್ ನಾಟಕ

ಮೈಸೂರು ಒಂಟಿಕೊಪ್ಪಲಿನಲ್ಲಿ ಇರುವ ಶ್ರೀ ಕೆ. ಹೆಚ್. ರಾಮಯ್ಯನವರ ಒಕ್ಕಲಿಗರ ಅನಾಥಾಲಯದ ಸಹಾಯಾರ್ಥವಾಗಿ ಮೈಸೂರು ಶ್ರೀ ಚಾಮುಂಡೇಶ್ವರಿ ಕರ್ನಾಟಕ ನಾಟಕ ಮಂಡಲಿಯವರು ತಾ|| ೨೮-೧೨-೪೩ ರಲ್ಲಿ ಮಹಮ್ಮದ ವಿಜಯ ಎಂಬ ನಾಟಕವನ್ನು ಶ್ರೀಮಾನ್ ಎಸ್. ರಂಗರಾಮಯ್ಯನವರ ಅಧ್ಯಕ್ಷತೆಯಲ್ಲಿ ಅಭಿನಯಿಸಿದರು. ನಾಟಕಾಂತ್ಯದಲ್ಲಿ ಅಧ್ಯಕ್ಷರು ಕೀರ್ತಿಶೇಷರಾದ ಕೆ. ಹೆಚ್. ರಾಮಯ್ಯನವರ ಗುಣಕಥನಮಾಡಿ, ಒಡೆ ಮಕ್ಕಳಿಗೆ ಉದಾರವಾಗಿ ಸಹಾಯಮಾಡಿದ ನಾಟಕ ಮಂಡಲಿಯವರಿಗೆ ಧನ್ಯವಾದಗಳನ್ನು ಅರ್ಪಿಸಿದರು. ಮಿಕ್ಕ ಗಣ್ಯರೂ, ಕಳೆದ ನಂದಿಗೆ ೭೦ ರೂ. ಕೊಟ್ಟ [ಶ್ರೀ ... ನವರು, ಪಿಟೀಲ್ ಚೌ ... ಸ್ವಾಮಿಯವರು, ಎಂ. ವಿ. ರಾಜಗೋಪಾಲ್ ಅವರು ...] ಬಂದಿರುತ್ತೆ. ... ಇಂಥ ... ಅನಾಥಾಲಯದ ಕಾರ್ಯಕರ್ತರು ನಾಟಕ ಮಂಡಲಿಯವರಿಗೂ, ಪ್ರೋತ್ಸಾಹಿಸಿದ ಮಹಾಜನರಿಗೂ ಮತ್ತು ಉತ್ಸಾಹದಿಂದ ಕೆಲಸಮಾಡಿದ ವಿದ್ಯಾರ್ಥಿಗಳಿಗೂ ಹೃದಯಪೂರ್ವಕವಾದ ವಂದನೆಗಳನ್ನು ಅರ್ಪಿಸುತ್ತಾರೆ.

ನೂತನ ಒಲೆ

ರಾಜಧಾನಿಯ ಎಂ. ಎಸ್. ಸಿದ್ದಪ್ಪ ಮತ್ತು ಸಹೋದರರು ಹೊಸ ಮಾದರಿಯಲ್ಲಿ ಒಂದು ಕಬ್ಬಿಣದ ಒಲೆಯನ್ನು ತಯಾರುಮಾಡಿ ಒಂದನ್ನು ನಮಗೆ ಕಳಿಸಿದ್ದಾರೆ. ನಾವು ಅದನ್ನು ಉಪಯೋಗಿಸಿ ನೋಡಿದೆವು. ಈ ಒಲೆಗೆ ಸೌದೆ ಮತ್ತು ಇದ್ದಿಲು ಎರಡನ್ನೂ ಉಪಯೋಗಿಸಬಹುದು. ... ಇದರಲ್ಲಿ ಇನ್ನೂ ಹಲವು ವಿಶೇಷಗಳು ಇವೆ. ಇದಕ್ಕೆ ಬೆಲೆಯು ಸ್ವಲ್ಪ ಹೆಚ್ಚಾಗಿರುತ್ತೆ. ... ಮಹಾಜನರು ಇದನ್ನು ಕೊಂಡುಕೊಂಡು ಇದರ ಪ್ರಯೋಜನವನ್ನು ಹೊಂದಬಹುದು.

ಪೆಸ್ಕಾರಾ ಬಳಿ ಬ್ರಿಟಿಷ್ ಸೇನೆ

ರೋಂ ರಸ್ತೆಯಲ್ಲಿರುವ ಪೆಸ್ಕಾರಕ್ಕೆ ಕೇವಲ ೧೦ ಮೈಲಿ ದೂರಕ್ಕೆ ಬ್ರಿಟಿಷ್ ೮ ನೇ ಸೇನೆ ಬಂದಿದೆ. ಪೆಸ್ಕಾರಾ ರಸ್ತೆ ಬ್ರಿಟಿಷ್, ತಮಗೆ ಆಧಾರಭೂತವಾಗಿದ್ದ ಸ್ಥಳವನ್ನು ಜರ್ಮನರು ಕಳೆದುಕೊಂಡಂತಾಗುವುದು.

ಸ್ತ್ರೀಯರ ಸೌಕರ್ಯಕ್ಕಾಗಿ

೧೯೪೪ ನೇ ಜನವರಿ ೨ ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿದೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲಿ ಬ್ರಾಂಡ್ ಕಾಫಿ ಪುಡಿ

ಯನ್ನೇ ಉಪಯೋಗಿಸಿ.

ಡಿ. ಪುಟ್ಟಯ್ಯ ಬಿನ್ನಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

... ತಾಲ್ಲೂಕು ಮತ್ತು ಸಂತೆಪೇಟೆ ... ರಸ್ತೆ, ... ಮತ್ತು ಮೈಸೂರು ... ಕಾಫಿ ... ದೊರೆಯುತ್ತೆ ... ಬೆಲೆ ... ಕಾರ್ಯಗಳಿಗೆ ದೊರೆಯುತ್ತದೆ

ಟೋಲ್‌ಗೇಟಿನಲ್ಲಿ ಭತ್ತದ ಗಾಡಿಗಳಿಗೆ ತೊಂದರೆ

ರವದಾಂ ಪಡಿದಿದ್ದರೂ ಭತ್ತದ ಗಾಡಿಗಳನ್ನು ಮೈಸೂರು ಟೋಲ್‌ಗೇಟುಗಳಲ್ಲಿ (ಪರ್ಮಿಟ್) ತೋರಿಸದಿದ್ದರೆ ಬಿಡುವುದಿಲ್ಲವೆಂದು ಹೇಳಿ ತಡೆಯುತ್ತಿದ್ದಾರೆ. ಈ ವಿಷಯದಲ್ಲಿ ಹೊರಟಿರುವ ಡಿ|| ಕಮೀಷನರವರ ಆಜ್ಞೆಗೆ ಮನ್ನಣೆ ದೊರೆಯುತ್ತಿಲ್ಲ. ಇದರಿಂದ ಜನಗಳಿಗೆ ಬಹಳ ತೊಂದರೆಯುಂಟಾಗುತ್ತಿದೆ. ನನಗೆ ಸಂಬಂಧಪಟ್ಟ ಎರಡು ಭತ್ತದ ಗಾಡಿಗಳನ್ನು ನಂಜನಗೂಡು ಟೋಲ್‌ಗೇಟಿನಲ್ಲಿ ಈ ರೀತಿ ತಡೆದರು. ಗಾಡಿಗಳಿಗೆ ರವದಾಂಗಳಿದ್ದವು. ಪರ್ಮಿಟ್‌ಗಳಿಲ್ಲದೆ ಬಿಡುವುದಿಲ್ಲವೆಂದು ಹೇಳಿದರು. ಅನಂತರ ನಾನೇ ಅಮಲ್ದಾರರಲ್ಲಿಗೆ ಹೋದೆ. ಡಿ|| ಕಮೀಷನರವರ ಆರ್ಡರನ್ನು ಅವರ ಗಮನಕ್ಕೆ ತಂದೆ. ಸ್ಥಳೀಯ ಮಾಮಲೇದಾರರು ನಡೆದ ವಿಷಯ ತಿಳಿಸಿದರು. ಸಂಬಳದ ಹಣ ಕಟ್ಟಿ ಹಿಸ ಕೊಡಬೇಕೆಂದು ಹೇಳಿ ಗಾಡಿ ಬಿಟ್ಟು ಕೊಟ್ಟರು.

ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಕಾರ್ಯಕ್ರಮವನ್ನು ಕೈಗೊಂಡು ಇಂಥ ಜನರಿಗಾಗುತ್ತಿರುವ ತೊಂದರೆಯನ್ನು ತಪ್ಪಿಸುತ್ತಾರೆಂದು ನಂಬುತ್ತೇನೆ.

ಎಂ. ಎನ್. ಜೋಯಿಸ್.

ಬರ್ಲಿನ್ ಮೇಲೆ ಬಾಂಬು

ಬ್ರಿಟಿಷ್ ವಿಮಾನಗಳು ಬುಧವಾರ ಬರ್ಲಿನ್ ನಗರದ ಮೇಲೆ ಮುತ್ತಿಗೆ ನಡೆಸಿ, ೨ ಸಹಸ್ರ ಟನ್ ಬಾಂಬುಗಳನ್ನು ಚೆಲ್ಲಿದವು. ಪಶ್ಚಿಮ ಜರ್ಮನಿ ಮೇಲೂ ಧಾಳಿ ಮಾಡಲಾಗಿದೆ. ರಷ್ಯ ರಣರಂಗ ಪ್ರದೇಶದಲ್ಲಿ ಟ್ರೈನ್‌ಗಳನ್ನು ಚಿಕ್ಕಲಾಗಿದೆ. ಬರ್ಲಿನ್ ಮತ್ತು ಸ್ವೀಡನ್ನಿನ ಟೆಲಿಫೋನ್ ಸಂಬಂಧ ೨೦ ಗಂಟೆಗಳ ಕಾಲ ಕತ್ತರಿಸಲ್ಪಟ್ಟಿತ್ತು. ಬರ್ಲಿನ್ ನಗರದಲ್ಲೆಲ್ಲಾ ಆಗಾಧವಾದ ಉರಿಗಳು ಕಾಣುತ್ತಿವೆ.

ಜರ್ಮನರ ಶಕ್ತಿ ಕುಗ್ಗಿಸುವ ಗುರಿ

ಟೆಹೆರಾನ್ ಸಭೆಯ ಮತ್ತು ಕೈರೋ ಒಪ್ಪಂದದ ಉದ್ದೇಶ ಜರ್ಮನಿಯ ಮಿಲಿಟರಿ ಶಕ್ತಿಯನ್ನು ಕುಗ್ಗಿಸುವುದೇ ಆಗಿದೆ ಎಂದು ಡಾ|| ಬೆನೆಸ್ ರವರು ಹೇಳಿರುವರು.

ಫ್ರಾನ್ಸಿನಲ್ಲಿ ಅನಾಯಕತ್ವ ನಿಂತಿತೆ ?

ಫ್ರಾನ್ಸಿನಲ್ಲಿ ಶಿಸ್ತು ಮತ್ತು ನ್ಯಾಯವನ್ನು ಕಾಪಾಡಲು ಹೊಸ ಮಂತ್ರಿಗಳ ನೇಮಕವಾಗಿದೆ. ಮುಂದೆ ಫ್ರಾನ್ಸಿನಲ್ಲಿ ಅನಾಯಕತ್ವವನ್ನು ತಪ್ಪಿಸಲು ಲವಾಲರು ನಿಶ್ಚಯಿಸಿದ್ದಾರೆ.

ಮಕ್ಕಳನ್ನು ಕೊಂದು ತಾಯಿಯ ಆತ್ಮಹತ್ಯೆ

ರಾಜಧಾನಿಯಲ್ಲಿ ಭೀಕರ ದುರಂತ ಪ್ರಸಂಗ

ಮೈಸೂರು ೨

ತಾಯಿಯೋ ತನ್ನ ಇಬ್ಬರು ಮಕ್ಕಳನ್ನೂ ಸುಟ್ಟು, ತಾನೂ ಆತ್ಮಹತ್ಯೆಮಾಡಿಕೊಂಡ ಭೀಕರ ದುರಂತ ಪ್ರಸಂಗವು ನಿನ್ನೆ ರಾತ್ರಿ ರಾಜಧಾನಿಯಲ್ಲಿ ನಡೆಯಿತು.

ಹಳೇ ಪೋಸ್ಟಾಫೀಸಿನ ರಸ್ತೆಯಲ್ಲಿ ಜಿಟಿ ಜನ್ಸ್ ಡೈರಿ ಹತ್ತಿರವಿರುವ ಮನೆಯಲ್ಲಿ ಮಂಡಿ ತಪ್ಪದ ಶ್ರೀ ನಾಗಣ್ಣನವರ ಮಗ ಶ್ರೀ ಬಸವಂ ಜಪ್ಪನವರ ಪತ್ನಿ ಸುಮಾರು ೨೫ ವರ್ಷದ ಸರೋಜಮ್ಮ ಎಂಬಾಕೆಯು ತನ್ನ ಮೂರು ವರ್ಷದ ಮತ್ತು ಒಂದೂವರೆ ವರ್ಷದ ಸದಾನಂದ ಮತ್ತು ಸತ್ಯಾನಂದ ಎಂಬ ಇಬ್ಬರು ಮಕ್ಕಳನ್ನೂ ಕೊಠಡಿಯಲ್ಲಿ ನಿನ್ನೆ ಸಂಜೆ ೭ ಗಂಟೆ ಸಮಯದಲ್ಲಿ ಕೂಡಿ, ಪೆಟ್ರೋಲ್ ಹಾಕಿ ಅವರನ್ನು ಸುಟ್ಟು, ತಾನೂ ಪೆಟ್ರೋಲ್ ಸುರಿದುಕೊಂಡು ಪ್ರಾಣ ಕಳೆದುಕೊಂಡಳೆಂದು ವರದಿಯಾಗಿದೆ.

ಈ ದಿನ ಬೆಳಿಗ್ಗೆ ಜಿಲ್ಲಾ ಪೋಲೀಸ್ ಅಧಿಕಾರಿಗಳೂ, ಲಷ್ಕರ್ ಪೋಲೀಸರೂ ಸ್ಥಳಕ್ಕೆ ಹೋಗಿ, ಪರಿಶೀಲಿಸಿದರು. ಮುಂದಿನ ತನಿಖೆ ನಡೆಯುತ್ತಿದೆ.

ಈ ದುರಂತ ಪ್ರಕರಣಕ್ಕೆ ಸರಿಯಾದ ಕಾರಣ ಗೊತ್ತಿಲ್ಲದಿದ್ದರೂ ಗೃಹಕೃತ್ಯದ ಅಸಮಾಧಾನವೇ ಕಾರಣವೆಂದು ಹೇಳಲಾಗಿದೆ.

ಪೋಸ್ಟಾಫೀಸಿನಲ್ಲಿ ಕಳವು

ರಾಜಧಾನಿಯ ಫೋರ್ಟ್ ಪೋಸ್ಟಾಫೀಸನ್ನು ಮೊನ್ನೆ ರಾತ್ರಿ ಯಾರೋ ಬೀಗ ಒಡೆದು ೩೦ ರೂ. ೧೪ ಬೆಲೆ ಬಾಳುವ ಸ್ಟಾಂಪುಗಳನ್ನೂ ಮತ್ತು ನಗದು ಹಣವನ್ನೂ ಕಳುವು ಮಾಡಿದ್ದಾರೆಂದು ವರದಿಯಾಗಿದೆ. ಇದರ ಮೇಲೆ ಕೃಷ್ಣರಾಜ ಪೋಲೀಸರು ಕೆಲವರನ್ನು ದಸ್ತಗಿರಿಮಾಡಿ, ತನಿಖೆ ನಡೆಸುತ್ತಿರುವರು.

ಬೇಂದ್ರೆಯವರ ಭಾಷಣ

ಈದಿನ ಬೆಳಿಗ್ಗೆ ಮೈಸೂರು ವಿಶ್ವವಿದ್ಯಾನಿಲಯ ಸಂಘದ ಆಶ್ರಯದಲ್ಲಿ ಮಹಾರಾಜ ಕಾಲೇಜಿನಲ್ಲಿ ಕರ್ನಾಟಕ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದ ಶ್ರೀ ದತ್ತಾತ್ರೇಯ ರಾಮಚಂದ್ರ ಬೇಂದ್ರೆಯವರು ಭಾಷಣಮಾಡಿದರು. ಕನ್ನಡ ಪ್ರೊಫೆಸರಾದ ಶ್ರೀ ಕೃಷ್ಣಶಾಸ್ತ್ರಿಗಳವರು ಅಧ್ಯಕ್ಷತೆ ವಹಿಸಿದ್ದರು. ಕುಮಾರಿ ಭಾರತೀ ಅವರಿಂದ ಪ್ರಾರ್ಥನೆಯಾದನಂತರ ಶ್ರೀ ಕೃಷ್ಣಶಾಸ್ತ್ರಿಗಳು ಬೇಂದ್ರೆಯವರನ್ನು ಸಭಿಕರಿಗೆ ಪರಿಚಯಮಾಡಿಕೊಟ್ಟರು. ಶ್ರೀ ಬೇಂದ್ರೆಯವರು ಬಹಳ ವಿಚಾರಪೂರ್ಣ ಸ್ವಾರಸ್ಯವಾದ ಭಾಷಣಮಾಡಿದರು. ತಾವು ರಚಿಸಿರುವ ಗಾಯಿತ್ರಿ, ಶ್ರಾವಣ, ತುಂಬಿ ಮತ್ತು ಗಂಗಾವತರಣ ಎಂಬ ಪದ್ಯಗಳನ್ನು ಹಾಡಿ ಜನರನ್ನು ಸಂತೋಷಗೊಳಿಸಿದರು. ವಂದನಾ ಸಮರ್ಪಣೆ ಮತ್ತು ವಂದೇ ಮಾತರಂ ಗೀತೆ ಗಾಯನದೊಂದಿಗೆ ಸಭೆಯು ಮುಕ್ತಾಯವಾಯಿತು.

— —

ಮುನಿಸಿಪಾಲಿಟಿಗೆ ಮನ್ನಣೆ ಇಲ್ಲ

ಆಕ್ರಮಿತ ಚೀನಾದಲ್ಲಿನ ಮುನಿಸಿಪಾಲಿಟಿ [illegible] ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲವೆಂದು ಹೇಳಲಾಗಿದೆ

ಸಂಪುಟ ೨] ಭಾನುವಾರ ೨-೧-೪೪ [ಸಂಚಿಕೆ ೧೪೪

ಇದೀಗ ಜಪಾನಿನ ಸತ್ವ ಪರೀಕ್ಷೆ ಕಾಲ

ರಾಜಧಾನಿಯಲ್ಲಿ ತಾಯಿಯೊಬ್ಬಳು ಮಕ್ಕಳನ್ನು ಉರಿಸಿ ತಾನೂ ಬೂದಿಯಾದಳು

ಕೋಟೆ ಅಂಚೆ ಕಛೇರಿಯಲ್ಲಿ ಸ್ಟಾಂಪು ಮತ್ತು ಹಣ ಕಳವು

ಜಪಾನಿನ ಸತ್ವಪರೀಕ್ಷೆ ಕಾಲ

ಇದೀಗ ಜಪಾನ್ ದೇಶದ ಸತ್ವ ಪರೀಕ್ಷೆ ಕಾಲ ಒದಗಿದೆ. ಈಗ ಅದು ರಣರಂಗವು, ಇದು ಮನೆ ಬಾಗಿಲು ಎಂಬ ತಾರತಮ್ಯ ಕಾಣುವ ಕಾಲವಲ್ಲ. ಎಲ್ಲೆಲ್ಲೂ ನಾವು ಶೌರ್ಯದಿಂದ ಕಾದಾಡಬೇಕು. ಟೋಕ್ಯೋ, ಬರ್ಲಿನ್ ಇದು ಈ ಯುದ್ಧದ ಫಲ ಮೊದಲಿನಿಂದಾಗಲೇ ಗೊತ್ತು. ಶತ್ರುವನ್ನು ಭೂಗತ ಮಾಡಲೋಸುಗವೇ ಜಪಾನ್ ಆದ್ಯಂತವನ್ನೂ ಯುದ್ಧರಂಗವನ್ನಾಗಿ ಪರಿವರ್ತಿಸಲಾಗಿದೆ ಎಂಬುದಾಗಿ ಜಪಾನಿನ ಪ್ರಧಾನಿ ಜನರಲ್ ಟೋಜೋರವರು ತಮ್ಮ ನೂತನ ವರ್ಷದ ಸಂದೇಶದಲ್ಲಿ ತಿಳಿಸಿರುವರು.

ಅರಕಾನ್ನಲ್ಲಿ ಭೀಕರ ಕದನ

ಮೊನ್ನೆ ದಿ ಅರಕಾನ್ ಪ್ರದೇಶದ ಬಳಿ ಬಂದ ಜಪಾನೀ ವಿಮಾನ ತಂಡವನ್ನು ಎದುರಿಸಿ ಶತ್ರುಗಳ ಬಾಂಬರುಗಳನ್ನೂ ಮೂರು ಫೈಟರುಗಳನ್ನೂ ಹೊಡೆದುರುಳಿಸಲಾಯಿತು. ಎರಡು ಶತ್ರು ಫೈಟರುಗಳು ಡಿಕ್ಕಿ ಹೊಡೆದು ನಿರ್ನಾಮವಾದುವು. ಇವಲ್ಲದೆ ಇತರ ೩ ಶತ್ರು ವಿಮಾನಗಳೂ ನಾಶವಾಗಿರಬೇಕು. ಬಿದ್ದ ಶತ್ರು ವಿಮಾನವೊಂದೂ ತನ್ನ ನೆಲೆ ಸೇರಲಿಲ್ಲ. ಎದುರಿಸಿದ ಮಿತ್ರ ವಿಮಾನಗಳು ಸುರಕ್ಷಿತವಾಗಿವೆ.

ಈ ವರ್ಷ ಜರ್ಮನಿಗೆ ಕಠಿಣ

೧೯೪೪ ನೇ ವರ್ಷ ಅತ್ಯಂತ ಕಠಿಣವಾದುದು. ನಾವು ಭಯಂಕರ ಹೋರಾಟಕ್ಕೆ ಸನ್ನದ್ಧರಾಗಬೇಕು. ಯಾವ ರಂಗದಲ್ಲಿ ವಿಜಯ ಸಾಧ್ಯವೋ ಅಲ್ಲಿ ಶಕ್ತಿಯನ್ನು ನಿಯೋಜಿಸುವುದು. ಆದ್ದರಿಂದ ನಾವು ನಮ್ಮ ಶಕ್ತಿಯನ್ನು ಉಪಯೋಗಿಸಿ ಹೋರಾಡಬೇಕು ಎಂಬುದಾಗಿ ಹಿಟ್ಲರರು ನೂತನ ವರ್ಷದ ಸಂದೇಶದಲ್ಲಿ ಜರ್ಮನಿಯ ಯೋಧರಿಗೆ ತಿಳಿಸಿದ್ದಾರೆ.

ಈ ಸಂವತ್ಸರದಲ್ಲಿ ಜಯ

ಜೆಕೋಸ್ಲೋವಾಕಿಯಾ ಅಧ್ಯಕ್ಷ ಡಾ|| ಬೆನೆಸ್‌ರವರು ೧೯೪೪ ನೇ ಸಂವತ್ಸರವು ಮಿತ್ರರಿಗೆ ವಿಜಯ ಗಳಿಸುವ ವರ್ಷ ಎಂಬುದಾಗಿ ಮೊನ್ನೆ ರೇಡಿಯೋ ಭಾಷಣ ಮಾಡುವಾಗ ಹೇಳಿದರು.

ಗುಡಿ ಪೂಜೆಗೂ ೧೪೪ ನೇ ಸೆಕ್ಷನ್!

ಕಳೆದ ತಿಂಗಳು ೨೭ ನೇ ತಾ|| ನಿಂದ ಈ ತಿಂಗಳು ೯ ನೇ ತಾ|| ವರೆಗೆ, ಅದ್ಯಾರ್ ಪಟ್ಟಣದ ದೇವಸ್ಥಾನ, ಭಜನ ಮಂದಿರ ಮುಂತಾದೆಡೆಗಳಲ್ಲಿ ಜನ ಸಹಿತವಾಗಿ ಪೂಜೆ ಪುರಸ್ಕಾರಗಳು ಸರ್ವಥಾ ನಡೆಯಕೂಡದೆಂದೂ, ಬದಲಾಗಿ ಕೆಲವು ವೇಳೆಗಳಲ್ಲಿ ಮಾತ್ರ ಅವಕಾಶ ಕಲ್ಪಿಸಿಯೂ ೧೪೪ ನೇ ಸೆಕ್ಷನನ್ನು ಪ್ರಯೋಗಿಸಲಾಗಿದೆ. ಮೊಹರಂ ಮೆರವಣಿಗೆ ಬರುವ ಕಾಲಕ್ಕಂತೂ ಆ ಮೆರವಣಿಗೆ ಬರುವ ಬೀದಿಗಳಲ್ಲಿರುವ ಅಂಥ ಮಂದಿರಗಳವರು ಮೆರವಣಿಗೆ ೫೦ ಗಜ ದೂರದಲ್ಲಿರುವಾಗಲೇ ಭಜನೆಯನ್ನು ನಿಲ್ಲಿಸಿ ಅದು ಮಂದಿರವನ್ನು ದಾಟಿ ೫೦ ಗಜ ದೂರ ಸಾಗಿದ ಮೇಲೆ ಭಜನೆ ಮಾಡಿಕೊಳ್ಳಲು ಅವಕಾಶ ಉಂಟೆಂದು ಆ ಆಜ್ಞೆಯಲ್ಲಿ ವಿಶದೀಕರಿಸಲಾಗಿದೆ.

ಅ|| ಭಾ|| ವರ್ಣಾಶ್ರಮ ಸ್ವರಾಜ್ಯ ಸಂಘ

ಅಖಿಲ ಭಾರತ ವರ್ಣಾಶ್ರಮ ಸ್ವರಾಜ್ಯ ಸಂಘದ ೧೪ ನೇ ವಾರ್ಷಿಕಾಧಿವೇಶನವು ರಾವ್ ಸಾಹೇಬ್ ಎಂ. [illegible] ಅಯ್ಯರ್ ರವರ ಅಧ್ಯಕ್ಷತೆಯಲ್ಲಿ [illegible] ದಲ್ಲಿ ಇಷ್ಟರಲ್ಲೇ ಸೇರುವುದಾಗಿದೆ.

ಭಾರತದ ಭತ್ತದ ಬೆಳೆ

೧೯೪೩-೪೪ ನೇ ಸಾಲಿಗೆ ಭಾರತದಲ್ಲಿ ಒಟ್ಟು ೭೭,೦೭೫,೦೦೦ ಎಕರೆ ಭತ್ತ ಬೆಳೆಯಲಾಗುವುದು. ಇದು ಕಳೆದ ಸಾಲಿಗಿಂತ ಸೇಕಡಾ ೬ ರಷ್ಟು ಹೆಚ್ಚಾಗುವುದು. ಬೆಳೆ ಎಲ್ಲೆಲ್ಲೂ ತೃಪ್ತಿಕರವಾಗಿರುವುದೆಂದೂ ತಿಳಿದು ಬರುತ್ತದೆ.

ಭಾರತಕ್ಕೆ ಆಫ್ರಿಕಾ ಹಾಲು

ದಕ್ಷಿಣ ಆಫ್ರಿಕಾದಿಂದ ಭಾರತ ಕ್ಷಾಮ ನಿವಾರಣೆಗಾಗಿ [illegible] ಅರ್ಧ ಕೋಟಿ ಪೌಂಡುಗಳ ಘನೀಭೂತವಾದ ಹಾಲು ಹಡಗಿನಲ್ಲಿ ಸಾಗಿ ಸುರಕ್ಷಿತವಾಗಿ ತಲುಪಿ ಬಂದಿದೆ.

ಮಿ|| ಚರ್ಚಿಲರಿಗೆ ಕಾಯಿಲೆ

ಉತ್ತರ ಆಫ್ರಿಕಾದಲ್ಲಿ ಮಿ|| ಚರ್ಚಿಲರಿಗೆ ಇದ್ದ ನ್ಯುಮೋನಿಯಾ ಕಾಯಿಲೆ ಕಡಿಮೆಯಾಗಿರುವುದಾಗಿ ನಂ. ೧೦ ಡೌನಿಂಗ್ ಸ್ಟ್ರೀಟ್ ಭವನದಿಂದ ಪ್ರಕಟನೆ ಹೊರಟಿದೆ.

ಯು-ಬೋಟುಗಳು ಚುರುಕಾಗುವುವು

೧೯೪೩ ನೇ ವರ್ಷದಲ್ಲಿ ಜರ್ಮನರ ಜಲಾಂತರ್ಗಾಮಿ, ಸಮುದ್ರದಲ್ಲಿ ಮಿತ್ರರ ಹೊಡೆತವನ್ನು ತಾಳಿಕೊಂಡು ಬದುಕಿಕೊಳ್ಳಲು ಮಾತ್ರ ಶಕ್ತವಾಗಿತ್ತು. ಈ ವರ್ಷ ಜಗತ್ತಿನ ಸರ್ವ ಸಮುದ್ರಗಳಲ್ಲೂ ಜರ್ಮನರ ಯು-ಬೋಟುಗಳು ಮಿತ್ರರ ಮೇಲೆ ಪ್ರಹಾರ ಪ್ರಾರಂಭಿಸುವಂತೆ ಬರ್ಲಿನ್ ಅಧಿಕಾರಿಗಳು ಆಜ್ಞೆ ವಿಧಿಸಿದರೆಂದು ಮ್ಯಾಡ್ರಿಡ್ ಪತ್ರಿಕಾ ಬಾತ್ಮೀದಾರರೊಬ್ಬರು ಬರ್ಲಿನ್ನಿಂದ ವರದಿ ಮಾಡಿರುವರು.

ರಬ್ಬರ್ ಟೈರಿಗೂ ರೇಷನ್

ಸರ್ಕಾರದವರಿಂದ ಒಪ್ಪಿಗೆ ಪಡೆದಿರುವ ರಬ್ಬರ್ ತಯಾರಕರಲ್ಲದೆ ಉಳಿದ ಯಾರೂ ಉಪಯೋಗಕ್ಕೆ ಬಾರದ ರಬ್ಬರ್ ಟೈರುಗಳನ್ನು ಅದು ಅನುಪಯೋಗ ಸ್ಥಿತಿಗಿಳಿದ ೧೦ ದಿನಗಳಿಗಿಂತ ಹೆಚ್ಚುಕಾಲ ತಮ್ಮ ಬಳಿ ಇಟ್ಟುಕೊಳ್ಳಕೂಡದು. ಕೂಡಲೆ ಸಮೀಪದ ಸರ್ಕಾರಿ ರಬ್ಬರ್ ಶೇಖರಣಾ ಸ್ಥಳಕ್ಕೆ ತಲುಪಿಸಬೇಕು. ಅದಕ್ಕೆ ಸೂಕ್ತ ಬೆಲೆ ಕೊಡಲಾಗುವುದು—ಹೀಗೆಂಬುದಾಗಿ ನಿನ್ನೆ ಹೊರಟ ಭಾರತ ಗೆಜೆಟ್ಟಿನಲ್ಲಿ ನಮೂದಾಗಿದೆ.

ಶತ್ರು ಬಾಂಬಿಗೆ ತುತ್ತಾದ ಬ್ರಿಟನ್ನರು

೧೯೪೨ ರಲ್ಲಿ ಬ್ರಿಟನ್ನಿನಲ್ಲಿ ಶತ್ರುವಿಮಾನದ ಹೊಡೆತಕ್ಕೆ ಸಿಕ್ಕಿ ೩,೨೩೬ ಮಂದಿ ಸತ್ತು ೪,೧೪೮ ಜನ ಘಾಸಿಗೊಂಡಿದ್ದರು. ೧೯೪೩ ರಲ್ಲಿ ಆ ಕಾರಣಕ್ಕಾಗಿ ೨,೩೭೭ ಮಂದಿ ಬ್ರಿಟನ್ನರು ಶತ್ರು ಬಾಂಬಿಗೆ ಆಹುತಿಯಾಗಿರುವರು. ಘಾಸಿಗೊಂಡವರು ೩,೪೫೦ ಜನ. ಎರಡನೆ ಬಾಂಬ್ ನಿಯಮಕ್ಕೆ ೭ ವಿಮಾನಗಳಂತೆ ಶತ್ರುಗಳು ಬ್ರಿಟನ್ನನ್ನು ಬಾಂಬು ಮಾಡಲು ತಮ್ಮ ವಿಮಾನಗಳನ್ನು ಕಳುಹಿಸುತ್ತಿದ್ದುದು ಒಂದು ವಿಶೇಷ.

ಯುದ್ಧ ಕುಶಲರ ಖೈದು

ಮಂಗಲ್‌ಬಾಗ್‌ನಲ್ಲಾದ ಸಿಡಿತದ ಸಂಬಂಧವಾಗಿ ಕಟಕ್ಕಿನ ಒರಿಸ್ಸಾ ಸ್ಕೂಲ್ ಆಫ್ ಇಂಜನಿಯರಿಂಗ್ ಶಾಲೆಯ ೩೫ ಜನ ಯುದ್ಧಕುಶಲರನ್ನು ಕಟಕ್ ಪೋಲೀಸರು ಬಂಧಿಸಿದ್ದಾರೆ.

ಛತ್ರಿ ತಯಾರಿಕರು ವರದಿ ಕೊಡಬೇಕು

ಭಾರತದಲ್ಲಿ ಛತ್ರಿಗಳನ್ನು ತಯಾರಿಸುವವರು ತಮ್ಮ ಬಳಿ ಇರುವ ದಾಸ್ತಾನು, ಯುದ್ಧಕ್ಕೆ ಮುಂಚಿನ, ಈಚಿನ ಮಾರಾಟದ ಬೆಲೆ, ಸಿಗುತ್ತಿರುವ ಲಾಭ, ಇವುಗಳ ಬಗ್ಗೆ ಸರ್ಕಾರಕ್ಕೆ ವರದಿಮಾಡಿಕೊಳ್ಳಬೇಕೆಂದು ಪ್ರಕಟಣೆಯೊಂದು ಹೇಳುತ್ತದೆ.

ಹಿಂದೂಸಾಗರದಲ್ಲಿ ಶತ್ರು ನೌಕೆ

ಹಿಂದೂಸಾಗರದಲ್ಲಿ ಚಲಿಸುತ್ತಿದ್ದ ಎರಡು ಶತ್ರು ಸರಬರಾಜು ಹಡಗುಗಳಿಗೆ ಫ್ರೆಂಚ್ ಯುದ್ಧ ನೌಕೆಗಳು ಟಾರ್ಪೆಡೊ ಹೊಡೆದುವಲ್ಲದೆ, ಒಂದು ಶತ್ರು ಜಲಾಂತರ್ಗಾಮಿಯನ್ನೂ ಮುಳುಗಿಸಿದುವಾಗಿ ಉತ್ತರ ಆಫ್ರಿಕದ ಫ್ರೆಂಚ್ ನೌಕಾ ಕಚೇರಿಯಿಂದ ಪ್ರಕಟವಾಗಿದೆ.

ಗೌರ್ನರ ಸತಿ ಕಿಟಿಕಿಯಿಂದ ಬಿದ್ದರು

ಸಿಂಹಳದ್ವೀಪದ ಗೌರ್ನರರ ಪತ್ನಿ ಸರ್ ಕಾಲ್ಡಿಕಾಟ್ [illegible] ಕಿಟಿಕಿಯಿಂದ ಕೆಳಕ್ಕೆ ಬಿದ್ದು ಪೆಟ್ಟುತಿಂದಿದರೆಂದು ಕೊಲಂಬೊವಿನಿಂದ ಸಮಾಚಾರ ಬಂದಿದೆ. ಆಕೆಯು [illegible] ನೋಯುತ್ತಿದೆ

ಅಧ್ಯಕ್ಷರ ಚುನಾವಣೆ

ಬೆಂಗಳೂರು ಪೌರಸಭೆಯ ಅಧ್ಯಕ್ಷಸ್ಥಾನಕ್ಕೆ ಈ ತಿಂಗಳು ೧೯ ನೇ ತಾ॥ ಚುನಾವಣೆ ನಡೆಯತಕ್ಕದ್ದೆಂದು ಗೊತ್ತುಮಾಡಲಾಗಿದೆ. [illegible]

ಅಕ್ರಮ ಚುನಾವಣೆಯೆ ?

ಕಳೆದ ತಿಂಗಳು ೧೩ ನೇ ತಾ॥ ಬೆಂಗಳೂರು ಪೌರಸಭೆಗೆ ನಡೆದ ಚುನಾವಣೆ ಕ್ರಮವಾಗಿ ನಡೆಯಲಿಲ್ಲವೆಂದು [illegible] ಕಾಂಗ್ರೆಸ್ ಅಭ್ಯರ್ಥಿಯಾದ ಪಲವರು [illegible] ಹೈಕೋರ್ಟಿನಲ್ಲಿ ಮೊಕದ್ದಮೆ ಹೂಡಿರುವ ರೆಂದು ತಿಳಿದುಬಂದಿದೆ.

ಭದ್ರಾವತಿಯಲ್ಲಿ ಪ್ಲೇಗು

ಭದ್ರಾವತಿಯ ಹಳೇ ಟೌನ್ ಪ್ರದೇಶದಲ್ಲಿ ಪ್ಲೇಗು ಉಪದ್ರವ ತಲೆದೋರಿ ಈಗಾಗಲೆ ೬ ಮರಣ ಸಂಭವಿಸಿರುವುದಾಗಿ ಸಮಾಚಾರಬಂದಿದೆ.

ಭದ್ರಾವತಿಯಲ್ಲಿ ಕಲಾ ಉತ್ಸವ

ಭದ್ರಾವತಿಯ ನ್ಯೂ ಟೌನ್ ಥಿಯೇಟರಿನಲ್ಲಿ ತರುಣ ಸಾಹಿತ್ಯ ಮತ್ತು ನಾಟಕ ಸಂಘದ ಆಶ್ರಯದಲ್ಲಿ ಕಳೆದ [illegible] ಕಲಾ ಉತ್ಸವವು ಆರಂಭವಾಯಿತು. ಎರಡೂ ಸಂಘಗಳ ಪರವಾಗಿ ಶ್ರೀ ವಿ. ಕೃ. ಗೋಕಾಕ್ ಮತ್ತು ಶ್ರೀ ವಿ. ವಿಶ್ವನಾಥ[illegible]ರವರುಗಳು ಅಧ್ಯಕ್ಷತೆ ವಹಿಸಿದ್ದರು. [illegible] ಉನ್ನತಾಧಿಕಾರಿಗಳೂ, ಉತ್ತರ ಕರ್ನಾಟಕದ [illegible] ಸಾಹಿತಿಗಳೂ ಮತ್ತು ಪ್ರಮುಖರೂ ಭಾಗವಹಿಸಿದ್ದರು.

ದೇವರ ಪ್ರಾರ್ಥನೆಯಾದ ನಂತರ ಶ್ರೀ ಎ. ಆರ್. [illegible] ಸ್ವಾಗತ [illegible] ಅಧ್ಯಕ್ಷರನ್ನು ಸಭೆಗೆ ಪರಿಚಯಿಸಿದರು. [illegible] ಸಂಘವು [illegible] ಬೆಳೆಯಿತೆಂಬುದನ್ನು [illegible] ದಿವಂಗತ ಶ್ರೀ [illegible] ಅವರ ತೈಲ ಚಿತ್ರ [illegible] ಅಧ್ಯಕ್ಷರನ್ನು [illegible]

ಶ್ರೀ ಗೋಕಾಕರವರ ಆರಂಭಭಾಷಣವಾದನಂತರ ಶ್ರೀ ವಿ ವಿಶ್ವನಾಥರವರು, ದಿವಂಗತ ಶ್ರೀ [illegible] ವೆಂಕಟನಾರಣಪ್ಪನವರ ಭಾವಚಿತ್ರ [illegible], ತಾವು ವಿದ್ಯಾರ್ಥಿ ಜೀವನದಲ್ಲಿ [illegible] ದಿವಂಗತರನ್ನು ಕಂಡ [illegible], ಅವರು ತಮ್ಮೊಂದಿಗೆ ತೋರಿಸಿದ ಪ್ರೀತಿ, ಸ್ನೇಹ, [illegible] ಗಳನ್ನೂ [illegible] ಶ್ರೀ [illegible] ಎಸ್. ಎನ್. [illegible] ಮತ್ತು [illegible] [illegible]

Edited, printed and published by [illegible] at the Sadhvi Press, D Sub[illegible] Road, Mysore.

ಭಾರತೀಯ ವಿಜ್ಞಾನ ಕಾಂಗ್ರೆಸ್

ಇನ್ನೆರಡು ವಾರಗಳಲ್ಲಿ ಭಾರತೀಯ ವಿಜ್ಞಾನ ಕಾಂಗ್ರೆಸ್ಸಿನ ೩೧ ನೇ ಅಧಿವೇಶನ ನಡೆಯುವುದು. ವೈಸರಾಯರು ಪ್ರಾರಂಭೋತ್ಸವ ನಡೆಸುವರು. ಲಂಡನ್ನಿನ ರಾಯಲ್ ಸಂಘದ ಕಾರ್ಯದರ್ಶಿ ಪ್ರೊ॥ ಎ. ವಿ. ಹಿಲ್ ಮತ್ತು ಡಿಹಲಿ ವಿಶ್ವವಿದ್ಯಾನಿಲಯದ ಸ್ನಾತಕರ ಸರ್ ಮಾರಿಸ್ ಗ್ವಯರ್ ರವರು ಭಾಷಣಮಾಡುವರು.

ರಾಯಲ್ ಸೊಸೈಟಿ ಸಭೆ

ರಾಯಲ್ ಸೊಸೈಟಿ ಸಭೆ, ೨೮ ವರ್ಷಗಳ ಹಿಂದೆ ಹುಟ್ಟಿತು. ಆಗಿನಿಂದ ಈ ಸಭೆ ಇಂಗ್ಲೆಂಡಿನಿಂದ ಹೊರಗೆ ಎಂದೂ ಸೇರಿರಲಿಲ್ಲ. ಈ ಸಾರಿ ಈ ಸಭೆ ನಾಳೆ ನೋ[illegible] ದೆಹಲಿಯಲ್ಲಿ ಸೇರುವುದು.

ಪಾನನಿರೋಧವು ವಿಫಲವಾಗಿಲ್ಲ

ಎಲ್ಲೋರಿನಲ್ಲಿ ನಡೆದ ಆಂಧ್ರ ಕ್ರೈಸ್ತ ಸಮ್ಮೇಳನದಲ್ಲಿ ಭಾಷಣಮಾಡುತ್ತ ಡೋರ್ನಕಲ್ ಬಿಷಪ್ಪರಾದ ರೈಟ್ ರೆ॥ ಅಜರೀಯಾರವರು ಯುದ್ಧಾನಂತರ ಭಾರತವು ಪಾನನಿರೋಧದಿಂದಲೇ ಆಳಲ್ಪಡುವುದೆಂದೂ ಭಾರತೀಯರ ಆರೋಗ್ಯದಲ್ಲಿ ಕ್ರೈಸ್ತಮತಕ್ಕೆ ಯಾವ ಭೀತಿಯೂ ಇಲ್ಲವೆಂದೂ ಹೇಳುತ್ತ, [illegible] ಪಾನನಿರೋಧನೀತಿಯು ವಿಫಲವಾಗುವುದಿಲ್ಲವೆಂದೂ ಅಭಿಪ್ರಾಯಪಟ್ಟಿರುವರು.

ಸಂಸ್ಥಾನಗಳಿಗೆ ಜವಾಬ್ದಾರಿ ಸರ್ಕಾರ

ಬೊಂಬಾಯಿನಲ್ಲಿ ಮೊನ್ನೆ ತಾನೇ ನಡೆದ ನ್ಯಾಷನಲ್ ಲಿಬರಲ್ ಫೆಡರೇಷನ್ನಿನ ಬಹಿರಂಗ ಅಧಿವೇಶನದಲ್ಲಿ, ಭಾರತ ದೇಶೀಯ ಸಂಸ್ಥಾನಗಳಲ್ಲಿನ ಪ್ರಜೆಗಳು ಜವಾಬ್ದಾರಿ ಸರ್ಕಾರಗಳನ್ನು ಆದಷ್ಟು ಜಾಗ್ರತೆ ಸ್ಥಾಪಿಸುವಂತೆ ತಕ್ಕ ವ್ಯವಸ್ಥೆ ಮಾಡಬೇಕೆಂಬ ನಿರ್ಣಯವಾಯಿತು.

ಪತ್ನಿಪತಿ ಕೇಳುವ ವರನಿಗೆ ಹೆಣ್ಣಿಲ್ಲ

ವರದಕ್ಷಿಣೆ ಕೇಳಿದರೆ ಅಂತಹಾ ಹುಡುಗರನ್ನು ಮದುವೆಯಾಗಲು ಹೆಣ್ಣು ಮಕ್ಕಳು ನಿರಾಕರಿಸಬೇಕೆಂಬುದಾಗಿ ತಿಮ್ಮಕೆರೆಯಲ್ಲಿ ಸೇರಿದ ಅಖಿಲ ಭಾರತ ಹಿಂದೂ ಮಹಿಳಾ ಪರಿಷತ್ತಿನಲ್ಲಿ ಠರಾವು ಮಾಡಲಾಗಿದೆ.

ಅಮೆರಿಕದಲ್ಲಿ ಕಲ್ಲಿದ್ದಲು ಅಭಾವ

ಪೂರ್ವ ಅಮೆರಿಕದಲ್ಲಿ ಕಲ್ಲಿದ್ದಲಿನ ಅಭಾವವು ವಿಪರೀತವಾಗಿರುವುದು ಇನ್ನೂ ೬ ತಿಂಗಳವರೆಗೆ ಕಲ್ಲಿದ್ದಲಿನ ಲಭ್ಯ ಹೆಚ್ಚಿನ [illegible] ತುಸುವಿಲ್ಲ.

ಯಾವಾಗಲೂ ಕೊಳ್ಳಿರಿ !

ಏನನ್ನು ? :: ಎಲ್ಲಿ ?

ಎಲ್ಲ ಥರದ ಬಗೆಬಗೆ ಮನಮೆಚ್ಚುವ ಉಡಿಗೆ ತೊಡಿಗೆಗಳು

ಸ್ವಸ್ತಿಕ್ ಸ್ಟೋರ್ಸ್

ದಾಸಪ್ಪರವರ ಬಿಲ್ಡಿಂಗ್ಸ್, ಸಾಲ್ ಸೆಂ[illegible] ಮಾರ್ಕೆಟ್ ಕೆರೆ, ಮೈಸೂರು

ಪ್ಯಾರಿಸ್‌ಗೆ ಹೊಡೆತ

ಪ್ಯಾರಿಸ್ ನಗರದ ಎರಡು ಪ್ರಮುಖ ಬಾಲ್ ಬೇರಿಂಗ್ ಕಾರ್ಖಾನೆಗಳ ಮೇಲೆ ಮೊನ್ನೆ ಅಮೆರಿಕ ವಿಮಾನಗಳು ಹಗಲಿನಲ್ಲೇ ಧಾಳಿಮಾಡಿದವು. ಫ್ರಾನ್ಸಿನ ಸೈರುತ್ಯದಲ್ಲಿರುವ ಬೋರ್ಡೋ ವಿಮಾನಪ್ರಯಾಗಗಳಿಗೂ ಹೊಡೆತ ಬೀಳಲಾಗಿದೆ.

ಆಸ್ಟ್ರೇಲಿಯರ ಮುನ್ನಡೆ

ನ್ಯೂಗಿನಿಯಾ ರಣಕ್ಷೇತ್ರದಲ್ಲಿ, ಫಿನ್ಷ್‌ಹೇವನ್ನಿಂದ ೨೦ ಮೈಲಿಗಳು ದೂರಕ್ಕೆ ಆಸ್ಟ್ರೇಲಿಯನ್ ಸೈನ್ಯಗಳು ಮುಂದುವರಿದು ಹೊಸ ಹೊಸ ಸ್ಥಾನಗಳನ್ನು ಆಕ್ರಮಿಸಿರುವುದಾಗಿ ತಿಳಿದು ಬಂದಿದೆ.

ಹೊಸ ವರ್ಷದ ಬಿರುದುಗಳು

ಚಕ್ರವರ್ತಿ ಮಹಾಪ್ರಭುಗಳವರು [illegible] ನೇ ತಾರೀಖು ನೂತನ ವರ್ಷದ ಬಿರುದುಗಳನ್ನು ದಯಪಾಲಿಸಿದ್ದಾರೆ.

ಮೈಸೂರು ಪ್ರಜಾ ಪ್ರತಿನಿಧಿಸಭೆಯ ಶ್ರೀ ಶ್ರೀ ಡಿ. ಡಿ. ಯಂ. [illegible] ಸ್ಟ್ರೆಜರ್‌ರವರಿಗೆ ಸಿ. ಎಸ್. ಐ. ವೈಸ್ರಾಯ್ ಮಂತ್ರಿ ಮಂಡಲದ ಸದಸ್ಯರಾದ ಸರ್ ರೆಜಿನಾಲ್ಡ್ ಮ್ಯಾಕ್ಸ್‌ವೆಲ್ ರವರಿಗೆ ಜಿ. ಸಿ. ಐ. ಇ. ಡಿ ಎಸ್ ಸ್ಥಾನ, ಮದ್ರಾಸ್ ಗೌರ್ನರರ ಅಧ್ಯಕ್ಷ ಬಂಗಾಳ ಗೌರ್ನರ್ ಆದ ಮಿ॥ ಸಿ ಡಿ ದೇಶ[illegible] ಬಂಗಾಳದ ಮಾಜಿ ಗೌರ್ನರಾದ ಮಿ॥ ಜೆ. ಆರ್. [illegible] ಯವರಿಗೂ ನೈಟ್‌ಹುಡ್ ಬಿರುದುಗಳನ್ನು ಕೊಡಲಾಗಿದೆ.

ಜರ್ಮನರು ರಷ್ಯ ಬಿಡುವರು

ನೂತನ ವರ್ಷದ ಶುಭ ಸಂದೇಶವಾಗಿ ಸೋವಿಯಟ್ ಅಧ್ಯಕ್ಷ ಕಾಲಿನಿನ್‌ರವರು ಈ ರೀತಿ ತಿಳಿಸಿದ್ದಾರೆ—ರಷ್ಯದಲ್ಲಿ ಜರ್ಮನರ ವಶದಲ್ಲಿರುವ ಪ್ರದೇಶಗಳಲ್ಲಿ ಮೂರರಲ್ಲೆರಡು ಭಾಗವನ್ನು ಸ್ವತಂತ್ರಗೊಳಿಸಲಾಗಿದೆ. ಜರ್ಮನರು ಜಾಗ್ರತೆಯಾಗಿ ಹಿಂದಕ್ಕೆ ಹೋಗುವ ಸೆನಟಿಕೆಯಲ್ಲಿದ್ದಾರೆ.

ಓರ್ಟೊನಾ ಆಚೆಗೆ ಮಿತ್ರ ನಡೆ

ಓರ್ಟೊನಾ ಹಿಡಿದ ಬ್ರಿಟಿಷ್ ೮ ನೇ ಸೇನೆ ಅಲ್ಲಿಂದ ಮುಂದೆ ಎರಡು ಮೈಲಿಗಳಷ್ಟು ದೂರ ಮುಂದುವರಿಯುವುದಾಗಿ ಅಧಿಕಾರಿಕ ಪ್ರಕಟಣೆ ಹೊರಟಿದೆ.

ಯುದ್ಧ ಖೈದಿಗಳು

ಮಿತ್ರ ಸೇನಾ ದಳಕ್ಕೆ ಸೇರಿದ ಶ್ರೀ ಕೆ॥ ಎಸ್. ಸಿ. [illegible] ಶ್ರೀ ಎಸ್. ವಿ. ವೆಂಕಟ[illegible]ರವರುಗಳು ಜಪಾನ್ ಖೈದಿಗಳಾಗಿ ಹಿಡಿಯಲ್ಪಟ್ಟಿರುವರೆಂದು ಇಂಡಿಯಾ ಸರಕಾರದ ಪ್ರಕಟನೆಯು ತಿಳಿಸುತ್ತದೆ.

ಜಪಾನನ್ನು ಎದುರಿಸಲು ಸಿದ್ಧತೆ

ಜಪಾನಿನ ಮೇಲೆ ಯಾವ ಕ್ರಮದಲ್ಲಿ ಧಾಳಿ ನಡೆಸಬೇಕೆಂಬ ಅಂಶವನ್ನು ಪರಿಶೀಲಿಸಿ ವರದಿಮಾಡಲು ಮೇಜರ್ ಜನರಲ್ ಲೇಕ್ ಬ್ರಿಡ್ಜ್ ರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಗಿದೆ. ಇವರು ಇಂಗ್ಲೆಂಡ್ ಅಮೆರಿಕ ಆಸ್ಟ್ರೇಲಿಯಾ ನ್ಯೂಗಿನಿ ಮುಂತಾದ ಪ್ರದೇಶಗಳಲ್ಲೆಲ್ಲಾ ಸಂಚರಿಸಿ ತಮ್ಮ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಜಪಾನನ್ನು ಎದುರಿಸಲು ಈಗಿರುವ ಅಸ್ತ್ರಗಳನ್ನು ಬದಲಾಯಿಸಿ ಹೊಸ ಅಸ್ತ್ರಗಳನ್ನು ಉಪಯೋಗಿಸಬೇಕೆಂದು ತಿಳಿಸಿದ್ದಾರೆ.

ರೈಲ್ವೆ ಮುಷ್ಕರ ಮುಂದಕ್ಕೆ ಹೋಯಿತು

ಅಮೆರಿಕಾ ಸಂಯುಕ್ತ ಸಂಸ್ಥಾನದ ಸರ್ಕಾರದವರು ಅಲ್ಲಿನ ರೈಲ್ವೆಗಳ ಆಡಳಿತವನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡಿರುವುದರಿಂದ ರೈಲ್ವೆ ಕೆಲಸಗಾರರು ತಮ್ಮ ಮುಷ್ಕರವನ್ನು ಮುಂದಕ್ಕೆ ಹಾಕಿರುವುದಾಗಿ ತಿಳಿದು ಬಂದಿದೆ.

ಇನ್ನೂ ನೌಕರಿಗಳು ಬೇಕಂತೆ

ಬಂಗಾಳದ ಗೌರ್ನರಾಗಿ ನೇಮಿಸಲ್ಪಟ್ಟಿರುವ ಮಿ॥ ಕೇಸಿಯವರು ಆಸ್ಟ್ರೇಲಿಯನ್ನರಿಗೆ ಇನ್ನೂ ದೊಡ್ಡ ದೊಡ್ಡ ನೌಕರಿಗಳು ಹೆಚ್ಚಿನ ಸಂಖ್ಯೆಯಲ್ಲಿ ದೊರೆಯಬೇಕೆಂದು ಹೇಳಿದ್ದಾರೆ. ಈ ಬಗ್ಗೆ ಅವರು ಮುಖ್ಯ ಮಂತ್ರಿಗಳಿಗೆ ಪತ್ರ ಬರೆದಿದ್ದಾರೆ.

೧೬೩೪ ಜರ್ಮನರು ನೀರು ಪಾಲು

ಜರ್ಮನರ ಸ್ಕಾರ್‌ಹೋರ್ಸ್ಟ್ ಯುದ್ಧ ನೌಕೆಯನ್ನು ಮುಳುಗಿಸಲಾಯಿತಷ್ಟೆ. ಆ ದುರ್ಘಟನೆಯಲ್ಲಿ ೧೬೩೪ ಮಂದಿ ಇದ್ದರು. ಆ ಪೈಕಿ ೩೬ ಜನ ಮಾತ್ರ ಬದುಕಿಕೊಂಡಿರುವುದಾಗಿ ಜರ್ಮನರೇ ತಿಳಿಸಿದ್ದಾರೆ.

ಅಮೃತ

ನಿತ್ಯದ ಜ್ವರ, ಮಲೇರಿಯಾ ಜ್ವರ, ಜ್ವರದ ಗೆಡ್ಡೆ, ಇವುಗಳ ಮೇಲೆ ಬಹಳ ಚೆನ್ನಾಗಿ ಕೆಲಸ ಮಾಡುತ್ತದೆ.

ಪಂಡಿತ

ಕೆ. ವಿ. ವೆಂಕಟರಾಮಯ್ಯ

ಡಿ॥ ಬೋರ್ಡ್ ವೈದ್ಯಶಾಲಾ,

ಅರಕಲವಾಡಿ (ಚಾಮರಾಜನಗರ ತಾ॥).

ಸ್ತ್ರೀಯರ ಸೌಕರ್ಯಕ್ಕಾಗಿ

[illegible] ರಿಂದ ಪ್ರತ್ಯೇಕವಾಗಿ ವ್ಯಾಪಾರ ಏರ್ಪಾಡು ಮಾಡಿರುತ್ತೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿಪುಡಿ

ಮನ್ನೇ ಉಪಯೋಗಿಸಿ.

ಡಿ. ಪುಟ್ಟಯ್ಯ, ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ನಿ ಸೂ—ಹಲ್ಲಿನ ಮತ್ತು ಸಂಕೀರ್ಣ [illegible] ಆಫೀಸಿನಲ್ಲಿನ [illegible], ಗೋಧಿಹಿಟ್ಟು ಮತ್ತು ಮೈದಾಹಿಟ್ಟು ಇವೆ ದೊರೆಯುತ್ತೆ. ಅಲ್ಲದೆ ಬೆಲ್ಲ ಮತ್ತು ಕಲ್ಲು ಸಕ್ಕರೆ ರೇಷನ್ ಕಾರ್ಡುಗಳಿಗೆ ದೊರೆಯುತ್ತವೆ.

WEEKLY EDITION

ತಾಯಿನಾಡು

ಸಂಪುಟ ೮] ಸೋಮವಾರ ೯-೧-೪೫ [ಸಂಚಿಕೆ ೧೦

ಫಾರ್ಮೋಸಾ ನಿಲ್ದಾಣ ಅಮೆರಿಕನರ ವಶಕ್ಕೆ

ರಷ್ಯನರು ಹಳೇ ಪೋಲೆಂಡ್ ಮುಟ್ಟಿದ್ದಾರೆ

ಸಾರ್ಡಿನಿಯಾದಲ್ಲಿ ನಾಜಿಗಳ ಪಿತೂರಿ

ಮಕ್ಕಳನ್ನು ಕೊಂದು ಆತ್ಮ ಹತ್ಯದ ದುರಂತ ಪ್ರಸಂಗ

ಮೈಸೂರು ೩

ತಾಯಿಯೇ ತನ್ನ ಇಬ್ಬರು ಮಕ್ಕಳನ್ನು ಸುಟ್ಟು, ತಾನೂ ಸುಟ್ಟುಕೊಂಡು ಪ್ರಾಣ ಬಿಟ್ಟ ದುರಂತ ಪ್ರಸಂಗವು ನಿನ್ನೆ ಪ್ರಕಟವಾಯಿತಷ್ಟೆ. ಇದರ ಬಗ್ಗೆ ಹೆಚ್ಚಿನ ವಿವರಗಳು ಈಗ ಗೊತ್ತಾಗಿವೆ—

ನೂರು ಅಡಿ ರಸ್ತೆಯಲ್ಲಿರುವ ಶಿಲ್ಪದ ಶ್ರೀ ನಾಗಣ್ಣನವರ ಹಿರಿಯ ಸೊಸೆಯಾದ ಸರೋಜಮ್ಮ ಎಂಬಾಕೆಗೂ, ತನ್ನ ಪತಿ ಮತ್ತು ಅತ್ತೆಗೂ ಈಗ ಕಳೆದ ೮ ತಿಂಗಳಿಂದಲೂ ವೈಮನಸ್ಯ ಉಂಟಾಗಿತೆಂದು ಹೇಳಲಾಗಿದೆ. ತಮ್ಮ ಆಸ್ತಿಯನ್ನು ತಗೆದುಕೊಂಡು ಪ್ರತ್ಯೇಕ ಸಂಸಾರವಾಡಬೇಕೆಂದು ಆಕೆ ಪತಿಗೆ ಹೇಳುತ್ತಿದ್ದಳೆಂದೂ, ಇದಕ್ಕೆ ಪತಿಯು ಒಪ್ಪದಿರಲು, ಪತಿ-ಪತ್ನಿಯರಿಗೂ ಮತ್ತು ಅತ್ತೆ-ಸೊಸೆಗೂ ಆಗಿಂದಾಗ್ಗೆ ಮಾತುಕತೆ ನಡೆದು, ಮನೆಯಲ್ಲಿ ಅಸಮಾಧಾನವಾಗುತ್ತಿತ್ತೆಂದೂ ಹೇಳಲಾಗಿದೆ.

ಮೊನ್ನೆ ಶನಿವಾರ ಮಧ್ಯಾಹ್ನ ೩ ಗಂಟೆ ಸಮಯದಲ್ಲಿ ಆಕೆ ಪತಿಯು ಮನೆಗೆ ಊಟಕ್ಕೆ ಬಂದಾಗ, ಎಷ್ಟು ಬಾರಿ ಕೇಳಿದರೂ ಊಟಕ್ಕೆ ಹಾಕದೆ ನಿರಾಕರಿಸಿದ್ದರಿಂದ ಪತಿಯು ಕೋಪಿಸಿಕೊಂಡು ಊಟಮಾಡದೆ ಹೊರಟು ಹೋದರಂತೆ. ನಂತರ ಸಂಜೆ ೭ ಗಂಟೆ ಸಮಯದಲ್ಲಿ, ಮನೆಯಲ್ಲಿ ಅತ್ತೆಯೊಬ್ಬರೇ ಇರುವ ಕಾಲದಲ್ಲಿ ಮನೆ ಕೊಠಡಿಯೊಳಗೆ ಮೊದಲು ೩ ವರ್ಷದ ತನ್ನ ಬಾಲಕನ ಮೇಲೆ ಸೀಮೆ ಎಣ್ಣೆ ದ್ರಾವಕವನ್ನು ಸುರಿದು ಬೆಂಕಿ ಹಚ್ಚಿ ಸುಟ್ಟು ಕೊಂದಳಂತೆ. ತನ್ನ ಎರಡನೇ ಮಗುವಿಗೂ ತನಗೂ ದ್ರಾವಕವನ್ನು ಸುರಿದುಕೊಂಡು ಪ್ರಾಣ ತೆಗೆದುಕೊಂಡಳೆಂದು ಹೇಳಲಾಗಿದೆ.

ಲಷ್ಕರ್ ಪೋಲೀಸರು ಆಕೆಯ ಮೃತ ದೇಹವನ್ನು ಪೋಸ್ಟ್ ಮಾರ್ಟಂ ಪರೀಕ್ಷೆಗೋಸ್ಕರ ಆಸ್ಪತ್ರೆಗೆ ಕಳುಹಿಸಿದ್ದಾರೆ. ಪಂಚಾಯತದಾರರು ಆಕೆಯು ಮಕ್ಕಳನ್ನು ಸುಟ್ಟು ತಾನೂ ದ್ರಾವಕ ಹಾಕಿಕೊಂಡು ಆತ್ಮಹತ್ಯ ಮಾಡಿಕೊಂಡಳೆಂದು ತೀರ್ಮಾನಿಸಿದ್ದಾರೆ. ಪೋಲೀಸರು ಮುಂದಿನ ತನಿಖೆ ನಡೆಸುತ್ತಿದ್ದಾರೆ.

ಜೂಜುಗಾರರಿಗೆ ಜುಲ್ಮಾನೆ

ರಾಜಧಾನಿಯ ಚಾಮರಾಜಪೇಟೆಯ ರಸ್ತೆಯ ಶ್ರೀ ಸಿ. ಪಿ. ರಾಘವಾಚಾರ್ಯರ ಮನೆಯಲ್ಲಿ ಜೂಜಾಟ ನಡೆಸುತ್ತಿದ್ದುದನ್ನು ಮೊನ್ನೆ ಶನಿವಾರ ಕೃಷ್ಣರಾಜ ಪೋಲೀಸರು ಪತ್ತೆಹಚ್ಚಿ ಐದು ಜನರನ್ನು ದಸ್ತಗಿರಿ ಮಾಡಿದ್ದರಷ್ಟೆ.

ಈ ದಿನ ದ್ವಿತೀಯ ನ್ಯಾಯಾಧೀಶರು ಆ. ಸಿ. ರಾಘವಾಚಾರ್ಯರಿಗೆ ೧೫೦ ರೂ ಜುಲ್ಮಾನೆಯನ್ನೂ, ಕೃಷ್ಣಪ್ಪ ಮತ್ತು ಕೃಷ್ಣ ಅಯ್ಯಂಗಾರ್ ಎಂಬುವರಿಗೆ ತಲಾ ೫೦ ರೂ. ದಂಡವನ್ನೂ ವಿಧಿಸಿದರು.

ಶ್ರೀನಿವಾಸರನ್ನು ಮತ್ತು ರಾಮಯ್ಯ ಎಂಬ ಇತರ ಆಪಾದಿತರ ವಿಚಾರಣೆಯನ್ನು ಮುಂದೆ ಹಾಕಲಾಗಿದೆ.

ರಷ್ಯನರ ಮುಂದೋಟ

ರಷ್ಯ ಸೇನೆಗಳು ಹಳೇ ಪೋಲೆಂಡಿನ ಸರಹದ್ದಿಗೆ ೩೦ ಮೈಲಿಯವರೆಗೆ ಮುಂದೊತ್ತಿವೆಯೆಂದು ತಿಳಿದುಬರುತ್ತದೆ. ನಾಜಿ ಪ್ರಾಬಲ್ಯದ ಸೈನ್ಯಗಳು ಬಹಳ ನಿಲ್ಲದಾಗಿ ಚದುರಿಹೋಗುತ್ತಿವೆ.

ಬರ್ಲಿನ್ ನಾಶಕ್ಕೆ ೫೨ ಕೋಟಿ ಪೌಂಡ್

ಭೂಕಂಪದಿಂದ ಬರ್ಲಿನ್‌ನನ್ನು ಕೆಡಿಸಿದುದಕ್ಕೆ ೫೨ ಕೋಟಿ ೯೦ ಲಕ್ಷ ಪೌಂಡ್ ವೆಚ್ಚವಾಗುವುದೆಂದು ಲಂಡನ್ನಿನಲ್ಲಿ ಅಂದಾಜು ಮಾಡಲಾಗಿದೆ. ಹ್ಯಾಂಬರ್ಗ್ ನ್ನು ನಾಶ ಮಾಡಲು ೮ ಕೋಟಿ ೭೦ ಲಕ್ಷ ಪೌಂಡ್ ವೆಚ್ಚವಾಯಿತು.

ಹೊಸ ಮಾದರಿ ಜರ್ಮನ್ ಬಾಂಬುಗಳು

ರೇಡಿಯೊ ಮೂಲಕವೂ ಗ್ಲೈಡರುಗಳಿಂದಲೂ ಪ್ರಯೋಗಿಸಲ್ಪಡುವ ಹೊಸ ಮಾದರಿಯ ಬಾಂಬುಗಳನ್ನು ಜರ್ಮನರು ಕಂಡು ಹಿಡಿದಿರುವುದಾಗಿ ಗೊತ್ತಾಗಿದೆ. ಲಂಡನ್ನಿನಲ್ಲಿ ಸುಮಾರು ಅಡಿಗಳ ಎತ್ತರದಲ್ಲಿ ಪೆಟ್ರೋಲ್ ಮುಂತಾದ ಎಣ್ಣೆಗಳಿಂದ ನಡೆಸಲ್ಪಡುವ ಫ್ಲೈಯಿಂಗ್ ಗ್ಲೈಡರ್ ಬಾಂಬುಗಳು ಮಾದರಿ ಮೈಲಿ ಎತ್ತರದಿಂದ ಪ್ರಯೋಗಿಸಲ್ಪಡುತ್ತವೆ. ಇವುಗಳಿಂದ ಗುರಿಯನ್ನು ನಿಷ್ಟಗೆ ಮುಟ್ಟಬಹುದೆಂದು ಹೇಳಲಾಗಿದೆ.

ಕೇಸಿಯವರಿಗೆ ಅಮೆರಿ ಶಿಕ್ಷಣ

ಬಂಗಾಳದ ಹೊಸ ಗೌರ್ನರಾದ ಮಿ|| ಕೇಸಿಯವರು ಆಫೀಸ್ ಇಂಡಿಯಾ ಸೆಕ್ರೆಟರಿಯಾದ ಮಿ|| ಅಮೆರಿಯವರಿಂದ ತಮ್ಮ ಮುಂದಿನ ಕೆಲಸದ ವಿಧಾನವನ್ನು ಕಲಿಯುವುದಾಗಿ ಹೇಳಿದ್ದಾರೆ.

ಶತ್ರು ಏಜೆಂಟರನ್ನು ಹಿಡಿದರೆ ಬಹುಮಾನ

ಬರ್ಮಾದಿಂದ ವ್ಯಾಪಾರ ಮಾರ್ಗಗಳಲ್ಲಿ ಗಲಿ ಅಥವಾ ಸಮುದ್ರ ಮೂಲಕವಾಗಲೀ ಶತ್ರುಗಳ ತಮ್ಮ ಕಡೆಯ ಏಜೆಂಟುಗಳನ್ನು ಹಿಂದೂಸ್ಥಾನಕ್ಕೆ ಕಳುಹಿಸಲು ಪ್ರಯತ್ನ ಮಾಡಬಹುದು. ಅಂಥವರನ್ನು ಕಾಣಲಿ ಅಥವಾ ಅಧಿಕಾರಿಗಳ ಮೂಲಕವಾಗಲಿ ದಸ್ತಗಿರಿ ಮಾಡಿಸುವುದು ಪ್ರಜೆಗಳ ಕರ್ತವ್ಯ. ಇಂಥ ಏಜೆಂಟಗಳನ್ನು ಹಿಡಿದು ಕೊಟ್ಟವರಿಗೆ ೫೦೦೦ ರೂಗಳನ್ನೂ ಹೀಗೆ ಶತ್ರುಗಳಿಗೆ ಸಹಾಯ ಮಾಡುವವರನ್ನು ಕೊಟ್ಟವರಿಗೆ ಒಂದು ಸಾವಿರ ರೂ ಗಳನ್ನೂ ಬಹುಮಾನವಾಗಿ ಕೊಡುವುದಾಗಿ ಇಂಡಿಯಾ ಸರ್ಕಾರದವರು ಪ್ರಕಟಿಸಿದ್ದಾರೆ.

ರಾಂಜಿ ಕ್ರಿಕೆಟ್ ಪಂದ್ಯ

ಸ್ವಂ ಬಾ] ಬೆಂಗಳೂರು ೩

ಕಳೆದ ಮೂರು ದಿನಗಳಿಂದ ಮೈಸೂರು ಮತ್ತು ಮದರಾಸಿನ ಮಧ್ಯೆ ನಡೆದ ರಾಂಜಿ ಕ್ರಿಕೆಟ್ ಪಂದ್ಯವು ಈ ದಿನ ಮುಕ್ತಾಯ ಮದರಾಸಿನವರು ಆರು ರನ್ನುಗಳಿಂದ ವಿಜಯ ಹೊಂದಿದರು.

ಮೈಸೂರಿನವರು ಮೊದಲು ಆಟವಾಡಿ ೨೫೫ ರನ್ನುಗಳನ್ನು ಮಾಡಿದರು. (ಎಂ. ಎಂ. ಲಾಲ್ ೧೩, ವೈ. ಎಸ್. ರಾಮಸ್ವಾಮಿ ೦, ತಿಮ್ಮಪ್ಪಯ್ಯ ೩, ರಾಮಮೂರ್ತಿ ೧೪, ಫ್ರಾಂಕ್ ೧೬, ಸ್ಮಿತ್ ೧೭, ಎಸ್. ರಾಮರಾವ್ ೬೫, ಸಫಿದ್ದಾರ್ ೨೬, ಇಬ್ರಾಹಿಂ ೦, ರಾಜಿ(ಚೀಫ್) ೫೫, ಅಳಸಿಂಗಾಚಾರ್ ೫).

ಮದರಾಸಿನವರು ೨೬೧ ರನ್ನುಗಳಿಗೆ ಔಟ್ ಆದರು. (ಕಣ್ಣನ್ ೪೭, ಪಾರ್ಥಸಾರಥಿ ೩೩, ರಾಮ್‌ಸಿಂಗ್ ೮೧, ಅನಂತನಾರಾಯಣ್ ೨೧, ರಂಗಾಚಾರಿ ೯೪, ಗೋಪಾಲನ್ ೬, ಜಿ ಪಾರ್ಥಸಾರಥಿ ೧೯, ವೆಂಕಟೇಶನ್ ೩೬, ನೇಲ್ ೧೭, ಎಂ. ಓ. ಶ್ರೀನಿವಾಸನ್ ೨೭, ರಂಗಚಾರಿ ೮).

ಸಾರ್ಡಿನಿಯಾದಲ್ಲಿ ನಾಜಿ ಪಿತೂರಿ

ಒಂದು ಸ್ವತಂತ್ರ ಸ್ಥಾಪನೆ ಪಬ್ಲಿಕ್ ಸರ್ಕಾರವನ್ನು ಸಾರ್ಡಿನಿಯದಲ್ಲಿ ಸ್ಥಾಪಿಸಲು ನಡೆದ ನಾಜೀ ಪಿತೂರಿಯನ್ನು ಪೋಲೀಸರು ಕಂಡುಹಿಡಿದರು. ಮುಖ್ಯ ಫ್ಯಾಸಿಸ್ಟ್ ನಾಯಕರುಗಳು ದಸ್ತಗಿರಿ ಮಾಡಿದ್ದಾರೆ. ಅವರುಗಳ ವಿಚಾರಣೆಯು ಸನ್ನದಲ್ಲೇ ನಡೆಯಲಿದೆ.

ಏಡ್ರಿಯಾಟಿಕ್ ದ್ವೀಪದ ಮೇಲೆ ನಾಜಿ ಕಣ್ಣು

ಯುಗೋಸ್ಲೇವಿಯಾ ಸ್ವಾಧೀನದಲ್ಲಿರುವ ಏಡ್ರಿಯಾಟಿಕ್ ದ್ವೀಪಗಳನ್ನು ಹಿಡಿಯಲು ಜರ್ಮನರು ಪ್ರತ್ಯಾಕ್ರಮಣಕ್ಕೆ ಹೊಸ ಹೊಸ ದಳಗಳನ್ನು ಕಳುಹಿಸಿಕೊಳ್ಳುತ್ತಿರುವುದಾಗಿ ತಿಳಿದುಬಂದಿದೆ.

ಕೋಳಿ ರವಾನೆಗೆ ಅಡ್ಡಿ

ಅಹಮದ್‌ನಗರ ಜಿಲ್ಲೆಯಿಂದ ಹೊರಕ್ಕೆ ಕೋಳಿಗಳನ್ನು ಕೋಳಿ ಮರಿಗಳನ್ನೂ ಕಳುಹಿಸಬಾರದೆಂದು ಜಿಲ್ಲಾ ನ್ಯಾಯಾಧಿಕಾರಿಗಳು ಒಂದು ಆಜ್ಞೆ ನಡೆಸಿದ್ದಾರೆ. ಅಹಮದ್‌ನಗರದ ಜಿಲ್ಲಾ ಮಿಲಿಟರಿಗಳು ಆಜ್ಞೆ ಹೊರಡಿಸಿದ್ದಾರೆ.

ಚೀನಾ ನಿಲ್ದಾಣ ಅಮೆರಿಕಕ್ಕೆ

ಜಪಾನಿನ ವಶದಲ್ಲಿದ್ದ ದ್ವೀಪಗಳನ್ನು ಅಮೆರಿಕದ ಉಪಯೋಗಕ್ಕೆ ಬಿಟ್ಟುಕೊಡುವಂತೆ ಚೀಣಾ ಮತ್ತು ಕೈರೋ ಸಮ್ಮೇಳನದಲ್ಲಿ ತೀರ್ಮಾನವಾಯಿತೆಂದು ಹೇಳಲಾಗಿದೆ. ಫಾರ್ಮೋಸಾದಲ್ಲಿ ಅಮೆರಿಕಕ್ಕೆ ಒಂದು ನಿಲ್ದಾಣವನ್ನು ಸ್ಥಾಪಿಸಲು ಚೀಣಾ ಅವಕಾಶ ಕೊಡುವುದರಲ್ಲಿ ಸಂದೇಹವಿಲ್ಲ. ಮಾರ್ಷಲ್ ಕ್ಯಾರೋಲಿನ್ ದ್ವೀಪಗಳನ್ನು ಕಳೆದ ಮಹಾ ಯುದ್ಧಾನಂತರ ಜಪಾನರು ಗಳಿಸಿದ್ದರು. ಫಾರ್ಮೋಸಾ ದ್ವೀಪವು ಬಹಳ ಪ್ರಾಮುಖ್ಯ ಸ್ಥಾನದಲ್ಲಿರುತ್ತದೆ. ೧೮೯೫ ರಲ್ಲಿ ಜಪಾನರು ಅದನ್ನು ಆಕ್ರಮಿಸಿದರು. ಅಲ್ಲಿನ ಪ್ರಜಾ ಸಂಖ್ಯೆ ೫೦ ಲಕ್ಷ.

ಹಿಟ್ಲರನು ಜೀವಸಹಿತವಾಗಿ ವಶವಾಗುವುದಿಲ್ಲ

ಜೀವದೊಡನೆ ಹಿಟ್ಲರನನ್ನು ಕೈಸೆರೆ ಹಿಡಿಯುವುದಿಲ್ಲ. ಈಸ್ಟರ್ ಹಬ್ಬದ ಸಮಯಕ್ಕೆ ಒಂದು ಭಾರಿ ಆಸ್ಫೋಟನೆ ಆಗಿ ಅವನ ಕಡೆಯ ನೌಕರರೇ ಅವನನ್ನು ಗುಂಡಿನಿಂದ ಹೊಡೆದು ಕೊಲ್ಲುತ್ತಾರೆ—ಎಂದು ಡಾಗಿ ನ್ಯೂಯಾರ್ಕಿನ ಮೇಯರಾದ ಲಾಗಾರ್ಡಿಯಾರವರು ಹೇಳಿದ್ದಾರೆ.

ಜಪಾನಿನ ಶಕ್ತಿಯನ್ನು ಜರಿಯಬೇಡಿ

ಯುದ್ಧವು ಆಪಾಯ ಸ್ಥಿತಿಯನ್ನು ಪ್ರವೇಶಿಸುತ್ತದೆ. ಜಪಾನರ ತಮ್ಮ ಪ್ರದೇಶಗಳನ್ನು ಸಂರಕ್ಷಿಸಿಕೊಳ್ಳಲು ಸಕಲ ಪ್ರಯತ್ನಗಳನ್ನೂ ಮಾಡುವರು. ಅವರು ನಮಗೆ ಕೊಡುವ ತೊಂದರೆಗಳನ್ನೂ ಅವರ ಶಕ್ತಿಯನ್ನೂ ನಾವು ಕಡಿಮೆಯಾಗಿ ಎಣಿಸಬಾರದು. ಎಂದು ಸಿಲೋನಿನ ಸೇನಾಪತಿ ಅ|| ಲೆಫ್ಟಿನೆಂಟರವರು ಹೇಳಿರುವರು.

ಧರ್ಮ ಮತ್ತು ವಿದ್ಯಾಭ್ಯಾಸದಲ್ಲಿ ಜಪಾನರ ಪ್ರವೇಶ

ಜಪಾನರು ತಮ್ಮ ಸ್ವಾಧೀನದಲ್ಲಿರುವ ಫಿಲಿಪ್ಪೈನ್ ದ್ವೀಪದಲ್ಲಿ ಮತ ಮತ್ತು ವಿದ್ಯಾಪ್ರಚಾರದ ಮುಖೇನ ತಮ್ಮ ನೀತಿಯನ್ನು ಪ್ರಚಾರಗೊಳಿಸುತ್ತಿರುವರು. ಅಲ್ಲಿನ ಮುಖಂಡರಿಗೆ ಸಾರ್ವಜನಿಕರಲ್ಲಿ ತಮ್ಮ ಏಷ್ಯಾ ರಾಜ್ಯ ಧೋರಣೆಯ ಬಗ್ಗೆ ತಿಳಿಸಬೇಕೆಂದು ಆಜ್ಞಾಪಿಸಿರುವರು. ಇದನ್ನು ಮತ ಪ್ರಚಾರದೊಡನೆ ಹೊಂದಿಸಿಕೊಂಡು ಹೇಳಬೇಕೆಂದು ತಿಳಿಸಿರುವರು. ಫಿಲಿಪ್ಪೈನಿನ ಶಾಲೆಗಳ ಪಠ್ಯ ಪುಸ್ತಕ ಸಮಿತಿಯವರು ಹಳೆ ತಮ್ಮ ಪುಸ್ತಕಗಳನ್ನು ಬದಲಾಯಿಸಿ, ಈಗಿನ ಜಪಾನಿನ ಪ್ರಚಾರಕ್ಕೆ ಅನುಗುಣವಾದ ಪುಸ್ತಕಗಳನ್ನು ಉಪಯೋಗಿಸುವಂತೆ ಆಜ್ಞಾಪಿಸಿರುವರು. ಶಾಲೆಗಳಲ್ಲಿ ಜಪಾನರ ಭಾಷೆಯನ್ನು ಉಚ್ಚ ಶಿಕ್ಷಣದಲ್ಲಿ ಸೇರಿಸಬೇಕು. ಇಂಥ ಮಾರ್ಗದಲ್ಲಿ ಜಪಾನಿನ ಅಧಿಕಾರಿಗಳು ಫಿಲಿಪ್ಪೈನಿನವರ ಶಿಕ್ಷಣವನ್ನು ಬದಲಾಯಿಸಬೇಕೆಂದು ತಿಳಿಸಲಾಗಿದೆ. ಫಿಲಿಪ್ಪೈನಿನವರು ಜಪಾನ್ ಭಾಷೆಯನ್ನು ಕಲಿಯಬೇಕೆಂದೂ, ಅವರ ಚರಿತ್ರೆ ಗುಣಗಳನ್ನು ತಿಳಿಯಬೇಕೆಂದೂ, ಪಾಶ್ಚಿಮಾತ್ಯರ ಪ್ರಚಾರಗಳನ್ನು ಬಿಟ್ಟುಬಿಡಬೇಕೆಂದೂ, ಏಷ್ಯಾ ನಿರ್ಮಾಣದ ಪ್ರಗತಿ ಪರ ಶಕ್ತಿಗಳನ್ನು ಕೈಗೊಳ್ಳಬೇಕೆಂದೂ ಆಜ್ಞಾಪಿಸುತ್ತಿರುವರು.

ಆನಂದವು ಎಲ್ಲೆಲ್ಲಿಯೂ ಇದೆ

ದುಃಖದ ಸೇತುವೆ ದಾಟಿದಲ್ಲದೆ ಆನಂದವು ಸಿಗುವುದಿಲ್ಲ

ಮೈಸೂರು ವಿಶ್ವವಿದ್ಯಾನಿಲಯ ಸಂಘದಲ್ಲಿ ಬೇಂದ್ರೆಯವರ ಭಾಷಣ

ನಿನ್ನೆ ಬೆಳಿಗ್ಗೆ ವಿಶ್ವವಿದ್ಯಾನಿಲಯ ಸಂಘದ ಆಶ್ರಯದಲ್ಲಿ ಮಹಾರಾಜಾ ಕಾಲೇಜಿನ ಅವರಣದಲ್ಲಿ ಶ್ರೀ ದ. ರಾ. ಬೇಂದ್ರೆಯವರು ಕೊಟ್ಟ ಭಾಷಣದ ಸಾರಾಂಶ:—

ರತ್ನಸಿಂಹಾಸನವು ಇದೀ ಕರ್ನಾಟಕದ್ದು

ಕೆಲವರು ಶಿವನೆಗ್ಗೆಯಲ್ಲಿ ಮಾಡಿದ ನನ್ನ ಅಧ್ಯಕ್ಷ ಭಾಷಣದಲ್ಲಿ ನಾನು ನಮ್ಮ ಮೈಸೂರನ್ನು ಟಕುವಾಗಿ ಹೊಗಳಿದ್ದೇನೆಂದರು. ಕೆಲವರು ಬಹುವಾಗಿ ತೆಗಳಿದ್ದೇನೆ, ಎಂದರು. ನನ್ನ ರೀತಿಯೆಂದರೆ—ಪ್ರೀತಿ ಮಾಡಿದವರಲ್ಲಿ ಸಿಟ್ಟು ಮಾಡುವುದು ಅಲ್ಲದೆ ನನ್ನ ಮೈಸೂರು, ನಮ್ಮ ಮೈಸೂರಿಂದ ನ ಅಮೂಲ್ಯವಾದ ಮೈಸೂರಿನ ರತ್ನ ಸಿಂಹಾಸನ ಕರ್ನಾಟಕದ್ದು—ಮೈಸೂರು ಕರ್ನಾಟಕದಲ್ಲಿ ಒಂದು. ರತ್ನ ಸಿಂಹಾಸನ ಮತ್ತು ಕನ್ನಡ, ಇವೆರಡೂ ಪ್ರಾಚೀನ ಆದರೆ ನಿತ್ಯದ ಕಳೆ ಹೊಸದಿ ಸಿದೆ.

ಕವಿ ಸಮಯ

ಸ್ವಾತಂತ್ರ್ಯದ ೩ ವರ್ಷಗಳ ನಂತರ ೧೯೨೮ ರಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನವು ಮೈಸೂರು ದಾಟಿ ಧಾರವಾಡದಲ್ಲಿ ಸೇರಿತ್ತು. ಆ ಸಮಯದಲ್ಲಿ ನಾನು ೧೦೦ ಕವಿತೆಗಳನ್ನು ಬರೆದಿದ್ದೆ. ಕಾವ್ಯಗಳನ್ನು ಬರೆಯುವಂತೆ ಮಾಡಿದ್ದು—ನನ್ನ ಕನ್ನಡ ತಾಯಿಯನ್ನು ಕಂಡು ಬಂದ ಸ್ಫೂರ್ತಿ. ಮೊದಲು ೩ ಸಾಲು ಬರೆದು ಅದನ್ನು ಸವ್ಯಸಾಚಿ ಕರೆದೆ. ೫ ಸಾಲಿನ ಪದ್ಯ ೬ ಸಾಲಿನ ಪದ್ಯ, ಈ ರೀತಿ ಹೊಸ ರೀತಿಯಲ್ಲಿ ಬರೆಯತೊಡಗಿದೆ. ಆದರೆ ಅವುಗಳನ್ನು ಒಪ್ಪುವವರು ಮಾತ್ರ ಒಬ್ಬರೂ ಇರಲಿಲ್ಲ. ಅಲ್ಲದೆ ಬೈಗಳು, ಹೊಗಳಿಕೆ ಇವೇ ಅನುಭವವೆಂದು ಪ್ರತೀತಿ. ಆದರೆ ಹೊಸಗನ್ನಡದಲ್ಲಿ ಹಾಡಿಸಿದರು. ಪ್ರಭುಗಳು ಕಟ್ಟಿ. ರತ್ನ-ದ ಸಂಸ್ಕೃತ ಆ ವೈಭವದಲ್ಲಿ ನನ್ನನ್ನು ಒಬ್ಬ ಹೊಸ ಕವಿ ಎಂದೇ ಕರೆದರು.

ಕವಿಗಳಲ್ಲಿ ಎರಡು ವಿಧಗಳುಂಟು. ಆ ಹಳೆಯ ಕವಿ ಮತ್ತು ಆಧುನಿಕ ಕವಿ ನನ್ನನ್ನು ಆಧುನಿಕ ಕವಿ ಎಂದು ಕರೆದರು. ಆದರೆ ನಾನು ಹಳೆಯದನ್ನು ಮಾಡು ಕನ್ನಡ ಮತ್ತು ಕನ್ನಡ ಜನಕ್ಕೆ ಸ್ಫೂರ್ತಿ ಸಂಸ್ಕೃತಿ ಪ್ರಾಚೀನ ಕವಿಗಳು ಇಲ್ಲ ಹೇಳಿ ಕವಿಗಳು ಹೊಸ ಕವಿಗಳು ಎಂಬ ಭೇದವೇ ನನ್ನಲ್ಲಿಲ್ಲ. ಉತ್ತಮ ಸೀರೆಯಂತೆ ಫ್ಯಾಷನ್ ಹೋಗದೇ ಹೊರತು ಹಳೇ ಮತ್ತು ಹೊಸ ಕವಿಗಳೆಂಬುವುದಿಲ್ಲ.

ಕನ್ನಡದ ಪ್ರಭಾತ

ನಾವು, ಕನ್ನಡನಾಡಿನ ಪ್ರಭಾತ ಉದಯವಾಗಿದೆಯೋ, ಆಗಲಿದೆಯೋ ಅಥವಾ ಆಗಲೇ ಹೋಯಿತೋ ಎಂಬ ಅನುಮಾನದಲ್ಲಿದ್ದೇವೆ. ನಾವು ಪ್ರಭಾತ ಉದಯವಾಗಿದೆಯೆಂದು ಜಗತ್ತಿಗೆ ತೋರಿಸಬೇಕು. ಹಿಂದಿನ ಕವಿಗಳು ನಮಗಾಗಿ, ನಮ್ಮ ನಾಡಿಗಾಗಿ ನಮ್ಮ ಕನ್ನಡಕ್ಕಾಗಿ ಸೇವೆ ಸಲ್ಲಿಸಿದ್ದಾರೆ. ಆದುದರಿಂದ ನಾವು ಉಳಿದಿರುವ ವಸಂತವು ಸೃಷ್ಟಿಯನ್ನು ಬಿಟ್ಟು ಹೋಗದಂತೆ ಮಾಡಬೇಕು. ಹೋದನಂತರ ಹುತಾತ್ಮರ ಗೊಂದಲದಲ್ಲಿ ಬಿದ್ದು ಪ್ರಭೆ ಹೋಗಬಾರದು. ಅದರಲ್ಲಿ ನಮ್ಮೆಲ್ಲರ ಪ್ರೇಮವಿರಲಿ. ನಾವೆಲ್ಲರೂ ಪ್ರೇಮಜೀವಿಗಳಾಗಬೇಕೆಂಬ ಆಸೆ ನನಗಿದೆ. ಆದರೆ ದುಃಖದ ಸೇತುವೆಯನ್ನು ದಾಟದ ಹೊರತು ಆನಂದ ಸಿಕ್ಕುವುದಿಲ್ಲ.

ಸೃಷ್ಟಿ-ಸ್ಥಿತಿ-ಲಯ

ಈಗಿನ ಯುದ್ಧ ಮತ್ತು ಕ್ಷಾಮಗಳಿಂದ ಪ್ರಪಂಚಕ್ಕೆ ಒಂದು ಬಗೆಯ ಕೊರತೆಯುಂಟಾಗಿರುವುದೇನೋ ನಿಜ. ಆದರೆ ಅಕ್ಕಿ ಸಾಕಷ್ಟಿಲ್ಲವೆಂಬಂತೆ ವಸ್ತ್ರವೂ ಸಾಕಷ್ಟಿಲ್ಲವೆಂಬ ಶಬ್ದವನ್ನು ವಿಜ್ಞಾನವು ತೋರಿಸಿಕೊಟ್ಟಿದೆ. ಇಂದು ನಮ್ಮ ಕಣ್ಣಿಗೆ ಬಿಡುವಾಗುವಂತೆ ಕಾಣುತ್ತಿರುವ ವಸ್ತುಗಳೆಲ್ಲವೂ ಬೇರೊಂದು ರೂಪದಲ್ಲಿ ಬೇರೊಂದು ಕಡೆಯಲ್ಲಿ ತಮ್ಮ ತಮ್ಮ ಸ್ಥಾನವನ್ನು ಪಡೆದಿರುತ್ತದೆ. ಸೃಷ್ಟಿಯೊಂದಿಗೆ ಸಮಸ್ತ ಪದಾರ್ಥಗಳೂ ಲಯಹೊಂದಿದಾಗ ಭೂಮಾತೆಯ ಉದರದಲ್ಲಿ ಹೋಗಿ ಅಡಗಿಕೊಳ್ಳುವವು. ಕಾಲಕ್ರಮದಲ್ಲಿ ಭೂಗರ್ಭ ಶೋಧಕರು ಅವುಗಳನ್ನು ಬೇರೆ ಬೇರೆ ಸ್ವರೂಪ ವಸ್ತುಗಳ ಸ್ವರೂಪದಲ್ಲಿ ಹೊರ ತೆಗೆಯುವರು. ಆ ಮೂಲಕ ಅಂದಿನ ನಾಗರಿಕತೆಯೂ, ರಹಸ್ಯಗಳೂ ಹೊರಬೀಳುವುವು. ಆದುದರಿಂದ ವಸ್ತುವು ಕಣ್ಮರೆಯಾಗಬಹುದಾದರೂ ವಸ್ತು ಜ್ಞಾನವು ಸದಾ ದೊರೆಯಲು ಅವಕಾಶವಿದ್ದೇ ಇರುತ್ತದೆ. ಇದರಿಂದ ಪುನಃ ಸೃಷ್ಟಿಗಳನ್ನು ಮಾಡುವುದಕ್ಕೆ ಬೇಕಾದ ಹಾಗೆ ಅವಕಾಶವಾಗುವುದು. ಆದುದರಿಂದಲೇ ಲಯದ ಅಂತ್ಯವೇ ಹೊಸ ಸೃಷ್ಟಿಯ ಆದಿಯೆಂದೂ ಗಣಿಸಲ್ಪಟ್ಟಿದೆ.

ನೈಸರ್ಗಿಕ ಸೌಂದರ್ಯ

ಮಾನವ ಪ್ರಪಂಚದಲ್ಲಿ ಇಷ್ಟೊಂದು ಅನರ್ಥಗಳು ಸಂಭವಿಸುತ್ತಿದ್ದರೂ ನೈಸರ್ಗಿಕ ಸೌಂದರ್ಯದಲ್ಲಿ ಮಾತ್ರ ಯಾವ ವ್ಯತ್ಯಾಸವೂ ಆಗದೆ ಅದರ ಸೊಬಗು ಒಂದೇ ರೀತಿಯಲ್ಲಿ ಕಂಗೊಳಿಸುತ್ತಿದೆ. ಪ್ರಪಂಚಕ್ಕೆ ಇಂದು ಇಷ್ಟು ಕ್ಲೇಶವಿದ್ದರೂ ಪ್ರಾಕೃತಿಕ ಗಿರಿಗಳೂ ಸೂರ್ಯ ಚಂದ್ರರ ಸೌಂದರ್ಯಗಳಿಗೆ ಎಳ್ಳಷ್ಟೂ ಕೊರತೆಯುಂಟಾಗಿಲ್ಲ. ಅವುಗಳ ತೇಜಸ್ಸು ಎಂದಿನಂತೆ ನಮ್ಮನ್ನು ಆನಂದಗೊಳಿಸುತ್ತದೆ. ಹಾಗೆಯೇ ದೈವದತ್ತವಾದ ಜಲರಾಶಿಯಲ್ಲಿಯೂ ಯಾವ ಬದಲಾವಣೆಯೂ ಆಗಿರುವುದಿಲ್ಲ. ಗಿರಿಗಳೆಲ್ಲವೂ ಶೆಟ್ಟುಗಟ್ಟಿಕೊಂಡಿಲ್ಲ. ಗಿರಿಗಳಲ್ಲಿಯೂ ಯಾವ ಮಾರ್ಪಾಡೂ ಆಗಿಲ್ಲ. ಆದ್ದರಿಂದಲೇ ಈ ಪ್ರಕೃತಿ ಮಾತೆಯ ವೈಭವವೆಲ್ಲವೂ ಎಂದಿನಂತೆ ಕಂಗೊಳಿಸುತ್ತಲೇ ಇದೆ. ಇದನ್ನು ನೋಡಿ ನಮ್ಮ ಕಾವ್ಯದಲ್ಲಿ ಅಲಂಕಾರಗಳನ್ನು ಸೇರಿಸಿ ಶಾಶ್ವತವಾದ ಆನಂದಾಮೃತವನ್ನು ಪಾನಮಾಡುವ ಶಕ್ತಿಯನ್ನು ಪಡೆಯೋಣ.

ನಾವು ನಮ್ಮ ಮನಸ್ಸನ್ನು ಹೇಗೆ ಉಪಯೋಗಿಸಿಕೊಳ್ಳಬೇಕೆಂಬುದನ್ನು ಅರಿಲ್ಲ. ಸಂಗ್ರಹವಾಗಿ ಉಪಯೋಗಿಸಿಕೊಳ್ಳಲು ಅವಕಾಶವಾಗಿದ್ದೇವೆ. ಹಳೆಯದು ಹೊಸದಕ್ಕೆ ಸ್ಥಳ ಮಾಡಿಕೊಡಬೇಕು. ಕಾಯಿ ಹಣ್ಣಾಗಿ, ಸಿಹಿ ಹಣ್ಣಾಗುವಂತೆ, ಕಷ್ಟದ ಮೂಲಕ ಸುಖದ ಮಾರ್ಗದಲ್ಲಿ ಕೆಲವು ಕಾಲ ನಡೆಯಬೇಕಾಗಬಹುದು. ಇದಕ್ಕೆ ಧೈರ್ಯಗುಂದಬೇಕಾಗಿಲ್ಲ.

ಭಕ್ತನು ಭದ್ರನಾಗಬೇಕು

ನಮಗೆ ಸಿಗಬೇಕಾದ ಆನಂದ ಎಲ್ಲೆಲ್ಲಿಯೂ ಇದೆ. ಆದರೆ ತಿಳಿಯುವ ಚೈತನ್ಯ ನಮಗಿಲ್ಲ. ನಾವೆಲ್ಲರೂ ಚೈತನ್ಯಮಯರಾಗಬೇಕು. ಭಕ್ತನು ಭದ್ರನಾಗಿದ್ದರೆ ದೇವಿಯು ಮಾತೆ ದೇವಿಯಾಗಿಯೇ ಕಾಯುವಳು. ಅದೇ ಭಕ್ತನು ಅಭದ್ರನಾಗಿದ್ದರೆ, ದೇವಿಯು ಕಾಳಿಯಾಗುವಳು. ಆದ್ದರಿಂದ ನಾವೆಲ್ಲರೂ ಭದ್ರರಾಗಬೇಕು. ಯೋಗ್ಯರಾಗಬೇಕು. ನಾವು ಜಗತ್ತಿನಲ್ಲಿ ಶಾಂತಿ ಹಾರೈಸುತ್ತಿದ್ದೇವೆ. ಆದರೆ ಅಶಾಂತಿ ತುಂಬುತ್ತಿದ್ದೇವೆ. ಒಬ್ಬರನ್ನೊಬ್ಬರು ಮಾಡುವುದನ್ನು ನೋಡಿ, ಅವನ ಬದುಕನ್ನೆಲ್ಲ ಕಿರುಗಳು ಹೊರತು, ಒಬ್ಬರನ್ನೊಬ್ಬರು ಅರಿಯಬೇಕು. ನಮ್ಮೆಲ್ಲರಲ್ಲಿಯೂ ಧರ್ಮಚಕ್ರವು ಸ್ಥಭಾವದಲ್ಲಿ ಇರಬೇಕು. "ಧರ್ಮಸ್ಯತತ್ವಂನಿಹಿತಂ ಗುಹಾಯಾಂ" ಎಂಬಂತೆ ಎಲ್ಲರೂ ಧರ್ಮಚಕ್ರದಲ್ಲಿ ಐಕ್ಯರಾಗೋಣ.

ಅಮೃತ

ಪಿತ್ತದ ಜ್ವರ, ಮಲೇರಿಯಾ ಜ್ವರ, ಜ್ವರದ ಗಡ್ಡೆ, ಇವುಗಳ ಮೇಲೆ ಬಹಳ ಚೆನ್ನಾಗಿ ಕೆಲಸ ಮಾಡುತ್ತದೆ.

ಪಂಡಿತ

ಕೆ. ವಿ. ವೆಂಕಟರಾಮಯ್ಯ

೩೪ ಜೋರ್ಡ್ ವೈದ್ಯಶಾಲಾ,

ಅರಕಲಗೂಡು (ಚಾಮರಾಜನಗರ ತಾಲ್ಲೂಕು).

ನರ್ವನಾಟ್ರಿನ್

ನರಗಳ ಶಕ್ತಿಗೆ; ವೀರ್ಯವೃದ್ಧಿಗೆ

ಉಪಯೋಗಿಸುವ ವಿಧಾನ:—

ಮಲಗುವ ವೇಳೆ ಹಾಲಿನೊಂದಿಗೆ ಒಂದು ಚಮಚ ಸೇವಿಸತಕ್ಕದ್ದು

ದೊಡ್ಡ ಬಾಟಲ್ ರೂ. 2-1-0 ಮಾತ್ರ
ಸಣ್ಣ ಬಾಟಲ್ ರೂ 1-4-0 „

ಪ್ಯಾಕಿಂಗ್ ಮತ್ತು ಪಾರ್ಸಲ್ ಛಾರ್ಜು ಪ್ರತ್ಯೇಕ

ಈ ನಮ್ಮ ಔಷಧಿಯು ದಸರಾ ವಸ್ತುಪ್ರದರ್ಶನದಲ್ಲಿ ಮೊದಲು ದೊರಕುತ್ತದೆ

ವಿಳಾಸ:—

ಕೆ. ಇ. ಎ. ಪ್ರೊಡಕ್ಟ್ಸ್

ಹಳೆ ಮೈಸೂರು ಬ್ಯಾಂಕ್ ರಸ್ತೆ,

ಮೈಸೂರು.

ರೋಂ ಮಾರ್ಗದಲ್ಲಿನ ಮುನ್ನಡೆ

ಅರ್ಜೆಂಟೈನಾ ದೇಶದ ಸಕಲ ರಾಜಕೀಯ ಪಕ್ಷಗಳೂ ತೊಡೆದುಹೋಗಲು ಅಲ್ಲಿನ ಸರ್ಕಾರ ತನ್ನ ಸಮ್ಮತಿಯನ್ನು ಸೂಚಿಸಿದೆ. ಪಕ್ಷಗಳು, ಭಿನ್ನಾಭಿಪ್ರಾಯಗಳಿಗೆ, ಅಕ್ರಮ ನಡವಳಿಕೆಗಳಿಗೆ ಕಾರಣಗಳಾಗುವ ನಿಮಿತ್ತ ಅವುಗಳ ನಿರ್ಮೂಲ ಮುಖ್ಯವೆಂದು ಅರ್ಜೆಂಟೈನಾ ಸರ್ಕಾರದ ಅಭಿಪ್ರಾಯಪಟ್ಟಿತು.

Firm Approved by the Govt. of H. H. the Maharaja of Mysore

How trim you look with a well-tailored Suit! It is good tailoring that Counts.

To give you full Satisfaction In Fit, Cut and Finish

B. Vittal Bros,

Certified Tailors, Contractor

Srirampet, Mysore.

ಶ್ರೀಯುತ ಶೌಕಯರ ಕ್ಕಾಗಿ

ತಾ|| ೧-೧-೧೯೪೪ ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿರುತ್ತೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿ ಪುಡಿ

ಯನ್ನೇ ಉಪಯೋಗಿಸಿ.

ಡಿ. ಪುಟ್ಟಯ್ಯ, ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ವಿ ಸೂ - ಇಲ್ಲಿ ವಸ್ತ್ರ ಸಂತೆಪೇಟೆ ಪೋಸ್ಟ್ ಆಫೀಸಿನಲ್ಲೂ ರವೆ, ಗೋಧಿಹಿಟ್ಟು ಮತ್ತು ಮೈದ ಹಿಟ್ಟು ಸಹ ದೊರೆಯುತ್ತೆ. ಇಲ್ಲದೆ ಊರಾ ಮತ್ತು ಕಟ್ಲ ಸಕ್ಕರೆ ರೇಷನ್ ಕಾರ್ಡುಗಳಿಗೆ ದೊರೆಯುತ್ತವೆ.

ವಾರ ಭವಿಷ್ಯ

(ಶ್ರೀ ನಿತ್ಯಾನಂದ ಸ್ವಾಮಿಗಳಿಂದ)

ತಾ|| ೩-೧-೪೪ ರಿಂದ ೯-೧-೪೪ ರ ವರೆಗೆ

ಮೇಷ— ಈ ವಾರ ನೀವು ಶತ್ರುಗಳನ್ನು ಸೋಲಿಸಿ ಜಯಶೀಲರಾಗುವಿರಿ. ಆರೋಗ್ಯ ಮಾನಸಿಕ ಸ್ಥಿತಿ ಸಾಧಾರಣವಾಗಿರುವವು. ಆರ್ಥಿಕ ತೊಂದರೆ ಇದ್ದರೆ ನಿಮ್ಮ ಬುದ್ಧಿವಂತಿಕೆಯಿಂದ ಅದನ್ನು ಸರಿಪಡಿಸಿಕೊಳ್ಳಬಹುದು. ಮಿತ್ರರಿಂದ ಅಪಾರದ ಪ್ರಾಪ್ತಿ. ವ್ಯಾಪಾರ ಉದ್ಯೋಗಾದಿಗಳಲ್ಲಿ ಉತ್ಸಾಹ, ಪ್ರವಾಸದಲ್ಲಿ ಸಿದ್ಧಿ. ತಾ|| ... ಅನಪೇಕ್ಷಿತ ಖರ್ಚು, ಅತಿಥಿಗಳ ಆಗಮನ

ವೃಷಭ— ಈ ವಾರ ನಿಮ್ಮ ಪರಿಸ್ಥಿತಿ ಚಿಂತಾಜನಕವಾಗಿದೆ. ಕಳ್ಳಕಾಕರ ಭೀತಿ ಸಂಭವಿಸಬಹುದು. ವ್ಯವಹಾರದಲ್ಲಿ ಕಲಹ ಸಂಭವಿಸುವುದು. ವ್ಯಾಪಾರ ಉದ್ಯೋಗಾದಿಗಳಲ್ಲಿ ಹಾನಿ, ಪ್ರವಾಸದಲ್ಲಿ ತೊಂದರೆ, ದ್ರವ್ಯಹಾನಿ ಪ್ರಸಂಗ, ಆರೋಗ್ಯ ಸಾಂಸಾರಿಕ ಮತ್ತು ಮಾನಸಿಕ ಸ್ಥಿತಿಗಳು ಚೆನ್ನಾಗಿಲ್ಲಾರವು. ತಾ|| ೪, ೫ ಅಸಂತುಷ್ಟಿ, ಸ್ನೇಹಿತರು, ದುಷ್ಟ ಸಹವಾಸ.

ಮಿಥುನ— ಜೋಕೆಯಿಂದ ಎಚ್ಚರಿಕೆ! ಸಾಂಸಾರಿಕ ದೃಷ್ಟಿಯಿಂದ ತುಂಬಾ ತಾಪ. ದೈಹಿಕ ಮಾನಸಿಕ ಸ್ಥಿತಿ ಸರಿಯಾಗಿರಲಾರದು. ಆರೋಗ್ಯ ಕೆಡುವ ಸಂಭವವಿದೆ. ವ್ಯಾಪಾರ ನೌಕರಿ ಮತ್ತು ಉದ್ಯೋಗಗಳಲ್ಲಿ ನಷ್ಟ, ಪ್ರವಾಸದಲ್ಲಿ ಹಾನಿ, ಶುಭಕಾರ್ಯಗಳಲ್ಲಿ ವಿಘ್ನ, ಸೋಮಾರಿತನ. ತಾ|| ೬, ೭ ಅಪಘಾತ, ಅನಾರೋಗ್ಯ, ಹೆಚ್ಚು ಖರ್ಚು.

ಕರ್ಕ— ಈ ವಾರ ನಿಮ್ಮ ನಿರ್ಮಲಾಂತಃಕರಣದಿಂದ ಲೋಕಸೇವೆ ಜರುಗಿ ಗೌರವಪ್ರಾಪ್ತಿಯಾಗುವುದು. ಈ ವಾರ ನಿಮಗೆ ಆನಂದದಾಯಕವಾಗಿರುವುದು. ಆಪ್ತ ಮಿತ್ರರ ಭೇಟಿ. ವ್ಯಾಪಾರ ಉದ್ಯೋಗಾದಿಗಳಲ್ಲಿ ಜಯ, ಪ್ರವಾಸ ಮತ್ತು ಶುಭಕಾರ್ಯಗಳು ನಿರ್ವಿಘ್ನವಾಗಿ ನೆರವೇರುವವು. ಆರೋಗ್ಯ ಆರ್ಥಿಕ ಮತ್ತು ಮಾನಸಿಕ ಸ್ಥಿತಿಗಳು ಸಂತೃಪ್ತಿಕರವಾಗಿರುವವು. ತಾ|| ... ೭ ಜಯ, ಲಾಭ, ಸುವಾರ್ತೆ, ಮಿತ್ರರ ಭೇಟಿ

ಸಿಂಹ— ಈ ವಾರ ಕೆಲವು ವಿಚಿತ್ರ ಪ್ರಸಂಗಗಳು ಆಕಸ್ಮಿಕವಾಗಿ ಜರುಗಿ ನಿಮ್ಮನ್ನು ಚಿಂತೆಗೀಡುಮಾಡುವವು. ಈ ವಾರ ಆರೋಗ್ಯವು ಚೆನ್ನಾಗಿದ್ದರೂ ಮಾನಸಿಕ ಸ್ಥಿತಿ ಸರಿಯಾಗಿರಲಾರದು. ಉದ್ಯೋಗ ವ್ಯಾಪಾರಗಳಲ್ಲಿ ಶತ್ರುಪೀಡೆಯಿಂದ ನಷ್ಟ ಸಂಭವಿಸುವುದು. ಆರ್ಥಿಕ ತೊಂದರೆ ಬಿಟ್ಟರೂ ಪ್ರಿಯಮಿತ್ರರ ಸಹಾಯದಿಂದ ನಿವಾರಣೆಯಾಗಬಹುದು. ತಾ|| ೭ ವಿಕಾಸ, ವಿನೋದ, ಖರ್ಚು, ಅಸ್ವಸ್ಥತೆ.

ಕನ್ಯಾ— ಎದುರಿಗೆ ಬಂದಿಹೇಳಿ ಹಿಂದೆ ನಿಂದಿಸಿ ಮಾಡುವ ಜನರ ಸಹವಾಸವಾಗಬಹುದು. ಆದ್ದರಿಂದ ಎಚ್ಚರಿಕೆಯಾಗಿರಿ! ವ್ಯಾಪಾರ ಉದ್ಯೋಗ ನೌಕರಿ ಮುಂತಾದುವುಗಳಲ್ಲಿ ದುಷ್ಟರಿಂದ ದೂರವಾಗಲು ಪ್ರಯತ್ನಿಸಿ. ಆರೋಗ್ಯ ಮಾನಸಿಕ ಮತ್ತು ಸಾಂಸಾರಿಕ ದೃಷ್ಟಿಯಿಂದ ಈ ವಾರ ಕೊಂಚ ತಾಪದಾಯಕವಾಗಿರುವುದು. ತಾ|| ೪, ೫ ಅಸ್ವಸ್ಥತೆ, ಹೆಚ್ಚು ಖರ್ಚು.

ತುಲಾ— ಹಣದ ಮೇಲೆ ಆಸೆಯಿಟ್ಟು ಆರೋಗ್ಯವನ್ನು ಕೆಡಿಸಿಕೊಳ್ಳಬೇಡಿ. ಮೊದಲು ಆರೋಗ್ಯ—ನಂತರ ಐಶ್ವರ್ಯ. ಉದ್ಯೋಗ ನೌಕರಿ ಮತ್ತು ಪ್ರವಾಸಗಳಲ್ಲಿ ಎಚ್ಚರಿಕೆಯಿಂದ ವರ್ತಿಸಿ. ಆರ್ಥಿಕ ಮಾನಸಿಕ ತೊಂದರೆಗಳು ಇದ್ದರೂ ಇರುವವು. ಭಗವಂತನ ಕೃಪೆಯಿಂದ ಎಲ್ಲ ಸಂಕಟಗಳಿಂದಲೂ ಪಾರಾಗುವಿರಿ. ತಾ|| ೬, ೭ ಕಲಹ, ಚಿಂತೆ, ಹಾನಿ

ವೃಶ್ಚಿಕ— ಈ ವಾರ ನಿಮ್ಮ ಶತ್ರುಗಳನ್ನು ನಾಶಗೊಳಿಸುವಿರಿ. ವ್ಯಾಪಾರ, ಉದ್ಯೋಗಾದಿಗಳಲ್ಲಿ ಲಾಭ, ಆರೋಗ್ಯ ಮಾನಸಿಕ ಮತ್ತು ಸಾಂಸಾರಿಕ ಸ್ಥಿತಿಗಳು ಉತ್ತಮಗೊಳ್ಳುವವು. ಸ್ತ್ರೀಯರಿಂದ ಅಪಮಾನ, ಖರ್ಚು ಹೆಚ್ಚುವುದು, ಪ್ರವಾಸ ಕೈಬಿಡುವುದು ಒಳ್ಳೆಯದು. ತಾ|| ೪, ೫ ವಿರಹ, ಅಪ್ರಿಯ ವಾರ್ತೆ, ನಿರಾಶೆ, ಅಪವಾದ, ಮೂರ್ಖ ಸಹವಾಸ

ಧನುಸ್ಸು— ಈ ವಾರ ನೀವು ಅನೇಕ ಕಠಿಣ ಕಾರ್ಯಗಳಲ್ಲಿ ಜಯಶೀಲರಾಗುವಿರಿ. ವ್ಯವಹಾರದಲ್ಲಿ ಜಯ. ವ್ಯಾಪಾರ ಉದ್ಯೋಗಾದಿಗಳಲ್ಲಿ ಏಳಿಗೆ ಮತ್ತು ಲಾಭ. ಪ್ರವಾಸ ಮತ್ತು ಶುಭಕಾರ್ಯಗಳಲ್ಲಿ ಸಿದ್ಧಿ. ಆರೋಗ್ಯ ಆರ್ಥಿಕ ಮತ್ತು ಮಾನಸಿಕ ದೃಷ್ಟಿಯಿಂದ ಉತ್ತಮವಾಗಿರುವುದು. ತಾ|| ೩ ಸತ್ಕಾರ್ಯಕ್ಕಾಗಿ ಖರ್ಚು, ಆಪ್ತೇಷ್ಟರ ಆಗಮನ.

ಮಕರ— ಮನಸ್ಸಿನ ಇಷ್ಟು ಚಂಚಲವಾಗಿದೆ. ಇದರಿಂದ ನೀವು ಸ್ತ್ರೀ ಜನರೂ ಕೂಡ ಬೇಜಾರುಪಡಬಹುದು. ಆದ್ದರಿಂದ ಹುಷಾರಾಗಿರಿ. ನಿಮ್ಮ ಆರೋಗ್ಯ ಮಾನಸಿಕ ಮತ್ತು ಆರ್ಥಿಕ ಸ್ಥಿತಿಗಳು ಉತ್ತಮವಾಗಿರುವವು. ವ್ಯಾಪಾರ ಉದ್ಯೋಗ ನೌಕರಿಗಳಲ್ಲಿ ಲಾಭ ಮತ್ತು ಪ್ರಗತಿ. ಅವಿಶ್ರಾಂತಿ, ಪ್ರವಾಸದಲ್ಲಿ ಆಲಸ್ಯ, ನಷ್ಟ ...

ಕುಂಭ— ಎಂಥ ಕಷ್ಟ ಸಮಯದಲ್ಲೂ ದುಡುಕಬೇಡಿ, ಶಾಂತತೆಯಿಂದ ವರ್ತಿಸಿದರೆ ಒಳ್ಳೆಯದು. ಆರೋಗ್ಯ, ಆರ್ಥಿಕ ಸ್ಥಿತಿ ಚೆನ್ನಾಗಿದ್ದರೂ ಮಾನಸಿಕ ಸ್ಥಿತಿ ತಾಪದಾಯಕವಾಗಿರುವುದು. ವ್ಯಾಪಾರ, ಉದ್ಯೋಗ ಮತ್ತು ಪ್ರವಾಸಾದಿಗಳಲ್ಲಿ ನಷ್ಟ, ಭೀತಿ. ಶುಭಕಾರ್ಯಗಳಿಗೆ ವಿಘ್ನ. ತಾ|| ೬, ೭ ವ್ಯಥೆ ಮತ್ತು ಕಲಹ. ೩, ೪ ಅಲ್ಪ ಶಾಂತಿ, ಮಿತ್ರರ ಸಹಾಯ

ಮೀನ— ಹೊಳೆಯುವುದೆಲ್ಲಾ ಹಾಲಲ್ಲ, ಎಚ್ಚರಿಕೆಯಿಂದಿದ್ದು ಜನಗಳ ಮಾತಿಗೆ ಕಿವಿಗೊಡದೆ ಕಾರ್ಯಪ್ರವೃತ್ತರಾಗಿ. ಸಾಂಸಾರಿಕ ಸ್ಥಿತಿ ಚೆನ್ನಾಗಿದ್ದರೂ ಅಪರಿಚಿತರ ಮೂಲಕ ಮುದ್ದು ಬಂದಂತಿದೆ. ಖರ್ಚಾಗುವುದು. ಉದ್ಯೋಗ ನೌಕರಿ ಮತ್ತು ಪ್ರವಾಸಾದಿಗಳಲ್ಲಿ ಸೋಮಾರಿತನವನ್ನು ಬಿಟ್ಟು ವರ್ತಿಸಿದರೆ ಲಾಭ. ಆರೋಗ್ಯ ಮಾನಸಿಕ ಸ್ಥಿತಿಗಳು ಚೆನ್ನಾಗಿರಲಾರವು. ತಾ|| ೪, ೫, ೬, ೭ ಶಾಂತಿ, ದ್ರವ್ಯಲಾಭ, ಹಾಯಿ. ತಾ|| ೪, ೫ ಅವಮಾನ, ಹೆಚ್ಚು ಖರ್ಚು.

ಟಿ. ಸಿ. ನಟರಾಜ್

ಔಷಧಾಲಯ

ಇವರಲ್ಲಿ ನೇತ್ರಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ

ಅತ್ಯಗತ್ಯವಾಗಿ ಬೇಕಾದ ಎಲ್ಲಾ ಇಂಗ್ಲಿಷ್ ಔಷಧಿಗಳೂ ಸದಾ ಕಾಲದಲ್ಲಿಯೂ ದೊರೆಯುವುದಲ್ಲದೆ ಸಮಸ್ತ ವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸುಲಭ ಫೀಜಿನಿಂದ ಮಾಡಲ್ಪಡುತ್ತದೆ.

ಝಂಡೂರವರ ಆಯುರ್ವೇದೀಯ ಸಿದ್ಧೌಷಧಿಗಳೆಲ್ಲವೂ ಸದಾ ದೊರೆಯುತ್ತವೆ

ರಷ್ಯಾ-ಪೋಲಿಷ್ ಒಪ್ಪಂದ ಇಲ್ಲ

ರಷ್ಯನರೂ, ಪೋಲರೂ ತಾವು ಒಪ್ಪಂದ ಮಾಡಿಕೊಳ್ಳ ತದಿಲ್ಲವೆಂಬ ನಿರ್ಧಾರಕ್ಕೆ ಬಂದಿದ್ದಾರೆ. ಈ ಒಪ್ಪಂದಕ್ಕಾಗಿ ಪಟ್ಟ ಬ್ರಿಟಿಷರ ಪ್ರಯತ್ನವೆಲ್ಲಾ ವಿಫಲವಾಗಿದೆ. ರಷ್ಯನರು ಪೋಲರ ಸಂಧಿಗಾಗಿ ಮುಂದೆ ಬರಬೇಕೆಂಬ ಹಟ ಬಿಟ್ಟಿಲ್ಲ. ಪೋಲರು ತಮ್ಮ ಸೇನಾಪತಿಯನ್ನು ವಜಾ ಮಾಡಲು ತಯಾರಿಲ್ಲ. ಹೀಗಾಗಿ ಒಪ್ಪಂದ ನಿಂತು ಹೋಗಿದೆ

— —

ಕುರುಡರ ಮತ್ತು ಮೂಕರ ಶಾಲೆ

ನಿನ್ನೆ ಸಂಜೆ ಮೈಸೂರು ಕಬ್ಬಿಣದ ಕಾರ್ಖಾನೆ ಅ|| ಸೂ|| ರವರ ಕುಟುಂಬ ಶ್ರೀಮತಿ ಸಾವಿತ್ರಿ, ಶ್ರೀನಿವಾಸಮೂರ್ತಿಯವರು, ಶ್ರೀ ಜಿ. ಆರ್. ಎಸ್ ನಾಯ್ಡು ರವರ ಕುಮಾರಿ ಜಯಮ್ಮನವರು ಲಘುಸಂಗೀತ, ವೀಣಾ ಮತ್ತು ಸಿತಾರ್ ವಾದನದಿಂದಲೂ ಚಲನಚಿತ್ರ ಗೀತೆಗಳಿಂದಲೂ ಕುರುಡರ ಮತ್ತು ಮೂಕರ ಶಾಲೆಯ ವಿದ್ಯಾರ್ಥಿಗಳನ್ನು ಆನಂದಗೊಳಿಸಿದರು. ಇದೇ ಸಮಯದಲ್ಲಿ ಶಾಲೆಯ ಹೆಡ್‌ಮಾಸ್ಟರ್ ಶ್ರೀ ಜಿ. ಆರ್. ಎಸ್. ನಾಯ್ಡು ರವರ ಪತ್ನಿ ಶ್ರೀಮತಿ ಗಜಲಕ್ಷ್ಮಿಯಮ್ಮನವರು ಕುರುಡ ವಿದ್ಯಾರ್ಥಿಗಳು ನಡೆಸುವ ಭಜನ ಕೂಟಕ್ಕೆ ಬೇಕಾದ ಶ್ರೀರಾಮಪಟ್ಟಾಭಿಷೇಕದ ಪಟ, ಪೂಜಾ, ಆಚಮನಕ್ಕೆ ಬೇಕಾಗುವ ಒಂದು ಸೆಟ್ಟು ಪಾತ್ರೆಗಳನ್ನು ವಿದ್ಯಾರ್ಥಿಗಳಿಗೆ ಉದಾರವಾಗಿ ದಾನಮಾಡಿ, ತಮ್ಮ ಭಗವದ್ಭಕ್ತಿಯನ್ನೂ ಮಕ್ಕಳ ಮೇಲಿನ ಪ್ರೇಮವನ್ನು ವ್ಯಕ್ತಪಡಿಸಿದರು

ಹಕ್ಕಿ ಹಾಡುವುದೇಕೆ ?

ಹಕ್ಕಿಗಳು ಸುಖಜೀವಿಗಳಾದ್ದರಿಂದ ಅವು ಹಾಡಿಕೊಳ್ಳುತ್ತವೆ ಎಂಬುದಾಗಿ ಹೇಳುತ್ತಾರೆ. ವಿಜ್ಞಾನಿಗಳು ಹಕ್ಕಿಗಳ ಅನುಭವಶಕ್ತಿಯನ್ನು ಅಳೆಯಬಲ್ಲವರಾಗಿಲ್ಲವಾಗಿ ಆ ಮಾತನ್ನು ಒಪ್ಪುತ್ತಿಲ್ಲ. ಗಂಡು ಹಕ್ಕಿಗಳು ಹೆಣ್ಣುಹಕ್ಕಿಗಳನ್ನು ಆಕರ್ಷಿಸುವ ಸಲುವಾಗಿ ಹಾಡುವುವೆಂಬ ಪ್ರತೀತಿಯೂ ಉಂಟು. ಈ ಮಾತು ಒಂದು ಜಾತಿ ಹಕ್ಕಿಗೆ ಮಾತ್ರ ಅನ್ವಯಿಸುವುದು. ಮತ್ತೊಂದು ಜಾತಿ ಹಕ್ಕಿಗಳು ಗಂಡೂ ಹೆಣ್ಣೂ ಒಂದೇ ತರಹ ಕಂಡುಬರುವುವು. ಈ ಹಕ್ಕಿ ಹಾಡಿದರೆ ಮತ್ತೊಂದರೊಡನೆ ಜಗಳಕ್ಕೆ ಕಾಲು ಕೆರೆಯುತ್ತಿದೆ ಎಂದು ಗೊತ್ತಾಗುವುದು. ಆಚೆ ವ್ಯಾಖ್ಯಾನಗಳು ಹಾಡುವುವು

ದಿವ್ಯವಾದ ಸಾಬೂನು

ಬೆಲೆಯಲ್ಲಿ ಕಿರಿದಾದರೂ ಗುಣದಲ್ಲಿ ಹಿರಿದು



ಮೈಸೂರು ಸ್ಯಾಂಡಲ್ ಸೋಪಿನಿಂದ ಅಂಗ ಕಾಂತಿಯು ಹೊಸದಾಗುವುದಲ್ಲದೆ ಅದರ ಚೆಳ್ಳನೆಯ ಬುರುಗು ರೋಮ ರಂಧ್ರಗಳನ್ನೆಲ್ಲಾ ಹೊಕ್ಕು ಮೈದೊಗಲಿನ ಅಳುಕ್ಕನ್ನೆಲ್ಲಾ ತೆಗೆದುಹಾಕುವುದು. ಅದರ ಮೆತ್ತನೆಯ ಗುಣವೂ, ಸುಗಂಧವೂ ಚರ್ಮಕ್ಕೆ ಕರ್ಪೂರವೆನಿಸುವುದು.

ಮೈಸೂರು ಸ್ಯಾಂಡಲ್ ಸೋಪು

ಕಿತ್ತಲೇ ಹಣ್ಣಿನ ಸಿಪ್ಪೆ ಎಷ್ಟಿದ್ದರೂ ಬೇಕು

ಅಶೋಕಾ ಫಾರ್ಮಸಿ,
ಹಳೇ ಮೈಸೂರು ಬ್ಯಾಂಕ್ ರಸ್ತೆ,
ಮೈಸೂರು.

೧೯೪೩ ರ ಯುದ್ಧ ಘಟನೆಗಳು

ಜನವರಿ

೨ ನೇ ತಾ|| ರಷ್ಯನರು ವೆಲಿಕಿಲೂಕಿಯನ್ನು ಹಿಡಿದರು. ಬೂನಾ ಪ್ರದೇಶದಲ್ಲಿದ್ದ ಜಪಾನರನ್ನು ತೊಡೆದುಹಾಕಲಾಯಿತು.

೧೪ ರಿಂದ ೨೪ ರ ವರೆಗೆ... ಕೆಸಬ್ಲಾಂಕಾದಲ್ಲಿ ಮಿತ್ರರ ಸಮ್ಮೇಳನ ಜರುಗಿತು.

೨೩.. ಟ್ರಿಪೋಲಿ ಮಿತ್ರವಶವಾಯಿತು.

ಫೆಬ್ರವರಿ

೫.. ಮುಸೋಲಿನಿಯು ಮಂತ್ರಿಮಂಡಲದ ೧೨ ಸದಸ್ಯರನ್ನು ಹೊರ ಹಾಕಿದನು. ಸಿಯಾನೋನೂ ಅವರಲ್ಲೊಬ್ಬ.

೬... ಐಸೆನ್‌ಹೋವರರ ನಾಯಕತ್ವದಲ್ಲಿ ಉತ್ತರ ಆಫ್ರಿಕಾ ದಂಡಯಾತ್ರೆಯ ಕೇಂದ್ರ ಸ್ಥಾಪನೆ ಮತ್ತು ಬ್ರೆಸಿಲ್ ದೇಶ ಮಿತ್ರ ರಾಷ್ಟ್ರಗಳೊಡನೆ ಸೇರಿದ ದಿನ

೮... ಕುರ್ಸ್ಕನ್ನು ರಷ್ಯನರು ಹಿಡಿದರು.

೧೦... ಗೋಡಲ್‌ಕೆನಾಲ್ ಯುದ್ಧದ ಪರಿಸಮಾಪ್ತಿ

೧೨... ಐಸೆನ್‌ಹೋವರರಿಗೆ ಪ್ರಧಾನ ಸೇನಾನಾಯಕನ ಸ್ಥಾನಕ್ಕೆ ಬಡ್ತಿ.

೧೫. ರಷ್ಯನರು ರಾಸ್ಟೋವ್ ನಗರವನ್ನು ಆಕ್ರಮಿಸಿಕೊಂಡರು

೧೬... ಖಾರ್ಕೋವ್ ರಷ್ಯನರ ವಶ.

ಮಾರ್ಚಿ

೧... ನ್ಯೂಯಾರ್ಕಿನಲ್ಲಿ ಮೇಡಂ ಚಾಂಗ್ ಕೈಷೇಕ್‌ರಿಗೆ ಸುಸ್ವಾಗತ.

೪... ರಿಸೇವ್ ರಷ್ಯನರ ಕರಗತ.

೧೨... ಎರವು ಸಾಲದ ಒಪ್ಪಂದ ಮಸೂದೆ ಸಾಲಿಗೆ ಪ್ರವಟೊಪ್ಪಿಗೆ ಪಡೆಯಿತು.

೧೫... ವ್ಯಾಸ್ಮ ರಷ್ಯನರ ಕೈಗೆ ಬಿತ್ತು.

೧೬... ಜರ್ಮನರಿಂದ ಖಾರ್ಕೋವ್ ಪುನರಾಕ್ರಮಣ

ಏಪ್ರಿಲ್

೨೧... ಜಪಾನೀಯರು ಅಮೇರಿಕಾ ವೈಮಾನಿಕರ ತಲೆ ಕಡಿದರು.

ಮೇ

೧... ವಾಷಿಂಗ್ಟನ್ನಿನೊಡನೆ ಅಮೇರಿಕಾ ಸಂಬಂಧ ಪರಿತ್ಯಾಗ.

೭.. ಟ್ಯುನಿಸ್ ಮತ್ತು ಬಿಜರ್ಟಾಗಳನ್ನು ಮಿತ್ರರು ಹಿಡಿದರು.

೧೧... ಅಮೇರಿಕಾಕ್ಕೆ ಚರ್ಚಿಲ್ ಆಗಮನ.

೧೨... ವಾನ್ ಆರ್ನಿಮ್ ಸೆರೆ, ಟ್ಯುನೀಸಿಯಾ ಪ್ರತಿಭಟನೆಯ ಕೊನೇ ದಿನ.

೧೪... ಅಟ್ಟು ದ್ವೀಪಕ್ಕೆ ಅಮೇರಿಕಾ ದಳ ಇಳಿಯಿತು.

೧೭.. ಜರ್ಮನಿಯ ಸುಪ್ರಸಿದ್ಧ ಕಟ್ಟೆಗಳನ್ನು ರಾಯಲ್ ವಿಮಾನ ದಳಗಳು ಬಾಂಬು ಚೆಲ್ಲಿ ಒಡೆದುಹಾಕಿದುವು

೨೨. ಕಮ್ಯೂನಿಸ್ಟರ ಸಂಸ್ಥೆಯನ್ನು ಮಾಸ್ಕೋವಿನಲ್ಲಿ ರದ್ದುಗೊಳಿಸಲಾಯಿತು

೨೫ ಅಮೇರಿಕಾದಲ್ಲಿ ಯುದ್ಧ ಸೈನಿಕರ ದೀಕ್ಷಾದಾನ ಕಾರ್ಯದ ಹೊಸ ಕಛೇರಿ ಸ್ಥಾಪನೆ

೩೧. [illegible]

ಜೂನ್

೧೧... ಪ್ಯಾಂಟಲೇರಿಯಾ ಶರಣಾಗತ.

ಜುಲೈ

೧... ಮೇಕಾರ್ಥರರವರು ದಕ್ಷಿಣ ಆಫ್ರಿಕಾದಲ್ಲಿ ಆಕ್ರಮಣ ಆರಂಭಿಸಿದರು.

೨... ಅಮೇರಿಕಾ ಸೈನ್ಯ ರೇನ್‌ಡೋವ ಅನ್ನು ತನ್ನ ಸ್ವಾಧೀನಪಡಿಸಿಕೊಂಡಿತು.

೪... ಪೋಲೆಂಡಿನ ಜ|| ಸಿಕೋರ್‍ಸ್ಕಿಯವರು ವಿಮಾನ ಅಪಘಾತಕ್ಕೆ ತುತ್ತಾದರು.

೧೦... ಸಿಸಿಲಿಮೇಲೆ ಮಿತ್ರರ ದಂಡಯಾತ್ರೆ

೧೯... ರೋಮಿಗೆ ಬಾಂಬು ಹೊಡೆತ.

೨೨.. ಪೆಲೆರ್ಮೋವನ್ನು ಅಮೇರಿಕನ್ನರು ಹಿಡಿದರು.

೨೫... ಮುಸೋಲಿನಿಯ ರಾಜೀನಾಮೆ.

ಆಗಸ್ಟ್

೧... ಪ್ಲೋಯಸ್ತಿ ಎಣ್ಣೆ ಪ್ರದೇಶಕ್ಕೆ ಬಾಂಬಿನ ಹೊಡೆತ.

೫... ರಷ್ಯನರು ಓರಲ್ ವಶಪಡಿಸಿಕೊಂಡರು. ಕಟೇನಿಯಾ ಮತ್ತು ಮುಂಡಾ ಮಿತ್ರರ ವಶ

೧೦... ಅಮೇರಿಕದೊಡನೆ ಸಂಭಾಷಣೆಗಾಗಿ ಚರ್ಚಿಲ್‌ರು ಕ್ವಿಬೆಕ್‌ಗೆ ಆಗಮಿಸಿದರು.

೧೭... ಮೆಸ್ಸಿನಾ ಹಿಡಿಯಲಾಗಿ ಸಿಸಿಲಿಯಲ್ಲಿ ಮಿತ್ರರಿಗೆ ಸಂಪೂರ್ಣ ವಿಜಯ

೨೩... ಖಾರ್ಕೋವ್ ಕೆಂಪು ಸೈನ್ಯಗಳ ಕರಗತ.

೨೫... ಲಾರ್ಡ್ ಲೂಯಿ ಮೌಂಟ್‌ಬ್ಯಾಟನ್‌ರಿಗೆ ಪೂರ್ವ ರಂಗದ ಸೇನಾನಾಯಕ ಪಟ್ಟ ಪ್ರಾಪ್ತಿ.

೩೧... ಟ್ಯಾಗನ್‌ರಾಗನ್ನು ರಷ್ಯನರು ಹಿಡಿದರು.

ಸೆಪ್ಟೆಂಬರ್

೧... ಯೂರೋಪ್ ಯುದ್ಧದ ೫ ನೇ ವರ್ಷದ ಆರಂಭ

೩... ಮಿತ್ರರು ಇಟಲಿಯಲ್ಲಿಳಿದರು.

೮... ಇಟಲಿಯು ಶರಣಾಗತವಾಯಿತು.

೧೩... ಇಟಲಿಯ ಬಹು ಸಂಖ್ಯಾತ ಹಡಗುಗಳು ಮಿತ್ರರ ಬಳಿಗೆ ತಪ್ಪಿಸಿಕೊಂಡು ಬಂದವು. ಬ್ರಿಟಿಷ್ ೫ ನೇ ಸೇನೆ ಸಾಲೆರ್ನೊ ಹಿಡಿಯಿತು.

೧೫... ಬ್ರಿಯಾನ್ಸ್ಕನ್ನು ರಷ್ಯನರು ಗೆದ್ದರು

೧೬... ನವೋರಸಿಸ್ಕಿನಲ್ಲಿ ರಷ್ಯನರಿಗೆ ವಿಜಯ

೧೮... ಸಾರ್ಡೀನಿಯಾದಿಂದ ಇಟಾಲಿಯನ್ನರು ಜರ್ಮನರನ್ನು ಹೊರದೂಡಿದರು.

೨೧... ಕಾರ್ಸಿಕಾಕ್ಕೆ ಫ್ರೆಂಚ್ ದಳಗಳ ಪ್ರವೇಶ.

೨೫... ರಷ್ಯನರು ಸ್ಮೋಲೆನ್‌ಸ್ಕನ್ನು ಹಿಡಿದರು

೨೮.. ಫಾಗಿಯಾ ವಿಮಾನ ಕೇಂದ್ರವನ್ನು ಬ್ರಿಟಿಷರು ಆಕ್ರಮಿಸಿದರು.

ಅಕ್ಟೋಬರ್

೧. ನೇಪಲ್ಸನ್ನು ಮಿತ್ರ ಸೇನೆ ಪ್ರವೇಶಿಸಿತು.

೨... ಫಿನ್‌ಷೇಫನ್ ಮೇಕಾರ್ಥರರಿಗೆ ಶರಣಾಗತವಾಯಿತು.

೫... ಡೊಡೆಕನೀಸ್‌ನಲ್ಲಿನ ಕಾಸ್ ಎಂಬ ಸ್ಥಳವನ್ನು ಜರ್ಮನರು ಪುನಃ ಆಕ್ರಮಿಸಿದರು.

೧೩... ಇಟಲಿಯು ಜರ್ಮನಿಯ ಮೇಲೆ ಯುದ್ಧ ಘೋಷಿಸಿತು. ಅಜೋರ್ಸ್ ತೀರಗಳನ್ನು ಮಿತ್ರರು ಉಪಯೋಗಿಸಿಕೊಳ್ಳಲು ಪೋರ್ಚುಗಲ್ ಸರ್ಕಾರ ಒಪ್ಪಿಗೆ ಕೊಟ್ಟಿತು.

೧೮... ಈಡನ್ ಮತ್ತು ಹಲ್‌ರು ಸಮಾಲೋಚನೆಗಾಗಿ ಮಾಸ್ಕೋವಿಗೆ ಆಗಮಿಸಿದರು.

೨೫... ಮೆಲಿಟೋಪೋಲನ್ನು ರಷ್ಯನರು ಕಿತ್ತುಕೊಂಡರು

ನವೆಂಬರ್

೧.. ನಾಲ್ಕು ಮಿತ್ರ ರಾಷ್ಟ್ರಗಳೂ ಒಟ್ಟುಗೂಡಿ ಮಾಸ್ಕೋ ಘೋಷಣೆ ಹೊರಡಿಸಿದವು.

೨... ಬೋಗನ್‌ವಿಲ್‌ನಲ್ಲಿ ಅಮೇರಿಕಾ ದಳಗಳು ಇಳಿದವು.

೬... ಕೀವ್‌ನ್ನು ರಷ್ಯನರು ಶತ್ರುಗಳಿಂದ ಕಿತ್ತುಕೊಂಡರು.

೧೬... ಲೇರೋಸ್ ನಾಜಿಗಳ ವಶವಾಯಿತು.

೨೨... ಕೈರೋ ಸಮ್ಮೇಳನ.

ಡಿಸೆಂಬರ್

೨... ಟೆಹರಾನ್ ಸಮ್ಮೇಳನ

೪... ದ್ವಿತೀಯ ಕೈರೋ ಸಮ್ಮೇಳನ

೧೫... ನ್ಯೂಬ್ರಿಟನ್ನಿನ ಆರಾವೆ ಪರ್ಯಾಯ ದ್ವೀಪವನ್ನು ಮಿತ್ರರು ಹಿಡಿದರು.

೧೬... ಪ್ರಪಂಚದಲ್ಲೆಲ್ಲಾ ಪ್ರಚಂಡ ಬಾಂಬಿನ ಹೊಡೆತಕ್ಕೆ ತುತ್ತಾದ ರಾಜಧಾನಿ ಬರ್ಲಿನಿಗೆ ಮತ್ತೆ ಬಾಂಬು ಹೊಡೆತ.

೨೪... ಯೂರೋಪಿನ ವಿಜಯಕ್ಕಾಗಿ ಐಸೆನ್‌ಹೋವರ್‌ರಿಗೆ ಪ್ರಾಧಾನ್ಯ ಸೇನಾಪತಿ ಪಟ್ಟ ಕೊಡಲಾಯಿತು.

೨೬... ನ್ಯೂ ಬ್ರಿಟನ್ನಿನ ಗ್ಲೋಸೆಸ್ಟರ್ ಭೂಶಿರದ ಮೇಲೆ ಮಿತ್ರರು ಇಳಿದರು

ಸಸ್ಯಗಳಿಂದ ಬಣ್ಣ

ಬಣ್ಣದ ಕಾಗದ ತಯಾರಿಸಲು ಉಪಯೋಗಿಸುವ ಬಣ್ಣವನ್ನು ಹುಣಸೆ ಬೀಜ, ಕಮಲದಹೂವು, ಕಿಸ್ಗೆ ಗೋಂದು, ಕಾಚು ಮತ್ತು ಚೇಣಾಳ ಕಟ್ಟಿಗೆ ಮುಂತಾದುವುಗಳಿಂದ ಪಡೆಯಬಹುದೆಂದು ಕಂಡುಹಿಡಿಯಲಾಗಿದೆ.

ನವ ಯೌವನ

ಕೊಬ್ಬು, ಬಲಹೀನತೆ, ಮುಪ್ಪು, ವೀರ್ಯಸ್ಖಲನ, ಧಾತುವಿಕಾರ ಮೊದಲಾದವನ್ನು ಶೀಘ್ರದಲ್ಲೇ ಹೋಗಿಸಲು

ಮದನಮಂಜರಿ

ಮಾತ್ರೆಗಳು ದಿವ್ಯ ಔಷಧ. ಡಬ್ಬಿ ಒಂದಕ್ಕೆ ರೂ. 1

ಮದನಮಂಜರಿ ಫಾರ್ಮಸಿ, 184 ಚಿನ್ನಾ ಬಜಾರು ರಸ್ತೆ, ಮದರಾಸು

ಅಶೋಕಾ ಫಾರ್ಮಸಿ ಬ್ಯಾಂಕು ರಸ್ತೆ, ಮೈಸೂರು

ಗುಂಡ್ಲುಪೇಟೆ: ಬಿ ಎಸ್. ಕೃಷ್ಣಪ್ಪ

ಇನ್ನು ಮೂರು ತಿಂಗಳು ಗ್ರಹಗತಿ ಕ್ರೂರ

ಕುಜ, ಶನಿ ಒಂದೇ ಮನೆಯಲ್ಲಿ ಇರುವುದೇ ಕಾರಣ

ಒಂದೇ ವರ್ಷ ಬೃಹಸ್ಪತಿ ಗ್ರಹವು ಮೂರು ರಾಶಿಗಳಲ್ಲಿ ಹಾದು ಹೋದರೆ ಭೂಗ್ರಹದಲ್ಲಿ ೭ ಕೋಟಿ ಶವಗಳು ಬೀಳುವುವು. ಕಳೆದ ಏಪ್ರಿಲ್‌ನಿಂದ ಬರುವ ಏಪ್ರಿಲ್ ವರೆಗೆ ಬೃಹಸ್ಪತಿಯು ಮಿಥುನದಲ್ಲಿದ್ದು, ಕಟಕಕ್ಕೆ ಬಂದು ಈಗ ಸಿಂಹರಾಶಿಯಲ್ಲಿರುತ್ತಾನೆ. ಆದುದರಿಂದಲೇ ಅಂಟುರೋಗ ಮತ್ತು ಯುದ್ಧದ ದೆಸೆಯಿಂದ ಬಹಳ ಸಾವುಗಳು ಸಂಭವಿಸುತ್ತಿವೆ. ಎಷ್ಟು ಕಾಲ ಶನಿಯು ಕುಜನ ಜೊತೆಯಲ್ಲಿರುವನೋ ಅಷ್ಟು ಕಾಲವೂ ಕ್ಷಾಮ, ರಾಜರ ಸಾವು, ಜನರ ಮರಣ, ಭೂತಪ್ರೇತಗಳ ಕುಣಿದಾಟ ಇಷ್ಟು ನಡೆಯುವುವು. ತ್ರಿಗಣಿತದ ಪ್ರಕಾರ ೧೬ ನೇ ಡಿಸೆಂಬರ್ ೧೯೪೩ ರಿಂದ ೧೩ ನೇ ಮಾರ್ಚಿ ೧೯೪೪ ರ ವರೆವಿಗೆ ಶನಿ ಕುಜ ಒಂದೆಡೆಯಲ್ಲೇ ಇರುವರು. ಈ ಕಾಲದಲ್ಲಿ ಕ್ಷಾಮ, ಯುದ್ಧ ಈ ಕಾರಣಗಳಿಂದ ಸಾವು ಅತಿ ಹೆಚ್ಚುವುದು ಎಂಬುದಾಗಿ ತಿಪ್ಪವೆಲ್ಲಿಯ ಕೆ. ಎಸ್. ಗುರುಸ್ವಾಮಿ ಅಯ್ಯರವರು ಬರೆದಿರುತ್ತಾರೆ.

ಈ ಮೂರು ತಿಂಗಳಿನಲ್ಲಿ ಪ್ರಪಂಚದ ಯುದ್ಧವು ಉಲ್ಬಣ ಸ್ಥಿತಿಗೇರುವುದು. ಕ್ಷಾಮ ಕಾಲಗಳಲ್ಲಿ, ರೋಗಗಳು ನಿರ್ಗಂಧ ಕುಸುಮಗಳಾಗುವುವು. ನಿಂಬೆ ಹಣ್ಣು ಮತ್ತು ಕಿತ್ತಲೆ ಹಣ್ಣುಗಳ ಚಿನ್ನದ ಬಣ್ಣ ಮಾಯವಾಗುವುದು. ಬುದ್ಧಿಶಾಲಿಗಳು ಅಜ್ಞಾನಿಗಳಂತೆ ವರ್ತಿಸುವರು. ರಾಜಕಾರಣ ಪಟುಗಳನ್ನು ನಿಂದಿಸುವ ಬದಲು ದೇವತೆಗಳನ್ನೂ, ಬೃಹಸ್ಪತಿ, ಶನಿ, ಕುಜ ಮುಂತಾದ ಗ್ರಹಗಳನ್ನೂ ಪೂಜಿಸಿ ಪ್ರಾರ್ಥಿಸಿದರೆ ಕಷ್ಟಗಳು ನಿವಾರಣೆಯಾಗಬಹುದು —ಎಂದು ಸಹ ಅವರು ಬರೆದಿರುವರು.

ಉಪಾಧ್ಯಾಯರ ಉಪವಾಸದ ಬೆದರಿಕೆ

ಧಾರವಾಡ ಡಿಸೆಂಬರ್ ೩೦. ನಿರ್ಧರಿತವಾಗಿ ಹೇಳಿರುವುದರಿಂದ ಜನವರಿ ೧೯ ನೇ ತಾ|| ನೊಳಗೆ ತಮ್ಮ ಸಂಬಳಗಳನ್ನು ಹೆಚ್ಚಿಸದಿದ್ದರೆ ತಾವುಗಳು ಉಪವಾಸ ವ್ರತವನ್ನು ಕೈಗೊಳ್ಳುವುದಾಗಿ ಇಲ್ಲಿನ ಟ್ರೈನಿಂಗ್ ಶಾಲೆಯ ಉಪಾಧ್ಯಾಯರುಗಳು ತಿಳಿಯಪಡಿಸಿದ್ದಾರೆ

Edited, printed and published by A. R. Nagarajan, at the Sadhvi Press, D. Subbiah Road, Mysore.

ಸಾಧ್ವಿ

ರಾಜಧಾನಿಯ ರಾಷ್ಟ್ರೀಯ ದಿನ ಪತ್ರಿಕೆ

ಪ್ರತಿದಿನವೂ ಪ್ರಕಟವಾಗುವುದು

ಕೂಡಲೇ ಚಂದಾದಾರರಾಗಿರಿ !

ಚಂದಾ ತಿಂಗಳಿಗೆ 0-8-0 ಮಾತ್ರ

ಸರಕಾರಕ್ಕೆ ಟಪಾಲು ಮೂಲಕ 1-0-0

ಜಾಹಿರಾತುಗಳಿಗೆ ಬರೆಯಿರಿ.

ಸಂಪುಟ ೨] ಮಂಗಳವಾರ ೪--೧--೪೪ [ಸಂಚಿಕೆ ೧೪೪

ದೀರ್ಘ ಸಮರಕ್ಕೂ ಜರ್ಮನರು ತಯಾರು

ಸ್ಪೈಡರ್ ರೇವು ಅಮೆರಿಕಾ ಯೋಧರ ವಶವಾಯಿತು

ಸುಭಾಷ್ ಬೋಸರ ಚಿತ್ರ ಪ್ರತಿಗಳ ಮುಟ್ಟುಗೋಲು

ನೂತನ ಪೌರಸಭೆಯ ಮೀಟಿಂಗು

ಮೈಸೂರು ೪

ಪುನರ್ರಚಿಸಿಯಾದ ಮೈಸೂರು ಪೌರಸಭೆಯ ವಿಶೇಷ ಮೀಟಿಂಗ್ ೮ ನೇ ತಾ|| ಶನಿವಾರ ೪-೩೦ ಘಂಟೆಗೆ ಸೇರಲಿದೆ. ಮ್ಯಾನೇಜಿಂಗ್ ಮತ್ತು ಇತರ ಸಮಿತಿಗಳಿಗೆ ಸದಸ್ಯರನ್ನು ಚುನಾಯಿಸಲಾಗುವುದು ಮತ್ತು ಟ್ರಸ್ಟ್ ಬೋರ್ಡಿಗೆ ಇಬ್ಬರು ಸದಸ್ಯರನ್ನು ನೇಮಿಸಲಾಗುವುದು

ವಿದ್ಯಾರ್ಥಿ ಸಂಘ

ಮೈಸೂರು ವಿದ್ಯಾರ್ಥಿ ಸಂಘದ ಆಹಾರ ಸ್ಥಾಯಿ ಸಮಿತಿಯು ನಿನ್ನೆ ದಿನ ಸೇರಿ, ನಗರದ ಆಹಾರ ಪರಿಸ್ಥಿತಿಯನ್ನೂ, ಮುಖ್ಯವಾಗಿ ಆಹಾರದ ಅಭಾವದಿಂದ ವಿದ್ಯಾರ್ಥಿಗಳಿಗೆ ಒದಗಿರುವ ತೊಂದರೆಗಳನ್ನೂ ಪರಿಶೀಲಿಸಿ, ಅದರ ಪರಿಹಾರಕ್ಕಾಗಿ ನಗರದ ಮುಖಂಡರುಗಳನ್ನು ಕಾಣಬೇಕೆಂದು ತೀರ್ಮಾನಿಸಿದೆ.

ಈ ತಿಂಗಳಲ್ಲಿ ಬರಲಿರುವ ಪರೀಕ್ಷೆಗೆ ಬಟ್ಟೆಗಳನ್ನು ಒದಗಿಸಲು ತಕ್ಕ ಕಾರ್ಯಕ್ರಮ ಕೈಗೊಳ್ಳಬೇಕೆಂದೂ, ಅದಕ್ಕಾಗಿ ಸಾರ್ವಜನಿಕರಿಂದ ಬಟ್ಟೆಯ ಭಿಕ್ಷೆಯನ್ನು ಬೇಡಬೇಕೆಂದೂ, ಸಾರ್ವಜನಿಕರೂ ಉದಾರತೆಯಿಂದ ಸಹಾಯ ಮಾಡಬೇಕೆಂದು ಕಾರ್ಯದರ್ಶಿಗಳು ಕೇಳಿಕೊಳ್ಳುತ್ತಾರೆ

ಶ್ರೀ ಶಂಕರಪ್ಪ ಸ್ಮಾರಕ ಕುಸ್ತಿ ಪಂದ್ಯಗಳು

ಮೈಸೂರು ವಿದ್ಯಾರ್ಥಿ ಸಂಘದಾಶ್ರಯದಲ್ಲಿ ಜನವರಿ ತಿಂಗಳ ಮೂರನೆಯ ವಾರದಲ್ಲಿ ನಡೆಯಲಿರುವ ಶ್ರೀ ಶಂಕರಪ್ಪ ಸ್ಮಾರಕ ಕುಸ್ತಿ ಪಂದ್ಯಗಳಲ್ಲಿ ಭಾಗ ವಹಿಸಲು ಇಷ್ಟ ಪಡುವ ವಿದ್ಯಾರ್ಥಿಗಳೆಲ್ಲರೂ ಜನವರಿ ೧೦ ನೇ ತಾರೀಖಿನೊಳಗಾಗಿ ಅರ್ಜಿಗಳನ್ನು ಅಡಿಷನಲ್ ಪ್ರವೇಶವಿನೊಡನೆ (?) ರೂ. ೧೦ ೧೦ ಕಾಲೇಜು ಹಾಸ್ಟೆಲ್ " ಗೆ ಕಳುಹ ಕೊಡಬೇಕೆಂದು ವಿದ್ಯಾರ್ಥಿ ಸಂಘದ ಕಾರ್ಯದರ್ಶಿಗಳು ತಿಳಿಸಿದ್ದಾರೆ

ಸೈಕಲ್ ಪಾರ್ಟಿ

ಉತ್ತರ ಕರ್ನಾಟಕದಿಂದ ಶಿವಮೊಗ್ಗದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಬಂದಿದ್ದ ದಡಕರ ಬೈಸಿಕಲ್ ಪಾರ್ಟಿಯವರು ಮೊನ್ನೆ ಬೆಂಗ್ಳೂರಿನ ಶ್ರಾಮಸ್ಥಿಗೆ ಆಗಮಿಸಿದರು ಇವರೆಗಳು ಎಂ. ಎಸ್. ಬೋಯಿ.ಸ್ ದವರ ನೆರವಿನಿಂದ ಬಿಡಾರವಾಗಿದ್ದಾರೆ. ಇನ್ನೂ ಕೆಲವು ದಿವಸಗಳು ಇಲ್ಲಿಯೇ ಇದ್ದು ಅನಂತರ ಬೈಸಿಕಲ್ ಮೇಲೆ ಬೆಂಗಳೂರಿಗೆ ಪ್ರಯಾಣ ಮಾಡಿ ಅಲ್ಲಿಂದ ತಮ್ಮ ಸ್ವಸ್ಥಳಕ್ಕೆ ಹಿಂತಿರುಗುವರು

ಫುಟ್ ಬಾಲ್

ಎಂ. ಎ. ಸಿ. ಚೆಟ್ಟಿ ಸ್ಮಾರಕ ಫುಟ್ ಬಾಲ್ ಪಂದ್ಯಗಳ ಫೈನಲ್ಸ್ ನಿನ್ನೆ ನಡೆದ ಲೋವರ್ಸ್ ಸಂಪನ್ನ ಪ್ರ್ಯಾ ಆಯಿತು ೨ ನೇ ವಾರ ೭ ನೇ ತಾ|| ಡಾಯಿಜ್ ನಾ ಪ್ರೋಗ್ರೆಸ್ ಗೂ ಮೈಸೂರು ಬಿಟಿ ಇಲೆವೆನ್ ಗೂ ಪಂದ್ಯ ನಡೆಯಲಿರುವುದಾಗಿದೆ.

— —

ರೇಷನಿಂಗ್ ತಪ್ಪುವುದಿಲ್ಲ

ಯುದ್ಧ ಮುಗಿದ ಮೇಲೆ ಸಹಾ ರೇಷನಿಂಗ್ ಮತ್ತು ಕಂಟ್ರೋಲ್ ವ್ಯವಸ್ಥೆ ಸ್ವಲ್ಪ ಕಾಲ ಇರಬೇಕಾಗಬಹುದು ಎಂಬುದಾಗಿ ಭಾರತ ಸರ್ಕಾರದ ರೇಷನಿಂಗ್ ಆಡ್ವೈಸರ್ ರಾದ ಮಿ|| ಕಿರ್ಕ್ ಪ್ಯಾಟ್ರಿಕ್ ರವರು ಹೇಳಿದ್ದಾರೆ

ಲಂಡನ್ನಿನ ಭಾರತೀಯರ ಮೇಲೆ ಕಳವು ಮೊಕದ್ದಮೆ

ಲಂಡನ್ನಿನಲ್ಲಿರುವ ಭಾರತೀಯ ವ್ಯಾಪಾರಿಗಳಾದ ಸಿ. ಎಸ್. ವರ್ಮ ಅಹಮದ್ ಶಿವ ಚಂದ್ ಮೊರ್ ಜಾನ್ ಎಂಬುವರು ಇವರ ಚಿಕ್ಕಪ್ಪನಾದ ಡ|| ಭವಾನಿ ಎಂಬುವರಿಗೆ ಸೇರಿದ ೩೦ ಸಾವಿರ ರೂ ಗಳಷ್ಟು ಕಳವು ಮಾಡಿದರೆಂಬ ಆಪಾದನೆಯ ಮೇಲೆ ಮೊಕದ್ದಮೆ ಹೂಡಲಾಗಿದೆ ಡ|| ಭವಾನಿ ಯವರು ಭಾರತದ ಅಪ್ಪೆಕ್ಸ್ ಗಳ ಬಾಗಿಲ ಸೇರಿ ಗಿ ಚಿ ರು ವ್ಯಾಪಾರವನ್ನು ಏರ್ಪಡಿಸಿ ಅದಕ್ಕಾಗಿ ೧೦೦೦ ಪೌಂಡ ಗಳ ಬಿ. ಸ್ಯಾಂಕ್ ಟ್ ಗಳನ್ನು ಕರಾಚಿಗೆ ಕಳುಹಿಸಲು ಚ್ಯಾಂಗ್ ಗೆ ಕೊಟ್ಟು, ತಾವು ಭಾರತಕ್ಕೆ ಹಿಂತಿರುಗಿದರಿಂದೂ ನಂತರ ಆ ಹಣವನ್ನು ಸ್ವಂತಕ್ಕೆ ಉಪಯೋಗಿಸಿಕೊಂಡರೆಂದೂ ಫಿರ್ಯಾದಿ ತಿಳಿಸಿದ್ದಾರೆ.

ಬೋಸ್ ಚಿತ್ರಗಳ ಮುಟ್ಟುಗೋಲು

ಮಲಬಾರ್ ಜಿಲ್ಲಾ ಪೊಲೀಸ್ ಸೂಪರಿಂಟೆಂಡೆಂಟ್ ರವರ ಅಪ್ಪಣೆಯ ಮೇರೆಗೆ ಪಾಲ್ಘಾಟಿನ ಪೊಲೀಸರು ಅಲ್ಲಿನ ಅಂಗಡಿಗಳಲ್ಲಿದ್ದ ಶ್ರೀ ಸುಭಾಷ್ ಚಂದ್ರಬೋಸ್ ರವರ ಚಿತ್ರಗಳನ್ನು ಮುಟ್ಟುಗೋಲು ಹಾಕಿಕೊಂಡಿದ್ದಾರೆ. ಕಲ್ಲಿಕೋಟೆಯ ಕ್ಯಾಲೆಂಡರ್ ತಯಾರಕನೊಬ್ಬನ ಬಳಿ ಇದ್ದ ಬೋಸರ ನೂರಾರು ಚಿತ್ರ ಪ್ರತಿಗಳನ್ನು ಪೋಲೀಸರು ವಶಪಡಿಸಿಕೊಂಡಿದ್ದಾರೆ

ಬೊಂಬಾಯಿ ನ್ಯಾ|| ವಿ|| ಸಭಾಧ್ಯಕ್ಷರ ಖುಲಾಸೆ

ಬೊಂಬಾಯಿ ನ್ಯಾಯವಿಧಾಯಕ ಸಭಾಧ್ಯಕ್ಷರಾದ ಶ್ರೀ ಜಿ. ಎಲ್. ಮಾವಳಂಕರ್ ರನ್ನು ನಾಸಿಕ್ ಸೆರೆಮನೆಯಿಂದ ಮಾವ ನೀಯ ಕಾರಣ ಬಿಡುಗಡೆ ಮಾಡಲಾಗಿದೆ ಇವರಿಗೆ ಶೊಕ್ಕಣನೋವು ಬರುತ್ತಿತ್ತು. ಈಗ ಚಿಕಿತ್ಸೆಯಲ್ಲಿದ್ದಾರೆ

ಉಪಾಧ್ಯಾಯರ ಉಪವಾಸ

ಸರ ಕಾರೀ ಕಾಲೇಜಿನ ಟ್ರೈನಿಂಗ್ ಸ್ಕೂಲ್ ಉಪಾಧ್ಯಾಯರು ... ಪಟ್ಟಣದ ಈ ಕಾಲೇಜಿನ ವಿದ್ಯಾರ್ಥಿಗಳ ಯವರು ತಮಗೆ ಸಂಬಳ ಹೆಚ್ಚಿಸಬೇಕೆಂದು ಕೋರಿದ್ದಲ್ಲಿ ಇಷ್ಟರಲ್ಲೇ ಇವರಿಗೆ ಸಿಗದೆ ಮುಷ್ಕರ ಹೂಡುವ ನಿರ್ಧರದಲ್ಲಿ ಬಂದಿದ್ದಾರೆ.

ಹಿಟ್ಲರನಿಗೆ ಅಮೇರಿಕದ ರೈಲ್ವೆ ಮುಷ್ಕರ ಸಹಾಯಕವೇ ?

ಅಮೇರಿಕದ ರೈಲ್ವೆ ಕೆಲಸಗಾರರ ಮುಷ್ಕರವು ಹಿಟ್ಲರನಿಗೆ ಯುರೋಪಿನ ದಂಗೆಯನ್ನು ತಪ್ಪಿಸಲು ಸಹಾಯಕವಾಗಿ, ಇದರಿಂದ ಯುರೋಪ್ ಯುದ್ಧವು ಇನ್ನೂ ದೀರ್ಘ ಕಾಲ ನಡೆಯಲು ಅನುಕೂಲವಾಯಿತೆಂದು ಅಮೇರಿಕದ ಮಿಲಿಟರಿ ಅಧಿಕಾರಿಗಳೊಬ್ಬರು ಮುಷ್ಕರಗಾರರ ಮೇಲೆ ಆಪಾದನೆ ಮಾಡಿದ್ದಾರೆ ಇದರ ಸಂಯುಕ್ತ ಸಂಸ್ಥಾನದಲ್ಲೆಲ್ಲಾ ಅತ್ಯಾಶ್ಚರ್ಯವನ್ನುಂಟು ಮಾಡಿದೆ.

ಚಿಯಾಂಗರ ಸಂದೇಶ

ಜ|| ಚಿಯಾಂಗ್ ಕೈಷೇಕರು ಚುಂಕಿಂಗಿನಲ್ಲಿ, ಚೀಣ ಸರ್ಕಾರದ ಅಧಿಕಾರದ ಮುಂದೆ ನೂತನ ವರ್ಷದ ಸಂದೇಶವನ್ನು ಕಳಿಸುತ್ತಾ, ಈ ವರ್ಷ ಜಪಾನಿನ ಮೇಲೆ ಪ್ರಬಲವಾದ ಧಾಳಿಯನ್ನು ಆರಂಭಿಸುವುದು ನಮ್ಮ ಕರ್ತವ್ಯ ಈ ಬಗ್ಗೆ ಸಿದ್ಧತೆಗಳೆಲ್ಲವೂ ಪೂರ್ತಿಯಾಗಿವೆ ಕಳೆದ ವರ್ಷ ಕ್ರಿಂತ ಮುಂಚೆ, ಚೀಣಾಯರು ಮಿತ್ರರಾಷ್ಟ್ರಗಳೊಡನೆ ಸೇರಿ ರಣ ವನ್ನದಗಿಸಲು ಸಿದ್ಧರಾಗಿದ್ದಾರು. ಈಗ ಚೀಣಾಯರೊಬ್ಬರೇ ಶತ್ರುವನ್ನು ನಿರ್ಮೂಲ ಮಾಡಲು ಶಕ್ತರಾಗೊಳ್ಳಬೇಕು - ಎಂಬುದಾಗಿ ತಿಳಿಸಿರುವರು

ಜರ್ಮನಿಯು ದೀರ್ಘಕಾಲ ಯುದ್ಧ ನಡೆಸಲು ಸಾಧ್ಯ

ಮಿತ್ರ ರಾಷ್ಟ್ರಗಳ ಧಾಳಿಯನ್ನು ಎದುರಿಸಿ, ಜರ್ಮನಿಯು ಯುದ್ಧವನ್ನು ಇನ್ನೂ ದೀರ್ಘ ಕಾಲ ನಡೆಸಲು, ನಾಜಿ ಆಕ್ರಮಿತ ಯುರೋಪಿನಲ್ಲಿ ಸಾಕಷ್ಟು ಯುದ್ಧ ಸಾಮಗ್ರಿಗಳು ತಯಾರಾಗುತ್ತಿವೆಯೆಂದು ಇಂಗ್ಲೆಂಡಿನ ಸಚಿವರೊಬ್ಬರು ಅಭಿಪ್ರಾಯಪಟ್ಟಿದ್ದಾರೆ

ಬಳಲಿದ ಯೋಧರು

ಸ್ಕಾಟ್ಲೆಂಡಿನ ಸ್ಟೇಷನ್ ಒಂದರಲ್ಲಿ ನೂರು ಮಂದಿ ಬ್ರಿಟಿಷ್ ಯೋಧರು ಹೋಗಲು ಸ್ಟೇಷನ್ನಿನಲ್ಲಿ ಕಾಲ್ ಬೆಂಗ್... ಉತ್ತರ ಆಫ್ರಿಕಾದ ರಣರಂಗದಿಂದ ಬಂದ ಮುಖ್ಯ ಸಡಿಸಿ ಬಳಲಿ ಹೊರಟ ಬಂದ ಯೋಧರು

ರಾಂಜಿ ಕ್ರಿಕೆಟ್ ಪಂದ್ಯದಲ್ಲಿ ಬೊಂಬಾಯಿಗೆ ವಿಜಯ

ಬೊಂಬಾಯಿನಲ್ಲಿ ನಡೆದ ರಾಂಜಿ ಕ್ರಿಕೆಟ್ ಪಂದ್ಯದಲ್ಲಿ ನಿನ್ನೆ ದಿವಸ ಬೊಂಬಾಯಿಯವರು ಮಹಾರಾಷ್ಟ್ರದವರನ್ನು ೪೩೭ ರನ್ನುಗಳಿಂದ ಸೋಲಿಸಿದರು. ಬೊಂಬಾಯಿಯವರು ಮೊದಲು ಆಟವಾಡಿ ... ರನ್ನುಗಳನ್ನು ಮಾಡಿದರು. ಆಬೋನಿನ ಕ್ಯಾಪ್ಟನ್ ರವರು ... ರನ್ನುಗಳನ್ನು ಮಾಡಿದರು ಮಹಾರಾಷ್ಟ್ರದವರು ... ರನ್ನುಗಳಿಗೆ ಔಟಾದರು.

ಡಾಕಾದಲ್ಲಿ ದರೋಡೆ

ಕತ್ತಿ ಮತ್ತು ಚೂರಿಗಳನ್ನು ಹಿಡಿದ ೮ ಮಂದಿ ಯುವಕರು ದರ್ಜಿ ವರ್ತಕನೊಬ್ಬನ ಮನೆಯನ್ನು ಮುತ್ತಿ ೧೬೦೦ ರೂ. ನಗದು ಹಣವನ್ನೂ ೫೦೦ ರೂ. ಬೆಲೆ ಬಾಳುವ ಆಭರಣಗಳನ್ನೂ ದೋಚಿಕೊಂಡು ಹೋಗಿರುತ್ತಾರೆ ಈ ಸಂಬಂಧವಾಗಿ ಈ ಗ್ಯಾಂಗಿನ ಕೆಲವರು ದಸ್ತಗಿರಿಯಾಗಿದೆ.

ಭಾರತ ವಿಜ್ಞಾನ ಕಾಂಗ್ರೆಸ್

ನಿನ್ನೆ ಭಾರತದ ೩೧ ನೇ ವಿಜ್ಞಾನ ಕಾಂಗ್ರೆಸ್, ನವದೆಹಲಿಯಲ್ಲಿ ಆರಂಭವಾಯಿತು ಈಗಾಗಲೆ ಅನೇಕ ಮಂದಿ ಭಾರತೀಯ ವಿಜ್ಞಾನಿಗಳು ವಿಜ್ಞಾನ ಕ್ಷೇತ್ರದಲ್ಲಿ ಕಲೆ ಎತ್ತಿದ್ದಾರೆ - ಭಾರತ ಪ್ರಾಚೀನ ಸಂಸ್ಕೃತಿ ಮತ್ತು ಮನೋಭಾವ ವಿಜ್ಞಾನದ ಬೆಳವಣಿಗೆಗೆ ಸಹಕಾರಿಯಾಗಿದೆ ಕಳೆದ ೩೦ ವರ್ಷಗಳಲ್ಲಿ ಭಾರತ ವಿಜ್ಞಾನ ಒಹುಮಟ್ಟಿಗೆ ಮುಂದುವರಿದಿದೆ ಕತ್ತಲವಾಗಿ ಈ ಯುದ್ಧಕಾಲದಲ್ಲಿ ಅದೂ ಮುಖ್ಯಪಾತ್ರ ವಹಿಸುತ್ತಿದೆ. ಭಾರತದ ವ್ಯವಸಾಯ ಮತ್ತು ಕೈಗಾರಿಕೆ ಸಂಪತ್ತು ಉತ್ತಮಗೊಳ್ಳಬೇಕಾದರೆ ವಿಜ್ಞಾನದ ಉಪಯೋಗ ಹೆಚ್ಚಬೇಕು ಎಂಬುದಾಗಿ ವೈಸರಾಯರು ವಿಜ್ಞಾನ ಕಾಂಗ್ರೆಸ್ ಅಧಿವೇಶನವನ್ನು ನೆರವೇರಿಸುತ್ತಾ ಹೇಳಿದರು.

ಕಳುವು ಮಾಲುಗಳ ಗಡಂಗ್ ಪತ್ತೆ

ಕೊಲ್ಲಾಪುರದ ಸಣ್ಣ ಅಂಗಡಿ ಒಂದರ ಮೇಲೆ ಅನುಮಾನ ಬಂದಿರಾಗಿ ಪೋಲೀಸರು ಒಳಹೊಕ್ಕು ನೋಡಿದರು. ಅಲ್ಲಿ ಕಳುವು ಮಾಲುಗಳು ರಾಶಿ ರಾಶಿಯಾಗಿ ಜಮಾಯಿಸಲ್ಪಟ್ಟಿದ್ದವು. ಈ ಸುದ್ದಿ ಊರಲ್ಲಿ ಹಬ್ಬಿದ ಕೂಡಲೇ ಊರಿನ ಬಹು ಮಂದಿ, ಕಳೆದು ಹೋದ ತಮ್ಮ ಪದಾರ್ಥಗಳೂ ದೊರಕಬಹುದೆಂಬ ಆಸೆಯಿಂದ ಕುತೂಹಲದಿಂದ ಆ ಚಿಕ್ಕ ಅಂಗಡಿಯನ್ನು ಮುತ್ತಿಕೊಂಡಿರುವರು.

ಮಾಳವೀಯರ ಆಕಾಂಕ್ಷೆ

ಕಾಶಿ ಹಿಂದೂ ವಿಶ್ವವಿದ್ಯಾನಿಲಯದ ಬಳಿ ವಿಶ್ವನಾಥ ದೇವಾಲಯ ಒಂದನ್ನು ಅವ್ಯಕ್ತರೀತಿಯಲ್ಲಿ ನಿರ್ಮಿಸುವುದು ಮತ್ತು ವಿಶ್ವವಿದ್ಯಾನಿಲಯಕ್ಕಿರುವ ಸಾಲವನ್ನೆಲ್ಲಾ ತೀರಿಸುವುದು, ಇವೆರಡನ್ನೂ ತಮ್ಮ ಜೀವಮಾನ ಕಾಲದಲ್ಲೇ ನೋಡಿ ಮುಗಿಸುವ ಆಕಾಂಕ್ಷೆಯನ್ನು ಪಂಡಿತ ಮದನಮೋಹನ ಮಾಳವೀಯರವರು ಹೊಂದಿರುವುದಾಗಿ ಗೊತ್ತಾಗಿದೆ ದೇವಾಲಯದ ನಿರ್ಮಾಣಕ್ಕೆ ೩ ಲಕ್ಷ ರೂ. ಬೇಕಾಗಿದೆ ವಿಶ್ವವಿದ್ಯಾನಿಲಯಕ್ಕಿರುವ ಸಾಲವನ್ನು ತೀರಿಸುವುದಕ್ಕೆ ೧೦ ಲಕ್ಷ ರೂ. ಬೇಕಾಗಿರುವುದು. ಈ ಹಣವನ್ನು ಶೇಖರಿಸುವುದಕ್ಕಾಗಿ, ಮಾಳವೀಯರು ದೇಶದಾದ್ಯಂತ ಸಂಚರಿಸಿ, ವಿನಂತಿ ಮಾಡಿಕೊಳ್ಳುವ ಏತ್ತುವ ಸಂಭವವಿರುವುದು ನಿಯಮ ಬಂದಿದೆ

ಅಧಿಕಾರ ವಹಿಸಿಕೊಂಡರು

[ಸ್ವಂ. ವ.] ಬೆಂಗಳೂರು ೩. ೧.

ರಜಾ ಮೇಲಿದ್ದ ಚೀಫ್ ಸೆಕ್ರೆಟರಿಯ ವರಾದ ಶ್ರೀ ವೇದವ್ಯಾಸಾಚಾರ್‌ರವರು ಇಂದಿನ ತಮ್ಮ ಅಧಿಕಾರವನ್ನು ವಹಿಸಿಕೊಂಡರು.

ಸಚಿವರ ಆಗಮನ

ಕ್ರಿಸ್‌ಮಸ್ ರಜವನ್ನು ಉಪಯೋಗಿಸಿಕೊಂಡು ಪ್ರಾಂತ್ಯಕ್ಕೆ ಪ್ರಯಾಣ ಮಾಡಿದ್ದ ಸಚಿವರು ೧ ನೇ ತಾರೀಖು ಬೆಂಗಳೂರಿಗೆ ಹಿಂತಿರುಗಿ ಬಂದರು.

ಪ್ರವಾಸ ಹೊರಟರು

ಪಬ್ಲಿಕ್ ಸಚಿವರಾದ ಶ್ರೀ ಪಿ. ಸುಬ್ಬರಾಮಯ್ಯನವರು ತುಮಕೂರು, ಚಿತ್ರದುರ್ಗ ಜಿಲ್ಲೆಗಳ ಪ್ರವಾಸಕ್ಕಾಗಿ ಇಂದಿನ ಪ್ರಯಾಣ ಬೆಳೆಸಿದರು. ೧೦ ನೇ ತಾ|| ಪ್ರವಾಸ ಮುಗಿಸಿಕೊಂಡು ಹಿಂತಿರುಗುವರು.

ರಜ ಹೆಚ್ಚಿಸಿದೆ

ಬೆಂಗಳೂರು ಸೆಷನ್ಸ್ ನ್ಯಾಯಾಧೀಶರಾದ ಶ್ರೀ ಎ. ಸುಂದರರಾಜಯ್ಯನವರಿಗೆ ಕೊಡಲಾಗಿದ್ದ ರಜವನ್ನು ಈ ತಿಂಗಳು ಕೊನೆಯ ವರೆಗೂ ಹೆಚ್ಚಿಸಲಾಗಿದೆ.

ರೇಷ್ಮೆ ವ್ಯಾಪಾರಿಗೆ ದಂಡ ಜುಲ್ಮಾನೆ

ಬೆಂಗಳೂರಿನ ರೇಷ್ಮೆ ವ್ಯಾಪಾರಿಯೊಬ್ಬ [illegible] ರೇಷ್ಮೆಯನ್ನು ಕಂಟ್ರೋಲ್‌ಗಿಂತ ಹೆಚ್ಚು ಬೆಲೆಗೆ ಮಾರಿದ್ದುದಕ್ಕಾಗಿ ಪೊಲೀಸ್ ಕೈಗೆ ಸಿಕ್ಕಿಬಿದ್ದನು. ರೇಷ್ಮೆಯನ್ನು ಸರಕಾರದವರು ತಮ್ಮ ವಶಕ್ಕೆ ತೆಗೆದುಕೊಂಡು ಆತನಿಗೆ ೧,೦೦೦ ರೂ. ದಂಡ ವಿಧಿಸಿದ್ದಾರೆ.

ಭಾರಿ ದರೋಡೆ

ಕಳೆದ ೨೯ ನೇ ತಾ|| ರಾತ್ರಿ [illegible] ಡಿಪೋಗಳಿಗೆ ಗಾಡಿಗಳ ಮೂಲಕ ಅಕ್ಕಿ ಮುಂತಾದ ಪದಾರ್ಥಗಳನ್ನು ಸಾಗಿಸುತ್ತಿದ್ದಾಗ ಸುಮಾರು ೩೦ ಜನ ದರೋಡೆಕಾರರು ಗಾಡಿಯನ್ನು ತಡೆದು, ಗಾಡಿಯವರನ್ನು ಹೊಡೆದು, ಸಾಮಾನುಗಳನ್ನು ಅಪಹರಿಸಿಕೊಂಡು ಹೋಗಿದ್ದಾರೆ. ಪೊಲೀಸರು ಪತ್ತೆ ಹಚ್ಚುವುದರಲ್ಲಿ ನಿರತರಾಗಿದ್ದಾರೆ.

ಸಂಗೀತ ಪಾರಿಜಾತ ಸಮ್ಮೇಳನ

[illegible] ಸಂಗೀತ ಪಾರಿಜಾತ ಸಮ್ಮೇಳನವು ಈ ತಿಂಗಳು ಬೆಂಗಳೂರಿನಲ್ಲಿ ನಡೆಯಲಿದೆ.

ಜಗಳೂರಿಗೆ ಖಾಸಗಿ ಅಧ್ಯಕ್ಷರು

ಜಗಳೂರು ಪುರಸಭೆಗೆ ಖಾಸಗಿ ಅಧ್ಯಕ್ಷರನ್ನು ಚುನಾಯಿಸಿಕೊಳ್ಳಲು ಸರಕಾರದವರು ಅನುಮತಿ ಕೊಟ್ಟಿದ್ದಾರೆ.

ಸಿಗರೇಟ್ ಮೊರೆ ಗುಪ್ತ ಕಾರ್ಯ

[illegible]

ಫ್ಯಾಸಿಸ್ಟ್ ಪಕ್ಷಕ್ಕೆ ಕೊಡಲಿ ಏಟು

ಉತ್ತರ ಇಟಲಿ ಪಟ್ಟಣಗಳಲ್ಲಿರುವ ಫ್ಯಾಸಿಸ್ಟ್ ಕಚೇರಿಗಳನ್ನು ಜನರು ಕಿತ್ತೊಗೆದು ಬೆಂಕಿ ಹಚ್ಚಿದರು. ಫ್ಯಾಸಿಸ್ಟ್ ಅಧಿಕಾರಿಗಳನ್ನೆಲ್ಲ ಕೆಲಸಗಳಿಂದ ವಜಾ ಮಾಡಲಾಗಿದೆ. ಉತ್ತರ ಇಟಲಿ ಜಿಲ್ಲೆಗಳಲ್ಲಿ ಇನ್ನೂ ಉಳಿದಿರುವ ಫ್ಯಾಸಿಸ್ಟ್ ಪ್ರಭಾವವನ್ನು ತೊಡೆದುಹಾಕಲು ಮಿತ್ರರ ಮಿಲಿಟರಿ ಸರ್ಕಾರದವರು ಜಾರಿಯಾದ ಕಾರ್ಯಕ್ರಮ ಕೈಗೊಂಡಿರುವುದೇ ಇದಕ್ಕೆ ಕಾರಣ.

ಶತ್ರುವಿಗೆ ಹೊಸ ವರ್ಷದ ಉಡುಗೊರೆ

ಬರ್ಲಿನ್ ನಗರದ ಮೇಲೆ ಮಿತ್ರರು ಹೊಸ ವರ್ಷದ ಹೊಸ ಧಾಳಿಯನ್ನು ಅತ್ಯಂತ ಯಶಸ್ವಿಯಾಗಿ ನಡೆಸಿದ್ದಾರೆ. ೧ ಸಾವಿರ ಟನ್ ಬಾಂಬುಗಳನ್ನು ಕೆಡವಲಾಯಿತು. [illegible] ಹಲವು ಕಡೆ ಬೆಂಕಿ ಹತ್ತಿಕೊಂಡಿದೆ. [illegible] ಈ ಧಾಳಿಯಲ್ಲಿ ೨೮ ಮಿತ್ರ ವಿಮಾನಗಳು ಹಿಂತಿರುಗಲಿಲ್ಲ.

ಜರ್ಮನ್ ವಿಮಾನ ನಾಶ

ಸ್ಕಾಟ್ಲೆಂಡ್ ಪ್ರದೇಶದ ಮೇಲೆ ಹಾರುತ್ತಿದ್ದ ಜರ್ಮನ್ ವಿಮಾನವೊಂದನ್ನು ಸ್ಪಿಟ್ ವಿಮಾನಗಳು ಹೊಡೆದುರುಳಿಸಿದವು. [illegible] ಜರ್ಮನ್ ವಿಮಾನವು ಧಾಳಿಗೆ ಪ್ರಾರಂಭಿಸಿದಾಗ ಸ್ಪಿಟ್ ವಿಮಾನವು ಅದರ ಮೇಲೆ ಗುಂಡು ಹಾರಿಸಿ ಕೆಳಕ್ಕುರುಳಿಸಿತು.

ಓರ್ಟೋನಾದಿಂದ ಇನ್ನೂ ಮುಂದಕ್ಕೆ

ಹೊಸ ವರ್ಷದ ಹಿಮ ಬಿರುಗಾಳಿಯಲ್ಲಿ ಬ್ರಿಟಿಷ್ ಸೈನ್ಯವು ಓರ್ಟೋನಾ ಬಳಿ ಹಳ್ಳಿಯೊಂದನ್ನು ಹಿಡಿದಿದೆ. ಈ ಹಳ್ಳಿಯನ್ನು ಜರ್ಮನರು ಬಲವಾಗಿ ಕಾದಿದ್ದರು.

ಸಾಧ್ವಿ

ರಾಜಧಾನಿಯ

ಸಾಪ್ತಾಹಿಕ ದಿನ ಪತ್ರಿಕೆ

ಪ್ರತಿದಿನವೂ ಪ್ರಕಟವಾಗುವುದು

ಕೂಡಲೇ ಚಂದಾದಾರರಾಗಿರಿ!

ಚಂದಾ ತಿಂಗಳಿಗೆ 0-೯-0 ಮಾತ್ರ

ಸಂವತ್ಸರಕ್ಕೆ ಮುಂಗಡ 1-0-0

ಜಾಹೀರಾತುಗಳಿಗೆ ಬರೆಯಿರಿ.

Edited, printed and published by A. R. Nagarajan at the Sadhvi Press, Dewan Road, Mysore

ಭಾರತ-ರಷ್ಯಾ ಮಾರ್ಗ

ಭಾರತದಿಂದ ರಷ್ಯಾಕ್ಕೆ ಪರ್ಷಿಯಾ ಮೂಲಕ ಸಂಪರ್ಕ ಮಾರ್ಗ ವನ್ನೇರ್ಪಡಿಸಿ ಅದಕ್ಕೆ ಪೂರ್ತಿ ವಹಿಸಿದ್ದಾರೆ. ಇದರ ಉದ್ದ ೬೦೦ ಮೈಲಿಗಳು. [illegible] ಪರ್ವತಗಳನ್ನು ಹಾದು ಹೋಗಬೇಕು.

ನಾಜಿ ಜನರಲ್ ಕೊಲೆ

ಸರ್ವಿಯಾದಲ್ಲಿ ಒಬ್ಬ ಜರ್ಮನ್ ಜನರಲ್ ಹಾಗೂ ಇಬ್ಬರು ಜರ್ಮನ್ ಅಧಿಕಾರಿಗಳು ಕಲಹ ಮಾಡಿದ ಸಡೆಸುತ್ತಿದ್ದಾಗ ಯಾರೋ ಗುಂಡು ಹಾರಿಸಿ ಜನರಲ್‌ನ ಕೊಲೆ ಮಾಡಿದ್ದಾರೆ. [illegible]

ಮಿತ್ರರ ವಿಜಯ

ಪೆಸಿಫಿಕ್ ಸಾಗರದಲ್ಲಿನ ನ್ಯೂಬ್ರಿಟನ್ ದ್ವೀಪದ ಹಲವು ಪ್ರದೇಶಗಳನ್ನು ಬ್ರಿಟಿಷ್ ಹಾಗೂ ಅಮೆರಿಕನ್ ಸೈನ್ಯಗಳು ವಶಪಡಿಸಿಕೊಂಡಿವೆ. [illegible]

ಇಟಲಿ ಹಣ ಕೆಟ್ಟಿದೆ

ಇಟಲಿ ಜನರಲ್ಲಿ ಹಣದ ತುಂಬಾ ತೊಂದರೆ ಉಂಟಾಗಿದೆ. [illegible]

ಉತ್ತರ ಸಮುದ್ರಕ್ಕೆ ಹೊಡೆತ

[illegible] ಉತ್ತರ ಸಮುದ್ರದಲ್ಲಿ ನೌಕಾದಳ ವಿಮಾನಗಳು ಧಾಳಿ ನಡೆಸಿ [illegible]

ಸ್ವೀಡನ್ ಹಿಡಿಯಲಾಯಿತು

[illegible] ಸ್ವೀಡನ್ ಪ್ರವೇಶಿಸಿದ್ದಾರೆ. [illegible]

ಅಮೆರಿಕ ಹಡಗು ಮುಳುಗಿತು

[illegible] ಅಮೆರಿಕ ಹಡಗು [illegible] ಮುಳುಗಿತು. [illegible]

ಪರ್ಷಿಯಾ ಹಳೇ ಅಕ್ಕಿ ಸಿಕ್ಕುತ್ತದೆ

ರಾಜಧಾನಿಯಲ್ಲಿ ಈಗ ಹೊಸ ಅಕ್ಕಿಯನ್ನು ಕೊಡಲಾಗುತ್ತಿದೆ. ಇದರಿಂದ ಬಾಲಕಿಯರಿಗೂ, ಬಸುರಿಯರಿಗೂ ಮತ್ತು ಬಾಣಂತಿಯರಿಗೆ ತೊಂದರೆಯಾಗಿದೆ. ಹಳೇ ಅಕ್ಕಿಯು ಸಿಕ್ಕದೆ ಪೇಚಾಡುತ್ತಿದ್ದಾರೆ. ಈ ವಿಷಯವನ್ನು ಕೇಳಲಾಗಿ ಸಿವಿಲ್ ಸಪ್ಲೈ ಅಧಿಕಾರಿಗಳು ಹೀಗೆ ತಿಳಿಸಿದ್ದಾರೆ—

ಇಂತಹ ಅಶಕ್ತರ ಮತ್ತು ರೋಗಿಗಳ ಉಪಯೋಗಕ್ಕಾಗಿಯೇ ಮುಂದಾಲೋಚನೆಯಿಂದ ಸಾಕಾದಷ್ಟು ಹಳೇ ಅಕ್ಕಿಯನ್ನು ದಾಸ್ತಾನು ಮಾಡಲಾಗಿದೆ. ಇದನ್ನು ಡಿಪೋಗಳಲ್ಲಿಯೂ ಇಟ್ಟು ವಿತರಿಸುವುದು ಕಷ್ಟ. ಯಾರಿಗೆ ನಿಜವಾಗಿ ಈ ತೊಂದರೆ ಇದೆಯೋ ಅವರೆಲ್ಲಾ ಚೀಫ್ ರೇಷನಿಂಗ್ ಆಫೀಸರಿಗೆ ಬರೆದುಕೊಂಡರೆ ಅಕ್ಕಿ ಕೊಡಲಾಗುತ್ತೆ. ಅಂತಹವರ ಕುಟುಂಬಕ್ಕೆ ಬೇಕಾಗುವ ಒಂದು ತಿಂಗಳ ಅಥವಾ ೩ ತಿಂಗಳ ಪೂರ್ತಿ ರೇಷನ್ ಅಕ್ಕಿಯನ್ನು ಒಟ್ಟಾಗಿ ಸೆಂಟ್ರಲ್ ಡಿಪೋವಿನಲ್ಲಿ ಕೊಡಲಾಗುತ್ತೆ. ಈ ವಿಷಯವನ್ನು ಒಬ್ಬರು ಮತ್ತೊಬ್ಬರಿಗೆ ತಿಳಿಸಿ ಎಲ್ಲರೂ ಈ ಸೌಕರ್ಯವನ್ನು ಪಡೆಯುವಂತೆ ಮಾಡಬೇಕಾಗಿ ವಿನಂತಿ

ಎ. ಎಸ್. ಸೂರ್ಯನಾರಾಯಣರಾವ್

ಮುನ್ಸಿಪಲ್ ಕೌನ್ಸಿಲರ್

ಗೆಸ್ಟಪೋ ಕಚೇರಿಯ ವರ್ಗ

ಜರ್ಮನ್ ಗೆಸ್ಟಪೋ ಕಚೇರಿಯನ್ನು ಬರ್ಲಿನ್ನಿಂದ [illegible] ಗೆಸ್ಟಪೋ ಕೇಂದ್ರ ಕಚೇರಿಯನ್ನು ಪ್ರೇಗ್ ಬಳಿ ಇರುವ [illegible] ಪ್ರದೇಶಕ್ಕೆ ವರ್ಗ ಮಾಡಲಾಗಿದೆ ಎಂದು ವರದಿಯಾಗಿದೆ.

ಸಿಗರೇಟ್ ಮೊರೆ ಎಲ್ಲಿ?

[illegible] ಸಿಗರೇಟ್ ಮೊರೆಗಳು [illegible] ಹೊರಟುಹೋಗಿವೆ ಎಂದು ವರ್ತಮಾನ ಬಂದಿದೆ.

ಪೆಟ್ರೋಲ್ ಕೂಪನ್ನುಗಳ ವಿಡುಗಡೆ

ಬೆಂಗಳೂರು ಜಿಲ್ಲೆಯಲ್ಲಿ ಬಂಧಿಸಲ್ಪಟ್ಟಿದ್ದ ೪೯ ಜನ ಕಾಂಗ್ರೆಸ್ ಪೆಟ್ರೋಲ್ ಕೂಪನ್ನುಗಳನ್ನು [illegible] ಬಿಡುಗಡೆ ಮಾಡಿದ್ದಾರೆ.

ಮಹಿಳೆಯರ ಮೇಲಿನ ಆಜ್ಞೆ

ವಿದ್ಯಾ ಇಲಾಖೆಗೆ ಸೇರಿದ ಶಿಕ್ಷಕಿಯರಿಗೆ ಭಾರತಕ್ಕೆ [illegible] ಆಜ್ಞೆಯನ್ನು ಈಗ ಸ್ವಲ್ಪ ಸಡಿಲಿಸಲಾಗಿದೆ ಎಂದು ಪ್ರಕಟಿಸಿದ್ದಾರೆ.

ಸ್ತ್ರೀಯರ ಸೌಂದರ್ಯಕ್ಕಾಗಿ

ಹೆಂಗಸರ ಸೌಂದರ್ಯಕ್ಕಾಗಿ [illegible]

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲಿ ಬ್ರಾಂಡ್ ಸ್ನಾನ ಪುಡಿ

ಪತ್ರ ವ್ಯವಹಾರ

ಬಿ. ಪುಟ್ಟಣ್ಣ, ದಿವಾನ್ ಮಂಟಿ, ದೇವರಾಜ ಮಾರ್ಕೆಟ್, ಮೈಸೂರು

[illegible]

ಸಂಪುಟ ೨] ಬುಧವಾರ ೫--೧--೪೪ [ಸಂಚಿಕೆ ೧೪೫

ಬಲ್ಗೇರಿಯಾ ಸರ್ಕಾರ ಪತನವಾಯಿತೇ?

ರಷ್ಯನರು ಪೋಲೆಂಡ್ ಗಡಿಯನ್ನು ದಾಟಿದರು

ಅಮೆರಿಕದಲ್ಲಿ ನಾಜಿ ಸರ್ಕಾರ ಸ್ಥಾಪಿಸಲು ಒಳಸಂಚು

ಅರಮನೆ ಮೇಲಿನ ದಾವಾ ತಿರಸ್ಕರಿಸಲಾಯಿತು

ಸ್ವಂ. ವ.] ಮೈಸೂರು ೫

ರಾಜಧಾನಿಯ ಆರ್ಟಿಸ್ಟ್ ಶ್ರೀ ಕೆ ವೆಂಕಟಪ್ಪನವರು ದಿವಂಗತರಾದ ಶ್ರೀ ನಾಲ್ವಡಿ ಕೃಷ್ಣರಾಜೇಂದ್ರ ಒಡೆಯರವರು ಹಲವು ಚಿತ್ರಗಳನ್ನು ಬರೆಯಲು ತಮಗೆ ಆಜ್ಞೆ ಮಾಡಿದ್ದರೆಂದೂ, ಅವುಗಳು ಮುಗಿಯುವುದರೊಳಗೆ ಅವರು ಸ್ವರ್ಗಸ್ಥರಾಗಿ, ಈಗ ಚಿತ್ರಗಳನ್ನು ಅರಮನೆಯವರು ನಿರಾಕರಿಸಿದರೆಂದೂ, ಆ ಬಗ್ಗೆ ತಮಗೆ ೪೦ ಸಾವಿರ ರೂ. ಬರಬೇಕೆಂದೂ ಮೈಸೂರು ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ದಾವಾ ಹೂಡಿದ್ದ ಮೊಕದ್ದಮೆಯನ್ನು ವಜಾ ಮಾಡಿದ್ದರು.

ಈ ಅರ್ಜಿಯನ್ನು ಸ್ವೀಕರಿಸಬೇಕೇ ಬೇಡವೇ ಎಂಬುದರ ಮೇಲೆ ದೀರ್ಘವಾಗಿ ವಾದವಿವಾದ ನಡೆದು, ಜಿಲ್ಲಾ ನ್ಯಾಯಾಧೀಶರಾದ ಶ್ರೀ ಹೆಚ್ ವಿ. ನಾರಾಯಣರಾಯರು ಅದನ್ನು ನಿರಾಕರಿಸಿದರು.

ಉಪಾಧ್ಯಕ್ಷರ ಚುನಾವಣೆ

ರಾಜಧಾನಿಯ ಪೌರಸಭೆಗೆ ಉಪಾಧ್ಯಕ್ಷರನ್ನು ಚುನಾಯಿಸುವುದಕ್ಕಾಗಿ ಈ ತಿಂಗಳು ೨೦ ನೇ ತಾ॥ ಮಧ್ಯಾಹ್ನ ಪೌರಸಭೆಯ ವಿಶೇಷ ಮೀಟಿಂಗು ನಡೆಯುತ್ತದೆ.

ಸೈಕಲ್ ಮೇ॥ ಲಾರಿ ಡಿಕ್ಕಿ

ಬೆಂಗಳೂರು ೪

ಈ ದಿನ ಬೆಳಗ್ಗೆ ಸಿಟಿ ಮಾರ್ಕೆಟ್ ಚೌಕದ ಬಳಿ ಒಂದು ಲಾರಿ ಒಬ್ಬ ಸೈಕಲ್ ಮೇಲೆ ಹೋಗುತ್ತಿದ್ದವನೊಬ್ಬನಿಗೆ ಡಿಕ್ಕಿ ಹೊಡೆದುದರ ಪರಿಣಾಮವಾಗಿ, ಸೈಕಲ್ ಸವಾರನಿಗೆ ತೀವ್ರ ಗಾಯಗಳಾಗಿ ಆಸ್ಪತ್ರೆಗೆ ಒಯ್ಯಲ್ಪಟ್ಟನು. ಸೈಕಲ್ಲಿನ ಕೆಲವು ಭಾಗಗಳು ಚೂರು ಚೂರಾಗಿವೆ.

ಕರ್ಣಾಟಕ ವಿಶ್ವವಿದ್ಯಾನಿಲಯ ಬೇಕು

ಕರ್ಣಾಟಕ ವಾಣಿಜ್ಯ ಸಂಘದ ವಾರ್ಷಿಕ ಸಭೆಯು ಗದಗಿನಲ್ಲಿ ರಾವ್ ಬಹದ್ದೂರ್ ವೈ ಮಹಾಬಲೇಶ್ವರಪ್ಪನವರ ಅಧ್ಯಕ್ಷತೆಯಲ್ಲಿ ನಡೆದು, ರಾಜಕೀಯ ಬಂಧಿಗಳನ್ನು ಕೂಡಲೇ ಬಿಡುಗಡೆ ಮಾಡಿ ರಾಷ್ಟ್ರೀಯ ಸರ್ಕಾರವನ್ನು ರಚಿಸಬೇಕೆಂದು ಒತ್ತಾಯಪಡಿಸುವ ನಿರ್ಣಯವು ಅಂಗೀಕಾರವಾಯಿತು. ಕರ್ಣಾಟಕಕ್ಕೆ ಪ್ರತ್ಯೇಕ ವಿಶ್ವವಿದ್ಯಾನಿಲಯವಾಗಬೇಕೆಂದೂ ತೀರ್ಮಾನಿಸಲಾಯಿತು.

ಡಕಾಯಿತರೊಡನೆ ಹೋರಾಟ

ಅಹಮದಾಬಾದಿನ ನವಾಬ್ ಸಾ ಬಸ್ತಿ[illegible] ಹಳ್ಳಿಯೊಂದರೊಳಕ್ಕೆ ಡಕಾಯಿತರ ಗುಂಪೊಂದು ನಗ್ನ ಖಡ್ಗ ಆಯುಧಗಳಿಂದ ಗ್ರಾಮಸ್ಥರನ್ನು ಬೆದರಿಸಿ ಲೂಟಿ ಮಾಡಲಾರಂಭಿಸಿತು. ಗ್ರಾಮಸ್ಥರ ಬೆದರಿಕೊಂಡು ಓಡಿಹೋಗದೆ ಎರಡು ಗಂಟೆ ಲೂಟಿಗಾರರೊಡನೆ ಧೈರ್ಯದಿಂದ ಹೋರಾಟ ನಡೆಸಿದರು. ಡಕಾಯಿತರ ಬಳಿ ಇದ್ದ ಎರಡು ಬಂದೂಕಗಳನ್ನು ಗ್ರಾಮಸ್ಥರು ಕಿತ್ತುಕೊಂಡರು. ಈ ಹೋರಾಟದಲ್ಲಿ ನಾಲ್ಕು ಮಂದಿ ಗ್ರಾಮಸ್ಥರಿಗೆ ತೀವ್ರ ಗಾಯಗಳಾದವು. ಡಕಾಯಿತರು ಒಂದು ದಿನಗಳ ಪಂಕ್ತಿಸಿದ[illegible] ಹೊರಟರು.

ವ್ಯಾಪಾರಸಂಘದ ಅಧ್ಯಕ್ಷರಿಗೆ ಗುಂಡಿನೇಟು

ಬಂಗಾಳಾ ಸೆಂಟ್ರಲ್ ವ್ಯಾಪಾರ ಸಂಘದ ಮಾಜಿ ಅಧ್ಯಕ್ಷರಾದ ಮಾಣಿಕಲಾಲ್ ನಾಗ್ ಎಂಬುವರು ಕಲ್ಕತ್ತೆಯ ತಮ್ಮ ಅಂಗಡಿಯಿಂದ ವ್ಯಾಪಾರ ಮುಗಿಸಿಕೊಂಡು ಮನೆಗೆ ಹೋಗುತ್ತಿದ್ದಾಗ ಯಾರೋ ದುರಾತ್ಮರು ಅವರ ಮೇಲೆ ಗುಂಡು ಹಾರಿಸಿ ಹೊರಟುಹೋದರು. ಪೆಟ್ಟು ತಿಂದವರನ್ನು ಕೂಡಲೇ ಆಸ್ಪತ್ರೆಗೆ ಸಾಗಿಸಲಾಯಿತು, ಚಿಕಿತ್ಸೆ ಫಲಕಾರಿಯಾಗದೆ ಅವರು ಮರಣ ಹೊಂದಿದರು.

ಕೋಮುವಾರು ಕಲಹ - ನೂರು ಮರಣ

ಥ ಸನಾರ ಪೇಷಾವ[illegible] ಪರಿಪ್ರದೇಶದಲ್ಲಿ ಮೊಹರಂ ಉತ್ಸವ ಮತ್ತು ಗುರು ಗೋವಿಂದ ಉತ್ಸವ ನಡೆದಾಗ ಕೋಮು ಗಲಭೆ ಉಂಟಾಗಿ ನೂರು ಮಂದಿ ಮಡಿದರು. ಈಗ ಪರಿಸ್ಥಿತಿಯನ್ನು ಹತೋಟಿಗೆ ತರಲಾಗಿದೆ. ಪತ್ರಿಕೆಯ ಪ್ರತಿನಿಧಿ[illegible] ಬೆಂಗಳೂರು[illegible] ಇತರ ಅಧಿಕಾರಿಗಳೂ ಸ್ಥಳಕ್ಕೆ ಹೋಗಿ ತನಿಖೆ ನಡೆಸುತ್ತಿದ್ದಾರೆ.

ಯುದ್ಧ ಕಾರ್ಯಕ್ಕೆ ೫ ಕೋಟಿ ರೂ. ಬೆಂಬಲ

ಬರಾರ್ ಗೌರ್ನರರು ಡಾಲ್ಮಿಯಾ ನಗರಕ್ಕೆ ಭೇಟಿ ಕೊಟ್ಟಾಗ ಅಲ್ಲಿನ ಕೈಗಾರಿಕಾ ಕಾರ್ಖಾನೆಯ ಮಾಲೀಕರಾದ ಶ್ರೀ ಎಸ್ ಪಿ ಜೈನ್ ಅವರು ಒಂದು ಕೋಟಿ ರೂಪಾಯಿಗಳನ್ನು ಕೊಟ್ಟು ವಾರ್ ಬಾಂಡುಗಳನ್ನು ಕೊಂಡರು. [illegible] ಡಾಲ್ಮಿಯಾರವರು ಹಿಂದೆ ನಾಲ್ಕು ಕೋಟಿ ರೂಪಾಯಿಗಳ ಬಾಂಡ್ ಕೊಂಡಿದ್ದರು. ಡಾಲ್ಮಿಯಾ ನಗರ ಒಂದರಿಂದಲೇ ೫ ಕೋಟಿ ರೂಪಾಯಿಗಳು ಯುದ್ಧ ಕಾರ್ಯಗಳಿಗೆ ಒದಗಿದೆ.

ರೂಸ್‌ವೆಲ್ಟರ ದೇಹಸ್ಥಿತಿ

ಅಧ್ಯಕ್ಷ ರೂಸ್‌ವೆಲ್ಟರ [illegible] ನೆಗಡಿಯಿಂದ ನರಳುತ್ತಿದ್ದು ಈಗ ಆರೋಗ್ಯ ಹೊಂದುತ್ತಿದ್ದಾರೆ. [illegible] ದಲಿರುವ [illegible] ಸ್ಥಿತಿ ಅನುಕೂಲಕರ [illegible] ಸಮಾಧಾನಕರವಾಗಿದೆ

ರಷ್ಯನರು ಹಳೇ ಪೋಲೆಂಡ್ ಗಡಿ ದಾಟಿದರು

ಹಳೆಯ ಪೋಲೆಂಡ್ ಗಡಿಯನ್ನು ಹಲವು ಭಾಗಗಳಲ್ಲಿ ರಷಿಯನ್ ಸೈನಿಕರು ದಾಟಿದರೆಂದು ವರದಿಯಾಗಿದೆ

ಗೋಬೆಲ್ಸ್‌ನ ಖೈದೆ?

ಬ್ರಿಟಿಷ್ ೫ ನೇ ಸೇನೆ ಗೋಬೆಲ್ಸ್ ಎಂಬೊಬ್ಬನನ್ನು ಸೆರೆ ಹಿಡಿದಿರುವುದಾಗಿ ಅಲ್‌ಜಿಯರ್ಸ್ ರೇಡಿಯೋ ಹೇಳಿದೆ. ಜರ್ಮನಿ ಪ್ರಚಾರಮಂತ್ರಿ ಹೆಸರೂ ಗೋಬೆಲ್ಸ್ ಎಂಬುದಾಗಿ ಆದರೆ ಸೆರೆ ಸಿಕ್ಕಿರುವಾತ ಯಾರೆಂಬ ಬಗ್ಗೆ ವಿವರಗಳು ಹೊರಬಿದ್ದಿಲ್ಲ

ಹಿಟ್ಲರ್ ಬಂದಿಯೆ?

ಕೆಲವು ದಿನಗಳ ಹಿಂದೆ ಹಿಟ್ಲರ್ ಎಂಬೊಬ್ಬನನ್ನು ಹಿಡಿಯಲಾಯಿತೆಂದು ವರದಿಯಾಗಿದೆ. ಆದರೆ ಈ ಹಿಟ್ಲರ್ ಯಾರೆಂಬ ಬಗ್ಗೆ ಇನ್ನೂ ಗೊತ್ತಾಗಿಲ್ಲ

ಮುಸೋಲಿನಿ ವೈಭವದ ವಿಮಾನ ಮಿತ್ರರ ಬಳಿ

ಮುಸೋಲಿನಿಯು ತನ್ನ ಸಂಚಾರಕ್ಕಾಗಿ ಉಪಯೋಗಿಸಿಕೊಳ್ಳುತ್ತಿದ್ದ ವಿಶೇಷ ರೀತಿಯ ಫ್ಲೈಯಿಂಗ್ ಬೋಟ್ (ಹಕ್ಕಿಯ ಹಾರುವಿಕೆಯನ್ನು ಚುರುಕಾಗಿ ಓಡಬಲ್ಲ ವಿಮಾನ) ಈಗ ಆಫ್ರಿಕಾ ತೀರದ ಮಿತ್ರ ವೈಮಾನಿಕರ ಉಪಯೋಗದಲ್ಲಿದೆ. ಅದನ್ನು ಇಟಲಿಯ ವೈಮಾನಿಕರೇ ಮಿತ್ರ ದಳದವರೊಡನೆ ಒಪ್ಪಂದದ ಮೇರೆಗೂ ನಡೆಸಿಕೊಡುತ್ತಿದ್ದಾರೆ.

ಬಲ್ಗೇರಿಯಾ ಪರಿಸ್ಥಿತಿ

ಬಲ್ಗೇರಿಯಾದಿಂದ ಟೆಲಿಫೋನ್ ಮತ್ತು ಟೆಲಿಗ್ರಾಫ್ ಸಂಬಂಧವನ್ನು ಭಾನುವಾರದಿಂದ ಕತ್ತರಿಸಲಾಗಿದೆಯೆಂದು ಸಮಾಚಾರ. ಬಲ್ಗೇರಿಯಾದಲ್ಲಿ ರಾಜಪ್ರತಿನಿಧಿ ನೂತನ ಮಂತ್ರಿಮಂಡಲವು [illegible] ಅಧಿಕಾರವನ್ನು ಕೈಗೆ ತೆಗೆದುಕೊಂಡಿದೆ. ವರದಿಯಾಗಿದೆ

ವಿಮಾನ ಹಂತ-ಗೊತ್ತಿಲ್ಲದೆಡೆಗೆ

[illegible] ವಿಮಾನ ತಂಡವು [illegible] ಹಾರಿಹೋಯಿತು [illegible] ವಿಮಾನ [illegible] ಎಲ್ಲಿಗೆ ಪ್ರಯಾಣ ಬೆಳೆಸಿತೆಂಬುದು ಗೊತ್ತಾಗಿಲ್ಲ

ಅಮೆರಿಕಾದಲ್ಲಿ ಒಳಸಂಚು

ಅಮೆರಿಕದಲ್ಲಿ ನಾಜಿ ರೀತಿಯ ಸರ್ಕಾರ ಸ್ಥಾಪನೆಗೆ ಬೆಂಬಲ ಕೊಡಲು ಒಳಸಂಚು ನಡೆಯಿತೆಂದು, ಫೆಡರಲ್ ಜ್ಯೂರಿ ಮಂಡಲಿಯವರು ಒಟ್ಟು ೩೦ ಜನರ ಮೇಲೆ ಮೊಕದ್ದಮೆ ಹೂಡಿದ್ದಾರೆ. ಆ ಪೈಕಿ ೨೯ ಮಂದಿ ಹಿಂದೊಂದು ಬಾರಿ ಸರ್ಕಾರಕ್ಕೆ ವಿರುದ್ಧವಾಗಿ ವರ್ತಿಸಿದವರು. ಈ ಮೂವತ್ತರ ಗುಂಪಿನಲ್ಲಿ ಇಬ್ಬರು ಹೆಂಗಸರೂ ಇರುವರು

ಲಂಡನ್ ಸಮ್ಮೇಳನದ ಒತ್ತಾಯ

ಇಂಡಿಯಾ ರಾಜಕೀಯ ಪರಿಸ್ಥಿತಿಯ ಬಗ್ಗೆ ಬ್ರಿಟಿಷರ ನೀತಿಯು ಬದಲಾವಣೆಯಾಗಬೇಕೆಂದೂ, ಇಂಡಿಯಾ ಆಫೀಸಿನಿಂದ ಮಿ॥ ಅಮೆರಿಯವರನ್ನು ತೆಗೆದುಹಾಕಬೇಕೆಂದೂ ಮತ್ತು ಕಾಂಗ್ರೆಸ್ ಮುಖಂಡರ ಬಿಡುಗಡೆಯಾಗಬೇಕೆಂದೂ ಒತ್ತಾಯಪಡಿಸುವ ನಿರ್ಣಯವು ಲಂಡನ್ ವಿಶ್ವವಿದ್ಯಾನಿಲಯದ ಲೇಬರ್ ಫೆಡರೇಷನ್ನಿನ ವಾರ್ಷಿಕ ಸಮ್ಮೇಳನದಲ್ಲಿ ತೀರ್ಮಾನವಾಯಿತು

ಡಿಸೆಂಬರಿನಲ್ಲಿ ಮಿತ್ರರ ನೌಕಾ ನಷ್ಟ

ಕಳೆದ ಡಿಸೆಂಬರ್ ತಿಂಗಳಿನಲ್ಲಿ ಜರ್ಮನರು ಮಿತ್ರ ಪಕ್ಷದವರ ೧೪೪,೩೦೦ ಟನ್ನುಗಳಷ್ಟು ನೌಕೆಗಳನ್ನು ಮುಳುಗಿಸಿರುವರೆಂದು ವರದಿಯಾಗಿದೆ. ಅಕ್ಟೋಬರ್ ನವೆಂಬರ್ ತಿಂಗಳಿನಲ್ಲಿ ಮುಳುಗಿಸಿದುದಕ್ಕಿಂತ ಡಿಸೆಂಬರಿನಲ್ಲಿ ಅರ್ಧ ಪಾಲು ಕಡಿಮೆಯಾಗಿರುವುದಾಗಿ ತಿಳಿಯಬರುತ್ತೆ.

ಲಾರಿ ಏಟಿನ ತನಿಖೆ ಆಗಬೇಕು

ಕಲ್ಕತ್ತಾದ [illegible] ಸಂಘದವರು ವೈಸ್ರಾಯರಿಗೆ ಬಂದ ತಂತಿಯನ್ನು ಕಳುಹಿಸುತ್ತಾ ಅಮೃತಸರದಲ್ಲಿ ನಡೆದ ಹಿಂದೂ ಮಹಾಸಭಾ ಮೆರವಣಿಗೆಯ ಮೇಲೆ ಪೋಲೀಸರು ಲಾಠಿ ಪ್ರಹಾರ ನಡೆಸಿ ಸುಮಾರು ೨೦೦ ಜನಗಳಿಗೆ ಗಾಯಗಳಾದ್ದರಿಂದ, ಈ ಬಗ್ಗೆ ಒಂದು ಪರಿಶೀಲನಾ ಸಮಿತಿಯನ್ನು ನೇಮಿಸಬೇಕೆಂದು ಒತ್ತಾಯಪಡಿಸಿದ್ದಾರೆ. ಈ ಲಾಠಿ ಪ್ರಕರಣದಿಂದ ಹಿಂದೂಗಳ ಮನಸ್ಸಿನಲ್ಲಿ ಅಶಾಂತತೆಯುಂಟಾಗಿದೆಯೆಂದು ತಿಳಿಸಿದ್ದಾರೆ.

ಸಾಮ್ರಾಟತ್ವ ಸ್ಥಾಪಿಸಲು ಮಿತ್ರರಾಷ್ಟ್ರಗಳ ಹಂಚಿಕೆ

ಯುದ್ಧಾನಂತರ ಬ್ರಿಟನ್, ರಷಿಯಾ ಮತ್ತು ಅಮೆರಿಕ ದೇಶಗಳು ಪೂರ್ವ ದೇಶಗಳನ್ನು ತಮ್ಮ ಆಳ್ವಿಕೆಯಲ್ಲಿ ಇಟ್ಟುಕೊಳ್ಳುವುದಾಗಿ ಅಮೆರಿಕನ್ ಸೆನೆಟರ್ ಜಾನ್‌ಸನ್‌ರವರು ತಿಳಿಸಿದ್ದಾರೆ. ಯುದ್ಧಾನಂತರ ಎಲ್ಲಾ ದೇಶಗಳಲ್ಲೂ ತಮ್ಮ ಸಾಮ್ರಾಟತ್ವವನ್ನು ಸ್ಥಾಪಿಸಲು ಮಿತ್ರರಾಷ್ಟ್ರಗಳು [illegible]

ಇಂಡಿಯಾ, ಚೀಣಾ ಮತ್ತು ಬರ್ಮಾಕ್ಕೆ ಬೇರ್ಪಟ್ಟ ಕಮ್ಯಾಂಡು

[illegible] ವರನ್ನು ಇಂಡಿಯಾ, ಚೀಣಾ ಮತ್ತು ಬರ್ಮಾ ರಂಗಗಳ ಬೇರ್ಪಟ್ಟ ಕಮ್ಯಾಂಡರನ್ನಾಗಿ ನೇಮಿಸಲಾಗಿದೆ [illegible] ಜನರಲ್ ಸ್ಟಿಲ್‌ವೆಲ್ [illegible] ಎಂದು ಪ್ರಕಟಿಸಲಾಗಿದೆ

ಅವಿವಾಹಿತನ ಸೋಗು ಹಾಕಿದ ಆಸಾಮಿ

ಚನ್ನಪಟ್ಟಣ ತಾಲ್ಲೂಕಿನ ಸೋಗಲು ಗ್ರಾಮದ ಖಲೀಲುದ್ದೀನ್ ಉರುಫ್ ಬಾಬಾಸಾಹೇಬ್ ಎಂಬುವನು ಗರ್ಭಿಣಿಯೊಬ್ಬಳಿಗೆ ಎಕರೆಗೆ ಒಂದು ನೂರು ರೂ. ಗಳಂತೆ ೧೦ ಎಕರೆ ಜಮೀನು ಕೊಡಿಸುವುದಾಗಿಯೂ, ತಾನೊಬ್ಬ ಸರ್ಕಾರೀ ಅಮಲ್ದಾರನೆಂದೂ ಸುಳ್ಳು ಹೇಳಿ, ತನ್ನ ಬಳಿಗೆ ಬಿದ್ದವರನ್ನು ಬೆಂಗಳೂರು ಬದಲಾ ಕಛೇರಿಗೆ ಬೇಗ ಕರೆತಂದು, ಒಬ್ಬ ಮೊಬಲಗಿನ ಆರ್ಡರ್ ಕಿವ್ಯತ್ತು ಕಟ್ಟಬೇಕಾಗಿದೆಯೆಂದು ಹೇಳಿ ೭೫೦ ರೂ. ಗಳನ್ನು ಸ್ಟಾಂಪು ಮತ್ತು ಗುಮಾಸ್ತರಿಗೆ ಕೊಡಬೇಕಾಗುವ ಹಣ ಎಂದು ಕೇಳಿ ೧೪ ರೂ. ಗಳನ್ನು ಒಟ್ಟು ೭೬೪ ರೂ. ಗಳನ್ನು ಇಸಿದುಕೊಂಡ. ಅವಕ್ಕೆ ಪ್ರತಿಯಾಗಿ ಬೇರೊಬ್ಬ ಕವಿ [illegible] ಆರ್ಡರಿನಂತೆ [illegible] ಸುಳ್ಳು ಆರ್ಡರುಗಳನ್ನು ಅವರಿಗೆ [illegible] ಮಾಡಿ [illegible] ದರ್ಖಾಸ್ತುಗಳಲ್ಲಿ ಇದೇ ಬೆಲೆಗೆ ಜಮೀನುಗಳನ್ನು ಕೊಡಿಸುವುದಾಗಿ ಹೇಳಿ ಈ ಮೋಸ ನಡೆಸಿರುವನು. ಇದಕ್ಕಾಗಿ ೧೦ ದಿವಸ [illegible] ನಡೆಸಿಕೊಂಡಿದ್ದನಂತೆ. ಇನ್ನು ಈ ಬಗ್ಗೆ ಬೆಂಗಳೂರು ಪೋಲೀಸರಿಗೆ [illegible] ಬಂದಿತು. ಅಪರಾಧಿಯ ಮೇಲೆ ಚಾರ್ಜ್‌ಶೀಟ್ ಹಾಕಲಾಗಿದೆ. ಅಲ್ಲದೆ [illegible] ಪೋಲೀಸರು ಅಪರಾಧಿತನನ್ನು ಪತ್ತೆ ಹಚ್ಚಲು ಪ್ರಯತ್ನಿಸುತ್ತಿರುವರು.

ನಾಟಿ ರಾಗಿ ಬೆಳೆ

ಬೇಗ ನಾಟಿ ರಾಗಿ ಬೆಳೆಗೆ ಜಮೀನನ್ನು ಸರಿಪಡಿಸಿಕೊಂಡು ಒಟ್ಟು ಬೆಳೆಯ ಕೊಳ್ಳುವಿಕೆಗೆ ಈಗಿನಿಂದಲೇ ಆಲೋಚನೆ ಮಾಡಬೇಕು. ವ್ಯವಸಾಯದ ಇಲಾಖೆಯಿಂದ ನಾಟಿ ರಾಗಿ ಬೆಳೆಯುವ ವಿವರಗಳನ್ನು ಕೊಡುವ ಹಸ್ತಪತ್ರಿಕೆಯೊಂದು ಪ್ರಕಟವಾಗಿದೆ. ರೈತರು ತಮ್ಮ ಸಮೀಪದ ತಾಲ್ಲೂಕು ವ್ಯವಸಾಯದ ಇಲಾಖೆಯವರನ್ನು ಕೇಳಿ ವಿವರಗಳನ್ನು ತಿಳಿದುಕೊಳ್ಳಬಹುದು. ಸಕಾಲದಲ್ಲಿ ಆಗತಕ್ಕ ಬೆಳೆಗಳನ್ನು ಬೆಳೆದು ಆಹಾರದ ಮುಗ್ಗಟ್ಟನ್ನು ಪರಿಹರಿಸಲು ಪ್ರಯತ್ನಿಸುವುದು ಎಲ್ಲರ ಕರ್ತವ್ಯ.

ಅಮೆರಿಕಾ ತುಂಟರಿಗೆ ಭಾರಿ ಶಿಕ್ಷೆ

ಅಮೇರಿಕಾ ಚಲನ ಚಿತ್ರ ಸಂಸ್ಥೆಗಳವರಿಂದ ಅನ್ಯಾಯವಾಗಿ ಹಣ ಇಸಿದುಕೊಳ್ಳಬೇಕೆಂದು ಸಂಚು ನಡೆಸಿದರೆಂಬ ಕಾರಣಕ್ಕಾಗಿ ನ್ಯೂಯಾರ್ಕ್ಸಿನಲ್ಲಿ ಒಂದು ಗ್ಯಾಂಗ್‌ಸ್ಟರ್ ಗುಂಪಿಗೆ ಸೇರಿದವರನ್ನು ಸರೆಹಿಡಿಯಲಾಗಿತ್ತು. ಒಬ್ಬೊಬ್ಬರಿಗೂ ೧೦ ವರ್ಷ ಸಜ ವಿಧಿಸಲಾಗಿದೆ. ೭ ನೆಯವನಿಗೆ ಮಾತ್ರ ೭ ವರ್ಷ ಸಜ ಜೊತೆಗೆ ಎಲ್ಲರೂ ಪ್ರತಿ ಒಂದಕ್ಕೆ ೧೦ ಸಾವಿರ ಡಾಲರ್ ದಂಡವನ್ನು ವಿಧಿಸಲಾಗಿದೆ.

ಪೋಲೆಂಡ್ ಪ್ರವೇಶ

[illegible] ಗಡಿ ಕಡೆಗೆ ಮುಂದುವರಿದ [illegible] ರಷ್ಯ ಪಡೆ [illegible] [illegible] [illegible]

ಚಾಮರಾಜನಗರದಲ್ಲಿ ಆಹಾರ ಪರಿಸ್ಥಿತಿ

ಸರ್ಕಾರಿ ಡಿಪೋ ಹೋಗಿ ಮ್ಯುನಿಸಿಪಲ್ ಡಿಪೋಗಳಾದುವು. ಪರಿಸ್ಥಿತಿ ಸರಿ ಹೋಗಬಹುದೆಂದು ಜನ ನಿರೀಕ್ಷಿಸಿದ್ದರು. ಆದರೂ ಸಫಲವಾಗಲಿಲ್ಲ. ಕೊಂದರೆ ತಪ್ಪುವ ದಾರಿಯಿಲ್ಲ. ಸರಬರಾಜೇ ಅವ್ಯವಸ್ಥೆಗೀಡಾಗಿದೆ. ಮನೆ ಒಂದಕ್ಕೆ ನಾಲ್ಕಾಣೆ ಅಕ್ಕಿ ಅಥವಾ ಜೋಳ. ಮನೆಯಲ್ಲಿ ಇಬ್ಬರಿದ್ದರೂ ಅಷ್ಟೆ ೨೦ ಜನರಿದ್ದರೂ ಅಷ್ಟೆ. ಒಂದೆ ಈ ರೀತಿ ಹಂಚಿಕೆ ಅಸಂಬದ್ಧವೆಂದು ಜಿಲ್ಲಾಧಿಕಾರಿಗಳೇ ಹೇಳಿದ್ದರು. ಅದರೂ ಬದಲಾವಣೆಯಾಗಲಿಲ್ಲ. ಜನಗಳು ಗಂಟೆಗಟ್ಟಲೆ ಕಾಯುವ ತೊಂದರೆ ಹೇಳತೀರದು.

ಮ್ಯುನಿಸಿಪಲ್ ಡಿಪೋಗಳು ಇಷ್ಟ ಬಂದಾಗ ತೆರೆದಿರುತ್ತವೆ. ಇಷ್ಟವಿಲ್ಲದಿದ್ದರೆ ಬೀಗ ಹಾಕಿದ್ದು. ನಮ್ಮ ಪೌರಸಭೆಯವರನ್ನು ಕೇಳಿದರೆ ಸರಬರಾಜಿಲ್ಲವೆಂದು ಒಂದೇ ಮಾತು ಹೇಳಿಬಿಡುತ್ತಾರೆ. ನಮ್ಮ ಸರ್ಕಾರದವರಿಗೆ ಇಂತಹ ಊರುಗಳು ಕಾಣುವುದಿಲ್ಲವೋ ಏನೋ! ಜನಗಳನ್ನು ಕತ್ತರಿಸಿದ್ದಾರೆ. ಚುನಾವಣೆ ಸಮೀಪಿಸುತ್ತಿದ್ದರೂ ಪೌರಸಭಾ ಸದಸ್ಯರ ತಲೆಯೇ ಕಾಣೆನೆಂದು ಮುಂದೆ ಚುನಾವಣೆಯ ಮೇಲೆ ನಿಲ್ಲುವ ಜನಸೇವಕರು ಇಂದೇಕೆ ನಿಲ್ಲಸಲಾರರು?

ಅಧಿಕಾರಿಗಳನ್ನು ಅಕ್ಕಿ ಕೇಳಿದರೆ ಬಟ್ಟೆ ತೆಗೆದುಕೊಳ್ಳಿ ಎನ್ನುತ್ತಾರೆ. ಊಟವೇ ಇಲ್ಲದೇ ಬಟ್ಟೆ ಯೋಚನೆ.

ಅಲ್ಪಸ್ವಲ್ಪ ಜನ ಹೋಟೆಲುಗಳಲ್ಲಿ ತಿಂದು ಜೀವಿಸುತ್ತಿದ್ದರೂ, ಈಗ ಅವರಿಗೂ ಅನ್ಯಾಯವಾದ ನಮ್ಮ ಪೌರಸಭೆಯವರ ಹಂಚಿಕೆಯ ದಾಳಿ. ಇಂದೋ ನಾಳೆಯೋ ಹೋಟೆಲುಗಳೂ ಮುಚ್ಚಲ್ಪಡಬಹುದು. ಆ ಮೇಲೆ ಪ್ರವಾಸಿ ಹೋಟೆಲುಗಳನ್ನು ತೆಗೆದಿಟ್ಟು ಕೇಳಿಕೊಳ್ಳುವ ನಗೆಗೀಡಾಗದಿರಲಿ.

ಸಾಧ್ಯವಾದರೆ ನಡೆಸಲಿ, ಸರಬರಾಜಿಲ್ಲದಿದ್ದರೆ ಕಾರ್ಡುದಾರರಿಗೇ ವಹಿಸಲಿ. ಎರಡೂ ಇಲ್ಲದೆ ಗಂಡ ಹೆಂಡಿರ ಜಗಳದಲ್ಲಿ ಮಗು ಬಡವಾಗುವ ಹಾಗೆ ಕೈಹಾಕ ಬಾರದೆಂಬ ಹಿತೋಕ್ತಿ ತಿಳಿಸಬಯಸುತ್ತೇನೆ.

—ಪ್ರಜಾ ಹಿತೈಷಿ.

ಸಬ್‌ಮೆರೀನ್ ಎದುರಿಸಲು ಶಿಕ್ಷಣ

ಭಾರತ ನೌಕಾ ಪಡೆಯವರು ಭಾರತದಲ್ಲೇ ಒಂದು ಸ್ಥಳದಲ್ಲಿ ಶತ್ರು ಜಲಾಂತರ್ಗಾಮಿಗಳನ್ನು ಎದುರಿಸಲು ಹೋರಾಡಬೇಕಾದ ಬಗ್ಗೆ ಶಿಕ್ಷಣ ಕೊಡಲು ಶಾಲೆಯೊಂದನ್ನು ಹೋದ ವರ್ಷವೇ ಸ್ಥಾಪಿಸಿದ್ದರು. ಈಗಾಗಲೇ ಬಹುಮಂದಿ ಅಲ್ಲಿ ತರಬೇತು ಹೊಂದುತ್ತಿದ್ದಾರೆ. ಇತ್ತೀಚಿನ ಪತ್ರಿಕಾ ವರದಿಗಳನ್ನೋದಿದರೆ ಅಷ್ಟಾಗಿ, ನಾವಾ ಕಾರ್ಯಾಲಯಗಳನ್ನು ಶೋಧಿಸಲಾಯಿತು. ಜಲಾಂತರ್ಗಾಮಿಗಳು ಇರುವ ಸ್ಥಳದಲ್ಲಿ ಅಡಗಿರುವುದನ್ನು ಪತ್ತೆ ಹಚ್ಚುವ ವಿದ್ಯುತ್ ಯಂತ್ರವನ್ನು ಅಧ್ಯಾಪಕರು ಕಂಡು ಹಿಡಿದಿರುವರು.

Edited, printed and published by A. R. Nagarajan, at the Sadhvi Press, D.Subbiah Road. Mysore

ಭಾರತಕ್ಕೆ ೪೩ ಸಾವಿರ ಟನ್ ಗೋಧಿ

ಕಳೆದ ತಿಂಗಳು ಪರದೇಶಗಳಿಂದ ೭ ಹಡಗುಗಳು ಒಟ್ಟು ೪೩,೦೦೦ ಟನ್ ಗೋಧಿಯನ್ನು ಭಾರತಕ್ಕೆ ತೆಗೆದುಕೊಂಡು ಬಂದವು. ಇನ್ನೂ ಅನೇಕ ಹಡಗುಗಳು ಭಾರತಕ್ಕೆ ಗೋಧಿ ತರುತ್ತಿವೆ.

ನರೇಂದ್ರದೇವ್‌ರ ಆಸಕ್ತಿ

ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಸದಸ್ಯರಾದ ಆಚಾರ್ಯ ನರೇಂದ್ರದೇವ್‌ರವರು ಸೆರೆಮನೆಯಲ್ಲೇ ಅನೇಕ ಪುಸ್ತಕಗಳನ್ನು ಓದಿ ಮುಗಿಸುತ್ತಿದ್ದಾರೆ. ತಾವು ಸಹ ಕೆಲವು ಪುಸ್ತಕಗಳನ್ನು ಬರೆಯಲಾರಂಭಿಸಲು ಕ್ರಮಿಸಿರುವರು.

ನಿಮ್ಮ ಗಳಿಕೆಗಳನ್ನು ಕಾಪಾಡಿರಿ

ಅಮೂಲ್ಯ ಖನಿಜಗಳು, ಅಮೂಲ್ಯ ಹರಳು ಕಲ್ಲುಗಳು, ಭೂಮಿ, ಕಟ್ಟಡಗಳು ಅಥವಾ ತಯಾರಿಸಲ್ಪಟ್ಟ ಸಾಮಾನುಗಳಮೇಲೆ ಯುದ್ಧಕಾಲದಲ್ಲಿ ಕೂಡಿಟ್ಟ ಹಣವನ್ನು ವಿನಿಯೋಗಿಸಬೇಕೆಂಬುದು ಸ್ವಾಭಾವಿಕವಾದದ್ದು. ಆದರೆ ಇಂದು ಇದು ಬಹು ಅಪಾಯಕರವಾದ ದೀರ್ಘ ಅವಧಿಯ ಕೂಡಿಡುವ ವಿಧಾನವಾಗಿದೆ. ಭಂಗಾರ, ಬೆಳ್ಳಿ ಆಭರಣಗಳು, ಆಸ್ತಿ ಪಾಸ್ತಿ ಮುತ್ತು ಸಾಮಾನುಗಳ ಬೆಲೆಯು ಇತರ ಧಾರಣೆಗಳ ಜೊತೆಗೆ ಮಿತಿಮೀರಿ ಏರಿವೆ; ಯುದ್ಧದಲ್ಲಿ ದೊರೆಯುತ್ತಿರುವ ವಿಜಯಗಳ ಫಲಿತವಾಗಿ ಈ ಬೆಲೆಗಳು ಒಂದು ದಿನ ಬಿದ್ದು ಹೋಗುತ್ತವೆ—ಹರಾಜ್ಯಾಗಿ ಬೀಳಬಹುದು—ಮತ್ತು ನಿಮ್ಮ ಹಣದ ಹೆಚ್ಚಿನ ಭಾಗವು ಮಾಯವಾಗಬಹುದು. ನಿಮ್ಮ ವ್ಯವಹಾರ ಜ್ಞಾನವನ್ನು ಬಳಸಿ ನೀವು ಪರಿಶ್ರಮಪಟ್ಟು ಕೂಡಿಟ್ಟ ಹಣವನ್ನು ಕಾಪಾಡಿಕೊಳ್ಳಿ.

ಮುಂಬರುವ ದಿನಗಳಿಗೋಸ್ಕರ ಸುರಕ್ಷಿತವಾಗಿ ಕೂಡಿಡಿ

ಕೆಳಗೆ ಕಂಡವುಗಳಲ್ಲಿ ನಿಮ್ಮ ಕೂಡಿಟ್ಟ ಹಣವು ಸುರಕ್ಷಿತವಾಗಿರುತ್ತದೆ ಮತ್ತು ಶಾಶ್ವತಮೌಲ್ಯವನ್ನುಳ್ಳದ್ದಾಗಿರುತ್ತದೆ.

★ ಸಹಕಾರ ಸಂಸ್ಥೆ.
★ ವಿಮೆ ಪಾಲಿಸಿ.
★ ಬ್ಯಾಂಕ್.
★ ಪೋಸ್ಟಾಫೀಸ್ ಸೇವಿಂಗ್ಸ್ ಬ್ಯಾಂಕ್

ಅಥವಾ ಇವಕ್ಕಿಂತಲೂ ಉತ್ತಮವಾದ ಸರ್ಕಾರಿ ಸಾಲಗಳು ಮತ್ತು ಸೇವಿಂಗ್ಸ್ ಸರ್ಟಿಫಿಕೇಟ್‌ಗಳು.

ದಿನವೂ ನಾಲ್ಕು ಆಣೆ ಕೂಡಿಡಿ!

ನಿಮ್ಮ ಮನೆಯಲ್ಲಿ [illegible] ವ್ಯವಹಾರವನ್ನು [illegible] ದಿನವೂ ನಾಲ್ಕು ಆಣೆ [illegible] ನಿಮ್ಮ [illegible] ಗಿರಲು [illegible] ಕೂಡಿಟ್ಟ ಹಣವನ್ನು ಸುರಕ್ಷಿತವಾಗಿ [illegible] ಮಾಡಲು [illegible]

ರಾಷ್ಟ್ರೀಯ ಯುದ್ಧಮುಖದವರು | ದೇಶೀಯರಿಗೆ ಮಾಡುವ ಮನವಿ

ಸಂಪುಟ ೨] ಗುರುವಾರ ೧-೧-೪೪ [ಸಂಚಿಕೆ ೧೧೮೬

ಕಸ್ತೂರಿಬಾಯಿಯವರ ಸ್ಥಿತಿ ಕಳವಳ

ಬಲ್ಗೇರಿಯಾದಲ್ಲಿ ಮಿತ್ರರರಿಗೆ ಸಹಾಯಕವಾಗುವ ವಿಪ್ಲವ

ಜರ್ಮನಿ. ಜಪಾನು ದೀರ್ಘ ಸಮರನಡೆಸಲು ಶಕ್ತಕುಗ್ಗಿಲ್ಲ

ಪೌರಸಭಾ ಕಾಂಗ್ರೆಸ್ ಪಾರ್ಟಿ ಸಭೆ

ಸ್ವಂ ವ] ಮೈಸೂರು ೩

ಮೈಸೂರು ಪೌರಸಭೆಯ ಕಾಂಗ್ರೆಸ್ ಪಾರ್ಟಿಯ ಸದಸ್ಯರ ಸಭೆಯು ನಿನ್ನೆ ದಿವಸ ಕಾಂಗ್ರೆಸ್ ಕಛೇರಿಯಲ್ಲಿ ನಡೆದು, ಶ್ರೀ ಪಿ. ಸುಬ್ರಹ್ಮಣ್ಯನವರನ್ನು ಪಾರ್ಟಿಯ ನಾಯಕರನ್ನಾಗಿಯೂ, ಶ್ರೀ ಟಿ. ವೆಂಕಟರಾಮಯ್ಯನವರನ್ನು ಉಪನಾಯಕರನ್ನಾಗಿಯೂ, ಶ್ರೀ ನರಸಿಂಹ ಅಯ್ಯಂಗಾರ್ಯರನ್ನು ಕಾರ್ಯದರ್ಶಿಗಳನ್ನಾಗಿಯೂ, ಶ್ರೀಗಳಾದ ಇ. ಪಿ. ನಂಜಪ್ಪ, ಕೆ. ಎಸ್. ಸತ್ಯನಾರಾಯಣರಾವ್ ಇವರುಗಳನ್ನು ಪಾರ್ಟಿ ವಿಪ್‌ಗಳನ್ನಾಗಿಯೂ ಚುನಾಯಿಸಲಾಯಿತು.

ಬೆಂಕಿ ಅನಾಹುತ

ಅರಸೀಕೆರೆಯ ಗಜೆಟಿಯಲ್ಲಿ ನಿನ್ನೆ ರಾತ್ರಿ ಸುಮಾರು ೧೧-೩೦ ಗಂಟೆಯ ಸಮಯದಲ್ಲಿ ಒಂದು ಭಾರಿ ಹುಲ್ಲಿನ ಮೆದೆಗೆ ಬೆಂಕಿ ಬಿದ್ದು, ಸಂಪೂರ್ಣವಾಗಿ ಸುಟ್ಟು ಹೋಯಿತು. ಬೆಂಕಿ ಆರಿಸುವ ಯಂತ್ರ, ಪೋಲೀಸರು ಮತ್ತು ಅನೇಕ ಜನಗಳು ಬೆಂಕಿಯನ್ನು ಆರಿಸಲು ನಡೆಸಿದ ಯತ್ನ ವಿಫಲವಾಯಿತು. ಸುಮಾರು ೧ ಸಾವಿರ ರೂ. ನಷ್ಟವಾಗಿದೆಯೆಂದು ಹೇಳಲಾಗಿದೆ. ಅನಾಹುತಕ್ಕೆ ಕಾರಣವೇನೆಂಬುದು ಗೊತ್ತಾಗಿಲ್ಲ.

ಕಳ್ಳನ ದಸ್ತಗಿರಿ

ರಾಜಧಾನಿಯ ಚಾಮುಂಡೇಶ್ವರಿ ಸಿನಿಮಾ ಮಂದಿರದ ಹಿಂದಿನ ರಸ್ತೆಯಲ್ಲಿ ನಿನ್ನೆ ರಾತ್ರಿ ಕೆಲವು ಪಾತ್ರೆಗಳನ್ನು ಕಳ್ಳತನಮಾಡಿಕೊಂಡು ಹೋಗುತ್ತಿದ್ದ ಭಾರಿ ಕೇಡಿಯಾದ ಸಿದ್ದೋಜಿರಾವ್ ಎಂಬುವನನ್ನು ಪೇಟೆ ರಾಜ ಪೋಲೀಸರು ದಸ್ತಗಿರಿಮಾಡಿ ಮಾಂಡಿನ ತನಿಖೆ ನಡೆಸುತ್ತಿದ್ದಾರೆ.

ಅಖಿಲ ಕರ್ನಾಟಕ ಆಯುರ್ವೇದ ಸಮ್ಮೇಳನ

ಬಾಗಲಕೋಟೆಯಲ್ಲಿ ೫ ನೇ ತಾ॥ ನಡೆಯಲಿರುವ ಅಖಿಲ ಕರ್ನಾಟಕ ಆಯುರ್ವೇದ ಸಮ್ಮೇಳನದ ವಸ್ತುಪ್ರದರ್ಶನದ ಆರಂಭೋತ್ಸವವನ್ನು ನಡೆಸಲು ಡಾ॥ ಪಾರ್ಥನಾರಾಯಣಪಂಡಿತರು ಈ ದಿನ ರಾಜಧಾನಿಯಿಂದ ಪ್ರಯಾಣ ಬೆಳೆಸಿದರು.

ಶ್ರೀ ತ್ಯಾಗರಾಜರ ಆರಾಧನೆ

ರಾಜಧಾನಿಯ ಚಾಮರಾಜ ರಸ್ತೆಯಲ್ಲಿರುವ ಸಹಕಾರ ಭವನದಲ್ಲಿ ಇದೇ ಮಾರ್ಚಿ ೧೯, ೧೭, ನೇ ತಾ॥ ದಿನಗಳಲ್ಲಿ ಶ್ರೀ ತ್ಯಾಗರಾಜಸ್ವಾಮಿಗಳ ಆರಾಧನೋತ್ಸವವನ್ನೂ, ೨೩ ನೇ ತಾ॥ ಶ್ರೀ ಪುರಂದರದಾಸರ ಪುಣ್ಯದಿನವನ್ನೂ ನಡೆಸಲು ಮೈಸೂರಿನ ಶ್ರೀ ತ್ಯಾಗರಾಜ ಸಂಗೀತ ವಿದ್ವತ್ ಸಭೆಯವರು ಏರ್ಪಾಡುಮಾಡಿದ್ದಾರೆ.

ಫುಟ್ ಬಾಲ್

ಎಂ. ಎಸ್. ಎಸ್. ಟೀಮ್ ಪಂದ್ಯಗಳಲ್ಲಿ "ಮೈಸೂರು ಸ್ಟೂಡೆಂಟ್ಸ್" ಟೀಮ್ ಟಾಮಿಲಿಯನ್ಸ್ ಟೀಮಿನವರ ೧ ಗೋಲಿನಿಂದ ಸೋಲಿಸಿದರು.

"ನೆನ್ನೆ ಸಂಜೆ ಬೆಂಗಳೂರಿನಲ್ಲಿ ನಡೆದ ಪಂದ್ಯದಲ್ಲಿ, ಇದೇ ಮಾರ್ಚಿ ೧೯ ಮತ್ತು ೨೦ ನೇ ತಾ॥ ಗಳಲ್ಲಿ ಕ್ಲಬ್ ಮತ್ತು ಪೋಲೀಸ್ ಪಂದ್ಯವು ೨೧ ನೇ ತಾ॥ ದೇಶಗಾಂ ಪೋಲೀಸ್ ಮತ್ತು ಸಿಟಿ ಟೀಮುಗಳ ನಡುವೆ ಪಂದ್ಯಗಳು ನಡೆಯುತ್ತವೆ.

ಕಸ್ತೂರಿಬಾಯಿಯವರ ಸ್ಥಿತಿ ಕಳವಳ

ಇತ್ತೀಚೆಗೆ ಕಸ್ತೂರಿಬಾಯಿ ಗಾಂಧಿಯವರು ಹೃದಯ ರೋಗದಿಂದ ನರಳುವುದು ಹೆಚ್ಚಾಗಿದೆಯೆಂದೂ, ವೈದ್ಯೋಪಚಾರಗಳನ್ನು ಬಹಳ ಜಾಗರೂಕತೆಯಿಂದ ನಡೆಸಲಾಗುತ್ತಿದೆಯೆಂದೂ ಕೂಡಲೆ ಪ್ರಾಣಕ್ಕೆ ಅಪಾಯ ಸಂಭವಿಸುವುದಿಲ್ಲವಾದರೂ ಸ್ಥಿತಿ ಚಿಂತಾಜನಕವಾಗಿರುವುದಾಗಿಯೂ ಶ್ರೀ ದೇವದಾಸ ಗಾಂಧಿಯವರು ಡರ್ಬನ್‌ನಲ್ಲಿರುವ ತಮ್ಮ ಸಹೋದರರಾದ ಶ್ರೀ ಮಣಿಲಾಲ್ ಗಾಂಧಿಯವರಿಗೆ ತಂತಿ ವಾರ್ತೆ ಕಳುಹಿಸಿದ್ದಾರೆ.

ಬಲ್ಗೇರಿಯಾದಲ್ಲಿ ವಿಪ್ಲವ

ಮಿತ್ರರಾಷ್ಟ್ರಗಳ ಸಹಾನುಭೂತಿ ಇರುವ ನಿಕೊಲಾಸ್ ಮೌಶನೊಫ್‌ನವರು ಬಲ್ಗೇರಿ ಸರ್ಕಾರವನ್ನು ಉರುಳಿಸಿ, ಸಿರಿಲ್ ರಾಜಕುಮಾರರನ್ನು ಬಂಧನದಲ್ಲಿಟ್ಟಿದ್ದಾರೆಂದು ಅಮೆರಿಕದ "ನ್ಯೂಯಾರ್ಕ್ ಟೈಮ್ಸ್" ಪತ್ರಿಕೆಯು ವರದಿ ಮಾಡಿದೆ. ಇಟಲಿಯ ಬಡೋಗ್ಲಿ ಸರ್ಕಾರದಂತೆಯೇ ಬಲ್ಗೇರಿಯಾದಲ್ಲೂ ಸರ್ಕಾರ ರಚಿಸಲು ಈ ಒಳಸಂಚು ನಡೆಸಿರಬಹುದೆಂದು ಹೇಳಲಾಗಿದೆ.

ಶತ್ರು ಸಮರಶಕ್ತಿ ಕುಗ್ಗಿಲ್ಲ

ಜರ್ಮನರಾಗಲೀ ಜಪಾನೀಯರಾಗಲೀ ಶಸ್ತ್ರಬಲದಲ್ಲಿ ಕುಗ್ಗಿಲ್ಲವೆಂದೂ ಅವರು ದೀರ್ಘಕಾಲ ಸಮರವನ್ನು ನಡೆಸಬಲ್ಲರೆಂದೂ ಅಮೆರಿಕದ ಯುದ್ಧ ವಾರ್ತಾ ಕಛೇರಿಯಿಂದ ಸುದ್ದಿ ಹೊರಟಿದೆ.

ಗೋಪಾಲಕರ ಅನಿರೀಕ್ಷಿತ ಸಾವು

ಕರಾಚಿಯ ಮೈದಾನವೊಂದರಲ್ಲಿ ಹಸು ಕಾಯುತ್ತಿದ್ದ ಇಬ್ಬರು ಗೋಪಾಲಕರು ಸಮೀಪದಲ್ಲಿ ಬಿದ್ದಿದ್ದ ಒಂದು ಉಂಡೆಯನ್ನು ಕಂಡು ಅದೇನಿರಬಹುದೂ ಒಡೆದು ನೋಡೋಣವೆಂದು ಚಚ್ಚುತ್ತಿರಲಾಗಿ ಅದು ಸಿಡಿದು ಆ ಇಬ್ಬರೂ ಕೂಡಲೇ ಮೃತಿಹೊಂದಿದರು. ಅದು ಸಿಡಿಮದ್ದಿನ ಉಂಡೆಯಾಗಿದ್ದಿರಬಹುದೆಂದು ಊಹಿಸಲಾಗಿದೆ.

ಮಿತ್ರ ವಿಮಾನ ಧಾಳಿ ಉದ್ದೇಶ

ಅಮೆರಿಕದ ವಿಮಾನ ದಳದ ನಾಯಕರಾದ ಜನರಲ್ ಹೆನ್ರಿ ಆರ್ನಾಲ್ಡ್‌ರವರು ಮಿತ್ರ ವಿಮಾನ ಧಾಳಿಯ ಉದ್ದೇಶವನ್ನು ಕುರಿತು ಮಾತನಾಡುತ್ತಾ, ಶತ್ರುವಿನ ಕೊನೆ ಎಂಬ ಪ್ರಾರಂಭವಾಗಿದೆ. ಜರ್ಮನಿಯ ಯುದ್ಧ ಕೈಗಾರಿಕೆಗಳನ್ನು ಸಂಪೂರ್ಣವಾಗಿ ನಾಶ ಮಾಡಿ, ಆಕ್ರಮಣದ ಯುದ್ಧದ ಪ್ರಮಾಣವನ್ನು ಅನಷ್ಟು ಕಮ್ಮಿ ಮಾಡುವುದೆಂದು ತಿಳಿಸಿದ್ದಾರೆ.

ಶಾಂತಿನಿಕೇತನದಲ್ಲಿ ಕಳವು

ಕಳೆದ ತಿಂಗಳು ಶಾಂತಿ ನಿಕೇತನ ವಾರ್ಷಿಕೋತ್ಸವ ಸಮಾರಂಭ ಜರುಗಿದಾಗ ಉತ್ಸವದ ಗಲಾಟೆಗಳ ನಡುವೆ ಇಲ್ಲಿನ ವಸ್ತುಸಂಗ್ರಹಾಲಯದಲ್ಲಿ ಪ್ರದರ್ಶಿಸಿದ್ದ ಬೆಲೆಬಾಳುವ ಚಿತ್ರಗಳು ಕಳುವಾಗಿ ಹೋಗಿದೆ. ಪೋಲೀಸರು ಪತ್ತೆ ಕಾರ್ಯದಲ್ಲಿ ತೊಡಗಿದ್ದಾರೆ. ಕಳುವಾದ ವಸ್ತು ಪತ್ತೆಯಾಗಲು ಸಹಕರಿಸುವವರಿಗೆ ಸೂಕ್ತ ಬಹುಮಾನವನ್ನು ಕೊಡುವುದಾಗಿ ಹೇಳಲಾಗಿದೆ.

ರೈಲ್ವೆ ಅಪಘಾತ

ಮ್ಯಾಡ್ರಿಡ್ ಬಳಿ ಇರುವ ಒಂದು ರೈಲ್ವೆ ಸ್ಟೇಷನ್ನಿನ ಹತ್ತಿರ ಒಂದು ಮೇಲ್ ಗಾಡಿಯು ಒಂದು ಗೂಡ್ಸ್ ಗಾಡಿಗೆ ಡಿಕ್ಕಿ ಹೊಡೆದುದರ ಪರಿಣಾಮವಾಗಿ ೩೦ ಮಂದಿ ಜನಗಳು ಸ್ಥಳದಲ್ಲಿಯೇ ಮರಣ ಹೊಂದಿದರು. ಹಲವರಿಗೆ ಗಾಯಗಳಾದುವು. ಡಿಕ್ಕಿ ಹೊಡೆದ ಪರಿಣಾಮ ಗಾಡಿಗಳಿಗೆ ಬೆಂಕಿ ಹತ್ತಿ ಅಪಘಾತದ ಪರಿಣಾಮ ಹೆಚ್ಚಾಯಿತು.

ನ್ಯೂಬ್ರಿಟನ್ನಿನಲ್ಲಿನ ಹೋರಾಟ

ನ್ಯೂಬ್ರಿಟನ್ನಿನ ನೈರುತ್ಯ ತೀರ ಪ್ರದೇಶದ ಮಾರ್ಕಸ್ ಭೂಸಂಧಿಯ ದಕ್ಷಿಣಕ್ಕೆ ಅಮೆರಿಕನ್ ಭೂಸೈನ್ಯವು ಜಪಾನೀಯರು ನಡೆಸಿದ ಪ್ರತಿ ದಾಳಿಗಳನ್ನು ಹಿಮ್ಮೆಟ್ಟಿಸಿದೆ. ಈ ಕದನದಲ್ಲಿ ೩೦೦ ಜಪಾನೀಯರು ಸತ್ತರು. ಕಾಬೂಲ್ ದ್ವೀಪದ ಹತ್ತಿರ ಒಂದು ಜಪಾನ್ ವಿಮಾನಗಳನ್ನು ಹೊಡೆದುರುಳಿಸಲಾಗಿದೆ. ಮಿತ್ರ ವಿಮಾನಗಳು ಧಾಳಿ ನಡೆಸಿ ಬಂದಿವೆ.

ಅದ್ಭುತ ವಿಮಾನ ತಯಾರಿ

ನರರುಗಳನ್ನು ಸಾಗಿಸಲು ೫೦ ಭಾರಿ ವಿಮಾನಗಳನ್ನು ತಯಾರಿಸಲು ಅಮೆರಿಕ ನೌಕಾ ಇಲಾಖೆಯ ಅಪ್ಪಣೆ ನೀಡಿದ್ದು, ಇವುಗಳ ತಯಾರಿ ಕೆಲಸ ಅಮೆರಿಕದಲ್ಲಿ ತಯಾರಾಗುತ್ತಿದೆ. [illegible]

ಘ್ಯೂಗಿನಿಯಲ್ಲಿ ಮಿತ್ರಪಡೆ

ನ್ಯೂಗಿನಿಯ ಸೈದಾರ್ ಗೆ ಬಂದಿಳಿದ ಅಮೆರಿಕನ್ ಯೋಧರು ತಮ್ಮ ಸ್ಥಾನಗಳನ್ನು ಭದ್ರಪಡಿಸಿಕೊಂಡು ಶೀಘ್ರ ವೇಗದಿಂದ ಒಳಭಾಗಕ್ಕೆ ನುಗ್ಗುತ್ತಿದ್ದಾರೆ. ಜಪಾನೀಯರು ಹೆಚ್ಚು ನಿರೋಧ ತೋರಿಸಲಿಲ್ಲ. ಮಿತ್ರ ವಿಮಾನಗಳು ಧಾಳಿ ನಡೆಸುತ್ತಿವೆ.

ಜರ್ಮನ್ ಯುವಕರಿಗೆ ಪೇಚಾಟ

ಜರ್ಮನಿ ಸೇರಿದ್ದಲ್ಲಿ [illegible]

ಜರ್ಮನರ ನೀಚಕಾರ್ಯ

ಬರ್ಲಿನ್. ಯುಗೋಸ್ಲಾವಿಯಾದ ಮಿಹೈಲೋವಿಚ್ ಪ್ರಧಾನ ಕಚೇರಿಗೆ ಮುತ್ತಿಗೆ ಹಾಕಿ ಜರ್ಮನರು ಮಿಹೈಲೋವಿಚ್‌ರ ೬೦೦ ಅನುಯಾಯಿಗಳನ್ನು ಸೆರೆ ಹಿಡಿದು ಅವರನ್ನು ಕ್ರೂರವಾಗಿ ಹಿಂಸಿಸುತ್ತಿರುವರೆಂದು ಸುದ್ದಿ ಬಂದಿದೆ.

ಡಚ್ ಚಲಾಂತಗಾರ್ತಿಯ ಸಾಹಸ

ಸ್ವೀಡನ್ ತೀರದಾಚೆ ಹೋಗುತ್ತಿದ್ದ ಜರ್ಮನ್ ಸರಬರಾಜು ಹಡಗೊಂದರ ಮೇಲೆ ಡಚ್ ಚಲಾಂತಗಾರ್ತಿಯು ಧಾಳಿ ನಡೆಸಿ ಅದನ್ನು ಮುಳುಗಿಸಿ ಹೊಡೆದು ತೀರದಲ್ಲಿದೆ.

ಅಮೆರಿಕನ್ ನೌಕೆ ನಾಶ

ಅಟ್ಲಾಂಟಿಕ್‌ನಲ್ಲಿ ಅಮೆರಿಕನ್ ವಿನಾಶಕ ನೌಕೆಯೊಂದನ್ನು ಜರ್ಮನ್ ಟಾರ್ಪಿಡೊ ಹೊಡೆದುದರಿಂದ ಅದು ಮುಳುಗಿದೆಯೆಂದು ಗೊತ್ತಾಗಿದೆ. ಆ ನೌಕೆಯಲ್ಲಿದ್ದವರ ಪೈಕಿ ಅನೇಕರು ಪಾರಾಗಿದ್ದಾರೆ. ಇದು ಸ್ಥಿತಿ ೧೦೭ ಮಂದಿಗೆ ಗಾಯವಾಗಿದೆಯೆಂದು ವರದಿ ಬಂದಿದೆ.

ಕ್ರಿಕೆಟ್ ಆಟಗಾರನ ಮರಣ

ಮದರಾಸಿನಲ್ಲಿ ವಿಮಾನ ಅಪಘಾತದಲ್ಲಿ ಶ್ರೀ ಎಂ. ಎಸ್. ವೇಣುಗೋಪಾಲ್ ಎಂಬ ಮದರಾಸಿನ ಪ್ರಸಿದ್ಧ ಕ್ರಿಕೆಟ್ ಆಟಗಾರರು ವಿಮಾನ ಅಪಘಾತಕ್ಕೊಳಗಾಗಿ ಮರಣ ಹೊಂದಿದರೆಂದು ಸುದ್ದಿ ಬಂದಿದೆ.

ಸೂರತ್ತಿನಲ್ಲಿ ಜನರ ಮುಟ್ಟುಗೋಲು

ಸೂರತ್ತಿನಲ್ಲಿ ಆಹಾರ ಧಾನ್ಯಗಳನ್ನು ಮುಚ್ಚಿಟ್ಟುಕೊಂಡಿದ್ದ ಜನ ಪೋಲೀಸರ ಸಂಚು ತಪ್ಪಿಸಿ ಬೀಡಿ ಬಾರ ಪಟ್ಟಣದಲ್ಲಿ ಇದ್ದರು. ಇತ್ತೀಚಿನ ಲಕ್ಷ್ಯಗೆ ಅವರು ಬಂದಾಗ ಪೋಲೀಸರು ಅವರನ್ನು ಮುಟ್ಟುಗೋಲು ಹಾಕಿಕೊಂಡಿದ್ದಾರೆ.

೧ ಲಕ್ಷ ಜನ ನರಳುತ್ತಿದ್ದಾರೆ

[illegible] ಲಕ್ಷ [illegible]

ಆಯುರ್ವೇದಪದ್ಧತಿ ಸಂಶೋಧನೆಗಳಾಗಬೇಕು

[illegible]

... ಬಿಲ್, wind, Bile ಮತ್ತು phlem ... Alopathy ... Hydropathy ... Homeopathy ...

[illegible]

ಅಪೇರಾ ಟಾಕೀಸ್

ಭಕ್ತರಾಜ್

ಅಥವಾ

ಅಂಬರೀಷ

ನಟವರ್ಗ: ... ನಾಗೇಂದ್ರ, ಕೌಸಲ್ಯ, ... ಮುಂತಾದವರು.

6-1-44 ರಿಂದ

3 ನೇ ವಾರ

[illegible]

... wind ಎಂಬುದಲ್ಲವೆಂಬುದು ... Bile ... wind, Bile ಮತ್ತು Phlem ...

[illegible]

ರೂಸ್ವೆಲ್ಟ್ ದಂಪತಿಗಳ ದಾನ

[illegible]

ನಮ್ಮ ಚಾಮರಾಜನಗರದ ಏಜೆಂಟರು

ಶ್ರೀ ... ಚಾಮರಾಜನಗರದಲ್ಲಿ 'ಸಾಧ್ವಿ' ಪತ್ರಿಕೆಯ ಏಜೆಂಟರನ್ನಾಗಿ ನೇಮಿಸಿದ್ದೇವೆ.

[illegible]

ವ್ಯವಸ್ಥಾಪಕ,

ಸಾಧ್ವಿ

ನೊಂದ-ಂ ಹಬ್ಬಕ್ಕೆ ಅಕ್ಕಿ

ಸ್ವಂ. ವ.] ಬೆಂಗಳೂರು 31

ಬೆಂಗಳೂರು ದಂಡಿನಲ್ಲಿ ... ಆಜ್ಞೆಯಾಗಿದೆ ... [illegible]

ಕೂಲಿ ನಾಯಕರನ್ನು ಸಂಸ್ಥಾನದಾಚೆಗೆ

ಮಿ॥ ಫಿಲಿಪ್ಸ್, ಶ್ರೀ ಡಿ. ವೆಂಕಟೇಶ್ ಮತ್ತು ಶ್ರೀ ... ಬೆಂಗಳೂರು ... [illegible]

ಕೊಡಗು ಮೈಸೂರು ಒಪ್ಪಂದ

[illegible]

ಪ್ರಜಾಮಂಡಲದವರಿಗೆ ಪ್ರತಿಬಂಧ

[illegible]

ಬಂಗ್ಲೆ ಬೇಕಾಗಿದೆ

ಮೈಸೂರಿನಲ್ಲಿ ಒಂದು ಬಂಗ್ಲೆ ಬಾಡಿಗೆಗೆ ಬೇಕಾಗಿದೆ. ... ಆಸ್ಪತ್ರೆ ಮತ್ತು ... [illegible]

ಅರ್ಜಿ, C/o ಸಾಧ್ವಿ

[illegible]

Edited, printed and published by A. R. Nagarajan, at the Sadhvi Press, D Subbiah Road, Mysore.

ಪತ್ರವ್ಯವಹಾರ

ಭತ್ತ ಮತ್ತು ಬಟ್ಟೆಗೆ ಸಂಬಂಧಿಸಿದ ಆಜ್ಞೆ

ಮುದ್ರೆ ಹೊಂದದ ಬಟ್ಟೆಬರೆಗಳಿಗೆ ... ಜಿಲ್ಲೆಯ ... ಭತ್ತ ... [illegible]

ಟಿ. ಎಸ್. ... ಗೋಪಾಲ್

[illegible]

ಗುರುದ್ವಾರದ ಪುನರ್ ನಿರ್ಮಾಣ

[illegible]

ಯಾವಾಗಲೂ ಕೊಳ್ಳಿರಿ!

ಏನನ್ನು? :: ಎಲ್ಲಿ?

[illegible]

Truthful READY MADE CLOTHES MADURA

ಸ್ವದೇಶಿ ... ಸ್ಟೋರ್ಸ್

[illegible] ಮೈಸೂರು.

ಸ್ತ್ರೀಯರ ಸೌಕರ್ಯಕ್ಕಾಗಿ

[illegible]

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿ ಪುಡಿ

ಯನ್ನೇ ಉಪಯೋಗಿಸಿ.

ಡಿ. ಪುಟ್ಟೆಯ್ಯ ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

[illegible]

ಸಂಪುಟ ೨] ಶುಕ್ರವಾರ ೭--೧--೪೪ [ಸಂಚಿಕೆ ೧೪೭

ಬರ್ಡಿಚೀವ್ ನಗರ ರಷ್ಯನರ ವಶ

ಎಲ್ಲ ಅರ್ಥ ರೂಪಾಯಿ, ಪಾವಲಿಗಳೂ ಚಲಾವಣೆಯಲ್ಲಿವೆ

ಬಲ್ಗೇರಿಯಾ ಮಂತ್ರಿಮಂಡಲದಲ್ಲಿ ಬಿಕ್ಕಟ್ಟಿಲ್ಲವಂತೆ

ಕುಕ್ಕನಹಳ್ಳಿಕೆರೆಯಲ್ಲಿದ್ದ ಮೊಸಳೆ ಮರಿ ಹಿಡಿದರು

ಸ್ವಂ. ವ.] ಮೈಸೂರು ೭

ನಿನ್ನೆ ಬೆಳಿಗ್ಗೆ ಹಲವು ವಿದ್ಯಾರ್ಥಿಗಳೂ ಮತ್ತಿತರರೂ ಕುಕ್ಕನಹಳ್ಳಿಕೆರೆಯಲ್ಲಿ ಈಜುತ್ತಿದ್ದಾಗ ಒಂದು ಮೊಸಳೆ ಮರಿಯನ್ನು ಕಂಡು ಕೂಡಲೆ ಅದನ್ನು ಎಲ್ಲರೂ ಮುತ್ತಿ ಹಿಡಿದು ಹೊರತಂದರು. ಅದನ್ನು ರಾಜಧಾನಿಯ ಮೃಗಶಾಲೆಗೆ ಸಾಗಿಸಬಹುದೆಂದು ಹೇಳಲಾಗಿದೆ

ಕೈಲಾಸಂ ಅಧ್ಯಕ್ಷರಾಗಬೇಕು

ಶ್ರೀಯುತ ಟಿ ಪಿ ಕೈಲಾಸಂರವರು ಇಷ್ಟು ದಿನ ಕನ್ನಡನಾಡಿನಿಂದ ಹೊರಗಿದ್ದು ಈಗ ವಾಪಸು ಬಂದಿದ್ದಾರೆ ಇದು ನಮ್ಮ ಭಾಗ್ಯ. ಮುಂದಿನ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಪೀಠಕ್ಕೆ ಅವರನ್ನು ಏರಿಸಲು ಶ್ರಮಿಸಬೇಕಾದುದು ಪ್ರತಿಯೊಬ್ಬ ಕನ್ನಡಿಗನ ಕರ್ತವ್ಯ. ಈವೇಳೆಗೇ ಅವರು ಅಧ್ಯಕ್ಷರಾಗಬೇಕಿತ್ತು. ಕರ್ನಾಟಕನಾಟಕ ಸಾಹಿತ್ಯ ಪ್ರಪಂಚದ ಅಮೂಲ್ಯ ರತ್ನವಾದ ಶ್ರೀ ಕೈಲಾಸಂರವರಿಗಿಂತಲೂ ಮಿಗಿಲಾಗಿ ಆ ಅಧ್ಯಕ್ಷ ಪದವಿಗೆ ಪಾತ್ರರಾದರಿಲ್ಲ ಅವರು ಮುಂದಿನ ಅಧಿವೇಶನದ ಅಧ್ಯಕ್ಷರಾಗಲಿ ಎಂಬುದಾಗಿ ಅಧ್ಯಕ್ಷ ದ ರಾ. ಬೇಂದ್ರೆಯವರು ಶಿವಮೊಗ್ಗಾದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣದಲ್ಲಿ ಒತ್ತಿ ಹೇಳಿದರು.

"ಭಾರತವು ಎರಡಾಗದೆ ವಿಧಿಯಿಲ್ಲ"

ಪಾಕೀಸ್ಥಾನ ಬೇಡಿಕೆಯನ್ನು 'ಟಾರ್ಪೆಡೊ' ಮಾಡಬೇಕೆಂಬುದೇ ಹಿಂದೂಗಳ ಉದ್ದಿಶ್ಯ ಈಚಿಗೆ ನಡೆದ ಹಿಂದೂ ಸಮ್ಮೇಳನಗಳಲ್ಲಿ ಪಾಕೀಸ್ಥಾನದ ಬೇಡಿಕೆಯನ್ನು ಬದಿಗೊತ್ತುವ ಮನೋಭಾವ ಎದ್ದು ಕಾಣುತ್ತಿತ್ತು. ಮಹಾತ್ಮಾ ಗಾಂಧಿ, ಕಾಂಗ್ರೆಸ್ ಸದಸ್ಯರು ಉಳಿದ ಹಿಂದೂಗಳು ಇವರೆಲ್ಲರ ಚಿತ್ತವೃತ್ತಿಯಲ್ಲಿ ಕೊಂಚವಾದರೂ ಬದಲಾವಣೆಗಳಾಗಿಲ್ಲ. ಮುಸ್ಲಿಮರ ಪಾಕೀಸ್ಥಾನ ಬೇಡಿಕೆಗೆ ಹಿಂದೂಗಳ ಪ್ರತಿಭಟನೆ ಹೆಚ್ಚೇ ಇದೆ ಪಾಕೀಸ್ಥಾನ, ಹಿಂದೂಸ್ಥಾನ ಎಂಬ ಎರಡು ಸ್ವತಂತ್ರ ರಾಷ್ಟ್ರಗಳು ಭಾರತದಲ್ಲಿರಬೇಕು. ಹಿಂದೂಗಳಲ್ಲೇ ಒಗ್ಗಟ್ಟು ಇಲ್ಲದಿರುವ ಕಾರಣ ಏಕಾಭಿಪ್ರಾಯವಿಲ್ಲವೆಂದು ಸರ್ಕಾರದವರು ಈ ಬೇಡಿಕೆಗಳ ಬಗ್ಗೆ ಉದಾಸೀನದಿಂದಿದ್ದಾರೆಂಬುದು ಜನಾಬ್ ಜಿನ್ನಾರವರು ನಿನ್ನೆ ಕರಾಚಿಯನ್ನು ಬಿಟ್ಟು ಮುಂಬೈಗೆ ತೆರಳುವಾಗ ಹೇಳಿಕೆ ಕೊಟ್ಟರು.

ಚೀಣಿಯರಿಗೆ ಸರಸರಂಜಾಮು

ಮಿತ್ರ ವಿಮಾನಗಳು ಭಾರತದಿಂದ ಹೊರಟು ಹಿಮಾಲಯವನ್ನು ದಾಟಿ ಬರ್ಮಾ ರಸ್ತೆಗೆ ಬಂದು ಅಲ್ಲಿಂದ ಚೀಣಾ ದೇಶಕ್ಕೆ ಸಾಮಾನುಗಳನ್ನು ಸಾಗಿಸಿಕೊಂಡು ಹೋಗುತ್ತಿರುವುದಾಗಿ ದೆಹಲಿ ಪ್ರಕಟನೆ ತಿಳಿಸುತ್ತದೆ.

ಫ್ರಾನ್ಸಿನಮೇಲೆ ಅಗಾಧ ಧಾಳಿ

ಉತ್ತರ ಫ್ರಾನ್ಸಿನ ಮೇಲೆ ೨೦೦ ಮಿತ್ರ ವಿಮಾನಗಳು ಧೀರಧಾಳಿ ನಡೆಸಿ, ಶತ್ರು ದೇಶದಲ್ಲಿರುವ ಮುಖ್ಯ ವಿಭಾಗಗಳ ಮೇಲೆ ಬಾಂಬುಗಳನ್ನು ಸುರಿಸಿ [illegible] ಸ್ಥಾನಗಳನ್ನು, ಜರ್ಮನಿ ಮತ್ತು [illegible] ಮೇಲೂ ಭೀಕರ ಧಾಳಿ ನಡೆಸಲಾಯಿತು.

ಎಲ್ಲ ನಾಣ್ಯಗಳೂ ಚಲಾವಣೆಯಲ್ಲಿವೆ

ಹೊಸದಾಗಿ ಬಂದಿರುವ ಅರ್ಧ ರೂಪಾಯಿ ಮತ್ತು ಪಾವಲಿಗಳನ್ನು ಅನೇಕ ಅಂಗಡಿಗಳವರೂ, ರೈಲ್ವೆ ಸಿಬ್ಬಂದಿವರೂ ತೆಗೆದುಕೊಳ್ಳಲು ನಿರಾಕರಿಸುತ್ತಿದ್ದಾರೆ. ಆ ನಾಣ್ಯಗಳ ಅಂಚನ್ನು ಪರೀಕ್ಷಿಸಿ ತೆಗೆದುಕೊಳ್ಳುವರು. ಅವು ಯಾವ ವಿಧವಾದ ಅಂಚನ್ನೇ ಹೊಂದಿರಲಿ, ಅವು ಸರ್ಕಾರಿ ಟಂಕಸಾಲೆಯಿಂದ ಹೊರಬಿದ್ದವು, ಅವುಗಳನ್ನು ಯಾರೂ ನಿರಾಕರಿಸಕೂಡದೆಂದೂ, ಆ ನಾಣ್ಯಗಳು ಚಲಾವಣೆಯಲ್ಲಿರ ಬೇಕೆಂದೂ ಸರ್ಕಾರದವರು ಪ್ರಕಟಿಸಿರುವರು

ಗಾಂಧಿಜೀ ಉಪವಾಸದ ಪ್ರತಿಧ್ವನಿ!

ವರ್ತಮಾನಗಳನ್ನು ಹಾಕದೆ ಬಿಟ್ಟಿರುವ [illegible] ದರಿಂದ, ಮಹಾತ್ಮಾ ಗಾಂಧಿಯವರು ಪಟ್ಟ ಉಪವಾಸದ ಪ್ರಯತ್ನ ವಿಫಲವಾಯಿತು. ಅವರ ಇಂಥ ಉಪವಾಸಗಳಿಗೆ ಸರ್ಕಾರ ಮಣಿಯಲಾರದು ಎಂಬುದಾಗಿ ಲಂಡನ್ನಿನ ಟೈಮ್ಸ್ ಪತ್ರಿಕೆಯು ಕಳೆದ ವರ್ಷದ ಘಟನೆಗಳನ್ನು ವಿಮರ್ಶಿಸುತ್ತಾ ಮಹಾತ್ಮರ ಉಪವಾಸದ ಬಗ್ಗೆ ಬರೆದಿರುತ್ತದೆ. ಭಾರತ ಬಿಕ್ಕಟ್ಟು ಮುಂದುವರಿಯಲು ಲೀಗ್ ಮತ್ತು ಹಿಂದೂ ಮಹಾ ಸಭೆಯವರು ಕಾಂಗ್ರೆಸ್ ನೊಡನೆ ಐಕ್ಯವಾಗದೆ ವಿರೋಧವಾಗಿರುವುದೇ ಕಾರಣವೆಂದೂ ಬರೆದಿದೆ

ಬರೋಡಾ ರಾಜರ ವಿವಾಹ

ಕಳೆದ ಶುಕ್ರವಾರ ಬೊಂಬಾಯಿನಗರದಲ್ಲಿ ಬರೋಡಾ ಮಹಾರಾಜರು ಪೀಠಾಪುರಂ ಮಹಾರಾಜ ಕುಮಾರಿ ಸೀತಾದೇವಿಯನ್ನು ಮದುವೆಮಾಡಿಕೊಂಡರು.

ಸಗಾರೊ ಬದುಕಿರುವರೆ?

ಪೀರ್ ಸಗಾರೊರವರು ಬಂದೀಖಾನೆಯಲ್ಲಿದ್ದುಕೊಂಡು ಇನ್ನೂ ಜೀವಂತರಾಗಿರುವರೆಂದೂ, ಅವರ ಕೊಲೆಯಾಗಿರುವುದನ್ನು ನಂಬಲು ಸಾಧ್ಯವಿಲ್ಲವೆಂದೂ ಹೂರ್ ಜನಾಂಗದವರು ಭಾವಿಸಿದ್ದಾರೆ

ನಾಜಿಗಳ ಬಂಧನ

ಬಿಸ್ಕೆ ಕೊಲ್ಲಿಯ ಸಮೀಪದಲ್ಲಿ ಜರ್ಮನರ [illegible] ವಿನಾಶಕಗಳನ್ನು ಮುಳುಗಿಸಿ [illegible] ನಾಜಿ ನೌಕಾದಳದ ಯೋಧರನ್ನು [illegible] ವಿನವರು ಬಂಧಿಸಿರುವುದಾಗಿ [illegible] ಬಂದಿದೆ

ಬರ್ಡಿಚೀವ್ ಹಿಡಿದರು

ಬರ್ಡಿಚೀವ್ ಎಂಬ ಮುಖ್ಯ ಪಟ್ಟಣವನ್ನು ರಷ್ಯನರು ಹಿಡಿದಿದ್ದಾರೆ ಎಂಬುದಾಗಿ ಮಾ॥ ಸ್ಟಾಲಿನರು ಪ್ರಕಟಿಸಿದ್ದಾರೆ ರುಮೇನಿಯಾ ಗಡಿ ಕಡೆಗೆ ರಷ್ಯಾ ಸೇನೆ ಒತ್ತುತ ಮುಂದುವರಿಯುತ್ತಿದೆಯೆಂದೂ ಪೋಲೆಂಡ್ ಯುಕ್ರೇನಿನಲ್ಲಿ ನಾಜಿಗಳು ಹೊಸ ಪ್ರತಿಭಟನಾ ರಣಮುಖವನ್ನು ತೆರೆಯುವವರಾಗಿದ್ದಾರೆಂದೂ ತಿಳಿದುಬಂದಿದೆ

ಬಲ್ಗೇರಿಯಾದಲ್ಲಿ ಬಿಕ್ಕಟ್ಟಿಲ್ಲ

ಬಲ್ಗೇರಿಯಾ ಮಂತ್ರಿ ಮಂಡಲದಲ್ಲಿ ಬಿಕ್ಕಟ್ಟುಂಟಾಗಿಲ್ಲವೆಂದು ಸೋಫಿಯಾದಲ್ಲಿನ ಸ್ವಿಸ್ ವರದಿಗಾರರು ತಿಳಿಸುತ್ತಾರೆ

ಮಿಲಾನ್‌ನಲ್ಲಿ ೨೦೦ ವಧೆ

ರಿಪಬ್ಲಿಕನ್ ಫ್ಯಾಸಿಸ್ಟ್ ಪಕ್ಷದ ಕಾರ್ಯದರ್ಶಿಯು ಮಾರ್ಚಂ ಪ್ರಿಯರ್ ನಡೆದಾಗ ಬಂಡಾಯ ಗಲಭೆಗೆ ಕಾರಣರಾದವರೆಂದು ಹೇಳಿ ೨೦೦ ಮಂದಿಯನ್ನು ಮಿಲಾನ್‌ನಲ್ಲಿ ಬಂಧಿಸಿ ಅವರ ಶಿರಚ್ಛೇದನ ಮಾಡಲಾಯಿತೆಂದು ತಿಳಿದುಬಂದಿದೆ

ಜರ್ಮನರ ಗುಪ್ತ ಖಡ್ಗದ ನಾಶ ಸುಳ್ಳು

ಜರ್ಮನರು ಸಿದ್ಧಪಡಿಸಿರುವ ಗುಪ್ತ ಆಯುಧವನ್ನು ಉಪಯೋಗಿಸಿ ನೋಡಿರಾದ ವರೆಂಬಿರುವ ಪ್ರಚಾರಪ್ರೋಪಗಂಡ. ಬರೀ ಸುಳ್ಳು. [illegible] ನೇ ವರ್ಷ ಮುಗಿಯುವುದರೊಳಗೆ ಜರ್ಮನರು ಹೊಸ [illegible] ಯಲ್ಲಿ ಅಸ್ತ್ರವೊಂದು ಕಾರ್ಯವನ್ನು ಕೈಗೊಂಡು ಪರೀಕ್ಷಿಸುವರ. ಹೊಸ ಯುದ್ಧ ಕ್ರಮ ಸುವ್ಯವಸ್ಥಿತ ಆಸ್ತಿ ಭಾರದ ಮೇಲೆ ನಿಂತಿದೆ ಎಂಬುದಾಗಿ ಜರ್ಮನ್ ರೇಡಿಯೋ ವಿ ಅಟಂ ಹೀಗೆ ಶಾರದಾ, ಹೇಳಿದ್ದಾನೆ.

ಶತ್ರು ಹಡಗುಗಳ ನಾಶ

ಭೂಮಧ್ಯ ಸಮುದ್ರದಲ್ಲಿ ಶತ್ರುಗಳ ೭ ಹಡಗುಗಳನ್ನೂ ೬೦೭ [illegible] ಟನ್ ಮಾಪಕ ಜಹಜನ್ನೂ ಬ್ರಿಟಿಷ್ ಜಲಾಂತರ್ಗಾಮಿಗಳು ಮುಳುಗಿಸಿರುವುದಾಗಿ ಅಧಿಕಾರಿ [illegible] ಪ್ರಕಟನೆ ಹೊರಟಿದೆ

ಜಪಾನ್ ನೆಲೆಗಳಿಗೆ ಹೊಡೆತ

[illegible] ಜಪಾನ್ [illegible] ವಿಮಾನಗಳು [illegible] ಶತ್ರು [illegible] ತ್ತಿತ್ತು [illegible]

ಧಾನ್ಯದ ಅದಲುಬದಲಿಗೆ ಅವಕಾಶ

ತಮ್ಮ ಬಳಿ ಉಳಿಸಿಕೊಳ್ಳಲು ಅನುಮತಿ ಹೊಂದಿದ ಮತ್ತು ದಾನವನ್ನು ಸರ್ಕಾರಕ್ಕೆ ವರದಿಮಾಡಿಕೊಂಡಿದ್ದವಂಥಾ ಸಾರ್ವಜನಿಕರು ತಮಗೆ ಬೇಡದ ಧಾನ್ಯವನ್ನು ಸರ್ಕಾರಿ ಧಾರಣೆಗೆ ಸರ್ಕಾರಿ ಡಿಪೋವಿಗೆ ಮಾರಿ ಅದಕ್ಕೆ ಬದಲು ತಮಗೆ ಬೇಕಾದ ಧಾನ್ಯವನ್ನು ಡಿಪೋವಿನಿಂದ ಪಡೆಯಬಹುದೆಂದು ಸರ್ಕಾರದವರು ಅವಕಾಶಕೊಟ್ಟಿರುವರು.

ಗುಬ್ಬಿಯಲ್ಲಿ ಕಾಂ॥ ವಿಜಯ

ಗುಬ್ಬಿ ಪೌರ ಸಭೆಯ ೧೫ ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಪರವಾಗಿ ನಿಂತಿದ್ದ ೧೪ ಮಂದಿ ಚುನಾಯಿತರಾಗಿ ಬಂದಿದ್ದಾರೆ

ಪತ್ರಿಕಾಸಮ್ಮೇಳನಾಧ್ಯಕ್ಷತೆಗೆ ಆಹ್ವಾನ

ಈ ತಿಂಗಳು ಕೊನೆಯಹೊತ್ತಿಗೆ ಮಂಗಳೂರಿನಲ್ಲಿ ಸೇರಲಿರುವ ಅಖಿಲ ಕರ್ನಾಟಕ ಪತ್ರಿಕೋದ್ಯೋಗಿಗಳ ಸಮ್ಮೇಳನಕ್ಕೆ ಅಧ್ಯಕ್ಷರಾಗಬೇಕೆಂದು ಮಹಾತ್ಮರ ಪುತ್ರರೂ ಮತ್ತು ಪ್ರಸಿದ್ಧ ಪತ್ರಿಕೋದ್ಯೋಗಿಗಳೂ ಆದ ಶ್ರೀ ದೇವದಾಸ್ ಗಾಂಧಿಯವರಿಗೆ ಆಹ್ವಾನ ಕಳುಹಿಸಿರುವುದಾಗಿ ಸಮಾಚಾರ ಬಂದಿದೆ.

ಬಂಗಾಳ ಹೊಸ ಗೌರ್ನರ್ ಬಗ್ಗೆ ವಿರೋಧ

ಬಂಗಾಳ ಗೌರ್ನರನ್ನಾಗಿ ಮಿ॥ ಕೇಸಿಯವರನ್ನು ನೇಮಿಸಿದ ಬಗ್ಗೆ ಭಾರತ ಮುಖಂಡರು ಹಲವರು ಆಕ್ಷೇಪಣೆ ಎತ್ತಿದರು. ವಿದ್ಯಾವಂತ ಭಾರತೀಯರ ಭಾರತ ರಾಜ್ಯಾಂಗ ವ್ಯವಹಾರ ಜ್ಞಾನಕ್ಕೂ ಮಿ॥ ಕೇಸಿಯವರು ಪ್ರಾಂತ್ಯ ಒಂದರ ಗೌರ್ನರ್ ಪದವಿಗೇರಲು ಅವರಿಗಿರುವ ಯೋಗ್ಯತೆಗೂ ಹೋಲಿಸಿ ನೋಡಿದರೆ ಕೇಸಿಯವರಿಗೆ ಆ ಪದವಿ ಸಲ್ಲಲಾರದು ಈ ವಿಚಾರವಾಗಿ ಭಾರತದ ಮುಖಂಡರು ಆಕ್ಷೇಪಣೆ ಎತ್ತಿರುವುದು ಯೋಗ್ಯವಾಗೇ ಇದೆ—ಎಂಬುದಾಗಿ ಬ್ರಿಟನ್ನಿನ ರಾಜ್ಯ ವಿಸ್ತಾರ ಶಾಖಾ ಮಂತ್ರಿಗಳಾದ ಮಿ॥ ಎಡ್‌ವರ್ಡ್ ಜೆ. ಪಾರ್ಡ್‌ರವರು ಹೇಳಿದ್ದಾರೆ.

ಪೋಲೆಂಡಿಗೆ ಹಕ್ಕು ಉಳಿದೀತೆ?

ರಷ್ಯನರು ಪೋಲಿಷ್ ಗಡಿ ಪ್ರವೇಶಿಸಿದ ವೇಳೆ ಒಂದೇ ದಿನದಲ್ಲಿ ಪೋಲಿಷ್ ಮಂತ್ರಿಮಂಡಲವು ಲಂಡನ್ನಿನಲ್ಲಿ ಎರಡು ಬಾರಿ ಸೇರಿತ್ತು. ರಿಪಬ್ಲಿಕ್ ದೇಶಗಳ ಹಕ್ಕು ಬಾಧ್ಯತೆಗಳನ್ನು ರಷ್ಯನರು ಲಕ್ಷಿಸುವರೆಂದು ಲಂಡನ್ನಿನಲ್ಲಿ ನಿರೀಕ್ಷಿಸಲಾಗಿದೆ.

ಸಿ. ಐ. ಡಿ. ಇನ್ಸ್‌ಪೆಕ್ಟರ ಸೋಗು ಹಾಕಿದ ಚೋರ

ಮದರಾಸಿನ ಭವನ ಒಂದರಲ್ಲಿ ಜನ [illegible] ಗುತ್ತಿದ್ದ ಸಮಾರಂಭಕ್ಕೆ [illegible] ಹೋಗಿ ತಾನು ಸಿ ಐ ಡಿ ಇನ್ಸ್‌ಪೆಕ್ಟರ್ ಎಂದು ಹೇಳಿಕೊಂಡು, ಕಳುವಾದ ಆ ಭವನದಲ್ಲಿದ್ದ [illegible] ಗಳನ್ನು [illegible] ಹೊರಟಾಗ [illegible] ಪೋಲೀಸರಿಗೆ ಪತ್ತೆಯಾದ [illegible] ನು ಸಿಕ್ಕಿಬಿದ್ದನು.

ಬಂಗಾರದ ಬಳೆ ನುಂಗಿದ ಕಳ್ಳ

ಸ್ವಂ. ವ.] ಬೆಂಗಳೂರು ೬

ಸೀತಾರಾಮ್ ಎಂಬ ಕಳ್ಳನು ಬೆಂಗಳೂರು ಮಾರ್ಕೆಟ್ಟಿನ ಬಳಿ ಒಂದು ವರ್ಷದ ಹುಡುಗಿ ತೊಟ್ಟಿದ್ದ ಬಂಗಾರದ ಬಳೆಯೊಂದನ್ನು ಕಸಿದುಕೊಂಡು ಕೂಡಲೇ ಸಿಕ್ಕಿಬೀಳುವ ಪ್ರಸಂಗ ಸಂಭವಿಸಲಾಗಿ ಅದನ್ನು ಬಾಯಿಗೆ ಹಾಕಿಕೊಂಡು ನುಂಗಿಬಿಟ್ಟನು. ಪೋಲೀಸರು ಅವನನ್ನು ಕೈದು ಮಾಡಿ ಆಸ್ಪತ್ರೆಯಲ್ಲಿ ಎಕ್ಸ್-ರೇ ಪರೀಕ್ಷೆ ನಡೆಸಲಾಗಿ ಆಸಾಮಿಯ ಹೊಟ್ಟೆಯಲ್ಲಿ ಬಳೆ ಇರುವುದು ವ್ಯಕ್ತಪಟ್ಟಿದೆ.

ಬೆಲ್ಲ ತಯಾರಿಕರಿಗೆ ಆಜ್ಞೆ

ಬೆಂಗಳೂರು ಜಿಲ್ಲೆಯಲ್ಲಿ ಕಬ್ಬು ಬೆಳೆಯುವವರು ಮಾಲೀಕರೇ ಆಗಿರಲಿ, ಗೇಣಿದಾರರೇ ಆಗಿರಲಿ, ತಾವು ಬೆಳೆದ ಕಬ್ಬಿನಿಂದ ಬೆಲ್ಲ ತಯಾರಿಸಿದಾಗ ತಮ್ಮ ಸ್ವಂತ ಉಪಯೋಗಕ್ಕೆ ಎಷ್ಟು ಬೇಕೆಂಬುದನ್ನು ಅಮಲ್ದಾರರು ನಿರ್ಧರಿಸುವರೋ ಅಷ್ಟನ್ನು ಇಟ್ಟುಕೊಂಡು ಉಳಿದುದನ್ನು ಆಯಾ ತಾಲ್ಲೂಕು ಅಮಲ್ದಾರರಿಗೆ ಕಂಟ್ರೋಲ್ ದರಕ್ಕೆ ಮಾರಬೇಕೆಂದು ಬೆಂಗಳೂರು ಜಿಲ್ಲಾಧಿಕಾರಿಗಳು ಆಜ್ಞೆ ಮಾಡಿದ್ದಾರೆ.

ಕಾಂಗ್ರೆಸ್ ನಾಯಕರ ಸಮಾಲೋಚನೆ

ಇಷ್ಟರಲ್ಲೇ ಬೆಂಗಳೂರು ನಗರದಲ್ಲಿ ಮೈಸೂರು ಕಾಂಗ್ರೆಸ್ ಮುಂದಾಳುಗಳು ಶ್ರೀ ಟಿ. ಸುಬ್ರಹ್ಮಣ್ಯಂರವರ ಅಧ್ಯಕ್ಷತೆಯಲ್ಲಿ ಸಭೆಸೇರಿ ಸದ್ಯದ ದೇಶಪರಿಸ್ಥಿತಿ ಬಗ್ಗೆ ಸಮಾಲೋಚನೆ ನಡೆಸುವರೆಂದು ಗೊತ್ತಾಗಿದೆ.

ರೇಷ್ಮೆ ರವಾನೆ ಪತ್ತೆ

ಬೆಂಗಳೂರಿನ ಮೈಸೂರು ರಸ್ತೆ ಉಕ್ಕಡದ ಬಳಿ ಲಾರಿಯೊಂದನ್ನು ಶೋಧಿಸಲಾಗಿ ಅದರಲ್ಲಿ ೫೧ ಪೌಂಡ್ ರೇಷ್ಮೆ ಸಿಕ್ಕಿತು. ಅದು ಕೊಳ್ಳೇಗಾಲದ ವೆಂಕಟರಮಣಶೆಟ್ಟಿ ಮತ್ತು ನಾಗರಾಜಶೆಟ್ಟಿ ಎಂಬುವರಿಗೆ ಸೇರಿದ್ದೆಂದು ಹೇಳಲಾಗಿದೆ. ಪೋಲೀಸರು ಮುಂದಿನ ಕ್ರಮ ಜರುಗಿಸುತ್ತಿದ್ದಾರೆ.

ಸರ್ಕಾರಿ ಟ್ರಾನ್ಸ್‌ಲೇಟರಿಗೆ ರಜ ಹೆಚ್ಚಿತು

ಮೈಸೂರು ಸರ್ಕಾರದ ಕನ್ನಡ ಭಾಷಾಂತರಕಾರರಾದ ಶ್ರೀ ಸಿ. ಕೆ. ವೆಂಕಟರಾಮಯ್ಯನವರಿಗೆ ಮಂಜೂರಾಗಿದ್ದ ಪ್ರಿವಿಲೇಜ್ ರಜದ ಜೊತೆಗೆ ಇನ್ನೊಂದು ತಿಂಗಳು ರಜ ಕೊಡಲಾಗಿದೆ

ವರ್ಗಾವರ್ಗಿ

ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಜನರಲ್ ಮ್ಯಾನೇಜರ್ ಶ್ರೀ ವಿಶ್ವನಾಥ್‌ರವರು ಮೈಸೂರು ರೈಲ್ವೆಗೆ, ಶ್ರೀ ಬಾಲಕೃಷ್ಣರವರು ಭದ್ರಾವತಿಗೆ, ಶ್ರೀ ಎಂ. ಎಲ್. ನರಸಿಂಹಯ್ಯಂಗಾರ್‌ರವರು ಸಕ್ಕರೆ ಕಾರ್ಖಾನೆಗೆ ವರ್ಗಾಯಿಸಲ್ಪಟ್ಟಿದ್ದಾರೆ

ಪುಸ್ತಕ ಶಾಸನಕ್ಕೆ ಬಲಿ

ಮೈಸೂರು ವೃತ್ತಪತ್ರಿಕಾ ಶಾಸನದ ಪ್ರಕಾರ ಶ್ರೀ ನರಹರಿ ದ್ವಾರಕಾದಾಸ್ ಪರೀಖ್‌ರವರ ಇಂಗ್ಲಿಷ್ ಪುಸ್ತಕಕ್ಕೆ ಸರ್ಕಾರದವರು ಬಹಿಷ್ಕಾರ ಹಾಕಿದ್ದಾರೆ.

ಹರಿಪುರ ಗಲಭೆ ಪರಿಶೀಲನೆ

ಗಡಿನಾಡಿನ ಹರಿಪುರದಲ್ಲಾದ ಕೋಮುವಾರು ಗಲಭೆಯ ವಾಸ್ತವಾಂಶವನ್ನು ಅರಿಯಲು ಶಿರೋಮಣಿ ಅಕಾಲಿ ದಳದವರು ತಮ್ಮ ಪ್ರತಿನಿಧಿಗಳನ್ನು ಕಳುಹಿದ್ದಾರೆ. ಅಕಾಲಿ ದಳದ ಮುಖಂಡರಾದ ಮಾಸ್ಟರ್ ತಾರಾ ಸಿಂಗರು, ಯುದ್ಧ ವಾತಾವರಣ ತುಂಬಿದ ಈ ಸನ್ನಿವೇಶದಲ್ಲಿ ನಡೆದ ಸದ್ಯದ ಘಟನೆಯಿಂದ ಬಿಕ್ಕಟ್ಟುಂಟಾಗದಂತೆ ನೋಡಿಕೊಳ್ಳುವುದಾಗಿ ಭರವಸೆ ಹೇಳಿದ್ದಾರೆ.

ಬರ್ಮಾ ಒಳಕ್ಕೆ ನುಗ್ಗಿದರು

ಮಿತ್ರ ಸೈನಿಕರು ಬರ್ಮಾ ದೇಶದೊಳಗಡೆಗೆ ೧೦೦ ಮೈಲಿಗಳಷ್ಟು ದೂರ ನುಗ್ಗಿ ಕಾರ್ಯಾಚರಣೆ ನಡೆಸುತ್ತಿರುವರು ಎಂಬುದಾಗಿ ಹೊಸ ದೆಹಲಿಯಿಂದ ಪ್ರಕಟನೆ ಹೊರಟಿತು.

ಅಮೆರಿಕಾ ನಿಲ್ದಾಣಗಳ ಹತೋಟಿ

ಯೂರೋಪಿಗೆ ಮುತ್ತಿಗೆ ಹಾಕುವ ಸಂಬಂಧದಲ್ಲಿ ಮಿಲಿಟರಿ ಓಡಾಟಕ್ಕೆ ಅನುಕೂಲವಾಗಲೆಂದು ಅಮೆರಿಕಾದಲ್ಲಿನ ವಿಮಾನ ನಿಲ್ದಾಣಗಳನ್ನು ಅಲ್ಲಿನ ಯುದ್ಧ ಸರಬರಾಜು ಇಲಾಖೆಯವರು ತಮ್ಮ ಹತೋಟಿಗೆ ತೆಗೆದುಕೊಂಡಿದ್ದಾರೆ.

ನಾಯಿಕೆಮ್ಮಿಗೆ ಉಚಿತ ಚಿಕಿತ್ಸೆ

ರಾಜಧಾನಿಯ ಚಾಮುಂಡಿಪುರದ ಚಾಮುಂಡೇಶ್ವರಿ ರಸ್ತೆಯ [?] ನೇ ನಂ ಮನೆಯಲ್ಲಿನ ಎಸ್. ವಿ ಆರ್. ವೈದ್ಯಶಾಲೆಯ ಶ್ರೀ ಎಸ್. ಎಸ್. ವೈದ್ಯ ಎಂಬುವರು ನಾಯಿಕೆಮ್ಮಲನ್ನು ಎರಡೇ ದಿನದಲ್ಲಿ ಗುಣಮಾಡುವರು. ಲಿವರ್ ಮತ್ತು ಸ್ಪ್ಲೀನ್ ವ್ಯಾಧಿಯನ್ನು ಸಹಾ ಒಂದೇ ಪಕ್ಷ (೧೫ ದಿನ) ದಲ್ಲಿ ವಾಸಿ ಮಾಡುತ್ತಾರೆ. ಎಲ್ಲ ರೋಗಿಗಳಿಗೂ ಉಚಿತ ಚಿಕಿತ್ಸೆ.

ಪಡಿಭತ್ಯದ ಹಂಚಿಕೆಯ ಅವ್ಯವಸ್ಥೆ

ಮೈಸೂರಿನಲ್ಲಿ ಪಡಿ ಭತ್ಯದ ವ್ಯವಸ್ಥೆಯು ಆರಂಭವಾಗಿ ಎರಡು ವಾರಗಳಾದುವು. ಆರಂಭಕಾಲದಲ್ಲಿನ ಅವ್ಯವಸ್ಥೆ ವಿಷಯಗಳಲ್ಲಿ ಅನೇಕರು ಈಗಾಗಲೇ ತಮ್ಮ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ. ಜನರಿಗಿರುವ ಅನಾನುಕೂಲಗಳು ದಿನಂಪ್ರತಿ ಕಡಿಮೆಯಾಗಬಹುದೆಂಬ ಆಸೆ ನನ್ನಲ್ಲಿ ಮೂಡಿತ್ತು. ಆದರೆ ಡಿಪೋಗಳಲ್ಲಿ ಅದರಲ್ಲೂ ಸೊಸೈಟಿಗಳ ಡಿಪೋಗಳಲ್ಲಿ ನಡೆಯುತ್ತಿರುವ ನಡವಳಿಕೆಗಳು ಯಾರೊಬ್ಬರಿಗೂ ಮರ್ಯಾದೆ ತರತಕ್ಕದ್ದಲ್ಲ. ರೇಷನ್ ಕಾರ್ಡ್ ತೆಗೆದುಕೊಂಡು ಹೋದ ಹೆಂಗಸರು, ಮಕ್ಕಳನ್ನು ನಾಲ್ಕಾರು ಬಾರಿ ಈಗ ಬಾ, ಆಗ ಬಾ ಎಂದು, ಕೊನೆಗೆ ನಾಳೆ ಬನ್ನಿ ಎಂದು ಹೇಳಿ ಅವರ ಭತ್ಯವನ್ನು ಕೊಡದೆ ಕಳುಹಿಸುವುದು ವಾಡಿಕೆಗೆ ಬಂದಿದೆ ಎಂದು ತಿಳಿಸಲು ಬಹಳ ವಿಷಾದಿಸುತ್ತೇನೆ. ಈ ವಿಷಯದಲ್ಲಿ ಚಾಮರಾಜಪುರಂ ಕೋ-ಆಪರೇಟಿವ್ ಸ್ಟೋರ್ಸ್ ಸೆಕ್ರೆಟರಿಯವರಲ್ಲಿ ಮಾತನಾಡಿದೆನು. ಸೆಂಟ್ರಲ್ ಡಿಪೋವಿನಲ್ಲಿ ಸಾಕಾದಷ್ಟು ಸ್ಟಾಕಿಲ್ಲವೆಂತಲೂ, ಸೊಸೈಟಿ ಗುಮಾಸ್ತರು ಎಷ್ಟು ವೇಳೆ ಹೋದಾಗ್ಯೂ ಸೆಂಟ್ರಲ್ ಡಿಪೋದವರು ಸಾಮಾನು ಒದಗಿಸುತ್ತಿಲ್ಲವೆಂದೂ, ತಾವು ಡಿಪೋಗಳನ್ನು ನಡೆಯಿಸಲು ಒಪ್ಪಿದಾಗ್ಗೆ ಮೈಸೂರಿನ ರೇಷನಿಂಗ್ ಆಫೀಸರವರು ನಮ್ಮ ಸೊಸೈಟಿಯ ಬ್ರಾಂಚುಗಳಲ್ಲಿ ಭತ್ಯವನ್ನು ಡೆಲಿವರಿ ಮಾಡುವುದಾಗಿಯೂ ಆದರೆ ಹೇಳಿದಂತೆ ಮಾಡುತ್ತಿಲ್ಲವೆಂದೂ ತಿಳಿಸಿದರು. ಇದೂ ಅಲ್ಲದೆ ಸೆಂಟ್ರಲ್ ಡಿಪೋವಿನಲ್ಲಿ ಕೊಡುವ ಸಾಮಾನುಗಳನ್ನು ತೂಕ ಮಾಡಲು ತಕ್ಕಡಿಯಿಲ್ಲವೆಂತಲೂ, ಡಿಪೋದವರು ಹೇಳಿದ ಲೆಕ್ಕವನ್ನೇ ಒಪ್ಪಿಕೊಂಡು ಪದಾರ್ಥಗಳನ್ನು ತಂದು ಹಂಚಿದ್ದರಿಂದ ಬಹಳ ನಷ್ಟವಾಗಿದೆಯೆಂದೂ ತಿಳಿಸಿದರು. ಸಂಬಂಧಪಟ್ಟ ಅಧಿಕಾರಿಗಳು ಈ ಆಲೋಚನೆಗಳಿಗೆ ಗಮನ ಕೊಟ್ಟು ಜನರ ತೊಂದರೆಗಳನ್ನು ನಿವಾರಿಸುತ್ತಾರೆಂದು ಆಶಿಸುತ್ತೇನೆ.

ಎಂ. ಎ. ಜೋಯಿಸ್.

[?] ಪರಸ್ಪರ ಸಹಾಯ ಸಂಘದ ಮೆಂಬರುಗಳಲ್ಲಿ ವಿಜ್ಞಾಪನೆ:—

ಇದೇ ೧೦ ನೇ ತಾರೀಖು ಭಾನುವಾರ ನಡೆಯುವ ಡೈರೆಕ್ಟರ ಚುನಾವಣೆಯಲ್ಲಿ

3 ನೇ ನಂಬರಿನ

ಹೆಚ್. ಕೆ. ಕುಮಾರಸ್ವಾಮಿ

ವಿಶ್ವವಿದ್ಯಾನಿಲಯ ಸಂಘ ಮತ್ತು ವಿದ್ಯಾರ್ಥಿ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರು

ಇವರಿಗೆ ನಿಮ್ಮ ಘನವಾದ ಒಂದು ವೋಟನ್ನು ತಪ್ಪದೆ ದಯವಿಟ್ಟು ಕೊಡಬೇಕಾಗಿ ಪ್ರಾರ್ಥನೆ

ಹುಡುಗರು ಬೇಕು

"ಸಾಧ್ವಿ" ಪತ್ರಿಕೆಯನ್ನು ಮನೆಮನೆಗೂ ಹಂಚಲು ಹುಡುಗರು ಬೇಕು. ಸೈಕಲ್ ಬಿಡಲು ಬಲ್ಲವರಾದರೆ ಉತ್ತಮ. ಕೂಡಲೇ ಬಂದು ಕಾಣಿರಿ.

ವ್ಯವಸ್ಥಾಪಕ, ಸಾಧ್ವಿ.

ರಾಗಿ ಅಭಾವ

ಚಾಮರಾಜ ಮೊಹಲ್ಲಾದಲ್ಲಿರುವ ರೇಷನಿಂಗ್ ಡಿಪೋ ನಂ. 9 ರಲ್ಲಿ ಕೆಲವು ದಿವಸಗಳಿಂದಲೂ ಜನರಿಗೆ ಅತ್ಯಗತ್ಯ ಆಹಾರವಾದ ರಾಗಿಯು ದೊರೆಯದೆ ತುಂಬಾ ತೊಂದರೆಯಾಗಿರುತ್ತದೆ. ಈ ಡಿಪೋಗೆ ಹೋಗಿ ಇಲ್ಲಿರುವ ಮ್ಯಾನೇಜರನ್ನು ಕೇಳಿದರೆ, ಇವರು ಜನರಿಗೆ 'ಇಲ್ಲಿ ರಾಗಿಯಿಲ್ಲ, ಜೋಳವಿದೆ. ಬೇಕಾದರೆ ಜೋಳವನ್ನು ತೆಗೆದುಕೊಂಡು ಹೋಗಿ' ಎಂದು ಹೇಳುತ್ತಾರೆ. ಯಾರಿಗೆ ಜೋಳದ ಅಭ್ಯಾಸವಿರುವುದಿಲ್ಲವೋ, ಅವರು ತಮಗೆ ಅಭ್ಯಾಸವಿಲ್ಲದಿರುವ ಜೋಳವನ್ನು ಉಪಯೋಗಿಸುವುದಕ್ಕಾಗುವುದಿಲ್ಲ. ರಾಗಿ ಬೇಕಾದವರಿಗೆ ರಾಗಿಯನ್ನೇ ಕೊಡಬೇಕು. ರೇಷನಿಂಗ್ ಕಾರ್ಡಿನಲ್ಲಿ ನಮೂದಾಗಿರುವಂತೆ ಯಾರಿಗೆ ರಾಗಿಯು ಕೊಡಲ್ಪಡಬೇಕೋ ಅಂಥವರಿಗೆ ತೊಂದರೆಯನ್ನುಂಟುಮಾಡದೆ ರಾಗಿಯನ್ನೂ, ಅಗತ್ಯವಿದ್ದು ಯಾರಿಗೆ ಜೋಳದ ಅಭ್ಯಾಸವಿರುತ್ತದೋ ಅವರಿಗೆ ಜೋಳವನ್ನೂ ಒದಗಿಸಿಕೊಡಲು ಸಪ್ಲೈ ಅಧಿಕಾರಿಗಳು ನಿಗಾ ಕೊಡಬೇಕಾಗಿ ಈ ಭಾಗದ ಜನರು ನಿರೀಕ್ಷಿಸುತ್ತಾರೆ.

ಜೆ. ಸ್ವಾಮಿದಾಸ್.

ನಮ್ಮ ಚಾಮರಾಜನಗರದ ಏಜೆಂಟರು

ಶ್ರೀ ಸಿ. ಗೋಪಾಲರಾಯರನ್ನು ಚಾಮರಾಜನಗರದಲ್ಲಿ 'ಸಾಧ್ವಿ' ಪತ್ರಿಕೆಯ ಏಜೆಂಟರನ್ನಾಗಿ ನೇಮಿಸಿರುತ್ತೇವೆ

ಮಹಾ ಜನರು ಇವರ ಮೂಲಕ ನಮ್ಮ ಪತ್ರಿಕೆಗಳನ್ನು ತೆಗೆದುಕೊಂಡು ಪ್ರೋತ್ಸಾಹಿಸಬೇಕೆಂದು ವಿನಂತಿ

ವ್ಯವಸ್ಥಾಪಕ.
ಸಾಧ್ವಿ

ಸಾಧ್ವಿ

ರಾಜಧಾನಿಯ
ರಾಷ್ಟ್ರೀಯ ದಿನ ಪತ್ರಿಕೆ

ಪ್ರತಿದಿನವೂ ಪ್ರಕಟವಾಗುವುದು

ಕೂಡಲೇ ಚಂದಾದಾರರಾಗಿರಿ!

ಚಂದಾ ತಿಂಗಳಿಗೆ 0-8-0 ಮಾತ್ರ
ಪರಸ್ಥಳಕ್ಕೆ ಟಪಾಲು ಮೂಲಕ 1-0-0
ಜಾಹಿರಾತುಗಳಿಗೆ ಬರೆಯಿರಿ.

ಬಂಗ್ಲೆ ಬೇಕಾಗಿದೆ

ಮೈಸೂರಿನಲ್ಲಿ ಒಂದು ಬಂಗ್ಲೆ ಬಾಡಿಗೆಗೆ ಬೇಕಾಗಿದೆ. ಸ್ವಂತಕ್ಕೆ, ಸಿಬ್ಬಂದಿ ಮತ್ತು ಆವರಣ ಉಳ್ಳದ್ದಾಗಿರಬೇಕು. ಆಯುರ್ವೇದ ಆಸ್ಪತ್ರೆ ಮತ್ತು ಪರಿಶೋಧನಾಲಯವನ್ನು ನಡೆಸಲು ಯೋಗ್ಯವಾಗಿರಬೇಕು

ಅಭಯ C/O ಸಾಧ್ವಿ

ಇವರಿಗೆ ಬರೆಯಿರಿ ಅಥವ ನೋಡಿರಿ.

Edited, printed and published by A R. Nagarajan, at the Sadhvi Press, D Subbiah Road, Mysore.

ಸ್ತ್ರೀಯರ ಸೌಕರ್ಯಕ್ಕಾಗಿ

ತಾ|| ೧-೧-೧೯೪೪ ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿರುತ್ತೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿ ಪುಡಿ

ಯನ್ನೇ ಉಪಯೋಗಿಸಿ.

ಡಿ. ಪುಟ್ಟಯ್ಯ ಧನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ಸೂ.-- [?] ಮತ್ತು ಸಂತೆಪೇಟೆ ಪೋಸ್ಟ್ ಆಫೀಸಿನಲ್ಲೂ ರವೆ, ಗೋಧಿಹಿಟ್ಟು, ಚಿತ್ತು, ಮೈದಾಹಿಟ್ಟು ಸಹ ದೊರೆಯುತ್ತೆ. ಅಲ್ಲದೆ ಬೂರಾ ಮತ್ತು ಕಲ್ಲು ಸಕ್ಕರೆ ರೇಷನ್ ಕಾರ್ಡುಗಳಿಗೆ ದೊರೆಯುತ್ತದೆ

ಸಂಪುಟ ೨] ಶನಿವಾರ ೮--೧--೪೪ [ಸಂಚಿಕೆ ೧೪೮

ಬ್ರಿಟಿಷ್, ಅಮೇರಿಕೆಗಳಿಗೆ ರಷ್ಯನರ ಎಚ್ಚರಿಕೆ?

ತಾಟಸ್ಥ್ಯ ತಾಳಿದ ಸ್ವೀಡನ್ ಹಿಟ್ಲರನಿಗೆ ಸಹಾಯಮಾಡುತ್ತಿದೆ

ಅಹಮದಾಬಾದ್ ಮೊಹರಂ ಉತ್ಸವದಲ್ಲಿ ಗಲಭೆ

ಕಾಂಗ್ರೆಸ್ ಮುಖಂಡರ ಸಭೆ

ಸ್ವಂ. ಸು.] ಬೆಂಗಳೂರು ೭

ನಿನ್ನೆ ಸಂಸ್ಥಾನದ ಕಾಂಗ್ರೆಸ್ ಮುಖಂಡರು ಬೆಂಗಳೂರಿನಲ್ಲಿ ಸಭೆ ಸೇರಿ, ದೇಶದ ಆಹಾರ ಸ್ಥಿತಿಗತಿಗಳನ್ನು ವಿವೇಚಿಸಿದರು ಮುಂದಿನ ಚಟುವಟಿಕೆಗಳ ಬಗ್ಗೆಯೂ, ಆಲೋಚನೆ ನಡೆಯಿತು ಜಿಲ್ಲಾ ಬೋರ್ಡುಗಳ ಚುನಾವಣೆಗಳಿಗೂ ಕಾಂಗ್ರೆಸ್ ಸ್ಪರ್ಧಿಸಬೇಕೆಂದು ಅಧ್ಯಕ್ಷರ ತಿಳಿಸಿದರು.

ಅಂಡರ್ ಟ್ರಯಲ್ ಬಂದಿ ಮರಣ

ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಕುಪ್ಪುಸ್ವಾಮಿ, ಮೊದಲಿಯಾರ್ ಎಂಬ ಅಂಡರ್ ಟ್ರಯಲ್ ಬಂದಿ ನಿನ್ನೆ ಆಸ್ಪತ್ರೆಯಲ್ಲಿ ಸತ್ತನು. ಸಿಟಿ ಮ್ಯಾಜಿಸ್ಟ್ರೇಟರು ಮಹಜರು ನಡೆಸಿದರು.

'ಚಿತ್ರವಾಣಿ'

ಬೆಂಗಳೂರಿನ 'ಚಿತ್ರವಾಣಿ' ಚಲನ ಚಿತ್ರ ಮಾಸ ಪತ್ರಿಕೆಯ ೩ ನೇ ವಾರ್ಷಿಕ ಸಂಚಿಕೆ ನಮ್ಮ ಕೈಸೇರಿದೆ. ಸಂಚಿಕೆ ಆಕಾರ, ರೂಪು ಸೊಗಸಾಗಿದೆ ಉಪಯುಕ್ತ ಲೇಖನಗಳೂ ಅಚ್ಚಾಗಿವೆ ಬೆಲೆ ಕೇವಲ ೨ ಆಣೆ ನಾವು ಸಂಚಿಕೆಯನ್ನು ಆದರದಿಂದ ಸ್ವೀಕರಿಸಿದ್ದೇವೆ.

ದಿವಾನರಲ್ಲಿಗೆ ನಿಯೋಗ

ಶ್ರೀಯುತ ಎಂ. ಸಿ. ಲಿಂಗೇಗೌಡ, ಚಿಕ್ಕಲಿಂಗಯ್ಯ ಮತ್ತು ಇತರರು ಈದಿನ ಬೆಳಗ್ಗೆ ದಿವಾನರನ್ನು ಕಂಡ ಮಂಡ್ಯ ಅಮರಾ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದ ರೈತರುಗಳನ್ನು ಬಿಡುಗಡೆ ಮಾಡಬೇಕೆಂದು ಪ್ರಾರ್ಥಿಸಿದರೂ, ಸರ್ಕಾರ ಭೂಕಂದಾಯದ ಬಾಕಿ ವಸೂಲಿ ಮಾಡದಿರಬೇಕೆಂದೂ ಕೇಳಿದರೆಂದೂ ಗೊತ್ತಾಗಿದೆ.

ನೂತನ ಚಲನಚಿತ್ರ ಮಂದಿರ

ಶೇಷಾದ್ರಿಪುರದಲ್ಲಿ ನೂತನವಾಗಿ ಕಟ್ಟಲಾಗಿರುವ "ಸ್ವಸ್ತಿಕ" ಚಲನಚಿತ್ರ ಮಂದಿರದ ಪ್ರಾರಂಭೋತ್ಸವವನ್ನು ಭಾರತದ ಪ್ರಸಿದ್ಧ ತಾರೆಯಾದ ಶ್ರೀಮತಿ [illegible] ಅವರು ಬರುವ [illegible] ನೆರವೇರಿಸುವರೆಂದು ಗೊತ್ತಾಗಿದೆ.

ಔತಣ ಕೂಟ

ಇಲ್ಲಿನ ಪತ್ರಿಕೋದ್ಯೋಗಿ ವರ್ಗದವರು ಮದ್ರಾಸಿನ "ಹಿಂದೂ" ಪತ್ರಿಕೆಯ ಸಂಪಾದಕರಾದ ಶ್ರೀ ಕೆ. ಎಲ್. [illegible] ನಿನ್ನೆ ದಿನ ರಾತ್ರಿ [illegible] ಪತ್ರಿಕೋದ್ಯೋಗಿಗಳೆಲ್ಲರೂ, ತಮ್ಮ ಗೃಹದಲ್ಲಿ ಭೋಜನ ಕೂಟವೊಂದನ್ನೇರ್ಪಡಿಸಿದ್ದರು. ಎಲ್ಲರೂ ಶ್ರೀ [illegible] ರವರ ಔದಾರ್ಯವನ್ನು ಕೊಂಡಾಡಿದರು.

ಹೊಸಹಳ್ಳಿ ಪ್ರಸನ್ನರ ನಿಧನ

ಗುಬ್ಬಿ ತಾಲ್ಲೂಕು ಕಾಂಗ್ರೆಸ್ ಸಮಿತಿ ಕಾರ್ಯದರ್ಶಿಗಳಾಗಿದ್ದ ಶ್ರೀ ಹೊಸಹಳ್ಳಿ ಪ್ರಸನ್ನರು ಕೆಲವು ದಿನಗಳಿಂದ ಜ್ವರ [illegible] ಬೆಂಗಳೂರು [illegible] ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು ನಿನ್ನೆ [illegible] ಶ್ರೀ [illegible] [illegible]

೯೦.

೬ನೇ ಅ॥ ಭಾ॥ ಪತ್ರಿಕೋದ್ಯೋಗಿ ಸಮ್ಮೇಳನ

ಮಂಗಳೂರಿನಲ್ಲಿ [illegible] ನಡೆಯಲಿರುವ ೬ನೇ ಅಖಿಲ ಕರ್ನಾಟಕ ಪತ್ರಿಕೋದ್ಯೋಗಿ ಸಮ್ಮೇಳನದ ಸಂಘಟನಾ ಕಾರ್ಯದರ್ಶಿ ಶ್ರೀ [illegible] ಕರ್ನಾಟಕ, ಧಾರವಾಡ, ಶಿವಮೊಗ್ಗ ಜಿಲ್ಲೆ, ಬೆಂಗಳೂರು [illegible] ಹೈದರಾಬಾದ್ ಮುಂತಾದೆಡೆ ಪ್ರವಾಸ [illegible] ಸಂಘಟನೆ [illegible] ಸಮ್ಮೇಳನಕ್ಕೆ [illegible] [illegible]

ಕಾಂಗ್ರೆಸ್ ಪಾರ್ಲಿಮೆಂಟರಿ ಸಮಿತಿ ಸಭೆ

ಮೈಸೂರು ಕಾಂಗ್ರೆಸ್ ಪಾರ್ಲಿಮೆಂಟರಿ ಸಮಿತಿಯ ನಿನ್ನೆ ಬೆಂಗಳೂರಿನಲ್ಲಿ ಸಭೆ ಸೇರಿ, [illegible] ಚುನಾವಣೆ [illegible] ಸಂಬಂಧಪಟ್ಟ [illegible]

ಮೈಸೂರು ಯುವಕನ ಅನುಮೃತ್ಯುವಿಗೆ ತುತ್ತು

ಭಾರತ ವಿಮಾನ ದಳದಲ್ಲಿದ್ದ ಮೈಸೂರಿನ [illegible] ಶ್ರೀ [illegible] ವಿಮಾನ [illegible] [illegible]

ಮೈಸೂರಿನವರಿಗೆ ಸಾರ್ವ[illegible]

[illegible]

ರಷ್ಯನರ ಎಚ್ಚರಿಕೆ

ಸೋವಿಯಟ್ ಗಡಿಗಳಲ್ಲಿರುವ ಫಿನ್ಲೆಂಡ್, ಪೋಲೆಂಡ್, ಮತ್ತು ಬಾಲ್ಟಿಕ್ ಸಂಸ್ಥಾನಗಳ [illegible] ಮುಂದಿನ [illegible] ಪ್ರಶ್ನೆಯನ್ನು ಎತ್ತಿ [illegible] ನ್ಯೂಯಾರ್ಕ್ [illegible] ಪತ್ರಿಕೆಯಲ್ಲಿ ಬರೆದ ಲೇಖನವನ್ನು ರಷ್ಯದ [illegible] ಪತ್ರಿಕೆ ಟೀಕಿಸಿದೆ.

[illegible]

ಸ್ವೀಡನ್ ತಾಟಸ್ಥ್ಯ ನೀತಿ ಸುಳ್ಳು

ಜರ್ಮನಿ [illegible] ಸ್ವೀಡನ್ ದೇಶದ [illegible] ಹಿಟ್ಲರನಿಗೆ [illegible] ಸಹಾಯ [illegible] ಸ್ವೀಡನ್ [illegible]

ಮೊಹರಂ ಹಬ್ಬದಲ್ಲಿ ಗಲಾಟೆ

ನಿನ್ನೆ [illegible] ಮೊಹರಂ [illegible] ಪೊಲೀಸ್ ಅಧಿಕಾರಿಗಳು [illegible] ಗಲಭೆ [illegible]

ದೇವಾಲಯದ ಆನೆ ಮೇಲೆ ಮೊಹರಂ ಮೆರವಣಿಗೆ

[illegible]

ಬೊಂಭೋರೆಯವರಿಗೆ ಹೊಸ ಹುದ್ದೆಯೆ?

ಸ್ವಂ. ಸು.] ಮೈಸೂರು ೭

ಬೆಂಗಳೂರು ರೇಸಿಂಗ್ ಆಫೀಸರ್ ಹುದ್ದೆಯನ್ನು ಜಿಲ್ಲಾಧಿಕಾರಿಗಳು [illegible] ದರ್ಜೆಗೆ [illegible] ಆಲೋಚನೆ ಇರುವುದರಿಂದ ಮೈಸೂರು ಪೌರ ಸಭಾಧ್ಯಕ್ಷರಾದ ಶ್ರೀ ರಾಮಚಂದ್ರರಾವ್ ಬೊಂಭೋರೆಯವರನ್ನು ಬೆಂಗಳೂರು ರೇಸಿಂಗ್ ಆಫೀಸರನ್ನಾಗಿ ನೇಮಿಸುವರೆಂದೂ, ಶ್ರೀ [illegible] ಅವರನ್ನು ಮೈಸೂರು ರೇಷನ್ ಅಧಿಕಾರ ಸ್ಥಾನಕ್ಕೆ ಕಳುಹಿಸುವರೆಂದೂ ತಿಳಿಯಬರುವುದು ಮೈಸೂರು ಪೌರ ಸಭಾಧ್ಯಕ್ಷಸ್ಥಾನಕ್ಕೆ ಯಾರು ಬರುವರೊ ಗೊತ್ತಾಗಿಲ್ಲ.

ವಾರಾನ್ನ ವಿದ್ಯಾರ್ಥಿಗಳಿಗೆ ಸೌಕರ್ಯ

ಮೈಸೂರು ಸಿಟಿಯಲ್ಲಿ ಬಡ ವಾರಾನ್ನ ವಿದ್ಯಾರ್ಥಿಗಳಿಗೆ ಉದಾರವಾಗಿ ಸಹಾಯ ಮಾಡುತ್ತಿರುವ ಮಹನೀಯರು ಯಾರಿಗಾದರೂ ಆಹಾರ ಪದಾರ್ಥಗಳ ಸರಬರಾಜು ಕಂಟ್ರೋಲಿನಿಂದ ತೊಂದರೆಯಾಗಿ ಬಡ ವಿದ್ಯಾರ್ಥಿಗಳಿಗೆ ವಾರಾನ್ನ ಸಿಕ್ಕುವುದು ಕಷ್ಟವಾಗಿದ್ದರೆ, ಅಂಥಾ ವಿದ್ಯಾರ್ಥಿಗಳು ತಮ್ಮಲ್ಲಿಗೆ ಬಂದು ವಾರಗಳನ್ನು ಕೊಡಲಿ. ಅವನ್ನು ಚರ್ಚೆ ಮಾಡಿ ಈ ಮಹನೀಯರಿಗೆ ತಾವೇ ನೋಡಿಕೊಂಡು ತಮಗೆ ತಿಳಿದಂತೆ ಕಳುಹಿಸಿಕೊಡಬಹುದು ಎಂಬುದಾಗಿ ಲಕ್ಷ್ಮೀಪುರಂನಲ್ಲಿರುವ ಅಡ್ವೋಕೇಟ್ ಶ್ರೀ ಸಿ. ನರಸಿಂಹಯ್ಯನವರು ಬರೆಯುತ್ತಾರೆ.

ನೂತನ ರಾಜಕೀಯ ಪಕ್ಷ

ಮೈಸೂರು ಮತ್ತು ಮಂಡ್ಯದ ಕೆಲವು ಮಹನೀಯರುಗಳು ಪ್ರಯತ್ನಿಸುತ್ತಿರುವ ನೂತನ ರಾಜಕೀಯ ಪಕ್ಷದ ಸ್ಥಾಪನೆ ಪ್ರಯತ್ನದ ಮೊದಲನೆ ಸಭೆ ಜನವರಿ ೧೬ ನೇ ತಾ॥ ಬೆಂಗಳೂರಲ್ಲಿ ನಡೆಯುವುದೆಂದು ತಿಳಿದುಬಂದಿದೆ.

ಮಾಜಿ ಚೀಣಿ ಸೇನಾನಾಯಕ ಜಪಾನರ ಗುಪ್ತಚಾರ

ಚೀಣಿ ಸೈನ್ಯಕ್ಕೆ ಹಿಂದೊಂದು ಬಾರಿ ಜನರಲ್ ಆಗಿದ್ದ ಒಬ್ಬ ಯೋಧನೊಬ್ಬನನ್ನು ಜಪಾನರ ಗುಪ್ತಚಾರನಾಗಿ ಕಾರ್ಯ ನಡೆಸುತ್ತಿರುವನೆಂಬ ಕಾರಣಕ್ಕಾಗಿ ನ್ಯೂಯಾರ್ಕ್ ಪೋಲೀಸರು ದಸ್ತಗಿರಿ ಮಾಡಿರುವರು.

ಯೂರೋಪ್ ದಂಡಯಾತ್ರೆ ಸೂಚನೆ

ಬ್ರಿಟನ್ನಿನಲ್ಲಿರುವ ಅಮೇರಿಕಾ ಸೈನ್ಯಗಳ ಸ್ಥಿತಿಯನ್ನು ಪುನರವ್ಯವಸ್ಥೆಗೊಳಿಸಿ, ಬೆಲ್ಜಿಯಂ ಪ್ರಜೆಗಳಿಗೆ ದಂಡಯಾತ್ರೆ ಎಚ್ಚರಿಕೆ ಕೊಟ್ಟು ಮಿತ್ರರು ಯೂರೋಪ್ ದಂಡಯಾತ್ರೆಗೆ ಸಿದ್ಧರಾಗುತ್ತಿದ್ದಾರೆ. ಇದೇ ಕಾರಣಕ್ಕಾಗಿ ಬ್ರಿಟನ್ನಿನ ಅಮೇರಿಕಾ ಸೈನ್ಯಗಳ ಮುಖ್ಯ ಸೇನಾನಾಯಕನನ್ನಾಗಿ ಜ॥ ಫ್ರಾಂಕಲೀರು ನೇಮಿಸಲಾಗಿದ್ದಾರೆ.

ರಾಕಿಟಿಕ್ನೋ ರಷ್ಯನರ ಕೈಗೆ ಬಿತ್ತು

ಪೋಲೆಂಡ್ ಗಡಿ [illegible] ರಾಕಿಟ್ನೋ ಎಂಬ [illegible] [illegible] ಪಟ್ಟಣ [illegible] ರಷ್ಯನರ [illegible] [illegible]

ರೆವಿನ್ಯೂ ಇನ್‌ಸ್ಪೆಕ್ಟರನ್ನು ಮುತ್ತಿ ಹೊಡೆದರು

[illegible]

ಪೋಲೀಸರ ಬಂದೋಬಸ್ತು

[illegible]

ಗದ್ದೆಯ ಮೇಲಿನ ಧಾನ್ಯವೇ ಮಾಯ

[illegible]

ಮಿಟಿಂಗುಹಾಕುವವನು ಜನರನ್ನು ಹೊಡೆದನು

[illegible]

ತಿಂಡಿ ತಿನ್ನಿಸಿ ಓಟು ಪಡೆಯುವ ಚಪಲ

[illegible]

ರೈತರು ಕಳ್ಳರೊಡನೆ ಕಾದಾಡಿದರು

[illegible]

ಶ್ರೀ ಜಂಗಮ್ಮರಿಗೆ ಅಧಿಕಾರ

[illegible]

ಆಹಾರದ ಅಭಾವ

ಸ್ವಂ ವ] ಕೃಷ್ಣರಾಜನಗರ

[illegible]

1944

ಈ ಕಾಲದಲ್ಲಿ

ಮುದ್ದು

ಮನೆ, ಬಂಗ್ಲೆ, ಸ್ಥೈಟು, ಗದ್ದೆ

ಇವುಗಳನ್ನು

ಕೊಳ್ಳಿರಿ

ಆಸ್ತಿ

ಈ ದಿನವೇ ನಿರ್ಧರಿಸಿ.

ಹೆಚ್ಚಾದ

ಹಣವೇ

ಮಾ ೧.

ಬಿ. ಎಸ್. ಸುಬ್ಬರಾವ್

ಸಿಟಿ ಅಕ್ಷನೀರಿಂಗ್ ಕೋ.,

(ಬಂಗ್ಲೆ ಎದುರು)

ಮೈಸೂರು.

ಸಾರ್ವಜನಿಕ ನಲ್ಲಿ ತೊಂದರೆ

[illegible] ಜೆ. ಸ್ವಾಮಿದಾಸ್.

ಸುಮಾತ್ರಾದಲ್ಲಿ ಭೂಕಂಪ

[illegible]

ನಮ್ಮ ಕೃಷ್ಣರಾಜನಗರದ ಏಜೆಂಟರು

ಶ್ರೀ ಕೆ. ಆರ್. [illegible] ಕೃಷ್ಣರಾಜನಗರಕ್ಕೆ 'ಸಾಧ್ವಿ' ಪತ್ರಿಕೆಯ ಏಜೆಂಟರನ್ನಾಗಿ [illegible]

[illegible]

ವ್ಯವಸ್ಥಾಪಕ, ಸಾಧ್ವಿ

[illegible]

3 ನೇ ನಂಬರಿನ

ಹೆಚ್. ಕೆ. ಕುಮಾರಸ್ವಾಮಿ

[illegible]

ಹುಡುಗರು ಬೇಕು

"ಸಾಧ್ವಿ" ಪತ್ರಿಕೆಯನ್ನು [illegible]

ವ್ಯವಸ್ಥಾಪಕ, ಸಾಧ್ವಿ.

Edited, printed and published by A. R. Nagarajan, at the Sadhvi Press, D Subbiah Road, Mysore.

ಟೆಂಡರ್ ನೋಟೀಸ್

ಮೈಸೂರು ಅರಮನೆಗೆ ಬೇಕಾದ ಸುಮಾರು ನಾಲ್ಕು ಸಾವಿರದ ಎರಡುನೂರು (೪೨೦೦) ನಲ್ಲಿ ಹಾಡುಕಗಾಗಿ ಸರಬರಾಜು ಮಾಡಲ್ಪಟ್ಟ ಟೆಂಡರುಗಳನ್ನು ಈ ಕೆಳಗೆ ರುಜುಮಾಡಿರುವವರಲ್ಲಿ [illegible] ಕಳುಹಿಸಬಹುದು.

[illegible] ಹೆಚ್ಚು ವಿವರಗಳನ್ನು ತಿಳಿದು ಕೊಳ್ಳಬಹುದು.

ಮೈಸೂರು — ಗಾರ್ಡನ್ ಜಡ್ಜ್ ಖಾನ್, [illegible] ಸೆಕ್ರೆಟರಿಯವರು

ಸ್ತ್ರೀಯರ ಸೌಕರ್ಯಕ್ಕಾಗಿ

[illegible]

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿ ಪುಡಿ

ಬನ್ನೀ ಉಪಯೋಗಿಸಿ.

ಡಿ. ಪುಟ್ಟಯ್ಯ ಬಿನ್ ಸಿದ್ದಮುಂಡಿ, ದೇವರಾಜ ಮಾರ್ಕೆಟ್, ಮೈಸೂರು

[illegible]

ಸಂಪುಟ ೨] ಭಾನುವಾರ ೯—೧—೪೪ [ಸಂಚಿಕೆ ೧೪೯

ಯುಗೋಸ್ಲೇವಿಯಾದಲ್ಲಿ ಮಿತ್ರರು ಇಳಿದರೇ ?

ಕಾಂಗ್ರೆಸ್ ಭವನದ ಸಾಮಾನುಗಳನ್ನು ಕೊಡಲು ತಿರಸ್ಕಾರ

೧೧೫ ವರ್ಷದ ಮುದುಕಿಗೆ ಹೊಸ ಹಲ್ಲುಗಳು ಹುಟ್ಟುತ್ತಿವೆ

ಮೊಹರಂ ಹಬ್ಬದಲ್ಲಿ ಮಹಡಿ ಕುಸಿಯಿತು

ಕಾನ್‌ಪುರದ ಮನೆಯೊಂದರ ಮಹಡಿ ಮೇಲೆ ಮೊಹರಂ ಉತ್ಸವ ನೋಡಲು ಬಹುಮಂದಿ ಸೇರಿದ್ದುದರಿಂದ ಅದು ಕುಸಿದು ಬಿತ್ತು. ಮೂವರು ಪ್ರಾಣಹೊಂದಿದರು. ಏಳು ಜನರಿಗೆ ಗಾಯಗಳಾಗಿವೆ.

೧೨ ಅಂಗಡಿಗಳು ಭಸ್ಮೀಭೂತ

ಕಲ್ಕತ್ತಾ ಮಾರ್ಕೆಟ್‌ನಲ್ಲಿದ್ದ ಸುಮಾರು ೧೬ ಅಂಗಡಿಗಳಿಗೆ ಮೊನ್ನೆ ಮಧ್ಯರಾತ್ರಿ ಬೆಂಕಿ ಹತ್ತಿ ಭಸ್ಮವಾದುವು. ಆ ರಾತ್ರಿ ಪೂರ್ತಿ ಒಂದು ಬೆಂಕಿ ಆರಿಸುವ ಯಂತ್ರ ಅಲ್ಲಿ ಕೆಲಸ ಮಾಡಬೇಕಾಯಿತು. ನಷ್ಟವೆಷ್ಟಾಯಿತೆಂಬುದು ಸ್ಪಷ್ಟಪಟ್ಟಿಲ್ಲ.

ಅಹಮದಾಬಾದಿನಲ್ಲಿ ಕರ್ಫ್ಯೂ ಆಜ್ಞೆ

ಮೊಹರಂ ಗಲಭೆ ಪರಿಣಾಮವಾಗಿ ಅಹಮದಾಬಾದಿನ ಜಿಲ್ಲಾ ನ್ಯಾಯಾಧೀಶರು ಮೊನ್ನೆಯಿಂದ ೪ ದಿನಗಳವರೆಗೆ ಆ ನಗರದಲ್ಲಿ ಕರ್ಫ್ಯೂ ಆಜ್ಞೆಯನ್ನು ಜಾರಿಗೆತಂದಿದ್ದಾರೆ. ಆ ಆಜ್ಞೆಯಂತೆ ರಾತ್ರಿ ೮ ರಿಂದ ಬೆಳಿಗ್ಗೆ ೬ ರವರೆಗೆ ನಗರದ ರಸ್ತೆಗಳಲ್ಲಿ ಜನ ತಿರುಗಾಡಕೂಡದು.

ಮೊಹರಂ ಮಂಟಪ ಕದಲಿಲ್ಲ

ಅಹಮದಾಬಾದಿನ ಮೊಹರಂ ಉತ್ಸವ ಕಾಲಕ್ಕೆ ಪೋಲೀಸರ ಬೆತ್ತ ತಾಕಿತೆಂದು ರಸ್ತೆಯಲ್ಲೇ ಇಳಿಸಿದ ಉತ್ಸವದ ಮಂಟಪಗಳು ಇನ್ನೂ ಅಲ್ಲೇ ಇರುವುವೆಂದು ಗೊತ್ತಾಗಿದೆ.

ಅಧ್ಯಾಪಕರ ಉಪವಾಸ ಆರಂಭ

ಅಹಮದಾಬಾದಿನ ಪ್ರೇಮಚಂದ್ ರಾಯಚಂದ್ ಟ್ರೈನಿಂಗ್ ಕಾಲೇಜಿನ ಅಧ್ಯಾಪಕರಿಗೆ ತಿಂಗಳಿಗೆ ೭ ಮತ್ತು ೮ ರೂ ಗಳಂತೆ ಯುದ್ಧಕಾಲದ ವಿಶೇಷ ಭತ್ಯ ಸಲ್ಲುತ್ತಿದೆ. ಅದನ್ನು ೧೧ ಮತ್ತು ೧೪ ರೂಗಳಿಗೆ ಏರಿಸಬೇಕೆಂದು ಕೇಳಿಕೊಂಡಿದ್ದರು. ಅದಕ್ಕೆ ಮನ್ನಣೆ ಸಿಗಲಿಲ್ಲವಾಗಿ ಆ ಕಾಲೇಜಿನ ಸ್ತ್ರೀ ಮತ್ತು ಪುರುಷ ಅಧ್ಯಾಪಕರೆಲ್ಲರೂ ಮೊನ್ನೆಯಿಂದ ಉಪವಾಸ ಮುಷ್ಕರ ಪ್ರಾರಂಭಿಸಿರುವರು. ಕೇಳಿಕೆ ಸಲ್ಲುವವರೆಗೆ ಮುಷ್ಕರ ನಿಲ್ಲುವುದಿಲ್ಲವೆಂದು ತಿಳಿದುಬಂದಿದೆ.

ಸೂರತ್ತಿನಲ್ಲಿ ಸಹಾನುಭೂತಿ

ಅಹಮದಾಬಾದಿನಲ್ಲಿ ಉಪವಾಸ ಹೂಡಿರುವ ಅಧ್ಯಾಪಕರಿಗೆ ತಮ್ಮ ಸಹಾನುಭೂತಿ ತೋರುವ ಸಲುವಾಗಿ ಸೂರತ್ತಿನ ಟಿ. ಜೆ. ಟ್ರೈನಿಂಗ್ ಕಾಲೇಜಿನ ೬೦ ಮಂದಿ ಉಪಾಧ್ಯಾಯರೂ ಉಪವಾಸಮಾಡುತ್ತಿರುವರು. ತಮ್ಮ ಭತ್ಯ ದೊರಕದಿದ್ದಲ್ಲಿ ೨ ನೇ ತಾ|| ನಿಂದ ತಾವೂ ಮುಷ್ಕರ ಹೂಡುವವರಾಗಿದ್ದಾರೆ.

ಕೌಂಟ್ ಚಿಯಾನೋ ವಿಚಾರಣೆ

ಇಟಲಿಯ ಮಾಜಿ ವಿದೇಶಾಂಗ ಮಂತ್ರಿ, ಮುಸಲೋನಿಯ ಅಳಿಯ ಕೌಂಟ್ ಚಿಯಾನೋವರ ವಿಚಾರಣೆ ನೆನ್ನೆ ... ಇವರ ಜೊತೆ ... ಬಂಧಿಸಲ್ಪಟ್ಟಿದ್ದರು ... ಇವರುಗಳಿಗೆ ... ಮರಣದಂಡನೆ ವಿಧಿಸಲಾಗಿದೆ.

ಕಾಂಗ್ರೆಸ್ಸಿನವರ ಪ್ರಾರ್ಥನೆಗೆ ತಿರಸ್ಕಾರ

ಅಹಮದಾಬಾದಿನ ೩೦ ಮಂದಿ ಕಾಂಗ್ರೆಸ್ಸಿನ ಸಾಧಾರಣ ಸದಸ್ಯರು ಅಲ್ಲಿನ ಜಿಲ್ಲಾ ನ್ಯಾಯಾಧೀಶರಿಗೆ ಒಂದು ಅರ್ಜಿಯನ್ನು ಹಾಕಿ ಅಹಮದಾಬಾದ್ ಕಾಂಗ್ರೆಸ್ ಭವನದಲ್ಲಿದ್ದ ಸಾಮಾನು ಸರಂಜಾಮುಗಳನ್ನು ಜಿಲ್ಲಾ ನ್ಯಾಯಾಧೀಶರ ಆಜ್ಞೆಯಂತೆ ಸರ್ಕಾರದವರು ವಶಪಡಿಸಿಕೊಂಡಿದ್ದನ್ನು ಪುನರ್ವಿಮರ್ಶಿಸಿ, ಸಾಮಾನುಗಳನ್ನು ವಾಪಸ್ಸು ಕೊಡುವಂತೆ ಪ್ರಾರ್ಥಿಸಿದ್ದರು. ಅವು ಗುಜರಾತ್ ಪ್ರಾಂತಿಕ ಸಮಿತಿಯದಲ್ಲವೆಂದೂ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ಸಿನವರದೆಂದೂ ಅವರು ... ಆ ಅರ್ಜಿಯನ್ನು ನ್ಯಾಯಾಧೀಶರು ಮುಂಬಯಿ ಸರ್ಕಾರದ ಮುಂದಿಟ್ಟರು. ಕಾಂಗ್ರೆಸ್ಸಿನವರ ಪ್ರಾರ್ಥನೆ ತಿರಸ್ಕರಿಸಲ್ಪಟ್ಟಿದೆ.

ವೃದ್ಧಳಿಗೆ ಹಲ್ಲು ಹುಟ್ಟುತ್ತಿದೆ

ಭೋಪಾಲ್ ನಿವಾಸಿ ಹಲೀಮಾ ಬೀಬಿ ಎಂಬ ೧೧೫ ವರ್ಷ ವಯಸ್ಸಿನ ಹಲ್ಲು ಬಿದ್ದಿರುವ ವೃದ್ಧೆಗೆ ಮತ್ತೆ ಹಲ್ಲುಗಳು ಹುಟ್ಟುತ್ತಿವೆ. ಆಕೆ ತನಗೆ ೩೨ ಹಲ್ಲುಗಳೂ ಹುಟ್ಟುವುವೆಂದು ನಂಬಿರುವಳು. ಈಗಾಗಲೇ ಒಂದು ಹಲ್ಲು ಹುಟ್ಟಿದೆ. ಅದು ಮನುಷ್ಯರ ... ವಾಗಿಯೂ ಇದೆ.

೨೧ ಸಾವಿರ ರೂ. ಮಾಯ

ಮದರಾಸಿನ ಸಾಹುಕಾರರ ಅಂಗಡಿಯೊಂದರಲ್ಲಿ ಇಡಲಾಗಿದ್ದ ೨೧,೦೦೦ ರೂ. ಮಾಯವಾಗಿದೆ. ಪೋಲೀಸಿನವರಿಗೆ ರಿಪೋರ್ಟ್ ಕೊಡಲಾಗಿದೆ. ಪತ್ತೆ ಕೆಲಸವೂ ನಡೆಯುತ್ತಿದೆ.

ಗೋವಧೆಗೆ ಮದರಾಸಿನಲ್ಲೂ ಅಡ್ಡಿ

೧೧ ವರ್ಷಕ್ಕಿಂತ ಚಿಕ್ಕ ವಯಸ್ಸಿನ ದನಕರುಗಳನ್ನು ವಧಿಸಕೂಡದೆಂದು ಮದರಾಸ್ ಸರ್ಕಾರದವರು ... ಹೊಸ ಆಜ್ಞೆಯನ್ನು ಹೊರಡಿಸಿರುವರು.

ಹತ್ತಿ ಬಟ್ಟೆ ಅಷ್ಟು ಪರಿಮಿತಿ

... ಸರ್ಕಾರದ ಅಪ್ಪಣೆ ಹೊರಟಿದೆ.

ಕೇಸಿಯವರ ಆಸಕ್ತಿ

ಬಂಗಾಳಕ್ಕೆ ನೂತನವಾಗಿ ನೇಮಕವಾಗಿರುವ ಗವರ್ನರ್ ಮಿ|| ರಿಚರ್ಡ್ ಕೇಸಿಯವರನ್ನು ಲಂಡನ್ನಿನಲ್ಲಿ ಪತ್ರಿಕಾ ಪ್ರತಿನಿಧಿಗಳು ಭೇಟಿಮಾಡಿದಾಗ, ತಾವು ಭಾರತವು ಎದುರಿಸುತ್ತಿರುವ ಸ್ಥಿತಿಗತಿಗಳನ್ನು ಅರಿಯಲು ತುಂಬಾ ಕುತೂಹಲಿಗಳಾಗಿರುವುದಾಗಿಯೂ ಭಾರತ ಬಿಕ್ಕಟ್ಟನ್ನು ಬಗೆಹರಿಸಲು ತಮ್ಮ ಕೈಲಾದುದನ್ನೆಲ್ಲಾ ಮಾಡುವುದಾಗಿಯೂ ಹೇಳಿದರು.

ಜಿನೀವಾದಲ್ಲಿ ಧಾಳಿ ಎಚ್ಚರಿಕೆ

ಸ್ವಿಟ್ಜರ್ಲೆಂಡಿನ ಜಿನೀವಾ ನಗರದಲ್ಲಿ ಮೊನ್ನೆ ಮಧ್ಯರಾತ್ರಿ ವಿಮಾನ ಧಾಳಿ ಎಚ್ಚರಿಕೆ ಸೂಚನೆ ಕೊಡಲಾಗಿತ್ತು. ಕೊಂಚ ಕಾಲದವರೆಗೆ ಮಾತ್ರ ಎಚ್ಚರಿಕೆ ಕೊಡಲಾಗಿತ್ತು.

ಗೋಬೆಲ್ಸನ ಧೈರ್ಯದ ನುಡಿ

ಈಗಾದರೂ ನಮ್ಮ ತೊಂದರೆಗಳೆಲ್ಲಾ ಕ್ಷಣಿಕವಾದುವು. ನಮಗೇ ವಿಜಯ ಖಂಡಿತ. ಎಂಬುದಾಗಿ ಜರ್ಮನ್ ಪ್ರಚಾರ ಮಂತ್ರಿ ಗೋಬೆಲ್ಸನು ರಷ್ಯಾ ರಣರಂಗದಲ್ಲಿರುವ ಜರ್ಮನ್ ಸೈನ್ಯಕ್ಕೆ ... ಭಾಷಣಮಾಡುವಾಗ ಹೇಳಿದ್ದಾನೆ.

ಸೋಮಾರಿಗಳಿಗೆ ಶಿಕ್ಷಣ

ಜರ್ಮನಿ ಕೈಗಾರಿಕಾ ಕ್ಷೇತ್ರಗಳಲ್ಲಿನ ಸೋಮಾರಿ ಕೆಲಸಗಾರರಿಗೆ ಚುರುಕಾಗಿ ಕೆಲಸ ಮಾಡುವ ಬಗ್ಗೆ ವಿಶೇಷ ಶಿಕ್ಷಣವನ್ನು ಕೊಡಲು ಏರ್ಪಾಡು ಮಾಡಿದೆ. ... ತಿಂಗಳಲ್ಲಿ ಶಿಕ್ಷಣ ಮುಗಿಯುವುದು.

ಗಿರಕಟ್ಟಿ ಜಿಲ್ಲೆಯ ವಿಮಾನ

... ವಿಮಾನಗಳು ... ಬಳಿ ... ವಿಮಾನ ... ಬ್ರಿಟಿಷರೂ ... ಬಹಳ ... ವಿಜಯ ... ಕಾರ್ಯ ...

ಬಿಟ್ಟೇರಿಯಾ ಮೊಹ್ಲಾರಾಗಿರಲಿ

... ಮಾಡಿದರೆ ... ಎಚ್ಚರಿಸಿದ್ದಾರೆ.

ಪೌರಸಭೆಯ ಉಪ ಸಮಿತಿಗಳು

ಸ್ವಂ. ವ.] ಮೈಸೂರು ೯

ನೆನ್ನೆ ರಾಜಧಾನಿ ಮುನಿಸಿಪಲ್ ಭವನದಲ್ಲಿ ಮೈಸೂರು ಪೌರಸಭಾ ವಿಶೇಷ ಮೀಟಿಂಗ್ ನಡೆದು ಈ ಕೆಳಗೆ ಕಂಡಂತೆ ವಿವಿಧ ಸಮಿತಿಗಳಿಗೆ ಸದಸ್ಯರನ್ನು ಚುನಾಯಿಸಲಾಯಿತು.—ಮೇನೇಜಿಂಗ್ ಸಮಿತಿ, ಶ್ರೀಯುತರುಗಳಾದ ಎ. ಕೃಷ್ಣಮೂರ್ತಿ, ಟಿ. ವೆಂಕಟರಾಮಯ್ಯ, ಬಿ. ನಾರಾಯಣಸ್ವಾಮಿ, ಎಂ. ಎಲ್. ಜೋಯಿಸ್, ಎ. ವಿ. ವೆಂಕಟರಾಮಯ್ಯ, ಜಿ. ಜನಾರ್ದನನಾಯುಡು, ಜಿ. ಅಹಮದ್ ಖಾನ್, ಕೆ. ಸಿದ್ದಯ್ಯ.

ವರ್ಕ್ಸ್ ಕಮಿಟಿ.—ಶ್ರೀಯುತರುಗಳಾದ ಸಿ. ಸೀತಾರಾಮಯ್ಯ, ವಿ. ಎಲ್. ದಾಸಪ್ಪ, ಎ. ಎಲ್. ಸೂರ್ಯನಾರಾಯಣರಾವ್, ಎಂ. ಎಸ್. ನಂಜಪ್ಪ.

ಆಡಿಟಿಂಗ್ ಕಮಿಟಿ.—ಶ್ರೀಯುತರುಗಳಾದ ಎ. ಕೃಷ್ಣಮೂರ್ತಿ, ಬಿ. ನಾರಾಯಣಸ್ವಾಮಿ, ಟಿ. ನರಸಿಂಹ ಅಯ್ಯಂಗಾರ್.

ಆರೋಗ್ಯ ಸಮಿತಿ.—ಶ್ರೀಯುತರುಗಳಾದ ಟಿ. ಮರಿಯಪ್ಪ, ಎಂ. ಆರ್. ಸಿ. ಬಸಪ್ಪ, ಟಿ. ಚಂದ್ರಶೇಖರಗೌಡ, ಡಾ|| ಎ. ವಿ. ರಂಗರಾವ್.

ಟೌನ್‌ಹಾಲ್ ಕಮಿಟಿ.—ಶ್ರೀಯುತರುಗಳಾದ ಟಿ. ಆರ್. ರಂಗಸಾಮಯ್ಯ, ಟಿ. ನರಸಿಂಹ ಅಯ್ಯಂಗಾರ್, ಎಂ. ಎಲ್. ರಾಮಚಂದ್ರರಾವ್, ಅಗರಂ ರಂಗಯ್ಯ.

ಲೀಗಲ್ ಸಬ್ ಕಮಿಟಿ:—ಶ್ರೀಯುತರುಗಳಾದ ಬಿ. ನಾರಾಯಣಸ್ವಾಮಿ, ಸಿ. ಸೀತಾರಾಮಯ್ಯ, ಎಂ. ಎಲ್. ಜೋಯಿಸ್.

ಟೆಂಡರ್ಸ್ ಬೋರ್ಡ್ ಕಮಿಟಿ:—ಶ್ರೀಯುತರುಗಳಾದ ಇ. ಪಿ. ನಂಜಪ್ಪ, ಸಿ. ಸೀತಾರಾಮಯ್ಯ.

ಎಕ್ಸೈಸ್ ಸಮಿತಿ:—ಶ್ರೀಯುತರುಗಳಾದ ಎಂ. ಎಲ್. ರಾಮಚಂದ್ರರಾವ್, ಮತ್ತು ಎ. ಎಲ್. ಸೂರ್ಯನಾರಾಯಣರಾವ್.

ಫುಟ್‌ಬಾಲ್

ಎಂ. ಎಸ್. ಎಸ್. ಚೆಟ್ಟಿ ಸ್ಮಾರಕ ಪಂದ್ಯಗಳ ಸಾಲಿನಲ್ಲಿ ನೆನ್ನೆ ಸಂಜೆ ದೊಡ್ಡ ಕೆರೆ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ರೋವರ್ಸ್ ಕ್ಲಬ್ಬಿನವರು ಮೈಸೂರು ಮುಸ್ಲಿಂ ಕ್ಲಬ್ಬನ್ನು ೧ ಗೋಲಿನಿಂದ ಸೋಲಿಸಿದರು.

ಯುಗೋಸ್ಲಾವಿಯಾದಲ್ಲಿ ಮಿತ್ರರು

ಯುಗೋಸ್ಲಾವಿಯಾದ ಏಡ್ರಿಯಾಟಿಕ್ ತೀರದ ಹಲವು ಮುಖ್ಯ ಪ್ರದೇಶಗಳಲ್ಲಿ ಮಿತ್ರರ ದಳಗಳು ಇಳಿದಿರುವುವು ಎಂಬುದಾಗಿ ಸ್ಟಾಕ್‌ಹೋಂ ಪತ್ರಿಕೆ ಪ್ರಕಟಿಸಿದೆ. ಈ ರೀತಿ ಇಳಿದ ಮಿತ್ರ ದಳದವರು ಜರ್ಮನರೊಡನೆ ತೀವ್ರವಾಗಿ ಕಾದಾಟ ನಡೆಸುತ್ತಿರುವರೆಂದು ಮತ್ತೊಂದು ಸುದ್ದಿ ಹೇಳುತ್ತದೆ. ಲಂಡನ್ನಿನಲ್ಲಿ ಮಾತ್ರ ಮಿತ್ರರು ಇನ್ನೂ ಯುಗೋಸ್ಲಾವಿಯಾದಲ್ಲಿಳಿದಿಲ್ಲವೆಂದು ಹೇಳಲಾಗುತ್ತಿದೆ.

ಕಮಲಾದೇವಿಯವರ ಬಿಡುಗಡೆ ?

ವೆಲ್ಲೂರು ಸೆರೆಮನೆಯಲ್ಲಿರುವ ಶ್ರೀಮತಿ ಕಮಲಾದೇವಿಯವರನ್ನು ಆರೋಗ್ಯ ಕಾರಣಗಳಿಗಾಗಿ ಇಷ್ಟರಲ್ಲೇ ಮದರಾಸ್ ಸರ್ಕಾರದವರು ಬಿಡುಗಡೆಮಾಡುವ ಸಂಭವವಿರುವುದಾಗಿ ತಿಳಿದುಬಂದಿದೆ.

ಕೊಡಗಿನಿಂದ ಮೈಸೂರಿಗೆ ಅಕ್ಕಿ

ಸ್ವಂ. ವ.] ಬೆಂಗಳೂರು ೮

ಮೈಸೂರಿಗೆ ಅಕ್ಕಿ ಕಳಿಸುವ ವಿಚಾರವಾಗಿ ಕೊಡಗಿನ ಚೀಫ್ ಕಮೀಷನರೊಡನೆ ಮಾತುಕತೆ ನಡೆಸಲು ಸರಬರಾಯಿ ಶಾಖೆ ಸಚಿವರಾದ ಶ್ರೀ ಎಂ. ಎ. ಶ್ರೀನಿವಾಸನ್‌ರವರು ಮುಂದಿನ ವಾರ ಕೊಡಗಿಗೆ ತೆರಳುವರು.

ಹರಿಜನರು ನಾಮಿನೇಷನ್ ಹೊಂದಲಿ

ತಮ್ಮ ಕೋಮಿನ ಹಕ್ಕುಬಾಧ್ಯತೆಗಳನ್ನು ಕಾಪಾಡಿಕೊಳ್ಳಲು ಹರಿಜನರು ಸರ್ಕಾರದ ನಾಮಿನೇಷನನ್ನು ಒಪ್ಪಿಕೊಳ್ಳಬಹುದೆಂದು ಮೈಸೂರು ಕಾಂಗ್ರೆಸ್ ಪಾರ್ಲಿಮೆಂಟರಿ ಸಮಿತಿಯವರು ತೀರ್ಮಾನಿಸಿರುವರು. ಆ ಕಾರಣ ಕಾಂಗ್ರೆಸ್ ಸದಸ್ಯರಾದ ಶ್ರೀ ಎ. ಕೆ. ಜಯವಂತ್ತಾ... ವರು, ಬೆಂಗಳೂರು ನಗರ ಸಭೆಗೆ ನಾಮಿನೇಷನ್ ಮಾತನ್ನು ಒಪ್ಪಿಕೊಳ್ಳಬಹುದೆಂದೂ ಇತ್ಯರ್ಥವಾಯಿತು.

ಪೋಲೀಸರ ಮೇಲೆ ಗುಂಪೊಂದು ಬಿತ್ತು

ಮೊನ್ನೆ ರಾತ್ರಿ ೧೦ ಗಂಟೆ ಸಮಯದಲ್ಲಿ ಬೆಂಗಳೂರು ದೊಡ್ಡಪೇಟೆಯಲ್ಲಿ ಗೊಂದಲ ಹುಟ್ಟಿದ ಕಾರಣ ವಿಶೇಷ ಪೋಲೀಸರು ಕಾವಲು ಕೆಲಸದಲ್ಲಿದ್ದರು. ಅವರ ಮೇಲೆ ಯಾವುದೋ ಗುಂಪೊಂದು ಹಠಾತ್ತ ದಾಳಿ ಮಾಡಿತೆಂದು ವರದಿಯಾಗಿದೆ. ತಕ್ಷಣವಾಗಿ ೧೮ ಮಂದಿ ಪೋಲೀಸರಿಗೂ ಒಬ್ಬ ಖಾಸಗೀ ವ್ಯಕ್ತಿಗೂ ಗಾಯಗಳಾಗಿವೆ. ಗಾಯಗೊಂಡವರನ್ನು ಆಸ್ಪತ್ರೆಗೆ ಸಾಗಿಸಿ ಮುತುವರ್ಜಿಯಿಂದ ನೋಡಿಕೊಳ್ಳಲಾಗುತ್ತಿದೆ. ಹಲ್ಲೆ ಮಾಡಿದ ಗುಂಪಿನವರನ್ನು ಬಂಧಿಸಿ ಸನ್ನಿವೇಶವನ್ನು ಹತೋಟಿಗೆ ತರಲಾಗಿದೆಯೆಂದು ತಿಳಿದುಬಂದಿದೆ.

ಅಧ್ಯಕ್ಷರ ಆಯ್ಕೆಗೆ ಕಾಂ|| ಸ್ಪರ್ಧಿಗಳು

ಬೆಂಗಳೂರು ಪೌರಸಭೆಯ ಅಧ್ಯಕ್ಷಸ್ಥಾನಕ್ಕೆ ಶ್ರೀ ಎಂ. ಎ. ಗೋಪಾಲಸ್ವಾಮಿ ಅಯ್ಯಂಗಾರ್ಯರನ್ನು ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯನ್ನಾಗಿ ಆರಿಸಲಾಗಿದೆ.

ದೇವರ ಕಣ್ಣನ್ನೇ ಕದ್ದರು

ಚಿಕ್ಕಪೇಟೆಯ ಶ್ರೀ ಆಂಜನೇಯಸ್ವಾಮಿ ದೇವಸ್ಥಾನಕ್ಕೆ ಯಾರೋ ದುರಾತ್ಮರು ಬೀಗ ಮುರಿದು ನುಗ್ಗಿ ದೇವರಿಗೆ ಹಾಕಿದ್ದ ಕಣ್ಣು, ನಾಮ, ಸಾಲಿಗ್ರಾಮದ ಸರ ಇವುಗಳನ್ನೂ ಕೆಲವು ಸಾಲಿಗ್ರಾಮಗಳನ್ನೂ ಅಪಹರಿಸಿಕೊಂಡು ಪರಾರಿಯಾಗಿದ್ದಾರೆ.

ಹಿಮ್ಲರ್ ಸ್ಪೈನಿನಲ್ಲಿ

ಜರ್ಮನರ ಗುಪ್ತ ದಳಗಳ ಮುಖಂಡರಾದ ಹೆರ್ ಹಿಮ್ಲರ್‌ರು ಪಶ್ಚಿಮ ಯೂರೋಪಿನ ಸ್ಪೈನಿನ ಸಮುದ್ರತೀರ ಭಾಗದಲ್ಲಿ ಒಂದು ಭವನವನ್ನು ಕೊಂಡುಕೊಂಡು ಅಲ್ಲೇ ವಾಸಿಸಲು ತೀರ್ಮಾನಿಸಿದ್ದಾರೆ. ಈಗಾಗಲೆ ಅವರು ಸ್ಪೈನಿಗೆ ಆಗಮಿಸಿದ್ದಾರೆ. ಭವನವನ್ನೂ ಕೊಂಡುಕೊಳ್ಳಲಾಗಿದೆ.

ಶತ್ರುವಿನ ಭೀಕರ ಧಾಳಿ ನಿರೀಕ್ಷೆ

ಜರ್ಮನರು ಬ್ರಿಟನ್ನಿನ ಮೇಲೆ ಪ್ರಬಲ ಧಾಳಿ ನಡೆಸಬಲ್ಲರೆಂದರೂ ಮನಸ್ಸಿನಲ್ಲಿ ಹೀಗೆ ಸಿದ್ಧರಿದ್ದಾರೆ. ೧೯೦-೧೯೧ ರಲ್ಲಿ ನಡೆಸಿದ್ದಕ್ಕಿಂತ ಭಯಂಕರ ಧಾಳಿ ಅವರು ನಡೆಸಲಾರದು. ಆದರೂ ಇನ್ನರಲ್ಲೇ ಬ್ರಿಟನ್ ಮೇಲೆ ಅವರು ಭೀಕರ ಧಾಳಿ ನಡೆಸಬಹುದು ಎಂಬುದಾಗಿ ರಾಯಿಟರ್ ನೈಸರ್ಗಿಕ ಬಾತ್ಮೀದಾರರು ತಿಳಿಸಿದ್ದಾರೆ.

ಬೆನಿಸ್ ಲಂಡನ್ನಿನಲ್ಲಿ

ಮಾಸ್ಕೋವಿಗೆ ತೆರಳಿ ಅಲ್ಲಿ ರಷ್ಯಾ ಜೆಕೋಸ್ಲೋವಾಕಿಯಾ ಮೈತ್ರಿಯುತ ಒಪ್ಪಂದಕ್ಕೆ ಸಹಿ ಹಾಕಿದ ಅಧ್ಯಕ್ಷ ಡಾ|| ಬೆನಿಸ್‌ರು ಪರ್ಷಿಯಾ ಮತ್ತು ಆಫ್ರಿಕಾಗಳಲ್ಲಿ ಪ್ರವಾಸ ಮುಗಿಸಿ ಈಗ ಲಂಡನ್ನನ್ನು ತಲುಪಿದ್ದಾರೆ.

ದಂಡಯಾತ್ರೆ ಸೇನಾಪತಿ-ಗೊತ್ತಿಲ್ಲದೆಡೆಗೆ

ಜ|| ಐಸೆನ್ ಹೋವರ್‌ರವರ ಅಧೀನದಲ್ಲಿ ದಂಡಯಾತ್ರೆಯ ಸೇನಾಪತಿಯಾಗಿರುವ ಜ|| ಮಾಂಟಗೊಮರಿಯವರು ಬ್ರಿಟನ್ನಿನಿಂದ ಯಾವುದೋ ಒಂದೆಡೆಗೆ ಪ್ರಯಾಣ ಬೆಳೆಸಿದರು.

ಮುಳುಗಿದ ಹಡಗಿಂದ ಉಳಿದು ಬಂದರು

ಮಿತ್ರಪಕ್ಷಗಳ ಹಡಗೊಂದಕ್ಕೆ ಜಪಾನಿನ ಜಲಾಂತರ್ಗಾಮಿಯ ಟಾರ್ಪೆಡೋ ಹೊಡೆತ ಕೊಟ್ಟು ಮುಳುಗಿಸಿತು. ಅದರಲ್ಲಿದ್ದ ೨೨ ಮಂದಿ ಪೈಕಿ ೧೬ ಜನ ಪಾರಾಗಿರುವರು. ಒಬ್ಬ ಅಧಿಕಾರಿಯೂ ಇಬ್ಬರು ಭಾರತೀಯ ನಾವಿಕರೂ ಸಣ್ಣ ದೋಣಿಗಳಲ್ಲಿ ತೇಲಿಕೊಂಡು ಈಗ ಭಾರತವನ್ನು ಸೇರಿರುವರು. ಆ ಹಡಗಿಗೆ ಟಾರ್ಪೆಡೊ ಹೊಡೆತ ಕೊಟ್ಟ ಜಪಾನೀ ಜಲಾಂತರ್ಗಾಮಿಯು ನೀರಿನಿಂದ ಮೇಲೆ ಬಂದು ಬದುಕಿಕೊಳ್ಳಲು ದೋಣಿಗಳಲ್ಲಿ ಹೋಗುತ್ತಿದ್ದವರ ಮೇಲೆ ಸಹ ಗುಂಡು ಹಾರಿಸುತ್ತಿತ್ತೆಂದು ಪಾರಾಗಿ ಬಂದಿರುವವರು ಹೇಳಿದರು.

ಎಣ್ಣೆಗಳ ವ್ಯಾಪಾರ ಪ್ರತಿಬಂಧ

ಕಡಲೆಕಾಯಿ ಎಣ್ಣೆ, ಹೊಂಗೆ ಎಣ್ಣೆ, ಎಳ್ಳೆಣ್ಣೆ, ಹುಚ್ಚೆಳ್ಳೆಣ್ಣೆ, ಹತ್ತಿಬೀಜದ ಎಣ್ಣೆ, ಸಾಸಿವೆ ಎಣ್ಣೆ ಮತ್ತು ಇವುಗಳ ಹಿಂಡಿಗಳ ಸಟ್ಟಾ ವ್ಯಾಪಾರವನ್ನು ಪ್ರತಿಬಂಧಿಸುವ ಆಜ್ಞೆಯೊಂದನ್ನು ಭಾರತ ಸರ್ಕಾರ ಹೊರಡಿಸಿದೆ. ಈ ಆಜ್ಞೆ ೧೧ ನೇ ತಾರೀಖಿನಿಂದ ಜಾರಿಗೆ ಬರುವುದು.

ಪುಸ್ತಕ ಮಾರಾಟಗಾರರು ವರದಿ ಒಪ್ಪಿಸಬೇಕು

ಪರದೇಶಗಳಿಂದ ಪುಸ್ತಕಗಳನ್ನೂ ಮಾಸಪತ್ರಿಕೆಗಳನ್ನೂ ತರಿಸುವವರು ಇನ್ನು ಮುಂದೆ ಅವುಗಳ ಮಾರಾಟದ ಬೆಲೆಯನ್ನೂ ಗುರುತುಮಾಡಬೇಕು. ಮತ್ತು ತಮಗೆ ಬಂದ ಪುಸ್ತಕಗಳ ಸಂಖ್ಯೆ, ಅವುಗಳನ್ನು ಬಿಡುಗಡೆಯಾಗಿ ಮಾಡಿದ ಬಗೆ ಇತ್ಯಾದಿ ವಿವರಗಳನ್ನು ಭಾರತ ಸರ್ಕಾರದ ಸಿವಿಲ್ ಸಪ್ಲೈ ಶಾಖೆಗೆ ತಿಳಿಸಬೇಕೆಂದು ಸರ್ಕಾರದ ಆಜ್ಞೆ ಹೊರಟಿದೆ.

ಸೈನ್ಸ್ ಕಾಂ|| ಮುಂದಿನ ಅಧ್ಯಕ್ಷರು

ಮೊನ್ನೆ ತಾನೇ ಡೆಹಲಿಯಲ್ಲಿ ಮುಕ್ತಾಯಗೊಂಡ ಇಂಡಿಯನ್ ಸೈನ್ಸ್ ಕಾಂಗ್ರೆಸ್ ಅಧಿವೇಶನದಲ್ಲಿ ಮುಂದಿನ ಅಧಿವೇಶನದ ಅಧ್ಯಕ್ಷ ಪೀಠಕ್ಕೆ ಸರ್ ಶಾಂತಿ ಸ್ವರೂಪ ಭಟ್ನಗರ್‌ರವರನ್ನು ಚುನಾಯಿಸಲಾಯಿತು. ಮುಂದಿನ ಅಧಿವೇಶನ ನಾಗಪುರದಲ್ಲಿ ನಡೆಯುವುದು.

ಬಂಗಾಳದಿಂದ ಪಂಜಾಬ್-ಸಿಂಧ್‌ಗಳಿಗೆ ಕಾಲ್ನಡಿಗೆ ಪ್ರಯಾಣ

ಬಂಗಾಳಕ್ಕೆ ಬಂದ ಬ್ಯಾನರ್ ಕೆಲಸಗಾರರು ಸಿಂಧ್ ಮತ್ತು ಪಂಜಾಬಿಗೆ ಹಿಂತಿರುಗಲು ಬಂಗಾಳ ಸರ್ಕಾರದವರು ಸೌಲಭ್ಯ ಕಲ್ಪಿಸಲಿಲ್ಲವಾಗಿ ಅವರುಗಳು ಬಂಗಾಳದಿಂದ ಪಂಜಾಬ್ ಮತ್ತು ಸಿಂಧ್ ಪ್ರಾಂತ್ಯಗಳಿಗೆ ಕಾಲ್ನಡಿಗೆಯಲ್ಲೇ ಪ್ರಯಾಣಹೊರಡುವುದಾಗಿ ನಿರ್ಧರಿಸಿರುವರು.

ಸಾಧ್ವಿ

ರಾಜಧಾನಿಯ ರಾಷ್ಟ್ರೀಯ ದಿನ ಪತ್ರಿಕೆ

ಪ್ರತಿದಿನವೂ ಪ್ರಕಟವಾಗುವುದು

ಕೂಡಲೇ ಚಂದಾದಾರರಾಗಿರಿ!

ಚಂದಾ ತಿಂಗಳಿಗೆ 0-8-0 ಮಾತ್ರ

ವರ್ಷಕ್ಕೆ ಟಪಾಲು ಮೂಲಕ 1-0-0

ವ್ಯವಸ್ಥಾಪಕರಿಗೆ ಬರೆಯಿರಿ.

ತೂಕದಲ್ಲಿ ವ್ಯತ್ಯಾಸ

ಸ್ವಂ. ವ.] ಕೃಷ್ಣರಾಜನಗರ ೭

ಈ ಊರಿನಲ್ಲಿ ಸಕ್ಕರೆಯನ್ನು ಕೆಲವು ಡಿಪೋಗಳಲ್ಲಿ ಚಿಲ್ಲರೆ ಸಕ್ಕರೆ ಅಂತ ಅಳೆದುಕೊಡುತ್ತಾರೆ. ಅದನ್ನು ಬೇರೆ ಕಡೆಗಳಲ್ಲಿ ತೂಗಿಸಿ ನೋಡಿದರೆ ೩ ಪಾವು ಸಕ್ಕರೆಯೇ ಕಡಿಮೆ ಬರುತ್ತದೆ. ಈ ರೀತಿ ಸರ್ಕಾರದವರು ನೇಮಿಸಿರತಕ್ಕ ಡಿಪೋಗಳಲ್ಲಿ ಈ ರೀತಿ ಮೋಸದ ನಡೆವಳಿಕೆಗಳು ಬರದಂತೆ ನೋಡಿಕೊಳ್ಳಬೇಕು.

ಸಾಲನಿಕೋಲ್‌ನಲ್ಲಿ ಬೀದಿ ಕಾಳಗ

ಬ್ರಿಟಿಷ್ ೮ ನೇ ಸೇನೆ ಸಾಲನಿಕೋಲ್ ನಗರವನ್ನು ಪ್ರವೇಶಿಸಿದೆ. ಆ ನಗರದಲ್ಲಿ ಎರಡು ಪಕ್ಷಗಳವರಿಗೂ ನಡು ರಸ್ತೆಗಳಲ್ಲಿ ಹೋರಾಟ ತೀವ್ರವಾಗಿ ನಡೆಯುತ್ತಿದೆ.

೮ ನೇ ಸೇನೆ ಮೇಲೆ ಧಾಳಿ

ಏಡ್ರಿಯಾಟಿಕ್ ತೀರದ ಆರ್ಟೋನಾಕ್ಕೆ ಮೂರು ಮೈಲಿ ಮೇಲುಕ್ಕಿರುವ ೮ ನೇ ಸೇನೆ ನೆಲೆಗಳನ್ನು ಕಿತ್ತುಕೊಳ್ಳುವ ಸ... ವಾಗಿ ಜರ್ಮನರು ಪ್ರಬಲ ಧಾಳಿ ಆರಂಭಿಸಿರುವರು.

೬೫ ಜರ್ಮನ್ ವಿಮಾನಗಳ ನಾಶ

ಮೊನ್ನೆ ಫ್ರಾನ್ಸ್ ಮತ್ತು ಜರ್ಮನಿ ಮೇಲೆ ಧಾಳಿ ನಡೆಸಲು ಹೋಗಿದ್ದ ಅಮೇರಿಕ ವಿಮಾನಗಳ ಪೈಕಿ ೬೫ ವಿಮಾನಗಳು ಹಿಂತಿರುಗಿಲ್ಲ. ಜರ್ಮನರ ೬೫ ವಿಮಾನಗಳನ್ನು ನಾಶಗೊಳಿಸಲಾಗಿದೆ.

ನಮ್ಮ ಕೃಷ್ಣರಾಜನಗರದ ಏಜೆಂಟರು

ಶ್ರೀ ಕೆ. ಆರ್. ಸಿದ್ದಲಿಂಗಯ್ಯನವರನ್ನು ಕೃಷ್ಣರಾಜನಗರದಲ್ಲಿ 'ಸಾಧ್ವಿ' ಪತ್ರಿಕೆಯ ಏಜೆಂಟರನ್ನಾಗಿ ನೇಮಿಸಿರುತ್ತೇವೆ.

ಮಹಾ ಜನರು ಇವರ ಮೂಲಕ ನಮ್ಮ ಪತ್ರಿಕೆಗಳನ್ನು ಕೊಂಡುಕೊಂಡು ಪ್ರೋತ್ಸಾಹಿಸಬೇಕೆಂದು ವಿನಂತಿ

ವ್ಯವಸ್ಥಾಪಕ, ಸಾಧ್ವಿ.

ಹುಡುಗರು ಬೇಕು

"ಸಾಧ್ವಿ" ಪತ್ರಿಕೆಯನ್ನು ಮನೆಮನೆಗೆ ಹಂಚಲು ಹುಡುಗರು ಬೇಕು. ಬೈಸಿಕಲ್ ಬಿಡಲು ಬಲ್ಲವರಾದರೆ ಉತ್ತಮ. ಕೂಡಲೇ ಬಂದು ಕಾಣಿರಿ.

ವ್ಯವಸ್ಥಾಪಕ, ಸಾಧ್ವಿ.

Edited, printed and published by A. R. Nagarajan, at the Sadhvi Press, D. Subbiah Road, Mysore.

ಸರ್ವದಾ ಕೊಳ್ಳಿರಿ!

Truefit READY MADE CLOTHES MADURA

ಏನನ್ನು?

ನವೀನ ಮಾದರಿಯಲ್ಲಿ ತಯಾರಿಸಿದ ಸ್ವಚ್ಛವಾದ ರೆಡಿಮೇಡ್ ಬಟ್ಟೆಗಳನ್ನು

ಸ್ವಾಮಿ ಅಂಡ್ ಸ್ಟೋರ್ಸ್‌ನ

ಲ್ಲಿ ಕೊಳ್ಳಿರಿ.

ಎಲ್ಲಾ ವಿಧ ಆಕಾರಗಳ ಸ್ತ್ರೀಯರ ವಸ್ತ್ರ ಮಕ್ಕಳ ಉಡುಪು ತಯಾರಾಗಿ ಸಿದ್ಧವಾಗಿವೆ.

ದಾಸಪ್ರಕಾಶ್ ಭವನ, ಮಾದರ್ ಕಟ್ಟೆ, ಮೈಸೂರು.

ಶ್ರೀ ಯರ ಸೌ ಕ ರ್ಯ ಕ್ಕಾ ಗಿ

೫೦|| ೧೦೦ಗಳಿಂದ ಕೆಲವು ಪ್ರಿಸ್ಕ್ರಿಪ್ಷನ್ ವ್ಯಾಪಾರ ಕೊಡುವ ಏರ್ಪಾಡು ಮಾಡಿರುತ್ತೇವೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿ ಪುಡಿ

ಯನ್ನೇ ಉಪಯೋಗಿಸಿ.

ಡಿ. ಪುಟ್ಟೆಂಪ್ಪ ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ವಿ ಸ — ಇಲ್ಲಿ ಮತ್ತು ಸಂತೆಪೇಟೆ ಬ್ರಾಂಚ್ ಆಫೀಸಿನಲ್ಲೂ ರವೆ, ಗೋಧಿಹಿಟ್ಟು ಮತ್ತು ಮೈದಾಹಿಟ್ಟು ಸಹ ದೊರೆಯುತ್ತೆ. ಅಲ್ಲದೆ ಬೂರಾ ಮತ್ತು ಕಲ್ಲು ಸಕ್ಕರೆ ರೇಷನ್ ಕಾರ್ಡುಗಳಿಗೆ ದೊರೆಯುತ್ತವೆ.

WEEKLY EDITION

ಸಂಪುಟ ೮] ಸೋಮವಾರ ೧೦-೧-೪೪ [ಸಂಚಿಕೆ ೧೧

ಕಿರೋವೊಗ್ರಾಡ್ ನಗರ ರಷ್ಯನರ ವಶ

ಸ್ವತಂತ್ರಭಾರತಸರ್ಕಾರಮಾತ್ರನಮ್ಮನ್ನು ಸಮರಕ್ಕೆ ಳೆಯಬಲ್ಲದು

ನ್ಯಾಯಾಸ್ಥಾನದಲ್ಲೇ ಪ್ರೊ|| ಇನ್ಸ್‌ಪೆಕ್ಟರಿಗೆ ಚೂರಿ ಇರಿತ

ಸರಸರಾಜು ಸಚಿವರ ಆಗಮನ

ಸ್ವಂ ಸು] ಮೈಸೂರು ೧೦

ಸರಬರಾಯಿ ಸಚಿವರಾದ ಶ್ರೀ ಎಂ. ಎ. ಶ್ರೀನಿವಾಸನ್‌ರವರು ಈ ದಿನ ಸಂಜೆ ೧೩ ಜ ನ ನಗರಿಗೆ ಆಗಮಿಸಿದರು. ಬುಧವಾರ ಶ್ರೀರಂಗಪಟ್ಟಣಕ್ಕೆ ಭೇಟಿ ಇತ್ತು, ೧೩ ನೇ ತಾ|| ಮಡಕೇರಿಗೆ ಪ್ರಯಾಣ ಬೆಳೆಸುವರು. ತಾ|| ೧೪ ರಿಂದ ೧೬ ರ ವರೆಗೆ ಕೊಡಗಿನ ಸಂಸ್ಥಾನಕ್ಕೆ ಅರ್ಸಿನ ಸರಬರಾಜು ವಿಚಾರದಲ್ಲಿ ಅಲ್ಲಿನ ಅಧಿಕಾರಿಗಳೊಡನೆ ಮಾತುಕತೆ ನಡೆಸುವರು. ೧೭ ನೇ ತಾ|| ರಾಜಧಾನಿಗೆ ಹಿಂತಿರುಗಿ, ೧೮ ನೇ ತಾ|| ಬೆಂಗಳೂರಿಗೆ ಪ್ರಯಾಣ ಬೆಳೆಸುವರು.

ಕೇಡಿಯ ದಸ್ತಗಿರಿ

ರಾಜಧಾನಿಯ ಒಲಂಪಿಯ ಸಿನಿಮಾ ಮಂದಿರ ಬಳಿ ಮಂಜು ಎಂಬ ಕೇಡಿಯು ಸಮಾನಕರವಾಗಿ ತಿರುಗುತ್ತಿದ್ದನೆಂದು ದೇವರಾಜ ಪೋಲೀಸರು ನಿನ್ನೆ ರಾತ್ರಿ ದಸ್ತಗಿರಿ ಮಾಡಿದ್ದಾರೆ.

ಒಲಿಶಾದ್ರಿಪುರದ ನಂಜಯ್ಯ ಎಂಬುವ ನು ನಿನ್ನೆ ರಾತ್ರಿ ಹಳೇ ಅಗ್ರಹಾರದ ಛತ್ರದ ಬೀದಿಯಲ್ಲಿ ಕಳುವು ಮಾಡುತ್ತಿದ್ದನೆಂದು ದಸ್ತಗಿರಿ ಮಾಡಲಾಗಿದೆ.

ವಿದ್ಯಾ ಸಚಿವರ ಪ್ರವಾಸ

ವಿದ್ಯಾ ಸಚಿವರಾದ ಶ್ರೀ ಅಪ್ಪಾಜಿಗೌಡರು ತಾ|| ೧೧ ರಿಂದ ೨೦ ರ ವರೆಗೆ ಹಾಸನ ಮತ್ತು ತುಮಕೂರು ಜಿಲ್ಲೆಯಲ್ಲಿ ಪ್ರವಾಸ ಮಾಡುವರು. ಚನ್ನರಾಯಪಟ್ಟಣ, ಹೊಳೆನರಸೀಪುರ, ಹಾಸನ, ಸಕಲೇಶಪುರ, ಬೇಲೂರು, ಅರಸೀಕೆರೆ, ಬಾಣಸಂದ್ರ, ತುರುವೇಕೆರೆ, ಚಿಕ್ಕನಾಯಕನಹಳ್ಳಿ, ತುಮಕೂರು, ಸಿರ, ಮಧುಗಿರಿ, ಕೊರಟಗೆರೆ, ಕುಣಿಗಲ್ ಸ್ಥಳಗಳಿಗೆ ಭೇಟಿ ಕೊಡುವರು.

ದಪ್ಪಕ್ಕಿ ದರ ಕಮ್ಮಿಯಾಗಬೇಕು

ಸರ್ಕಾರಿ ಡಿಪೋಗಳಲ್ಲಿ, ಸಣ್ಣ ಅಕ್ಕಿ ಮತ್ತು ದಪ್ಪ ಅಕ್ಕಿ ಸಹ ಒಂದೇ ಬೆಲೆಗೆ ಕರಿ ಮಾಡುತ್ತಾರೆ. ಛತ್ರವನ್ನು ಮಾಡಿದ ಕಡಿಮೆ ಧಾರಣೆಗೆ ತೆಗೆಯುತ್ತಾರೆ. ಇದು ಸರಿಯಾದುದಲ್ಲ. ಆದಕಾರಣ ದಪ್ಪಕ್ಕಿ ದರವನ್ನು ಕಡಿಮೆ ಮಾಡಿ ಬಡ ಜನರಿಗೆ ಅನುಕೂಲವಾಗುವಂತೆ ಸರ್ಕಾರದವರು ತಕ್ಕ ಏರ್ಪಾಡು ಮಾಡಬೇಕೆಂದು ಪ್ರಜಾಪ್ರತಿನಿಧಿ ಸಭಾ ಸದಸ್ಯರಾದ ಶ್ರೀ ಚೌಡಯ್ಯನವರು ಬರೆಯುತ್ತಾರೆ.

ವಸಂತಾ ಪ್ರಾವಿಷನ್ ಸ್ಟೋರ್ಸ್

ಮೈಸೂರು ಜಗನ್ಮೋಹನ ಬಂಗಲೆ ಕೆಳದಲ್ಲಿರುವ ವಸಂತ ಪ್ರಾವಿಷನ್ ಸ್ಟೋರ್ಸಿನವರಿಗೆ ಲೈಸೆನ್ಸಿಂಗ್ ಸಾಮಾನುಗಳ ಮಾರಲು ಸರ್ಕಾರದವರು ರಹದಾರಿ ಕೊಟ್ಟಿರುವರು. ಇಷ್ಟವುಳ್ಳ ಮಹಾಜನರು ತಮ್ಮ ಲೈಸೆನ್ಸಿಂಗ್ ಕಾರ್ಡನ್ನು ಅವರಿಗೆ ತೋರಿಸಿ ತಮ್ಮ ಹೆಸರನ್ನು ಅವರಲ್ಲಿ ರಿಜಿಸ್ಟರ್ ಮಾಡಿಸಿಕೊಳ್ಳಬಹುದೆಂದು ಪ್ರೊಪ್ರೈಟರ್ಸ್‌ನವರು ತಿಳಿಸುತ್ತಾರೆ.

ಫುಟ್‌ಬಾಲ್

ಎಂ.ಎಸ್.ಎಸ್. ಚಾಂಪಿ ಫುಟ್‌ಬಾಲ್ ಪಂದ್ಯಗಳ ಸಾಲಿನಲ್ಲಿ ನೆನ್ನೆ ಸಂಜೆ ದೊಡ್ಡ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ರೈಫಲ್ಸ್ 'ಬಿ' ಟೀಮಿನವರು ಮಹಾರಾಜಾಸ್ ಸ್ಪೋರ್ಟಿಂಗ್‌ನವರನ್ನು ೨ ಗೋಲಿನಿಂದ ಸೋಲಿಸಿದರು.

ಕಿರೋವೊಗ್ರಾಡ್ ಮುತ್ತಿಗೆ

ರಷ್ಯನರು ನಿನ್ನೆ ಕಿರೊವೊಗ್ರಾಡ್ ಮೇಲೆ ಬಲವಾಗಿ ಧಾಳಿನಡೆಸಿ ಕಿರೊವೊಗ್ರಾಡ್ ಪಟ್ಟಣವನ್ನು ಪೂರ್ಣವಾಗಿ ಸುತ್ತುಗಟ್ಟಿದ್ದಾರೆ. ಬುಧವಾರ ಈ ಧಾಳಿ ಆರಂಭವಾಯಿತು. ೩ ದಿನ ಹೋರಾಟ ನಡೆಯಿತು. ೧೦೦ ಮೈಲಿ ವಿಸ್ತಾರದ ರಣಕ್ಷೇತ್ರದಲ್ಲಿ ಜರ್ಮನರ ರಕ್ಷಣಾ ಕ್ಷೇತ್ರವನ್ನು ಭೇದಿಸಿಕೊಂಡು ೨೫ ಮೈಲಿಗಳಷ್ಟು ದೂರ ರಷ್ಯನ್ ಸೈನ್ಯಗಳು ಮುಂದೆ ನುಗ್ಗಿ ಹೋಗಿವೆ.

ಶತ್ರುವಿಗೆ ದಂಡಯಾತ್ರೆ ಭೀತಿ

ಮಿತ್ರರ ದಂಡಯಾತ್ರೆಗೆ ಹೆದರಿ ಜರ್ಮನರು ಪಶ್ಚಿಮ ಯೂರೋಪಿನಲ್ಲಿ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿರುವಂತೆ ಉತ್ತರ ಸಮುದ್ರ ತೀರಭಾಗದಲ್ಲಿ ನಾರ್ವೆಯ ತೀರವನ್ನು ಬಿಟ್ಟು, ಉಳಿದ ಕಡೆಯಲ್ಲಿ ೩೦೦೦ ಧಾರಿ ಆರ್ಟಿಲ್ಲರಿ ಗನ್ನುಗಳನ್ನು ಸಿದ್ಧಗೊಳಿಸಿ, ಸಮುದ್ರದಲ್ಲಿ ಲಕ್ಷಾಂತರ ಮೈನುಗಳನ್ನು ಹಾಕಿರುವರೆಂದು ಜರ್ಮನ್ ವಾರ್ತಾ ಸಂಸ್ಥೆ ವರದಿ ಮಾಡಿದೆ.

ಜವಹರಲಾಲರಿಗೆ ಪುಸ್ತಕ ಕೊಡಲು ನಿರಾಕರಣೆ

ಪಂಡಿತ ಜವಹರಲಾಲರ ಪುತ್ರಿ ಇಂದಿರಾ ನೆಹರು ಜೈಲಿನಲ್ಲಿರುವ ತಮ್ಮ ತಂದೆಗೆ ಹಲವು ಪುಸ್ತಕಗಳನ್ನು ಕಳುಹಿಸಿದ್ದರು. ಅವುಗಳೊಡನಿದ್ದ ಇಂಡಿಯಾ ಇನ್‌ಡಿಪೆಂಡೆಂಟ್ಸ್ ಎಂಬ ಪುಸ್ತಕವನ್ನು ಜವಹರಲಾಲರಿಗೆ ತಲುಪಿಸಲು ಸಾಧ್ಯವಿಲ್ಲವೆಂದು ಮುಂಬಯಿ ಸರ್ಕಾರದವರು ಆ ಪುಸ್ತಕವನ್ನು ಇಂದಿರಾ ನೆಹರುರವರಿಗೆ ವಾಪಸು ಮಾಡಿದ್ದಾರೆಂದು ತಿಳಿದುಬಂದಿದೆ.

ಪಂಚಾಯತಿಗಳೇ ಕ್ಷೇಮ

ಕಲಹಗಳ ಪೈಸಲಾತಿಗಳು ಪಂಚಾಯಿತಿಗಳಲ್ಲೇ ನಡೆದರೆ ಉತ್ತಮ. ನವೀನ ಕಾಲದ ನ್ಯಾಯಸ್ಥಾನಗಳ ಶೋಷಣೆಗಿಂತ ಪೂರ್ವಕಾಲದ ಪಂಚಾಯಿತಿ ಪದ್ಧತಿಗಳನ್ನು ಪುನರುಜ್ಜೀವನಗೊಳಿಸಬೇಕೆಂಬುದಾಗಿ ಕಲ್ಕತ್ತೆಯಲ್ಲಿ ಮುಸ್ಲಿಂ ಯುವಕರ ಸಂಘದಲ್ಲಿ ಭಾಷಣ ಮಾಡುತ್ತಾ ಕಲ್ಕತ್ತೆ ಹೈಕೋರ್ಟ್ ಜಡ್ಜ್ ಸಾಹೆಬ್ ಮೋಟಿಖಾನ್ ಹೇಳಿದ್ದಾರೆ.

ನ್ಯಾಯಪೀಠದೆದುರು ಪ್ರೊ|| ಇನ್ಸ್‌ಪೆಕ್ಟರಿಗೆ ಚೂರಿ ಏಟು

ಪೂನಾದ ಕ್ಯಾಪಿಟಲ್ ಸಿನಿಮಾ ಬಾಂಬ್ ಕೇಸಿನ ವಿಚಾರಣೆ ಅಲ್ಲಿನ ಡಿಸ್ಟ್ರಿಕ್ಟ್ ಸೆಷನ್ಸ್ ಕೋರ್ಟಿನಲ್ಲಿ ವಿಚಾರಣೆಗೆ ಬಂದಿತು. ಸಿ ಐ ಡಿ ಇನ್ಸ್‌ಪೆಕ್ಟರ್ ಮಿ|| ಎಫ್ ಯಂ ರೋಚ್‌ರವರು ಸಾಕ್ಷ್ಯ ಹೇಳಲು ನಿಂತಾಗ ನ್ಯಾಯಸ್ಥಾನದ ಪ್ರೇಕ್ಷಕರ ವಿಭಾಗದಲ್ಲಿದ್ದ ಒಬ್ಬಾತನು ಹಾರಿ ಬಂದು ಅವರ ಬೆನ್ನನ್ನು ಚೂರಿಯಿಂದ ತಿವಿದನು. ಕೆಳಕ್ಕೆ ಬಿದ್ದ ಇನ್ಸ್‌ಪೆಕ್ಟರನ್ನು ಕೂಡಲೆ ಆಸ್ಪತ್ರೆಗೆ ಸಾಗಿಸಲಾಯಿತು. ಪ್ರಾಣಾಪಾಯದ ಭಯವೇನಿಲ್ಲ. ತಿವಿದಾತನನ್ನು ಹಿಡಿಯಲು ಬಂದವರು ಅವನನ್ನು ಮುತ್ತಿದರು. ಕೊನೆಗೆ ಈ ಸಂಬಂಧವಾಗಿ ಡಿ. ಡಿ ದಿವೇಕರ್ ಎಂಬ ೨೭ ವರ್ಷದ ವಿದ್ಯಾರ್ಥಿಯನ್ನು ದಸ್ತಗಿರಿ ಮಾಡಲಾಯಿತು. ಇನ್ನೂ ೧೫ ಜನ ವಿದ್ಯಾರ್ಥಿಗಳನ್ನು ಬಂಧಿಸಲಾಯಿತು. ದಿವೇಕರ್‌ನಿಂದ ಹೇಳಿಕೆ ತೆಗೆದುಕೊಂಡು ಆತನನ್ನು ಜೈಲಿನಲ್ಲಿಡಲಾಗಿದೆ. ಉಳಿದ ೧೫ ಮಂದಿಯನ್ನು ಬಿಟ್ಟುಬಿಟ್ಟರೆಂದು ತಿಳಿದು ಬಂದಿದೆ.

ಸೇನೆಗೆ ಸೇರೆನ್ನಲು ಸ್ವತಂತ್ರ ಭಾರತಕ್ಕೆ ಮಾತ್ರ ಹಕ್ಕಿದೆ

ಲಂಡನ್ನಿನಲ್ಲಿ ಸಾರ್ವತ್ರಿಕ ಯುದ್ಧ ಕರೆ ಕೊಡುಟಿಂದಿನಿಂದ ಇದೇ ಮೊದಲು ಲಂಡನ್ ನಿವಾಸಿ ಭಾರತೀಯರಾದ ಶ್ರೀ ಸುರೇಶ ವೈದ್ಯ ಎಂಬುವರು ಆ ಕರೆಗೆ ಕಿವಿ ಬಾಗದೆ ಆಕ್ಷೇಪಣೆ ತೋರಿದವರು. ಸ್ವತಂತ್ರ ಭಾರತ ಸರ್ಕಾರ ಮಾತ್ರ ನನ್ನನ್ನು ಯುದ್ಧಕ್ಕೆ ಕರೆಯಲು ಸಾಧ್ಯ ಎಂದೂ, ಭಾರತ ಪ್ರತಿಕ್ರಿಯಾನಿರತನಾದ ನನಗೆ ಜನ್ಮಸಿದೆ. ಆದಕಾರಣ ನಿಮ್ಮ ಕರೆಗೆ ನಾನು ಒಪ್ಪುದಿಲ್ಲ ಎಂದೂ ವೈದ್ಯರು ತಿಳಿಸಿದ್ದಾರೆ. ಶ್ರೀ ವೈದ್ಯರು ಸ್ವರಾಜ್ಯ ಭವನದ ಮಾಜಿ ಕಾರ್ಯದರ್ಶಿಗಳು ಮತ್ತು ಪ್ರಸಿದ್ಧ ಪತ್ರಿಕೋದ್ಯೋಗಿಗಳು.

ಆರ್ಥಿಕ ಸುಧಾರಣೆಗೆ ಐಕಮತ್ಯಬೇಕು

ಭಾರತದ ಆರ್ಥಿಕ ಸ್ಥಿತಿ ಉತ್ತಮಗೊಳ್ಳಬೇಕಾದರೆ ರೈತ, ವ್ಯಾಪಾರಿ ಮತ್ತು ಬಂಡವಾಳಗಾರರೆಲ್ಲರೂ ಐಕ್ಯಗೊಳ್ಳಬೇಕು. ಆ ವರ್ಗದವರ ಪ್ರತಿನಿಧಿಗಳು ಕೂಡಿಕೊಳ್ಳುವ ಪತ್ರಿಕೆಯೊಂದು ಬರೆದಿದೆ.

ಡೈರೆಕ್ಟರುಗಳ ಚುನಾವಣೆ

ಮೈಸೂರು ೧೦

ನಿನ್ನೆ ನಡೆದ ರಾಜಧಾನಿಯ ಮಾದಿ ಪರಸ್ಪರ ಸಹಾಯಸಂಘದ ಡೈರೆಕ್ಟರುಗಳ ಚುನಾವಣೆ ಈ ಕೆಳಗೆ ಕಂಡಂತಿದೆ—

ಶ್ರೀಗಳಾದ ಹೆಚ್. ಲಕ್ಷ್ಮೀನಾರಾಯಣರಾವ್ (ಪ್ರೆಸಿಡೆಂಟ್), ಎಂ. ಎ. ದೊರೆಸ್ವಾಮಿ ಅಯ್ಯಂಗಾರ್ (ವೈಸ್ ಪ್ರೆಸಿಡೆಂಟ್), ಪಿ. ಗೋಪಾಲಕೃಷ್ಣಶೆಟ್ಟಿ (ಸೆಕ್ರೆಟರಿ), ಎಸ್. ಶ್ರೀರಂಗಾಚಾರ್, ಹೆಚ್. ಕೆ. ಕುಮಾರಸ್ವಾಮಿ, ಯಂ. ವಿ ಜಂಬುನಾಥನ್, ಯಂ. ಎ ಜೋಯಿಸ್, ಕೆ. ಶೇಷಾದ್ರಿ, ಎಸ್ ಗೋಪಾಲಸ್ವಾಮಿ, ಕೆ. ಎಸ್. ಸತ್ಯನಾರಾಯಣರಾವ್, ಯ. ವಿ ನಾಯಕರಾವ್, ಕೆ ಸುಬ್ಬರಾವ್, ಯಂ. ಆರ್ ನಾರಾಯಣಮೂರ್ತಿ, ಯ. ನಾಗಪ್ಪ, ಟಿ ಯಸ್. ಸುದರ್ಶನಾಚಾರ್.

---

೪೦೦ ಜನರ ಆತ್ಮಹತ್ಯೆ

ಸಾಂಘೈ ನಗರದ ೪೦೦ ಮಂದಿ ಬಳಿ ಇದ್ದ ನೂಲು ಮತ್ತು ಮಾರಾಟದ ಸಾಮಾನುಗಳನ್ನು ಬಲ ಪ್ರಯೋಗಿಸಿ ಜಪಾನರು ತಮಗಾಗಿ ತೆಗೆದುಕೊಂಡರೆಂದೂ ಈ ಅವಮಾನವನ್ನು ಸಹಿಸಲಾರದೆ ಆ ನಾನೂರು ಮಂದಿಯೂ ಆತ್ಮಹತ್ಯೆ ಮಾಡಿಕೊಂಡರೆಂದೂ ಚುಂಕಿಂಗ್‌ಗೆ ಬರುತ್ತಿರುವ ಪ್ರಯಾಣಿಕರು ಹೇಳುತ್ತಿರುವರು.

ಕಾಂಗ್ರೆಸ್ ಧ್ವಜ ಹಾರಾಡಲು ಅಡ್ಡಿ

ಜನವರಿ ಕೊನೆ ಹೊತ್ತಿಗೆ ಕಾಶಿಯಲ್ಲಿ ಸ್ವದೇಶೀ ವಸ್ತು ಪ್ರದರ್ಶನ ನಡೆಯಲೇರ್ಪಾಡಾಗಿತ್ತು. ಆ ಕಾಲಕ್ಕೆ ಕಾಂಗ್ರೆಸ್ ಧ್ವಜ ಹಾರಾಡಕೂಡದು ಮತ್ತು ಸರ್ಕಾರಕ್ಕೆ ವಿರೋಧವಾದ ಭಾಷಣಗಳಾಗಕೂಡದೆಂದು ಜಿಲ್ಲಾ ನ್ಯಾಯಾಧೀಶರು ಪ್ರದರ್ಶನ ಸಮಿತಿಯವರಿಗೆ ಆಜ್ಞೆ ಮಾಡಿದರು. ಕಾಂಗ್ರೆಸ್ ಬಾವುಟ ಹಾರಾಡಿದರೆ ತೊಂದರೆ ಇಲ್ಲವೆಂದೂ ಸರ್ಕಾರೀ ವಿರೋಧ ಭಾಷಣಗಳು ನಡೆಯದಂತೆ ನೋಡಿಕೊಳ್ಳುವುದಾಗಿಯೂ ಬಾವುಟದ ಪ್ರತಿಬಂಧಕ ತೆಗೆದುಹಾಕಬೇಕೆಂದೂ ಪ್ರದರ್ಶನ ಸಮಿತಿಯವರು ಬರೆದ ಕಾಗದಕ್ಕೆ ಸರ್ಕಾರ ಇನ್ನೂ ಉತ್ತರ ಕೊಟ್ಟಿಲ್ಲ. ಆದಕಾರಣ ಪ್ರದರ್ಶನವನ್ನು ಮುಂದಕ್ಕೆ ಹಾಕಲಾಗಿದೆಯೆಂದು ತಿಳಿದು ಬಂದಿದೆ.

ಕಿರೋವೊಗ್ರಾಡ್ ರಷ್ಯನ ವಶ

ಕ್ರಿಮೆಂಚೇಗ್‌ಗೂ ಒಡೆಸ್ಸಾವಿಗೂ ನಡುವೆ ಇರುವ ಪ್ರಮುಖ ಸ್ಥಳವಾದ ಕಿರೋವೊಗ್ರಾಡ್ ನಗರವನ್ನು ೭೨ ಗಂಟೆಗಳ ಕಾಲ ಭಯಂಕರವಾಗಿ ಹೋರಾಡಿ ಕೊನೆಗೆ ಜರ್ಮನರನ್ನು ಅಲ್ಲಿಂದ ಓಡಿಸಿ ರಷ್ಯನರು ಆ ನಗರವನ್ನು ತಮ್ಮ ವಶಮಾಡಿಕೊಂಡಿದ್ದಾರೆ.

ಕೋಹಿಮಾಂಗ್‌ಗೆ ಬೊಂಡೆತ

ಮಿತ್ರ ವಿಮಾನಗಳು ಕೋಹಿಮಾಂಗ್ ಮೇಲೆ ಧಾಳಿನಡೆಸಿದುವು. ಅಲ್ಲಿದ್ದ ಶತ್ರುಗಳ ವಿನಾಶಿಕೆ ಮತ್ತು ಸಾಮಾನು ಸರಂಜಾಮುಗಳು ತುಂಬಿದ ಹಡಗುಗಳ ಮೇಲೆ ಬಾಂಬುಗಳು ಬಿದ್ದುವು. ನಮ್ಮ ಬ್ರಿಟನ್ನಿನಲ್ಲಿ ಭಾರಿ ಕಾರ್ಖಾನೆಗೆ ತತ್ಕಾಲಿಕವಾಗಿ ನಿಂತಿದೆ.

ವಾರ ಭವಿಷ್ಯ

(ಶ್ರೀ ನಿತ್ಯಾನಂದ ಸ್ವಾಮಿಗಳಿಂದ)

ತಾ|| ೧೦-೧-೪೪ರಿಂದ ೧೬-೧-೪೪ರ ವರೆಗೆ

ಮೇಷ — ಈ ವಾರ ನೀವು ಶಾಂತಿಯಿಂದ ವರ್ತಿಸಿ ವೃಥಾ ಸಂಸಾರದಲ್ಲಿ ಜಗಳ ಮಾಡುವುದರಿಂದ ನಿಮಗೂ ಸುಖವಿಲ್ಲ. ನಿಮ್ಮ ಬಂಧುಗಳಿಗೂ ತೊಂದರೆ. ಮಾನಸಿಕ ಚಿಂತೆ, ಆರೋಗ್ಯ ಸಾಧಾರಣವಾಗಿರುವುದು. ಸಾಂಪತ್ತಿಕ ಸ್ಥಿತಿ ಉತ್ತಮ. ಮಿತ್ರರ ಸಹಾಯ ದೊರೆಯುವುದು. ಸ್ತ್ರೀಯರಿಗೆ ನಿರಾಶೆ ತಾಪದಾಯಕವಾಗುತ್ತದೆ. ತಾ|| ೧೧, ೧೨ ಖರ್ಚು, ಜಗಳ, ಅ... ೧೪ ದ್ರವ್ಯಲಾಭ, ಚಿಂತಾನಾಶ.

ವೃಷಭ — ಕಾಲಕ್ಕೆ ತಕ್ಕಂತೆ ನಡೆದರೆ ಒಳಿತು. ಎಲ್ಲದಕ್ಕೂ ಎದೆಗೊಟ್ಟು ಧೈರ್ಯದಿಂದ ವರ್ತಿಸಿ. ಸ್ನೇಹಿತರ ಹಗೆತನ, ಪ್ರಿಯಜನರ ವಿಯೋಗ ಇವು ಸಂಭವಿಸಬಹುದು. ಕೈಗೊಂಡ ಕಾರ್ಯ ಕೆಡಬಹುದು. ಆರೋಗ್ಯ, ಆರ್ಥಿಕ ಸ್ಥಿತಿ ಸಾಧಾರಣ. ಮಾನಸಿಕ ಚಿಂತೆ. ಧೈರ್ಯಗೆಡದೆ ಶಾಂತಿಯಿಂದ ವರ್ತಿಸಿದರೆ ಎಲ್ಲದರಿಂದಲೂ ಪಾರಾಗುವಿರಿ. ತಾ|| ೧೧, ೧೨ ಶಾಂತಿ, ಲಾಭ. ೧೩, ೧೪ ಚಿಂತೆ, ಹಾನಿ, ಖರ್ಚು.

ಮಿಥುನ — ಈ ವಾರ ನಿಮಗೆ ಬಹಳ ಜಾಗರೂಕರಾಗಿರಬೇಕಾಗುತ್ತದೆ. ಸ್ವಜನ ಕಲಹ, ಖರ್ಚು, ನೌಕರಿಯಲ್ಲಿ ಸ್ಥಳಪಲ್ಲಟ ಇವೇ ಮೊದಲಾದವು ನಿಮ್ಮ ಮನಸ್ಸನ್ನು ಅಲ್ಲೋಲಕಲ್ಲೋಲ ಮಾಡಬಹುದು. ಸಾಂಪತ್ತಿಕ ಸ್ಥಿತಿ ಚೆನ್ನಾಗಿದ್ದರೂ ಖರ್ಚು ಜಾಸ್ತಿ. ಮಹಿಳೆಯರು ಆರೋಗ್ಯದ ಕಡೆ ಹೆಚ್ಚು ಗಮನ ಕೊಡಬೇಕು. ತಾ|| ೧೧, ೧೨, ೧೪ ಮಿತ್ರ ಸಹಾಯ, ಸಂಕಟ ನಿವಾರಣೆ.

ಕರ್ಕ — ನಿಮಗೆ ಉದ್ಯೋಗ ತಪ್ಪದಿರದು. ಉತ್ಸಾಹ, ಸ್ಫೂರ್ತಿ ಹೆಚ್ಚುತ್ತವೆ. ಶತ್ರುಗಳು ಶರಣಾಗುತ್ತಾರೆ. ಧನಿಕರ ಸ್ನೇಹ, ಸತ್ಪುರುಷರ ಸಹವಾಸ ಇವು ಲಭಿಸುತ್ತವೆ. ಸ್ತ್ರೀಯರಿಗೆ ಎಲ್ಲಾ ವಿಧದಲ್ಲಿಯೂ ಈ ವಾರ ಸಂತೋಷಕರವಾಗಿರುತ್ತದೆ. ಆರೋಗ್ಯ ಸಾಂಪತ್ತಿಕ ಸ್ಥಿತಿಗಳೂ ಉತ್ತಮವಾಗಿವೆ. ತಾ|| ೧೪ ಲಾಭ, ಆರೋಗ್ಯ, ಪ್ರಗತಿ, ಆನಂದ.

ಸಿಂಹ — ಈ ವಾರ ನಿಮ್ಮ ಜೀವನದಲ್ಲಿ ಅನೇಕ ಅನಪೇಕ್ಷಿತ ಘಟನೆಗಳು ಜರುಗಬಹುದು. ಮನಸ್ಸು ವ್ಯಾಕುಲವಾಗಬಹುದು. ನಿದ್ರಾಶಾಂತಿ ದುರ್ಲಭವಾಗಬಹುದು. ಆರೋಗ್ಯ ಚೆನ್ನಾಗಿದ್ದರೂ ಮನಸ್ಸಿನ ಅಶಾಂತಿಯಿಂದ ಬೇಸರಿಕೆಯಾಗಬಹುದು. ಇಷ್ಟಾದರೂ ಧೈರ್ಯದಿಂದ ಕರ್ತವ್ಯ ಪಥದಲ್ಲಿ ಮುನ್ನಡೆಯಿರಿ. ಸ್ತ್ರೀಯರು ... ಬಿಡಿ. ತಾ|| ೧೧, ೧೪ ಚಿಂತೆ, ಖರ್ಚು.

ಕನ್ಯಾ — ಈ ವಾರ ... ಶತ್ರುಗಳು ... ಆರೋಗ್ಯ ಸಾಧಾರಣವಾಗಿರುವುದು. ಮಾನಸಿಕ ವ್ಯಗ್ರತೆ, ಜೋರಿನಿಂದ ಹಾನಿಯಾಗುವ ಸಂಭವವಿದೆ. ಪೂರ್ವಾರ್ಧ ಮಾತಿಗೆ ಕಿವಿಗೊಡಬೇಡಿ. ಸ್ತ್ರೀಯರು ಎಲ್ಲಾ ವಿಷಯಗಳಲ್ಲೂ ಎಚ್ಚರಿಕೆಯಿಂದಿರುವುದು ಉತ್ತಮ. ತಾ|| ೧೧, ೧೨ ದ್ರವ್ಯಲಾಭ, ಪ್ರಿಯಜನರ ಭೇಟಿ ೧೩, ೧೪, ೧೫ ಚಿಂತೆ, ಅಸ್ವಸ್ಥತೆ, ಖರ್ಚು.

ತುಲಾ — ಆರೋಗ್ಯವನ್ನು ಚೆನ್ನಾಗಿ ನೋಡಿಕೊಳ್ಳಿ. ಮುಂದೆ ಬರುವ ಕಷ್ಟಗಳಿಗೆ ಎದೆಗೊಟ್ಟು ಎದುರಿಸುವ ಧೈರ್ಯವನ್ನು ಈಗಿನಿಂದ ಸಂಚಯಿಸಿಕೊಳ್ಳಿ. ಅಂದರೆ ಹೆದರಬೇಡಿ. ಆಪತ್ಕಾಲದಲ್ಲಿ ಬಂಧುಮಿತ್ರರಿಂದ ತುಂಬಾ ಸಹಾಯವು ಒದಗುತ್ತದೆ. ಸ್ತ್ರೀಯರು ಆರೋಗ್ಯದ ಕಡೆಗೆ ಹೆಚ್ಚು ಲಕ್ಷ್ಯ ಕೊಡಬೇಕು. ತಾ|| ೧೩, ೧೪ ಚಿಂತಾ ಪರಿಹಾರ.

ವೃಶ್ಚಿಕ — ಈ ವಾರ ನಿಮಗೆ ಆರೋಗ್ಯ ತುಂಬಾ ತೊಂದರೆ ಕೊಡುತ್ತದೆ. ಜನಮಾನ, ಅಪವಾದಗಳನ್ನೆದುರಿಸಬೇಕಾಗುವುದು. ಮಾನಸಿಕ ಚಿಂತೆಯುಂಟೂ ಅಸಾಧ್ಯವಾಗಬಹುದು. ದೇವರನ್ನು ನಂಬಿ ಮುಂದುವರಿ ಎಲ್ಲಾ ಸಂಕಟಗಳಿಂದಲೂ ಬಿಡುಗಡೆಯಾಗುವಿರಿ. ತಾ|| ೧೦ ಮಾನಹಾನಿ, ಅಸ್ವಸ್ಥತೆ, ಖರ್ಚು. ೧೧, ೧೨ ಸಂಕಟ ನಿವಾರಣೆ, ದ್ರವ್ಯ ಸಹಾಯ.

ಧನುಸ್ಸು — ಈ ವಾರ ನೀವು ನಿಮ್ಮ ಶತ್ರುಗಳನ್ನು ಸೋಲಿಸಿ ಜಯ ಹೊಂದುವಿರಿ. ಯಶ, ಲಾಭ ಮತ್ತು ಆನಂದ ನಿಮಗೆ ಈ ವಾರ ಹೇರಳವಾಗಿ ದೊರೆಯುತ್ತವೆ. ಆರೋಗ್ಯ, ಚೆನ್ನಾಗಿರುತ್ತದೆ. ಮಾನಸಿಕ ತೃಪ್ತಿ ಪೂರ್ಣವಾಗಿರುತ್ತದೆ. ನಿಮ್ಮ ಹೆಸರು ನಾನಾ ಕಡೆ ಹಬ್ಬುತ್ತದೆ. ತಾ|| ೧೧, ೧೨ ಗಲಾಟೆ, ಖರ್ಚು ಹೆಚ್ಚು ೧೩, ೧೪ ಯಶ, ಲಾಭ, ಸನ್ಮಾನ, ಆನಂದ

ಮಕರ — ಎಲ್ಲಾ ನಿಮಗೆ ಮರುಗೇ! ನೀವು ಇಚ್ಛಿಸುವುದೊಂದು ಆಗುವುದೊಂದು. ಎಲ್ಲಾ ದೈವ ಸಂಕಲ್ಪ. ಆರೋಗ್ಯ ಚೆನ್ನಾಗಿದೆ. ಸಂತತಿಗೆ ಕ್ಲೇಶ. ಸಾಂಪತ್ತಿಕ ಸ್ಥಿತಿ ಇದ್ದುದರಲ್ಲಿ ಉತ್ತಮ. ಈ ರಾಶಿಯ ಸ್ತ್ರೀಯರಿಗೂ ಈ ವಾರ ಕೊಂಚ ತಾಪದಾಯಕವೇ. ತಾ|| ೧೧, ೧೨ ಕೊಂಚ ಮೇಲು. ೧೩, ೧೪, ೧೫ ಎಲ್ಲಾ ವ್ಯತ್ಯಯ.

ಅಮೃತ

ನಿತ್ಯದ ಜ್ವರ, ಮಲೇರಿಯಾ ಜ್ವರ, ಜ್ವರದ ಗಡ್ಡೆ, ಇವುಗಳ ಮೇಲೆ ಬಹಳ ಚೆನ್ನಾಗಿ ಕೆಲಸ ಮಾಡುತ್ತದೆ.

ಪಂಡಿತ
ಕೆ. ವಿ. ವೆಂಕಟರಾಮಯ್ಯ
ಡಿ|| ಬೋರ್ಡ್ ವೈದ್ಯಶಾಲಾ,
ಅರಕಲವಾಡಿ (ಚಾಮರಾಜನಗರ ತಾ||)

೩೫೦ ಅಧ್ಯಾಪಕರ ಉಪವಾಸ

ಅಹಮದಾಬಾದಿನಲ್ಲಿ ತುಟ್ಟಿಭತ್ಯ ಹೆಚ್ಚಿಸಬೇಕೆಂದು ೧೧೦ ಸ್ತ್ರೀ ಅಧ್ಯಾಪಕಿಯರೂ ಮತ್ತು ೨೪೦ ಪುರುಷ ಅಧ್ಯಾಪಕರೂ ಒಟ್ಟು ೩೫೦ ಮಂದಿ ಉಪವಾಸ ಮಾಡುತ್ತಿದ್ದಾರೆ.

ಹಾಸ್ಟಲ್ ಬಿಟ್ಟು ಹೊರಡಿ

ಉಪವಾಸ ಮಾಡುತ್ತಿರುವ ೧೧೦ ಸ್ತ್ರೀ ಅಧ್ಯಾಪಕಿಯರನ್ನೂ, ೨೪೦ ಪುರುಷ ಅಧ್ಯಾಪಕರನ್ನೂ ಅಹಮದಾಬಾದ್ ಪ್ರೇಮಚಂದ್ ರಾಯಚಂದ್ ಕಾಲೇಜಿನಿಂದ ತೆಗೆದುಹಾಕಿ ಅವರುಗಳು ಇರುವ ಕಾಲೇಜ್ ಹಾಸ್ಟಲ್ ಬಿಟ್ಟು ಹೊರಡತಕ್ಕದ್ದೆಂದು ಆಜ್ಞಾಪಿಸಲಾಗಿದೆ.

ಕುಂಭ — ಈ ವಾರ ಎಲ್ಲಾ ವಿಚಾರಗಳಲ್ಲೂ ಶಾಂತಿಯಿಂದಲೂ, ಧೈರ್ಯದಿಂದಲೂ ಮುನ್ನುಗ್ಗಿ. ಮಾನಸಿಕ ಸ್ಥಿತಿ ಸಾಧಾರಣವಾಗಿದೆ. ಆರ್ಥಿಕ ಸ್ಥಿತಿ ಚೆನ್ನಾಗಿದೆ. ವ್ಯಾಪಾರ ಉದ್ಯೋಗಾದಿಗಳಲ್ಲಿ ಸ್ವಲ್ಪ ತೊಂದರೆ. ಹೆಚ್ಚಿನ ಪ್ರಾಪ್ತಿಗೆ ಆಸೆಪಡದೆ ಇದ್ದುದರಲ್ಲಿ ತೃಪ್ತಿ ಹೊಂದುವುದು ಉತ್ತಮ. ತಾ|| ೧೧, ೧೨ ವ್ಯಥೆ, ಸಂತಾಪ, ಕಲಹ ೧೪ ಸಾಧಾರಣ ಫಲ, ಮಿತ್ರಸಹಾಯ.

ಮೀನ — ಹೊಳೆಯುವುದೆಲ್ಲಾ ಚಿನ್ನವಲ್ಲ ಎಂಬ ವಾಕ್ಯ ನಿಮ್ಮ ನೆನಪಿನಲ್ಲಿರಲಿ. ಆರೋಗ್ಯ ಉತ್ತಮವಾಗಿರುತ್ತದೆ. ಮಾನಸಿಕ ಸ್ಥಿತಿ ಸಾಧಾರಣ. ಆರ್ಥಿಕ ಸ್ಥಿತಿ ಚೆನ್ನಾಗಿರುತ್ತದೆ. ಹೊಸ ಸ್ನೇಹಿತರೂ ಬಂಧುಗಳೂ ಹುಟ್ಟಿಕೊಂಡು ನಿಮ್ಮ ಹಣಕ್ಕೆ ಸಂಚಕಾರ ತರುತ್ತಾರೆ. ತಾ|| ೧೧, ೧೨ ಶಾಂತಿ, ದ್ರವ್ಯ ಲಾಭ. ೧೩, ೧೫ ಖರ್ಚು, ಆಲಸ್ಯ, ಭಯ.

ಸರ್ವದಾ ಕೊಳ್ಳಿರಿ! Truthful READYMADE CLOTHES MADURA

ಏನನ್ನು ?
ನವೀನ ಮಾದರಿಯಲ್ಲಿ ತಯಾರಿಸಿದ ಸ್ಟೈಲ್‌ನ ರೆಡಿಮೇಡ್ ಬಟ್ಟೆಗಳನ್ನು
ಸ್ವಾಸ್ತಿಕ್ ಸ್ಟೋರ್ಸ್
ನಲ್ಲಿ ಕೊಳ್ಳಿರಿ.
ಎಲ್ಲ ವಿಧ ತಳತೆಯ ಸ್ತ್ರೀಯರ ಮತ್ತು ಮಕ್ಕಳ ಉಡುಪು ತಯಾರಿಯಲ್ಲಿ ನುರಿತವರು.
ಸ್ವಾಸ್ತಿಕ್ ಸ್ಟೋರ್ಸ್ ಮೈಸೂರು.

ಬ್ರಿಟನ್ನಿನಲ್ಲಿರುವ ಅಮೆರಿಕಾ ದಳಗಳ ಜೊತೆಗೆ ಈಗಾಗಲೇ ಹಿಂದಿನಿಂದ ಹೆಚ್ಚು ಅಮೆರಿಕಾ ದಳಗಳು ಬಂದು ಸೇರುತ್ತಿರುವುದಾಗಿ ವರದಿಯಾಗಿದೆ.

ಚಳಿಗಾಲ

ಅತ್ಯುತ್ತಮವಾದ ರಗ್ಗುಗಳಿಗೂ, ವುಲ್ಲನ್ ಕೋಟಿಂಗ್, ಕಂಬಳಿ ವಗೈರೆಗಳಿಗೂ ಎಲ್ಲೂ ಹುಡುಕಬೇಡಿ.

ನೇರವಾಗಿ ನಮ್ಮಲ್ಲಿಗೆ ಬನ್ನಿ. ಕಡಿಮೆ ಬೆಲೆಗೆ ಉತ್ತಮವಾದ ಮಾಲು ಹೊಂದುವಿರಿ

ಜಿ. ವಿ. ಸೂರ್ಯನಾರಾಯಣ ಶೆಟ್ಟಿ ಅಂಡ್ ಸನ್ಸ್
ಜ್ಯೂಯಲರ್ಸ್ & ರೆಡಿಮೇಡ್ ಡ್ರೆಸ್ ಎಂಪೋರಿಯಂ,
ಸಯ್ಯಾಜಿರಾವ್ ರೋಡ್, ಮೈಸೂರು

ದಿವ್ಯವಾದ ಸಾಬೂನು

ಬೆಲೆಯಲ್ಲಿ ಕಿರಿದಾದರೂ ಗುಣದಲ್ಲಿ ಹಿರಿದು



ಮೈಸೂರು ಸ್ಯಾಂಡಲ್ ಸೋಪಿನಿಂದ ಅಂಗ ಕಾಂತಿಯು ಹೆಚ್ಚುವುದರಲ್ಲಿ ಅದರ ಬೆಳ್ನೊರೆಯು ಚರ್ಮದ ರೋಮ ರಂಧ್ರಗಳನ್ನೆಲ್ಲಾ ಹೊಕ್ಕು ಮೈಮೇಲಿನ ಕೊಳೆಯನ್ನೆಲ್ಲಾ ತೆಗೆದುಹಾಕುವುದು. ಅದರ ಮೆತ್ತನೆಯ ಗುಣವೂ, ಸುಗಂಧವೂ ಚಿತ್ತಾಕರ್ಷವೆನಿಸುವುದು.

ಮೈಸೂರು ಸ್ಯಾಂಡಲ್ ಸೋಪ್

ಕಿತ್ತಲೇ ಹಣ್ಣಿನ ಸಿಪ್ಪೆ ಎಷ್ಟಿದ್ದರೂ ಬೇಕು

ಅಶೋಕಾ ಫಾರ್ಮಸಿ,
ಹಳೇ ಮೈಸೂರು ಬ್ಯಾಂಕ್ ರಸ್ತೆ,
ಮೈಸೂರು.

ನಾನೇಕೆ ಮದುವೆಯಾಗಲಿಲ್ಲ?

ವಿವಾಹ ಧರ್ಮವನ್ನು ಪಾಲಿಸುವ ದಂಪತಿಗಳು ವಿರಳ

ಶ್ರೀಮತಿ ಸಿ. ಸತ್ಯಾನಂದ, ಬಿ.ಎಸ್‌ಸಿ., ಬಿ. ಟಿ.

ಸಮಾಜ ಅನ್ಯಾಯ ಮಾಡಿಲ್ಲ

"ನಾನೇಕೆ ಮದುವೆಯಾಗಲಿಲ್ಲ?" ಎಂಬ ಪ್ರಶ್ನೆಯನ್ನು ನನಗೆ ಕೇಳಿದರೆ ಅದು ನನಗೆ ಏನೂ ಸೋಜಿಗವಾಗಿ ಕಾಣುತ್ತದೆ. ಮದುವೆಯಾಗುವುದು ಎಷ್ಟು ಸಹಜವಾದ ಗುಣವೋ ಆಗದೇ ಇರುವುದೂ ಅಷ್ಟೇ ಸಹಜವಾದುದು. ಪಶುಪಕ್ಷಿ-ಪ್ರಾಣಿಗಳಿಂದ ಹಿಡಿದು ಮನುಷ್ಯನವರೆಗೂ ಮದುವೆ ಎಂಬುವುದು ಉಂಟು. ಅದರ ಆವಶ್ಯಕತೆ ಉಪಯೋಗವೇನೆಂದು ಎಲ್ಲರಿಗೂ ತಿಳಿದೇ ಇದೆ. ಎಂದಮೇಲೆ ಯಾರಾದರೂ ಮದುವೆ ಮಾಡಿಕೊಂಡರು ಎಂದರೆ ಯಾವ ದೊಡ್ಡ ಸಂಪತ್ತು? ವಿನಾಶ್ಚರ್ಯ? ಅಥವಾ ಮಾಡಿಕೊಳ್ಳಲಿಲ್ಲವೆಂದರೆ ಏನು ತೊಂದರೆ? ಏನು ಸೋಜಿಗ? ತೊಂದರೆ ಕಂಡು ಬಂದಿದ್ದರೆ, ಇಲ್ಲವೆ ಸೋಜಿಗವೆನ್ನಿಸಿದ್ದರೆ ನಾನು ಇಷ್ಟು ಹೊತ್ತಿಗೆ ಮದುವೆ ಆಗಿಯೇ ಬಿಡುತ್ತಿದ್ದೆ. ಅನೇಕ ಸದವಕಾಶಗಳು ಒದಗಿದ್ದುವು. ನನಗೆ ಮದುವೆಯ ಅವಶ್ಯಕತೆಯೂ ಬರಲಿಲ್ಲ! ಆಸೆಯೂ ತೋರಲಿಲ್ಲ; ಮುಂದೆ ತೋರುವ ಸಂಭವವೂ ಕಾಣೆ. ಇದು ನಿಮಗೆ ಆಶ್ಚರ್ಯವಾಗಬಹುದು. ಇವಳೇನು ಪ್ರಕೃತಿನಿಯಮವನ್ನೇ ಮೀರಿ ವಿರುದ್ಧವಾಗಿ ಬಾಳುತ್ತಿರುವಳೆ, ಮನುಷ್ಯತ್ವ ಇಲ್ಲದವಳು ಎಂದುಕೊಳ್ಳಬಹುದು. ಅಂತಹ ದೋಷವ್ಯಾವುದೂ ಇಲ್ಲ. ಪ್ರಕೃತಿ ನಿಯಮಗಳಿಗೆ ಒಳಪಟ್ಟು ಮನುಷ್ಯಳಾದ ವಳ ಹೊಟ್ಟೆಯಲ್ಲೇ ನಾನು ಹುಟ್ಟಿದವಳು. ಮನುಷ್ಯರಿಗೆ ಸ್ವಾಭಾವಿಕವಾಗಿ ಬಂದಿರುವ ಸದ್ಗುಣಗಳನ್ನು ನನಗೂ ದೇವರು ಕೊಟ್ಟಿದ್ದಾನೆ. ವಿವಾಹಿತರಾಗಿರುವ ಸೋದರಿ, ಅಕ್ಕ, ತಂಗಿ, ಅಣ್ಣಂದಿರ ಜೊತೆಯಲ್ಲೇ ಬೆಳೆದವಳು. ಇನ್ನೂ ಅವರ ಒಡನಾಟದಲ್ಲೇ ಇರತಕ್ಕವಳು. ನಮ್ಮ ನಾಗರಿಕ ಸಮಾಜವು ನನಗೇನೂ ಅನ್ಯಾಯಮಾಡಿಲ್ಲ. ತಕ್ಕಷ್ಟು ವಿದ್ಯಾಬುದ್ಧಿ ಸಂಸ್ಕಾರಗಳನ್ನು ಪಡೆದಿದ್ದೇನೆ. ಆದರೂ ನನಗೆ ವಿವಾಹ ಸಂಸ್ಕಾರದಲ್ಲಿ ಆಸೆ ಆಕರ್ಷಣೆಗಳು ಇಲ್ಲ.

ಈ ಬಗೆಯ ಸಂಗಾತಿತನ ಒಗ್ಗದು

ಸ್ವಲ್ಪ ಆಳವಾಗಿ ನೋಡಿದರೆ ಅನಾದಿಕಾಲದಿಂದಲೂ ವಿವಾಹದ ಮುಖ್ಯ ಗುರಿ ಇಷ್ಟೆ. ಮನುಷ್ಯನಿಗೊಬ್ಬ ಸಂಗಾತಿ ಬೇಕು. (Companion). ಅವನಿಗಿರುವ ಸ್ವಾಭಾವಿಕವಾದ ಆಕರ್ಷಣೆಗೆ (Sex attraction) ಒಳಪಡುವ ಒಂದು ಸ್ತ್ರೀ ವ್ಯಕ್ತಿ ಬೇಕು. ಸಾಮಾಜಿಕ ಮತ್ತು ಆರ್ಥಿಕ ಜೀವನಕ್ಕೆ ಇದು ಅವಶ್ಯಕ. ಆದರೆ ಬರಬರುತ್ತಾ ಈ ಗುರಿಯು ಬೇರೆ ಬೇರೆ ಬಣ್ಣಗಳಿಂದ ಲೇಪಿಸಲ್ಪಟ್ಟು, ಮನುಷ್ಯನು ಮದುವೆಯಾಗಲೇಬೇಕು. ಅದು ಅವನ ಜೀವನದಲ್ಲಿ ಒಂದು ಮುಖ್ಯ ವಿಶೇಷ ಘಟನೆ; ಅದರಿಂದ ಸ್ತ್ರೀ ಪುರುಷರಿಬ್ಬರಿಗೂ ಸುಖ, ಶಾಂತಿ, ಮನಸ್ಸಿಗೆ ತೃಪ್ತಿ, ಗತಿಯುಂಟಾಗುತ್ತದೆ ಎಂಬ ಅಭಿಪ್ರಾಯ ಬಂದಿದೆ. ಇದನ್ನೇ ಸರಿಯಾಗಿ ಎಲ್ಲಾ ಮತ ಮತ್ತು ಸಮಾಜಗಳು ವಿವಾಹವಾಗಲೇಬೇಕೆಂಬ ಅಂಶವನ್ನು ಪರೋಕ್ಷವಾಗಿಯಾದರೂ ಬಲಪಡಿಸುತ್ತವೆ. ಇದನ್ನು ಯೋಚಿಸಿದರೆ, ಈ ನವನಾಗರಿಕತೆಯ ಕಾಲದಲ್ಲಿ ಎಲ್ಲೆಲ್ಲೂ ವ್ಯಕ್ತಿ ಸ್ವಾತಂತ್ರ್ಯವೆಂಬ ಹಂಬಲವಿರುವಾಗ ಇದೇನು ಬಲಾತ್ಕಾರ! ನನ್ನ (temperament) (ಅದು ಹುಟ್ಟುಗುಣ) ನನಗೆ ಹೆಚ್ಚು, ನನಗೆ ಈ ಬಗೆಯ ಸಂಗಾತಿತನ ಒಗ್ಗದು. ನಾನೇಕೆ ಬಲಾತ್ಕಾರಕ್ಕೆ ಸಿಕ್ಕಬೇಕು? ಎನ್ನಿಸುತ್ತದೆ. ಹಿಂದೂ ಮತದಲ್ಲಿ ಅವಿವಾಹಿತ ಸ್ತ್ರೀಗೆ ಪುಣ್ಯವೆ ಇಲ್ಲವೆನ್ನುತ್ತಾರೆ. ಸಧ್ಯ ಈಗ ಸುಖವಾಗಿ ಜೀವಿಸೋಣ, ಆಮೇಲೆ ಮುಂದಿನ ಪುಣ್ಯ. ಅದೂ ಅಲ್ಲದೆ ನನ್ನನ್ನು ಸೃಷ್ಟಿಸಿದಾಗ ದೇವರು ನೀನು ಮದುವೆಯಾಗದಿದ್ದರೆ ನಿನಗೆ ಸ್ವರ್ಗದಲ್ಲಿ ಜಾಗವೆ ಇಲ್ಲ ಎಂದು ಆಜ್ಞೆಮಾಡಿ ಕಳುಹಿಸಿದ್ದಾನೇನು? ಅಂಥಾದ್ದೇನೂ ಇಲ್ಲವಲ್ಲ?

ಹೆಣ್ಣಿನ ಕಾಲ್ಪನಿಕ ಸಮಾನತೆ, ಸ್ವಾಭಾವಿಕ ಮನುಷ್ಯರಿಗೂ ... ಹೊಂದಿದ್ದಾರೆ. ಅದಕ್ಕೆ ಅನೇಕ ಕಾರಣಗಳುಂಟು. ವಿದ್ಯಾವತಿಯಾದ ಹುಡುಗಿಯರಿಗೆ, ತಮಗೆ ಬರುವ ಗಂಡು ಹೀಗೆಯೇ ಇರಬೇಕು, ಹಾಗೆಯೇ ಇರಬೇಕು — ಎಂಬ ಕೆಲವು ಕಾಲ್ಪನಿಕ ಉತ್ಕೃಷ್ಟ ಆದರ್ಶಗಳಿರುತ್ತವೆ. ಬಂದ ಕನ್ಯಾರ್ಥಿಗಳು ಅವಕ್ಕನುಗುಣವಾಗಿರದಿದ್ದರೆ ಅವರನ್ನು ತಿರಸ್ಕರಿಸುತ್ತಾ ಹೋಗಿ ಕೊನೆಗೆ ಯಾವುದೂ ದೊರೆಯದೆ ಒಂಟಿಗರಾಗಿ ನಿಲ್ಲುತ್ತಾರೆ. ಇನ್ನು ಕೆಲವರು, ಎಲ್ಲರೂ ಹೇಳುತ್ತಾರಲ್ಲ Love at fist sight, Love is blind ಎಂದು ಅಂಥಾ ಮೋಹಕ್ಕೆ ಮನಸೋತು, ಯಾರೋ ಒಬ್ಬ ಗಂಡಸಿನಲ್ಲಿ ಪ್ರೀತಿ ಇಟ್ಟುಕೊಂಡು ಅವನನ್ನು ಪಡೆಯುವ ಭಾಗ್ಯ ವಂಚಿತರಾಗಿ ಮದುವೆಯಾಗದೆ ಹಾಗೆಯೇ ಅವಿವಾಹಿತರಾಗಿ ಉಳಿಯುತ್ತಾರೆ. ಇಂತಹ ಸಂಗತಿಗಳನ್ನು ನಾವು ಬಹು ಕಡೆ ಕಾಣಬಹುದು. ಈ ವಿಧವಾದ ಅನುಭವಗಳೇನೂ ನನಗೆ ಬಂದಿಲ್ಲ; ಬರುವ ಸಂಭವವೂ ತೋರುವುದಿಲ್ಲ.

ನನ್ನ ನೆರೆಹೊರೆಯ ಜನರ ದಾಂಪತ್ಯ ಜೀವನ ನೋಡುತ್ತ ಹೋದರೆ, ಅವರ ಆ ಸುಖಿನಿದ ಬಾಳನ್ನು ಪರಿಶೀಲಿಸುತ್ತಾ ಹೋದರೆ, ನನಗೆ ಹೀಗೆ ಅನ್ನಿಸುತ್ತೆ; ಮದುವೆಯಾಗದೆ ಹೋದದ್ದರಿಂದ ನಾನೇನು ಅಂತಹ ಸುಖ ಭಾಗ್ಯಗಳನ್ನು ಕಳೆದುಕೊಳ್ಳಲಿಲ್ಲ ಎಂದು. ಎಂದರೆ, ಮದುವೆಯಾದವರ ಬಾಳು ಸುಖವಾಗಿಲ್ಲ ಅಂಥ ಅಲ್ಲ ಅಥವಾ ವಿರಕ್ತಳು ಎಂಬ ಭಾವನೆಯಲ್ಲ. ಆದರೆ ಚಿಕ್ಕಂದಿನಿಂದಲೂ ವಿವಾಹದ ವಿಷಯದಲ್ಲಿ ನನಗೊಂದು ಜಿಗುಪ್ಸೆಯೆಂದು ಹೇಳಬಹುದು. ಹಾ ಏನು! ಎಲ್ಲರೂ ಮದುವೆಯಾಗುತ್ತಾರೆ ಮಕ್ಕಳನ್ನು ಹಡೆಯುತ್ತಾರೆ. ಮದುವೆಯಾಗದೆ ಮಕ್ಕಳ ತಾಯಿಯಾಗದೆ ಸ್ತ್ರೀ ಸ್ವಭಾವಕ್ಕನುಗುಣವಾದ ಮಮತೆ, ಸದ್ಗುಣ, ಪವಿತ್ರಭಾವನೆಗಳು ನನ್ನಲ್ಲಿ ಇರಬಾರದೇಕೆ? ಅಥವಾ ಸಾಮಾನ್ಯ ಹೆಂಗಸಿಗಿಂತ ಒಂದು ಕೈ ಮೇಲಾಗಿರುವುದಕ್ಕೆ ನನಗೆ ಶಕ್ತಿ ಇಲ್ಲವೆ? ಎಂದು ಅನ್ನಿಸುತ್ತಿತ್ತು. ನನ್ನ ವಯಸ್ಸು ಮನಸ್ಸು ಬೆಳೆಯುತ್ತಾ ಬಂದವುಗಳೆಲ್ಲಾ ಇದು ಸಾಧ್ಯವೆಂದೇ ತೋರಿತು.

ಪ್ರೇಮ-ಮೋಹಗಳಿಗೆ ದೋಷವಿಲ್ಲ

ತಿಳಿದವರು ಹಾಲು, ಮೊಸರುಗಳಿಗೆ ದೋಷವಿಲ್ಲ ಎಂದು ಹೇಳುವಹಾಗೆ ನನಗೆ ಪ್ರೇಮ ಮೋಹಗಳಿಗೂ ದೋಷವಿಲ್ಲ ಎನ್ನಿಸುತ್ತೆ. ಯಾರು ಯಾರನ್ನು ಬೇಕಾದರೂ ಮೋಹಿಸಬಹುದು, ಪ್ರೀತಿಸಬಹುದು. ಗಂಡಸಿನ ಆಕರ್ಷಣೆಗೆ ಒಳಗಾಗಿ ಅವನನ್ನು ಪ್ರೀತಿಸಿ, ಅವನ ಪ್ರೀತಿ ಸಂಗತ್ವಕ್ಕೆ ಕಟ್ಟಿಗೆ ಏಕೆ ಬೀಳಬೇಕು? ಇದೇ ಭಾವನೆಗೆ ಕೊಂಚ ಪತ್ತಿರದ ಮಾತ್ಸಲ್ಯ ಪ್ರೀತಿಗಳನ್ನು ನೆರೆಹೊರೆ ಬಂಧು-ಬಾಂಧವರ ಮೇಲೆ ತಿರುಗಿಸುವುದು ಏಕೆ ಸಾಧ್ಯವಿಲ್ಲ? ಸ್ತ್ರೀಪುರುಷರಲ್ಲಿ ಪ್ರೇಮ, ಮೋಹ, ಆಕರ್ಷಣೆ ಎಂದರೆ ಇನ್ನೊಂದು ವಿಚಾರ ಜ್ಞಾಪಕಕ್ಕೆ ಬರುತ್ತೆ. ಇದನ್ನು ಲೆಕ್ಕಾಚಾರವಾಗಿ ವಿವರಿಸಬಹುದು. ಈಗ, ಸಾಧಾರಣವಾಗಿ ಎಲ್ಲಾ ಗಂಡಸಿಗೆ ಎಲ್ಲಾ ಸ್ತ್ರೀಯರೂ ಚಿತ್ತಾಕರ್ಷಕವಾಗಿ [Charming] ಕಾಣುವುದಿಲ್ಲ. ಯಾವಳೋ ಒಬ್ಬಳು ಮಾತ್ರ ಅವನ ಕಣ್ಣಿಗೆ ಅತಿ ಸುಂದರಳು, ಪ್ರೇಮಮೂರ್ತಿಯಾಗಿರುತ್ತಾಳೆ. ಅವಳ ಸಹವಾಸದಲ್ಲೇ ಅವನಿಗೆ ತೃಪ್ತಿ. ಇದೇ ಮನೋಧರ್ಮ ಹೆಂಗಸಿನಲ್ಲೂ ಇರುತ್ತದೆ. ಈ ಸ್ಥಿತಿಯು ಪರಿಣಾಮದಲ್ಲಿ ಏನಾಗುತ್ತದೆ? ಆ ಗಂಡಸಿಗೆ ಯಾವ ಸ್ತ್ರೀಯೂ ಸರಿಹೋಗದಿದ್ದಿರಬಹುದು. ಆಗ ಆತನ ಮನೋಭಾವನೆಗೆ ಸರಿದೂಗುವ ಸ್ತ್ರೀಯು ದೊರಕದೆ ಹೋಗುವುದು ಸಾಧ್ಯ. ಹಾಗೆಯೇ ಹೆಂಗಸಿಗೂ ಸಹ. ಆದರೆ ಅದು ವಿಚಿತ್ರವಾಗಿ ಕಾಣುತ್ತದೆಯೆ? ಅಂತಹ ಗಂಡಸನ್ನು ಅಥವಾ ಹೆಂಗಸನ್ನು unnatural ಎಂದು ಕರೆಯಬಹುದೆ? ಎಂದಿಗೂ ಅಲ್ಲ ಎಂದಮೇಲೆ ನಾನೇಕೆ ಮದುವೆಯಾಗಲಿಲ್ಲ ಎಂಬ ಪ್ರಶ್ನೆಯ ಅವಶ್ಯಕತೆ ಎಲ್ಲಿದೆ?

ಮನೋಧರ್ಮದಂತೆ ಜೀವನ ಪಥ

ಮತ್ತೊಂದು ವಿಚಾರ. ಏನೇ ಹೇಳಿದರೂ ಸ್ತ್ರೀಗೆ ವಿವಾಹವು ಒಂದು ಉತ್ತಮವಾದ ಅವಸ್ಥೆ, ಅದರಿಂದ ಅವಳಿಗೆ ಭೂಷಣ, ವಿಶಿಷ್ಟ್ಯವುದಾದರೂ ಕೀಳೆಂಬ ಒಂದು ಭಾವನೆ ತಮ್ಮಲ್ಲೇನಾದರೂ ಇದ್ದರೆ ಅದಕ್ಕೆ ನಾನು ಹೇಳುವುದು ಇಷ್ಟೆ. ಈಗ ಬೌದ್ಧರಲ್ಲಿ ಭಿಕ್ಷುಣಿಯರು, ವೀರಶೈವರಲ್ಲಿ ಶಿವಶರಣೆಯರು, ಕ್ರೈಸ್ತರಲ್ಲಿ ಕನ್ಯಾ ಸ್ತ್ರೀಯರೆಂಬ ಅವಿವಾಹಿತ ಶರಣೆಯರು ಅನೇಕರಿದ್ದಾರೆ. ಅವರ ವಿಚಾರದಲ್ಲಿ ನಮಗೆ ಪೂಜ್ಯತೆಯಿಲ್ಲವೆ? ಅಥವಾ ಸ್ತ್ರೀಪುರುಷರ ಸಹಜೀವನದ ಅಭಾವ ಬಡಲಿಸಿ, ಅದರಿಂದ ಅವರು ಸಮಾಜೋನ್ನತಿಗೆ ಅತೃಪ್ತಿಯೆಂದು ತಳ್ಳೋಣವೆ? ಅಥವಾ ಅಂಥಾ ಜನರಲ್ಲಿ ಸ್ವಾಭಾವಿಕವಾದ ಸ್ತ್ರೀ ಪುರುಷರ ಗುಣಗಳು ಇಲ್ಲವೆಂದು ಬಿಟ್ಟುಬಿಡೋಣವೆ? ಅಥವಾ ಅವರೆಲ್ಲಾ ಅವಿವಾಹಿತಾವಸ್ಥೆಯಲ್ಲಿರಲು ಅನರ್ಹರು ಅನ್ನೋಣವೆ? ಇದನ್ನು ನಾನು ಒಪ್ಪಲಾರೆ. ಅವರೂ ಇತರರಂತೆ ಮನುಷ್ಯರೆ; ಅವರಿಗೂ ಇತರರಂತೆ ಜ್ಞಾನ, ಬುದ್ಧಿ, ತಿಳುವಳಿಕೆ, ಸಂವೇದನೆಗಳಿವೆ. ಆದರೆ, ಅವರು ಆರಿಸಿಕೊಂಡಿರುವ ಜೀವನ ಪಥ ಅವರವರ ಮನೋಧರ್ಮವನ್ನು ಅನುಸರಿಸುತ್ತದೆ. ಅದು ಸಹಜವಾದುದೆ. ಒಟ್ಟಿನಲ್ಲಿ ವೈವಾಹಿಕ ಸ್ಥಿತಿಯು ಉತ್ತಮವೆಂದು ತೋರಿದರೆ ಮತ್ತೊಬ್ಬರಿಗೆ ಅವಿವಾಹಿತ ಜೀವನವು ಬಹು ಉತ್ತಮ ಉಪಯೋಗ ಎಂದು ತೋರುತ್ತದೆ.

ಅದೂ ಅಲ್ಲದೆ ಈಗಿನ ಸಮಾಜಗಳಲ್ಲಿ ವಿವಾಹ ಪದ್ಧತಿಗಳು ಈಗೇನು ಆದರ್ಶದಾಯವಾಗಿವೆ? ದೈವಭಾವನೆ, ಪಾರಮಾರ್ಥಿಕ, ಆಧ್ಯಾತ್ಮಿಕ ಮತ್ತು ನೈತಿಕ ಆದರ್ಶಗಳಿಂದ ಹುಟ್ಟಿದವು ಎಂದು ಅಗ್ನಿಸಾಕ್ಷಿಯಾಗಿ ಮದುವೆಯಾಗುವುದು, ದೇವಸ್ಥಾನಗಳಲ್ಲಿ ದೈವ ಪೀಠದ ಮುಂದೆ ಗಂಡುಹೆಣ್ಣು ತಾವು ಎಲ್ಲಾ ಸುಖ ದುಃಖಗಳಲ್ಲಿ ಸಂಸ್ಕಾರ ಪಾಲುಗಾರರಾಗಿ, ಸಹಾಯಕರಾಗಿ ...

(೪ ನೇ ಪುಟ ನೋಡಿ)

ಪಿ. ಸಿ. ನಟರಾಜ್
ಔಷಧಾಲಯ

ಇವರಲ್ಲಿ ನೇತ್ರಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.

ಅತ್ಯಗತ್ಯವಾಗಿ ಬೇಕಾದ ಎಲ್ಲಾ ಇಂಗ್ಲಿಷ್ ಔಷಧಿಗಳೂ ... ದೊರೆಯುವುದಲ್ಲದೆ ಎಲ್ಲಾ ವ್ಯಾಧಿಗಳಿಗೂ ಚಿಕಿತ್ಸೆಯು ... ಮಾಡಲ್ಪಡುತ್ತದೆ.

[illegible]
[illegible]

ನವಯೌವನ

ಕೆಟ್ಟ, ಬಲಹೀನತೆ, ಮೂಲವ್ಯಾಧಿ, ವೀರ್ಯನಷ್ಟ, ಧಾತುವಿಕಾರ ಮೊದಲಾದವನ್ನು ಶೀಘ್ರದಲ್ಲೇ! ನಿವಾರಿಸಲು ಮದನಮಂಜರಿ ಮಾತ್ರೆಗಳು ದಿವ್ಯ ಔಷಧ ಡಬ್ಬಿ ಒಂದಕ್ಕೆ ರೂ. 1

ಮದನಮಂಜರಿ ಫಾರ್ಮಸಿ.
151 ... ಆರೋಗ್ಯ ಫಾರ್ಮಸಿ
... ಗುಂಡ್ಲುಪೇಟೆ: ... ಕೃಷ್ಣಪ್ಪ

ಸ್ತ್ರೀಯರ ಸೌಕರ್ಯಕ್ಕಾಗಿ

... ವರ್ಷಗಳಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿರುತ್ತೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿಪುಡಿ

ಉಪಯೋಗಿಸಿ.

ಡಿ. ಕೃಷ್ಣಯ್ಯ ದಿನಸಿ ಅಂಗಡಿ, ದೇವರಾಜ ಮಾರ್ಕೆಟ್, ಮೈಸೂರು.

[illegible]
[illegible]
... ನೊರೆಯುತ್ತವೆ.

ಪತ್ರವ್ಯವಹಾರ

ಕೃಷ್ಣರಾಜೇಂದ್ರ ಆಸ್ಪತ್ರೆಯ ಅವ್ಯವಸ್ಥೆ

ಸ್ವಾಮಿ,

ನನ್ನ ಅಣ್ಣನವರು ಸುಮಾರು ಐದು ದಿವಸಗಳಿಂದ ಖಾಯಿಲೆಯಿಂದ ನರಳುತ್ತಿದ್ದರು. ಅವರನ್ನು ಡಾಕ್ಟರ್, ವೆಂಕಟದಾಸಪ್ಪ ಬಿ.ಎಸ್. ಸಿ., ಎಂ.ಬಿ.ಬಿ.ಎಸ್ ರವರು ಉಪಚರಿಸುತ್ತಿದ್ದರು. ನಿನ್ನೆ ದಿವಸ ಮಧ್ಯಾಹ್ನ ಸುಮಾರು ೩ ಗಂಟೆ ಹೊತ್ತಿಗೆ ಇದಲ ಡಾಕ್ಟರ್‌ರವರು ರೋಗಿಯನ್ನು ಆಸ್ಪತ್ರೆಗೆ ಸಾಗಿಸಿದರೆ ಉತ್ತಮವೆಂದು ಸೂಚಿಸಿದರು. ಮತ್ತು "ಅಂಬುಲೆನ್ಸ್" ಕಾರನ್ನೇ ತೆಗೆದುಕೊಂಡು ಹೋಗಬೇಕೆಂದೂ ಹೇಳಿದರು. ಆ ಕೂಡಲೇ ಕೃಷ್ಣರಾಜೇಂದ್ರ ಆಸ್ಪತ್ರೆಗೆ ಫೋನ್ ಮಾಡಲಾಯಿತು. ಅರ್ಧ ಗಂಟೆ ಕಾದರೂ ಉತ್ತರ ಬರಲಿಲ್ಲವಾಗಿ ಒಬ್ಬ ಆಸಾಮಿಯನ್ನು ಕಳುಹಿಸಲಾಯಿತು. ಹೋದ ಆಸಾಮಿಗೆ ಆಸ್ಪತ್ರೆಯ ನೌಕರರು ಮನ್ನಣೆ ಕೊಡದಿದ್ದುದರಿಂದ ಇನ್ಸ್‌ಪೆಕ್ಟರನ್ನು ಕಾಣಬೇಕಾಯಿತು. ಎಂಡನೇಯವರು ಎ. ವಿ. ಕೃಷ್ಣನ್ ನಾಯರ್, ಫೈರ್ ಲೈನ್ ಆಪರೇಟರ್, ಇಂಪೀರಿಯಲ್ ಸರ್ವಿಸ್, ಪೂನಾ, ಇವರ ಅಂಬುಲೆನ್ಸ್ ಕಾರನ್ನು ಕೊಡಿಸಲು ಆಸ್ಪತ್ರೆಯ ಚಿಕಿತ್ಸಕರೆಲ್ಲಾ ಸಹಾಯ ಮಾಡಬೇಕಾಯಿತು. ಇಷ್ಟೆಲ್ಲಾ ಮಾಡಿದರೂ ಮೋಟಾರ್ ಕಾರಿನ ಮೇಲೆ ಪೆಟ್ರೋಲ್ ಇಲ್ಲವೆಂದು ನಿಂತುಹೋಯಿತು. ನಮ್ಮ ಕೃಷ್ಣನ್ ನಾಯರ್‌ರವರು ಮತ್ತು ಇತರರೂ ಸೇರಿ ನನ್ನ ಕೈಲ್ವೆ ಸ್ಟೇಷನ್ ಬಂಕಿಗೆ ತಳ್ಳಿಕೊಂಡು ಹೋದರು. ಅಲ್ಲಿ ಪೆಟ್ರೋಲ್ ಹಾಕಿಕೊಂಡ ಕಾರು ಬರುವ ಹೊತ್ತಿಗೆ ಸುಮಾರು ೫ ಗಂಟೆಯಾಗಿತ್ತು. ರೋಗಿಯ ಸ್ಥಿತಿಯು ಆ ಹೊತ್ತಿಗೆ ತೀರಾ ಕೆಟ್ಟಿತ್ತು. ರೋಗಿಯ ಹತ್ತಿರ ಇದ್ದ ಶ್ರೀಮಾನ್ ಅಂಬಳೆ ಸುಬ್ರಹ್ಮಣ್ಯ ಅಯ್ಯರ್‌ರವರೂ ಮತ್ತು ಡಾಕ್ಟರ್ ವೆಂಕಟದಾಸಪ್ಪನವರೂ "It is too late" ಎಂದು ಬಿಟ್ಟರು. ವ್ಯಾನ್ ವಾಪಸ್ಸು ಹೋಯಿತು. ನನ್ನ ಅಣ್ಣನವರು ಸುಮಾರು ಆರು ಗಂಟೆಗೆ ಸ್ವರ್ಗಸ್ಥರಾದರು. ಅಂಬುಲೆನ್ಸ್ ನಾಗ ಇಟ್ಟಿರುವ ಕಾರು ಬರಲು ಪೆಟ್ರೋಲಿನ ಅಡಚಣೆ, ಡ್ರೈವರ್ ಇಲ್ಲದಿರುವಿಕೆ, ಇತ್ಯಾದಿಯಾದ ಅವ್ಯವಸ್ಥೆಗಳಿರುವುದು, ಸರಿಯೆ?

ನಾನು ಡಾ॥ ಮಾಂಟೆರೋಸರನ್ನು ಬಲ್ಲೆ. ಅವರ ಶಿಸ್ತು ಮತ್ತು ದಯಾಳುತನವನ್ನು ನಾನು ಮರೆಯಲಾರೆ. ಇಂತಹವರು ಸೀನಿಯರ್ ಸರ್ಜನ್ ಆಗಿರುವ ಕಾಲದಲ್ಲೂ ಇಷ್ಟು ಅವ್ಯವಸ್ಥೆಯೇ? ಇದಕ್ಕಾಗಿ ನಾನು ಬಹಳ ವಿಷಾದಿಸುತ್ತೇನೆ.

ಎಂ. ಎನ್. ಜೋಯಿಸ್.

ವಿಮರ್ಶೆ

'ಕ್ಷುಧಿತ ಪಾಷಾಣ'

ಕ್ಷುಧಿತ ಪಾಷಾಣವೆಂಬುದು ೬೧ ಪುಟಗಳ ಒಂದು ಸಣ್ಣ ಪುಸ್ತಕ. ಇದರಲ್ಲಿ 'ಕ್ಷುಧಿತ ಪಾಷಾಣ' ಮತ್ತು 'ಕೊಹಿನೂರು' ಎಂಬ ಎರಡು ಕಥೆಗಳಿವೆ. ಮೊದಲನೆಯದು ವಿಶ್ವ ಕವಿ ರವೀಂದ್ರನಾಥ ಠಾಕೂರರು ಬರೆದುದರ ಅನುವಾದ. ಎರಡನೆಯದು ಆಂಗ್ಲ ಕಥಾ ಸಿಂಹಾಸನ ಸ್ಯಾಫೆಡಿಯಸ್ ಹಾರ್ಥಾರ್ನನ, ದಿ ಗ್ರೇಟ್ ಕಾರ್ಬಂಕಲ್ ಕಥೆಯ ಭಾವಾನುವಾದ. 'ಕ್ಷುಧಿತ ಪಾಷಾಣ'ದಲ್ಲಿ ಮಾಯಾದರ್ಶನದಲ್ಲಿ ಸುಳಿಯುವ ನೆರಳುಗಳಿಗೆ ಅನುಗುಣವಾಗಿ ನಡೆನುಡಿಗಳು ವರ್ಣಿತವಾಗಿವೆ. 'ಕೊಹಿನೂರು'ವಿನಲ್ಲಿ ಕೃಷ್ಣ ಸಂದೇಶ ಧ್ವನಿತವಾಗಿದೆ. ಭಾಷಾಂತರಿಸಿರುವ ಕನ್ನಡ ಸಹಜ ರೂಪದಲ್ಲಿದ್ದು ಓದುಗರ ಮನವನ್ನು ತನ್ನ ಕಡೆಗೆಳೆಯುವಂಥದ್ದಾಗಿದೆ. ಕಥೆಗಳೂ ರಸವತ್ತಾಗಿವೆ. ವಿವಿಧ ವಾಙ್ಮಯದ ಒಳ್ಳೆಯ ಕೃತಿಗಳನ್ನು ಕನ್ನಡದ ತೋಟದಲ್ಲಿ ತರುವುದು ಉತ್ತಮವಾದ ಕೆಲಸ. ಇದರಿಂದ ಕನ್ನಡಕ್ಕೆ ಒಂದು ಕುಂದು ಬರುತ್ತದೆ. ಈ ಪುಸ್ತಕ ಈಜಾದಿನಲ್ಲಿ ಇಟ್ಟ ಒಂದು ಪ್ರಯತ್ನ. ಮೈಸೂರು ಮಿತ್ರ ಮಂಡಲಿಯವರು ಇದರ ಪ್ರಕಾಶಕರು. ಮುದ್ರಣ ಮತ್ತು ಮೇಲ್ ಜೋಡಿಕೆ ಅಂದವಾಗಿವೆ. ಬೆಲೆ ೪ ಆಣೆ. ಮಿತ್ರ ಮಂಡಲಿಯವರ ಈ ಪ್ರಯತ್ನ ಸ್ತುತ್ಯವಾದದ್ದು.

Edited, printed and published by A. R. Nagarajan, at the Sadhvi Press, D.Subbiah Road, Mysore.

ಮುಂಗ್ಡಾ ಗುಡ್ಡದಲ್ಲಿನ ಶತ್ರು ಸ್ಥಿತಿ

ಮುಂಗ್ಡಾಕ್ಕೆ ಉತ್ತರಕ್ಕಿರುವ ಗುಡ್ಡದ ಮೇಲಿನ ಜಪಾನಿ ದಳಗಳಿಗಿದ್ದ ಇತರೆಡೆಗಳ ಸಂಬಂಧವನ್ನೆಲ್ಲಾ ಕತ್ತರಿಸಿ, ಆ ಗುಡ್ಡವನ್ನು ಮಿತ್ರ ಸೇನೆ ಮುತ್ತಿದೆ. ಅಲ್ಲಿರುವ ಜಪಾನ್ ಸೇನೆ ತಮ್ಮ ಪ್ರಾಣ ಉಳಿಸಿಕೊಳ್ಳಲು ಎಡೆಬಿಡದೆ ಕಾದಾಡಬೇಕಾಗಿದೆ. ಈಗ ಅವರು ತಪ್ಪಿಸಿಕೊಳ್ಳಲು ಅವಕಾಶವಿಲ್ಲವಾಗಿದೆ ಎಂಬುದಾಗಿ ಅರಕಾನ್ ರಂಗದ ಮುಖದ ವೀಕ್ಷಕರೊಬ್ಬರು ವರದಿಮಾಡಿದ್ದಾರೆ.

ನ್ಯೂಯಾರ್ಕ್ ಮೇಲೆ ಕೃತಕ ಧಾಳಿ

ಮೊನ್ನೆ ಸಂಜೆ ನ್ಯೂಯಾರ್ಕಿನಲ್ಲಿ ಸೈರನ್‌ಗಳನ್ನು ಕೂಗಿಸಿ, ವಿಮಾನ ವಿನಾಶಕ ಫಿರಂಗಿಗಳನ್ನು ಹಾರಿಸಿ, ಬಾಂಬುಗಳನ್ನು ಸಿಡಿಸಿ ಅದನ್ನು ಎದುರಿಸುವ ಕಾರ್ಯ ಕೈಗೊಳ್ಳಲಾಯಿತು. ನಗರ ಪಿತೃಗಳು ಎಲ್ಲವನ್ನೂ ವೀಕ್ಷಿಸಿದರು.

ಶ್ರೀಮತಿ ಹೂವರ್ ನಿಧನ

ಅಮೆರಿಕಾ ಮಾಜಿ ಅಧ್ಯಕ್ಷರ ಪತ್ನಿ ಶ್ರೀಮತಿ ಹರ್ಬರ್ಟ್ ಹೂವರ್‌ರವರು ಮೊನ್ನೆ ನ್ಯೂಯಾರ್ಕಿನಲ್ಲಿ ಕಾಲವಾದರು.

ಅಮೆರಿಯವರೊಡನೆ ಚರ್ಚೆ

ಮೊನ್ನೆ ಕಾರ್ಮಿಕ ಪಕ್ಷದ ನಿಯೋಗದವರು ಮಿ॥ ಅಮೆರಿಯವರ ಭೇಟಿ ತೆಗೆದುಕೊಂಡು ಅವರೊಡನೆ ಭಾರತದಲ್ಲಿ ಪ್ರಾಪ್ತವಾಗಿರುವ ಕ್ಷಾಮ, ಪ್ರಸ್ತುತ ಪರಿಸ್ಥಿತಿ, ಭಾರತ ಸರ್ಕಾರದ ಮುಂದಿನ ನೀತಿ ಇವುಗಳ ವಿಷಯವಾಗಿ ಚರ್ಚೆ ನಡೆಸಿದರು.

೫ ನೇ ಸೈನ್ಯದ ವಿಜಯ

ಇಟಲಿ ರಣರಂಗದ ಸ್ಯಾನ್‌ವಿಟ್ಟೋರಿಯೊ ಎಂಬ ಹಳ್ಳಿಗಾಗಿ ೩ ದಿನಗಳ ಕಾಲ ಘೋರ ಕದನವು ನಡೆದು ಕೊನೆಗೆ ಬ್ರಿಟಿಷ್ ೫ ನೆಯ ಸೈನ್ಯ ಪಡೆಗೆ ಜಯ ಲಭಿಸಿತು. ಅಲ್ಲಿ ಉಳಿದುಕೊಂಡಿದ್ದ ಜರ್ಮನಿ ಸೈನಿಕರನ್ನೆಲ್ಲ ಸಂಪೂರ್ಣವಾಗಿ ನಾಶ ಮಾಡಲಾಯಿತು.

ಸಾಧ್ವಿ

ರಾಜಧಾನಿಯ ರಾಷ್ಟ್ರೀಯ ದಿನ ಪತ್ರಿಕೆ

ಪ್ರತಿದಿನವೂ ಪ್ರಕಟವಾಗುವುದು

ಕೂಡಲೇ ಚಂದಾದಾರರಾಗಿರಿ!

ಚಂದಾ ತಿಂಗಳಿಗೆ 0-8-0 ಮಾತ್ರ

ಸಂವತ್ಸರಕ್ಕೆ ಟಪಾಲು ಮೂಲಕ 1-0-0

ಜಾಹೀರಾತುಗಳಿಗೆ ಬರೆಯಿರಿ.

ನಮ್ಮ ಕೃಷ್ಣರಾಜನಗರದ ಏಜೆಂಟರು

ಶ್ರೀ ಕೆ. ಆರ್. ನೀಲಕಂಠಯ್ಯನವರನ್ನು ಕೃಷ್ಣರಾಜನಗರದಲ್ಲಿ 'ಸಾಧ್ವಿ' ಪತ್ರಿಕೆಯ ಏಜೆಂಟರನ್ನಾಗಿ ನೇಮಿಸಿರುತ್ತೇವೆ.

ಮಹಾ ಜನರು ಅವರ ಮೂಲಕ ನಮ್ಮ ಪತ್ರಿಕೆಗಳನ್ನು ತೆಗೆದುಕೊಂಡು ಪ್ರೋತ್ಸಾಹಿಸಬೇಕೆಂದು ವಿನಂತಿ.

ವ್ಯವಸ್ಥಾಪಕ. ಸಾಧ್ವಿ

ಭಾರತೀಯ ಪಡೆ ಸಾಹಸ

೮ ನೇ ಸೈನ್ಯ ಪಡೆ ರಣರಂಗದಲ್ಲಿ ಹವ ಪ್ರತಿಕೂಲವಾಗಿರುವುದರಿಂದ ಸೈನ್ಯಗಳ ಚಟುವಟಿಕೆ ಹೋರಾಗಿಲ್ಲ. ಆದರೆ ಭಾರತೀಯ ಸೈನಿಕರು ಕಪ್ಪು ಸ್ಥಾನಗಳನ್ನು ಉತ್ತಮಪಡಿಸಿಕೊಂಡು ಟ್ಯಾಲಿಯೊ ಎಂಬ ಹಳ್ಳಿಗೆ ಕೇವಲ ೧ ಮೈಲಿ ದೂರಕ್ಕೆ ಬಂದಿದ್ದಾರೆ. ಹವ ಪ್ರತಿಕೂಲವಾಗಿದ್ದರೂ ಮಿತ್ರ ವಿಮಾನಗಳು ಶತ್ರುಗಳ ಹಿಂಭಾಗದ ಪ್ರದೇಶಗಳ ಮೇಲೆ ಮುತ್ತಿಗೆಗಳನ್ನು ನಡೆಸುತ್ತಿವೆ.

ರಾಬೂಲ್ ಮೇಲೆ ಧಾಳಿ

ನೈರುತ್ಯ ಶಾಂತಿಸಾಗರದಲ್ಲಿನ ಜಪಾನೀ ಹಡಗುಗಳ ಮೇಲೆ ಮತ್ತೆ ತೀವ್ರ ಧಾಳಿ ನಡೆಸಲಾಯಿತು. ರಾಬೂಲ್ ಮೇಲೆ ಧಾಳಿ ನಡೆಸಿದ ಪರಿಣಾಮವಾಗಿ ೧೦೦ ಜಪಾನೀಯರು ಹತರಾಗಿದ್ದಾರೆ.

ಎರಡನೇ ಪುಟದಿಂದ

ಒಟ್ಟಿಗೆ ಇರುವನೆಂದು ಪ್ರಮಾಣ ಮಾಡಿ ಮದುವೆಯಾಗುವುದು. ಇವೆಲ್ಲಾ ಒಣ ಆಚಾರಗಳೆಂದು ನನ್ನ ಭಾವನೆ. ಇವೆಲ್ಲಕ್ಕೂ ನಿಜವಾಗಿ ಬೆರೆತುಕೊಂಡು ಜೀವಿಸುತ್ತಿರುವ ಸತಿಪತಿಯರು ಈಗ ಬೇಕು ಎಂದು ನನ್ನ ತಿಳುವಳಿಕೆ. ಮದುವೆ ವಿಷಯದಲ್ಲಿ ಈ ಸಿದ್ಧವಾದ ವಿಚಾರ ಪರಂಪರೆಗಳು ನನ್ನಲ್ಲಿ ಬೆಳೆದು ಬೇರೂರಿ ಮದುವೆಕಡೆಗೆ ನನ್ನ ಮನಸ್ಸು ಎಳೆಯಲ್ಪಡದ ಹಾಗೆ ಮಾಡಿದವು. ಇದರಿಂದ ನನಗೆ ಯಾವ ವಿಧವಾದ ನಷ್ಟವೂ ಆಗಲಿಲ್ಲ. ಆಕಾಶವಾಣಿ

ಮೈಸೂರು ಶ್ರೀ ಮುಮ್ಮಡಿ ರಾಜರವರ ಸಂಸ್ಕಾರದಿಂದ ಒಪ್ಪಿಗೆ ಪಡೆದ ಅಂಗಡಿ.

ಚೆನ್ನಾಗಿ ಹೊಲಿದ ಸೂಟ್ ಧರಿಸಿದ್ದರೆ ನೀವು ಎಷ್ಟು ಸೊಗಸಾಗಿ ಕಾಣುವಿರಿ! ಅದಕ್ಕೆ ಒಳ್ಳೆ ಹೊಲಿಗೆ ಅಗತ್ಯ.

ನಿಮ್ಮ ದೇಹಕ್ಕೆ ಹೊಂದುವಂತೆ ತೃಪ್ತಿಕರವಾಗಿ ಹೊಲಿದುಕೊಡಬಲ್ಲವರು

ಬಿ. ವಿಠಲ್ ಬ್ರದರ್ಸ್,

ಪ್ರಖ್ಯಾತಪಡೆದ ದರ್ಜಿಗಳು ಮತ್ತು ಕಂಟ್ರಾಕ್ಟರ್ಸ್,

ಶ್ರೀರಾಮಪೇಟೆ ಮೈಸೂರು

ರೇಷನಿಂಗ್ ಸೌಕರ್ಯ

ಸರ್ಕಾರದವರು ರೇಷನಿಂಗ್ ಪದಾರ್ಥಗಳನ್ನು ಸಂತೇಪೇಟೆ ನಮ್ಮ ಸಕ್ಕರೆ ಮಂಡಿಯಲ್ಲಿ ಮಾರಲು ಅವಕಾಶ ಕೊಟ್ಟಿರುತ್ತಾರೆ. ನಮ್ಮಲ್ಲಿ ಪಡೆಯಲು ಇಷ್ಟಪಡುವ ಮಹನೀಯರು ಸರ್ಕಾರಿ ಸಾಮಾನುಗಳನ್ನು ತಮ್ಮ ತಮ್ಮ ರೇಷನ್‌ಕಾರ್ಡು ಸಮೇತ ನಮ್ಮಲ್ಲಿಗೆ ಹಾಜರಾಗಿ ಅವರುಗಳ ಹೆಸರನ್ನು ಕೂಡಲೇ ರಿಜಿಸ್ಟರ್‌ಮಾಡಿಸಿಕೊಳ್ಳಬೇಕಾಗಿ ವಿನಂತಿ. ಮಹಿಳೆಯರಿಗೆ ಪ್ರತ್ಯೇಕ ಸೌಕರ್ಯವನ್ನು ಏರ್ಪಡಿಸಲಾಗಿದೆ.

ಡಿ. ಪುಟ್ಟಯ್ಯ ಅಂಡ್ ಸನ್ಸ್,

ಸಂತೇಪೇಟೆ, ಮೈಸೂರು.

ಸಂಪುಟ ೨] ಮಂಗಳವಾರ ೧೧-೧-೪೪ [ಸಂಚಿಕೆ ೧೫೦

ಯೂರೋಪ್ ಮುತ್ತಿಗೆ ದಿನ ನಿರ್ಧರಿಸಲಾಗಿದೆ

ಭಾರತಕ್ಕೆ ಸ್ವಾತಂತ್ರ್ಯ ಲಭಿಸಬೇಕಾದರೆ ಭಾರತೀಯರಲ್ಲಿ ಒಪ್ಪಂದ ಅತ್ಯಗತ್ಯ

ಐ. ಸಿ. ಎಸ್. ಅಧಿಕಾರಿಗಳಿಗೆ ೬ ವರ್ಷ ಶಿಕ್ಷೆ

ವಿಶ್ವವಿದ್ಯಾನಿಲಯ ಸಂಘದ ವಾರ್ಷಿಕೋತ್ಸವ

ಸ್ವಂ. ವ.] ಮೈಸೂರು ೧೧.

ಮೈಸೂರು ವಿಶ್ವವಿದ್ಯಾನಿಲಯ ಸಂಘದ ವಾರ್ಷಿಕೋತ್ಸವವು ೧೫ ನೇ ತಾ|| ಶನಿವಾರ ಹೈದರಾಬಾದಿನ ಡಾ|| ಸಯದ್ ಅಬ್ದುಲ್ ಲತೀಫ್‌ರವರ ಅಧ್ಯಕ್ಷತೆಯಲ್ಲಿ ನಡೆಯಲಿದೆ.

ಆ ದಿನ ಸಂಜೆ ೬-೩೦ ಗಂಟೆಗೆ ಮಿಮಿಕ್ರಿ, ಯಕ್ಷಗಾನ ರಾಮಾಯಣ, ಸೀತಾಪಹರಣ, ನಾಟಕಗಳು. ೧೬ ನೇ ತಾ|| "ಸ್ವಪ್ನವಾಸವದತ್ತ" ಎಂಬ ನಾಟಕ. ೧೭ ನೇ ತಾ|| ಸಂಜೆ ೬-೩೦ ಗಂಟೆಗೆ ಆ|| ವಿ|| ಸಂಗೀತರತ್ನ ಶ್ರೀ ಚೌಡಯ್ಯನವರ ಪಿಟೀಲ್ ವಾದನ. ೧೮ ನೇ ತಾ|| ಸಂಜೆ ಶ್ರೀ ಟಿ. ಪಿ. ಕೈಲಾಸಂರವರಿಂದ "ಏಕಲವ್ಯ" ನಾಟಕ ಪಠಣ. ಮತ್ತು ಉರ್ದು ಮತ್ತು ಪರ್ಷಿಯನ್ ನಾಟಕ. ೧೯ ನೇ ತಾ|| ೫-೩೦ ಗಂಟೆಗೆ ವಾರ್ಷಿಕೋತ್ಸವದ ಸಭೆ.

ಕಳ್ಳನ ದಸ್ತಗಿರಿ

ರಾಜಧಾನಿಯ ಹಳೇ ಸಂತೇಪೇಟೆ ಮಂಡಿ ವರ್ತಕರಾದ ಪಿ|| ಅಬ್ದುಲ್ ಗಫ್ಫಾರ್ ಸಾಹೇಬ್‌ರವರ ಅಂಗಡಿಯಲ್ಲಿ ನಿನ್ನೆ ರಾತ್ರಿ ಕಾಳೇಗೌಡ ಎಂಬಾತನು ಒಳಗೆ ನುಗ್ಗಿ ಕಳವು ಮಾಡುತ್ತಿದ್ದುದನ್ನು ಅಲ್ಲಿ ಕಾವಲುಗಾರರಾದ ಘೂರ್ಖರೊಬ್ಬರು ಕಂಡು, ಆತನನ್ನು ದೇವರಾಜ ಪೋಲೀಸರ ವಶಕ್ಕೆ ಹಿಡಿದುಕೊಟ್ಟಿದ್ದಾರೆ. ಪೋಲೀಸರು ಮುಂದಿನ ತನಿಖೆ ನಡೆಸುತ್ತಿದ್ದಾರೆ.

ಸನ್ಮಾನ ಸಭೆ

ಮೈಸೂರು ವೈಶ್ಯಯುವಜನ ಸಂಘದ ಆಶ್ರಯದಲ್ಲಿ ಮಚಲಿಪಟ್ಟಣದ ನಿವಾಸಿಗಳಾದ ಶ್ರೀ ಮಾಮಿಡಿ ವೆಂಕಟಾರ್ಯರ ಆರ್ಯವೈಶ್ಯ ವ್ಯಾಯಾಮಸಂಘದ ವಿದ್ಯಾಗೋಷ್ಠಿಯವರು ತಾ|| ೧೧-೧-೪೪ ನೇ ಮಂಗಳವಾರ ರಾತ್ರಿ ೭ ಘಂಟೆಗೆ ದೊಡ್ಡಪೇಟೆಯಲ್ಲಿರುವ ಶ್ರೀ ಕನ್ಯಕಾಪರಮೇಶ್ವರೀ ದೇವಸ್ಥಾನದಲ್ಲಿ ತಮ್ಮ ವಿದ್ಯೆಯನ್ನು ಪ್ರದರ್ಶಿಸುವರು ಮತ್ತು ಇವರ ಸನ್ಮಾನವೂ ನಡೆಯುವುದು. ಶ್ರೀ ಟಿ. ಮರಿಯಪ್ಪನವರು ಅಧ್ಯಕ್ಷತೆಯನ್ನು ವಹಿಸುವರು

ಬಂಗಾಳಾ ನಿರಾಶ್ರಿತರಿಗೆ ಸಹಾಯ

ಮೈಸೂರು ಮಹಿಳಾ ಆಹಾರ ಸಮಿತಿಯು, ಬಂಗಾಳದ ಜನರಿಗಾಗಿ, ಔಷಧಿ ಮತ್ತು ಬಟ್ಟೆಗಳನ್ನು ಸಂಗ್ರಹಿಸುವುದಕ್ಕೆ ಮೈಸೂರು ವಿದ್ಯಾರ್ಥಿ ಸಂಸ್ಥೆಯೊಂದಿಗೆ ಸಹಕರಿಸುತ್ತಿದೆ. ಮೈಸೂರು ಮಹಿಳೆಯರೆಲ್ಲ ನಮ್ಮೊಡನೆ ಸಹಕರಿಸಿ ತಮ್ಮ ಕೈಲಾದಷ್ಟು ಬಟ್ಟೆಗಳನ್ನು ಶೇಖರಿಸಿಕೊಡಬೇಕೆಂದು ನಾವು ಕೋರುತ್ತೇವೆ. ಈ ಕಡೆಗೆ ಕಿವಿಗೊಟ್ಟು ಇಂದು ಬಂಗಾಳದಲ್ಲಿ ಔಷಧಿಗಳಿಲ್ಲದೆ ಸಾಂಕ್ರಾಮಿಕ ರೋಗಗಳಿಗೆ ಬಲಿಯಾಗುತ್ತಿರುವ ಸಾವಿರಾರು ಜನರಿಗೆ ಸಹಾಯ ನೀಡಬೇಕೆಂದು ವೈದ್ಯರನ್ನೂ, ಔಷಧ ವ್ಯಾಪಾರಿಗಳನ್ನೂ ನಾವು ಕೇಳಿಕೊಳ್ಳುತ್ತೇವೆ. ಬಂಗಾಳದವರು ನಮ್ಮಿಂದ ಸಹಾಯ ಅಪೇಕ್ಷಿಸುತ್ತಿದ್ದಾರೆ- ಎಷ್ಟು ಕೊಟ್ಟರೂ ಬಂಗಾಳದ ಉಳಿವು ಸಿದ್ಧ. ಸಹಾಯ ನೀಡಬಪೇಕ್ಷಿಸುವವರು, ಮಹಿಳಾ ಆಹಾರ ಸಮಿತಿಯ ಸೆಕ್ರೆಟರಿ, ೭೩ ದಿವಾನ್ಸ್ ರೋಡ್ ಇವರಿಂದ ಹೆಚ್ಚಿನ ವಿವರಗಳನ್ನು ತಿಳಿಯಬಹುದೆಂದು ಕಾರ್ಯದರ್ಶಿಗಳು ತಿಳಿಸುತ್ತಾರೆ

ಆಹಾರ ಸಮ್ಮೇಳನದ ಸ್ಥಾಯಿ ಸಮಿತಿ

ರಾಜಧಾನಿಯಲ್ಲಿ ತಾ|| ೨೫-೨೬-೧೨ರಲ್ಲಿ ನಡೆದ ಆಹಾರ ಸಮ್ಮೇಳನದ ತೀರ್ಮಾನದಂತೆ ಈ ಕೆಳಗಿನ ಸ್ಥಾಯಿ ಸಮಿತಿಯನ್ನು ನೇಮಿಸಲಾಗಿದೆಯೆಂದು ಶ್ರೀ ರಂಗರಾಮಯ್ಯನವರು ತಿಳಿಸುತ್ತಾರೆ:—

ಶ್ರೀಯುತರುಗಳಾದ, ಎಸ್. ರಂಗರಾಮಯ್ಯನವರು (ಅಧ್ಯಕ್ಷರು), ಎ. ರಾಮಣ್ಣನವರು (ಕನ್ವೀನರ್), ಜಿ. ಆರ್. ರಂಗಸ್ವಾಮಯ್ಯನವರು, ಜಿ. ಜನಾರ್ಧನನಾಯ್ಡುರವರು, ಟಿ. ವೆಂಕಟರಮಣಯ್ಯನವರು, ಎ. ಕೃಷ್ಣಮೂರ್ತಿರಾಯರು, ಎನ್. ಸೂರ್ಯನಾರಾಯಣರಾಯರು, ಬಿ. ನಾರಾಯಣಸ್ವಾಮಿಯವರು, ಚೌಡಯ್ಯನವರು, ಸೇಟ್. ಸಿ. ದಾಸಪ್ಪನವರು, ಎಸ್. ಚನ್ನಯ್ಯನವರು, ಎಂ. ಸಂಗನ ಬಸಪ್ಪನವರು, ಡಿ. ಬಿ. ಪುಟ್ಟೇಗೌಡಯ್ಯನವರು, ಪ್ರೊ|| ಪಿ. ಆರ್. ಅಬ್ದುಲ್ ಖಾದಿರ್ ಸಿದ್ದಿಕಿಯವರು, ಎಸ್. ಶಿವಸ್ವಾಮಿಯವರು, ಬಿ. ಎಲ್. ರಾಮಸ್ವಾಮಿ ಶೆಟ್ಟರು, ಎಸ್. ಲಿಂಗಣ್ಣನವರು ಮತ್ತು ಶ್ರೀಮತಿ ಕೇಸರಿ ಕೇಶವರವರು

ಫುಟ್‌ಬಾಲ್

ಎಂ. ಎಸ್.ಎಸ್. ಚೆಟ್ಟಿ ಸ್ಮಾರಕ ಪಂದ್ಯಗಳ ಸಾಲಿನಲ್ಲಿ ನೆನ್ನೆ ಸಂಜೆ ದೊಡ್ಡಕೆರೆ ಮೈದಾನದಲ್ಲಿ ನಡೆದ ಕ್ವಾರ್ಟರ್ ಫೈನಲ್ಸ್ ಪಂದ್ಯದಲ್ಲಿ ರೈಲ್ವೆ ಕ್ಲಬ್‌ನವರು ಕೊವರ್ಸ್ ಕ್ಲಬ್‌ನ್ನು ೩ ಗೋಲಿನಿಂದ ಸೋಲಿಸಿದರು.

ಜಿಲ್ಲಾ ಬೋರ್ಡಿನ ಸಭೆ

ಮೈಸೂರು ಜಿಲ್ಲಾ ಬೋರ್ಡಿನ ಸಭೆಯು ೧೯ ನೆಯ ತಾ|| ಬುಧವಾರ ೧೨ ಗಂಟೆಗೆ ನಡೆಯಲಿದೆ.

ಐ. ಸಿ. ಎಸ್. ಅಧಿಕಾರಿಗಳಿಗೆ ಆರು ವರ್ಷ ಶಿಕ್ಷೆ

ಸಂಯುಕ್ತ ಪ್ರಾಂತದ ಐ.ಸಿ.ಎಸ್. ಅಧಿಕಾರಿಗಳಾದ ಶ್ರೀ ಬಿ. ಬಿ. ಸಿಂಗ್ ಎಂಬುವರು ಬಿಲಾಸಿಪುರಾ ಎಂಬ ತಮ್ಮ ಜಮೀನಿನ ಕೆಲಸದ ಹೆಂಗಸನ್ನು ಕೊಲೆ ಮಾಡಿದರೆಂಬ ಆಪಾದನೆಯ ಮೇಲೆ ಲಕ್ನೋ ನ್ಯಾಯಾಧೀಶರು ಅವರಿಗೆ ೬ ವರ್ಷ ಕಠಿಣ ಶಿಕ್ಷೆ ವಿಧಿಸಿದರು

ಭಾರತೀಯರಲ್ಲಿ ಒಪ್ಪಂದ ಅತ್ಯಗತ್ಯ

ಭಾರತಕ್ಕೆ ಕ್ರಿಪ್ಸರ ಸಲಹೆಗಳಿಗಿಂತ ಹೆಚ್ಚು ಔದಾರ್ಯಪೂರಿತ ಸಲಹೆಗಳನ್ನು ಇನ್ನೂ ಯಾರೂ ಸೂಚಿಸುತ್ತಿಲ್ಲವೆಂದು ಆಮೆರಿಯವರು ಯಾರ್ಕ್ ನಗರದ ಭಾಷಣವೊಂದರಲ್ಲಿ ಒತ್ತಾಯ ಕೊಟ್ಟುಕೊಂಡಿದ್ದಾರೆ.

ಬ್ರಿಟಿಷರು ಭೀತಿಯಿಂದ ಕೂಡಿ ಆ ಸಲಹೆಗಳನ್ನು ಕೊಡಲಿಲ್ಲ. ಬ್ರಿಟಿಷ್ ಸಾಮ್ರಾಜ್ಯಾಂತರ್ಗತವಾದ ಎಲ್ಲಾ ರಾಷ್ಟ್ರಗಳ ಜೀವನ ಕಳಶವಾದ ಸ್ವಾತಂತ್ರ್ಯವೆಂಬುದನ್ನು ಅರಿತೇ ಅದನ್ನು ಕೊಟ್ಟಿದ್ದು ಎಂದು ತಿಳಿಸಿದರು.

ಭಾರತಕ್ಕೆ ಹಕ್ಕು ಲಭಿಸಬೇಕಾದರೆ ಭಾರತೀಯರಲ್ಲಿ ಒಪ್ಪಂದ ಅತ್ಯಗತ್ಯ. ಭಾರತೀಯರು ಒಂದು ಇತ್ಯರ್ಥಕ್ಕೆ ಬರುವಂತೆ ಈಗ ಮೂರು ವರ್ಷಗಳಿಂದ ಹವಣಿಕೆಗಳಿದ್ದೇ ಇದೆ. ನಾವು ಒಳ್ಳೇ ಅಭಿಪ್ರಾಯ ಮಾಡಿಕೊಟ್ಟಿದ್ದೇವೆ. ಭಾರತ ಇಡೀ ಜಗತ್ತಿನಲ್ಲೇ ಪ್ರಧಾನವಾದ ಮಹಾ ರಾಷ್ಟ್ರವೊಂದಾಗಿ ವರ್ತಿಸುವ ಅರ್ಹತೆ ಭಾರತಕ್ಕೆ ಅದರ ಪ್ರಜೆಗಳ ಬುದ್ಧಿಮತ್ತೆಯಿಂದ ಲಭಿಸುತ್ತದೆ. ಭಾರತದ ಪ್ರತಿಯೊಂದು ಸಾಧನೆಯಲ್ಲೂ ಬ್ರಿಟಿಷರ ಸಹಾನುಭೂತಿ ಇದ್ದೇ ಇದೆ ಎಂದು ತಿಳಿಸಿದ್ದಾರೆ

ಮಧುರೆಯಲ್ಲಿ ಲಾಠಿ ಪ್ರಯೋಗ

ಮಧುರೆಯಲ್ಲಿ ಐದು ಜನರು ಕಾಂಗ್ರೆಸ್ ಧ್ವಜವನ್ನು ಹಿಡಿದುಕೊಂಡು ನಗರದ ಹಲವು ರಸ್ತೆಗಳಲ್ಲಿ ಮೆರವಣಿಗೆ ನಡೆಸಿ, ಕೆಲವು ಸ್ಥಳಗಳಲ್ಲಿ ಭಾಷಣ ಮಾಡಿ ಹಸ್ತಪತ್ರಿಕೆಗಳನ್ನು ಹಂಚುತ್ತಿದ್ದಾಗ ಪೋಲೀಸರು ಲಾಠಿ ಪ್ರಯೋಗ ಮಾಡಿ ಜನರನ್ನು ಓಡಿಸಿ, ಆ ಐದು ಮಂದಿಗಳನ್ನು ದಸ್ತಗಿರಿ ಮಾಡಿದರು.

ಜ|| ಬಿಡಲ್‌ರ ನೇಮಕ

ಅಮೆರಿಕ ಸೇನಾನಿ ಜನರಲ್ ಬಿಡಲ್‌ರವರನ್ನು ಯೂರೋಪಿನಲ್ಲಿ ನಡೆಯಲಿರುವ ದ್ವಿತೀಯ ರಣಕ್ಷೇತ್ರದ ಮಿತ್ರ ಪಡೆ ಸೈ ಜನರಲ್ ಐಸೆನ್‌ಹೋವರ್‌ರಿಗೆ ಚೀಫ್ ಆಫ್ ಸ್ಟಾಫ್ ಪ್ರಧಾನ ಸಮಾಲೋಚಕರಾಗಿ ನೇಮಿಸಿದೆ. ಅವರು ಮಧ್ಯ ಪ್ರಾಚ್ಯದಲ್ಲಿ ಚೀಫ್ ಆಫ್ ಸ್ಟಾಫ್ ಆಗಿದ್ದರು.

ಯೂರೋಪಿನ ಮುತ್ತಿಗೆ ದಿನ ನಿರ್ಧರಿಸಲಾಗಿದೆ

ಯೂರೋಪ್ ಮತ್ತು ಪೆಸಿಫಿಕ್ಕಿನಲ್ಲಿ ನಡೆಯಬೇಕಾದ ಮುತ್ತಿಗೆ ಕಾರ್ಯಾಚರಣೆ ಬಗ್ಗೆ ಸರ್ವ ಸಿದ್ಧತೆಗಳು ನಡೆದು ಈಗ ದಂಡಯಾತ್ರೆ ದಿನವನ್ನೂ ಸಹ ನಿರ್ಧರಿಸಲಾಗಿದೆಯೆಂದು ಅಮೇರಿಕದ ನೌಕಾ ಅಂಡರ್ ಸೆಕ್ರೆಟರಿಗಳಾದ ಮಿ|| ಜೇಮ್ಸ್ ಫಾರೆಸ್ಟಲ್‌ರವರು ತಿಳಿಸಿದ್ದಾರೆ. ಈ ವರ್ಷದಲ್ಲಿ ಶತ್ರುವನ್ನು ಸಂಪೂರ್ಣ ನಾಶ ಮಾಡಬೇಕಾದರೆ ಅಮೇರಿಕವು ೬೫ ಸಾವಿರ ನೌಕೆಗಳನ್ನು ಅದಕ್ಕು ಜಾಗ್ರತೆ ತಯಾರಿಸಬೇಕೆಂದು ತಿಳಿಸಿದ್ದಾರೆ

ಪೋಲೆಂಡಿಗೆ ರಷ್ಯದ ಸಲಹೆಗಳು

೧೯೨೦ ರಲ್ಲಿ ಲಾರ್ಡ್ ಕರ್ಜನ್ ಬ್ರಿಟಿಷ್ ವಿದೇಶಾಂಗ ಮಂತ್ರಿಯಾಗಿದ್ದಾಗ ಇತ್ಯರ್ಥಪಡಿಸಿದ ರಷ್ಯ-ಪೋಲೆಂಡ್ ಗಡಿಯನ್ನು ಸ್ವಲ್ಪ ಮಾರ್ಪಾಟುಮಾಡಿ ಹೊಸದಾಗಿ ಗಡಿ ಏರ್ಪಡಿಸಿಕೊಳ್ಳಲು ಹಲವು ಸಲಹೆಗಳನ್ನು ರಷ್ಯ ಸರ್ಕಾರವು ೧೯೩೯ ರಲ್ಲಿ ಎಲ್ಲೆಯನ್ನು ಜರ್ಮನರು ದಾಟುವ ಮೊದಲೇ ಪೋಲೆಂಡ್ ಸರ್ಕಾರಕ್ಕೆ ಸೂಚಿಸಿರುವುದಾಗಿ ಒಂದು ಇಂಗ್ಲಿಷ್ ಪತ್ರಿಕೆಯ ವರದಿ. ಹಾಗೆ ವರದಿಯಾಗಿರುವುದಾಗಿ ಖಚಿತವಾಗಿ ಹೇಳಲು ಲಂಡನ್ನಿನಲ್ಲಿರುವ ಪೋಲಿಷ್ ಅಧಿಕಾರಿಗಳು ನಿರಾಕರಿಸುತ್ತಿದ್ದಾರೆ.

ಜರ್ಮನರ ಫಿರಂಗಿ ಸಿದ್ಧತೆ

ಪ್ಯಾರಿಸ್‌ನಿಂದ ಪಿರನೀಸ್‌ವರೆವಿಗೂ ಒಟ್ಟು ೬,೭೦೦ ಭಾರಿ ಫಿರಂಗಿಗಳನ್ನು ಜರ್ಮನರು ಮಿತ್ರರ ಯೂರೋಪ್ ದಂಡಯಾತ್ರೆಯನ್ನು ಎದುರಿಸುವ ಸಲುವಾಗಿ ಸಿದ್ಧಗೊಳಿಸಿರುವರೆಂದು ತಿಳಿದುಬರುತ್ತದೆ.

ಸಿಂಧ್‌ಗೆ ವಿಶ್ವವಿದ್ಯಾನಿಲಯ

ಸಿಂಧ್ ಪ್ರಾಂತ್ಯವು ತನ್ನದೇ ಆದ ಒಂದು ವಿಶ್ವವಿದ್ಯಾನಿಲಯವನ್ನು ಶೀಘ್ರದಲ್ಲೇ ಹೊಂದುವುದೆಂದು ಸಿಂಧ್ ವಿದ್ಯಾ ಮಂತ್ರಿ ಪೀರ್ ಇಲಾಹಿ ಭಕ್ಷ್‌ರವರು ಹೇಳಿದರು.

ಸಿಂಧ್‌ನಲ್ಲಿ ವಿದ್ಯಾ ಪ್ರಗತಿ

ಬಲವಂತವಾಗಿಯೂ ಮತ್ತು ಉಚಿತವಾಗಿಯೂ ಪ್ರಾಥಮಿಕ ವಿದ್ಯಾಭ್ಯಾಸ ಕ್ರಮವನ್ನು ಜಾರಿಗೆ ತರುವ ಸಲುವಾಗಿ ಸಿಂಧ್ ಸರ್ಕಾರದವರು ೧೦ ವರ್ಷಗಳ ಒಂದು ಯೋಜನೆ ತಯಾರಿಸಿರುವರು. ಮುಂದಿನ ವರ್ಷ ಅದನ್ನು ಜಾರಿಗೆ ತರುವರೆಂದು ಗೊತ್ತಾಗಿದೆ.

ಪೂರ್ವ ರಣಕ್ಷೇತ್ರದಲ್ಲೇ ಯುದ್ಧದ ಮುಕ್ತಾಯ

ಪೂರ್ವ ರಣಕ್ಷೇತ್ರದಲ್ಲೇ ಈ ಯುದ್ಧವು ಕೊನೆಗಾಣುವುದೆಂದು ಜರ್ಮನ್ ಮಿಲಿಟರಿ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ರಷ್ಯನರು ತಮ್ಮ ಶಕ್ತಿಯನ್ನೆಲ್ಲಾ ಈಗ ಚೆಲ್ಲುತ್ತಿರುವರು. ತಮ್ಮ ಪ್ರದೇಶಗಳನ್ನು ವಾಪಸು ತೆಗೆದುಕೊಳ್ಳುವುದಕ್ಕೆ ಮಾತ್ರವಲ್ಲದೆ ಶತ್ರುವನ್ನು ಆ ರಣಕ್ಷೇತ್ರದಿಂದ ಓಡಿಸುವ ಪ್ರಯತ್ನವೆಂದು ತಿಳಿಸಿದ್ದಾರೆ

ಸಾನ್ ವಿಕ್ಟೋರ್ ಕೈಗೆ ಬಿತ್ತು

೩ ದಿನ ಕಟುವಾಗಿ ರಸ್ತೆ ಕಾಳಗ ನಡೆಸಿದ ಮೇಲೆ ೫ ನೇ ಸೇನೆಯ ಅಮೇರಿಕ ದಳಗಳ ಕೈಗೆ ಸಾನ್ ವಿಟ್ಟೋರ್ ಪಟ್ಟಣ ಬಿದ್ದಿದೆ- ಎಂಬುದಾಗಿ ಉತ್ತರ ಆಫ್ರಿಕಾ ಮಿತ್ರ ಕೇಂದ್ರ ಕಛೇರಿಯಿಂದ ಪ್ರಕಟಿಸ ಹೊರಟಿದೆ.

ಜಯಪುರದಲ್ಲಿ ನೂತನ ಅಧಿಕಾರ

ಸ್ವಂ. ವ.] ಬೆಂಗಳೂರು ೧೦

ಮೈಸೂರು ಮಹಾಮಸ್ತು ಕ್ಷೀರಪುಷ್ಪ ದ ಶ್ರೀ ಕೃಷ್ಣಮೂರ್ತಿ ಎಂಬುವರಿಗೆ ಜಯಪುರದಲ್ಲಿ ಎಕ್ಸಿಕ್ಯೂಟಿವ್ ಎಂಜಿನಿಯರ ಸ್ಥಾನವು ದೊರಕಿದೆಯೆಂದೂ ಅವರು ಈ ತಿಂಗಳ ಅಂತ್ಯದಲ್ಲಿ ಅಥವ ಮುಂದಿನ ತಿಂಗಳ ಆದಿಯಲ್ಲಿ ಜಯಪುರಕ್ಕೆ ತೆರಳಲಿರುವರೆಂದೂ ಗೊತ್ತಾಗಿದೆ.

ಅಧ್ಯಕ್ಷರುಗಳ ಚುನಾವಣೆ

ಬೆಂಗಳೂರ. ಪೌರಸಭೆಯ ಅಧ್ಯಕ್ಷ ಉಪಾಧ್ಯಕ್ಷ ಚುನಾವಣೆಯು ೧೯ ನೇ ತಾ॥ ಯಂದು ನಡೆಯಲಿದೆ. ಕಾಂಗ್ರೆಸ್ ಪರವಾಗಿ ಶ್ರೀ ಎಂ. ಎ. ಗೋಪಾಲಸ್ವಾಮಿ ಐಯ್ಯಂಗಾರ್, ಸ್ವತಂತ್ರವಾಗಿ ಶ್ರೀ ಎಲ್. ಎಸ್. ರಾಜುರವರು ಅಧ್ಯಕ್ಷಸ್ಥಾನಕ್ಕೆ ಉಮೇದುವಾರರಾಗಿ ನಿಲ್ಲುವ ಸಂಭವವಿದೆ. ಕಾಂಗ್ರೆಸ್ ಪಕ್ಷದ ಬಲವು ಅಧಿಕವಾಗಿರುವುದರಿಂದ ಕಾಂಗ್ರೆಸ್ ಉಮೇದುವಾರರಿಗೇ ಜಯ ದೊರೆಯುವ ಸಂಭವವಿದೆ.

ಬಡ್ತಿ

ಮೈಸೂರು ಸರ್ಕಾರದ ವಿದ್ಯಾಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಶ್ರೀಗಳಾದ ಕೆ. ದೊರೆಸ್ವಾಮಿ ಐಯ್ಯಂಗಾರ್, ಎಂ. ಸುಬ್ಬಯ್ಯ, ಎಲ್. ಗೋಪಾಲಯ್ಯಂಗಾರ್ ಮತ್ತು ಬಿ. ಕೇಶವನಾರಾಯಣರನ್ನು ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾಗಿ ಬಡ್ತಿ ಮಾಡಲಾಗಿದೆ.

ಮಹಿಳೆಯರಿಬ್ಬರ ಬಂಧನ

ಗುಬ್ಬಿಯಲ್ಲಿ ಕೆಲ್ಲಸ್ಥಳವನ್ನು ಕಳವು ಮಾಡಿದರೆಂಬ ಅಪಾದನೆಯ ಮೇಲೆ ಕಂಟೋನ್‌ಮೆಂಟ್ ಪೋಲೀಸಿನವರು ಮಹಿಳೆಯರಿಬ್ಬರನ್ನು ಬಂಧಿಸಿರುವರು. ಮುಂದಿನ ತನಿಖೆ ನಡೆಯುತ್ತಿದೆ.

ರಹದಾರಿ ಕೊಡಲಾಗುವುದು

ನಗರದಲ್ಲಿರುವ ಖಾಸಗಿ ವರ್ತಕರುಗಳಿಗೆ ಬೇರೆ ಕಡೆಗಳಿಂದ ಆಹಾರ ಧಾನ್ಯಗಳನ್ನು ಸಾಗಿಸಲು ಸರ್ಕಾರದವರು ರಹದಾರಿ ಕೊಡುವರೆಂದೂ ಇದರ ಸಲುವಾಗಿ ಕೆಲವು ಸರ್ಕಾರಿ ಡಿಪೋಗಳು ಮುಚ್ಚಲ್ಪಡುವುವೆಂದೂ ಗೊತ್ತಾಗಿದೆ.

ದೇವಾಲಯ ಪ್ರವೇಶ ಸಮಿತಿ

ಅಖಿಲ ಮೈಸೂರು ಹರಿಜನ ದೇವಾಲಯ ಪ್ರವೇಶ ಸಮಿತಿಯ ವರ್ಕಿಂಗ್ ಕಮಿಟಿ ಸಭೆ ಶನಿವಾರ ರಾಜಸೇವಾಸಕ್ತ ಸಿ. ಸುಬ್ಬರಾಮ ಸೆಟ್ಟರ ಅಧ್ಯಕ್ಷತೆಯಲ್ಲಿ ನಡೆಯಿತು. ಬೆಂಗಳೂರು, ಮೈಸೂರು, ಮಂಡ್ಯ, ಚಿತ್ರದುರ್ಗ, ಕಡೂರು ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡು ದೇವಾಲಯ ಪ್ರವೇಶವಾಗುವ ವಿಚಾರದಲ್ಲಿ ಸಾರ್ವಜನಿಕಾಭಿಪ್ರಾಯ ಬೇಕೆಂದು ತೀರ್ಮಾನಿಸಲಾಯಿತು.

ಮಿಲಿಟರಿ ವಿಚಾರಣೆ

ಶುಕ್ರವಾರ ರಾತ್ರಿ ಬೆಂಗಳೂರು ನಗರದಲ್ಲಿ ನಡೆದ ಮಿಲಿಟರಿ ಮತ್ತು ಪೋಲೀಸ್ ಘರ್ಷಣೆಯ ಸಂಬಂಧದಲ್ಲಿ ಮಿಲಿಟರಿ ಖಾತೆಯವರು ಒಂದು ವಿಚಾರಣಾ ಕೋರ್ಟನ್ನು ಏರ್ಪಡಿಸಿರುವರು. ನೆನ್ನೆ ದಿನ ವಿಚಾರಣೆ ನಡೆದು ಕೆಲವು ಪೋ॥ ಅಧಿಕಾರಿಗಳ ಸಾಕ್ಷಿ ತೆಗೆದುಕೊಳ್ಳಲಾಯಿತು. ವಿಚಾರಣೆ ಮುಂದುವರಿಯುತ್ತಿದೆ.

ಎಲೆಕ್ಟ್ರಿಕ್ ಲೈನ್ ಇನ್ಸ್‌ಪೆಕ್ಟರ ಬಂಧನ

ಸಸ್ಪೆಂಡ್ ಆಗಿರುವ ಎಲೆಕ್ಟ್ರಿಕ್ ಲೈನ್ ಇನ್ಸ್‌ಪೆಕ್ಟರಾಗಿರುವ ಶ್ರೀ ಶ್ರೀಧರರಾವ್ ಎಂಬುವರನ್ನು ಮಲ್ಲೇಶ್ವರಂ ಪೋಲೀಸಿನವರು ಬಂಧಿಸಿರುವರು. ಅವರ ಬಳಿ ಕಳುವಾದ ಬೈಸಿಕಲ್ ಒಂದಿತ್ತೆಂದು ಹೇಳಲಾಗಿದೆ.

ವಾರ್ಷಿಕ ಸಭೆ

ನಗರದ ಕೋಟೆಯಲ್ಲಿರುವ ಸರ್ಕಾರಿ ಹೈಸ್ಕೂಲಿನ ವಾರ್ಷಿಕೋತ್ಸವವು ವಿದ್ಯಾಮಂತ್ರಿಗಳಾದ ಶ್ರೀ ಅಪ್ಪಾಜಿಗೌಡರ ಅಧ್ಯಕ್ಷತೆಯಲ್ಲಿ ೨೩ ನೇ ತಾ॥ ನಡೆಯುವುದು. ಈ ಸಂದರ್ಭದಲ್ಲಿ ಶ್ರೀ ಟಿ. ಪಿ. ಕೈಲಾಸಂರವರ ಕೃತಿಗಳ ನಟನವನ್ನು ಏರ್ಪಡಿಸಲಾಗಿದೆಯೆಂದು ತಿಳಿದುಬರುತ್ತೆ.

ಡಾ॥ ಸುಬ್ಬರಾಯರ ಆಗಮನ

ಮದರಾಸ್ ಸರ್ಕಾರದ ಪ್ರಜಾ ಮಂತ್ರಿಗಳಾದ ಡಾ॥ ಪಿ. ಸುಬ್ಬರಾಯರವರು ಈ ಬೆಳಗ್ಗೆ ಬೆಂಗಳೂರಿಗೆ ಆಗಮಿಸಿದರು. ಅವರು ಸರ್ಕಾರದ ಅತಿಥಿಗಳಾಗಿದ್ದಾರೆ.

ಮೈಸೂರಿನವರಿಗೆ ಇಂಡಿಯಾ ಸರ್ಕಾರದ ಹುದ್ದೆ

ಶ್ರೀ ರಾಮಚಂದ್ರರವರನ್ನು ಇಂಡಿಯಾ ಸರ್ಕಾರದ ಯುದ್ಧಾನಂತರದ ಪುನರ್ರಚನಾ ಯೋಜನೆ ಸಂಬಂಧದ ಕೆಲಸಕ್ಕೆ ನೇಮಕ ಮಾಡಲಾಗಿದೆಯೆಂದು ಗೊತ್ತಾಗಿದೆ. ಈ ಬಗ್ಗೆ ಶ್ರೀಯುತರಿಗೆ ಇಂಡಿಯಾ ಸರ್ಕಾರದಿಂದ ಆಹ್ವಾನ ಬಂದಿದೆಯೆಂದೂ ಅದನ್ನು ಅವರು ಅಂಗೀಕರಿಸಿರುವರೆಂದೂ ಗೊತ್ತಾಗಿದೆ.

ಹೊಸ ಅಧಿಕಾರಿಗಳು

ನಾನಾ ಸರ್ಕಾರಿ ಡಿಪೋಗಳಿಗೆ ಆಹಾರ ಧಾನ್ಯಗಳನ್ನು ಹಂಚುವ ಮೇಲು ಉಸ್ತುವಾರಿಯನ್ನು ನೋಡಿಕೊಳ್ಳುವ ಸಲುವಾಗಿ ಸರ್ಕಾರದವರು ಒಬ್ಬ ಟ್ರಾನ್ಸ್‌ಪೋರ್ಟ್ ಅಧಿಕಾರಿಯನ್ನು ನೇಮಿಸಬಹುದೆಂದು ತಿಳಿಯಬರುತ್ತೆ.

ಪೋಲೆಂಡೊಳಕ್ಕೆ ೨೫ ಮೈಲಿ ದೂರ

ಕೊರೊಸ್ಟೆನ ಬಲಭಾಗದಲ್ಲಿ ಉಕ್ರೈನಿನಲ್ಲಿರುವ ಜನರಲ್ ವಾಟುಟೀನರವರ ಸೈನ್ಯಗಳು ಪೋಲೆಂಡಿನ ಗಡಿಯೊಳಕ್ಕೆ ೨೫ ಮೈಲಿಗಳಷ್ಟು ದೂರ ಹೋಗಿವೆ.

ಭಾರತ ಪಡೆ ಮುನ್ನೋಟ

ಸಾಟೋಂಗಮಾರ್ಗದಿಂದ ೪ ಮೈಲಿ ಆಚೆಗೆ ಭಾರತೀಯ ಸೈನಿಕರು ಮುಂದುವರೆದಿರುವುದಾಗಿ ವರ್ತಮಾನ ಬಂದಿದೆ.

ಗಿಯುಸ್ಟೊ ಹಿಡಿದರು

ಇಟಲಿಯ ೫ ನೇ ಸೇನೆ ರಂಗದ ಸಾಂಟ ವಿಟೋರ್‌ಗೆ ಉತ್ತರ ದಿಕ್ಕಿನಲ್ಲಿರುವ ಗಿಯುಸ್ಟೊ ಎಂಬ ಬೆಟ್ಟದ ಹಳ್ಳಿಯನ್ನು ಮಿತ್ರರು ನೆನ್ನೆ ದಿನ ಹಿಡಿದರೆಂದು ಅಲ್ಜಿಯರ್ಸ್ ರೇಡಿಯೋ ವರದಿ ಮಾಡಿದೆ.

ಚಳಿಗಾಲ

ಅತ್ಯುತ್ತಮವಾದ ರಗ್ಗುಗಳಿಗೂ, ವುಲ್ಲನ್ ಕೋಟಿಂಗ್, ಕಂಬಳಿ ವಸ್ತ್ರಗಳಿಗೂ ಎಲ್ಲೂ ಹುಡುಕಬೇಡಿ

ನೇರವಾಗಿ ನಮ್ಮಲ್ಲಿಗೆ ಬನ್ನಿ. ಕಡಿಮೆ ಬೆಲೆಗೆ ಉತ್ತಮವಾದ ಮಾಲು ಹೊಂದುವಿರಿ.

ಜಿ. ವಿ. ಸೂರ್ಯನಾರಾಯಣ ಶೆಟ್ಟಿ ಅಂಡ್ ಸನ್ಸ್

ಜೂಯಲರ್ಸ್ & ರೆಡಿಮೇಡ್ ಕ್ಲಾತ್ ಎಂಪೋರಿಯಂ,

ಸಯ್ಯಾಜಿರಾವ್ ರೋಡ್, ಮೈಸೂರು.

Edited, printed and published by A. R. Nagaraja at the Sadhvi Press, D.Subbiah Road, Mysore.

ಈ ದಿನ — —

ಒಲಂಪಿಯಾದಲ್ಲಿ

ಮುರಾರಿಯವರ

ಬದಲ್ತಿ ದುನಿಯ

ಅಭಿನಯ:—ಮುಮ್ತಾಜ್ ಶಾಂತಿ, ಕೆ. ಸಿ. ಡೇ, ತ್ರಿಲೋಕ್ ಕಪೂರ್

ಪ್ರತಿ ದಿನ ಮೂರು ಆಟಗಳು

ಕರ್ಣಾಟಕ ಫಿಲಂಸ್‌ರವರ ಹಂಚಿಕೆ.

ರೇಷನಿಂಗ್ ಸೌಕರ್ಯ

ಸರ್ಕಾರದವರು ರೇಷನಿಂಗ್ ಪದಾರ್ಥಗಳನ್ನು ಸಂತೇಪೇಟೆ ನಮ್ಮ ಮಂಡಿಯಲ್ಲಿ ಮಾರಲು ಅವಕಾಶ ಕೊಟ್ಟಿರುತ್ತಾರೆ. ನಮ್ಮಲ್ಲಿ ಸದರಿ ಸಾಮಾನುಗಳನ್ನು ಪಡೆಯಲು ಇಷ್ಟವುಳ್ಳ ಮಹನೀಯರು ತಮ್ಮ ತಮ್ಮ ರೇಷನ್ ಕಾರ್ಡು ಸಮೇತ ನಮ್ಮಲ್ಲಿಗೆ ೧೨-೧-೪೪ನೇ ಬುಧವಾರ ೧೨ ಘಂಟೆಯೊಳಗೆ ಹಾಜರಾಗಿ ಅವರುಗಳ ಹೆಸರನ್ನು ರಿಜಿಸ್ಟರ್ ಮಾಡಿಸಿಕೊಳ್ಳಬೇಕಾಗಿ ವಿನಂತಿ.

ಡಿ. ಪುಟ್ಟಯ್ಯ ಅಂಡ್ ಸನ್ಸ್,

ಸಕ್ಕರೆ ಮಂಡಿ,

ಸಂತೇಪೇಟೆ, ಮೈಸೂರು.

ಮೈಸೂರಿನ ಮಹಾಜನರಿಗೊಂದು ಅಪೂರ್ವ ಅನುಕೂಲ

ಕೇವಲ ಕೆಲವು ಮಂದಿಗೆ ಮಾತ್ರ ನಮ್ಮ ಸ್ಟೋರ್ಸಿನಲ್ಲಿ ರೇಷನಿಂಗ್ ಸಾಮಾನುಗಳನ್ನು ಕೊಳ್ಳುವ ಸದವಕಾಶವನ್ನು ಸರ್ಕಾರದವರು ಕಲ್ಪಿಸಿದ್ದಾರೆ. ನಿಮ್ಮ ರೇಷನಿಂಗ್ ಕಾರ್ಡುಗಳನ್ನು ಕೂಡಲೆ ತಂದು ನಿಮ್ಮ ಹೆಸರನ್ನು ನಮ್ಮಲ್ಲಿ ರಿಜಿಸ್ಟರ್ ಮಾಡಿಸಿಕೊಳ್ಳಿ.

ವಸಂತ ಪ್ರಾವಿಷನ್ ಸ್ಟೋರ್ಸ್

ಜಗನ್ಮೋಹನ ಬಂಗ್ಲೆ ಚೌಕ, ಮೈಸೂರು.

ಸಂಪುಟ ೨] ಬುಧವಾರ ೧೨-೧-೪೪ [ಸಂಚಿಕೆ ೧೫೧

ಮುಂಗಾರು ಮಿತ್ರ ಪತ್ರ

೧೪ ವರ್ಷ ಸೆರೆಯಲ್ಲಿದ್ದು ಬಂಧವಿಮುಕ್ತನಾದವನ ಕೈದು
ಮುಸೋಲಿನಿ ಅಳಿಯನಿಗೆ ಮರಣ ದಂಡನೆ

ಪೌರಸಭಾ ಉಪಾಧ್ಯಕ್ಷರು

ಸ್ವಂ. ಸು] ಮೈಸೂರು ೧೩

ಮೈಸೂರು ಪೌರಸಭೆಯ ಉಪಾಧ್ಯಕ್ಷರ ಚುನಾವಣೆಯು ೨೦ ನೇ ತಾ॥ ನಡೆಯಲಿದೆ ಯಷ್ಟೆ. ಉಮೇದುವಾರರ ಅರ್ಜಿಯನ್ನು ಕೊಡುವುದು ಇದೇ ಕೊನೇದಿನವು. ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನವರು ಶ್ರೀ ಬಿ. ನಾರಾಯಣಸ್ವಾಮಿಯವರನ್ನು ಸೂಚಿಸಿದ್ದಾರೆ. ಪ್ರತಿಸ್ಪರ್ಧಿ ಇಲ್ಲದೆ ಅವರೇ ಚುನಾಯಿತರಾಗಲಿದ್ದಾರೆ.

ಪೋ॥ ಮುಖ್ಯಾಧಿಕಾರಿಗಳು

ಪೋಲೀಸ್ ಮುಖ್ಯಾಧಿಕಾರಿಗಳಾದ ಶ್ರೀ ಎಸ್. ನಾರಾಯಣರಾಯರು ರಾಜಧಾನಿಗೆ ನಿನ್ನೆ ಸಂಜೆ ಆಗಮಿಸಿದರು. ಈ ದಿನ ಬೆಳಿಗ್ಗೆ ಎಲ್ಲ ಪೋಲೀಸ್ ಸ್ಟೇಷನ್ನುಗಳಿಗೂ ಭೇಟಿ ಇತ್ತರು.

ಸಿವಿಲ್ ಸಪ್ಲೈಸ್ ಡೈರೆಕ್ಟರಾದ ಶ್ರೀ ಬಿ. ಎಸ್. ರಾಘವೇಂದ್ರರಾಯರು ನಿನ್ನೆ ರಾತ್ರಿ ಆಗಮಿಸಿದರು. ನಾಳೆ ಅವರು ಸಬಲರಾಜು ಸಚಿವರೊಡನೆ ಕೊಡಗಿಗೆ ಪ್ರಯಾಣ ಬೆಳೆಸುವರು.

ನಂಬಿಕೆ ದ್ರೋಹದ ಮೊಖದ್ದಮೆ

ಬೆಂಗಳೂರಿನ ಲಕ್ಷ್ಮೀನರಸಿಂಹಯ್ಯ ಎಂಬುವರು ರಾಜಧಾನಿಯ ಶ್ರೀ ಬಸವರಾಜಯ್ಯ ಮತ್ತು ಶ್ರೀಮತಿ ದೇವಿ ಕೃಷ್ಣಕುಮಾರಿ (ಉಪಾಧ್ಯಕ್ಷರ ಅಂಗಡಿಯವರು)ಯವರ ಮೇಲೆ ಮೈಸೂರು ಸಿಟಿ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಒಂದು ಮೊಖದ್ದಮೆಯನ್ನು ಹೂಡಿ, ತಮಗೆ ಸಂಬಂಧಪಟ್ಟ ಒಡವೆಗಳನ್ನು ನಂಬಿಕೆದ್ರೋಹವಾಗಿ ದುರುಪಯೋಗಪಡಿಸಿಕೊಂಡಿದ್ದಾರೆಂದು ಫಿರ್ಯಾದುಕೊಟ್ಟಿದ್ದಾರೆ.

ಸಚಿವರ ಪ್ರವಾಸ

ರೆವಿನ್ಯೂ ಸಚಿವರಾದ ರಾಜಮಂತ್ರ ಪ್ರವೀಣ ಶ್ರೀ ಕೆ. ಅನಂತರಾಮಯ್ಯರವರು ೧೩ ನೇ ತಾ॥ ನಿಂದ ೨೦ ರ ವರೆಗೆ ಕೋಲಾರ ಮತ್ತು ಮೈಸೂರು ಜಿಲ್ಲೆಗಳಲ್ಲಿ ಪ್ರವಾಸ ಮಾಡುವರು. ಗೋರಿಬಿದನೂರು, ಶಿಡ್ಲಘಟ್ಟ ಮತ್ತು ಚಿಂತಾಮಣಿಗೆ ೧೩ನೇ ತಾ॥ ಭೇಟಿ ಕೊಡುವರು. ೧೬ ನೇ ತಾ॥ ರಾಜಧಾನಿಗೆ ಆಗಮಿಸುವರು. ಟಿ. ನರಸೀಪುರ, ಮಾಳವಳ್ಳಿ, ಕೃಷ್ಣರಾಜಪೇಟೆ, ಹುಣಸೂರು, ಚಾಮರಾಜನಗರ, ಬಿಳಿಗಿರಿರಂಗನ ಬೆಟ್ಟ ಇವುಗಳಿಗೆ ಭೇಟಿ ಇತ್ತು, ೨೦ ನೇ ತಾ॥ ಬೆಂಗಳೂರಿಗೆ ವಾಪಸು ತೆರಳುವರು.

ಉದಾರ ದಾನ

ಕುರುಡ ಮತ್ತು ಮೂಕರ ಶಾಲೆಯ ವಿದ್ಯಾರ್ಥಿಗಳಿಗೆ [illegible] ಮೊಸರನ್ನ ಊಟದ ಸಮಯದಲ್ಲಿ [illegible] ವರ್ತಕ ಶ್ರೀ [illegible] ಎಸ್. ವೆಂಕಟ [illegible] ಶಾಲೆಯ [illegible] ದಾನ [illegible] ಉದಾರದಾನ [illegible]

ವಿದ್ಯಾರ್ಥಿಗಳಿಗೆ ಪುರಸ್ಕಾರ

ಕಲ್ಕತ್ತ [illegible] ವಿದ್ಯಾರ್ಥಿಗಳನ್ನು, [illegible] ವಿದ್ಯಾಲಯದ [illegible] ಅಧಿಕಾರಿಗಳು [illegible] ಪ್ರತಿಭಟಿಸುವ [illegible] ಮೊನ್ನೆ ಬೆಳಿಗ್ಗೆಯಿಂದ [illegible] ವಿದ್ಯಾರ್ಥಿಗಳು [illegible] ಉಪವಾಸ ಹೂಡಿದ್ದಾರೆ.

ಮುಸೋಲಿನಿ ಅಳಿಯನಿಗೆ ಮರಣ ದಂಡನೆ

ಮುಸೋಲಿನಿಯ ಅಳಿಯ ಕೌಂಟ್ ಸಿಯಾನೊ [illegible] ಮರಣದಂಡನೆ ವಿಧಿಸಲಾಗಿದೆಯೆಂದು ಜರ್ಮನ್ ವಾರ್ತೆ [illegible]

ರಷ್ಯನರ ನೂತನ ಧಾಳಿ

ರಷ್ಯನರು [illegible] ಭಾಗದಲ್ಲಿ ನೂತನ ಧಾಳಿಯನ್ನು ಆರಂಭಿಸಿ [illegible] ಉತ್ತರ ಭಾಗದ [illegible] ಪ್ರದೇಶದಲ್ಲಿ [illegible] ಎಂದು ಜರ್ಮನ್ ವಾರ್ತೆ [illegible]

ಸೆಲಿಬಿಸ್‌ನಲ್ಲಿ ಭೀಕರ ವಿಮಾನ ಧಾಳಿಗೆ

ಸೆಲಿಬಿಸ್‌ನ [illegible] ವಿಮಾನ [illegible] ಧಾಳಿ [illegible] ವಿಮಾನಗಳು [illegible] ಜಪಾನ್ [illegible] ವಿಮಾನ [illegible] ವಿಮಾನ [illegible] ನಾಶವಾಗಿದೆ.

ರಷ್ಯಾ-ಪೋಲೆಂಡ್ ಗಡಿಗಳ ಇತ್ಯರ್ಥ

ಯುಕ್ರೇನ್ [illegible] ರಷ್ಯಾ-ಪೋಲೆಂಡ್ ಗಡಿಗಳ ಬಗ್ಗೆ [illegible] ಸೆಪ್ಟೆಂಬರ್ [illegible] ರಷ್ಯ [illegible] ಪೋಲೆಂಡ್ [illegible]

ಹಿರಿಯಾವ ಕದನ ಸಂಭವ

[illegible]

ಮಿತ್ರರ ಮುಂಬೋಕು

[illegible]

ಗಾಂಧೀಜಿ ಬಿಡುಗಡೆಯಾಗಲೇಬೇಕು

[illegible] ಗಾಂಧೀಜಿ [illegible] ಜಗತ್ತಿನ [illegible] ಭಾರತ [illegible]

ವಿಜಯಲಕ್ಷ್ಮೀ ಪಂಡಿತರ ಆತ್ಮಕಥೆ

ಶ್ರೀಮತಿ ವಿಜಯಲಕ್ಷ್ಮೀ ಪಂಡಿತರು [illegible] ಆತ್ಮಕಥೆ [illegible] ಪುಸ್ತಕ [illegible] ಪ್ರಕಟಿಸ [illegible]

ಹೆಸರಿಗೆ ಬಿಡುಗಡೆ -
- ಕೂಡಲೆ ಬಂಧನ

[illegible]

ನಾಯಿ ಮೆರವಣಿಗೆ

[illegible]

ಮುಂಗಾರಿನಾ ಸ್ವಾಧೀನ

[illegible]

ಹಿಟ್ಲರ್-ಗೋರಿಂಗ್ ಮನೆಗಳಿಗೆ ಪೆಟ್ಟು

ಬರ್ಲಿನ್ [illegible] ಮಿತ್ರ [illegible] ವಿಮಾನ ಧಾಳಿ ಫಲವಾಗಿ ಹಿಟ್ಲರನ [illegible] ಗೋರಿಂಗ್ [illegible]

ಚಿಕಾಗೊ ಪತ್ರಿಕೋದ್ಯೋಗಿ ಕೈಸೆರೆ

[illegible] ಜೋಸೆಫ್ [illegible] ಚಿಕಾಗೊ ಪತ್ರಿಕೋದ್ಯೋಗಿ [illegible]

ಬೆಳವಣಿಗೆಯಿಂದ ಬಿಡುಗಡೆ

[illegible]

ಕಮಲಾದೇವಿಯವರನ್ನು ಬಿಟ್ಟರು

[illegible] ಶ್ರೀಮತಿ ಕಮಲಾದೇವಿಯವರನ್ನು [illegible]

ಗಾಂಧೀಗೆ ಬದಲು ಅನೋರಿಯು?

[illegible] ಶ್ರೀನಿವಾಸ [illegible]

ಅನಿಶ್ಚಿತ ಘಟನೆಯಾಗಬೇಕು

[illegible]

ನ್ಯೂಯಾರ್ಕ್-ಹಿಟ್ಲರ್ ಭೇಟಿ

[illegible]

' ರೋಂ ದಂಗೆ ಎದ್ದಿತು '

ಅಮೇರಿಕದ ಹಾಲಿವುಡ್ ಚಿತ್ರ ನಿರ್ಮಾಪಕರ ಸಂಘದವರು ' ರೋಂ ದಂಗೆ ಎದ್ದಿತು ' ಎಂಬ ಚಲನ ಚಿತ್ರ ತಯಾರಿಸುತ್ತಿದೆ. ಇದು ಇಟಲಿ ನಾಯಕ ಮುಸೋಲಿನಿ ಪತನವನ್ನು ಚಿತ್ರಿಸುವ ಚಿತ್ರ.

ಅಮೇರಿಕದ ಬೆಣ್ಣೆ ರಷ್ಯಾವಿಗೆ

ಅಮೇರಿಕಾದಿಂದ ೧೫೦ ಲಕ್ಷ ಟನ್ ಬೆಣ್ಣೆಯನ್ನು ಹೋದ ತಿಂಗಳು ರಷ್ಯಾಕ್ಕೆ ರವಾನಿಸಲಾಯಿತು. ಈಗ ಮತ್ತೆ ೧೫೦ ಲಕ್ಷ ಟನ್ ಬೆಣ್ಣೆಯನ್ನು ರಷ್ಯಾವಿಗೆ ಕಳುಹಿಸುವ ಏರ್ಪಾಡುಗಳು ನಡೆಯುತ್ತಿವೆ.

ಪ್ರೋ॥ ಅಧಿಕಾರಿಗಳ ಮೇಲೆ ತಪ್ಪಿನ ಹೊರೆ

...

ಅನಾರಿಯಮವರಿಗೆ ನೋಟೀಸ್

...

ಮೈಸೂರು ಕೋ-ಆಪರೇಟಿವ್ ಸೊಸೈಟಿ, ಲಿಮಿಟೆಡ್, ಮೈಸೂರು.

...

ಟಿ.ಎಸ್. ರಾಜಗೋಪಾಲಯ್ಯಂಗಾರ್
ಅನರರಿ ಸೆಕ್ರೆಟರಿ.

ಲೈಸೆನಿಂಗ್ ಸೌಕರ್ಯ

...

ಸಕ್ಕರೆ ಮಂಡಿ,
... ಮೈಸೂರು.

ಶಾಂತಿ ಸಮಯದ ಯೋಜನೆಗಳಿಗೆ ಹಣ ಕೂಡಿಹಾಕಿ

ಶಾಂತಿಸಮಯದಲ್ಲಿ ನಿಮ್ಮ ಹಣವನ್ನು ಲಾಭದಾಯಕವಾಗಿ ಉಪಯೋಗಿಸಲು ಬಗೆ ಬಗೆಯಲ್ಲಿ ನಿಮಗೆ ನೂರಾರು ಅವಕಾಶಗಳಿರುತ್ತವೆ. ಆಗ ಬೇಕಾದಷ್ಟು ಪದಾರ್ಥಗಳು ಯೋಗ್ಯ ಬೆಲೆಗೆ ದೊರೆಯುತ್ತವೆ. ಈಗ ಹಣವನ್ನು ಕೂಡಿ ಹಾಕಿ ಧಾರಣೆಗಳು ಸ್ವಾಮಿತಕ್ಕೆ ಬಂದಾಗ ... ಹೀಗೆಂದರೆ, ... ಸಾಮಾನುಗಳನ್ನು ಕೊಳ್ಳ... ಗೂಡಿಗೆ ... ಬಾಬುಗಳನ್ನು ... ಯುದ್ಧಕಾಲದ ಧಾರಣೆಗಳು ನಿಮ್ಮ ಹಣವನ್ನು ... ಗ್ರಹಿಸಿರಲ್ಲಿ, ಹಣವನ್ನು ಕೂಡಿಹಾಕುವುದು ಒಂದು ... ಸಂಭಾವನಾಗಿ ಪರಿಣಮಿಸುವುದು.

ಮುಂಬರುವ ದಿನಗಳಿಗಾಗಿ ಕೂಡಿಡಿ

ಉಳಿದ ತಕ ನಿಮ್ಮ ಗಳಿಕೆಗಳನ್ನು ... ಚೇಡಿ!

- ಬಂಗಾರ, ಬೆಳ್ಳಿ, ಆಭರಣಗಳು, ಭೂಮಿ, ... ಮತ್ತು ಅನೇಕ ಸಾಮಾನು ... ಬೆಲೆಯು ... ಧಾರಣೆಗಳು ... ಹಣದ ... ಭಾಗವು ... ಯಾಗಿ ಹೋಗುವುದು
- ... ಲಾಭದಾಯಕ ...
- ... ಮತ್ತು ... ಸಹಕಾರ ಸಂಸ್ಥೆ ... ಬ್ಯಾಂಕ್ ಅಥವಾ ... ಬ್ಯಾಂಕ್ ನಲ್ಲಿ ಅಥವಾ ... ಸರ್ಕಾರಿ ಸಾಲ ... ನಲ್ಲಿ ...

ವಿನಹಾ ನಾಲ್ಕು ಆಣೆ ಕೂಡಿಡಿ!

ವಿಸ್ತರೀಯ ಮುದ್ರಣಾಲಯದವರು ... ಪತ್ರಿಕೆಯವರಿಗೆ ಹೊಡುವ ಮನವಿ

CPU 301

ಕಾಂಗ್ರೆಸ್‌ನವರ ಮೇಲೆ ಮೊಕದ್ದಮೆ

ದೆಹಲಿಯ ಶ್ರೀ ಸುರೇಂದ್ರನಾಥ್ ಜೌಹರ್ ಮತ್ತು ಇತರ ನಾಲ್ಕು ಮಂದಿ ಕಾಂಗ್ರೆಸ್‌ನವರ ಮೇಲೆ ಅಲ್ಲಿನ ಅಡಿಷನಲ್ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಅಪಾದನೆ ಹೊರಿಸಿದ್ದಾರೆ. ಪೋಲೀಸ್ ಅಧಿಕಾರಿಗಳ ಮೇಲೆ ಕೈಮಾಡಿ ಸೆರೆಯಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿದರೆಂಬುದೇ ಅವರ ಮೇಲಿನ ಅಪಾದನೆ.

ಆಹಾರ ಹೊರಕ್ಕೆ ಹೋಗಿಲ್ಲ

ಕಳೆದ ಜುಲೈ ತಿಂಗಳಿನಿಂದ ಆಹಾರ ಸಾಮಗ್ರಿಗಳನ್ನು ಭಾರತದಿಂದ ಹೊರಕ್ಕೆ ಕಳುಹಿಸಿಲ್ಲವೆಂದೂ ಸಿಲೋನಿಗೆ ಕೂಡ ಇಲ್ಲಿಂದ ಆಹಾರ ಪದಾರ್ಥಗಳ ರವಾನೆಯಾಗಿಲ್ಲವೆಂದೂ ನಿನ್ನೆ ನವದೆಹಲಿಯಲ್ಲಿ ಹೊರಟ ಕೇಂದ್ರ ಸರ್ಕಾರದ ಪ್ರಕಟಣೆಯಲ್ಲಿ ನಮೂದಾಗಿದೆ

ಪಾನನೀತಿ ಖಂಡನೆಗೆ ಶಿಕ್ಷೆ

ಐದು ಜನ ಕಾಂಗ್ರೆಸ್ ಸ್ವಯಂಸೇವಕರು ಮೊನ್ನೆ ಪನರಾಸ್ ಶಿಸ್ತಗಳಲ್ಲಿ ಸರ್ಕಾರದವರು ಜಾರಿ ನಿರೋಧ ಪದ್ಧತಿಯನ್ನು ತೆಗೆದುಹಾಕಿದ್ದನ್ನು ಖಂಡಿಸುವ ಕೂಗುಗಳನ್ನು ಕೂಗುತ್ತಾ ಮೆರವಣಿಗೆ ನಡೆಸಿದ ಕಾರಣ ಮದರಾಸ್ ಪೋಲೀಸರು ಅವರನ್ನು ದಸ್ತಗಿರಿ ಮಾಡಿದ್ದಾರೆ.

ಗೋಯಲೆ ವರ ಹೇಬಸ್ ಅರ್ಜಿ

ಕರ್ನಾಟಕ ಮುಖಂಡರಾದ ಬೆಳಗಾವಿನ ಲೀಡರ್ ಮತ್ತು ಕಾಂಗ್ರೆಸ್ ಕೆಲಸಗಾರರಾದ ಶ್ರೀ ಕೆ ಜಿ ಗೋಖಲೆಯವರ ಪರವಾಗಿ ಶ್ರೀ ಆರ್. ಎ ಜಹಗೀರ್‌ದಾರರು ಒಂದು ಹೇಬಸ್ ಅರ್ಜಿಯನ್ನು ಅಲ್ಲಿನ ಹೈಕೋರ್ಟಿಗೆ ಹಾಕಿರುವರು

ಗಡಿನಾಡು ಸಚಿವರ ರಾಜೀನಾಮೆ

ಗಡಿನಾಡಿನ ಮಂತ್ರಿ ಮಂಡಲ ಪಕ್ಷದ ನವಾಬ್ ಜಾದಾ ಸೈಯದ್ ಬಿನ ಅವರು ಪಕ್ಷಕ್ಕೆ ರಾಜೀನಾಮೆ ಕೊಟ್ಟಿರುವರು ಆ ಕಾರಣ ಮಂತ್ರಿ ಮಂಡಲದವರ ಸಂಖ್ಯೆ ೨೩ ರಿಂದ ೨೨ಕ್ಕೆ ಇಳಿಯಿತು.

ಪಂಜಾಬಿನಲ್ಲಿ ವಿದ್ಯುತ್ತಿನ ಉಳಿತಾಯ

ಪಂಜಾಬ್ ಪ್ರಾಂತ್ಯದಲ್ಲೆಲ್ಲಾ ವಿದ್ಯುಚ್ಛಕ್ತಿಯನ್ನು ಕಡಿಮೆ ಉಪಯೋಗಿಸಬೇಕೆಂಬ ಆಜ್ಞೆ ಜಾರಿಯಲ್ಲಿ ಬರಲಿದೆ. ಆದರಿಂದ ಅಲ್ಲಿನ ಚಲನಚಿತ್ರಮಂದಿರಗಳವರು ದಿನಕ್ಕೆ ಎರಡು ಪ್ರದರ್ಶನಗಳಿಗಿಂತ ಹೆಚ್ಚಾಗಿ ಚಿತ್ರಪ್ರದರ್ಶನ ನಡೆಸಲು ಅವಕಾಶ ಸಿಕ್ಕುವುದಿಲ್ಲ. ಅಲಂಕಾರಕ್ಕಾಗಿ ವಿದ್ಯುದ್ದೀಪಗಳನ್ನು ಉಪಯೋಗಿಸುವುದು ಸಹ ತಪ್ಪಬೇಕಾಗುವುದು.

ಫ್ಯಾಸಿಸ್ಟ್ ಪಕ್ಷದ ಮಾಜಿ ಕಾರ್ಯದರ್ಶಿ ಶಿಕ್ಷೆ

ಮುಸೋಲಿನಿಯ ಕಾಲಾನಂತರ ಫ್ಯಾಸಿಸ್ಟ್ ಪಕ್ಷವನ್ನ ಒಂದಾಗಿ ಸೇರಿಸಲು ಪ್ರಯತ್ನಿಸಿದ ಪಕ್ಷದ ಕೈ ಬಿಟ್ಟ ಕಾರಣಕ್ಕಾಗಿ ಫ್ಯಾಸಿಸ್ಟ್ ಪಕ್ಷದ ಮಾಜಿ ಕಾರ್ಯದರ್ಶಿ ಕಾರ್ಲೊ ಸ್ಕಾರ್ಜ ಎಂಬುವರನ್ನು ರೋಮ್ ನಗರದಲ್ಲಿ ದಸ್ತಗಿರಿ ಮಾಡಲಾಗಿದೆಯೆಂದ ಇಟಲಿಯ ರೇಡಿಯೋ ವರದಿಮಾಡಿದೆ.

ಸಂಪುಟ ೨] ಗುರುವಾರ ೧೪--೧--೪೪ [ಸಂಚಿಕೆ ೧೫೨

ಬರ್ಲಿನ್‌ಗೆ ರಷ್ಯ ಪ್ರವೇಶ

ಅಮೆರಿ ಭಾಷಣದಲ್ಲಿ ಬಿಕ್ಕಟ್ಟು ಬಗೆಹರಿಯುವ ಆಶಾಕಿರಣ

ಜರ್ಮನ್ ಜನರಲ್‌ಗಳನ್ನು ರಷ್ಯನರು ಶಿಕ್ಷಿಸುವರೇ ?

ಬಿಕ್ಕಟ್ಟು ಬಗೆ ಹರಿಯುವ ಸೂಚನೆಗಳು

ಯೂರೋಪಿನ ಯುದ್ಧದ ಬಳಿಕ ಅಮೆರಿಯವರ ಇತ್ತೀಚಿನ ಭಾಷಣದಲ್ಲಿ ಭಾರತ ಬಿಕ್ಕಟ್ಟಿನ ಪರಿಹಾರ ಪ್ರಯತ್ನದ ಸುಳಿವು ಎಡರಿಯಾಗಿದೆಯೆಂದು ಲಂಡನ್ನಿನಲ್ಲಿ ಅಭಿಪ್ರಾಯ ಪಡಲಾಗಿದೆ. ಕಾಂಗ್ರೆಸ್–ಲೀಗ್ ಒಪ್ಪಂದವಾಗಿ ಯುದ್ಧಕಾಲದ ಆಡಳಿತ ಸಂಘಟನೆ ಲಭ್ಯವಾದರೆ ಕೂಡಲೆ ರಾಷ್ಟ್ರೀಯ ಸರ್ಕಾರ ಸ್ಥಾಪನೆ ಕಾರ್ಯ ನಡೆದೀತು ಎಂದೂ ಹೇಳಲಾಗುತ್ತಿದೆ. ಕಾಂಗ್ರೆಸ್ಸು ಈಗ ಸರ್ಕಾರದೊಡನೆ ಸೌಹಾರ್ದದಿಂದ ವರ್ತಿಸಲು ಪ್ರಯತ್ನಿಸಿದರೆ ಬ್ರಿಟಿಷ್ ಸರ್ಕಾರ ಭಾರತಕ್ಕೆ ಸ್ವಾತಂತ್ರ್ಯ ಕೊಡದಿದ್ದಲ್ಲಿ ಬ್ರಿಟಿಷ್ ಜನಾಂಗವೇ ಒಪ್ಪುವುದಿಲ್ಲ. ಲಿಬರಲ್‌ರು ಭಾರತ ಮಿತ್ರಾಭಿಪ್ರಾಯವನ್ನ ಸಂಗ್ರಹಿಸಿ ಬಿಕ್ಕಟ್ಟನ್ನು ಬಗೆ ಹರಿಸಿ, ಸಂಧಿ ಪಡೆದು ಅವರಿಗೆ ಆ ಅವಕಾಶವನ್ನು ಕಲ್ಪಿಸಲಾಗಿದೆಯೆಂದು ಲಂಡನ್ ವರದಿಯಲ್ಲಿ ಹೇಳಲಾಗುತ್ತಿದೆ.

ರಷ್ಯಾ ಹೇಳಿಕೆ ಬಗ್ಗೆ ಸಮಾಲೋಚನೆ

ಸೋವಿಯಟ್–ಪೋಲೆಂಡ್ ಗಡಿ ಬಗ್ಗೆ ರಷ್ಯನರು ಪಟ್ಟಿರುವ ಅಭಿಪ್ರಾಯವನ್ನ ಕುರಿತು ಪ್ರಸ್ತಾಪಿಸಲು ನಿನ್ನೆ ಲಂಡನ್ನಿನಲ್ಲಿ ಪೋಲೆಂಡ್ ಮಂತ್ರಿಮಂಡಲ ಸಭೆ ಸೇರುವುದಿತ್ತು. ಸಮಾಲೋಚನೆ ಮುಗಿದ ನಂತರ ಅಧಿಕಾರಿ ಪ್ರಕಟಣೆ ಹೊರಬೀಳುವುದಿದೆ.

೨ ಶತ್ರು ನಾಕೆ ಸಮುದ್ರ ತಳಕ್ಕೆ

ಸೋಫಿಯಾ ಮೇಲೂ ಯುಗೋಸ್ಲಾವಿಯಾದ ಪ್ರಮುಖ ಸ್ಥಳಗಳ ಮೇಲೂ ಮಿತ್ರ ವಿಮಾನಗಳು ಧಾಳಿ ನಡೆಸಿ ಬಂದಿರುವುವು. ಮಿತ್ರ ಪಾಂಡಿಕರು, ಎರಡು ಶತ್ರು ಸೈನ್ಯ ನೌಕೆಗಳನ್ನು ಮುಳುಗಿಸಿದವು ಕೈಸ್ತ್ರಿಗಳ ಪೇಲೆ ಪ್ರಯೋಗಿಸಿದವು.

ರಷ್ಯನರಿಗೆ ಹೆಚ್ಚಿನ ಅನುಕೂಲ

ಯೂರೋಪ್ ಪಶ್ಚಿಮ ರಂಗಕ್ಕೆ ಬ್ರಿಟಿಷ್ ಮತ್ತು ಅಮೆರಿಕ್ ಸೈನ್ಯಗಳು ಬಂದಿಳಿದ ಬಳಿಕ ಪೂರ್ವರಂಗದಲ್ಲಿರುವ ರಷ್ಯನರಿಗೆ ಈಗ ಹೆಚ್ಚಿನ ಅನುಕೂಲವಾಗಿದೆಯೆಂದೂ ಅವರಿಗೆ ಜರ್ಮನರು ಎದುರಿಸಲಾರದೆ ಜರ್ಮನ್ ಸೈನ್ಯ ಕಂಗೆಟ್ಟಿರುವುದು ಅಭಿಪ್ರಾಯ.

ಜರ್ಮನ್ ಜನರಲ್‌ಗಳ ವಿಚಾರಣೆ

ಕರ್ಲೊವರ ಸಾರಕ್ಕೆ ಜವಾಬ್ದಾರನಾದ ಜನರಲ್ ರಾಸ್ ಮತ್ತು ಬುಖಾರೆಸ್ಟ್ ಸದ್ದ ಮನೆಗೆ ಬೀಗ ಹಾಕಿ ಬೆಂಕಿ ಇಟ್ಟ ಜನರಲ್ ಫ್ರಾಂಸ್ ಈ ಇಬ್ಬರು ಜರ್ಮನ್ ಜನರಲ್‌ಗಳನ್ನು ನ್ಯಾಯ ಪೀಠದ ಮುಂದೆ ನಿಲ್ಲಿಸಿ ಅವರ ಕೃತ್ಯಗಳ ಬಗ್ಗೆ ವಿಚಾರಣೆ ನಡೆಸಲು ರಷ್ಯಾ ಸರ್ಕಾರ ತೀರ್ಮಾನಿಸಿರುವುದಾಗಿ ಮಾಸ್ಕೋ ರೇಡಿಯೊ ಹೇಳಿದೆ.

ರಷ್ಯನರು ಬರ್ಲಿನ್‌ನಲ್ಲಿರುವರು

ಕ್ರಿಮಿಯಾ ಬರ್ಲಿನ್ ಪರ್ಯಾಯದ್ವೀಪದ ಉತ್ತರ ಭಾಗದಲ್ಲಿ ರಷ್ಯನ್ ಭೂ ಆಕ್ರಮಣ ಸೇನೆ ಬಳಿ ಮುಂದಾಗಿ ಜರ್ಮನರ ನಾಶರಂಗಕ್ಕೆ ಹೇಳಿದೆ.

ಚಿಯಾನೊ ವಧೆಯಾಯಿತು

ಮುಸೋಲಿನಿ ಅಳಿಯ ಕೌಂಟ್ ಚಿಯಾನೋಗೆ ನೋಮುವಾರ ವೆರೋನಾದಲ್ಲಿ ಮಿಲಿಟರಿ ಕೋರ್ಟಿನವರು ಮರಣದಂಡನೆ ವಿಧಿಸಿದ್ದರು ಎಂದೇ ಬೆಳಿಗ್ಗೆ ೯ ಗಂಟೆ ಮುಂದಿನ ಕೆಲವು ನಿಮಿಷಗಳಲ್ಲಿ ಚಿಯಾನೋನನ್ನು ಗುಂಡಿನ ಬಾಯಿಗೆ ಕೊಡಲಾಯಿತು

ಭೋಪಾಲ್ ನವಾಬರಿಗೆ ಪ್ರಶಸ್ತಿ

ಏರ್ ಚೀಫ್ ಮಾರ್ಷಲ್ ಸರ್ ರಿಚರ್ಡ್ ಪಿಯರ್ಸ್‌ರವರು ಮೊನ್ನೆ ಭೋಪಾಲಿನ ನವಾಬರಿಗೆ ರಾಯಲ್ ಏರ್‌ಫೋರ್ಸಿನ ಏರ್ ಕಮಾಂಡರ್ ಪ್ರಶಸ್ತಿಯನ್ನು ನಯಮಾಡಿದರು

ಕಮಲಾದೇವಿ ಆರೋಗ್ಯ

ಮೊನ್ನೆ ಆನೆ ಪೆಟ್ಟಿನಿಂದ ಚಿಕಿತ್ಸೆಯಿಂದ ಗುಣಮುಖರಾದ ಶ್ರೀಮತಿ ಕಮಲಾದೇವಿಯವರು ಸ್ವಸ್ಥರಾಗಿರುವರು. ಈಗಿನ ದಕ್ಷಿಣ ಪ್ರವಾಸ ಕಾರ್ಯಕ್ರಮ ಮುಗಿಸಿಯಾದ್ದಾರೆ. ಜನವರಿ ತಿಂಗಳ ಕೊನೆಯವರೆಗೂ ನಂತರ ಇಲ್ಲಿ ಮೊದಲಿನಂತೆ ಪ್ರವಾಸ ನಡೆಸುವ ಸಂಭವ ಎಂದು ಅವರ ಹೇಳಿದರು

ಬುಖಾರೆಸ್ಟ್‌ನಲ್ಲಿ ಭೀತಿ

ರಷ್ಯನರು ಪ್ರಬಲವಾಗಿ ಮುನ್ನುಗ್ಗುತ್ತಿರುವುದರಿಂದ ಬುಖಾರೆಸ್ಟ್‌ನಲ್ಲಿ ಎಲ್ಲೆಲ್ಲೂ ಭೀತಿ ಹರಡಿದೆಯೆಂದು ತಿಳಿದು ಬಂದಿದೆ. ಪೆಟ್ರೋಲಿಯಮುವನ್ನು ಜರ್ಮನಿಗೆ ಸಾಗಿಸಲಾಗುತ್ತಿದೆ.

ಕೃಷ್ಣರಾಜೇಂದ್ರ ಮಿಲ್ಲಿನ ವ್ಯವಹಾರ

ಸ್ವಂ. ಸು] ಮೈಸೂರು ೧೩

ಶ್ರೀ ಕೃಷ್ಣರಾಜೇಂದ್ರ ಮಿಲ್ಲಿನ ಕೂಲಿಕಾರರ ಸಂಘಕ್ಕೂ ಮತ್ತು ವ್ಯವಸ್ಥಾಪಕರಿಗೂ ಒದಗಿರುವ ವ್ಯವಹಾರವನ್ನು ತೀರ್ಮಾನಿಸಲು ಸರ್ಕಾರದವರು ಏರ್ಪಡಿಸಿರುವ ಪಂಚಾಯಿತಿ ಕೋರ್ಟು ಇದೇ ೧೯ ನೇ ತಾ॥ ನಿಂದ ಮೈಸೂರಿನಲ್ಲಿ ಜರುಗುವುದೆಂದು ತಿಳಿದುಬಂದಿದೆ

ಸಪ್ಲೈ ವಿಶೇಷಾಧಿಕಾರದ ಅವಧಿ

ಮೈಸೂರು ಸರ್ಕಾರದ ಸಿವಿಲ್ ಸಪ್ಲೈ ಇಲಾಖೆಯ ವಿಶೇಷ ಅಧಿಕಾರಿಗಳ ಹುದ್ದೆಯನ್ನು ಮತ್ತೆ ಆರು ತಿಂಗಳ ವರೆಗೆ ಹೆಚ್ಚಿಸಲಾಗುವುದೆಂದು ತಿಳಿದು ಬಂದಿದೆ

ವಿದ್ಯಾರ್ಥಿ ಸಂಘ

ಬಂಗಾಳದ ಬಟ್ಟೆ ಇಲ್ಲದೆ ನರಳುತ್ತಿರುವ ಬಂಗಾಳಿ ಬಂಧುಗಳಿಗೆ ಮೈಸೂರು ನಗರದಿಂದ ಹಳೆಯ ಬಟ್ಟೆಯನ್ನು ಮನೆಮನೆಗೂ ಹೋಗಿ ಭಿಕ್ಷೆ ಬೇಡಿ ೨೩ ನೇ ತಾ॥ ನೊಳಗೆ ಕಳುಹಿಸಬೇಕೆಂದು ತೀರ್ಮಾನಿಸಿದ್ದೇವೆ. ಭಾನುವಾರ ಮಧ್ಯಾಹ್ನದಿಂದ ಬಟ್ಟೆ ಭಿಕ್ಷೆ ಮೊದಲಾಗುವುದು. ಯಾರು ಯಾರು ಸ್ವಯಂ ಸೇವಕರಾಗಿ ದುಡಿಯಲು ಇಷ್ಟಪಡುವರೋ ಅವರೆಲ್ಲಾ ಭಾನುವಾರ ಮಧ್ಯಾಹ್ನ ೩ ಗಂಟೆಗೆ ಕಾಲೇಜಿನ ಮುಂಭಾಗದಲ್ಲಿ ಸೇರಬೇಕಾಗಿ ಪ್ರಾರ್ಥನೆ. ಬಂಗಾಳಕ್ಕಾಗಿ ಬಟ್ಟೆಗಳನ್ನು ತಾವಾಗಿಯೇ ತಂದುಕೊಡುವವರು ಸಂಜೆವೇಳೆ ಮೈಸೂರು ಮುನಿಸಿಪಲ್ ಕಾಂಗ್ರೆಸ್ ಪಾರ್ಟಿ ಆಫೀಸಿನಲ್ಲಾಗಲೀ, ದೇಶೀಯ ವಿದ್ಯಾಶಾಲೆಯಲ್ಲಾಗಲೀ ಅಥವ ಇಂಟರ್ ಮೀಡಿಯೆಟ್ ಹಾಸ್ಟಲ್ ೧೦ ನೇ ಕೊಠಡಿಯಲ್ಲಾಗಲೀ ತಂದುಕೊಡಬೇಕಾಗಿ ಮೈಸೂರು ವಿದ್ಯಾರ್ಥಿ ಸಂಘದವರು ಕೋರುತ್ತಾರೆ

ಕರ್ಮವೀರ ವಿಶೇಷ ಸಂಚಿಕೆ

ಹುಬ್ಬಳ್ಳಿಯಿಂದ ಪ್ರಕಟವಾಗುತ್ತಿರುವ 'ಕರ್ಮವೀರ' ಕನ್ನಡ ವಾರ ಪತ್ರಿಕೆಯವರು ಬುಡಕಟ್ಟು ಜಯಂತಿಯ ಸಂಬಂಧವಾಗಿ ಒಂದು ವಿಶೇಷ ಸಂಚಿಕೆಯನ್ನು ಪ್ರಕಟಿಸಿರುವರು. ಇದರಲ್ಲಿ ನಿತ್ಯೋತ್ಸವ ಕೃಷ್ಣನ ಉತ್ಸವ ಮಾಲಿಕೆ, ಶ್ರೀಮದ್ಭಾಗವತ ಪ್ರತಿಪಾದಿತ ಸಿದ್ಧಾಂತವು, ಶ್ರೀಮನ್ ಮಧ್ವಾಚಾರ್ಯರ ತತ್ವ ವಿಚಾರ, ಶ್ರೀ ವಾದಿರಾಜ ತೀರ್ಥರೂ ಅವರ ಕೃತಿಗಳೂ ಮತ್ತು ಬುದ್ಧ ಶಾಸ್ತ್ರದ ಸಂಕ್ಷಿಪ್ತ ಪರಿಚಯ ಇನ್ನೂ ಮುಂತಾದ ಹಲವು ಉಪಯುಕ್ತ ವಿಷಯಗಳ ಬಗ್ಗೆ ಬರವಣಿಗೆಗಳಿವೆ. ಅವು ವಿಚಾರ ಪ್ರಚೋದನಾದ ಲೇಖನಗಳು. ಸಂಚಿಕೆಯ ಮುಖ ಪುಟದ ಚಿತ್ರಗಳೂ ಲೇಖನಗಳ ಜೊತೆಯ ಚಿತ್ರಗಳೂ ಇದ್ದು ಓದುಗರಿಗೆ ಬಹಳ ಸಹಾಯಕವಾಗುವುವು. ಬೆಲೆ ಕೇವಲ ೬ ಆಣೆ ಕನ್ನಡಿಗರೆಲ್ಲರೂ ಆಸಕ್ತಿಯಿಂದ ಓದಬೇಕಾದ ಸಂಚಿಕೆ. ಕರ್ಮವೀರದವರು ಈ ಕಾರ್ಯಕ್ಕೆ ಅಭಿನಂದನೀಯರು.

ಪ್ರೈಜ್ ಬೌಟ್

ಎಂ.ಎನ್ ಎಸ್. ಶೆಟ್ಟಿ ಸ್ಮಾರಕ ಪಂದ್ಯಗಳ ಸಾಲಿನಲ್ಲಿ ಮೊನ್ನೆ ನಡೆದ ಮೊದ್ದರ ದ್ವಂದ್ವ ನಡೆದ ಕುಸ್ತಿಯಲ್ಲಿ ಪ್ರೈಸ್ ಯುದ್ಧದಲ್ಲಿ ಬಾಕ್ಸರ್ ... ಸ್ಟೀಡ್ ... ಗೆಲುವು ಹೊಂದಿದರು.

ಟೆಕ್ನಾಲಾಜಿಕಲ್ ಇನ್‌ಸ್ಟಿಟ್ಯೂಟ್

ಸ್ವಂ ವ॰] ಬೆಂಗಳೂರು ೧೨

ಬೆಂಗಳೂರಿನಲ್ಲಿರುವ ಟೆಕ್ನಾಲಾಜಿಕಲ್ ಇನ್‌ಸ್ಟಿಟ್ಯೂಟಿಗೆ [illegible] ಈ ಕೆಳಗೆ ನಮೂದಿಸಿದವರನ್ನು ೩ ವರ್ಷಗಳ ಕಾಲ [illegible] ಸದಸ್ಯರಾಗಿ ನೇಮಿಸಿದೆ.

[illegible] ಸರ್ ಮಿರ್ಜಾ ಇಸ್ಮಾಯಿಲ್, [illegible], ಶ್ರೀ [illegible], ವಿ. [illegible], ಶ್ರೀ [illegible] ಕೃಷ್ಣ ಶಿಕ್ಷಣ [illegible] ಅಧಿಕಾರಿಗಳು, [illegible] ಪ್ರಿನ್ಸಿಪಾಲರು, ಚೀಫ್ ಎಲೆಕ್ಟ್ರಿಕಲ್ ಎಂಜಿನಿಯರ್, ಇನ್‌ಸ್ಟಿಟ್ಯೂಟಿನ ಪ್ರಿನ್ಸಿಪಾಲರು.

[illegible] ಇನ್‌ಸ್ಟಿಟ್ಯೂಟಿನ ಪ್ರಿನ್ಸಿಪಾಲ್ [illegible] ಜಂಟಿ ಕಾರ್ಯದರ್ಶಿಗಳು.

ರೈತರಿಗೆ ಬೋನಸ್

ಶಿವಮೊಗ್ಗ, [illegible] ಮತ್ತು ಹಾಸನ ಜಿಲ್ಲೆಗಳಲ್ಲಿ [illegible] ಬತ್ತದ ಬೆಳೆಯನ್ನು [illegible] ಸರ್ಕಾರದ [illegible] ಬತ್ತದ [illegible] ಬೋನಸ್ ಕೊಡಲಾಗುವುದೆಂದು ಸರ್ಕಾರದ ಆಜ್ಞೆಯೊಂದು ತಿಳಿಸುವುದು. [illegible] ಜಿಲ್ಲೆಗಳಲ್ಲಿ ದವಸಗಳ [illegible] ಬಹಳ [illegible] ಕಾರಣ ಜಿಲ್ಲೆಯ ರೈತರಿಗೆ ಈ [illegible] ಬೋನಸ್ ದೊರೆಯುವ [illegible] ಕೊಡಲಾಗಿದೆಯೆಂದು [illegible] ಆಗಿದೆ.

ದವಸ ರವಾನೆಗೆ ಪರ್ಮಿಟ್ ಕೊಡಬಲ್ಲವರು

[illegible] ರವಾನೆ ಮಾಡಲು [illegible] ಡೆಪ್ಯುಟಿ ಕಮಿಷನರ್, [illegible] ಜಿಲ್ಲೆ [illegible] ಸಾಗಿಸಲು [illegible] ಅಧಿಕಾರಿಗಳು [illegible] ಜಿಲ್ಲಾಧಿಕಾರಿಗಳ [illegible] ಕೊಡುವರು [illegible] ಜಿಲ್ಲಾಧಿಕಾರಿ [illegible].

ಬಜಾಜರ ಜೀವನ ಚರಿತ್ರೆ

ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಟಿ. ಸುಬ್ರಹ್ಮಣ್ಯಂರವರು ನಿನ್ನೆ ದಿನ ಸಂಜೆ ಕಾಂಗ್ರೆಸ್ ಕಛೇರಿಯಲ್ಲಿ ಶ್ರೀ ಘನಶ್ಯಾಮದಾಸ್ ಬಿರ್ಲಾರವರು ಹಿಂದಿಯಲ್ಲಿ ಬರೆದಿರುವ ಶ್ರೀ ಜಮ್ನಾಲಾಲ್ ಬಜಾಜ್ ರವರ ಜೀವನಚರಿತ್ರೆಯನ್ನು ಶ್ರೀ ಎ. ಪಿ. ಶ್ರೀನಿವಾಸ ಗುಪ್ತರವರು ಕನ್ನಡಿಸಿರುವುದನ್ನು ಬೆಂಗಳೂರಿನ ಗಾಂಧಿ ಸಾಹಿತ್ಯ ಸಂಘದ ಆಶ್ರಯದಲ್ಲಿ ಪ್ರಕಟಿಸುವ ಸಮಾರಂಭವನ್ನು ನೆರವೇರಿಸಿದರು. ಆ ಸಮಯದಲ್ಲಿ ಶ್ರೀ ಸಿದ್ದಯ್ಯನವರ, ಕೃಷ್ಣರವರು [illegible], ಶ್ರೀ ಶ್ರೀನಿವಾಸಮೂರ್ತಿಯವರ ಸ್ವಾಗತವನ್ನು ವಹಿಸಿದ್ದರು. ಸಂಘದ ಅಧ್ಯಕ್ಷರಾದ ಶ್ರೀ [illegible] ಮೂರ್ತಿಯವರು ಪ್ರಯತ್ನವನ್ನು ಪ್ರಶಂಸಿಸಿ ಎಲ್ಲರೂ ಅವರ ಪುಸ್ತಕವನ್ನು ಆತ್ಯಗತ್ಯವಾಗಿ ಓದಬೇಕೆಂದು ಕೇಳಿದರು.

ಪೌರಸಭೆಗೆ ನಾಮಕರಣ

ಸ್ವಂ ವ॰] ಅನಂತಪುರ ೧೨

ಅನಂತಪುರದ ಪೌರಸಭೆಗೆ ಸರ್ಕಾರದವರು ಶ್ರೀಗಳಾದ [illegible], ಚಲುವಯ್ಯ [illegible] ಇವರನ್ನು ತಾ॥ [illegible] ವರ್ಷಕಾಲ ಸದಸ್ಯರಾಗಿ ನಾಮಕರಣ ಮಾಡಿರುವರು.

ಅಗ್ನಿದೇವನ ಔದಾರ್ಯ

ಬೊಂಬಾಯಿ. ನಗರದ [illegible] ನ ಜನರು [illegible] ಹೊರಟುಹೋಗಿದ್ದಾಗ ಅವರಿಗೆ ಸೇರಿದ [illegible] ಗುಡಿಸಲುಗಳಿಗೆ ಅಕಸ್ಮಾತ್ ಬೆಂಕಿ ತಗುಲಿ ಎಲ್ಲವೂ ಭಸ್ಮೀಭೂತವಾದುದಲ್ಲದೆ ಸಾವಿರಾರು ರೂಪಾಯಿಗಳನ್ನು [illegible] ನಷ್ಟವಾಗಿವೆ. ಗುಡಿಸಲುಗಳಲ್ಲಿ ಯಾರೂ ಇಲ್ಲದಿದ್ದುದರಿಂದ ಪ್ರಾಣಹಾನಿ ಸಂಭವಿಸಲಿಲ್ಲ. ಆ ಭಯಂಕರ ಅಗ್ನಿಜ್ವಾಲೆಗಳನ್ನು ಆರಿಸಲು [illegible] ಯಂತ್ರಗಳು [illegible] ಅನೇಕ ಗಂಟೆಗಳ ಕಾಲ ಶ್ರಮಿಸಬೇಕಾಯಿತು.

ಸೂಚನೆ

ಸಂಕ್ರಾಂತಿ ಹಬ್ಬದ ಪ್ರಯುಕ್ತ ನಾಳೆ ದಿನ ನಮ್ಮ ಪತ್ರಿಕೆಗೆ ರಜಾ ಕೊಡಲಾಗಿದೆ.

ವ್ಯವಸ್ಥಾಪಕ, ಸಾಧ್ವಿ.

Edited, printed and published by A. R. Nagarajan, at the Sadhvi Press. D'Fon bish Road, Mysore

ಯುಗೋಸ್ಲಾವಿಯಾದಲ್ಲಿ ಜರ್ಮನ್ ಸೈನ್ಯ

ಯುಗೋಸ್ಲಾವಿಯಾದಲ್ಲಿ [illegible] ಪ್ರದೇಶಗಳನ್ನು [illegible] ಕೊಳ್ಳಲು ಜರ್ಮನರು ಮುತ್ತಿಗೆ ಹಾಕುವರೆಂದೂ, [illegible] ಪ್ರದೇಶದಲ್ಲಿ ಭೀಕರ ಕದನ ನಡೆಯುತ್ತಿದೆಯೆಂದೂ ವರದಿಯಾಗಿದೆ. ಜರ್ಮನ್ ಸೈನ್ಯವು ಟ್ಯಾಂಕ್ ಮತ್ತು ವಿಮಾನಗಳಿಂದ [illegible] ಪ್ರದೇಶಗಳ ಮೇಲೆ [illegible] ನಡೆಸುತ್ತಿದೆ.

ಸಾರ್ದಿನಿಯಾಗಿ ಸಮರ

ರಷ್ಯಾ ರಣಕ್ಷೇತ್ರದಲ್ಲಿನ ಸಾರ್ದಿನಿಗಿ [illegible] ಭೀಕರ ಸಮರ ಪ್ರಾರಂಭವಾಗಿದೆಯೆಂದು ಸುದ್ದಿ ಬಂದಿದೆ.

ಅಪೇರಾ ಟಾಕೀಸ್

ಭಕ್ತರಾಜ್

ಅಥವಾ

ಅಂಬರೀಷ

ನಟವರ್ಗ:- ವಿಷ್ಣುಪಂತ್ ಪಗ್ನಿಸ್, ವಾಸಂತಿ, ಕೌಸಲ್ಯ, ಶಾಂತಿಲಾಲ್. ಮುಂತಾದವರು

13-1-44 ರಿಂದ

4 ನೇ ವಾರ

ರಜೆ ಧರಗಳು ... 0-5-0, 0-3-0, ಬಾಕಿ ಧರಗಳು ಮಾಮೂಲಿನಂತೆ

ಮೊಹರಂ ಗಲಭೆ ಅಂತ್ಯ

ಅಹಮದಾಬಾದ್ ಜಿಲ್ಲಾ ಮುಸ್ಲಿಂ ಲೀಗ್ ಸಮಿತಿಯವರು ಸಭೆ ಸೇರಿ ಸ್ಥಳೀಯ ಅಧಿಕಾರಿಗಳು ಮೊಹರಂ ವ್ಯಾಜ್ಯವನ್ನು ಸಂಧಾನ [illegible] ಮಾಡಿದ್ದಕ್ಕಾಗಿ ಅವರನ್ನು ಅಭಿನಂದಿಸಿ ಮುಂದೆ ಇಂತಹ ಪ್ರಸಂಗಗಳು ಉದ್ಭವಿಸದಿರಲೆಂದು ಹಾರೈಸಿದರು.

ಅ॥ ಕ॥ ಕಿರಿಯರ ಸಮ್ಮೇಳನ

ಅಖಿಲ ಕರ್ನಾಟಕ ಕಿರಿಯರ ಸಮ್ಮೇಳನವು ಉಡುಪಿಯಲ್ಲಿ ಇದೇ ತಿಂಗಳು ೧೫, ೧೬, ಮತ್ತು ೧೭ ರಲ್ಲಿ ನಡೆಯಲಿರುವುದಾಗಿದೆ.

ಚಳಿಗಾಲ

ಅತ್ಯುತ್ತಮವಾದ ರಗ್ಗುಗಳಿಗೂ, ವುಲ್ಲನ್ ಕೋಟಿಂಗ್, ಕಂಬಳಿ ವಗೈರೆಗಳಿಗೂ ಎಲ್ಲೂ ಹುಡುಕಬೇಡಿ.

ನೇರವಾಗಿ ನಮ್ಮಲ್ಲಿಗೆ ಬನ್ನಿ. ಕಡಿಮೆ ಬೆಲೆಗೆ ಉತ್ತಮವಾದ ಮಾಲು ಹೊಂದುವಿರಿ

ಜಿ. ವಿ. ಸೂರ್ಯನಾರಾಯಣ ಶೆಟ್ಟಿ ಅಂಡ್ ಸನ್ಸ್

ಜೂಯಲರ್ಸ್ & ರೆಡಿಮೇಡ್ ಡ್ರೆಸ್ ಎಂಪೋರಿಯಂ,

ಸಯ್ಯಾಜೀರಾವ್ ರೋಡ್, ಮೈಸೂರು.

ಸ್ತ್ರೀಯರ ಸೌಕರ್ಯಕ್ಕಾಗಿ

ತಾ॥ ೧ [illegible] ರಿಂದ ಪ್ರತ್ಯೇಕವಾಗಿ ವ್ಯಾಪಾರ ಶುರು [illegible] ಏರ್ಪಾಡು ಮಾಡಿರುತ್ತೇವೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಚ್ ಕಾಫಿ ಪುಡಿ

ಯನ್ನೇ ಉಪಯೋಗಿಸಿ.

ಡಿ. ಪುಟ್ಟಣ್ಣಯ್ಯ ದಿನಸಿ ಮಂಡಿ, ದೇವರಾಜ ಮಾರ್ಕೆಟ್, ಮೈಸೂರು.

ವಿ ಸೂ:- ಇಲ್ಲೂ ಮತ್ತು ಸಂತೆಪೇಟೆ ಬ್ರಾಂಚ್ [illegible] ರವೆ, ಗೋಧಿಹಿಟ್ಟು ಮತ್ತು ಮೈದಾಹಿಟ್ಟು ಸಹ ದೊರೆಯುತ್ತೆ. ಅಲ್ಲದೆ ಬೂರಾ ವ ಮತ್ತು ಕಲ್ಲು ಸಕ್ಕರೆ ರೇಷನ್ ಕಾರ್ಡುಗಳಿಗೆ ದೊರೆಯುತ್ತವೆ

ಈ ದಿನ — —

ಒಲಿಂಪಿಯಾದಲ್ಲಿ

ಮುಂತಾದವರ

ಬದಲ್ತಿ ದುನಿಯಾ

[illegible] ಸುಮಿತ್ರಾ ದೇವಿ, ಶಾಂತಿ, ಕೆ. ಸಿ. ಡೇ, ತ್ರಿಲೋಕ್ ಕಪೂರ್

ಪ್ರತಿ ದಿನ ಮೂರು ಆಟಗಳು

ಔರಂಗಾಬಾದ್ ಫಿಲಂಸ್ ರವರ ದಂಚಿಕೆ.

ಪ್ರತಿದಿನ 3 ಆಟಗಳು

ರಣಜಿತ್ ಟಾಕೀಸ್

(ಉತ್ಕೃಷ್ಟ ಚಲನಚಿತ್ರ ಮಂದಿರ)

ತಾ॥ ೧೪—೧—೪೪ ನೇ ಶುಕ್ರವಾರದಿಂದ

ಮೊಹಬತ್

(ಹಿಂದಿಯಲ್ಲಿ)

ಶಾಂತ ಆಪ್ಟೆ, ಪಹರಿ ಸನ್ಯಾಲ್, ಯಶೋಧರ ಕಟ್ಜು, ಸುನಾಲಿನಿದೇವಿ, ಸಾಜಿದ್ ಮುಂತಾದವರ ಅಭಿನಯ.

ಸಂಪುಟ ೨] ಶನಿವಾರ ೧೫-೧-೪೪ [ಸಂಚಿಕೆ ೧೫೩

ಸಾರ್ನಿ ರಷ್ಯನರ ವಶ

ಅಮೇರಿಕದಿಂದ ಭಾರತಕ್ಕೆ ಸಾಮಗ್ರಿಗಳ ಆಮದಿಗೆ ಅಡಚಣೆ

ಧಾನ್ಯಗಳನ್ನು ಹಿಂದೂಸ್ಥಾನದಿಂದ ಹೊರಕ್ಕೆ ಕಳುಹಿಸುತ್ತಿಲ್ಲ

ಕೈಲಾಸಂರ ಅಮೋಘ ಅಭಿನಯ

ಸ್ವಂ. ಸು.] ಮೈಸೂರು ೧೫

ಮೈಸೂರು ವಿಶ್ವವಿದ್ಯಾನಿಲಯ ಸಂಘದ ವಾರ್ಷಿಕೋತ್ಸವ ಸಂಬಂಧವಾಗಿ ಕಳೆದ ನಾಲ್ಕೈದು ದಿನಗಳಿಂದಲೂ ಮಹಾರಾಜಾ ಕಾಲೇಜಿನ ಆವರಣದೊಳಗೆ ವಿವಿಧ ವಿನೋದಾವಳಿಗಳು ನಡೆಯುತ್ತಲಿವೆ. ಈ ಕಾರ್ಯಕ್ರಮ ಸರಣಿಯಲ್ಲಿ ನಿನ್ನೆ ಅತ್ಯಂತ ಜನಪ್ರಿಯವಾದ ಅಂಶವು ಇತ್ತು. ಕರ್ನಾಟಕ ನಾಟಕ ಪ್ರಹಸನ ಪ್ರತಿಭಾವಂತ ಶ್ರೀ ಕೈಲಾಸಂರವರು ತಾವೇ ರಚಿಸಿದ "ಏಕಲವ್ಯ" ಎಂಬ ಇಂಗ್ಲಿಷ್ ನಾಟಕವನ್ನು ಏಕ ಪಾತ್ರ ರೂಪದಲ್ಲಿ ಸಭಿಕರ ಮುಂದಿಡುವರೆಂದು ಪ್ರಕಟವಾಗಿದ್ದುದೇ ಆ ಕಾರ್ಯಕ್ರಮ. ಈ ಆನಂದವನ್ನು ಸವಿಯುವ ಸಲುವಾಗಿ ಹಿಂದೆಂದೂ ನೆರೆಯದಿದ್ದಂಥಾ ಅದ್ಭುತ ಜನಸಂದಣಿ ನಿನ್ನೆ ಸಂಜೆ ಕಾಲೇಜ್ ಆವರಣದಲ್ಲಿ ನೆರೆತ್ತು.

ಕಾರ್ಯಕ್ರಮವು ಪರ್ಷಿಯನ್ ನಾಟಕಾಭಿನಯದೊಂದಿಗೆ ಆರಂಭವಾಯಿತು. ಉರ್ದು ನಾಟಕವಾದ ಮೇಲೆ ಸಭಿಕರು ಕಾತುರರಾಗಿ ಕಾಯುತ್ತಿದ್ದ ಶ್ರೀ ವಿನೋದ ಕೈಲಾಸಂ ಮಹಾ ವ್ಯಕ್ತಿಯು ರಂಗ ಭೂಮಿಯಲ್ಲಿ ಕಾಣಿಸಿಕೊಂಡಿತು. ಆ ವೇಳೆಗಾಗಲೇ ರಾತ್ರಿ ೮-೩೦ ಘಂಟೆಯಾಗಿತ್ತು. ಅಲ್ಲಿಂದ ಸುಮಾರು ೧೦ ಗಂಟೆವರೆಗೆ ಒಂದೇ ಸಮನೆ ಕೈಲಾಸಂರವರ ಏಕಪಾತ್ರಾಭಿನಯ ಜರುಗಿತು. ರಾತ್ರಿ ಅಷ್ಟು ಹೊತ್ತಾದರೂ ಸಭಿಕರಲ್ಲೊಬ್ಬರೂ ತಮ್ಮ ಸ್ಥಳ ಬಿಟ್ಟು ಕದಲಲಿಲ್ಲ. "ಏಕಲವ್ಯ" ನಾಟಕವು ಸಭಿಕರೆಲ್ಲರನ್ನೂ ಬೇರೆ ಪ್ರಪಂಚಕ್ಕೆ ಕೊಂಡೊಯ್ದಿತ್ತು. ಭಾಷಾಜ್ಞಾನವಿಲ್ಲದ ವ್ಯಕ್ತಿ ಸಹ ಕೈಲಾಸಂರವರು ಚಿತ್ರಿಸುತ್ತಿದ್ದ ಪಾತ್ರಗಳ ಉದ್ವೇಗ ಉನ್ಮಾದಗಳನ್ನು ಅನುಭವಿಸಿ ಗಣ್ಣೀರಿಡುತ್ತಿದ್ದನು. ಏಕಲವ್ಯನು ದ್ರೋಣಾಚಾರ್ಯರಿಗೆ ಹೆಬ್ಬೆಟ್ಟನ್ನು ಕತ್ತರಿಸಿ ಗುರು ದಕ್ಷಿಣೆ ಅರ್ಪಿಸಿದಾಗಲಂತೂ ಸಭಿಕರು ಏಕ ಹೃದಯದಿಂದ ಮರುಗಿದರು. "ಇಡೀ ಕರ್ನಾಟಕದಲ್ಲೇ ಏನು? ಭಾರತಖಂಡದಲ್ಲೇ ಕೈಲಾಸಂರವರಂಥಾ ಅದ್ಭುತ ಏಕಪಾತ್ರಾಭಿನಯಕಾರರು ಸಿಕ್ಕುವುದು ದುರ್ಲಭ. "ಕೈಲಾಸಂ ಅಮೂಲ್ಯ ರತ್ನ" ಎಂಬುದಾಗಿ ಸಭಿಕರು ಕೊಂಡಾಡಿದರು. ಕಾರ್ಯನಿರ್ವಾಹಕರಿಂದ ವಂದನಾರ್ಪಣೆಯಾದ ಮೇಲೆ ವಂದೇಮಾತರಂ ಗೀತೆಯೊಡನೆ ನಿನ್ನಿನ ಸಮಾರಂಭವು ಮುಗಿಯಿತು.

ಭಾವಚಿತ್ರ ಅನಾವರಣ

ನಿನ್ನೆ ದಿನ ಸಂಜೆ ರಾಜಧಾನಿಯ ಮೆಥಾಡಿಸ್ಟ್ ಮಿಷನ್ ಸ್ಕೂಲಿನಲ್ಲಿ ರೆ|| ಜಿ. ಡಬ್ಲ್ಯು. ಸಾರ್ಜೆಂಟ್, ಇ. ಟಾಮ್ಲಿನ್ಸನ್ ಮತ್ತು ಮಿಸ್ ಹ್ಯಾಸ್ಕಾಲಿನ ಮಾಜಿ ಮುಖ್ಯೋಪಾಧ್ಯಾಯರಾಗಿದ್ದ ರೆ|| ಡಬ್ಲ್ಯು. ಪರ್ಸ್ಪೀವರ ಭಾವಚಿತ್ರಗಳ ಅನಾವರಣವನ್ನು ಮಹಾರಾಜರವರ ಪ್ರೈವೇಟ್ ಸೆಕ್ರೆಟರಿಯವರಾದ ಅಮಾತ್ಯ ಶಿರೋಮಣಿ ಶ್ರೀ ಟಿ. ತಂಬೂಚೆಟ್ಟಿಯವರು ನೆರವೇರಿಸಿದರು.

ಪ್ರಾರ್ಥನೆಯಾದ ನಂತರ ಮೇಲ್ಕಂಡ ಮೂವರಿಗೂ ವಿಶ್ವಾಸ ಪತ್ರಗಳನ್ನು ಅರ್ಪಿಸಲಾಯಿತು. ಅವರುಗಳು ಮಾಡಿರುವ ಸೇವೆಯನ್ನು ಕೊಂಡಾಡಲಾಯಿತು. ಅಧ್ಯಕ್ಷರ ಭಾಷಣವಾದನಂತರ ಧನ್ಯವಾದಗಳು ರಾಷ್ಟ್ರಗೀತೆಗಳು ನಡೆದು ಸಮಾರಂಭ ಮುಕ್ತಾಯವಾಯಿತು.

ರೈ|| ಆ|| ಶಾಸ್ತ್ರಿಯವರ ಭಾಷಣ

ಮೈಸೂರು ವಿಶ್ವವಿದ್ಯಾನಿಲಯ ಸಂಘದ ಆಶ್ರಯದಲ್ಲಿ ಈ ದಿನ ಸಂಜೆ ಮಹಾರಾಜಾ ಕಾಲೇಜಿನ ಆವರಣದಲ್ಲಿ, ರೈ|| ಆ|| ಶ್ರೀನಿವಾಸ ಶಾಸ್ತ್ರಿಯವರು ಮುಕ್ತಾಯ ಭಾಷಣ ಮಾಡುವರು. ಹೈದರಾಬಾದಿನ ಡಾ|| ಅಬ್ದುಲ್ ಲತೀಫ್‌ರವರು ಈ ಸಮಾರಂಭಕ್ಕೆ ಬಾರದಿದ್ದುದರಿಂದ ಅವರ ಬದಲು ಶಾಸ್ತ್ರಿಗಳವರ ಭಾಷಣವನ್ನು ಏರ್ಪಡಿಸಲಾಗಿದೆ.

ಪ್ರಾರ್ಥನಾ ದಿನಾಚರಣೆ

ಶ್ರೀಮತಿ ಕಸ್ತೂರಿಬಾಯಿ ಗಾಂಧಿಯವರ ಆರೋಗ್ಯಕ್ಕಾಗಿ ಪ್ರಾರ್ಥನೆಯನ್ನು ಸಲ್ಲಿಸಲು ಕೃಷ್ಣಮೂರ್ತಿಪುರದ ದೇಶೀಯ ವಿದ್ಯಾಶಾಲೆಯಲ್ಲಿ ೧೭ ನೇ ತಾ|| ಸೋಮವಾರ ಸಂಜೆ ಶ್ರೀಮತಿ ಸುಭೋಧರಾಮರಾಯರವರ ಅಧ್ಯಕ್ಷತೆಯಲ್ಲಿ ಸಭೆ ಏರ್ಪಡಿಸಲಾಗಿದೆ, ಸರ್ವರಿಗೂ ಆಹ್ವಾನವುಂಟು.

ಚರ್ಚಾಸ್ಪರ್ಧೆ

ಶ್ರೀ ಎಂ. ಸಿ. ಕೃಷ್ಣನ್ ಪ್ರಾಸಿಕ್ಯೂಟರ್ ಚರ್ಚಾಸ್ಪರ್ಧೆಯು ಶ್ರೀ ಭಾರತೀ ಸಂಘದ ಆಶ್ರಯದಲ್ಲಿ ನಾಳೆ ಬೆಳಗ್ಗೆ 10½ ಗಂಟೆಗೆ ಟೌನ್ ಹಾಲಿನಲ್ಲಿ ನಡೆಯುವುದು. ಸರ್ವರೂ ದಯಮಾಡಿಸಬೇಕೆಂದು ಕಾರ್ಯದರ್ಶಿಗಳು ಪ್ರಾರ್ಥಿಸಿದ್ದಾರೆ.

ಫುಟ್‌ಬಾಲ್

ಎಂ. ಎಸ್. ಎಸ್. ಚೆಸ್ಟ್ ಪಂದ್ಯಗಳ ಸಾಲಿನಲ್ಲಿ ಮೊನ್ನೆ ಸಂಜೆ ದೊಡ್ಡಕೆರೆ ಮೈದಾನದಲ್ಲಿ ನಡೆದ ಸೆಮಿ ಫೈನಲ್ಸ್ ಪಂದ್ಯದಲ್ಲಿ ಸ್ಪೈಸ್ ಕ್ಲಬ್ಬಿನವರು ಛಾಂಪಿಯನ್ಸ್ ಕ್ಲಬ್ಬನ್ನು ೨ ಗೋಲುಗಳಿಂದ ಸೋಲಿಸಿದರು.

ಗೋ ಪ್ರೇಮ; ಆತ್ಮಹತ್ಯೆ

ಹೊಳೇನರಸೀಪುರ ತಾ|| ಬಾಗೂರು ಎಂಬ ಗ್ರಾಮದ ನಿಂಗರಾಜಮ್ಮ ಎಂಬಾಕೆ ತಾನು ಬಹಳವಾಗಿ ಪ್ರೀತಿಸುತ್ತಿದ್ದ ಒಂದು ಹಸುವು ಸತ್ತುಹೋದುದರಿಂದ ಅದರ ಮೇಲಿನ ಮರುಕದಿಂದ ತನ್ನ ಮಗುವನ್ನು ಬಾವಿಗೆ ಬಿಸಾಟಿ, ತಾನೂ ಪ್ರಾಣಬಿಟ್ಟಳೆಂದು ತಿಳಿಯಬಂತು.

ಇಬ್ಬರು ತಾಯಿಗೆ ಏಕಕಾಲದಲ್ಲಿ ೩ ಮಕ್ಕಳು

ಬೆಂಗಳೂರು ಎಂಪ್ಲಾಯಿ [illegible] ಸ್ತ್ರೀ ಯಲ್ಲಿ ಕಳೆದ ೧೩ ನೇ [illegible] ಶ್ರೀ ಜಿ. ವಿ. ಮೂ. ಮೂರ [illegible] ಗೆ [illegible] ಸತ್ತರು [illegible] ಆರೆ ಮಂದಿ ಮಕ್ಕಳೂ ಆರೋಗ್ಯವಾಗಿದ್ದಾರೆ

ಅಮೇರಿಕದಿಂದ ಆಮದಿಗೆ ಅಡ್ಡಿಯೆ?

ಹಿಂದೂಸ್ಥಾನಕ್ಕೆ ಬೇಕಾಗುವ ಪದಾರ್ಥಗಳನ್ನು ಅಮೇರಿಕದಿಂದ ಕೊಂಡುಕೊಳ್ಳಲು ಬ್ರಿಟಿಷ್ ಸರ್ಕಾರದವರು, ಇಂಡಿಯಾ ಸರ್ಕಾರಕ್ಕೆ ಪ್ರತಿಬಂಧಕಗಳನ್ನು ಹಾಕುತ್ತಿರುವರೆಂದು ಹೇಳಲಾಗಿದೆ. ಯಾವ ಸಾಮಗ್ರಿಗಳು ಅತ್ಯಗತ್ಯವೋ ಅವುಗಳನ್ನು ಮಾತ್ರ ಕೊಳ್ಳುವಂತೆ ಹೇಳಲಾಗುತ್ತಿದೆ. ಹಡಗುಗಳಲ್ಲಿ ಸ್ಥಳವಿದ್ದರೂ ಅಮೇರಿಕದಿಂದ ಸಾಮಾನುಗಳನ್ನು ಆಮದು ಮಾಡಲು ನಿರ್ಬಂಧವು ಬಿದ್ದಿದೆ, ಎಂದು ಅಮೇರಿಕದ ಸುಪ್ರಸಿದ್ಧ ವ್ಯಾಪಾರಿಗಳೊಬ್ಬರು ತಿಳಿಸಿದ್ದಾರೆ.

ಬಲವಂತ ಯುದ್ಧ ಸೇವೆಗೆ ಅಸಮಾಧಾನ

ಅಮೇರಿಕದ ಸರ್ಕಾರದ ಎಲ್ಲ ಪ್ರಜೆಗಳು ಯುದ್ಧ ಸೇವೆಗೆ ಸೇರುವಂತೆ ಅಧ್ಯಕ್ಷ ರೂಸ್‌ವೆಲ್ಟರು ಶಾಸನ ಮಾಡಲು ಶಿಫಾರಸ್ ಮಾಡಿರುವ ವಿಷಯದಲ್ಲಿ ಎಲ್ಲೆಲ್ಲೂ ವಿರೋಧಾಭಿಪ್ರಾಯ ಹುಟ್ಟಿದೆ. ಬಲವಂತದಿಂದಲೂ ವಿನ್ಯಾಸದಿಂದ ಮಾಡುವ ಸೇವೆಯಿಂದ ಹೆಚ್ಚು ಪ್ರಯೋಜನವಾಗದೆಂದು ಜನಾಭಿಪ್ರಾಯ ವ್ಯಕ್ತವಾಗಿ ಅಭಿಪ್ರಾಯ ಪಡುತ್ತಿದ್ದಾರೆ.

ಟರ್ಕಿ ವಿದ್ಯಾರ್ಥಿಗಳು ಸ್ವಿಟ್ಜರ್ಲೆಂಡಿಗೆ

ಬರ್ಲಿನ್ನಲ್ಲಿರುವ ಎಲ್ಲಾ ಟರ್ಕಿ ವಿದ್ಯಾರ್ಥಿಗಳೂ ತಮ್ಮ ವ್ಯಾಸಂಗವನ್ನು ಮುಂದುವರಿಸಲು ಸ್ವಿಟ್ಜರ್ಲೆಂಡಿನ ಜ್ಯೂರಿಚ್ ಅಥವಾ ಬರ್ನ್‌ಗೆ ಹೋಗಬೇಕೆಂದು ಟರ್ಕಿಯ ವಿದ್ಯಾಮಂತ್ರಿಗಳು ತಿಳುವಳಿಕೆ ಕೊಟ್ಟಿದ್ದಾರೆ. ಈಗ ಜರ್ಮನಿಯ ವಿವಿಧ ವಿಶ್ವವಿದ್ಯಾನಿಲಯಗಳಲ್ಲಿ ಅನೇಕ ಜನ ಟರ್ಕಿ ವಿದ್ಯಾರ್ಥಿಗಳಿರುವರು.

ರೈಲಿಯವರಿಗೆ ಹೊಸ ಹುದ್ದೆ

ಮದ್ರಾಸ್ ಮತ್ತು ಮಧ್ಯ ಪ್ರಾಂತದ ಲ್ಲಿ ಬಂಧನದಲ್ಲಿಡಲ್ಪಟ್ಟಿರುವ ಡಿಟಿನ್ಯೂಗಳ [illegible] ಮೈಸೂರು ಸಂಸ್ಥಾನದ ನಿವೃತ್ತ ಪ್ರೈವೇಟ್ ಸ್ವಾಮಾಧೀನದ [illegible] ಕ್ಕೆ [illegible] ಮದ್ರಾಸ್ [illegible] ಮಾಡಿ [illegible] ಕೋರ್ಟಿನ [illegible] ರೈಲಿಯವರು [illegible] ಎಂದು ತಿಳಿದುಬಂದಿದೆ.

ಸಾರ್ನಿ ರಷ್ಯನರ ವಶ

ಪೋಲೆಂಡ್ ಎಲ್ಲೆಗೆ ೩೫ ಮೈಲಿ ದೂರದಲ್ಲಿರುವ ಪ್ರಸಿದ್ಧ ರೈಲ್ವೆ ಜಂಕ್ಷನ್ ಆದ ಸಾರ್ನಿಯನ್ನು ರಷ್ಯನರು ಹಿಡಿದಿದ್ದಾರೆ. ರಷ್ಯದ ದಕ್ಷಿಣ ಭಾಗದಲ್ಲಿ ಅನೇಕ ಕಡೆ ರಷ್ಯನರು ಜರ್ಮನರ ದಳಗಳನ್ನು ಭೇದಿಸಿಕೊಂಡು ಮುನ್ನುಗ್ಗಿದ್ದಾರೆ. ಕರ್ಜೆನ ಉತ್ತರ ಭಾಗದಲ್ಲಿ ಅನೇಕ ದಳಗಳನ್ನು ರಷ್ಯನರು ಮುನ್ನುಗ್ಗಿಸಿದ್ದಾರೆ.

ಧಾನ್ಯಗಳನ್ನು ಕಳಿಸುತ್ತಿಲ್ಲ

ಹಿಂದೂಸ್ಥಾನದಿಂದ ಹೊರಗಡೆಗೆ ಆಹಾರ ಧಾನ್ಯಗಳನ್ನು ಇನ್ನೂ ಕಳುಹಿಸಲಾಗುತ್ತಿದೆಯೆಂದು ಎಲ್ಲೆಲ್ಲಿ ಹರಡುತ್ತಿರುವ ಸುದ್ದಿಗಳು ನಿರಾಧಾರವಾದುವೆಂದು ಇಂಡಿಯಾ ಸರ್ಕಾರದವರು ಪ್ರಕಟಿಸಿದ್ದಾರೆ. ಕಳೆದ ಜುಲೈ ತಿಂಗಳಿನಿಂದ ಈಚೆಗೆ ಹಡಗುಗಳ ಮತ್ತು ವಿಮಾನಗಳ ಪ್ರಯಾಣಿಕರಿಗೆ ಎಷ್ಟು ಅಗತ್ಯವೋ ಅಷ್ಟು ವಿನಾ ಬೇರೆ ಧಾನ್ಯವನ್ನು ಈಚೆಗೆ ಕಳುಹಿಸಿಲ್ಲವೆಂದು ಹೇಳಿರುವರು.

ನಾಜಿ ಪ್ರಚಾರ ನಾಯಕರ ಸಭೆ

ಸೋಮವಾರ ಬರ್ಲಿನ್ನಲ್ಲಿ ಜರ್ಮನಿಯ ಎಲ್ಲ ಪ್ರಾಂತ್ಯಗಳ ನಾಜೀ ಪ್ರಚಾರ ನಾಯಕರ ಸಭೆ ಸೇರಿತ್ತು. ಪ್ರತಿ ನಾಯಕನೂ ದೇಶದ ರಾಜಕೀಯ ಮತ್ತು ಇತರ ಪರಿಸ್ಥಿತಿಗಳಬಗ್ಗೆ ಹೇಳಿಕೆಕೊಟ್ಟನು. ಪಕ್ಷದ ಮುಖಂಡರು ಸಭೆಯಲ್ಲಿ ಭಾಷಣ ಮಾಡಿದರು. ಡಾ|| ಗೊಬೆಲ್ಸನೂ ಸಭೆಗೆ ಹಾಜರಾಗಿದ್ದನು.

ರೈಲಿನ ಪೆಟ್ಟಿಗೆಯಲ್ಲಿ ಶವ

ಕಳೆದ ಸೋಮವಾರ ಸಾಟಾರ ಜಿಲ್ಲೆಯ ಪಂಢರಪುರ ರೈಲ್ವೆ ಸ್ಟೇಷನ್ನಿನಲ್ಲಿ ಇಬ್ಬರು ಸಿಪಾಯಿಗಳು ರೈಲಿನ ಮೂರನೆ ತರಗತಿ ಗಾಡಿಯಲ್ಲಿ ಹುಲ್ಲಿನ ರಕ್ತದ ಗುರುತುಗಳಿದ್ದ ಪೆಟ್ಟಿಗೆಯೊಂದನ್ನು ಬಿಟ್ಟಿರುವರು. ಮುಂದಿನ ಸ್ಟೇಷನ್ನಿನಲ್ಲಿ ಪೆಟ್ಟಿಗೆಯನ್ನು ಬಿಚ್ಚಿ ನೋಡಲು ೧೬ ವರ್ಷ ವಯಸ್ಸಿನ ತರುಣನೊಬ್ಬನ ಸತ್ತ ದೇಹವು ಅದರಲ್ಲಿ ಕಂಡು ಬಂತು. ತನಿಖೆ ನಡೆಯುತ್ತಿದೆ.

ಓಡುವ ರೈಲಿನಿಂದ ಬಿದ್ದು ಬದುಕಿದಳು

ಕಳೆದ ೧೧ ನೆ ತಾ|| ಗುಂಟೂರು ಬಳಿ ಒಂದು ಊರಿನ ಹತ್ತಿರ ಪ್ಯಾಸೆಂಜರ್ ಗಾಡಿಯು ಹೋಗುತ್ತಿದ್ದಾಗ ಗಾಡಿಯಲ್ಲಿ ಕಿಟಕಿ ಹತ್ತಿರ ನಿಂತುಕೊಂಡು ನೋಡುತ್ತಿದ್ದ ಭಾಗೀರಥಿ ಎಂಬ ಎಳೆ ವರ್ಷದ ಹುಡುಗಿಯು ಕೆಳಗೆ ಬಿದ್ದಳು. ತಕ್ಷಣ ಸರಪಣಿ ಎಳೆಯಲಾಗಿ ರೈಲು ನಿಂತಿತು. ಹುಡುಗಿಗೆ ಪೆಟ್ಟಾಗಲಿ ಗಾಯವೇನೂ ಆಗಲಿಲ್ಲ.

ಅಸ್ಸಾಂನಲ್ಲಿ ಹೊಸ ರೈಲು

ಮಲೇರಿಯಾ, ಮಳೆ ಮತ್ತು ಗುಂಡಾದಲ್ಲಿ ಅಡಚಣೆಗಳನ್ನು ಎದುರಿಸಿ, ಭಾರತ ಇಂಜನೀಯರ್ ದಳದವರು ಅಸ್ಸಾಮಿನಲ್ಲಿ ಎರಡು ಪ್ರಮುಖವಾದ ರೈಲ್ವೆಗಳನ್ನು ರಚಿಸಿದ್ದಾರೆ.

೫೦ ರಲ್ಲಿ ೪೮ ಕಾಂಗ್ರೆಸ್ಸಿಗೆ

ಅಹಮದಾಬಾದಿನ ಜಿಲ್ಲಾ ಬೋರ್ಡಿಗೆ ನಡೆಯುತ್ತಿರುವ ಚುನಾವಣೆಯಲ್ಲಿ ೫೦ ಸ್ಥಾನಗಳಲ್ಲಿ ೪೮ ಸ್ಥಾನಗಳು ಕಾಂಗ್ರೆಸ್ಸಿಗೆ ಪ್ರತಿಸ್ಪರ್ಧೆಯಿಲ್ಲದೆ ದೊರೆತಿವೆ. ಈ ಪ್ರಕಾರ ಮೂರು ಸ್ಥಾನಗಳು ದೊರೆತಿವೆ ಉಳಿದ ಎರಡು ಸ್ಥಾನಗಳಿಗೆ ಪ್ರತಿ ಸ್ಪರ್ಧೆ ಇದೆ

ಒಂದು ವರ್ಷದ ಮಗುವಿಗೂ ಅರ್ಧ ಸೇರು ಪಡಿ

ಸರ್ಕಾರದ ಹೊಸ ಪ್ರಕಟಣೆ

ಏಳು ವರ್ಷಕ್ಕೆ ಮೇಲ್ಪಟ್ಟಿರುವ ಮಕ್ಕಳಿಗೂ ಸಹಾ ದಿನ ಒಂದಕ್ಕೆ ಸರಾಸರಿ ಅರ್ಧ ಸೇರು ಧಾನ್ಯವನ್ನು ಕೊಡಲಾಗುವುದೆಂದು ಸರ್ಕಾರಿ ಆಜ್ಞೆಯಾಗಿತ್ತು. ಈಗಿನ ಹೊಸ ಆಜ್ಞೆಯ ಪ್ರಕಾರ ಒಂದು ವರ್ಷಕ್ಕೆ ಮೇಲ್ಪಟ್ಟ ಮಕ್ಕಳಿಗೂ ಸಹಾ ಸರಾಸರಿ ಅರ್ಧ ಸೇರಿನಂತೆ ಕೊಡಬೇಕೆಂದು ತಿಳಿಸಲಾಗಿದೆ.

[illegible]

[illegible]

[illegible]

[illegible]

ಸಹಕಾರ ಸಂಸ್ಥೆಗಳ ಅಧಿಕಾರಿಗಳನ್ನು ವಜಾಮಾಡುವುದು

ಮೈಸೂರು ಸರ್ಕಾರದವರು ಒಂದು ಆಜ್ಞೆ ಹೊರಡಿಸಿ ಸಹಕಾರ ಸಂಸ್ಥೆಗಳ ಅಧಿಕಾರಿಗಳ [illegible] ಸಂಸ್ಥೆಗೆ [illegible] ಅಧಿಕಾರ [illegible] ಕೊಡಲು ಒಂದು ಶಾಸನವನ್ನು ರಚಿಸಿದ್ದಾರೆ. ಇದಕ್ಕೆ ಆಕ್ಷೇಪಣೆಯನ್ನು [illegible] ತಿಳಿಸಬೇಕು.

ದೆಹಲಿಗೆ ಪ್ರಯಾಣ

ಸ್ವಂ. ವ.] ಬೆಂಗಳೂರು ೧೪

ಮಾರ್ಚ ೪ ಮತ್ತು ೫ ತಾರೀಖು ದೆಹಲಿಯಲ್ಲಿ ನಡೆಯಲಿರುವ ಭಾರತ ವಾಣಿಜ್ಯ ಸಂಘದ ವಾರ್ಷಿಕಸಭೆಗೆ ಶ್ರೀಗಳಾದ ಧರ್ಮಪ್ರಕಾಶ ಎಲ್. ಎಸ್. ವೆಂಕಟಾಜಿರಾವ್, ರಾಮನಾರಾಯಣ ಚೆಲ್ಲಾರಾಂ, ಎಂ. ರಾಮಯ್ಯ ಮತ್ತು ಎಸ್. ಎ. ಶ್ರೀನಿವಾಸರವರು ಮೈಸೂರು ವಾಣಿಜ್ಯ ಸಂಘದ ಪರವಾಗಿ ತೆರಳಲಿರುವರು.

ಸರ್ಕಾರಿ ವಾರ್ತೆ

ಮೈಸೂರಿನಲ್ಲಿ ರೇಷನಿಂಗ್ ಕಛೇರಿ ಮ್ಯಾನೇಜರು ಮತ್ತು ಕೋಆಪರೇಟಿವ್ ಗ್ರಾಮಾಭಿವೃದ್ಧಿ ಕೇಂದ್ರದ ಶ್ರೀ ಜಿ. ಸಿ. [illegible] ಅವರನ್ನು [illegible] ನೇಮಿಸಲಾಗಿದೆ.

ಬೆಂಗಳೂರು-ಹಿಂದೂಪುರ ಮತ್ತು ಬೆಂಗಳೂರು [illegible] ಪ್ರದೇಶಗಳ ವ್ಯವಹಾರ ಇನ್ನು ಮೇಲೆ ಸಂಸ್ಥಾನದ ಸಿವಿಲ್ ಕೋರ್ಟುಗಳಿಗೆ ಸೇರಿದ್ದು. ಬೆಂಗಳೂರು ಜಿಲ್ಲಾ ಮತ್ತು ಸೆಷನ್ಸ್ ಕೋರ್ಟಿನ ಅಧಿಕಾರ ವಲಯಕ್ಕೆ ಅದು ಸೇರಿರುವುದು.

ಶ್ರೀ ಕೆ. ಬಿ. ಮಾಧವರವರನ್ನು ಮೂಸಿಯಾಲಜಿ ಆಕ್ಟಿಂಗ್ ಪ್ರೊಫೆಸರಾಗಿ ಮಾಡಲಾಗಿದೆ.

ಚಳಿಗಾಲ

ಅತ್ಯುತ್ತಮವಾದ ರಗ್ಗುಗಳಿಗೂ, ಫುಲ್ಲ ಕೋಟಿಂಗ್, ಕಂಬಳಿ ಬಟ್ಟೆಗಳಿಗೂ ಎಲ್ಲೂ ಹುಡುಕಬೇಡಿ.

ನೇರವಾಗಿ ನಮ್ಮಲ್ಲಿಗೆ ಬನ್ನಿ. ಕಡಿಮೆ ಬೆಲೆಗೆ ಉತ್ತಮವಾದ ಮಾಲು ಹೊಂದುವಿರಿ.

ಜಿ. ವಿ. ಸೂರ್ಯನಾರಾಯಣ ಶೆಟ್ಟಿ ಅಂಡ್ ಸನ್ಸ್

ಜ್ಯೂಯಲರ್ಸ್ & ರೆಡಿಮೇಡ್ ಡ್ರೆಸ್ ಎಂಪೋರಿಯಂ,

ಸಯ್ಯಾಜಿರಾವ್ ರೋಡ್, ಮೈಸೂರು.

Edited, printed and published by A. R. Nagarajan, at the Sadhvi Press, D. Subbiah Road, Mysore.

ಔಷಧ ಸಾಮಗ್ರಿಗಳ ಪತ್ತೆ

ಕಲ್ಕತ್ತಾ ಪೋಲೀಸಿನ ಗೂಢಚಾರರು ೩ ಲಾಯರ ವರು ಕಳೆದ ೧೧ ನೇ ತಾ॥ ಸಿಟಿಯ ಟಿಲ್ಜಗಂಜ್ ಎಂಬ ಪ್ರದೇಶದ ಒಂದು ಮನೆಗೆ ನುಗ್ಗಿ ಶೋಧನೆ ನಡೆಸಿ, ೨½ ಲಕ್ಷ ರೂ ಮೇಲ್ಪಟ್ಟು, ಕ್ವಾಲಿಕ್ಸ್ ಮತ್ತು ಇತರ ಔಷಧಿ ಸಾಮಗ್ರಿಗಳಿದ್ದುದನ್ನು ಕಂಡು ವಶಪಡಿಸಿಕೊಂಡರು. ಈ ಸಂಬಂಧದಲ್ಲಿ ಇಬ್ಬರು ಸ್ತ್ರೀಯರನ್ನೂ ಒಬ್ಬ ಗಂಡಸನ್ನೂ ದಸ್ತಗಿರಿ ಮಾಡಿದರು. ಮಾರನೆ ದಿನ ಅವರನ್ನು ಆಲಿಪೂರ್ ಮ್ಯಾ॥ ರ ಮುಂದೆ ನಿಲ್ಲಿಸಲಾಯಿತು. ನಂತರ ಅವರನ್ನು ಬಂಧನದಲ್ಲಿಡಲಾಯಿತು. ತನಿಖೆ ಈಗ ನಡೆಯುತ್ತಿದೆ.

1944

ಈ ಕಾಲದಲ್ಲಿ

ದುಡ್ಡು

ಪತ್ರಿಂಲ್ಯಾಗಳಲ್ಲಿ ಇಡುವುದಕ್ಕಿಂತ [illegible] ಅಗಲೀ ಇಡುವುದಕ್ಕಿಂತ

ಮನೆ, ಬಂಗ್ಲೆ, ಸೈಟು, ಗದ್ದೆ

ಇವುಗಳನ್ನು

ಕೊಳ್ಳಿರಿ

ಶಾಶ್ವತವಾದ

ಆಸ್ತಿ

ಆಗುವುದು.

ಈ ದಿನವೇ ನಿರ್ಧರಿಸಿ.

ಈಗಿನ ಕಾಲದ ಹಣಕ್ಕೆ ಬೆಲೆಯಿಲ್ಲ

ಬೇಕಾದ

ಹಣವೇ

ಬೇಕೆಂದರೆ ನಿಮ್ಮ ಮನೆ

ಮಾರಿಬಿಡಿ.

ಬಿ. ಎಸ್. ಸುಬ್ಬರಾವ್

ಸಿಟಿ ಅಡ್ವರ್ಟೈಸಿಂಗ್ ಕೋ,

(ಜಗನ್ಮೋಹನ ಬಂಗ್ಲೆ ಎದುರು)

ಮೈಸೂರು.

ಸೊಸೈಟಿಯಲ್ಲೂ ರೇಷನ್ ತೊಂದರೆಯೆ ?

ರಾಜಧಾನಿಯ ಚಾಮರಾಜಪುರಂ ಸೊಸೈಟಿ ಶಾಪಿನಲ್ಲಿ ರೇಷನ್ ಹಂಚುತ್ತಿದ್ದಾರೆ. ಇದಕ್ಕೆ ಕೆಲವು ನಿಬಂಧನೆಗಳನ್ನು ರಚಿಸಿಕೊಂಡು ಜಾರಿಮಾಡಿದ್ದಾರೆ. ಶಾಪಿನದ ಒಂದೆರಡು ವ್ಯತ್ಯಯನ್ನು ಮಹಾಜನಗಳು ನೋಡಬೇಕಾದದ್ದು.

ಅಕ್ಕಿ, ರಾಗಿ ಮತ್ತು ಸಕ್ಕರೆ ಇರುವ ಕಾರ್ಡಿನವರು ಈ ದಿನ ಅಕ್ಕಿ ತೆಗೆದುಕೊಂಡು ನಾಳೆ ಸಕ್ಕರೆ ಕೇಳಿದರೆ ಇಲ್ಲ. ಎರಡು ದಿನಗಳು ಬಿಟ್ಟು ರಾಗಿ ಕೇಳಿದರೂ ಇಲ್ಲ. ಮುಂದಿನವಾರವೇ ಬನ್ನಿ ಎಂಬುದೆ ಉತ್ತರ. ಒಟ್ಟಿಗೆ ಒಂದು ವಾರದ ರೇಷನ್ ಪೂರ್ತಿ ತೆಗೆದುಕೊಳ್ಳಬೇಕು.

ಯಾರಾದರೊಬ್ಬರು ಮಂಗಳವಾರ ತೆಗೆದುಕೊಳ್ಳಬೇಕಾದರೆ ಅವರು ಅದಿನವೇ ತೆಗೆದುಕೊಳ್ಳಬೇಕು. ಖಾಯಿಲೆಯಿಂದಲೋ ಚಾಕರಿಯಿಂದಲೋ, ಹಣ ಒದಗದೆಯೋ, ಊರಲ್ಲಿಲ್ಲದೆಯೋ ಅಥವಾ ಇತರ ಕಾರಣಗಳಿಂದಲೋ ಆದಿನ ತಪ್ಪಿದರೆ ಬೇರೆ ದಿನ ರೇಷನ್ ಕೊಡುವುದಿಲ್ಲ. ಮುಂದಿನ ವಾರ ಹೋದರೆ ಹಿಂದಿನ ವಾರದ ಬಾಬ್ತು ರೇಷನ್ ಕೊಡುವುದಿಲ್ಲ. ಇದಕ್ಕೆ ತುತ್ತಾಗಿ ಕೆಲವರಂತೂ ಕಣ್ಣೀರು ಸುರಿಸುತ್ತಿದ್ದಾರೆ. ಇವರ ಗೋಳು ಹೇಳತೀರದು.

ಇಲ್ಲಿ ಇಂತಹ ಕಟ್ಟುಪಾಡು ನಿಬಂಧನೆಗಳನ್ನು ಅವುಗಳನ್ನೆಲ್ಲಾ ಸರಿಹರಿಸಿ ಇತರ ಕಡೆಗಳಲ್ಲಿ ದೊರಕುತ್ತಿರುವಂತೆ ಇಲ್ಲೂ ಜನರಿಗೆ ತಕ್ಕ ರಿಯಾಯಿತಿ ಕೊಡುವಂತೆ ಮಾಡಿ, ಸೊಸೈಟಿ ಅಧಿಕಾರಿಗಳಿಗೆ ಬರೆಯಬೇಕೆಂದು ಛೇರ್‌ಮೆನ್ ಆಫೀಸಿಗೆ ನಾವು ಬರೆದು ವಾರ, ದಿನಗಳಾದವು. ದಿನದಿನವೂ ತೊಂದರೆ ಹೆಚ್ಚುತ್ತಿದೆ.

ಈ ಸೊಸೈಟಿಯವರೂ ತಕ್ಕ ರಿಯಾಯಿತಿ ತೋರಿಸಬೇಕು. ಹಂಚಲು ಕೈಲಾಗದಿದ್ದರೆ ಬಿಟ್ಟುಬಿಡುವುದು ಲೇಸು. ಜನರಿಗಂತೂ ಬಹಳ ತೊಂದರೆಯಾಗಿದೆ. ಜನರಿಗೆ ಶಾಂತಿ ಕೊಟ್ಟವರ ಜೊತೆಗೆ ಇದರ ಅಧಿಕಾರಿಗಳು ಜಾಗ್ರತೆಯಲ್ಲಿ ಕಣ್ಣು ತೆರೆದು ಅನುಕೂಲಪಡಿಸಬೇಕಾಗಿ ಪ್ರಾರ್ಥನೆ.

ಎ. ಆರ್. ಸೂರ್ಯನಾರಾಯಣರಾವ್,

ಮ್ಯುನಿಸಿಪಲ್ ಕೌನ್ಸಿಲರ್.

ಬೇಕಾಗಿದೆ

೮ ಮತ್ತು 20 ಹಾರ್ಸ್ ಪವರಿನ ಒಂದೊಂದು ಮೋಟಾರು ಬೇಕಾಗಿದೆ. ವಿವರ ಮತ್ತು ಬೆಲೆ ವಿವರಗಳನ್ನು ತಿಳಿಸಿ

ಮೈಸೂರು ಆರ್ಟ್ಸ್ ಫ್ರೇಂ ಅಂಡ್ ಉಡ್ ಇಂಡಸ್ಟ್ರೀಸ್, ಲಿಮಿಟೆಡ್,

ಹಲಸೂರು ಗೇಟ್, :: ಬೆಂಗಳೂರು ೨.

ಈ ದಿನ — —

ಒಲಿಂಪಿಯಾದಲ್ಲಿ

ಮುರಾರಿಯವರ

ಬದಲ್ತಿ ದುನಿಯ

[illegible] : ಮುಮ್ತಾಜ್ ಶಾಂತಿ, ಕೆ. ಸಿ. ಡೇ, ತ್ರಿಲೋಕ್ ಕಪೂರ್

ಪ್ರತಿ ದಿನ ಮೂರು ಆಟಗಳು

ಕರ್ನಾಟಕ ಫಿಲಂಸ್‌ರವರ ಪಂಚಿಕೆ.

ಸ್ತ್ರೀಯರ ಸೌಕರ್ಯಕ್ಕಾಗಿ

೩॥ ೧-೧-೧೯೪೪ ರಿಂದ ಪ್ರತ್ಯೇಕವಾಗಿ ವ್ಯಾಪಾರ ಹೊಸ ಏರ್ಪಾಡು ಮಾಡಿದ್ದೇವೆ

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿಪುಡಿ

ಯನ್ನೇ ಉಪಯೋಗಿಸಿ.

ಡಿ. ಪುಟ್ಟಣ್ಣ ಏನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ವಿ. ಸೂ — ಇಲ್ಲೂ ಮತ್ತು ಸಂತೆಪೇಟೆ ಬ್ರಾಂಚ್ ಆಫೀಸಿನಲ್ಲೂ ರವೆ, ಗೋಧಿಹಿಟ್ಟು ಮತ್ತು ಮೈದಾಹಿಟ್ಟು ಸಹ ದೊರೆಯುತ್ತೆ. ಅಲ್ಲದೆ ಬಾರು ನ್ಯಾಯ ಕ್ಕೆ ಸಕ್ಕರೆ ರೇಷನ್ ಕಾರ್ಡುದಾರರುಗಳಿಗೆ ದೊರೆಯುತ್ತದೆ.

ಸಂಪುಟ ೨] ಭಾನುವಾರ ೧೭--೧--೪೪ [ಸಂಚಿಕೆ ೧೫೪

ತುರ್ಕಿ ಯುದ್ಧಕ್ಕೆ ಇಳಿಯುವುದೇ?

ನಾಜಿ ಏಜೆಂಟರು ಚಿತ್ರಾಲಯದೊಳಗೆ ಬಾಂಬಿಡುತ್ತಿರುವರು

ಕಾನಪುರದಲ್ಲಿ ಪೋಲೀಸರು ಗುಂಡು ಹಾರಿಸಿದರು

ತುರ್ಕಿ ಯುದ್ಧಕ್ಕೆ ಇಳಿಯುವುದೇ?

ಬರುವ ವಸಂತದ ವೇಳೆಗೆ ತುರ್ಕಿಯು ಮಿತ್ರ ಪಕ್ಷಕ್ಕೆ ಸೇರಿ ಯುದ್ಧಕ್ಕಿಳಿಯುವುದೆಂದು ಊಹಾಪೋಹಗಳೆದ್ದಿವೆ. ತುರ್ಕಿ ಜನರಲ್ ಚಕ್‌ಮಾಕ್ ನಿವೃತ್ತರಾದುದರಿಂದ ಅವರ ಸ್ಥಾನಕ್ಕೆ ಜನರಲ್ ಓರ್‌ಬೆಯು ನೇಮಿಸಲ್ಪಟ್ಟರು. ತುರ್ಕಿಯು ಯುದ್ಧಕ್ಕೆ ಸೇರಬಾರದೆಂದು ಹೇಳುತ್ತಿದ್ದ ಚಕ್‌ಮಾಕ್‌ರು ಹೋಗಿ ಅಲ್ಲಿಗೆ ಜನರಲ್ ಓರ್‌ಬೆ ಬಂದುದೇ ಈ ಊಹೆಗಳಿಗೆ ಕಾರಣವಾಗಿದೆ.

ಕ್ಯಾಸಿನೋ ಮುತ್ತಿಗೆ

ರೋಂ ಬಾರ್ಗದಲ್ಲಿ [illegible] ದಿಂದ ನುಗ್ಗಿ ಬಂದ ಅಮೇರಿಕ [illegible] ಈಗ ಕ್ಯಾಸಿನೋ ಕೋಟೆಯ ದೂರ [illegible] ಮುತ್ತಿರುವರು. ಈ ಪ್ರದೇಶದಲ್ಲಿ [illegible] ಯುದ್ಧ ಜರುಗುತ್ತಿದೆ.

ಮೊಂಗ್ಡಾದಿಂದ ಮುಂದಕ್ಕೆ

ಬ್ರಿಟಿಷರು ಮೊಂಗ್ಡಾದಿಂದ ೧ ಮೈಲಿ ದೂರದಲ್ಲಿರುವ ಒಂದು ಗ್ರಾಮವನ್ನು ಹಿಡಿದಿರುವರು. ಜಪಾನೀಯರು ಮಾಯು ಗುಡ್ಡಗಳ ತಪ್ಪಲಿನಲ್ಲಿ ಪ್ರತಿ ಧಾಳಿ ನಡೆಸುತ್ತಿದ್ದಾರೆ.

ಬೋರ್ನಿಯೊ ಸೆಲಿಬಿಸ್ ಮೇಲೆ ಧಾಳಿ

ಮಿತ್ರ ವೈಮಾನಿಕರು ೨೦೦೦ ಮೈಲಿಗಳಷ್ಟು ದೂರ ಒಂದೇ ದಿನ ಪ್ರಯಾಣ ಮಾಡಿ ಸೆಲಿಬೆಸ್ಸಿನ ನೌಕಾ ನೆಲೆ [illegible], ಬೋರ್ನಿಯೋ ಎಣ್ಣೆ ಬಾವಿಗಳ ಕ್ಷೇತ್ರವಾದ ಬಾಲಿಕ್ ಪಪಾನಗಳ ಮೇಲೆ ಯಶಸ್ವಿಯಾಗಿ ಧಾಳಿ ನಡೆಸಿ ಬಂದಿದ್ದಾರೆ.

ಮುಖ್ಯ ಜಪಾನ್ ಕೋಟೆ ಗೆದ್ದರು

ನ್ಯೂಗಿನಿಯ ಹೂನ್ [illegible] ದಲ್ಲಿ ನುಗ್ಗುತ್ತಿರುವ ಆಸ್ಟ್ರೇಲಿಯಾ ಸೇನೆ ಈಗಲೆ ಒಂದು ಅತಿ ಪ್ರಾಮುಖ್ಯವಾದ ಜಪಾನರ ಕೋಟೆಯನ್ನು ಗೆದ್ದಿರುವುದಾಗಿ ವಾರ್ತೆ ಬಂದಿದೆ.

ಜರ್ಮನ್ ಪ್ರಧಾನ ನೆಲೆಗಳ ನಾಶ

[illegible] ದಲ್ಲಿನ ಜರ್ಮನರ ಪ್ರಧಾನ ನೆಲೆಗಳಲ್ಲಿ ರಾದವೋಜಿಲ್ ಮತ್ತು ಕೊಲೆಂಕೊವಿಚ್ ನಗರಗಳು [illegible] ನಾಶವಾಗಿರುವುವು. ರಷ್ಯನರು ವಿಶೇಷ [illegible] ತೋರಿಸುತ್ತಿರುವರು.

ಸೋಫಿಯಾದಲ್ಲಿದ್ದ ಸಚಿವರು ಬಾಂಬಿಗೆ ತುತ್ತು

ಬಲ್ಗೇರಿಯಾದ [illegible] ಮಂತ್ರಿಗಳ ಕಛೇರಿ [illegible] ಧಾಳಿ [illegible] ಸಿಕ್ಕಿ ಸತ್ತಿದ್ದಾರೆಂದು ಹೇಳಲಾಗಿದೆ.

ರಾಂಜಿ ಟ್ರೋಫಿ

[illegible] ರಾಂಜಿ ಟ್ರೋಫಿ ಕ್ರಿಕೆಟ್ ಮ್ಯಾಚ್‌ನಲ್ಲಿ ನೆನ್ನೆ [illegible] ಬೊಂಬಾಯಿ [illegible] ರನ್ನುಗಳನ್ನು [illegible] ದ್ದರು.

ಪೋಲೀಸರು ಜನರ ಮೇಲೆ ಗುಂಡು ಹಾರಿಸಿದರು

ಕಾನಪುರದ [illegible] ಎಂಬ ಹಳ್ಳಿಯಲ್ಲಿ ಜೂಜಾಟಕ್ಕೆ [illegible] ನಡೆಯುತ್ತಿದ್ದವರನ್ನು ಹಿಡಿಯಲು [illegible] ಪೋಲೀಸ್ ಸಬ್ ಇನ್ಸ್‌ಪೆಕ್ಟರು ಕೆಲವು ಕಾನ್ಸ್‌ಟೇಬಲ್‌ಗಳ ಜೊತೆಯಲ್ಲಿ ಅಲ್ಲಿಗೆ ನೆನ್ನೆ ರಾತ್ರಿ ಹೋದಾಗ ಜೂಜುಕೋರರೂ, ಗ್ರಾಮಸ್ಥರೂ [illegible] ಪೋಲೀಸರ ಮೇಲೆ ಬಿದ್ದರು. ಆಗ ಆತ್ಮ ರಕ್ಷಣೆಗಾಗಿ ಪೋಲೀಸರು, ಜನರ ಮೇಲೆ ಗುಂಡು ಹಾರಿಸಿದರೆಂದೂ, ಒಬ್ಬನು ಸತ್ತನೆಂದೂ, [illegible] ಗಾಯಗಳಾದುವೆಂದೂ ವಾರ್ತೆ ಬಂದಿದೆ.

ಬಡ ಸ್ತ್ರೀಯರು-ವ್ಯಭಿಚಾರದ ವೃತ್ತಿ

[illegible] ಕ್ಷಾಮಕ್ಕೆ ಸಿಲುಕಿದ ಸ್ತ್ರೀಯರು ವ್ಯಭಿಚಾರದ ವೃತ್ತಿಯನ್ನು ಹಿಡಿಯುವಂತೆ [illegible] ಪ್ರತಿನಿಧಿಗಳನ್ನೊಳಗೊಂಡ ಸಮಿತಿಗಳನ್ನು ನೇಮಿಸಿರುವುದಲ್ಲದೆ ಅಂಥ ಸ್ತ್ರೀಯರಿಗೆ [illegible] ಅವರನ್ನು ಕಾಯಲು ಆಶ್ರಮಗಳನ್ನು ಏರ್ಪಡಿಸುವರೆಂದು ಗೊತ್ತಾಗಿದೆ.

ಬಿಡುಗಡೆ; ಕೂಡಲೆ ಬಂಧನ

ನಾಗಪುರದ ಡಾ॥ [illegible] ಮತ್ತು ಶ್ರೀ [illegible] ಎಂಬ ಇಬ್ಬರು ಕಾಂಗ್ರೆಸ್ ನಾಯಕರು [illegible] ಬಿಡುಗಡೆಯಾಗಿ ಹೊರಗೆ ಬರುತ್ತಿದ್ದಂತೆ [illegible] ಪ್ರಕಾರ [illegible] ಬಂಧಿಸಲಾಗಿದೆ ಎಂದು ಸಮಾಚಾರ.

ಈಜಿಪ್ಟಿಗೆ ಸಂಪೂರ್ಣ ಸ್ವಾತಂತ್ರ್ಯ ಬೇಕು

[illegible]

ರುವರು.

ಚಿತ್ರಾಲಯಗಳ ಬುಟ್ಟಿಯಲ್ಲಿ ಬಾಂಬು

ಸ್ವೀಡನ್ನಿನ [illegible] ಚಿತ್ರಾಲಯಗಳನ್ನು ತರುತ್ತಿರುವ ಹಲವು ಹಡಗುಗಳಲ್ಲಿ [illegible] ಸಿಡಿಯುವ ಗುಂಡುಗಳಿದ್ದುದು ಈಗ ಪತ್ತೆಯಾಗಿದೆ. [illegible] ಜರ್ಮನಿಯ ನಾಜಿಗಳು [illegible] ಎಂದು ಬ್ರಿಟಿಷ್ [illegible] ಕೆಲವು ದಿನಗಳ ಕೆಳಗೆ ಇಂತಹ ಒಂದು [illegible] ಸ್ಫೋಟವಾಗಿ [illegible] ಹಡಗುಗಳಲ್ಲಿ [illegible] ಬಾಂಬುಗಳನ್ನು [illegible] ಆಗುತ್ತಿದೆ.

ಜಪಾನಿನಲ್ಲಿ ಭೀಕರ ತೆರಿಗೆ ಹೊರೆ

ಜಪಾನಿನಲ್ಲಿ ಸರ್ಕಾರದ ಆರ್ಥಿಕ ಪರಿಸ್ಥಿತಿ [illegible] ಹೊಸ ತೆರಿಗೆಗಳನ್ನು [illegible] ಜನರ [illegible] ಜಪಾನೀಯರು [illegible] ತೆರಿಗೆಗಳನ್ನು [illegible].

ಲಂಡನ್ ಮೇಲೆ ಅನಿರೀಕ್ಷಿತ ಧಾಳಿ

ನೆನ್ನೆ ರಾತ್ರಿ [illegible] ಒಂದು ಲಂಡನ್ ಮೇಲೆ [illegible] ಬಾಂಬುಗಳನ್ನು ಕೆಡವಿದೆ. [illegible] ಧಾಳಿ [illegible] ಗಾಯಗೊಂಡವು [illegible] ಧಾಳಿ [illegible] ಆಗಲಿಲ್ಲ.

ತಿರುವಾಂಕೂರು ದಿವಾನರು

[illegible]

ಹಾಗೆ ಎನ್ನುವರು.

ಯೂನಿಯನ್ ವಾರ್ಷಿಕೋತ್ಸವ

ಸ್ವಂ. ವ] ಮೈಸೂರು ೧೬

ನಿನ್ನೆ ಸಂಜೆ ಮಹಾರಾಜಾ ಕಾಲೇಜು ಆವರಣದಲ್ಲಿ ವಿಶ್ವವಿದ್ಯಾನಿಲಯ ಸಂಘದ ವಾರ್ಷಿಕೋತ್ಸವವು ಅತ್ಯಂತ ವೈಭವದಿಂದ ಜರುಗಿತು. ಡೈ॥ ಆ॥ ಎಸ್ ಶ್ರೀನಿವಾಸಶಾಸ್ತ್ರಿಗಳು ಯುದ್ಧಾನಂತರದ ಪುನರ್ರಚನೆ ಎಂಬ ವಿಷಯವಾಗಿ ಭಾಷಣಮಾಡಿದರು. ಫ್ಯಾನ್ಸಿಡ್ರೆಸ್ ಸ್ಪರ್ಧೆ ನಡೆಯಿತು. ಕಾರ್ಯದರ್ಶಿಗಳು ಸಂಘದ ವಾರ್ಷಿಕ ವರದಿಯನ್ನು ಓದಿದರು. ಕೊನೆಯಲ್ಲಿ ಶ್ರೀ [illegible] ಟಿ. ಪಿ. ಕೈಲಾಸಂರವರಿಂದ ರಚಿತವಾದ 'ಪರ್ಪಸ್' ಎಂಬ ಇಂಗ್ಲಿಷ್ ನಾಟಕವನ್ನೂ, 'ಬಂದ್ಮಾಕವಿಲ್ಲದ ಒಡಾಯಿ' ಎಂಬ ಕನ್ನಡ ನಾಟಕವನ್ನೂ ಕಾಲೇಜ್ ವಿದ್ಯಾರ್ಥಿಗಳು ಆಡಿದರು. ಈ ಎರಡು ನಾಟಕಗಳೂ ಕರ್ತೃವಿನ ಅದ್ಭುತ ಪ್ರತಿಭೆಯನ್ನು ಹೊರಗೆಡವಿದವು. ನಾಟಕ ಕರ್ತೃ ಕೈಲಾಸಂರವರಿಗೆ ಪುಷ್ಪಹಾರ ಅರ್ಪಿಸಿದ ನಂತರ ಸಭೆ ಮುಕ್ತಾಯಗೊಂಡಿತು.

ಶಾಲಾ ದಿನೋತ್ಸವ

೨೨ ಮತ್ತು ೨೩ ತಾ॥ ಗಳಲ್ಲಿ ಶಾರದಾವಿಲಾಸ ಹೈಸ್ಕೂಲ್ ಶಾಲೆಯ ದಿನವನ್ನು ಆಚರಿಸಬೇಕೆಂದು ನಿರ್ಧರಿಸಿರುವರು. ಶಾಲೆಯ ಹಿರಿಯ ತರುಣರೆಲ್ಲರೂ ಅಗತ್ಯವಾಗಿ ದಯಮಾಡಿ ಆ ದಿನದ ಕಾರ್ಯಕಲಾಪಗಳಲ್ಲಿ ಭಾಗವಹಿಸಬೇಕೆಂದೂ ತಮ್ಮ ಬಹಿರಂಗ ಸಹಾಯವನ್ನು ಕಳುಹಿಸಿಕೊಡಬೇಕೆಂದೂ ಮತ್ತು ವಂದಾ ಹಣವನ್ನು ಶ್ರೀ ಎಸ್. ರಾಜಗೋಪಾಲಯ್ಯಂಗಾರ್, ಶಾರದಾವಿಲಾಸ ಹೈಸ್ಕೂಲ್ ಇವರಿಗಾಗಲೀ, ಮೈಸೂರು ಗ್ರಾಜುಯೇಟ್ಸ್ ಕೋ-ಆಪರೇಟಿವ್ ಸೊಸೈಟಿಯಲ್ಲಿರುವ ಹಿರಿಯ ತರುಣರ ಸಂಘದ ಡಿಪಾಜಿಟ್ ಲೆಕ್ಕಕ್ಕಾಗಲಿ ಕಳುಹಿಸಿಕೊಡಬೇಕೆಂದು ಕಾರ್ಯದರ್ಶಿಗಳು ಕೋರಿದ್ದಾರೆ.

ಫುಟ್‌ಬಾಲ್ ಮ್ಯಾಚ್

ತಿರುಮಾಮೇಟ್ [illegible] ಗೂ ಮತ್ತು ಮಂಡಿ [illegible] ಗೂ ಜೀವನರಾಯನಕಟ್ಟೆ ಮೈದಾನದಲ್ಲಿ ೧೬ ನೇ ತಾ॥ ಮ್ಯಾಚ್ ನಡೆದು ಡ್ರಾ ಆಯಿತು. ಎರಡು ಕಡೆಯವರ ಆಟವೂ ಬಹಳ ಆಕರ್ಷಕವಾಗಿತ್ತು. ಡ್ರಾ ಮ್ಯಾಚ್ ಮುಂದಕ್ಕೆ ನಡೆಯುತ್ತದೆ.

ಚರ್ಚಾ ಸ್ಪರ್ಧೆ

ಈ ದಿನ ಮಧ್ಯಾಹ್ನ ಟೌನ್ ಹಾಲಿನಲ್ಲಿ ಭಾ-ರತೀ ಸಂಘದ ಆಶ್ರಯದಲ್ಲಿ ಶ್ರೀ ರಾಮಕೃಷ್ಣ ಸ್ಮಾರಕ ಚರ್ಚಾ ಕೂಟ ನಡೆಯಿತು. [illegible] ಬಸವರಾಜ ಅರಸ್‌ರವರು ಅಧ್ಯಕ್ಷರಾಗಿದ್ದರು.

"ಭಾರತವಂತಹ ವಿಸ್ತಾರವಾದ ದೇಶಕ್ಕೆ ಯಾವ ವಿಷಯದಲ್ಲೂ ಏಕಮುಖ್ಯ ಸಾಧ್ಯವಿಲ್ಲ" ಎಂಬುದೇ ಚರ್ಚೆಯ ವಿಷಯ. ಹೆಚ್ಚು ಅಂಕಗಳನ್ನು ತೆಗೆದ ಶ್ರೀ ಎ. ರಾಮರಾವ್, ಮತ್ತು ಶ್ರೀಮತಿ ರಾಧಾದೇವಿಯವರಿಗೆ ಪ್ರಥಮ ಬಹುಮಾನ ಸಿಕ್ಕಿತು. ಕಾಲೇಜುಗಳಿಗೆಲ್ಲ [illegible] ಶ್ರೀ ಹೆಚ್. ಕೆ. ಸ್ವಾಮಿ ಮತ್ತು [illegible], ಹೈಸ್ಕೂಲುಗಳಿಗೆ [illegible] ಬಹುಮಾನ [illegible] ಮತ್ತು [illegible] ಒಂದು ಕಪ್ ಮತ್ತು [illegible] ಶ್ರೀಗಳಾದ [illegible], [illegible], ಕೆ. ಎಸ್. [illegible] ಅವರುಗಳಿಗೆ ಕೊಡಲ್ಪಟ್ಟವು.

ಅಧ್ಯಕ್ಷರ ಆಯ್ಕೆ ಮುಂದೆ ಹೋಗಲಿ

ಸ್ವಂ. ವ.] ಬೆಂಗಳೂರು ೧೫

ಬೆಂಗಳೂರು ಪೌರಸಭೆಗೆ ನಡೆಯಲಿರುವ ಅಧ್ಯಕ್ಷ ಚುನಾವಣೆಯನ್ನು ಮುಂದಕ್ಕೆ ತಳ್ಳಬೇಕೆಂದು ಶ್ರೀ ಸಿ. ಕೃಷ್ಣರಾಯರು ಸರ್ಕಾರದ ನ್ಯಾಯ ಇಲಾಖೆಯ ಕಾರ್ಯದರ್ಶಿಗಳಿಗೆ ಅರ್ಜಿ ಹಾಕಿಕೊಂಡಿದ್ದಾರೆಂದು ತಿಳಿದುಬಂದಿದೆ.

ತಿವಾರಿಯವರು ಸಚಿವರನ್ನು ಕಂಡರು

ನಿನ್ನೆ ಬೆಂಗಳೂರು ಪೌರಸಭಾ ಸದಸ್ಯರಾದ ಶ್ರೀ ರಾಮಲಾಲ್ ತಿವಾರಿಯವರು ತಮಗೆ ಬಂದಿದ್ದ ಪೋಲೀಸ್ ನೋಟೀಸಿನ ಸಂಬಂಧವಾಗಿ ಸ್ಥಳೀಯ ಸಂಸ್ಥೆ ಸಚಿವರ ಭೇಟಿ ತೆಗೆದುಕೊಂಡರು. ಅವರೊಡನೆ ಅವರ ವಕೀಲರಾದ ಶ್ರೀ ಟಿ. ಸಿ. ವೀರಪ್ಪನವರೂ ಇದ್ದರು.

ತುಂಗ ಅಣೆಕಟ್ಟೆ ನಿರ್ಮಾಣ ಪ್ರಯತ್ನ

ಬರುವ ವಾರ ಮದರಾಸು ಗೌರ್ನರ್ ಅಡ್ವೈಸರ್ ಶ್ರೀ ಎಸ್. ವಿ. ರಾಮಮೂರ್ತಿಯವರು ಬೆಂಗಳೂರಿಗೆ ದಯಮಾಡಿಸಿ ತುಂಗಾ ಅಣೆಕಟ್ಟಿನ ವಿಚಾರವಾಗಿ ಮೈಸೂರು ಸರ್ಕಾರದವರೊಡನೆ ಮಾತುಕತೆ ನಡೆಸುವರೆಂದು ಗೊತ್ತಾಗಿದೆ.

ವಕೀಲ ಸಂಘದ ಸಭೆ

ಬೆಂಗಳೂರಿನ ವಕೀಲ ಸಂಘದವರು ೨೬ ನೇ ತಾ|| ಸಭೆ ಸೇರಿ ಬೆಂಗಳೂರಿನಲ್ಲಿ ವಕೀಲ ಸಮ್ಮೇಳನ ಸೇರಿಸುವ ವಿಚಾರವಾಗಿಯೂ ಮತ್ತು ವಾರ್ಷಿಕ ಚುನಾವಣೆ ನಡೆಸುವ ವಿಚಾರವಾಗಿಯೂ ಸಮಾಲೋಚಿಸುವವರಾಗಿದ್ದಾರೆ.

ಬ್ಯಾಲೆಟ್ ಪೆಟ್ಟಿಗೆ ಬರಲು ತಡ

ಕಿಲ್ಲಾಪೇಟೆಯಲ್ಲಿ ನಡೆದ ಚುನಾವಣೆ ವಿಷಯವಾಗಿ ತಕರಾರು ಹೂಡಲಾಗಿ ಬೆಂಗಳೂರು ಕೋರ್ಟಿನವರು ಬ್ಯಾಲೆಟ್ ಪೆಟ್ಟಿಗೆಗಳನ್ನು ತರಿಸಲೇರ್ಪಾಡುಮಾಡಿ ಅದಕ್ಕಾಗಿ ಜನ ಕಳುಹಿಸಿದ್ದರು. ಆದಾಗ್ಯೂ ಇನ್ನೂ ಬ್ಯಾಲೆಟ್ ಪೆಟ್ಟಿಗೆಗಳು ಬಂದಿಲ್ಲವೆಂದು ಗೊತ್ತಾಗಿದೆ.

ಕಾಮರ್ಸ್ ಶಾಖೆ ಮೈಸೂರಿಗೆ

ಇದುವರೆಗೆ ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿದ್ದ ಕಾಮರ್ಸ್ ಶಾಖೆಯನ್ನು ಮೈಸೂರಿಗೆ ವರ್ಗಾಯಿಸಿರುವುದಾಗಿ ತಿಳಿದುಬಂದಿದೆ.

ತುಮಕೂರು ನಗರಪತಿ ಪಟ್ಟಕ್ಕೆ ಸ್ಪರ್ಧೆ

ತುಮಕೂರು ಪೌರಸಭಾಧ್ಯಕ್ಷರ ಚುನಾವಣೆ ೨೧ ನೇ ತಾ|| ನಡೆಯುವುದು. ಶ್ರೀಗಳಾದ ಟಿ. ಎಸ್. ಕೇಶವಯ್ಯಂಗಾರ್, ಎಚ್. ಸೂರ್ಯನಾರಾಯಣರಾವ್, ಬಿ. ಮಲ್ಲಪ್ಪನವರೂ ಕಾಂಗ್ರೆಸ್ ಪರವಾಗಿ ಶ್ರೀ ಎಂ. ವಿ. ರಾಮರಾಯರೂ ಅಧ್ಯಕ್ಷಸ್ಥಾನಕ್ಕೆ ಸ್ಪರ್ಧಿಸಿದ್ದಾರೆ.

ಭಾರತ ರಕ್ಷಣಾ ವೆಚ್ಚ

ಕಳೆದ ೫ ವರ್ಷಗಳಲ್ಲಿ ೧೪೬೧ ಕೋಟಿ ರೂಪಾಯಿಗಳು ಭಾರತದ ರಕ್ಷಣಾ ಸರಬರಾಜಿಗಾಗಿ ವೆಚ್ಚವಾಗಿದೆ. ಅದರಲ್ಲಿ ೭೧೮ ಕೋಟಿ ರೂಪಾಯಿಗಳನ್ನು ಭಾರತ ಸರ್ಕಾರ ವಹಿಸಿಕೊಂಡಿದೆ. ಉಳಿದುದು ಸಮ್ರಾಟ್ ಸರ್ಕಾರದವರ ಪಾಲಿಗೆ ಬಿದ್ದಿದೆ. ಸಮ್ರಾಟ್ ಸರ್ಕಾರದವರು ಇನ್ನೂ ೬೦೦ ಕೋಟಿ ಹೆಚ್ಚಾಗಿ ವೆಚ್ಚಮಾಡುವರು.

ವಿಶಾಖ ಪಟ್ಟಣಕ್ಕೆ ಶತ್ರು ಹೊಡೆತ

ಶತ್ರುವಿಮಾನವೊಂದು ೧೨ ನೇ ತಾ|| ರಾತ್ರಿ ವಿಶಾಖಪಟ್ಟಣದ ಮೇಲೆ ಹಾರಾಡಿ ಕೆಲವು ಬಾಂಬುಗಳನ್ನು ಎಸೆಯಿತು. ತತ್ಫಲವಾಗಿ ಯಾವ ರೀತಿಯ ನಷ್ಟವೂ ಸಂಭವಿಸಿಲ್ಲವೆಂದು ದೆಹಲಿ ಪ್ರಕಟಣೆ ತಿಳಿಸುತ್ತದೆ.

ಇನ್ಲೇಟ್ ಕಾರ್ಡ್ ಹತೋಟಿ

ಸಿಗರೇಟುಗಳ ಮತ್ತು ಇನ್ಲೇಟು ಕಾರ್ಡುಗಳ ಮೇಲೆ ಹತೋಟಿ ಇಟ್ಟುಕೊಳ್ಳುವ ಸಲುವಾಗಿ ಭಾರತ ಸರ್ಕಾರವು ಎರಡು ಆಜ್ಞೆಗಳನ್ನು ಹೊರಡಿಸಿದೆ.

'ಪ್ರಳಯದಿಂದ ಪಾರಾಗಲು ಯುದ್ಧ'

"ನಾವು ರಷ್ಯಾ ಪ್ರದೇಶಗಳನ್ನು ಕಿತ್ತುಕೊಳ್ಳಲು ಯುದ್ಧಮಾಡುತ್ತಿಲ್ಲ, ನಮ್ಮ ಪ್ರಾಣ ಉಳಿಸಿಕೊಳ್ಳಲು ಹೋರಾಡುತ್ತಿದ್ದೇವೆ. ಪ್ರಳಯದಿಂದ ಪಾರಾಗಲು ಯುದ್ಧಮಾಡುತ್ತಿದ್ದೇವೆ" ಎಂದು ಬರ್ಲಿನ್ ರೇಡಿಯೊ ಬಾತ್ಮಿದಾರರು ಹೇಳಿರುವರು.

ರಾಜಬಂದಿಗಳಿಗೆ ರಿಯಾಯಿತಿ

ಬ್ರಿಟನ್ನಿನಲ್ಲಿ ರಾಜಬಂದಿಗಳಿಗೆ ಕೊಡಲಾಗುತ್ತಿರುವಷ್ಟೇ ಸೌಕರ್ಯಗಳನ್ನು ಭಾರತದಲ್ಲೂ ರಾಜಬಂದಿಗಳಿಗೆ ಕೊಡುವ ವಿಚಾರವಾಗಿ ಭಾರತ ಸರ್ಕಾರ ಒಂದು ಆಜ್ಞೆ ಹೊರಡಿಸಿದೆ. ಅದರಂತೆ ಮುಂದಿನ ೬ ತಿಂಗಳಲ್ಲಿ ಈ ಬಂದಿಗಳ ಬಂಧನಕ್ಕೆ ಸಂಬಂಧಪಟ್ಟ ವಿಚಾರಗಳನ್ನೆಲ್ಲಾ ಪುನರ್ವಿಮರ್ಶಿಸಬೇಕಾಗಿದೆ.

ವಿಜಯಲಕ್ಷ್ಮಿ ಪಂಡಿತರಿಗೆ ಪತಿ ವಿಯೋಗ

ಕಳೆದ ೩ ತಿಂಗಳಿಂದಲೂ ಕಾಹಿಲೆಯಿಂದ ನರಳುತ್ತಿದ್ದ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರ ಪತಿಯವರಾದ ಶ್ರೀ ಆರ್. ಎಸ್. ಪಂಡಿತರು ೧೪ ನೇ ತಾ|| ಬೆಳಗ್ಗೆ ಲಕ್ನೋ ನಗರದಲ್ಲಿ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅಂತ್ಯಕ್ರಿಯೆಗಾಗಿ ದಿವಂಗತರ ಶವವನ್ನು ಅಲಹಾಬಾದಿಗೆ ಸಾಗಿಸಲಾಗಿದೆ.

ಆಜ್ಞೆ ವಾಪಸು

ರಾಜಬಂದಿಗಳ ವಿಚಾರವಾಗಿ ಯಾವ ಸುದ್ದಿಯನ್ನೂ ಪ್ರಕಟಿಸಕೂಡದೆಂಬುದಾಗಿ ಬೊಂಬಾಯಿ ಸರ್ಕಾರದವರು ಒಂದು ಆಜ್ಞೆ ಹೊರಡಿಸಿದ್ದರು. ಈಗ ಆ ಆಜ್ಞೆಯನ್ನು ಹಿಂದಕ್ಕೆ ತೆಗೆದುಕೊಂಡಿರುವುದಾಗಿ ತಿಳಿದುಬಂದಿದೆ.

ಧಾನ್ಯ ಶೇಖರಣೆಗೆ ವಿರುದ್ಧ ಶಾಸನ

ಬಂಗಾಳ ಸರ್ಕಾರದವರು ಕಲ್ಕತ್ತಾ ಕ್ಷೇತ್ರದಲ್ಲಿ ಧಾನ್ಯ ಶೇಖರಣೆಗೆ ವಿರುದ್ಧವಾಗಿರುವ ಶಾಸನ ಒಂದನ್ನು ಜಾರಿಗೆ ತಂದಿರುತ್ತಾರೆ.

ಸುಪ್ರೀಂ ಕೋರ್ಟ್ ಸ್ಥಾಪನೆಯಾಗಬೇಕು

ಮೊನ್ನೆ ಲಾಹೋರಿನಲ್ಲಿ ಅಲ್ಲಿನ ವಕೀಲ ಸಂಘದವರು ಸರ್ ಪ್ಯಾಟ್ರಿಕ್ ಸ್ಪೆನ್ಸ್‌ರವರಿಗೆ ಬಿನ್ನವತ್ತಳೆಯನ್ನು ಅರ್ಪಿಸಿ ಭಾರತದಲ್ಲಿ ಸುಪ್ರೀಂ ಕೋರ್ಟನ್ನು ಸ್ಥಾಪಿಸಬೇಕೆಂದು ಕೇಳಿಕೊಂಡರು.

ಶತ್ರು ಆಕ್ರಮಿತ ಸ್ಥಳದಿಂದ ಬರುವವರ ಬಂಧನ

ಶತ್ರು ಆಕ್ರಮಿತ ರಾಷ್ಟ್ರಗಳಿಂದ ಬರುವ ಗುಮಾನಿ ಜನರನ್ನು ಬಂಧಿಸುವ ಬಗ್ಗೆ ಭಾರತ ಸರ್ಕಾರ ಒಂದು ಶಾಸನ ಮಾಡಿದೆ. ಮಿಲಿಟರಿ ಹಿತರಕ್ಷಣೆ ದೃಷ್ಟಿಯಿಂದ ಹಾಗೆ ಮಾಡಲಾಗುವುದೆಂದು ಆ ಶಾಸನದಲ್ಲಿ ನಿರೂಪಿತವಾಗಿದೆ.

ಸೋಫಿಯಾ ಬಿಟ್ಟರು

ಬಲ್ಗೇರಿಯಾ ದೇಶದ ರಾಜಧಾನಿ ಸೋಫಿಯಾ ನಗರವನ್ನು ಸಂಪೂರ್ಣವಾಗಿ ಖಾಲಿಮಾಡಿರುವುದಾಗಿ ಜರ್ಮನರು ಈಗ ಬಿಚ್ಚಿ ತಿಳಿಸಿದ್ದಾರೆ. ಅಲ್ಲಿನ ಶಾಲಾ ಕಾಲೇಜುಗಳು ಮುಚ್ಚಲ್ಪಟ್ಟವು. ಶತ್ರು ವಿಮಾನ ಧಾಳಿ ಸೂಚನೆಗಾಗಿ ಅಲ್ಲಿನ ಚರ್ಚುಗಳ ಗಂಟೆಯು ಮಾತ್ರ ಬಾರಿಸಲಾಗುವುದಂತೆ. ನಗರದ ವಿಮಾನ ಧಾಳಿ ಎಚ್ಚರಿಕೆ ಪಡೆ ವಜಾ ಆಗಿದೆ.

ಮಿತ್ರರಾಷ್ಟ್ರ ಜರ್ಮನಿ ಮೇಲೆ ಭೀಕರ ಧಾಳಿ

ಮೊನ್ನೆ ಮಿತ್ರರಾಷ್ಟ್ರ ರಾಯಲ್ ವಿಮಾನ ದಳದವರು ಜರ್ಮನಿಯ ಅನೇಕ ಪಟ್ಟಣಗಳ ಮೇಲೆ ಬಾಂಬಿನ ಮಳೆ ಕರೆದು ಬಂದರು. ತತ್ಫಲವಾಗಿ ಜರ್ಮನಿ, ಹಾಲೆಂಡ್, ಫ್ರಾನ್ಸ್ ಮುಂತಾದೆಡೆ ಅನೇಕ ಪ್ರಸಾರ ನಿಲಯಗಳಲ್ಲಿ ಕೆಲಸ ನಿಂತುಹೋಗಿತ್ತು. ಬರ್ಲಿನ್ ಮತ್ತು ಸ್ಟಾಕ್‌ಹೋಂ ತಂತಿ ಮತ್ತು ಟೆಲಿಫೋನ್ ವ್ಯವಹಾರಕ್ಕೂ ಅಡಚಣೆಯುಂಟಾಗಿತ್ತು.

ಸೈಯೊ ಬಳಿ ಆಸ್ಟ್ರೇಲಿಯನ್ ಸೈನ್ಯ

ಹಾನ್ ಪರ್ಯಾಯದ್ವೀಪದಲ್ಲಿರುವ ಮುಂದೆ ಸಾಗುತ್ತಿರುವ ಆಸ್ಟ್ರೇಲಿಯಾ ಸೈನಿಕರು ಸೈಯೊ ಎಂಬಲ್ಲಿಗೆ ಕೇವಲ ೪ ಮೈಲಿ ದೂರವನ್ನು ಸಮೀಪಿಸಿ ಅಲ್ಲಿನ ಪ್ರಮುಖ ಸ್ಥಾನ ಒಂದನ್ನು ಹಿಡಿದಿರುವರು. ಸೈಯೊ ಮೇಲೆ ಕೂಡ ಮಿತ್ರರ ಉಗ್ರ ಮುತ್ತಿಗೆ ನಡೆಯಿತು.

ಜಪಾನ್ ಹಡಗು ನಾಶ

ರಚ್‌ಲಿನೋರ್‌ನಲ್ಲಿ ಹೋಗುತ್ತಿದ್ದ ಜಪಾನಿಗೆ ಸೇರಿದ ಭಾರಿ ಹಡಗೊಂದನ್ನು ನಿನ್ನೆ ಮಿತ್ರರು ಭೀಕರವಾಗಿ ಧಾಳಿಮಾಡಿ ಮುಳುಗಿಸಿರುವರೆಂದು ವರ್ತಮಾನ ಬಂದಿದೆ.

ಚಳಿಗಾಲ

ಅತ್ಯುತ್ತಮವಾದ ರಗ್ಗುಗಳಿಗೂ, ವುಲ್ಲನ್ ಕೋಟಿಂಗ್, ಕಂಬಳಿ ವಸ್ತ್ರಗಳಿಗೂ ಎಲ್ಲೂ ಹುಡುಕಬೇಡಿ.

ನೇರವಾಗಿ ನಮ್ಮಲ್ಲಿಗೆ ಬನ್ನಿ. ಕಡಿಮೆ ಬೆಲೆಗೆ ಉತ್ತಮವಾದ ಮಾಲು ಹೊಂದುವಿರಿ.

ಜಿ. ವಿ. ಸೂರ್ಯನಾರಾಯಣ ಶೆಟ್ಟಿ ಅಂಡ್ ಸನ್ಸ್
ಜ್ಯೂಯಲರ್ಸ್ & ರೆಡಿಮೇಡ್ ಡ್ರೆಸ್ ಎಂಪೋರಿಯಂ,
ಸಯ್ಯಾಜಿರಾವ್ ರೋಡ್, ಮೈಸೂರು.

Edited, printed and published by A. R. Nagarajan, at the Sadhvi Press, D. Subbiah Road, Mysore.

ಸ್ತ್ರೀಯರ ಸೌಕರ್ಯಕ್ಕಾಗಿ

[illegible] ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಲಾಗಿದೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿಪುಡಿ

ಯನ್ನೇ ಉಪಯೋಗಿಸಿ.

ಡಿ. ಪುಟ್ಟಯ್ಯ ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ನಮ್ಮ ಸಂತೆಪೇಟೆ ಹೆಡ್ ಆಫೀಸಿನಲ್ಲೂ ರವೆ, ಗೋಧಿಹಿಟ್ಟು ಮತ್ತು ಮೈದಾಹಿಟ್ಟು ಸಹ ದೊರೆಯುತ್ತೆ. ಅಲ್ಲದೆ ಬೂರಾ ಮತ್ತು ಕಲ್ಲು ಸಕ್ಕರೆ ರೇಷನ್ ಕಾರ್ಡುಗಳಿಗೆ ದೊರೆಯುತ್ತವೆ.

ಸರ್ವದಾ ಕೊಳ್ಳಿರಿ!

Truthful READY MADE CLOTHES MADURA

ಏನನ್ನು?

ನವೀನ ಮಾದರಿಯಲ್ಲಿ ತಯಾರಿಸಿದ ಸ್ವಚ್ಛವಾದ ರೆಡಿಮೇಡ್ ಬಟ್ಟೆಗಳನ್ನು

ಸ್ವಸ್ತಿಕ್ ಸ್ಟೋರ್ಸ್

ನಲ್ಲಿ ಕೊಳ್ಳಿರಿ.

ಎಲ್ಲ ವಿಧ ಅಳತೆಯ ಸ್ತ್ರೀಯರ ಮತ್ತು ಮಕ್ಕಳ ಉಡುಪು ತಯಾರಿಯಲ್ಲಿ ನುರಿತವರು.

ದಾಸಪ್ರಕಾಶ್ ಭವನ, ಮಾಡರ್ನ್ ಕೆಫೆ, ಮೈಸೂರು.

WEEKLY EDITION

ಸಂಪುಟ ೮]   ಸೋಮವಾರ ೧೭--೧--೪೬   [ಸಂಚಿಕೆ ೧೨

ಜರ್ಮನರ ವಿನಾಶಕ್ಕೆ ವ್ಯವಸ್ಥೆ ಏರ್ಪಟ್ಟಿದೆ

ವೈಸರಾಯರನ್ನು ಭೇಟಿಮಾಡಲು ಸಪ್ರೂರವರಿಗೆ ಆಹ್ವಾನ

ಸತಿ ರೂಸ್‌ವೆಲ್ಟರು ಭಾರತಕ್ಕೆ ಬರುವರೇ ?

ತಿರುವಾಂಕೂರು ಮಹಾ ರಾಜರವರ ಪ್ರವಾಸ

ಸ್ವಂ ಸು.]   ಮೈಸೂರು ೧೬

ತಿರುವಾಂಕೂರಿನ ಮಹಾರಾಜರವರು ೨೧ ನೇ ತಾ|| ಗುರುವಾರ ಮಧ್ಯಾಹ್ನ ೧೨ ಗಂಟೆಗೆ ರಾಜಧಾನಿಗೆ ಸ್ಪೆಷಲ್ ರೈಲಿನಲ್ಲಿ ಆಗಮಿಸುವರು. ಶ್ರೀಮನ್ಮಹಾರಾಜರವರು, ದಿವಾನರು ಮತ್ತು ಇತರ ಉನ್ನತಾಧಿಕಾರಿಗಳು ರೈಲ್ವೆ ಸ್ಟೇಷನ್ನಿನಲ್ಲಿ ಸ್ವಾಗತಿಸುವರು. ನಂತರ ವೆ ರವಣಿಗೆಯಲ್ಲಿ ಲಲಿತ ಮಹಲ್ ಭವನಕ್ಕೆ ಬಿಜಯಮಾಡುವರು.

೨೬ ನೇ ತಾ|| ವರೆಗೆ ರಾಜಧಾನಿಯಲ್ಲಿ ಇದ್ದು, ಬೃಂದಾವನ, ಶ್ರೀರಂಗಪಟ್ಟಣ ಮತ್ತು ಇತರ ಸ್ಥಳಗಳಿಗೆ ಭೇಟಿ ಕೊಡುವರು. ೨೬ ನೇ ತಾ|| ರಾತ್ರಿ ಹಾಸನಕ್ಕೆ ಪ್ರಯಾಣ ಮಾಡಿ ಬೇಲೂರು ಮತ್ತು ಹಳೇಬೀಡಿಗೆ ಭೇಟಿ ಇತ್ತು, ೨೮ ನೇ ತಾ|| ರಾತ್ರಿ ಭದ್ರಾವತಿಗೆ ಪ್ರಯಾಣ ಬೆಳೆಸುವರು. ೨೯ ನೇ ತಾ|| ಭದ್ರಾವತಿ ಕಾರ್ಖಾನೆಗೆ ಭೇಟಿ ಇತ್ತು, ನಂತರ ಜೋಗಿಗೆ ಪ್ರಯಾಣ ಬೆಳೆಸುವರು. ೩೧ ನೇ ತಾ|| ಬೆಂಗಳೂರಿಗೆ ಹಿಂತಿರುಗಿ, ೩೨ ನೇ ತಾ|| ಕೋಲಾರದ ಗಣಿಯನ್ನು ಪರಿಶೀಲಿಸಿ, ೩೮ ನೇ ತಾ|| ತಿರುವಾಂಕೂರಿಗೆ ಪ್ರಯಾಣ ಮಾಡುವರು.

ಸರಬರಾಜು ಸಚಿವರು

ಸರಬರಾಜು ಸಚಿವರಾದ ಶ್ರೀ ಎಂ. ಎ. ಶ್ರೀನಿವಾಸನ್‌ರವರು ಕೊಡಗಿನಿಂದ ನಿನ್ನೆ ಸಂಜೆ ರಾಜಧಾನಿಗೆ ಆಗಮಿಸಿ, ಈ ದಿನ ಮಧ್ಯಾಹ್ನ ಬೆಂಗಳೂರಿಗೆ ಪ್ರಯಾಣ ಮಾಡಿದರು. ಸಚಿವರು ಕೊಡಗಿನಲ್ಲಿ ಸಂಸ್ಥಾನಕ್ಕೆ ಅಕ್ಕಿ ಸರಬರಾಜು ವಿಚಾರದಲ್ಲಿ ಮಾತುಕತೆ ನಡೆಸಿದ ಫಲವಾಗಿ, ಅಲ್ಲಿಂದ ೧೦ ಸಾವಿರ ಪಲ್ಲ ಅಕ್ಕಿ ಸರಬರಾಜಾಗುವುದೆಂದು ಹೇಳಲಾಗಿದೆ.

ಸಿವಿಲ್ ಸಪ್ಲೈಸ್ ಡೈರೆಕ್ಟರು

ಸಿವಿಲ್ ಸಪ್ಲೈಸ್ ಡೈರೆಕ್ಟರಾದ ಶ್ರೀ ಟಿ ಎಸ್ ರಾಘವೇಂದ್ರರಾಯರು ಕೊಡಗಿನಿಂದ ನಿನ್ನೆ ಹಿಂತಿರುಗಿ ಈ ದಿನ ಬೆಳಗ್ಗೆ ಕೃಷ್ಣರಾಜನಗರಕ್ಕೆ ಭೇಟಿ ಕೊಟ್ಟು ಮಧ್ಯಾಹ್ನ ಬೆಂಗಳೂರಿಗೆ ಪ್ರಯಾಣಬೆಳೆಸಿದರು.

ಫುಟ್‌ಬಾಲ್

ನೆನ್ನೆ ಸಂಜೆ ದೊಡ್ಡಕೆರೆ ಮೈದಾನದಲ್ಲಿ ನಡೆದ ಗ್ರ್ಯಾಂಡ್ ಎಕ್ಸಿಬಿಷನ್ ಪಂದ್ಯದಲ್ಲಿ ಮೈಸೂರು ಸಿಟಿ ಇಲೆವೆನ್ನಿನವರು ಬೆಂಗಳೂರು ಕಂಟೋನ್ಮೆಂಟ್ ಪೋಲೀಸ್ ಕ್ಲಬ್ಬನ್ನು ೩ ಗೋಲುಗಳಿಂದ ಸೋಲಿಸಿದರು. ಮೈಸೂರಿನ ಪರವಾಗಿ ನಂಜುಂಡಯ್ಯನವರೂ, ಲಿಂಗಯ್ಯನವರೂ ತಲಾ ಒಂದೊಂದು ಗೋಲುಗಳನ್ನು ಹೊಡೆದರು.

ಮೊನ್ನೆ ಸಂಜೆ ಬೆಂಗಳೂರಿನಲ್ಲಿರುವ ರಾಯಲ್ ಏರ್ ಫೋರ್ಸ್ ಕ್ಲಬ್ಬಿಗೂ ಮೈಸೂರು ಸಿಟಿ ಇಲೆವೆನ್ನಿಗೂ, ನಡೆದ ಭಾರೀ ಎಕ್ಸಿಬಿಷನ್ ಪಂದ್ಯದಲ್ಲಿ ಸಿಟಿ ಇಲೆವೆನ್ನಿನವರು ೪-೧ ಗೋಲುಗಳಿಂದ ವಿಜಯಶಾಲಿಗಳಾದರು. ಮೈಸೂರಿನ ಪರವಾಗಿ ಶ್ರೀ ನಂಜುಂಡಯ್ಯನವರು ೩ ಗೋಲುಗಳನ್ನೂ ತಿಮ್ಮಯ್ಯನವರು ೧ ಗೋಲನ್ನೂ ಹೊಡೆದರು. ಸುಮಾರು ೪೦೦೦ ಮಂದಿ ಪ್ರೇಕ್ಷಕರು ನೆರೆದಿದ್ದರು. ಮೈಸೂರು ಇಲೆವೆನ್ನಿನ ಕ್ಯಾಪ್ಟನ್ನರಾದ ಶ್ರೀ ನಂಜುಂಡಯ್ಯನವರಿಗೆ ರಾ|| ವೆಂ ಏಜೆಂಟರು ಒಂದು ಬೆಳ್ಳಿ ಬಟ್ಟಲನ್ನು ಬಹುಮಾನಿಸಿದರು.

ಆಹಾರ ಸಮ್ಮೇಳನದ ಸ್ಥಾಯಿ ಸಮಿತಿ

ಮೇಲ್ಕಂಡ ಸಮಿತಿಯ ಸಭೆಯು ೧೬ ನೇ ತಾ|| ಗುರುವಾರ ಸಂಜೆ ೬-೩೦ ಗಂಟೆಗೆ ಕಾ|| ಕಛೇರಿಯಲ್ಲಿ ಸೇರಿತ್ತು. ಶ್ರೀ ಎಸ್. ರಂಗರಾಮಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಸದ್ಯದ ಆಹಾರ ಪರಿಸ್ಥಿತಿ ಮತ್ತು ಜಾರಿಯಲ್ಲಿರುವ ರೇಷನಿಂಗ್ ಪದ್ಧತಿಯಲ್ಲಿ ಲೋಪದೋಷಗಳ ವಿಚಾರವಾಗಿ ಸದಸ್ಯರುಗಳು ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದನಂತರ ಈ ಕೆಳಗೆ ಕಂಡ ರಿಸಲ್ಯೂಷನ್‌ಗಳು ಅಂಗೀಕರಿಸಲ್ಪಟ್ಟವು.

ಮೈಸೂರು ವಿದ್ಯಾರ್ಥಿ ಸಂಘದವರು ಈ ಸಮಿತಿಗೆ ಸಂಪೂರ್ಣ ಸಹಕಾರವನ್ನು ನೀಡುವುದಕ್ಕಾಗಿ ಸಮಿತಿಯು ವಂದನೆಗಳನ್ನು ಸಲ್ಲಿಸಲಾಯಿತು. ೧೯೪೫ ೧೨ ರಲ್ಲಿ ನಡೆದ ಆಹಾರ ಸಮ್ಮೇಳನದಲ್ಲಾದ ರಿಸಲ್ಯೂಷನ್‌ಗಳನ್ನು ಕಾರ್ಯರೂಪಕ್ಕೆ ತರದೇ ಇರುವುದು ದುರ್ಭಾಗ್ಯವೆಂದು ಸಮಿತಿಯು ತನ್ನ ಅಸಮಾಧಾನವನ್ನು ವ್ಯಕ್ತಪಡಿಸುತ್ತದೆ. ಅಲ್ಲದೆ ಈಗಲಾದರೂ ಆ ದಷ್ಟು ಜಾಗ್ರತೆ ಆ ರಿಸಲ್ಯೂಷನ್‌ಗಳಿಗೆ ಗಮನ ಕೊಡಬೇಕೆಂದು ಸಮಿತಿಯು ಆಶಿಸುತ್ತದೆ. ರಾಜಧಾನಿಯಲ್ಲಿ ಜಾರಿಯಲ್ಲಿರುವ ಪಡಿತರ ಪದ್ಧತಿಯ ಹಂಚಿಕೆ ವಿಚಾರದಲ್ಲಿ ಪುರ ನಿವಾಸಿಗಳಿಗೆ ಉಂಟಾಗುವ ಮತ್ತು ಕಂಡುಬರುವ ಕಷ್ಟನಿಷ್ಠುರಗಳನ್ನು ತಿಳಿದುಕೊಳ್ಳಲು ಅಧ್ಯಕ್ಷರು ಒಂದು ಪ್ರಕಟಣೆಯನ್ನು ಹೊರಡಿಸಬೇಕೆಂತಲೂ ತನ್ಮೂಲಕ ಬಂದ ಸಲಹೆಗಳನ್ನು ಮುಂದಿನ ಸಭೆಗೆ ಇಡತಕ್ಕದ್ದೆಂತಲೂ ತೀರ್ಮಾನಿಸಲಾಯಿತು.

ವಿದ್ಯಾರ್ಥಿನಿಯರಿಗೆ ದಂಡ ಬಿತ್ತು

ಮಾಂಟ್ಗೊಮರಿ ಜಿಲ್ಲೆ ವ್ಯಾಪಕ್ಷೆ ಟೆಕ್ ಕೋರ್ಟಿನ ಮುಂಭಾಗದಲ್ಲಿ ಅಲ್ಲಿನ ವಿದ್ಯಾರ್ಥಿಗಳು ಚಳವಳಿ ಹೂಡಿ ಪ್ರದರ್ಶನ ನಡೆಸಿದ ಕಾರಣಕ್ಕಾಗಿ ಹಲವರ ದಸ್ತಗಿರಿಯಾಗಿ ವಿಚಾರಣೆ ನಡೆಯಿತ್ತು. ಆ ಪೈಕಿ ಕೆಲವು ಕಾಂಗ್ರೆಸ್ ಮುಖಂಡರ ಬಿಡುಗಡೆಯಾಯಿತು. ಇವರ ಪೈಕಿ ವಿದ್ಯಾರ್ಥಿನಿಯರಿಗೆ ತಲಾ ೧೫೦ ರೂ. ದಂಡ ವಿಧಿಸಿ ದಂಡ ತೆರದಿದ್ದಲ್ಲಿ ೩ ತಿಂಗಳು ಸಾದಾ ಶಿಕ್ಷೆ ಅನುಭವಿಸತಕ್ಕದ್ದೆಂದು ಆಜ್ಞಾಪಿಸಲಾಗಿದೆ. ೮ ಜನ ವಿದ್ಯಾರ್ಥಿಗಳಿಗೆ ತಲಾ ೩ ತಿಂಗಳು ಕಠಿಣ ಸಜ ವಿಧಿಸಲಾಗಿದೆ.

ಜರ್ಮನರಿಗೆ ಹೊಸ ಗಂಡಾಂತರ

ಸ್ಯಾರ್ ಗಣಿಕ್ಷೇತ್ರದಲ್ಲಿ ಬಹು ಮುಖ್ಯ ಪ್ರದೇಶವಾದ ಪ್ರಷ್ಯದ ಸಂರಕ್ಷಣಾ ಸ್ಥಾನವಾದ ಮೊಸೆಲ್ ಪತನವಾಗಿರುವುದು ಜರ್ಮನರಿಗೆ ಅತಿ ಗಂಡಾಂತರ ಒದಗಿದೆಯೆಂದು ಹೇಳಲಾಗಿದೆ. ಈ ಪ್ರದೇಶದಿಂದ ಪಶ್ಚಿಮದ ಕಡೆಗೆ ಓಡುತ್ತಿರುವ ಜರ್ಮನ್ ಸೈನ್ಯವನ್ನು ಸುತ್ತುಗಟ್ಟಲಾಗಿದೆ. ಈ ಪ್ರದೇಶದಿಂದ ಜರ್ಮನರು ತಪ್ಪಿಸಿಕೊಂಡು ಹೋಗಲು ಅವಕಾಶವಿಲ್ಲದೆ ಅಲ್ಲೇ ಮಡಿಯಬೇಕಾಗಿದೆ. ಈ ಜರ್ಮನ್ ಪ್ರದೇಶವು ಬರ್ಲಿನ್ ನಗರಕ್ಕೆ ಅತಿ ಸಮೀಪವಾದ ರಸ್ತೆಯೆಂದು ಹೇಳಲಾಗಿದೆ. ಇದ್ದರಿಂದಲೇ ಜರ್ಮನರ ಸಂಪೂರ್ಣ ನಾಶಕ್ಕೆ ಇದು ಹಂಚಿಕೆಯೆಂದು ಹೇಳಲಾಗಿದೆ.

ನಾಜಿ ಯುದ್ಧಕೇಡಿಗಳ ಪಟ್ಟಿ

ರಷ್ಯನರು ಈಗಾಗಲೇ ನಾಜಿ ಯುದ್ಧಕೇಡಿಗಳ ಪಟ್ಟಿಯನ್ನು ತಯಾರಿಸುವರು. ಅದನ್ನು ಯುದ್ಧಾನಂತರ ಪ್ರಚಾರಪಡಿಸಲಾಗುವುದು. ಈ ಪಟ್ಟಿಯಲ್ಲಿ ೬೦ ಸಾವಿರ ಹೆಸರುಗಳಿಗಿಂತ ಹೆಚ್ಚಿದೆಯೆಂದು ಹೇಳಲಾಗಿದೆ.

ಸತಿ ರೂಸ್‌ವೆಲ್ಟರು ಭಾರತಕ್ಕೆ

ಅಮೇರಿಕಾ ಅಧ್ಯಕ್ಷ ರೂಸವೆಲ್ಟರ ಪತ್ನಿ ಶ್ರೀಮತಿ ಇಲಿನರ್ ರೂಸ ವೆಲ್ಟರು ಇಷ್ಟರಲ್ಲೇ ಭಾರತಕ್ಕೆ ಬರುವರೆಂದು ತಿಳಿದು ಬಂದಿದೆ. ಅವರ ಚುಂಕಿಂಗ್‌ಗೂ ಹೋಗುವ ಸಂಭವವಿದೆ.

ಅರ್ಜಂಟೈನಾದಲ್ಲಿ ಭೂಕಂಪ

ಶನಿವಾರ ರಾತ್ರಿ ಅರ್ಜಂಟೈನಾದ ಅನೇಕ ಪ್ರಾಂತ್ಯಗಳಲ್ಲಿ ಭೂಮಿ ನಡುಗಿತೆಂದು ವರದಿಯಾಗಿದೆ. ಕಾರ್ಡೊಬಾ ಪ್ರಾಂತ್ಯದಲ್ಲಿ ಭೂಕಂಪ ತೀವ್ರವಾಗಿತ್ತೆಂದು ಹೇಳಲಾಗಿದೆ.

೮ ಸಾವಿರ ಜರ್ಮನ್ ಯೋಧರ ಸೈನ್ಯ

ಕಳೆದ ವರ್ಷ ಡಿ|| ೩ ರಿಂದ ಈವತ್ತಿನವರೆಗೆ ಬ್ರಿಟಿಷ್ ೮ ನೇ ಮತ್ತು ೫ ನೆಯ ಸೇನೆಗಳು ೮ ಸಾವಿರಕ್ಕೆ ಮೇಲ್ಪಟ್ಟು ಜರ್ಮನ್ ಯೋಧರನ್ನು ಸೆರೆಹಿಡಿದಿವೆಯೆಂದು ಅಧಿಕಾರಯುತ ಪ್ರಕಟಣೆ ಹೊರಟಿದೆ.

೩೨ ಸಾವಿರ ರೂ. ದಾನ

ಸ್ವಂ. ಸು ಫೋ|]   ಬೆಂಗಳೂರು ೧೭.

ಅರಕ್ಷ ಪೋಷಕ ಸಭೆಗೆ ನಾನಾ ಮಹನೀಯರಿಂದ ಸುಮಾರು ೩೨,೦೦೦ ರೂಗಳು ಉದಾರವಾಗಿ ದೊರೆತಿವೆ. ಈ ಬಗೆಗೆ ಅಂಶವು ನಿನ್ನೆ ದಿನ ಸಂಜೆ ಸ್ಥಳೀಯ ಸಂಸ್ಥೆಗಳ ಖಾತಾ ಸಚಿವರಾದ ಶ್ರೀ ಹೆಚ್. ಬಿ. ಗುಂಡಪ್ಪಗೌಡರ ಅಧ್ಯಕ್ಷತೆಯಲ್ಲಿ ನಡೆದ ೧೭ ನೇ ವಾರ್ಷಿಕೋತ್ಸವದ ಕಾಲದಲ್ಲಿ ಹೊರಬಿತ್ತು. ಈ ಹಣದಲ್ಲಿ ೧೦,೦೦೦ ರೂ. ಗಳನ್ನು ಶ್ರೀ ಅಲಸೂರಿನ ಕುಪ್ಪುಸ್ವಾಮಿ ನಾಯ್ಡುರವರು ಬಾಲಕಿಯರ ಅನಾಥಾಲಯದ ಭವನಕ್ಕೂ ೪೦ ರೂ ಗಳನ್ನು ಅನಾಥ ಬಾಲಕರ ಸಹಾಯಕ್ಕೂ ಒದಗಿಸಿರುವರು. ಧರ್ಮ ಪ್ರಕಾಶ ದೇವರಾಜ ಶಿವರಾಂರವರು ತಿರುಗಳ ಹಾಲಿನ ಕೇಂದ್ರದ ನಿಧಿಗೆ ೧೦,೦೦೦ ರೂ. ಗಳನ್ನೂ ಶ್ರೀ ಎಂ. ವಿ. ಮುನಿವೆಂಕಟಪ್ಪನವರು ಆ ಕೇಂದ್ರದ ಕಟ್ಟಡಕ್ಕೆ ೫,೦೦೦ ರೂ. ಗಳನ್ನೂ ದಾನ ಮಾಡಿರುವರು.

ಶ್ರೀ ಮಹಾಬಲ ಜೋಯಿಸರು ಅನಾಥ ಬಾಲಕರಿಗಾಗಿ ೫,೦೦೦ ರೂ. ಸಹಾಯ ಮಾಡಿರುವರು.

ಕರ್ನಾಟಕ ಪತ್ರಿಕೋದ್ಯೋಗಿಗಳ ಸಮ್ಮೇಳನ

ಅಖಿಲ ಕರ್ನಾಟಕ ಪತ್ರಿಕೋದ್ಯೋಗಿಗಳ ಸಮ್ಮೇಳನವು ಮಂಗಳೂರಿನಲ್ಲಿ ಮುಂದಿನ ತಿಂಗಳು ೧೯ ಮತ್ತು ೨೦ ನೇ ತಾ|| ನಡೆಯಲು ಏರ್ಪಡಿಸಿದೆ. ಮದರಾಸಿನ "ಸ್ವದೇಶ ಮಿತ್ರನ್" ಪತ್ರಿಕೆಯ ಸಂಪಾದಕರಾದ ಶ್ರೀ ಸಿ ಆರ್. ಶ್ರೀನಿವಾಸರವರು ಅಧ್ಯಕ್ಷತೆ ವಹಿಸುವರು.

ಜವಹರಲಾಲರಿಗೆ ತಂತಿ

ಬಂದಿಖಾನೆಯಲ್ಲಿರುವ ಪಂಡಿತ ಜವಹರಲಾಲರಿಗೆ ಅವರ ಭಾವನವರಾದ ಶ್ರೀ ಆರ್ ಎಸ್. ಪಂಡಿತರ ನಿಧನವಾರ್ತೆಯನ್ನು ತಿಳಿಸಬೇಕೆಂದು ಪ್ರಾರ್ಥಿಸಿ ಬೊಂಬಾಯಿ ಸರ್ಕಾರದ ಹೋಂ ಮಂತ್ರಿಗಳಿಗೆ ಅಲಹಾಬಾದಿನಿಂದ ತಂತಿಯೊಂದನ್ನು ಕಳುಹಿಸಲಾಗಿದೆ.

ವಿಜಯಲಕ್ಷ್ಮಿ ಪಂಡಿತರ ಕುವರಿಯರ ತಂತಿ

ಅಮೇರಿಕಾದಲ್ಲಿರುವ ಚಂದ್ರಲೇಖಾ ಮತ್ತು ನಯನತಾರಾ ಎಂಬ ಇಬ್ಬರು ವಿಜಯಲಕ್ಷ್ಮಿ ಪಂಡಿತರ ಕುವರಿಯರೂ ತಂದೆಯ ಗತಿಸಿದ್ದಲ್ಲಿ ನಮ್ಮಲ್ಲಿ ಜೀವಂತರಾಗಿರುವರು, ನೀನು ಎದೆಗೆಡಬೇಡ ಎಂದು ತಮ್ಮ ತಾಯಿಯವರಿಗೆ ತಂತಿ ಕಳಿಸಿದ್ದಾರೆ.

ಬೆಳಗಾಂ ಬ್ಯಾಂಕ್ ಹಣದ ದರೋಡೆ

ಬೆಳಗಾಂ ಬ್ಯಾಂಕಿಗೆ ಸೇರಿದ ೭೫,೦೦೦ ರೂ ಬರ್‌ನನ್ನಷ್ಟುಕೊಂಡು ಬ್ಯಾಂಕಿನ ಏಜಂಟ್‌ಗೆ ಮೊನ್ನೆ ನಡು ಹಗಲಲ್ಲಿ ಬೆಳಗಾಂ ರಸ್ತೆಯಲ್ಲಿ ಸಾಗಿಸುತ್ತಿದ್ದಾಗ ಡಕಾಯಿತರು ಬಸ್ಸನ್ನು ಸುತ್ತಿಗೆ ಹಾಕಿ ಹಣವನ್ನು ಅಪಹರಿಸಿ ಪರಾರಿಯಾಗಿದ್ದಾರೆ. ತನಿಖೆ ಕ್ರಮ ಜರುಗುತ್ತಿದೆ.

ಸಪ್ರೂರವರಿಗೆ ಆಹ್ವಾನ

ಬರುವ ವಾರ ವೈಸರಾಯರು ಲಕ್ನೋವಿಗೆ ಬರಲಿದ್ದಾರೆ. ಆಗ್ಗೆ ವೈಸರಾಯರನ್ನು ಭೇಟಿ ಮಾಡಲು ಸರ್ ತೇಜ ಬಹದ್ದೂರ್ ಸಪ್ರೂರವರಿಗೆ ಆಹ್ವಾನ ಕಳುಹಿಸಲಾಗಿದೆಯೆಂದು ತಿಳಿದು ಬಂದಿದೆ. ವೈಸರಾಯರು ಅಲಹಾಬಾದಿಗೂ ವಿಮಾನದಲ್ಲಿ ಹೋಗಿ ಬರುವ ಸಾಧ್ಯತೆ ಇದೆ

ಬೆಂಗಳೂರಲ್ಲಿ ಚಿರತೆ ಹಾವಳಿ!

ಸ್ವಂ. ವ.] ಬೆಂಗಳೂರು ೧೬

ಇಂದು ಬೆಳಿಗ್ಗೆ ಚಿರತೆಯೊಂದ ಮೂವರು ಜನರು [illegible] ಚಿರತೆಯಿಂದ ಕಡಿ ಸಲ್ಪಟ್ಟು ಗಾಯಗೊಂಡರೆಂದೂ, ಅವರ ನ್ನೆಲ್ಲಾ ಆಸ್ಪತ್ರೆಗೆ ಚಿಕಿತ್ಸೆಗೆ ಸೇರಿಸಲಾಗಿ ದೆಯೆಂದೂ ಗೊತ್ತಾಗಿದೆ. ಆ ಚಿರತೆಯ ನ್ನು [illegible] ಕೊಲ್ಲಲಾಯಿತೆಂದೂ ತಿಳಿದು ಬಂದಿದೆ. ಮೊನ್ನೆ [illegible] ಒಂದು ಚಿರತೆಯನ್ನು ಕೊಲ್ಲಲಾಯಿತು.

ಶ್ರೀ ಹನುಮಂತರಾಯರಿಗೆ ಸತ್ಕಾರ

'ಸಂಯುಕ್ತ ಕರ್ನಾಟಕ'ದ ಸಂಪಾದಕ ರಾದ ಶ್ರೀ ಮೊಹರೆ ಹನುಮಂತರಾಯ ರಿಗೆ [illegible] ಸ್ವಾತಂತ್ರ್ಯ ಸಂಗ್ರಾಮದ [illegible] ಸಂಪಾದಕರ [illegible] ಅವರು ಚೇತರಿ ಸಿದರು.

ಬುನಾದಿನ ವ್ಯವಹಾರ

ಬೆಂಗಳೂರು ಪೌರ ಸಭೆಯ ಅಧ್ಯಕ್ಷರ [illegible] ನೇ ತಾ|| ನಡೆಯಲಾ ಗದಂತೆ [illegible] 'ಜಾಯಿಂಟ್ಸ್' ಕೊಡ [illegible] ಶ್ರೀ ಸಿ. ಕೃಷ್ಣಯ್ಯನವರ ಅರ್ಜಿ ಯ [illegible] ಜಿಲ್ಲಾ ನ್ಯಾ ಯಾಧೀಶರು [illegible] ಕೇಳಿ, ಕೋ ರ್ಟಿನಲ್ಲಿ [illegible] ನೇ ತಾ|| [illegible] ಯುವರು.

ಶ್ರೀ ಟಿ. ರಾಮಸ್ವಾಮಯ್ಯಂಗಾರ್ಯರ [illegible] ವ್ಯವಹಾರವು [illegible] ನೇ ತಾ||ಗೆ ಮುಂದಕ್ಕೆ ಹೋಯಿತು.

ರಜತ ಮಹೋತ್ಸವ

[illegible] ಕಾಲೇಜಿನ ಕರ್ನಾಟಕ ಸಂ ಘದ ರಜತ ಮಹೋತ್ಸವವು ಇಂದು ಸಂಜೆ ಗವರ್ನ್‌ಮೆಂಟ್ ಭವನದಲ್ಲಿ ಬಹು ವಿಜೃಂಭಣೆ ಯಿಂದ ನಡೆಯಿತು. ಶ್ರೀ ಡಿ. ವಿ. ಗುಂಡ ಪ್ಪನವರು ಅಧ್ಯಕ್ಷತೆ ವಹಿಸಿದ್ದರು. ರಾಜ ಸೇವಾ ಪ್ರಸಕ್ತ ಮಾಸ್ತಿ ವೆಂಕಟೇಶಯ್ಯಂ ಗಾರ್ಯರು ಉತ್ಸವದ ಆರಂಭೋತ್ಸವ ನಡೆ ಸಿದರು.

ಸರ್ ಸಿ. ಪಿ.

ಸರ್ ಸಿ. ಪಿ. ರಾಮಸ್ವಾಮಿ ಅಯ್ಯರ್‌ರ ವರು ನೆಹಲಿಯಿಂದ ೧೯ ನೇ ತಾ|| ವಿಮಾ ನದಲ್ಲಿ ಬೆಂಗಳೂರಿಗೆ ಹಿಂತಿರುಗುವರು.

ವಾರ್ಷಿಕೋತ್ಸವ

ಶಿಕ್ಷಣ ಪ್ರೋತ್ಸಾಹಕ ಸಭೆಯ ವಾರ್ಷಿಕ ಮಹೋತ್ಸವವು ಇಂದು ಸಂಜೆ ಶ್ರೀ ಹೆಚ್. ಬಿ ಗುಂಡಪ್ಪಗೌಡರ ಅಧ್ಯಕ್ಷತೆಯಲ್ಲಿ ವಿಜೃಂ ಭಣೆಯಿಂದ ನಡೆಯಿತು.

ಸ್ಪೋರ್ಟ್ಸ್‌ರೊಡನೆ ಸಂಘ ಗೆದ್ದರು

೮೨ ವರ್ಷ ವಯಸ್ಸಿನ ಪ್ರಸಿದ್ಧ ಕಾಲ್ ನಿರ್ಮಾಪಕರಾದ ಮಿ|| ಹೆನ್ರಿ ಸ್ಪೋರ್ಟ್ಸ್‌ರು [illegible] ವರ್ಷ ವಯಸ್ಸಿನ ವಾಷಿಂಗ್‌ಟನ್ ದೇ ಶದ ಕೋಶಾಧ್ಯಕ್ಷನಾದ ಮಿ|| ಡ್ಯೂಪಿ ಯರ್‌ಸನ್‌ರೊಡನೆ ರಭಸವಾಗಿ ಓಡುವ ಸಂಘ ಹೂಡಿದರು. ಮಿ|| ಪಿಯರ್‌ಸನ್ ರು ಸಂಘವನ್ನು ಒಪ್ಪಿಕೊಂಡು ತಾವೇ ಜ ಯಶಾಲಿಗಳಾದರು. ಈ ಸಂಘ ಪ್ರದರ್ಶ ನದಿಂದ [illegible] ಸರ್ಕಾರವು ಸ್ಪೋರ್ಟ್ಸ್‌ರ ಬಿಲ್ಲು ಯಂತ್ರಗಳನ್ನು ಕೊಳ್ಳಲು ಉತ್ತೇ ಜಿಸಲ್ಪಡುವುದೆಂದು ತಿಳಿದು ಬಂದಿದೆ.

ಯುದ್ಧ ೧೯೪೫ಕ್ಕೆ ಮುಗಿಯುವುದೆ?

೧೯೪೫ ನೇ ಜೂನ್ ಹೊತ್ತಿಗೆ ಯುದ್ಧ ಮುಗಿದೀತೆಂದು ಬಾಬ್ ಆಸ್ಟಿನ್ ಕಂಪೆನಿಯ ಯು ದ್ಧಕ್ಕಾಗಿ ಬೇಕಾಗುವ ಪಟ್ಟಿಯನ್ನು [illegible] ಅಮೇರಿಕವು ಪಟ್ಟಿ ತಯಾರಿ ಸಿದೆ. ಅದರಂತೆ ರೂಸ್‌ವೆಲ್ಟರು ನೂರು ಸಹಸ್ರ ಕೋಟಿ ಡಾಲರುಗಳು ಯುದ್ಧದಲ್ಲಿ ವಿಜಯಗಳಿಸಲು ಬೇಕಾಗಿದೆಯೆಂದು ಒಂ ದು ಮಸೂದೆ ಹೊರಡಿಸಿರುವರು.

ಬಾಂಬು ಮೈದಾನದಲ್ಲಿ ಬಿತ್ತು

೧೬ ನೇ ತಾ|| ಜಪಾನರು ವಿಶಾಖಪ ಟ್ಟಣದ ಮೇಲೆ ಧಾಳಿ ನಡೆಸಿದಾಗ ಅವರು ಕೆಡವಿದ ಬಾಂಬುಗಳು ದೂರದ ಮೈದಾನ ದಲ್ಲಿ ಬಿದ್ದವೆಂದು ತಿಳಿದುಬಂದಿದೆ.

ಕರುಹಟ್ಟಿ ಕಟ್ಟಡ

ಮೈಸೂರು ೧೬

ಧರ್ಮಪ್ರಕಾಶ ಶ್ರೀ ಎಲ್. ಎಸ್. ವೆಂ ಕಟಾಚಲಯ್ಯರು ಹೊಸದಾಗಿ ಕರುಹಟ್ಟಿಯನ್ನು ಸ್ಥಾಪಿಸಲು ಉದಾರದಾನ ಮಾಡಿದ ೧ ಸಾ ವಿರ ರೂ. ಗಳು ಕಟ್ಟಡ ಮತ್ತು ಶೆಡ್‌ಗಳಿ ಗೆ ಸಾಲದೆ ಇದ್ದುದರಿಂದ, ಕುರುಬರ ಪ ಟ್ಟಿ ಮೂಕರ ಪಾಲನೆಗಾಗಿ ರಾಜ ಸೇವಾ ಪ್ರಸಕ್ತ ಶ್ರೀ ಸವರೆಪ್ಪ ರಾಮರಾಯ ರು ತಮ್ಮ ಮತ್ತು ಮಿತ್ರರಿಂದ ಮತ್ತು ಅಂಗಡಿಕಾರರಲ್ಲಿ ದಯಾಪರರಾದ, ಮೈಸೂ ರು ಸಿಲ್ಕ್ ಫಿಲೇಚರ್ ಮ್ಯಾನೇಜಿಂಗ್ ಡೈ ರೆಕ್ಟರಾದ ಶ್ರೀ ಜಿ ಕೃಷ್ಣಸ್ವಾಮಿಯವರಿಂ ದ ೫೦೦ ರೂ. ಗಳನ್ನೂ, ಮಾಂಬಳ್ಳಿ ಸಾ ಹುಕಾರ್ ಶ್ರೀ ಬಸವಣ್ಣದೇವರಿಂದ ೨೦೦ ರೂ. ಗಳನ್ನೂ, ಬಿಲ್ಡಿಂಗ್ಸ್ ಇಂಜಿನಿ ಯರಿಂಗ್ ಕಂಟ್ರಾಕ್ಟರ್ ಶ್ರೀ ಮೊರಸಾಮ ಯ್ಯಂಗಾರ್ಯರಿಂದ ೧೦೦ ರೂ. ಗಳನ್ನೂ ಉದಾರದಾನ ಮಾಡುವಂತೆ ಪ್ರೇರಿಸಿ ಮಾಡಿಸಿರುವರು. ಒಟ್ಟು ೮೦೦ ರೂ. ಗ ಳನ್ನು ೧೦೦೦ ರೂ ಗೆ ಭರ್ತಿಮಾಡುವುದ ಕ್ಕಾಗಿ ಶ್ರೀ ಸವರೆಪ್ಪ ರಾಮರಾಯರು ೨೦೦ ರೂ ಗಳನ್ನು ಕೊಡುವುದಾಗಿ ವಾಗ್ದಾನ ಮಾಡಿ, ಹೊಸ ಕರುಹಟ್ಟಿ ಸ್ಥಾಪಿಸಲು ೨೦೦೦ ರೂ. ಶೇಖರಿಸಿರುವರು.

ಲಜಪತರಾಯ್ ಭವನ ಬೇಕು

ಲಾಹೋರಿನಲ್ಲಿರುವ ಲಾಲಾಲಜಪತರಾ ಯರ ಭವನಕ್ಕೆ ಪೋಲೀಸರ ಗುಂಪೊಂದು ನುಗ್ಗಿ ಆ ಭವನದಲ್ಲಿದ್ದ ಪಂಜಾಬ್ ಅಸೆಂ ಬ್ಲಿ ಕಾಂಗ್ರೆಸ್ ಪಕ್ಷದ ಕಛೇರಿ ಕೋಣೆ, ಜನಸೇವಾ ಸಂಘದ ಕಛೇರಿ ಕೋಣೆ ಹರಿ ಜನ ಸೇವಕ ಸಂಘದವರ ಕಛೇರಿ ಕೋಣೆ ಗಳನ್ನು [illegible] ಮಾಡಿಕೊಂಡು ತನಿಖೆ ನಡೆಸಿಕೊಂಡು ಹೋದರು. ಆ ಕಟ್ಟಡ ವು ಸರ್ಕಾರಕ್ಕೆ ಬೇಕಂತೆ

ಮಲೇರಿಯಾ ಕ್ವಿನೀನಿನಿಂದ ಹೋಗದು

ಸಂಸ್ಥಾನದಲ್ಲಿ ಈಚೆಗೆ ಮಲೇರಿಯಾ ದಿಂದ ಬಹಳ ಜನ ನರಳುತ್ತಿರುವುದು ಮಾತ್ರ ವಲ್ಲದೆ, ಸಾವಿರಾರು ಮಂದಿ ಇದಕ್ಕೆ ಬಲಿಯಾದರು. ವೈದ್ಯಶಾಲೆಯವರು ಮಾ ತ್ರ ಇದರ ನಿವಾರಣೆಗೋಸ್ಕರ ಪ್ರಚಾರ ಹೆ ಚ್ಚು ಮಾಡಿ ಹೆಚ್ಚು ಹೆಚ್ಚು ಕ್ವಿನೀನ ನ್ನು ಉಪಯೋಗಿಸಿದರೂ ಸಹ ಅದರಿಂದ ಇದು ವರೆವಿಗೂ ಯಾವ ಪ್ರಯೋಜನವೂ ಕಂ ಡು ಬಂದಿಲ್ಲ. ಈಚೆಗೆ ನಡೆದ ವೈದ್ಯಕೀಯ ಸಮ್ಮೇಳನದಲ್ಲಿ ಮೈಸೂರಿನ ಅನುಭವಶಾ ಲಿಗಳಾದ ಪಂಡಿತರೊಬ್ಬರು ಕ್ವಿನೀನಿನ ಉ ಪಯೋಗ ವಿಚಾರದಲ್ಲಿ ಖಂಡಿಸಿ, "ಕ್ವಿನೀನ್ ಪ್ರಭಾವ ಮಲೇರಿಯಾ ಕ್ರಿಮಿಯ ಮೇಲೆ ಏನೂ ನಡೆಯಲಾರದು. ಕ್ವಿನೀನಿನಿಂದ ರೋಗಿಗಳ ಸಂಖ್ಯೆ ಮತ್ತಷ್ಟು ಹೆಚ್ಚುತ್ತಿ ದೆಯೇ ವಿನಃ ಕಡಿಮೆಯಾಗಲಾರದು. ಹ ಳ್ಳಿಗಳ ಹಳ್ಳಿಗಾಡುಗಳಲ್ಲಿನ ಜನರು ಈ ಕ್ವಿ ನೀನನ್ನು ವಿವೇಕವಿಲ್ಲದೆ ತಿಂದು ಅನೇಕ ಉಪವ್ಯಾಧಿಗಳಿಂದ ಕೊಡುವವರಾದರು. ಸೊಳ್ಳೆಯ ಸಹಾಯವಿಲ್ಲದೆ ಪ್ರಸರಿಸುವ ಈ ಮಲೇರಿಯಾವನ್ನು ನಾಶಪಡಿಸಿ ತಡೆಯ ಲು ಮಲೆನಾಡು ಪ್ರದೇಶದ ಜನರನ್ನು ಪ್ರ ತ್ಯೇಕ ಮಾಡುವುದು ಬಹಳ ಸಹಾಯಕಾರಿಯಾ ಗುವುದು. ಅಂತು ಕ್ವಿನೀನಿನಿಂದ ಆಗುವ ಅನರ್ಥಗಳು ಆರೋಗ್ಯಶಾಖೆಯ ಗಮನ ಕ್ಕೆ ಬರಲು ಮತ್ತಷ್ಟು ಅನರ್ಥವಾಗಲೇ ಬೇಕು"—ಎಂದು ಡಾ|| ಎಂ. ಎಸ್. ಸುಬ್ರ ಹ್ಮಣ್ಯಶಾಸ್ತ್ರಿಗಳು ಅಭಿಪ್ರಾಯಪಟ್ಟಿದ್ದಾರೆ.

ಜರ್ಮನಿಯಲ್ಲಿ ಜನನ ಹೆಚ್ಚುತ್ತಿದೆ

ಯುದ್ಧದ ಮೊದಲನೆ ೪ ವರ್ಷದಲ್ಲಿ ಪ್ರತಿ ವರ್ಷ ೩೫,೦೦೦ ಮಕ್ಕಳು ಜರ್ಮ ನಿಯಲ್ಲಿ ಹುಟ್ಟಿವೆ. ೧೯೪೩ ನೇ ವರ್ಷದ ಲ್ಲಿ ಮಕ್ಕಳ ಜನನ ೪೫,೦೦೦ ಹೆಚ್ಚಿದುದಾ ಗಿ ಜರ್ಮನಿಯ ವಾರ್ತಾ ಸಂಸ್ಥೆಯವರು ಪ್ರಕಟಿಸಿದ್ದಾರೆ.

ಚಳಿಗಾಲ

ಅತ್ಯುತ್ತಮವಾದ ರಗ್ಗುಗಳಿಗೂ, ಫ್ಲಾನ್ನೆಲ್ ಕೋಟಿಂಗ್, ಕಂಬಳಿ ವಸ್ತ್ರಗಳಿಗೂ ಎಲ್ಲಾ ಹುಡುಕಬೇಡಿ.

ನೇರವಾಗಿ ನಮ್ಮಲ್ಲಿಗೆ ಬನ್ನಿ. ಕಡಿಮೆ ಬೆಲೆಗೆ ಉತ್ತಮವಾದ ಮಾಲು ಹೊಂದುವಿರಿ

ಜಿ. ವಿ. ಸೂರ್ಯನಾರಾಯಣ ಶೆಟ್ಟಿ ಅಂಡ್ ಸನ್ಸ್

ಜೂಯಲರ್ಸ್ ಆ್ಯಂಡ್ ರೆಡಿಮೇಡ್ ಡ್ರೆಸ್ ಎಂಪೋರಿಯಂ,

[illegible] ರೋಡ್, ಮೈಸೂರು

ನವಯೌವನ

ಕೊಬ್ಬು, ಬಲಹೀನತೆ, ಮಲಬ ದ್ಧತೆ, ವೀರ್ಯನಷ್ಟ, ಧಾತುವಿಕಾರ ಮೊದಲಾದುವನ್ನು ಶೀಘ್ರದಲ್ಲೇ ಸರಿಪಡಿಸಲು ಮದನಮಂಜರಿ ಮಾತ್ರೆಗಳು ದಿವ್ಯ ಔಷಧ

ಡಬ್ಬಿ ಒಂದಕ್ಕೆ ರೂ. 1

ಮದನಮಂಜರಿ ಫಾರ್ಮಸಿ, 184 ಜ್ಯೋತಿ ಬಜಾರು [illegible]

ಅಶೋಕಾ ಫಾರ್ಮೆಸಿ ಬ್ಯಾಂಕು ರಸ್ತೆ, ಮೈಸೂರು

ಗುಂಡ್ಲುಪೇಟ್: ಜಿ ಎಸ್. ಕೃಷ್ಣಯ್ಯ

Edited, printed and published by A R Nagarajan, at the Sadhvi Press, D Subbiah Road, Mysore.

ದಿವ್ಯವಾದ ಸಾಬೂನು

ಬೆಲೆಯಲ್ಲಿ ಕಿರಿದಾದರೂ ಗುಣದಲ್ಲಿ ಹಿರಿದು.



ಮೈಸೂರು ಸ್ಯಾಂಡಲ್ ಸೋಪಿನಿಂದ [illegible] ಅದರ ಬಿಳ್ಳನೆಯ ನೊರೆಯು ರೋಮ ರಂಧ್ರಗಳನ್ನೆಲ್ಲಾ ತೊಳೆದು [illegible] ಅದರ ಮೃದುತ್ವವೂ ಸುಗಂಧವೂ ಚಿತ್ತಾ ಕರ್ಷಣೆ ಮಾಡುವುದು.

ಮೈಸೂರು ಸ್ಯಾಂಡಲ್ ಸೋಪ್

ಚಿತ್ರಲೇಖ ದಂತದ ಸಿಪ್ಪೆ ಎಷ್ಟಿದ್ದರೂ ಬೇಕು

ಅಶೋಕಾ ಫಾರ್ಮೆಸಿ, ಹಳೇ ಮೈಸೂರು ಬ್ಯಾಂಕ್ ರಸ್ತೆ, ಮೈಸೂರು.

ಸಂಪುಟ ೨] ಮಂಗಳವಾರ ೧೮-೧-೪೪ [ಸಂಚಿಕೆ ೧೫೫

ಬರೋಡ ಸಂಸ್ಥಾನದಲ್ಲಿ ರಾಜ್ಯಾಂಗ ಬಿಕ್ಕಟ್ಟು

ವಿವಾಹವಿಚ್ಛೇದಿತಳಾದ ಹೆಂಗಸನ್ನು ಮದುವೆಯಾದುದಕ್ಕೆ ರಾಜ್ಯ ಬಿಡಬೇಕಾಗಬಹುದು

ತಿರುವಾಂಕೂರು ಮಹಾರಾಜರಿಗೆ ಬಿನ್ನವತ್ತಳೆ

ಸ್ವಂ ವ.] ಮೈಸೂರು ೧೮

ಇದೇ ಮಾಹೆ ೨೧ ನೇ ತಾ॥ ಆಗಮಿಸ ಲಿರುವ ತಿರುವಾಂಕೂರು ಮಹಾರಾಜರವರಿಗೆ ಪೌರಸಭೆಯವರು ಬಿನ್ನವತ್ತಳೆಯನ್ನು ಅರ್ಪಿಸುವ ಸಲುವಾಗಿ ಒಂದು ವಿಶೇಷ ಸಭೆಯನ್ನು ಕರೆಯಬೇಕೆಂದು ಹಲವು ಸದಸ್ಯರು ಅಧ್ಯಕ್ಷರಿಗೆ ಪತ್ರ ಬರೆದಿರುವರೆಂದು ಗೊತ್ತಾಗಿದೆ

ಪೌರಸಭೆ ಅಡ್ವೋಕೇಟ್

ಮೈಸೂರು ಪೌರಸಭೆಯ ಅಡ್ವೋಕೇಟ್ ಪದವಿಗೆ ಶ್ರೀ ಎಂ. ರಂಗರಾಮಯ್ಯನವರೊಬ್ಬರೇ ಉಮೇದುವಾರರಾಗಿರುವುದರಿಂದ ೨೦ ನೇ ತಾ॥ ನಡೆಯಲಿರುವ ಪೌರ ಸಭೆಯ ವಿಶೇಷ ಅಧಿವೇಶನದಲ್ಲಿ ಅವರೇ ಪುನಃ ಚುನಾಯಿತರಾಗಲಿದ್ದಾರೆ.

ಕಸ್ತೂರಿಬಾಯಿ ಗಾಂಧಿ ಶ್ರೇಯಃಪ್ರಾರ್ಥನೆ

ತಾ॥ ೧೭-೧-೪೪ ನೇ ಸೋಮವಾರದಂದು ರಾಜಧಾನಿಯ ದೇಶೀಯ ವಿದ್ಯಾಶಾಲೆಯಲ್ಲಿ ಶ್ರೀಮತಿ ಕಸ್ತೂರಿಬಾಯಿ ಗಾಂಧಿಯವರ ಶ್ರೇಯಃಪ್ರಾರ್ಥನೆಯು ನಡೆಯಿತು. ಶ್ರೀಮತಿ ಯಶೋಧರಾ ದಾಸಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಶ್ರೀಮತಿ ವಿಜಯಲಕ್ಷ್ಮಿ ಪಂಡಿತರ ಪತಿ ವಿಯೋಗಕ್ಕಾಗಿ ಅಧ್ಯಕ್ಷರ ಅಪ್ಪಣೆ ಮೇರೆಗೆ ೫ ನಿಮಿಷ ಸಭೆಯನ್ನು ಮುಂದುವರಿಸಿ ಮೌನವನ್ನು ಆಚರಿಸಲಾಯಿತು. ಶ್ರೀಮತಿ ರಂಗನಾಯಕಮ್ಮ ಮತ್ತು ಎಚ್. ಸ್ವಿ. ಸರಸ್ವತಮ್ಮ ಇವರುಗಳು ಭಾಷಣ ಮಾಡಿದರು. ಶ್ರೀಯುತ ಶಾಂತಿಲಾಲ್ ಗಾಂಧಿಯವರು ಗಾಂಧೀಜಿಯವರ ಆಶ್ರಮದ ನಿಯಮಗಳನ್ನು ಅನುಸರಿಸಿ ಪ್ರಾರ್ಥನೆಯನ್ನು ಹೇಳಿಕೊಟ್ಟರು.

ಹೊಸ ಪಕ್ಷದ ಪ್ರಚಾರ

ಶ್ರೀ ಟಿ. ಎಸ್. ರಾಜಗೋಪಾಲಯ್ಯಂಗಾರ್ರವರು ಹೊಸ ರಾಜಕೀಯ ಪಾರ್ಟಿಯ ಧ್ಯೇಯಗಳ ವಿಷಯಗಳನ್ನು ತಿಳಿಸಿ ಜನಬೆಂಬಲ ಪಡೆಯಲು ಟಿ. ನರಸೀಪುರ, ಚಾಮರಾಜನಗರ, ನಂಜನಗೂಡು, ಮತ್ತು ಕೃಷ್ಣರಾಜನಗರಗಳಿಗೆ ಹೋಗಿದ್ದರೆಂದೂ ಅಲ್ಲಿ ಪ್ರಮುಖರೊಡನೆ ಮಾತುಕತೆ ನಡೆಸಿದರೆಂದೂ ಅವರುಗಳು ಬಹಳ ಉತ್ಸಾಹವನ್ನು ತೋರಿಸಿದರೆಂದೂ, ಸಹ ಗೊತ್ತಾಗಿದೆ.

ಬೆಂಗಳೂರಿನಲ್ಲಿ ನಡೆಯುವ ಸಭೆಯ ಪ್ರಾರಂಭೋತ್ಸವವನ್ನು ನಡೆಸಲು ಶ್ರೀಮಾನ್ ಟಿ. ಎಸ್. ರಾಜಗೋಪಾಲಯ್ಯಂಗಾರ್ಯರು ಹೊಂದಿಸಿದ ಶ್ರೀ ಸಿ. ರಾಜಗೋಪಾಲಾಚಾರ್ಯರವರಿಗೆ ಆಹ್ವಾನ ಕಳುಹಿಸಿದರೆಂದು ಗೊತ್ತಾಗಿದೆ

ವಿವೇಕಾನಂದರ ಜಯಂತಿ

ಶ್ರೀ ಭವಾನಿ ವ್ಯಾಯಾಮಶಾಲೆಯಲ್ಲಿ ನಿನ್ನೆ ತಾ॥ ೧೭-೧-೪೪ ನೇ ಸೋಮವಾರ ಸ್ವಾಮಿ ವಿವೇಕಾನಂದರ ಜಯಂತ್ಯುತ್ಸವ ಜರುಗಿಸಲಾಯಿತು. ಶ್ರೀಮಾನ್ ಕೆ. ಶ್ರೀನಿವಾಸರವರು ಅಗ್ರಾಸನವನ್ನು ವಹಿಸಿದ್ದರು. ಸ್ವಾಮಿ ವಿವೇಕಾನಂದರ ಜೀವನ ಚರಿತ್ರೆಯನ್ನು ಸಭಿಕರು ತಿಳಿಯುವಂತೆ ಶ್ರೀಮಾನ್ ಕೇ. ಬಿ. ಚಂದ್ರರವರು ಸರಳವಾಗಿ ಹೇಳಿದರು. ರಾಷ್ಟ್ರಗೀತೆಯೊಡನೆ ಸಭೆಯು ಮುಕ್ತಾಯವಾಯಿತು.

ಶ್ರೀ ಕೈಲಾಸಂರಿಗೆ ಸತ್ಕಾರ

ಶ್ರೀಯುತರ ಗೌರವಾರ್ಥವಾಗಿ, ಸುತ್ತೂರು ವೀರಶೈವ ವಿದ್ಯಾರ್ಥಿನಿಲಯದಲ್ಲಿ ನಿನ್ನೆ ಶ್ರೀ ಚೇಂಪ್ರಯವರ "ಚಾತ್ರಿ" ಎಂಬ ನಾಟಕವನ್ನು ನಿಲಯದ ವಿದ್ಯಾರ್ಥಿಗಳು ಅಭಿನಯಿಸಿದರು. ಸಭೆಗೆ ಪ್ರಾಧ್ಯಕ್ಷರು ಅಧ್ಯಕ್ಷತೆವಹಿಸಿದ್ದರು. ಸ್ವಾಮಿಗಳವರು ಶ್ರೀ ಕೈಲಾಸಂರವರು ಬಹುಕಾಲ ಬಾಳಲಿ, ಕನ್ನಡನಾಡು ನುಡಿಗಳಿಗಾಗಿ ದುಡಿಯಲಿ ಎಂದು ಹರಸಿ, ಆಶೀರ್ವಾದಪೂರ್ವಕವಾಗಿ ಹಣ್ಣು ಹಂಪಲುಗಳಿಂದ ಪುರಸ್ಕರಿಸಿದರು ಎಂದು ಶ್ರೀ ಶಿವರಾತ್ರೀಶ್ವರ ವೀರಶೈವ ವಿದ್ಯಾರ್ಥಿನಿಲಯದ ಕಾರ್ಯದರ್ಶಿಗಳು ತಿಳಿಸಿದ್ದಾರೆ

ಪತನವಾದ ಜರ್ಮನಿ ಕಾಪಾಡಲು ಹಂಚಿಕೆ

ಜರ್ಮನಿಯು ಪತನವಾಗಿ ಮಿತ್ರರಾಷ್ಟ್ರಗಳ ವಿಲಿಟರಿ ಅಧಿಕಾರಕ್ಕೆ ಬಂದ ಕೂಡಲೇ ಜರ್ಮನಿಯನ್ನು ಮೂರು ವಿಭಾಗ ಮಾಡಿ ಬ್ರಿಟನ್, ಅಮೇರಿಕ ಮತ್ತು ರಷಿಯಾ ದೇಶಗಳು ಆಳಬೇಕೆಂದು, ಈ ವಿಷಯಗಳನ್ನು ಟೆಹರಾನ್ ಸಮ್ಮೇಳನದಲ್ಲಿ ಚರ್ಚಿಸಲಾಯಿತೆಂದು ಹೇಳಲಾಗಿದೆ

ಮಿತ್ರ ವಿಮಾನಗಳು ಹಂಗೇರಿ ಹಾದುಹೋದುವು

ಭಾನುವಾರ ಮಿತ್ರ ವಿಮಾನಗಳ ಎರಡು ಭಾರಿ ತಂಡಗಳು ಹಂಗೇರಿ ಮೇಲೆ ಹಾರಿ ಹೊರಟುಹೋದುವೆಂದೂ ಬಹುಶಃ ಆಸ್ಟ್ರಿಯಾ ಧಾಳಿಗಾಗಿ ಹೋಗಿರಬಹುದೆಂದೂ ಬುಡಾಪೆಸ್ಟಿನಿಂದ ವರದಿಯಾಗಿದೆ

ರಷ್ಯನ್ ಸೇನೆ ಬಗ್ ದಾಟಿತು

ವಿನ್ನಿಟ್ಸಾ ಬಳಿಯ ಬಗ್ ನದಿಯನ್ನು ರಷ್ಯನರ ಟ್ಯಾಂಕ್ ದಳದವರು ದಾಟಿರುವುದಾಗಿ ವರದಿಯಾಗಿದೆ. ಲೆನಿನ್‌ಗ್ರಾಡ್ ರಣರಂಗದಲ್ಲಿ ಸಹ ರಷ್ಯನರು ಹೊಸ ಆಕ್ರಮಣವನ್ನು ಆರಂಭಿಸಿರುವರು.

ಲಂಡನ್ ರೈಲು ಅಪಘಾತಕ್ಕೆ ತುತ್ತು

ನ ರ್‌ವಿಚ್‌ನಿಂದ ಲಂಡನ್ನಿಗೆ ಹೋಗುತ್ತಿದ್ದ ರೈಲು ನಿನ್ನೆ ಇಪ್ಸ್‌ವಿಚ್ ನಿಲ್ದಾಣದಲ್ಲಿ ಅಪಘಾತಕ್ಕೊಳಗಾಯಿತಾಗಿ ೧೫ ಮಂದಿ ಪ್ರಯಾಣಿಕರು ಮೃತರಾದರು ೩೦ ಮಂದಿಗೆ ತೀವ್ರ ಗಾಯಗಳಾಗಿವೆ

ಈಗ ಭಾರತವು ಸ್ವತಂತ್ರವಾಗಬೇಕು

ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿದರೆ ಆಗ ಜಾತೀಯ ಸಮಸ್ಯೆ ನಾಶವಾಗಬಹುದು. ಅಂತಃಕಲಹವನ್ನಾದರೂ ಎದುರಿಸಬಹುದು, ಆದರೆ ಸ್ವಾತಂತ್ರ್ಯ ಇಲ್ಲದಿರುವುದು ಸಲ್ಲದು. ಭಾರತಕ್ಕೆ ಈ ಕೂಡಲೇ ಸ್ವಾತಂತ್ರ್ಯ ಕೊಡಬೇಕು ಎಂಬುದಾಗಿ ಶ್ರೀ ಆರ್. ಮೋದಕ್‌ರವರು ಕೆಲವು ದಿನಗಳ ಹಿಂದೆ ಕೇರಳ ಮೇರಿಯಾಟ್ಸ್ ವಿಲ್ಸನ್ ಕಾಲೇಜ್ ವಿದ್ಯಾರ್ಥಿಗಳನ್ನು ಕುರಿತು ಭಾಷಣಮಾಡುತ್ತಾ ಹೇಳಿದರು

ಆರ್ಥಿಕ ಸ್ಥಿತಿ ಅಭಿವೃದ್ಧಿಗೆ ನೂತನ ಹಂಚಿಕೆ

ದೇಶದ ಆರ್ಥಿಕ ಸ್ಥಿತಿಯು ಅಭಿವೃದ್ಧಿ ಹೊಂದಿ ಜನಗಳ ಸ್ಥಿತಿಯು ಉತ್ತಮಗೊಳ್ಳುವ ಒಂದು ಯೋಜನೆಯನ್ನು ಬೊಂಬಾಯಿನ ಮುಖ್ಯ ಕೈಗಾರಿಕೆ ನಾಯಕರುಗಳು ತಯಾರಿಸಿದ್ದಾರೆ. ಈ ೧೫ ವರ್ಷದ ಹಂಚಿಕೆ ಪ್ರಕಾರ ದೇಶದ ಉತ್ಪತ್ತಿಯು ದ್ವಿಗುಣವಾಗುವುದೆಂದೂ, ಇದಕ್ಕೆ ೧೦ ಕೋಟಿ ರೂ. ಗಳು ವೆಚ್ಚವಾಗುವುದೆಂದೂ ಹೇಳಲಾಗಿದೆ. ಕೇವಲ ವ್ಯವಸಾಯ ದೇಶವಾದ ಭಾರತವು ಈ ಹಂಚಿಕೆ ಪ್ರಕಾರ ಕೈಗಾರಿಕೆ ಕೇಂದ್ರವಾಗುವುದೆಂದು ಹೇಳಲಾಗಿದೆ

ಮಕ್ಕಳನ್ನು ಹೊರಕ್ಕೆ ಸಾಗಿಸಿ

ಜರ್ಮನ ವಿಮಾನ ಪಡೆಗೆ ಸಿಲುಕದೆ ಉಳಿದಿರುವ ಬರ್ಲಿನ್ ನಗರದಲ್ಲಿರುವ ತಂದೆತಾಯಿಗಳು ತಮ್ಮ ಮಕ್ಕಳನ್ನು ಹೊರಗಿನ ಊರುಗಳಿಗೆ ಸಾಗಿಸುವುದುತ್ತಮವೆಂದು ಜರ್ಮನ ಪತ್ರಿಕೆಗಳು ಬರ್ಲಿನ್ ನಿವಾಸಿಗಳಲ್ಲಿ ಮನವಿ ಮಾಡಿಕೊಂಡಿವೆ

ದಾಳಿಯವರ ದಸ್ತಗಿರಿ

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಗಳಲ್ಲೊಬ್ಬರಾದ ಶ್ರೀ ಎಸ್ ಟಿ ದಾಂಡೇಕರರನ್ನು ಪೋಲೀಸರು ಕಳೆದ ವಾರ ವರ್ಷದಿಂದ ಹುಡುಕುತ್ತಿದ್ದರು. ನಿನ್ನೆ ಅವರನ್ನು ಧಾರವಾಡದಲ್ಲಿ ದಸ್ತಗಿರಿ ಮಾಡಲಾಯಿತು

ಲೆನಿನ್ ವಿಗ್ರಹ ಕಿತ್ತರು

ಲಿತ್ವೇನಿಯಾದ ಹೊಸ ನಗರದಲ್ಲಿನ ಮಾರ್ಕೆಟ್ ಚೌಕದಲ್ಲಿದ್ದ ಲೆನಿನ್ ವಿಗ್ರಹ ಪ್ರತಿಮೆಯನ್ನು ಜರ್ಮನರು ಕಿತ್ತುಹಾಕಿರುವರೆಂದು ರೇಡಿಯೋ ವರದಿ ವರದಿಮಾಡಿದೆ.

ಬರೋಡಾ ಮಹಾರಾಜರು ರಾಜ್ಯಬಿಡಬೇಕಾಗುವುದೆ ?

ಬರೋಡಾ ಸಂಸ್ಥಾನದಲ್ಲಿ ಶಾಸನ ಬಿಕ್ಕಟ್ಟೊಂದು ಒದಗುವ ಸಂಭವವಿದೆಯೆಂದು ಹೇಳಲಾಗಿದೆ. ಅಲ್ಲಿನ ಮಹಾರಾಜರವರಾದ ಪ್ರತಾಪಸಿಂಗ್ ಗಾಯಕವಾಡರವರು ಸಂಸ್ಥಾನದ ಶಾಸನಕ್ಕೆ ವ್ಯತಿರಿಕ್ತವಾಗಿ ಪೀಠಾಪುರಂ ಮಹಾರಾಜರ ಪುತ್ರಿಯನ್ನು ಎರಡನೇ ಭಾರಿ ಮದುವೆಮಾಡಿಕೊಂಡಿರುವುದೇ ಇದಕ್ಕೆ ಕಾರಣವೆಂದು ಹೇಳಲಾಗಿದೆ. ದಿವಾನರು ಮತ್ತು ಇತರ ಉನ್ನತಾಧಿಕಾರಿಗಳು ತಮ್ಮ ಪ್ರತಿಭಟನೆಯನ್ನು ಸೂಚಿಸಿರುವರು. ಮಹಾರಾಜರವರ ಮೊದಲನೇ ಪತ್ನಿಯವರಾದ ಮಹಾರಾಣಿ ಶಾಂತಾದೇವಿಯವರು ಬ್ರಿಟಿಷ್ ಸರ್ಕಾರಕ್ಕೆ ಮನವಿ ಮಾಡಿಕೊಂಡಿದ್ದಾರೆಂದೂ, ಮಹಾರಾಜರು ರಾಜ್ಯವನ್ನು ತಮ್ಮ ಪ್ರಿನ್ಸ್ ಮಗನ ಪರವಾಗಿ ಬಿಡಬೇಕಾಗುವುದೆಂದೂ ಹೇಳಲಾಗಿದೆ. ಇದರ ವಿಷಯದಲ್ಲಿ ಜನಗಳಲ್ಲಿ ಕೋಲಾಹಲವುಂಟುಮಾಡಿದೆ.

ಬಹು ಪತ್ನೀಯತ್ವದ ಮದುವೆಗಳನ್ನು ನಿಷೇಧಿಸಿ ಅವತ್ತಿ ೬ ತಿಂಗಳು ಸಜಾ, ೫೦೦ ರೂ. ಜುಲ್ಮಾನೆ ವಿಧಿಸ್ಪಗಳು ದಲ್ಲಿ ಮಾಡಿದ ಶಾಸನಕ್ಕೆ ಮಹಾರಾಜರು ಸಮ್ಮತಿ ಇತ್ತಿದ್ದರು. ಮಹಾರಾಜರವರ ವಯಸ್ಸು ೩೫ ಮತ್ತು ೧೯೨೯ ರಲ್ಲಿ ಮೊದಲನೆಯ ರಾಣಿಯವರನ್ನು ಮದುವೆಯಾಗಿ ೮ ಮಕ್ಕಳನ್ನು ಪಡೆದಿದ್ದಾರೆ

ದ್ವಿತೀಯ ರಾಣಿಯವರಾದ ಸೀತಾದೇವಿಯವರಿಗೆ ೨೬ ವರ್ಷ ವಯಸ್ಸು. ಪೀಠಾಪುರಂ ಮಹಾರಾಜರ ಮೂರನೇ ಕುಮಾರಿ ಇವರಿಗೆ ಆಗಲೇ ಉಯ್ಯೂರ್ ಜಮೀನ್ದಾರರೊಡನೆ ವಿವಾಹವಾಗಿತ್ತು. ಹನ್ನೊಂದು ವರ್ಷದ ಬಾಲಕನೊಬ್ಬನಿದ್ದಾನೆ. ಆದರೆ ಜಮೀನ್ದಾರರೊಡನೆ ಈಚೆಗೆ ವಿವಾಹವಿಚ್ಛೇದನ ಮಾಡಿಕೊಂಡಳು. ಹಿಂದೂ ಶಾಸನದ ಪ್ರಕಾರ ವಿವಾಹ ವಿಚ್ಛೇದನಕ್ಕೆ ಅವಕಾಶವಿಲ್ಲದಿರುವ ಪ್ರಯುಕ್ತ, ಆಕೆಯು ಮೊದಲು ಮುಸಲ್ಮಾನ್ ಮತವನ್ನು ಅಂಗೀಕರಿಸಿದಳು. ಮದರಾಸ್ ನಗರದ ಸಿವಿಲ್ ಕೋರ್ಟಿನವರು, ವಿವಾಹ ವಿಚ್ಛೇದನಕ್ಕೆ ಅನುಮತಿ ಕೊಟ್ಟರು. ನಂತರ ಬೊಂಬಾಯಿನ ಬ್ರಹ್ಮ ಸಮಾಜದವರು ಆಕೆಯನ್ನು ಹಿಂದೂ ಸಂಸ್ಕಾರಗಳ ಮೂಲಕ ಹಿಂದೂ ಮತಕ್ಕೆ ವಾಪಸು ಸೇರಿಸಿದರು.

ಪರದೆಮೇಲೆ ಗಾಂಧಿ ಫೋಟೋ ಬೇಡ

ಒರಿಸ್ಸಾ ಸರ್ಕಾರದವರು 'ಅಪ್ನಾ ಘರ್' ಚಿತ್ರವನ್ನು ತಮ್ಮ ಪ್ರಾಂತ್ಯದಲ್ಲಿ ಪ್ರದರ್ಶಿಸಕೂಡದೆಂದು ನಿರ್ಬಂಧಿಸಿದ್ದ ಆಜ್ಞೆಯನ್ನು ಈಗ ಸಡಿಲಿಸಿ ಆ ಚಿತ್ರದಲ್ಲಿ ಗಾಂಧಿಜಿ ಫೋಟೋ ಕಾಣಿಸಿಕೊಳ್ಳುವ ಭಾಗಗಳನ್ನುಳಿದು ಮಿಕ್ಕ ಭಾಗ ಪ್ರದರ್ಶಿಸಲ್ಪಡಬಹುದೆಂದು ಅನುಮತಿಕೊಟ್ಟಿರುವರು

ಭೋಪಾಲ ನವಾಬರಿಗೆ ಛಾನ್ಸಲರ್ ಪದವಿ

ಛೇಂಬರ್ ಆಫ್ ಪ್ರಿನ್ಸೆಸ್‌ನ ಛಾನ್ಸಲರ್ ಪದವಿಗೆ ಭೋಪಾಲ್ ನವಾಬರು ಚುನಾಯಿತರಾಗಿರುವರೆಂದು ನವದೆಹಲಿಯಿಂದ ವರ್ತಮಾನ ಬಂದಿದೆ.

ದಿನಕ್ಕೆ ಒಂದೇ ಊಟ

ಅಲಹಾಬಾದಿನಲ್ಲಿ ಮಿಲಿಟರಿ ಕ್ಯಾಂಪ್ ಅವರಿಗೆ ಉಪಯೋಗವಾಗುತ್ತಿರುವ ಕಷ್ಟದ ಹಲವನ್ನು ತಪ್ಪಿಸುವ ಸಲುವಾಗಿ ಅಲ್ಲಿನ ನಿವಾಸಿಗಳು ಮುಂದಿನಗಳಲ್ಲಿ ದಿನಕ್ಕೆ ಒಂದು ಪ್ರದರ್ಶನಕ್ಕಿಂತ ಹೆಚ್ಚು ನಡೆಯದಂತೆ ಆಗಿದೆ

ಸ್ವಾತಂತ್ರ್ಯ ದಿನಾಚರಣೆಗೆ ನಿರ್ಬಂಧ

[ಸ್ವ. ವ.] ಬೆಂಗಳೂರು ೧೭

ಬೆಂಗಳೂರು ನಗರದಲ್ಲಿ ಸ್ವಾತಂತ್ರ್ಯ ದಿನಾಚರಣೆ ಸಂಬಂಧವಾಗಿ ಯಾವರೀತಿಯ ಪ್ರದರ್ಶನಗಳನ್ನು, ಸಭೆಗಳನ್ನೂ ನಡೆಸಕೂಡದೆಂದು ನಗರದ ಪೊಲೀಸ್ ಕಮೀಷನರು ಪ್ರತಿಬಂಧಾಜ್ಞೆ ಹೊರಡಿಸಿದ್ದಾರೆ. ಅಂಥ ಪ್ರದರ್ಶನಗಳನ್ನು ಪ್ರತಿಬಂಧಿಸಲು ಅಧಿಕಾರಿಗಳು ಕೈಗೊಳ್ಳುವ ಕಾರ್ಯಗಳನ್ನು ಸಹ ಯಾರೂ ಪ್ರತಿಭಟಿಸಕೂಡದೆಂದು ಆಜ್ಞೆಯಾಗಿದೆ. ಈ ಆಜ್ಞೆಗಳು ಮೊನ್ನೆಯಿಂದ ೧೫ ದಿನಗಳ ಕಾಲ ಜಾರಿಯಲ್ಲಿರುವುವು. ಈ ಆಜ್ಞೋಲ್ಲಂಘನಕ್ಕೆ ೩ ವರ್ಷ ಕಠಿಣ ಶಿಕ್ಷೆ ಅಥವ ಜುಲ್ಮಾನೆ ಅಥವಾ ಎರಡನ್ನೂ ವಿಧಿಸಲಾಗುವುದಾಗಿ ಗೊತ್ತಾಗಿದೆ.

ಅಕೆಡೆಮಿಕಲ್ ಕೌನ್ಸಿಲ್ ಸಭೆ

ಮೈಸೂರು ವಿಶ್ವವಿದ್ಯಾನಿಲಯದ ಅಕೆಡೆಮಿಕ್ ಕೌನ್ಸಿಲ್ ಸಭೆಯು ಯೂನಿವರ್ಸಿಟಿ ಕಛೇರಿಯಲ್ಲಿ ೨೩ ನೇ ತಾ॥ ಶನಿವಾರ ಮಧ್ಯಾಹ್ನ ೧೨ ಗಂಟೆಗೆ ಸೇರುವುದಾಗಿ ತಿಳಿದುಬಂದಿದೆ

ದ್ರಾವಕ ನುಂಗಿ ಆತ್ಮಹತ್ಯ

ಮೊನ್ನೆ ಬೆಂಗಳೂರಿನಲ್ಲಿ ದುಷ್ಟೆಡೆ ಎಂಬಾತ ಎಂಬುವನು ಪ್ರೀತಿಸುತ್ತಿದ್ದವರೊಬ್ಬರು ಮರಣಹೊಂದಿದ್ದಕ್ಕಾಗಿ ಯಾವುದೋ ದ್ರಾವಕ ಕುಡಿದು ಆಸ್ಪತ್ರೆಗೆ ಸಾಗಿಸಲ್ಪಟ್ಟು ಸತ್ತುಹೋದನು. ಪೊಲೀಸರು ತನಿಖೆ ನಡೆಸಿದರು

ಸ್ತ್ರೀ ಸಹವಾಸ ಪ್ರಜ್ಞೆ ಕೆಡಿಸಿತು

ಬೆಂಗಳೂರಿನ ಬೈಸಿಕಲ್ ವ್ಯಾಪಾರಿಯೊಬ್ಬನು ಕಳೆದ ನಾಲ್ಕು ದಿನಗಳಿಂದ ಚಿಕ್ಕಪೇಟೆಯ ಬಸ್ತಿ ಹೋಟೆಲ್ ಭವನದ ಕೊಠಡಿಯೊಂದರಲ್ಲಿ ಸ್ತ್ರೀಯೊಬ್ಬಳ ಜೊತೆಯಲ್ಲಿ ಕಾಲ ಕಳೆಯುತ್ತಿದ್ದು ಮೊನ್ನೆ ಪ್ರಜ್ಞೆ ತಪ್ಪಿ ಆಸ್ಪತ್ರೆಗೆ ಸಾಗಿಸಲ್ಪಟ್ಟಿದ್ದಾನೆ. ಆತನು ವಿಷಯುಕ್ತವಾದ ಮಾದಕ ಪದಾರ್ಥ ಸೇವಿಸಿರಬಹುದೆಂದು ಹೇಳಲಾಗಿದೆ. ಡಾಕ್ಟರುಗಳು ಚಿಕಿತ್ಸೆ ನಡೆಸುತ್ತಿರುವರು

ದಾವಣಗೆರೆ ಅಧ್ಯಾಪಕರಿಗೆ ಪಿ. ಹೆಚ್. ಡಿ.

ದಾವಣಗೆರೆಯ ಮಾಧ್ಯಮಿಕ ಶಾಲೆಯಲ್ಲಿ ಉಪಾಧ್ಯಾಯರಾಗಿರುವ ಶ್ರೀ ಕೆ. ಕೊಟ್ರಪ್ಪನವರು ಅಮೆರಿಕ ಇಂಟರ್‌ನ್ಯಾಷನಲ್ ಯೂನಿವರ್ಸಿಟಿಯವರು ಬಿ. ಎ. ಮತ್ತು ಪಿ. ಹೆಚ್. ಡಿ. ಎಂಬ ಪ್ರಶಸ್ತಿಗಳನ್ನು ಕೊಟ್ಟಿರುವರೆಂದು ತಿಳಿದುಬಂದಿದೆ

ಟಿ. ಸಿ. ನಟರಾಜ್

ಔಷಧಾಲಯ

ಇವರಲ್ಲಿ ನೇತ್ರಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ

ಆಸ್ಪತ್ರೆಗೆ ಬೇಕಾದ ಎಲ್ಲಾ ಇಂಗ್ಲೀಷ್ ಔಷಧಿಗಳೂ ಸದಾ ಶಾಲೆಯಲ್ಲಿಯೂ ದೊರೆಯುವುದಲ್ಲದೆ ಸಮಸ್ತ ವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸಬೂ ಚಾರ್ಜಿನಿಂದ ಮಾಡಲ್ಪಡುತ್ತದೆ

ಹೃದಯರೋಗ ಅಮೇರಿಕನ್ ಟಾನಿಕ್ ಮುಂತಾದವುಗಳೆಲ್ಲವೂ ಸದಾ ದೊರೆಯುತ್ತವೆ

ಕಾರ್-ಸೈಕಲ್ ಡಿಕ್ಕಿ-ಮರಣ

ಮೊನ್ನೆ ಸಂಜೆ ಬೆಂಗಳೂರು ಶೇಷಾದ್ರಿ ಮೆಮೋರಿಯಲ್ ಹಾಲ್ ಬಳಿ ೭೫ ವರ್ಷ ವಯಸ್ಸಿನ ಎಸ್. ಲಕ್ಷ್ಮಣರಾವ್ ಎಂಬುವರು ಸೈಕಲ್ ಮೇಲೆ ಹೋಗುತ್ತಿದ್ದಾಗ ಯಾಸಿನ್ ಸಾಹೇಬರಿಗೆ ಸೇರಿದ ಮೋಟಾರ್ ಕಾರೊಂದು ಅವರಿಗೆ ಡಿಕ್ಕಿ ಹೊಡೆಯಿತು. ಅವರಿಗೆ ಗಾಯಗಳಾದುವು. ಆಸ್ಪತ್ರೆಗೆ ಸಾಗಿಸಲಾಗಿ ಅಲ್ಲೀ ಅವರು ಮೃತಪಟ್ಟರು. ಮಹಜರ್ ನಡೆದು ಮುಂದಿನ ತನಿಖೆ ಜರುಗುತ್ತಿದೆ

ಭೂಮಿ ೩ ನಗರ ನುಂಗಿದೆ

ಅರ್ಜೆಂಟೈನಾದಲ್ಲುಂಟಾದ ಭೂಕಂಪದ ಫಲವಾಗಿ ಸಾನ್‌ಜುವಾನ್ ಮತ್ತು ಅದರ ಅಕ್ಕಪಕ್ಕದಲ್ಲಿದ್ದ ಎರಡು ನಗರಗಳು ಸಂಪೂರ್ಣವಾಗಿ ನಿರ್ನಾಮವಾಗಿವೆಯೆಂದು ತಿಳಿದುಬಂದಿದೆ.

ಮೊರಾಕೋದಲ್ಲಿ ಚರ್ಚಿಲ್

ಮೊರಾಕೊ ರಾಷ್ಟ್ರದ ಮಾರ್ಕೆಸ್ ಪಟ್ಟಣದಲ್ಲಿ ಬ್ರಿಟಿಷ್ ಪ್ರಧಾನಿ ಚರ್ಚಿಲರು ವಿಶ್ರಾಂತಿ ಹೊಂದುತ್ತಿರುವರು. ಅವರು ಈಗ ಸಂಪೂರ್ಣ ಗುಣಮುಖರಾಗಿದ್ದಾರೆ

ಜಪಾನರ ನೂತನ ಆಂಟಿ ಸಬ್‌ಮೆರೀನ್

ಜಪಾನರು ಮಿತ್ರ ಜಲಾಂತರ್ಗಾಮಿಗಳನ್ನು ಎದುರಿಸಲು ಹೊಸರೀತಿಯ ಹಡಗುಗಳನ್ನು ಉಪಯೋಗಿಸುತ್ತಿರುವರೆಂದೂ, ಇವು ಹಿಂದಿನವಕ್ಕಿಂತ ಅತ್ಯಂತ ಪ್ರಭಾವಶಾಲಿಯಾದ ಆಂಟಿ ಸಬ್‌ಮೆರೀನುಗಳೆಂದೂ ಟೋಕಿಯೊ ರೇಡಿಯೊ ಹೇಳಿದೆ

ಬೆಲೂನ್ ಬಾಂಬುಗಳು

ಜಿಂಗಳವಾಗಿ ಜರ್ಮನಿ ಮೇಲೆ ಅಮೆರಿಕ ವೈಮಾನಿಕರೂ, ಜರ್ಮನ್ ವೈಮಾನಿಕರೂ ಘರ್ಷಣೆ ನಡೆದಾಗ ಜರ್ಮನರು ಹೊಸದಾಗಿ ಕಂಡುಹಿಡಿದಿರುವ ಬೆಲೂನ್ ಬಾಂಬುಗಳನ್ನು ಅಮೆರಿಕ ವಿಮಾನಗಳನ್ನು ಬೆದರಿಸಲು ಉಪಯೋಗಿಸಿದರೆಂದು ಹೇಳಲಾಗಿದೆ. ಬೆಲೂನ್ ಬಾಂಬುಗಳನ್ನು ವಾಯು ಸಮುದ್ರದಲ್ಲಿರುವ ಮೈನ್‌ಗಳೆಂದೂ ಕರೆಯಲಾಗಿದೆ.

ಚಳಿಗಾಲ

ಅತ್ಯುತ್ತಮವಾದ ರಗ್ಗುಗಳಿಗೂ, ವುಲ್ಲನ್ ಕೋಟಿಂಗ್, ಕಂಬಳಿ ವಗೈರೆಗಳಿಗೂ ಎಲ್ಲೂ ಹುಡುಕಬೇಡಿ.

ನೇರವಾಗಿ ನಮ್ಮಲ್ಲಿಗೆ ಬನ್ನಿ. ಕಡಿಮೆ ಬೆಲೆಗೆ ಉತ್ತಮವಾದ ಸಾಮಾನು ಹೊಂದುವಿರಿ

ಜಿ. ವಿ. ಸೂರ್ಯನಾರಾಯಣ ಶೆಟ್ಟಿ ಅಂಡ್ ಸನ್ಸ್

ಜೂಯಲರ್ಸ್ & ರೆಡಿಮೇಡ್ ಡ್ರೆಸ್ ಎಂಪೋರಿಯಂ,

ಸಯ್ಯಾಜೀರಾವ್ ರೋಡ್, ಮೈಸೂರು.

Edited, printed and published by A. R. Nagarajan, at the Sadhvi Press, D.Subbiah Road, Mysore

ಅತ್ಮ ಕ್ಷೌರ ಬೇಡ

ಹೈದರಾಬಾದ್ ನಗರದ ನಾಯಿಂದರು ಒಂದು ಸಮ್ಮೇಳನ ನಡೆಸಿ ಸೇಫ್ಟಿ ರೇಜರ್‌ಗಳು ಪರದೇಶದಿಂದ ನಮ್ಮ ದೇಶಕ್ಕೆ ಬಾರದಂತೆ ತಡೆಗಟ್ಟಬೇಕೆಂದು ಸರ್ಕಾರವನ್ನು ಒತ್ತಾಯಪಡಿಸುವ ಠರಾವನ್ನು ಅಂಗೀಕರಿಸಿದ್ದಾರೆ. ಜನರು ತಾವೇ ಸ್ವಂತವಾಗಿ ಕ್ಷೌರಮಾಡಿಕೊಳ್ಳಲು ಅಭ್ಯಾಸಮಾಡಿರುವುದು ನಾಯಿಂದರ ಕಸುಬಿಗೇ ಧಕ್ಕೆ ಒದಗಿದೆಯೆಂದೂ ಅದ ಕಾರಣ ಸೇಫ್ಟಿ ರೇಜರ್‌ಗಳ ಆಮದು ನಿಂತರೆ ತಮಗೆ ಅನುಕೂಲವಾದೀತೆಂದೂ ಅವರು ನಿರ್ಧರಿಸಿ ಅದಕ್ಕಾಗಿ ಎಲ್ಲ ಕಾರ್ಯವನ್ನೂ ನಡೆಸಲು ತೀರ್ಮಾನಿಸಿದ್ದಾರೆ.

ಕರಾಚಿಗೆ ವಿದ್ಯುತ್ ದೀಪ ಇಲ್ಲದೆ ಹೋದೀತು

ಕರಾಚಿ ನಗರ ನಿವಾಸಿಗಳು ವಿದ್ಯುತ್ ದೀಪಗಳನ್ನು ಮಿತವಾಗಿ ಉಪಯೋಗಿಸಿಕೊಳ್ಳದಿದ್ದರೆ ಕರಾಚಿಗೆ ವಿದ್ಯುತ್ ಸರಬರಾಜೇ ಇಲ್ಲದಂತಾದೀತೆಂದೂ ಆ ಕಾರಣ ನಗರ ನಿವಾಸಿಗಳು ಜಾಗರೂಕರಾಗಿರಬೇಕೆಂದೂ ಅಧಿಕಾರಿಗಳು ಮನವಿ ಮಾಡಿಕೊಂಡಿದ್ದಾರೆ

ಉಪವಾಸ ಜಯಪ್ರದ

ಕಲ್ಕತ್ತಾದ ಕ್ಯಾಂಪ್‌ಬೆಲ್ ಮೆಡಿಕಲ್ ಶಾಲೆಯಲ್ಲಿ ಹಲವು ವಿದ್ಯಾರ್ಥಿಗಳನ್ನು ಹೊರದೂಡಿದ ಕಾರಣಕ್ಕಾಗಿ ಅದೇ ಶಾಲೆಯ ವಿದ್ಯಾರ್ಥಿನಿಯರು ೬ ದಿನಗಳ ಕಾಲ ಉಪವಾಸ ಮುಷ್ಕರ ನಡೆಸಿ ಅಧಿಕಾರಿಗಳು ಆ ಹುಡುಗರನ್ನು ವಾಪಸ್ಸು ಕರೆಸಿಕೊಳ್ಳುವುದಾಗಿ ಭರವಸೆ ಕೊಟ್ಟನಂತರ ಮುಷ್ಕರ ನಿಲ್ಲಿಸಿ ಆಹಾರ ತೆಗೆದುಕೊಂಡರು.

ಬೊಂಬಾಯಿ ಟೀಮಿಗೆ ಸೋಲು

ರಾಜಕೋಟೆಯಲ್ಲಿ ನಡೆದ ಪಶ್ಚಿಮ ಭಾರತದ ರಾಂಜಿ ಟ್ರೋಫಿ ಕ್ರಿಕೆಟ್ ಪಂದ್ಯದಲ್ಲಿ ವೆಸ್ಟರ್ನ್ ಇಂಡಿಯಾ ಸ್ಟೇಟ್ಸ್ ಟೀಮಿನವರು ಬೊಂಬಾಯಿ ಟೀಮಿನವರನ್ನು ಸೋಲಿಸಿದರು.

ಜಪಾನಿ ವಿಮಾನಗಳ ನಾಶ

ಮಾರ್ಷಲ್ ದ್ವೀಪದ ಮೇಲೆ ದಾಳಿ ನಡೆಸಲು ಬಂದ ಜಪಾನಿ ವಿಮಾನ ಪಡೆಯನ್ನು ಎದುರಿಸಿ ೧೫ ಶತ್ರು ವಿಮಾನಗಳನ್ನು ನಾಶಪಡಿಸಲಾಯಿತೆಂದು ವರದಿಯಾಗಿದೆ. ಇದಲ್ಲದೆ ೬ ಶತ್ರು ವಿಮಾನಗಳು ನಾಶಹೊಂದಿರಬಹುದೆಂದೂ, ಮಿತ್ರರ ೩ ವಿಮಾನಗಳು ವಾಪಸು ಬರಲಿಲ್ಲವೆಂದೂ ಹೇಳಲಾಗಿದೆ.

ಆಸ್ಟ್ರೇಲಿಯಾದಲ್ಲಿ ಕಾಡ್ಗಿಚ್ಚು

ಆಸ್ಟ್ರೇಲಿಯಾ ಖಂಡದ ವಿಕ್ಟೋರಿಯಾ ಪ್ರಾಂತ್ಯದಲ್ಲಿ ಕಾಡ್ಗಿಚ್ಚಿನ ಹಾವಳಿ ಹೆಚ್ಚಿ ೪ ಸಣ್ಣ ಊರುಗಳು ಉರಿದುಹೋಗಿವೆ. ೪೦೦ ಮನೆಗಳು ಹಾಳಾಗಿವೆ. ಸತ್ತವರ ಸಂಖ್ಯೆ ೩೦ ಕ್ಕೇರಿದೆ. ೩ ಕೋಟಿ ಸ್ಟರ್ಲಿಂಗ್ ನಷ್ಟವಾಗಿದೆ. ಸರ್ಕಾರದವರು ನೊಂದವರಿಗೆ ಸಹಾಯಮಾಡಲು ವ್ಯವಸ್ಥೆಗೊಳಿಸುತ್ತಿರುವರು

ಟೋಜೋ ಹೇಳಿಕೆ ಕೊಡುವರು

ಇದೇ ತಿಂಗಳು ೨೦ ನೇ ತಾ॥ ಜಪಾನ್ ಆಡಳಿತ ಮಂಡಲಿ ಸಭೆ ಸೇರುವುದು. ಆಗ್ಗೆ ಜಪಾನ್ ಪ್ರಧಾನಿ ಟೋಜೋರವರು ಒಂದು ಹೇಳಿಕೆ ಕೊಡುವರೆಂದು ಗೊತ್ತಾಗಿದೆ. ಟೋಕಿಯೋದಲ್ಲಿರುವ ಜರ್ಮನ್ ರಾಯಭಾರಿಯು ಜಪಾನ್ ವಿದೇಶಾಂಗ ಮಂತ್ರಿಗಳೊಡನೆ ಕಲೆತು ಅಂತರ ರಾಷ್ಟ್ರೀಯ ಸಂಸ್ಥಿತಿಯಲ್ಲಿ ಉಂಟಾಗುತ್ತಿರುವ ಬದಲಾವಣೆಗಳನ್ನು ಕುರಿತು ಚರ್ಚಿಸಿದರೆಂದು ತಿಳಿದುಬಂದಿದೆ.

ಯುದ್ಧ ಜಾಗ್ರತೆ ಮುಗಿಯಲಾರದು

ಶಾಂತ ಸಾಗರ ಯುದ್ಧದಲ್ಲಿ ವಿಜಯಗಳಿಸಲು ಹೆಚ್ಚು ಕಾಲ ಬೇಕಾಗುವುದಲ್ಲದೆ, ತುಂಬಾ ವೆಚ್ಚವೂ ಆಗಬೇಕಾಗುವುದು. ಯುದ್ಧವು ಜಾಗ್ರತೆ ಮುಗಿಯುವ ಸಂಭವ ಕಡಿಮೆ ಎಂದು ಅಮೆರಿಕಾ ನೌಕಾ ಕಾರ್ಯದರ್ಶಿ ಮಿ॥ ನಾಕ್ಸ್‌ರು ಹೇಳಿಕೆ ಕೊಟ್ಟಿರುವರು

ಬೈಸಿಕಲ್ ಬೆಲೆ ನಿಗದಿಯಿಲ್ಲ

ಬೈಸಿಕಲ್‌ಗಳನ್ನು ಒಂದು ಗೊತ್ತಾದ ಬೆಲೆಗೆ ಮಾರಬೇಕೆಂದು ಸರ್ಕಾರದ ಆಜ್ಞೆ ಹೊರಡಿಸಲಾಗಿದೆಯೆಂದು ಕಲ್ಕತ್ತಾ ಪತ್ರಿಕೆಗಳು ಪ್ರಕಟಿಸಿದ್ದನ್ನು ಕೇಂದ್ರ ಸರ್ಕಾರದ ಗಮನಕ್ಕೆ ತರಲಾಗಿ ಸರ್ಕಾರದವರು ಇನ್ನೂ ಅಂಥ ಆಜ್ಞೆ ಯಾವುದನ್ನೂ ತಾವು ಹೊರಡಿಸಿಲ್ಲವೆಂದು ತಿಳಿಸಿದ್ದಾರೆ

ಗೂಡ್ಸ್ ರೈಲ್ ಉರುಳಿತು

ನೈಜಾಮ್ ಸ್ಟೇಟ್ ರೈಲ್ವೆಗೆ ಸೇರಿದ ಗೂಡ್ಸ್ ರೈಲು ಗಾಡಿಯು ೧೬ ಬಂಡಿಗಳು ಮೊನ್ನೆ ಸಿಕಂದರಾಬಾದಿನಿಂದ ಘೋನ್ ಎಂಬಲ್ಲಿಗೆ ಹೊರಟು ಬರುತ್ತಿದ್ದಾಗ ಇಟಿಕೆಯಾಲ್ ಮತ್ತು ಮೋಸಾದ್ ನಿಲ್ದಾಣಗಳ ನಡುವೆ ಕಂಬಿ ತಪ್ಪಿ ಉರುಳಿಕೊಂಡಿತೆಂದು ವರದಿಯಾಗಿದೆ. ಈ ಅಪಘಾತದಿಂದ ಇತರ ರೈಲ್ ಗಾಡಿಗಳ ಓಡಾಟ ನಿಂತುಹೋಯಿತು.

ಸ್ತ್ರೀಯರ ಸೌಕರ್ಯಕ್ಕಾಗಿ

ತಾ॥ ೧-೧-೧೯೪೪ ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿರುತ್ತೆ

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿ ಪುಡಿ

ಯನ್ನೇ ಉಪಯೋಗಿಸಿ.

ಡಿ. ಪುಟ್ಟಯ್ಯ ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ನಂ ೨ ನಮ್ಮಲ್ಲಿ ಇಲ್ಲಿ ಮತ್ತು ಸಂತೆಪೇಟೆ ಹೆಡ್ ಆಫೀಸಿನಲ್ಲೂ ರವೆ, ಗೋಧಿಹಿಟ್ಟು ಮತ್ತು ಮೈದಾಹಿಟ್ಟು ಸಹ ದೊರೆಯುತ್ತೆ. ಅಲ್ಲದೆ ಬೂರಾ ಮತ್ತು ಸಕ್ಕರೆ ಸಕ್ಕರೆ ರೇಷನ್ ಕಾರ್ಡುಗಳಿಗೆ ದೊರೆಯುತ್ತನೆ.

ಸಂಪುಟ ೨] ಬುಧವಾರ ೧೯--೧--೪೪ [ಸಂಚಿಕೆ ೧೫೬

ಬಿಕ್ಕಟ್ಟನ್ನು ಪರಿಹರಿಸಲು ಮೈಸೂರಾಯರ ಯತ್ನ

ಯುದ್ಧ ಕರೆ ನಿರಾಕರಿಸಲು ಲಂಡನ್ ಭಾರತೀಯರ ನಿರ್ಣಯ

ಬ್ರಿಟನ್-ಜರ್ಮನಿಯ ಗುಪ್ತ ಸಂಧಾನದ ವದಂತಿ ಸುಳ್ಳು

ತಿರುವಾಂಕೂರು ಪ್ರಭುಗಳಿಗೆ ಬಿನ್ನವತ್ತಳೆ ಇಲ್ಲ

ಸ್ವಂ. ಸ.] ಮೈಸೂರು ೧೯

ಇದೇ ಮಾಹೆ ೨೦ ನೇ ತಾ॥ ರಾಜಧಾನಿಗೆ ಆಗಮಿಸುವ ತಿರುವಾಂಕೂರು ಪ್ರಭುಗಳಿಗೆ ಬಿನ್ನವತ್ತಳೆ ಅರ್ಪಿಸುವ ಉದ್ದೇಶ್ಯ ಪೌರಸಭೆಯ ವಿಶೇಷ ಸಭೆಯನ್ನು ಕರೆಯಬೇಕೆಂದು ಹಲವು ಸದಸ್ಯರು ಅಧ್ಯಕ್ಷರಿಗೆ ಬರೆದಿದ್ದರಷ್ಟೆ. ಅಧ್ಯಕ್ಷರು ಪ್ರಭುಗಳ ಕಾರ್ಯಕ್ರಮದಲ್ಲಿ ಬಿನ್ನವತ್ತಳೆಯನ್ನು ಸ್ವೀಕರಿಸಲು ಅವಕಾಶವಿಲ್ಲವಾಗಿ ಇದಕ್ಕಾಗಿ ಸಭೆ ಕರೆಯುವ ಅವಶ್ಯಕತೆ ಕಾಣುವುದಿಲ್ಲವೆಂದು ಉತ್ತರಿಸಿರುವರು.

ಸಂಸ್ಥಾನಿಕ ಹಿಂದೂ ಮಹಾ ಸಭೆ

ಸಂಸ್ಥಾನಗಳ ಹಿಂದೂ ಮಹಾ ಸಭಾ ಅಧಿವೇಶನವು ಬರುವ ತಿಂಗಳ ಕೊನೆಯ ವಾರದಲ್ಲಿ ಶಿವಮೊಗ್ಗದಲ್ಲಿ ಸೇರುವುದಾಗಿ ತಿಳಿದುಬಂದಿದೆ.

ಅಕ್ಷರ ಪ್ರಚಾರ ಸಮಿತಿ

ಶಿರಾದಲ್ಲಿ ಅಸಿಸ್ಟೆಂಟ್ ಇನ್ಸ್‌ಪೆಕ್ಟರಾಗಿ ಕೆಲಸ ಮಾಡುತ್ತಿದ್ದು ಅಕ್ಷರ ಪ್ರಚಾರದ ಬಗ್ಗೆ ಹೆಚ್ಚು ಆಸಕ್ತಿವಹಿಸಿ ಕೆಲಸಮಾಡುತ್ತಿದ್ದ ಶ್ರೀ ಎ. ಸಿ. ಅಣ್ಣಯ್ಯನವರನ್ನು ಸರ್ಕಾರದವರು ನೇಮಿಸಿದ್ದು ಅಕ್ಷರ ಪ್ರಚಾರ ಸಮಿತಿಗೆ ವಿಶೇಷ ವ್ಯವಸ್ಥಾಪಕ ಕಾರ್ಯದರ್ಶಿಯನ್ನಾಗಿ ನೇಮಿಸಿರುವರು.

ತಿರುಪತಿ ಯಾತ್ರಾರ್ಥಿಗಳಿಗೆ ಸೌಕರ್ಯ

ತಿರುಪತಿಯಲ್ಲಿ ಯಾತ್ರಾರ್ಥಿಗಳ ಸೌಲಭ್ಯಗಳಿಗಾಗಿ ಮತ್ತು ಗೃಹಗಳಿಗೆ ೧ ಲಕ್ಷ ರೂ. ಗಳನ್ನೂ ನೀರ್ಮಲೀಕರಣ-ದೀಪಗಳ ಸೌಕರ್ಯ ಇತ್ಯಾದಿಗಳಿಗೆ ೧ ಲಕ್ಷ ರೂ. ಗಳನ್ನೂ ದೇವಸ್ಥಾನದ ಸಮಿತಿಯವರು ಮಂಜೂರು ಮಾಡಿದ್ದಾರೆ. ತಿರುಪತಿ ಮೋಟಾರ್ ಬಸ್ಸಿಯ ಅಲಂಭಾವನೆಯನ್ನು ಗೌರ್ನರು ಮಾಡಲಿದ್ದಾರೆ.

ಹಂಗೇರಿ ಸಚಿವರ ಸಾವು ಸುಳ್ಳು

ಸ್ಟಾಕ್‌ಹೋಮ್. ವಿಮಾನಭಾಳಿಯಾಗಿ ಹಂಗೇರಿ ಸಚಿವರೊಬ್ಬರು ಸತ್ತರೆಂದು ಪ್ರಚುರವಾದ ಸುದ್ದಿ ನಿರಾಧಾರವಾದುದೆಂದೂ, ಅವರು ಸುರಕ್ಷಿತವಾಗಿರುವರೆಂದೂ ಬುಡಾಪೆಸ್ಟ್ ರೇಡಿಯೋ ಹೇಳಿದೆ.

ಬಿಕ್ಕಟ್ಟನ್ನು ಬಗೆ ಹರಿಸಲು ಮೈಸೂರಾಯರ ಯತ್ನ

ಈ ಬಾರಿ ಈ ಪ್ರಾಂತ್ಯದ ಆಹಾರ ಪರಿಸ್ಥಿತಿ ಸುಧಾರಿಸಿರುವುದಾಗಿ ವೈಸರಾಯರು ಭಾರತದ ರಾಜಕೀಯ ಪರಿಸ್ಥಿತಿ ಕಡೆ ತಮ್ಮ ಗಮನ ತಿರುಗಿಸಿರುವರೆಂದು ಹೇಳಲಾಗಿದೆ. ಈಗಾಗಲೇ ಅವರು ಸಪ್ರೂರವರ ಭೇಟಿ ಮಾಡಿದ್ದಾರೆ. ಮುಂದಿನ ವಾರ ಎನ್. ವಿ. ಜಿನ್ನಾರವರನ್ನೂ ಶ್ರೀ ಜಯಕರ್‌ರವರನ್ನೂ ಬೇಟಿಮಾಡುವರೆಂದು ಸಂಭವವಿದೆ. ಅಂತು ಕಾಂಗ್ರೆಸ್ಸಿನ ಕೆಲವರು ವರ್ಕಿಂಗ್ ಕಮಿಟಿಯವರನ್ನು ಅವರು ಭೇಟಿ ಮಾಡಿ ಸರ್ವಪಕ್ಷ ಸಭೆಯೊಂದನ್ನು ನಡೆಸಲು ಅವಕಾಶವಿತ್ತು ಕೇಂದ್ರದಲ್ಲಿ ಶಾಸನ ಸಭೆಯಲ್ಲಿ ಜವಾಬ್ದಾರಿಯುತವಾದ ಸರ್ಕಾರ ಸ್ಥಾಪನೆ ಬಗ್ಗೆ ಮುಖಂಡರನ್ನು ಒಪ್ಪಿಸಲು ಪ್ರಯತ್ನಿಸುವರೆಂದು ತಿಳಿಯುತ್ತದೆ.

೧,೮೦೦ ರೂ. ಧನಸಹಾಯ?

ಸ್ವಂ. ಸ.] ನಂಜನಗೂಡು, ೧೯

ಕಳೆದ ದಸರಾ ದ ಸಂದರ್ಭದಲ್ಲಿ ಏರ್ಪಟ್ಟ ಕೃಷಿ ಪ್ರದರ್ಶನದ ಸಂದರ್ಭದಲ್ಲಿ ಪ್ರದರ್ಶನಕ್ಕೆ ೧,೮೦೦ ರೂ. ಗಳ ಧನ ಸಹಾಯ ಮಾಡಬೇಕೆಂದು ಈ ಸಭೆಯ ಶ್ರೀ ಅರಸು ರವರು ಮನವಿ ಮಾಡಿದ್ದರು. ಸರ್ಕಾರ ಮಾಡಲಿದೆಯೆಂದೂ ಪೋಲೀಸರ ಕೆಲಸ ಬಿಜ್ಞಾನ ಸಾಧಿಸಿದ್ದಾರೆಂದೂ ತಿಳಿದುಬಂದಿದೆ.

ಪ್ಲೇಗ್ ಉಪದ್ರವ

ನಂಜನಗೂಡಿನ ನಾನಾ ಭಾಗಗಳಲ್ಲಿ ಕೆಲವು ದಿವಸಗಳಿಂದ ಪ್ಲೇಗ್ ಉಪದ್ರವವು ತಲೆದೋರಿದೆ. ಈ ಉಪದ್ರವವನ್ನು ತಡೆಗಟ್ಟಲು ಪುರಸಭೆಯ ಹೆಚ್ಚಿನ ವ್ಯವಸ್ಥೆ ನಡೆಯುತ್ತಿದೆ. ಈ ವ್ಯವಸ್ಥೆ ಕುರಿತು ಆರೋಗ್ಯ ಇಲಾಖೆ ಗಮನ ಕೊಡಬೇಕಾಗಿದೆ.

ನ್ಯೂ ಬ್ರಿಟನ್ನಿನಲ್ಲಿ ಅಮೆರಿಕನ್ ವಿಜಯ

ನ್ಯೂ ಬ್ರಿಟನ್ನಿನ ವ್ಹಾಲ್ಟರ್ ಭೂಶಿರದ ಪ್ರದೇಶದಲ್ಲಿ ಜಪಾನೀಯರ ೬೦೦ ಅಡಿ ಎತ್ತರದ ಒಂದು ಬೆಟ್ಟವನ್ನು ಅಮೆರಿಕನ್ ಸೈನ್ಯ ಸ್ವಾಧೀನಪಡಿಸಿಕೊಂಡಿವೆ.

ರಾಬೂಲ್ ಮೇಲೆ ಧಾಳಿ

ರಾಬೂಲ್ ಬಂದರಿನ ಮೇಲೆ ಮಿತ್ರರಾಷ್ಟ್ರ ವಿಮಾನಗಳ ಧಾಳಿ ನಡೆದಿದೆ. ಜಪಾನಿ ವಿಮಾನಗಳನ್ನು ನಾಶ ಮಾಡಲಾಗಿದೆ.

ಜ॥ ಕಾಟ್ರೋ ಬೇರತ್ತಿನಲ್ಲಿ

ಲೆಬನಾನ್ ರಾಜಧಾನಿ ಬೇರತ್ತಿಗೆ ಜ॥ ಕಾಟ್ರೋರವರು ಬಂದು ಹೊಸ ಲೆಬನಾನ್ ಸರ್ಕಾರವನ್ನು ಭೇಟಿಮಾಡಿರುವರೆಂದು ವರದಿಯಾಗಿದೆ.

ಜಪಾನಿ ವಿಮಾನ ದಾಳಿ

ಜಪಾನಿನಲ್ಲಿ ವಿಮಾನ ಶಕ್ತಿಯನ್ನು ಹೆಚ್ಚು ಹೆಚ್ಚು ಮಾಡಬೇಕೆಂದು ಜಪಾನ ಸರ್ಕಾರ ಕೋರಿದೆ ಎಂದು ಟೋಕಿಯೋ ರೇಡಿಯೋ ವರದಿಮಾಡಿದೆ.

ಆಂಗ್ಲೋ-ಜರ್ಮನ್ ಗುಪ್ತ ಮಾತುಕತೆ ಸುಳ್ಳು

ಪೆರ್ವಾ ಪ್ರಾವ್ಡಾ ಪತ್ರಿಕೆಯಲ್ಲಿ ಬ್ರಿಟನ್ ಮತ್ತು ಜರ್ಮನಿಗಳ ನಡುವೆ ಗೋಪ್ಯವಾಗಿ ಶಾಂತಿ ಮಾತುಕತೆ ನಡೆಸುತ್ತಿರುವರೆಂಬ ವರದಿಯನ್ನು ಸುಳ್ಳು ಕಟ್ಟುಕತೆಯೆಂದು ಬ್ರಿಟಿಷ್ ಸರ್ಕಾರದ ವಿದೇಶಾಂಗ ಕಛೇರಿ ಪ್ರಕಟಿಸಿದೆ.

ಬ್ರಿಟನ್ನಿನ ಭಾರತೀಯರನ್ನು ಸೇನೆಗೆ ಸೇರಿಸಕೂಡದು

ಗ್ರೇಟ್ ಬ್ರಿಟನ್ನಿನಲ್ಲಿರುವ ಭಾರತೀಯರನ್ನು ಬಲವಂತವಾಗಿ ಸೇನೆಗೆ ಸೇರಿಸುವ ಕಾನೂನನ್ನು ಬ್ರಿಟಿಷ್ ಸರ್ಕಾರವು ಭಾರತೀಯರನ್ನಾಗಲಿ ಬಿಡದೆ ಅವರಿಗೆ ಅನ್ವಯಿಸುವ ಕಾನೂನನ್ನು ಬ್ರಿಟನ್ನಿನಲ್ಲಿರುವ ಪ್ರತಿಯೊಬ್ಬ ಭಾರತೀಯರೂ ಪ್ರತಿಭಟಿಸಬೇಕೆಂದು ಲಂಡನ್ ನಲ್ಲಿ ಭಾರತೀಯರ ಸಭೆಯೊಂದು ನಿರ್ಣಯ ಮಾಡಿರುವರು. ನಿರ್ಣಯದ ಪ್ರತಿಗಳನ್ನು ಚರ್ಚಿಲ್, ಅಮೆರಿ, ಜೆ. ಗ್ರಿಗ್ ಮೊದಲಾದ ಬ್ರಿಟಿಷ್ ಅಧಿಕಾರಿಗಳಿಗೆ ಕಳಿಸಲಾಗಿದೆ.

ಐಸೆನ್‌ಹೋವರ್‌ರವರು ರೂಸ್‌ವೆಲ್ಟ್ ಮತ್ತು ಚರ್ಚಿಲ್‌ರನ್ನು ಕಂಡರು

ಜ॥ ಐಸೆನ್‌ಹೋವರ್‌ರವರು ನೂತನ ಪದವಿ ಸ್ವೀಕರಿಸುವ ಮುನ್ನ ಇಂಗ್ಲೆಂಡಿಗೆ ಹೋಗುವ ಮಾರ್ಗದಲ್ಲಿ ರೂಸ್‌ವೆಲ್ಟ್ ಮತ್ತು ಚರ್ಚಿಲ್‌ರವರನ್ನು ಕಂಡು ಮಾತುಕತೆ ನಡೆಸಿದರೆಂದು ತಿಳಿದುಬಂದಿದೆ.

ರಷ್ಯಾ-ಜರ್ಮನಿ ಕಾಳಗ

ಬಲ್ಟಿಕ್ ಸಮುದ್ರದ ಲೆನಿನ್‌ಗ್ರಾಡ್ ಪ್ರದೇಶದಲ್ಲಿ ರಷ್ಯನರಿಗೂ ಜರ್ಮನರಿಗೂ ಭಯಂಕರ ಯುದ್ಧ ನಡೆಯುತ್ತಿರುವುದಾಗಿ ತಿಳಿದುಬಂದಿದೆ.

ಗುಂಡ್ಲುಪೇಟೆ ಉಪಚುನಾವಣೆ

ಸ್ವಂ. ಪ್ರತಿನಿಧಿ ಮೂಲಕ ಗುಂಡ್ಲುಪೇಟೆ ತಾ॥ ನಿಂದ ಪ್ರತಿನಿಧಿ ಸಭೆಗೆ ನಡೆದ ಉಪ ಚುನಾವಣೆಯಲ್ಲಿ ಶ್ರೀ ಕೆಂಗಲ್ಲಯ್ಯನವರು ಅವಿರೋಧವಾಗಿ ಚುನಾಯಿತರಾಗಿರುವರೆಂದು ತಿಳಿದುಬಂದಿದೆ.

ಜಿಲ್ಲಾ ಬೋರ್ಡಿನ ಸಭೆ

ಮೈಸೂರು ೧೯

ಮೈಸೂರು ಜಿಲ್ಲಾ ಬೋರ್ಡಿನ ಸಭೆಯು ಈ ದಿನ ಮಧ್ಯಾಹ್ನ ೧೨ ಗಂಟೆಗೆ ಶ್ರೀ ಕೆ. ಸಿ. ಸುಬ್ಬಣ್ಣನವರ ಅಧ್ಯಕ್ಷತೆಯಲ್ಲಿ ಸೇರಿತ್ತು. ಡಿಸ್ಟ್ರಿಕ್ಟ್ ಫಂಡಿನಿಂದ ರೈಲ್ವೆ ಸೆಸ್ಸು ಫಂಡಿಗೆ ೧,೫೯,೫೦೦ ರೂ. ಜಮಾ ಮಾಡುವುದನ್ನು ಒಪ್ಪಲು ಸಾಧ್ಯವಿಲ್ಲವೆಂಬುದಾಗಿ ಸರ್ಕಾರದಿಂದ ಬಂದ ಪತ್ರವನ್ನು ರಿಕಾರ್ಡ್ ಮಾಡಲಾಯಿತು. ಫಾರೆಸ್ಟ್ ಮತ್ತು ಅಬ್ಕಾರಿ ಉತ್ಪತ್ತಿಯ ಮೇಲೆ ಲೋಕಲ್ ಸೆಸ್ಸನ್ನು ವಸೂಲಿ ಮಾಡುವಂತೆ ಕೇಳಿದ ವಿಚಾರದಲ್ಲಿ ಸರ್ಕಾರದಿಂದ ಬಂದ ಆರ್ಡರನ್ನು ರಿಕಾರ್ಡ್ ಮಾಡಲಾಯಿತು.

ಮಿಲಿಟರಿಯಲ್ಲಿರುವ ಲೋಕಲ್ ಫಂಡು-ಆಸ್ಪತ್ರೆಗೆ ಸೇರುವಂತೆ ಒಂದು ಮೆಟರ್ನಿಟಿ ಹೋಮನ್ನು ಕಟ್ಟಲು ಸಭೆಯು ಅನುಮತಿ ಕೊಟ್ಟಿತು. ಹುಣಸೂರು, ಬಿಳಿಕೆರೆ, ಪಿರಿಯಾಪಟ್ಟಣ ಮತ್ತು ಸಾಲಿಗ್ರಾಮಗಳಲ್ಲಿ ಒಂದೊಂದು ಮೆಟರ್ನಿಟಿ ಹೋಮನ್ನು ಕಟ್ಟಲು, ಬೋರ್ಡಿನ ಕೋಟಾ ಮೂರನೇ ಒಂದು ಭಾಗವನ್ನು ಕೊಡಬಹುದೆಂದು ತೀರ್ಮಾನಿಸಲಾಯಿತು.

ಚಾಮರಾಜನಗರದಲ್ಲಿ ಸ್ಥಾಪಿತವಾಗಿರತಕ್ಕ ಮುನಿಸಿಪಲ್ ಹೈಸ್ಕೂಲಿಗೆ ಬೋರ್ಡಿನವರು ೧೦ ಸಾವಿರ ರೂ. ಗ್ರಾಂಟನ್ನು ಕೊಡಬೇಕೆಂಬ ವಿಚಾರದಲ್ಲಿ ಚರ್ಚೆಯಾಗಿ, ಹಣದ ಅಭಾವದಿಂದ ಸಾಧ್ಯವಿಲ್ಲವೆಂದು ತೀರ್ಮಾನಿಸಲಾಯಿತು.

ಅಮೆರಿಕನರ ಮಧ್ಯಸ್ಥಿಕೆ

ರಷ್ಯಾ-ಪೋಲೆಂಡ್ ಗಡಿ ವ್ಯವಹಾರದ ಬಗ್ಗೆ ಅಮೆರಿಕನರು ಮಧ್ಯಸ್ಥಿಕೆಮಾಡಿ ಉಭಯತ್ರರಿಗೂ ಸಮಾಧಾನ ಉಂಟುಮಾಡಲು ಸಿದ್ಧರಿರುವುದಾಗಿ ಅಮೆರಿಕದಲ್ಲಿರುವ ರಷ್ಯನ್ ರಾಯಭಾರಿಗಳು ಮಾಸ್ಕೋವಿಗೆ ವಾರ್ತೆ ಕಳುಹಿಸಿರುವರು.

ಜರ್ಮನ್ ವಿಮಾನಬಲ ಅತ್ಯಧಿಕ

ಹಿಂದಿನವುಗಳಿಗಿಂತ ಈಗ ಜರ್ಮನರ ವಿಮಾನ ಬಲವು ಅತ್ಯಧಿಕವಾಗಿದೆಯೆಂದೂ ಆದಕಾರಣ ಜರ್ಮನಿಯ ಕೊನೆಯವರೆಗೂ ಕಾದಾಡುವರೆಂದೂ ಅಮೆರಿಕಾ ವಿಮಾನ ದಳಗಳ ಮುಖಂಡರಾದ ಜ॥ ಹೆನ್ರಿ ಆರ್ನಾಲ್ಡ್ ಹೇಳಿರುವರು.

ಮಾನವನು ಹಂದಿ ವಂಶಕ್ಕೆ ಸೇರಿದವನೆ?

ಮಾನವನು ಕೋತಿ ವಂಶಕ್ಕೆ ಸೇರಿದವನೆಂದು ಹೇಳುವ ಡಾರ್ವಿನ್ ತತ್ವಕ್ಕೆ ವಿರೋಧವಾಗಿ ಮುಸಲ್ಮಾನ್ ಪ್ರೆಸಿಡೆನ್ಸಿ ಕಾಲೇಜಿನ ಪ್ರಾಣಿ ಶಾಸ್ತ್ರ ಪ್ರೊಫೆಸರ್ ಡಾ॥ ರಾಮಾನುಜಂರವರು ಒಂದು ಹೊಸ ತತ್ವವನ್ನು ಕಂಡು ಹಿಡಿದು ಮಾನವನು ಹಂದಿ ವಂಶದವನೆಂದು ಸಾಧಿಸಿರುವರು.

ಬಂಗಾಳ ಕ್ಷಾಮ ಮತ್ತಷ್ಟು ಹೆಚ್ಚುತ್ತಿದೆ

ಬಂಗಾಳದಲ್ಲಿ ಈ ಸಾರಿ ಭತ್ತ ಬೆಳೆ ಚೆನ್ನಾಗಿ ಬಂದಿದ್ದರೂ ಕ್ಷಾಮ ನೀಗುವ ಹಾಗಿಲ್ಲ. ಕ್ಷಾಮ ಮತ್ತಷ್ಟು ಉಗ್ರರೂಪವನ್ನು ತಾಳುವ ಸಂಭವವಿದೆಯೆಂದು ಒಂದು ಸ್ಟೇಟ್ಸ್‌ಮನ್ ಪತ್ರಿಕೆಯ ವರದಿಗಾರರು ಆಯಾ ಸ್ಥಳಗಳಿಂದ ವರದಿ ಮಾಡಿರುವುದಾಗಿ ತಿಳಿದುಬಂದಿದೆ.

ಇಂಜಕ್ಷನ್ ಅರ್ಜಿ ವಜಾ

ಸ್ವಂ. ವ.] ಬೆಂಗಳೂರು [illegible]

ಬೆಂಗಳೂರು ನಗರ ಸಭಾ ಸದಸ್ಯರಾದ ಶ್ರೀ ಎಂ. ವಿ. ಗೋಪಾಲಸ್ವಾಮಿ ಅಯ್ಯಂಗಾರ್ಯರ ಮೇಲೆ ಶ್ರೀ ಸಿ. ಕೃಷ್ಣರಾಯರು [illegible] ಅರ್ಜಿಯನ್ನು [illegible] ಇನ್ನೂ [illegible] ನಾಳೆ ನಡೆಯುವ ಪೌರಸಭಾಧ್ಯಕ್ಷ ಚುನಾವಣೆಗೆ ಶ್ರೀ ಗೋಪಾಲಸ್ವಾಮಿ ಅಯ್ಯಂಗಾರ್ಯರು [illegible] ಅವರ ಮೇಲೆ 'ಇಂಜಂಕ್ಷನ್' [illegible] ಶ್ರೀ ಕೃಷ್ಣರಾಯರು [illegible] ಅರ್ಜಿ ಹಾಕಿಕೊಂಡಿದ್ದರು. ನಿನ್ನೆ ಆ ಬಗ್ಗೆ [illegible] ಅರ್ಜಿಯನ್ನು [illegible] ವಜಾ ಮಾಡಿದರು.

ಶ್ರೀ ಮೊಹರೆ ಹನುಮಂತ ರಾಯರಿಗೆ ಸತ್ಕಾರ

ಹುಬ್ಬಳ್ಳಿಯ 'ಸಂಯುಕ್ತ ಕರ್ನಾಟಕ' ಪತ್ರಿಕಾ ಸಂಪಾದಕರಾದ ಶ್ರೀ ಮೊಹರೆ ಹನುಮಂತರಾಯರಿಗೆ ಬೆಂಗಳೂರಿನ ಹಲವು ಪತ್ರಿಕೋದ್ಯೋಗಿಗಳು ನಿನ್ನೆ "ಇಂಡಿಯನ್ ಎಕ್ಸ್‌ಪ್ರೆಸ್" ಕಛೇರಿಯಲ್ಲಿ ಸತ್ಕಾರ [illegible] ಏರ್ಪಡಿಸಿದ್ದರು. ಆ ಸಮಯದಲ್ಲಿ ಅವರು ಭಾಷಣ ಮಾಡಿ, ಅಖಿಲ ಭಾರತ ವೃತ್ತ ಪತ್ರಿಕಾ ಸಂಪಾದಕ ಮಂಡಲಿಗೆ ಸಂಸ್ಥಾನಗಳಲ್ಲಿರುವವರು ಸದಸ್ಯರಾಗಲು [illegible] ವಿವರಿಸಿದರು. ಅಸೋಸಿಯೇಟೆಡ್ ಸದಸ್ಯರಾಗುವುದರಿಂದ ಪ್ರಯೋಜನವುಂಟೆಂದು ತಿಳಿಸಿ ಸಂಸ್ಥಾನಗಳ ಪತ್ರಿಕೆಗಳ ವಿಚಾರದಲ್ಲಿ [illegible] ಸಂಪೂರ್ಣವಾದ ಸಹಾನುಭೂತಿಯಿದೆಯೆಂದು ಹೇಳಿದರು.

ಇಂದು ರಾತ್ರಿ ಶ್ರೀ ಮೊಹರೆಯವರು ಹುಬ್ಬಳ್ಳಿಗೆ ಪ್ರಯಾಣಮಾಡಿದರು.

ಹಿಂದೀ ಪ್ರಮಾಣ ಪತ್ರ ವಿನಿಯೋಗ

ರಿಯಾಸತ್ ಹಿಂದೀ ಪ್ರಚಾರ ಸಮಿತಿ [illegible] ಇಂದು ಸಂಜೆ ಶ್ರೀ [illegible] ಸುಂದರ್‌ಸ್ವಾಮಿ [illegible] ಪುಟ್ಟಣ್ಣಶೆಟ್ಟಿ ಟೌನ್ ಹಾಲ್ ಭವನದಲ್ಲಿ ಹಿಂದೀ ಪ್ರಮಾಣ ಪತ್ರ ವಿತರಣೋತ್ಸವವನ್ನು ಆಗಮಾಡಿದರು. ಶ್ರೀಮತಿ ಬೇಗಂ [illegible] [illegible] ಹಿಂದಿಯಲ್ಲಿ ಭಾಷಣಮಾಡಿದರು.

ಸ್ವಹಸ್ತದ ನೋಟೀಸ್

ಮೈಸೂರು [illegible] [illegible] ನಂಬರ್ [illegible] ನನ್ನ [illegible] ಪುಟ್ಟಮ್ಮನವರಿಗೆ [illegible] ಅವರಿಂದ ನನಗೂ ನನ್ನ [illegible] ಮಕ್ಕಳು [illegible] ಅವರಿಗೂ [illegible] [illegible] ಅವರ [illegible] ಉಪಯೋಗ [illegible] ಎಂದು [illegible] ತಿಳಿಸಿದೆ.

[Sd] ಪುಟ್ಟಣ್ಣ
(ನನ್ನ [illegible] ಮೈಸೂರು [illegible])

ಲೋಕಲ್ ಸರ್ವಿಸ್ ಪರೀಕ್ಷೆ ಫಲಿತಾಂಶ

ಸ್ವಂ. ವ.] ಬೆಂಗಳೂರು [illegible]

ಅಕೌಂಟ್ಸ್ ಹೈಯ್ಯರ್:—ಬೆಂಗಳೂರು ಕೇಂದ್ರ [illegible] (ಪ್ರಥಮ ವರ್ಗ) [illegible] ಚಿಕ್ಕಮಗಳೂರು ಕೇಂದ್ರ [illegible], ಚಿತ್ರದುರ್ಗ ಕೇಂದ್ರ [illegible], ಹಾಸನ ಕೇಂದ್ರ [illegible], ಕೋಲಾರ ಕೇಂದ್ರ [illegible], ಮಂಡ್ಯ ಕೇಂದ್ರ [illegible], ಮೈಸೂರು ಕೇಂದ್ರ [illegible], ಶಿವಮೊಗ್ಗ ಕೇಂದ್ರ [illegible], ತುಮಕೂರು ಕೇಂದ್ರ [illegible].

ಪೌರಸಭೆ ಮತ್ತು ಲೋಕಲ್ ಬೋರ್ಡ್:—ಬೆಂಗಳೂರು ಕೇಂದ್ರ [illegible], ಚಿಕ್ಕಮಗಳೂರು ಕೇಂದ್ರ [illegible], ಹಾಸನ ಕೇಂದ್ರ [illegible], ಕೋಲಾರ ಕೇಂದ್ರ [illegible], ಮೈಸೂರು ಕೇಂದ್ರ [illegible], ಶಿವಮೊಗ್ಗ ಕೇಂದ್ರ [illegible].

ಮುಜರಾಯಿ:—ಬೆಂಗಳೂರು ಕೇಂದ್ರ [illegible], ಚಿಕ್ಕಮಗಳೂರು ಕೇಂದ್ರ [illegible], ಹಾಸನ ಕೇಂದ್ರ [illegible], ಕೋಲಾರ ಕೇಂದ್ರ [illegible], ಮಂಡ್ಯ ಕೇಂದ್ರ [illegible], ಮೈಸೂರು ಕೇಂದ್ರ [illegible], ಶಿವಮೊಗ್ಗ ಕೇಂದ್ರ [illegible], ತುಮಕೂರು ಕೇಂದ್ರ [illegible].

ಎಕ್ಸೈಸ್:—ಬೆಂಗಳೂರು ಕೇಂದ್ರ [illegible], ಹಾಸನ ಕೇಂದ್ರ [illegible], ಕೋಲಾರ ಕೇಂದ್ರ [illegible], ಮಂಡ್ಯ ಕೇಂದ್ರ [illegible], ಮೈಸೂರು ಕೇಂದ್ರ [illegible], ಶಿವಮೊಗ್ಗ ಕೇಂದ್ರ [illegible], ತುಮಕೂರು ಕೇಂದ್ರ [illegible].

Edited, printed and published by A. R. Nagarajan, at the Sadhvi Press, D. Subbiah Road, Mysore.

FROM 20-1-44
THE HUNCH BACK OF NOTRE DAME
[illegible] 3 [illegible]
[illegible]
[illegible] 20-1-44 [illegible]
ಚಾರ್ಲ್ಸ್ ಲಾಫ್ಟನ್, ಸರ್ ಸೆಡ್ರಿಕ್ ಹಾರ್ಡ್‌ವಿಕ್, ಥಾಮಸ್ ಮಿಚೆಲ್, ಮೊದಲಾದವರು ಪಾತ್ರವಹಿಸಿರುವ
'ದಿ ಹಂಚ್ ಬ್ಯಾಕ್ ಆಫ್ ನಾಟ್ರೆಡೇಮ್'

ಕ್ಯಾಟಲಿನಿಯಾ ನೌಕೆ ನಾಶ

ವಿತ್ರ ಪಕ್ಷಕ್ಕೆ ಸೇರಿದ ಕ್ಯಾಟಲಿನಿಯಾ ನೌಕೆಯು ನ್ಯೂ ಫೌಂಡ್‌ಲ್ಯಾಂಡ್ ನೌಕಾ [illegible] ಸಾವಿರ ಟನ್ನಿನ ಮತ್ತು [illegible] ಸಾವಿರ ಟನ್ನಿನ [illegible] ನೌಕೆಗಳಿಗೆ ಬೆಂಕಿ ಇಟ್ಟು ಉಂಟು ವಿನಾಶಮಾಡಿತೆಂದು ತಿಳಿದುಬಂದಿದೆ.

ವಿತ್ರ ಸ್ಥಾನಗಳ ಮೇಲೆ ಶತ್ರು ಧಾಳಿ

[illegible] ವಿತ್ರ ಸ್ಥಾನಗಳ ಮೇಲೆ [illegible] ಮತ್ತು [illegible] ಬಾಂಬರ್ [illegible] ನಿನ್ನೆ ಮತ್ತೆ ಧಾಳಿ ನಡೆಸಿದುವೆಂದು ತಿಳಿದು ಬಂದಿದೆ.

ನಾಶವಾಗದ ವಿನಿಯೋಗಗಳು

ಬಂಗಾರ, ಬೆಳ್ಳಿ, ಆಭರಣಗಳು ಅಥವಾ ಕೂಡಿ ಹಾಕಿದ ಸಾಮಾನುಗಳನ್ನು ಯಾವ ಕುಟುಂಬವು ಇಟ್ಟುಕೊಂಡಿರುತ್ತದೋ ಅದಕ್ಕೆ ಸದಾ ಭೀತಿಯಿರುತ್ತದೆ, ಕಳ್ಳರು ಮತ್ತು ಬೆಂಕಿಯ ಭಯ ಈ ಐಶ್ವರ್ಯವನ್ನು ಬಾಧಿಸುತ್ತದೆ. ಬಳಕೆಯಿಂದ ಬಂಗಾರ ಮತ್ತು ಬೆಳ್ಳಿ ಸವೆದುಹೋಗುತ್ತದೆ. ಇವೆಲ್ಲಕ್ಕೂ ಹೆಚ್ಚಾಗಿ ಸಾಮಾನುಗಳ ಬೆಲೆ ಅಮೂಲ್ಯ ಲೋಹಗಳು, ಅಮೂಲ್ಯ ಹರಳು ಕಲ್ಲುಗಳು, ಆಸ್ತಿಪಾಸ್ತಿ ಮತ್ತು ತಯಾರಾದ ಸಾಮಾನುಗಳು - ಇವುಗಳ ಬೆಲೆ ಈಗ ಮಿತಿಮೀರಿ ಹೆಚ್ಚಾಗಿದ್ದು ಯಾವ ಕ್ಷಣದಲ್ಲಿ ಯಾಗಲೀ ನೀವು ಹಾಕಿದ ಹಣದ ಬಹು ಭಾಗವು ಅನಿರೀಕ್ಷಿತವಾಗಿ ಮಾಯವಾಗಬಹುದು.

ಮುಂಬರುವ ದಿನಗಳಿಗಾಗಿ ಕೂಡಿಡಿ

ಯುದ್ಧಸಮಯದಲ್ಲಿ ಅತಿ ಸುರಕ್ಷಿತವಾದ ಕೂಡಿಡುವಿಕೆಯು ನಗದ ವಿನಿಯೋಗಗಳಲ್ಲದೆ — ಈ ವಿನಿಯೋಗಗಳು ಮುಂದೆ ನೀವು ಹಾಕಿದಷ್ಟೇ ರೂಪಾಯಿಗಳನ್ನು ದಯಾ ಹಿಂತಿರುಗಿ ಕೊಡುವುವಲ್ಲದೆ, ವಿಜಯ ಲಭಿಸಿದೊಡನೆ ಧಾರಣೆಗಳು ಹತೋಟಿಗೆ ಬಂದು ನೀವು ಆಗ ವೆಚ್ಚ ಮಾಡುವ ಹಣಕ್ಕೆ ಪೂರ್ಣ ಮೌಲ್ಯವು ದೊರಕುವಂತೆ ಮಾಡುವುವು.
ಈ ವಿನಿಯೋಗಗಳು ಸುರಕ್ಷಿತ.
★ ಸಹಕಾರ ಸಂಸ್ಥೆ
★ ವಿಮಾ ಪಾಲಿಸಿ
★ ಬ್ಯಾಂಕ್ ಸೇವಿಂಗ್ಸ್ ಬಿಲ್ಸು
★ ಪೋಸ್ಟ್ ಆಫೀಸ್ ಸೇವಿಂಗ್ಸ್ ಬ್ಯಾಂಕ್
ಅಥವಾ ಇವೆಲ್ಲಕ್ಕೂ ಉತ್ತಮವಾದುವು ಸರಕಾರಿ ಸಾಲಗಳು ಮತ್ತು ಸೇವಿಂಗ್ಸ್ ಸರ್ಟಿಫಿಕೇಟುಗಳು



ರಾಷ್ಟ್ರೀಯ ಯುದ್ಧ ಮುಖವನು ಬೇರಿಯರಿಗೆ ಮಾಡುವ ಮನ

[illegible] - 197 [illegible]

೨೧ ನೇ ತಾ|| ರಜ

ಸ್ವಂ. ಸು.] ಮೈಸೂರು ೨೦

ತಿರುವಾಂಕೂರು ಸಂಸ್ಥಾನಾಧೀಶರ ಆಗಮನದ ನಿಮಿತ್ತ ಇದೇ ೨೧ ನೇ ತಾ|| ರಾಜಧಾನಿಯ ಎಲ್ಲ ಸಾರ್ವಜನಿಕ ಮತ್ತು ಸರ್ಕಾರೀ ಕಛೇರಿಗಳಿಗೆ ರಜ ಕೊಡಲಾಗುವುದು.

ಚರ್ಚಾ ಸ್ಪರ್ಧೆ

ಬೆಂಗಳೂರಿನಲ್ಲಿ ಈ ತಿಂಗಳು ಕೊನೆಯಲ್ಲಿ ಮಿತ್ರ ಸಂಘದ ಆಶ್ರಯದಲ್ಲಿ ನಡೆಯಲಿರುವ ಅಖಿಲ ಕರ್ನಾಟಕ ಅಂತರ ಸಂಘಗಳ ಚರ್ಚಾ ಸ್ಪರ್ಧೆಯಲ್ಲಿ ಭಾಗವಹಿಸಲು ರಾಜಧಾನಿಯ ಸ್ಟಾರ್ ಸಂಘದ ಶ್ರೀಗಳಾದ ಹೆಚ್. ಕೆ. ಕುಮಾರಸ್ವಾಮಿ ಮತ್ತು ಡಿ. ಎಸ್. ರಂಗನಾಥರವರುಗಳು ಪ್ರತಿನಿಧಿಗಳಾಗಿ ಚುನಾಯಿತರಾಗಿದ್ದಾರೆ.

ಶಂಕರಪ್ಪ ಸ್ಮಾರಕ ಚರ್ಚಾ ಸ್ಪರ್ಧೆ

ಮೈಸೂರು ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ಇದೇ ಮಾಹೆ ೨೧ ನೇ ತಾ|| ಶುಕ್ರವಾರ ಸಂಜೆ ೬ ಗಂಟೆಗೆ ಡಿ. ಬನುಮಯ್ಯನವರ ಕಾಲೇಜಿನಲ್ಲಿ ನಡೆಯಲಿರುವ ಸ್ಪರ್ಧೆ ನಡೆಯಲಿದೆ. ಶ್ರೀ ಎಂ. ಲಕ್ಷ್ಮೀನಾರಾಯಣರಾವ್‌ರವರು ಅಧ್ಯಕ್ಷತೆ ವಹಿಸುವರು.

ಧನಾಪಹರಣೆ

ನಂಜನಗೂಡಿನ ಎಲೆಕ್ಟ್ರಿಕ್ ಆಫೀಸಿನಲ್ಲಿ ಗುಮಾಸ್ತರಾದ ಶ್ರೀ ರಾಮರಾಯರು ಸರ್ಕಾರದ ಹಣವನ್ನು ಅಪಹರಿಸಿರುವರೆಂದು ದೂರಿದ್ದರಿಂದ ದಸ್ತಗಿರಿಯಾಗಿದೆಯೆಂದು ನಿನ್ನೆ ಪ್ರಕಟಿಸಲಾಗಿದೆ. ಅಪಹರಿಸಿದ ಹಣವು ಸುಮಾರು ೮೦೦ ರೂ. ಎಂದು ಹೇಳಲಾಗಿದೆ.

ಫುಟ್ ಬಾಲ್

ನಿನ್ನೆ ಸಂಜೆ ದೊಡ್ಡಕೆರೆ ಮೈದಾನದಲ್ಲಿ ನಡೆದ ಎರಡು ಬಾರಿ ಡ್ರಾ ಆಗಿದ್ದ ಸುಬ್ಬಯ್ಯಶೆಟ್ಟಿ ಮೆಮೋರಿಯಲ್ ಫೈನಲ್ಸ್ ಪಂದ್ಯವು ರೋವರ್ಸ್ ಕ್ಲಬ್ಬಿಗೂ ಸ್ಟಾರ್ ಸ್ಪೋರ್ಟಿಂಗ್ ಕ್ಲಬ್ಬಿಗೂ ನಡೆದು ಎರಡು ಕಡೆಯವರೂ ೧-೧ ಗೋಲುಗಳನ್ನು ಹೊಡೆದದ್ದರಿಂದ ಪುನಃ ಡ್ರಾ ಆಯಿತು.

ವಿದೇಶಿ ವಸ್ತ್ರ ಪಕೋಟಿ

ವಿದೇಶಿ ವಸ್ತ್ರ ಇಟ್ಟುಕೊಂಡಿರುವವರು ಫೆಬ್ರವರಿ ೧೫ ನೇ ತಾರೀಖಿನೊಳಗೆ ಟೆಕ್ಸ್‌ಟೈಲ್ ಕಮೀಷನರಿಗೆ ಆ ವಸ್ತ್ರ ಪ್ರಮಾಣ ಕಳುಹಿಸಬೇಕೆಂದು ಆಜ್ಞಾಪಿಸಿ ಇಂಡಿಯಾದ ಲ್ಲಿರುವ ವಿದೇಶಿ ವಸ್ತ್ರಗಳನ್ನು ಪಕೋಟಿ ಮಾಡಲು ಭಾರತ ಸರ್ಕಾರದವರು ಆಜ್ಞೆಯೊಂದನ್ನು ಹೊರಡಿಸಿದ್ದಾರೆ.

ಕುದಿತ ಕಟ್ಟಿದ್ದಲ್ಲವಂತೆ

ಜೆಂಪ ಮಹಾನ ನಿರೀಕ್ಷೆ ಚಳವಳಿಯಲ್ಲಿ ಭಾಗವಹಿಸಿ ಸೆರೆ ಅನುಭವಿಸಿದ ಸೇಲಂನ ಶ್ರೀ ಎ. ವಿ. ರಾಮಸ್ವಾಮಿ ನಾಯಕರ್ ರವರು ಮೊನ್ನೆ ಸೇಲಂನಲ್ಲಿ ಭಾಷಣ ಮಾಡುತ್ತಾ ಕುದಿತವು ಕಟ್ಟಿದ್ದಲ್ಲ ಎಂದು ಹೇಳಿದರು.

ಸಪ್ರು-ವೇವಲ್ ಭೇಟಿ

ಲಾರ್ಡ್ ವೇವಲ್‌ರು ನಿನ್ನೆ ಬೆಳಿಗ್ಗೆ ೧೧ ಗಂಟೆಗೆ ವಿವರಾದ ಸಪ್ರುರವರ ಸಂದರ್ಶನವನ್ನು ಕೊಟ್ಟರು. ನಿನ್ನೆ ಸಂಜೆ ವೈಸರಾಯ್ ಭವನದಲ್ಲಿ ಸರ್ ತೇಜ್ ಬಹದ್ದೂರ್ ಸಪ್ರುರವರು ವೇವಲ್‌ರೊಡನೆ ಮಾತುಕತೆ ನಡೆಸಿದರೆಂದು ವರದಿಯಾಗಿದೆ

ಸಂಪುಟ ೨] ಗುರುವಾರ ೨೦—೧—೪೪ [ಸಂಚಿಕೆ ೧೫೭

ಪೋಲಿಷ್ ಸರ್ಕಾರದ ರಾಜೀನಾಮೆಯೇ ?

ಕಟುತರವಾದ ಯುದ್ಧ ಮುಂದೆ ಬರಲಿದೆ
ನಾಗಮಂಗಲದ ಗೃಹಕಲಹ ಕೊಲೆಯಲ್ಲಿ ಪರ್ಯವಸಾನ

ಕಟುತರವಾದ ಯುದ್ಧ ಮುಂದೆ ಬರಲಿದೆ

ಬರ್ಲಿನ್ ಮತ್ತು ಟೋಕಿಯೋ ನಗರಗಳನ್ನು ಆಕ್ರಮಿಸುವವರೆಗೂ, ಈ ಯುದ್ಧವು ಕೊನೆಯಾಗುವುದಿಲ್ಲವೆಂದೂ, ಫ್ಯಾಸಿಸ್ಟರ ಸೋಲು ಸನ್ನಿಹಿತವಾಗಿಲ್ಲ ಅತಿ ಕಟುತರವಾದ ಮಿಲಿಟರಿ ಕಾರ್ಯಾಚರಣೆಗಳು ಇನ್ನೂ ಮುಂದೆ ಇವೆ ಎಂದು ಶ್ರೀ|| ರೂಸ್‌ವೆಲ್ಟರು ಅಮೆರಿಕಾ ಕಾಂಗ್ರೆಸ್ಸಿನ ಯುದ್ಧ ಕಾಲದ ವಿಚಾರದಲ್ಲಿ ಮಾತನಾಡುತ್ತಾ ತಿಳಿಸಿದ್ದಾರೆ

ರಷ್ಯದಲ್ಲಿ ಜರ್ಮನರ ನಷ್ಟ

ಕಳೆದ ೭ ತಿಂಗಳಲ್ಲಿ ರಷ್ಯಾ ಸಮರದಲ್ಲಿ ಜರ್ಮನರು ೧೮೦೦ ವಿಮಾನಗಳನ್ನು ಕಳೆದುಕೊಂಡಿರುವರು ... ರಷ್ಯನರು ಹೇಳುತ್ತಾರೆ

ಬರ್ಮಾದಲ್ಲಿ ಮುನ್ನಡೆ

ಮಿತ್ರರಾಷ್ಟ್ರ ವಿಮಾನ ದಳಗಳು ಭಾರಿ ದಾಳಿ ನಡೆಸಿ ... ಬರ್ಮಾ ... ಎಂಬ ಪ್ರದೇಶಗಳನ್ನು ವಶಪಡಿಸಿಕೊಂಡಿರುವ ... ಸಫಲವಾಗಿದೆ

ನೇಪಾಲ್ಸ್ ಭತ್ತ ಭಾರತಕ್ಕೆ

ನೇಪಾಲ್ಸ್‌ನಿಂದ ಒಂದು ಲಕ್ಷ ಟನ್ ಭತ್ತವನ್ನು ಭಾರತಕ್ಕೆ ಕಳುಹಿಸಿಕೊಡಲು ಭಾರತ ಸರ್ಕಾರದವರು ನೇಪಾಲ್ಸ್ ಸರ್ಕಾರದೊಡನೆ ವ್ಯವಹಾರ ನಡೆಸಿ ತೀರ್ಮಾನಕ್ಕೆ ಬಂದಿರುವುದಾಗಿ ಗೊತ್ತಾಗಿದೆ

ರಷ್ಯನರ ರೀಗಾ ಪ್ರವೇಶ

ರಷ್ಯ ಯೋಧರು ಲಾಟ್ವಿಯಾದಲ್ಲಿ ರೀಗಾವನ್ನು ಪ್ರವೇಶಿಸಿ ನಗರದ ರೈಲ್ವೆ ಕೇಂದ್ರವನ್ನು ರೀಗಾ ನಗರದಲ್ಲಿ ಹೋರಾಡುತ್ತ ವಶಪಡಿಸಿಕೊಳ್ಳಲಾಗಿದೆಯೆಂದು ಮಾಸ್ಕೋ ರೇಡಿಯೋ ಹೇಳಿದೆ

ಹಾಳಾದ ರಷ್ಯಾ ನಿರ್ಮಿಸಲು ತಗಲುವ ಮಜೂರಿ

ಜರ್ಮನರಿಂದ ಹಾಳಾದ ರಷ್ಯದ ... ಗೊಳಪಡಿಸಬೇಕಾದರೆ ... ಪ್ರಸಿದ್ಧ ಅಧಿಕಾರ ... ರವರು ಹೇಳಿರುವರು

ಪೋಲಿಷ್ ಸರ್ಕಾರದ ರಾಜಿನಾಮೆಯೆ ?

ರಷ್ಯಾ ಮತ್ತು ಪೋಲೆಂಡಿನ ಬಿಕ್ಕಟ್ಟನ್ನು ಪರಿಹಾರವಾಗಿ ಸೌಹಾರ್ದದಿಂದ ಸಂಬಂಧವನ್ನು ಇಟ್ಟುಕೊಳ್ಳಬೇಕಾದರೆ ಈಗಿನ ಪೋಲಿಷ್ ಸರ್ಕಾರವು ರಾಜಿನಾಮೆ ಕೊಡಬೇಕಾಗುವುದೆಂದು ಲಂಡನ್ನಿನಲ್ಲಿ ವದಂತಿ ಹೊರಟಿದೆ. ಅದರೂ ಕೂಡ ಬ್ರಿಟಿಷ್ ಮತ್ತು ಅಮೆರಿಕಾ ಸರ್ಕಾರದವರ ಸಹಾಯದಿಂದ ಒಪ್ಪಂದ ಮಾಡಿಕೊಳ್ಳಬಹುದೆಂದು ಪೋಲಿಷರು ನಂಬಿದ್ದಾರೆ

ಅಮೆರಿಕನರ ಮುಂದೋಟ

ನ್ಯೂ ಬ್ರಿಟನ್ನಿನ ಅರಾವೆ ವಿಭಾಗದ ಜಪಾನ್ ಆಕ್ರಮಿತ ಪ್ರದೇಶದಲ್ಲಿ ಅಮೆರಿಕನರು ೧ ಸಾವಿರ ಗಜ ಮುಂದೆ ನುಗ್ಗಿರುವರೆಂದು ವಾರ್ತೆ ಬಂದಿದೆ

ಗಾರ್‍ಗ್ಲಿಯಾನೊ ದಾಟಿದರು

ಇಟಲಿ ರಣಾಂಗಣದಲ್ಲಿ ಹೋರಾಡುತ್ತಿರುವ ಬ್ರಿಟಿಷರ ೫ ನೇ ಸೇನೆ ಗಾರ್‍ಗ್ಲಿಯಾನೋ ನದಿಯನ್ನು ದಾಟಿದವಾಗಿ ವರ್ತಮಾನ ಬಂದಿದೆ

ಗಾಂಧೀಕಿ ಜೈ ಕೂಗನ್ನು ಕೇಳಕೂಡದು

'ಸಂ...' ಎಂಬ ಚಿತ್ರದಲ್ಲಿ ಮಹಾತ್ಮಾಜಿ ಫೋಟೋ ಮತ್ತು ಸುಭಾಷ್ ಚಂದ್ರ ಬೋಸರ ಫೋಟೋಗಳು ತೋರಿಬರುವ ಭಾಗವನ್ನೂ 'ಮಹಾತ್ಮಾಗಾಂಧೀಕಿ ಜೈ' ಎಂದು ಕೂಗುವ ಭಾಗವನ್ನೂ ತೆಗೆದುಹಾಕಿ ಉಳಿದ ಚಿತ್ರವು ಪ್ರದರ್ಶಿಸಲ್ಪಡಬಹುದೆಂದು ಸಂಯುಕ್ತ ಪ್ರಾಂತ ಗೌರ್ನರರು ಆಜ್ಞೆ ಮಾಡಿ ಇದ್ದಾರೆ

ಸ್ವಾತಂತ್ರ್ಯ ದಿನಾಚರಣೆಗೆ ಸಿಕ್ಕಿದ್ದ ಅವಕಾಶ ತಪ್ಪಿತು

ಅಹಮದಾಬಾದ್ ಜಿಲ್ಲಾ ಕಮ್ಯೂನಿಸ್ಟ್ ಪಕ್ಷದವರು ಜನವರಿ ೨೬ ನೇ ತಾ|| ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಬಹುದು. ಆದರೆ ಜಿಲ್ಲಾ ನ್ಯಾಯಾಧೀಶರು ... ಕೊಟ್ಟಿದ್ದ ಅನುಜ್ಞೆಯನ್ನು ... ವಾಪಸು ಪಡೆದಿರುವರೆಂದು ತಿಳಿದುಬಂದಿದೆ

ಬ್ರಿಟಿಷ್ ವಿರುದ್ಧ ಹಾಡಿಗೆ ತಡೆ

... ಸರ್ಕಾರದವರು ನಿಷೇಧಿಸಿರುವರು.

ಕುಟುಂಬ ಕಲಹದಲ್ಲಿ ಇಬ್ಬರ ಕೊಲೆ

ಸ್ವಂ.ಸು.] ಮೈಸೂರು ೨೦

ನಾಗಮಂಗಲದ ತಾಲ್ಲೂಕು ... ಗ್ರಾಮದಲ್ಲಿ ಸಿಂಗೇಗೌಡ ಎಂಬಾತನು ಮೊನ್ನೆ ಮಂಗಳವಾರ ತನ್ನ ಅಣ್ಣನಾದ ನಂಜೇಗೌಡ ಮತ್ತು ಆತನ ಹೆಂಡತಿ ಸಿಂಗಮ್ಮ ಮತ್ತು ೪ ಮಕ್ಕಳನ್ನು ಕುಟುಂಬದ ವಿಭಾಗದ ವಿಚಾರದಲ್ಲಿ ದೊಣ್ಣೆಯಿಂದ ಹೊಡೆದು ತೀವ್ರ ಗಾಯಪಡಿಸಿದನೆಂದೂ, ಅದರ ಪರಿಣಾಮವಾಗಿ ಸಿಂಗಮ್ಮ ಮತ್ತು ಆಕೆಯ ಹಿರಿಯ ಮಗು ಮರಣ ಹೊಂದಿದರೆಂದೂ, ವರದಿಯಾಗಿದೆ. ನಂಜೇಗೌಡ ಮತ್ತು ೩ ಮಕ್ಕಳನ್ನು ಈದಿನ ಮಧ್ಯಾಹ್ನ ಕೃಷ್ಣರಾಜೇಂದ್ರ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲು ಮಾಡಲಾಯಿತು. ಅವರ ಸ್ಥಿತಿ ಚಿಂತಾಜನಕವಾಗಿದೆ. ಸಿಂಗೇಗೌಡನ ಮೇಲೆ ಪೋಲೀಸರು ೩೦೨ನೇ ಸೆ|| ಪ್ರಕಾರ ಕೇಸು ರಿಜಿಸ್ಟರ್ ಮಾಡಿದ್ದಾರೆ.

ಅಖಿಲ ಭಾರತ ಸಂಗೀತ ಸಮ್ಮೇಳನ

ಬೊಂಬಾಯಿನಲ್ಲಿ ಜನವರಿ ೨೭ ನೆಯ ತಾ|| ನಡೆಯಲಿರುವ ಅಖಿಲ ಭಾರತ ಸಂಗೀತ ಸಮ್ಮೇಳನದಲ್ಲಿ ಮೈಸೂರಿನ ಪರವಾಗಿ ವೈಣಿಕ ಪ್ರವೀಣ ಶ್ರೀ ವಿ. ವೆಂಕಟಗಿರಿಯಪ್ಪನವರು ಪ್ರತಿನಿಧಿಗಳಾಗಿ ಹೋಗುವರೆಂದು ತಿಳಿಯಬರುತ್ತದೆ.

ವಾರ್ಷಿಕೋತ್ಸವ

ಮಹಾರಾಜಾ ಕಾಲೇಜಿನ ಫಿಲಾಸಫಿ ಅಸೋಸಿಯೇಷನ್ನಿನ ವಾರ್ಷಿಕ ಸಭೆಯು ನಾಳೆ ಸಂಜೆ ೬-೩೦ ಗಂಟೆಗೆ ಡಾ|| ಟಿ. ಎ. ಪುರುಷೋತ್ತಮ್‌ರವರ ಅಧ್ಯಕ್ಷತೆಯಲ್ಲಿ ನಡೆಯಲಿದೆ. ಶ್ರೀ ಮಾಧವಾಚಾರ್ಯರ ಭಾವಚಿತ್ರ ಅನಾವರಣ ಮಹೋತ್ಸವವೂ ನಡೆಯಲಿದೆ.

ಗಾಂಧಿ ಪುಸ್ತಕಕ್ಕೆ ನಿರ್ಬಂಧ

'ಎ ವರ್ಡ್ ಟು ಎವ್ವರಿ ಬ್ರಿಟನ್' ಎಂಬುದಾಗಿ ಮಹಾತ್ಮಾ ಗಾಂಧಿಯವರು ಬರೆದು ಪ್ರಕಟಿಸಿರುವ ಕಿರು ಪುಸ್ತಕವು ದಕ್ಷಿಣ ಆಫ್ರಿಕಾದಲ್ಲಿ ಮಾರಾಟವಾಗಕೂಡದೆಂದು ಪ್ರತಿಬಂಧಿಸಲಾಗಿದೆ

ಪೌರಸಭಾ ಉಪಾಧ್ಯಕ್ಷರು

ಮೈಸೂರು ೨೦

ಈ ದಿನ ಮಧ್ಯಾಹ್ನ ೪ ೩೦ ಗಂಟೆಗೆ ನಡೆದ ಮೈಸೂರು ಪೌರಸಭಾ ವಿಶೇಷ ಅಧಿವೇಶನದಲ್ಲಿ ಶ್ರೀ ಬಿ. ನಾರಾಯಣಸ್ವಾಮಿಯವರು ಪೌರ ಸಭೆಯ ಉಪಾಧ್ಯಕ್ಷರಾಗಿ ಚುನಾಯಿತರಾದರು

ಸರ್ವಾನುಮತದಿಂದ ಚುನಾಯಿತರಾದ ಶ್ರೀ ನಾರಾಯಣಸ್ವಾಮಿಯವರನ್ನು, ಶ್ರೀ ಪಿ. ಸೀತಾರಾಮಯ್ಯನವರು ಅಭಿನಂದಿಸಿ, ಭಾಷಣಮಾಡಿದರು. ಶ್ರೀ ನಾರಾಯಣಸ್ವಾಮಿಯವರು ಸಭೆಗೆ ತಮ್ಮ ಧನ್ಯವಾದಗಳನ್ನು ಸಲ್ಲಿಸಿದರು

ಅಲಹಾಬಾದಿನ ದಿವಂಗತ ಆರ್ ಎಸ್. ಪಂಡಿತರ ನಿಧನದ ಬಗ್ಗೆ ಅನುತಾಪವನ್ನು ಸೂಚಿಸುವ ನಿರ್ಣಯವೊಂದನ್ನು ಶ್ರೀ ಪಿ. ಸೀತಾರಾಮಯ್ಯನವರು ಸಭೆಯಲ್ಲಿ ಮಂಡಿಸಿದರು. ನಿರ್ಣಯವು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು

ಮುನಿಸಿಪಲ್ ಅಡ್ವೊಕೇಟ್

ಇನ್ನೊಂದು ಮೀಟಿಂಗ್‌ನಲ್ಲಿ ಶ್ರೀ ಎಂ. ರಂಗಯ್ಯನವರನ್ನು ಪೌರಸಭೆಯ ಅಡ್ವೊಕೇಟರಾಗಿ ...

ಬೆಂಗಳೂರು ನಗರ ಸಭೆ ಚುನಾವಣೆ

ಸ್ವಂ. ಸು.] ಬೆಂಗಳೂರು ೧೯

೧೯ರಲ್ಲಿ ನಡೆದ ಬೆಂಗಳೂರು ಪೌರ ಸಭೆ ಅಧ್ಯಕ್ಷ ಚುನಾವಣೆಯಲ್ಲಿ ಶ್ರೀ ಎಂ. ಎ. ಗೋಪಾಲಸ್ವಾಮಿ ಅಯ್ಯಂಗಾರ್‌ರವರು, ಶ್ರೀ [illegible] ಎನ್. ನರಸಿಂಹಯ್ಯನವರಿಗಿಂತ ಹೆಚ್ಚಾಗಿ ಓಟು ಪಡೆದು ಜಯಶಾಲಿಗಳಾಗಿದ್ದಾರೆ.

ಉಪಾಧ್ಯಕ್ಷತೆ

ಬೆಂಗಳೂರು ಪೌರಸಭೆಯ ಉಪಾಧ್ಯಕ್ಷ [illegible] ನಾಮಿನೇಷನ್ [illegible] ಶ್ರೀ [illegible] ಕಾಂಗ್ರೆಸ್ [illegible] ಕಾಂಗ್ರೆಸ್ ಪಕ್ಷದವರು [illegible] ಕಾಂಗ್ರೆಸ್‌ನ [illegible] ಶ್ರೀ [illegible] ಓಟುಗಳು ಪಡೆದು [illegible].

ಲಾರಿ ಸಂಚಾರಕ್ಕೆ ಅಡ್ಡಿ

ಬೆಂಗಳೂರು ನಗರದಲ್ಲಿ ಚಿಕ್ಕಪೇಟೆ, ದೊಡ್ಡಪೇಟೆ, ಅಲಸೂರುಪೇಟೆ, ಬಳೇಪೇಟೆ, ಅವೆನ್ಯೂ ರಸ್ತೆ ಮತ್ತು ಮಲ್ಲೇಶ್ವರ [illegible] ಕೆಲವು ರಸ್ತೆಗಳಲ್ಲಿ ಲಾರಿ ಮುತ್ತು [illegible] ಸಂಚರಿಸಕೂಡದೆಂದು ಪ್ರತಿಬಂಧಿಸಲಾಗಿದೆ. ಆರಳೇಪೇಟೆಯಲ್ಲೂ ಲಾರಿ ಸಂಚಾರಕ್ಕೆ ಅವಕಾಶವಿಲ್ಲ.

ಸರ್ ಸಿ. ಪಿ. ಬೆಂಗಳೂರಿಗೆ

ದಿಹಲಿಯಲ್ಲಿ ವೈಸರಾಯರನ್ನು ಕಂಡು ಮಾತುಕತೆ ಮುಗಿಸಿಕೊಂಡು ಸರ್ ಸಿ. ಪಿ. ರಾಮಸ್ವಾಮಯ್ಯರ್‌ರವರು ನಿನ್ನೆ ಸಂಜೆ ಬೆಂಗಳೂರಿಗೆ ವಾಪಸು ಬಂದರು.

Edited, printed and published by A. R. Nagarajan, at the Sadhvi Press, D.Subbiah Road, Mysore.

ಚಿಕ್ಕಮಗಳೂರು ಸುದ್ದಿ

ಸ್ವಂ.ಸು.] ಚಿಕ್ಕಮಗಳೂರು ೧೯

ಈ ಊರಿನ ಹಿಂದೂ ಮಹಾಸಭೆಯವರು ಇಲ್ಲಿನ ಕೋಟೆಯಲ್ಲಿ ಒಂದು ವ್ಯಾಯಾಮಶಾಲೆಯನ್ನು ತೆರೆದರು. ಈ ಸಮಾರಂಭಕ್ಕೆ ಸಭೆಯ ಮುಖಂಡರುಗಳು ದಯಮಾಡಿಸಿದ್ದರು.

ಇಲ್ಲಿನ ಡಿಸ್ಟ್ರಿಕ್ಟ್ ಆಫೀಸ್ ಹಾಲಿನಲ್ಲಿ ಸಂಸ್ಥಾನದ ಎಕನಾಮಿಕ್ ಕಮಿಷನರ್ ಆದ ಶ್ರೀ ಸಿ. ಬೆಚ್. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಸ್ಥಳೀಯ ಅಧಿಕಾರಿಗಳ ಮತ್ತು ಪ್ರಮುಖರುಗಳ ಸಭೆ ಸೇರಿ ಮಲೆನಾಡಿನ ಸಂಪದಭಿವೃದ್ಧಿ ವಿಚಾರದಲ್ಲಿ ಚರ್ಚೆ ನಡೆದು ತಕ್ಕ ಸಲಹೆಗಳು ಕೊಡಲ್ಪಟ್ಟವು.

ಈ ಊರಿನ ವಿದ್ಯಾಲಯದಲ್ಲಿ, ಕಾಫಿ ಪ್ಲಾಂಟರ್ ಶ್ರೀ ಮಂಜನಾಥಯ್ಯರ್‌ರ ಅಧ್ಯಕ್ಷತೆಯಲ್ಲಿ ಸ್ವಾಮಿ ವಿವೇಕಾನಂದರ ಪುಣ್ಯದಿನವು ಆಚರಿಸಲ್ಪಟ್ಟಿತು. ಶ್ರೀ ಟಿ. ಸೀತಾರಾಮಯ್ಯ, ಬಿ. ಕೆ. ನರಸಿಂಹಮೂರ್ತಿ, ಜಿ. ಆರ್. ಯಾಜಿ, ಎಸ್. ನಂಜುಂಡಯ್ಯ ಮತ್ತು ಕೃಷ್ಣಯ್ಯಶೆಟ್ಟರುಗಳು

ಸುರೇಶ ವೈದ್ಯರು ಕೋರ್ಟಿಗೆ ಹಾಜರಾಗಬೇಕು

ಭಾರತೀಯನಾದ ನಾನು ಸ್ವತಂತ್ರ ಭಾರತ ಸರ್ಕಾರದ ಕರೆ ಬಂದ ಹೊರತೂ ಸೇನೆಗೆ ಸೇರುವುದಿಲ್ಲವೆಂದು ತಿಳಿಸಿ ಬ್ರಿಟಿಷ್ ಸರ್ಕಾರದ ಕರೆಯುದ ಕರೆಯನ್ನು ನಿರಾಕರಿಸಿದ ಶ್ರೀ ಸುರೇಶ ವೈದ್ಯರನ್ನು ಲಂಡನ್ ಪೋಲೀಸ್ ಕೋರ್ಟಿಗೆ ಹಾಜರಾಗಿರೆಂದು ಬ್ರಿಟೀ ಸೇನಾ ಇಲಾಖೆಯವರು ಆಜ್ಞಾಪಿಸಿದ್ದಾರೆ.

ಸ್ವಾಮಿಯವರ ಜೀವನಚರಿತ್ರೆಯನ್ನೂ ಮತ್ತು ಅವರು ಹಿಂದೂಸ್ಥಾನದ ಕೀರ್ತಿಯು ಎಲ್ಲೆಲ್ಲಿಯೂ ವ್ಯಾಪಿಸುವಂತೆ ಮಾಡಿದ ಕೆಲಸಗಳನ್ನೂ ವಿವರಿಸಿ ನಾವುಗಳು ನಮ್ಮ ನಿತ್ಯಜೀವನದಲ್ಲಿ ಅವರನ್ನು ಹೇಗೆ ಅನುಸರಿಸಬೇಕೆಂಬ ವಿಚಾರದಲ್ಲಿ ಉಪನ್ಯಾಸಗಳನ್ನು ಮಾಡಿದರು. ವಿದ್ಯಾಲಯದ ಮುಖ್ಯೋಪಾಧ್ಯಾಯರಾದ ಮ॥ ಸೂರ್ಯನಾರಾಯಣರಾಯರು ಸಕಲರಿಗೂ ಧನ್ಯವಾದಗಳನ್ನು ಅರ್ಪಿಸಿದ ನಂತರ ಸಭೆಯು ಮುಕ್ತಾಯವಾಯಿತು.

ಈ ಊರಿನ ವಿದ್ಯಾಲಯಕ್ಕೆ ಈ ಡಿಸ್ಟ್ರಿಕ್ಟಿನ ಪ್ರಮುಖ ಕಾಫಿಪ್ಲಾಂಟರ್ ಆದ ಶ್ರೀ ಜಾನಳಿ ಗಣೇಶರಾಯರು ೧ ಸಾವಿರ ರೂಪಾಯಿಗಳನ್ನು ದಾನವಾಗಿ ಕೊಟ್ಟಿರುವರು.

ಚಳಿಗಾಲ

ಅತ್ಯುತ್ತಮವಾದ ರಗ್ಗುಗಳಿಗೂ, ಸ್ವೆಟರ್ ಕೋಟಿಂಗ್, ಕಂಬಳಿ ವಗೈರೆಗಳಿಗೂ ಎಲ್ಲೂ ಹುಡುಕಬೇಡಿ.

ನೇರವಾಗಿ ನಮ್ಮಲ್ಲಿಗೆ ಬನ್ನಿ. ಕಡಿಮೆ ಬೆಲೆಗೆ ಉತ್ತಮವಾದ ಮಾಲು ಹೊಂದುವಿರಿ.

ಜಿ. ವಿ. ಸೂರ್ಯನಾರಾಯಣ ಶೆಟ್ಟಿ ಅಂಡ್ ಸನ್ಸ್

ಜೂಯಲರ್ಸ್ & ರೆಡಿಮೇಡ್ ಡ್ರೆಸ್ ಎಂಪೋರಿಯಂ,

ಸಯ್ಯಾಜಿರಾವ್ ರೋಡ್, ಮೈಸೂರು.

ಅಪೇರಾ ಟಾಕೀಸ್

ಪ್ರತಿ ದಿನ 3 ಆಟಗಳು

ತಾ॥ 20-1-44 ರಿಂದ

ಚಾರಲ್ಸ್ ಲಾಫ್‌ಟೀ, ಸರ್ ಸೆಡ್ರಿಕ್ ಹಾರ್ಡ್‌ವಿಕ್, ಥಾಮಸ್ ಮೈಕಲ್ ಮಾರೀನ್ ಒಪೆರಾ ಪಾತ್ರವಹಿಸಿರುವ

ದಿ ಹಂಚ್ ಬ್ಯಾಕ್ ಆಫ್ ನಾಟ್ರೆಡೇಮ್

ಪ್ರಸಿದ್ಧ ಪತ್ರಿಕೆ

ಮೈಸೂರು ನಗರದ ನಿವಾಸಿಗಳಿಗೆ ತಿಳಿಯಪಡಿಸುವುದೇನೆಂದರೆ—

(1) ಈಗ ಜಾರಿಯಲ್ಲಿರುವ ರೇಷನಿಂಗ್ ಯೋಜನೆಯ ಪ್ರಕಾರ ಹಂಚಿಕೆಯಾಗಿರುವ ರೇಷನ್ ಕಾರ್ಡುಗಳಲ್ಲಿ ತಿಂಗಳಲ್ಲಿ 28 ದಿನಗಳಿಗೆ ಮಾತ್ರ ರೇಷನ್ ಸಮಾಧಿಸಿರುವುದು ಸರಿಯಷ್ಟೆ. ತಿಂಗಳಿಗೆ ಸರಾಸರಿ 30 ದಿನಗಳಂತೆ ಲೆಖ್ಖಹಾಕಿ ಈಗ ಕೊಟ್ಟಿರುವ ಪಡಿಭತ್ಯವನ್ನು ದೊಡ್ಡವರಿಗೆ ಅಕ್ಕಿ ತಿಂಗಳಿಗೆ 7 ಸೇರಿನಿಂದ $7\frac{1}{2}$ ಸೇರಿಗೂ, ಚಿಕ್ಕವರಿಗೆ $3\frac{1}{2}$ ಸೇರಿನಿಂದ $3\frac{3}{4}$ ಸೇರಿಗೂ [illegible] ಹೆಚ್ಚಿಸಿರುತ್ತೆ. "ಬಿ" ಕ್ಲಾಸು ಕಾರ್ಡುಗಳಲ್ಲಿ ದೊಡ್ಡವರಿಗೆ ರಾಗಿ 7 ಸೇರಿನಿಂದ $7\frac{1}{2}$ ಸೇರಿಗೂ, ಅಕ್ಕಿ $3\frac{1}{2}$ ಸೇರಿನಿಂದ $3\frac{3}{4}$ ಸೇರಿಗೂ ಮತ್ತು ಚಿಕ್ಕವರಿಗೆ ಮೇಲ್ಕಂಡ ಪರಿಮಾಣದಲ್ಲಿ ಅರ್ಧದಂತೆಯೂ ಹೆಚ್ಚಿಸಲಾಗಿರುತ್ತೆ. ರೇಷನ್ ಕಾರ್ಡುಗಳನ್ನು [illegible] ಡಿಪೋಗಳಲ್ಲಿ [illegible] ಡಿಪೋ ಮ್ಯಾನೇಜರುಗಳಿಂದ ಆಗತ್ಯವಾದ [illegible] ಲಾವಣೆಗಳನ್ನು ಮಾಡಿಸಿಕೊಳ್ಳತಕ್ಕದ್ದು.

(2) "ಬಿ" ಕ್ಲಾಸು ಕಾರ್ಡುಗಳುಳ್ಳವರಿಗೆ ಈಗ ಕೊಟ್ಟಿರುವ ಸಕ್ಕರೆ ಪ್ರಮಾಣವನ್ನು ಒಂದು [illegible] ಭಾಗಕ್ಕೆ ಇಳಿಸಿದೆ. ಅಂದರೆ ತಿಂಗಳಿಗೆ ಒಬ್ಬರಿಗೆ [illegible] ವೀಸೆ ಸಕ್ಕರೆ ಕೊಡುವ ಬದಲು [illegible] ವೀಸೆ ಸಕ್ಕರೆ ಕೊಡಲಾಗುತ್ತೆ.

ಆರ್. ರಾಮಚಂದ್ರರಾವ್
ಬೊಂಬೋ[illegible]
ರೇಷನಿಂಗ್ ಆಫೀಸರ್, ಮೈಸೂ[illegible]

ಬೆಳ್ಳಿ! ಅಚ್ಚು ಬೆಳ್ಳಿ! ಉಂಡೆ ಬೆಳ್ಳಿ!

ಎಲ್ಲಿ ದೊರೆಯುತ್ತೆ?

ಬೆಳ್ಳಿ ಒಟ್ಟುಗಳೂ, ಬೆಳ್ಳಿಗಳೂ [illegible] ಮೈಸೂರು ಸಂತೇಪೇಟೆ ಜಗನ್ಮೋಹನ ಪ್ಯಾಲೇಸ್ ರೋಡ್ ಚೌಕದಲ್ಲಿರುವ (೧೭೮-೧೭೯)

ಹಾಜಿ ಹಬೀಬ್ ಅಹಮದ್ ಮೂಸಾ ಸೇಟರಲ್ಲಿ ದೊರೆಯು[illegible]

ಸರ್ವದಾ ಕೊಳ್ಳಿರಿ!

Truthful READY MADE CLOTHES - MADURA -

ಏನನ್ನು?

ನವೀನ ಮಾದರಿಯಲ್ಲಿ ತಯಾರಿಸಿದ ನೈಜ ಕಾಂತ ರೆಡಿಮೇಡ್ ಬಟ್ಟೆಗಳನ್ನು

ಸ್ವಾಸ್ತಿಕ್ ಸ್ಟೋರ್ಸ್

ನಲ್ಲಿ ಕೊಳ್ಳಿರಿ.

ಎಲ್ಲ ವಿಧ ಆಳತೆಯ ಸ್ತ್ರೀಯರ ಮತ್ತು ಮಕ್ಕಳ ಉಡುಪು ತಯಾರಿಯಲ್ಲಿ ನುರಿತವರು.

ನಾಗಪ್ರಕಾಶ್ ಭವನ, ಮಾಡರ್ನ್ ಕೆಫೆ, ಮೈಸೂರು.

ಸ್ತ್ರೀಯರ ಸೌಕರ್ಯಕ್ಕಾಗಿ

[illegible] ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿದ್ದೇವೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿ ಪುಡಿ

ಯನ್ನೇ ಉಪಯೋಗಿಸಿ.

ಸಿ. ಪುಟ್ಟಣ್ಣಯ್ಯ ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

[illegible] ಇಲ್ಲಿನ ಮತ್ತು ಸಂತೆಪೇಟೆ ಹೆಡ್ ಆಫೀಸಿನಲ್ಲೂ ರವೆ, ಗೋಧಿಹಿಟ್ಟು ಮತ್ತು ಮೈದಾಹಿಟ್ಟು, ಸಹ ದೊರೆಯುತ್ತೆ. ಅಲ್ಲದೆ ಜೋಳ ಮತ್ತು ಕಳ್ಳು [illegible] ರೇಷನ್ ಕಾರ್ಡುಗಳಿಗೆ ದೊರೆಯುತ್ತವೆ.

ರೇಷನಿಂಗ್ ಸೌಕರ್ಯ

ಸರ್ಕಾರದವರು ರೇಷನಿಂಗ್ ಕಾರ್ಡುಗಳಿಗೆ ಪದಾರ್ಥಗಳನ್ನು ಚಾಮರಾಜಪೇಟೆ ನಮ್ಮ ಅಂಗಡಿಯಲ್ಲಿ ಮಾರಲು ಅವಕಾಶ ಕೊಟ್ಟಿರುತ್ತಾರೆ. ನಮ್ಮಲ್ಲಿ ಸದರಿ ಸಾಮಾನುಗಳನ್ನು ಪಡೆಯಲು ಇಷ್ಟವುಳ್ಳ ಮಹನೀಯರು ತಮ್ಮ ತಮ್ಮ ರೇಷನ್ ಕಾರ್ಡು ಸಮೇತ ನಮ್ಮಲ್ಲಿಗೆ ಜಾಗ್ರತೆ ಹಾಜರಾಗಿ ಅವರುಗಳ ಹೆಸರನ್ನು ರಿಜಿಸ್ಟರ್ ಮಾಡಿಸಬೇಕಾಗಿ ವಿನಂತಿ.

ಎಂ. ಎಸ್. ನಾಗಣ್ಣ ಅಂಡ್ ಸನ್ಸ್

೧೦೦ ಅಡಿ ರಸ್ತೆ, ಮೈಸೂರು.

ಸಂಪುಟ ೨] ಶುಕ್ರವಾರ ೨೧--೧--೪೪ [ಸಂಚಿಕೆ ೧೫೮

ಮದರಾಸಿನ ವಿದ್ಯಾರ್ಥಿ ಸಂಸ್ಥೆ ಅಕ್ರಮಕೂಟ

ಬರೋಡಾ ವಿವಾಹಕ್ಕೆ ವಧುವಿನ ತಂದೆಯ ಅಸಮಾಧಾನ

ಚಾಮರಾಜನಗರದಲ್ಲಿ ಹಸು ಮೂರು ಕರು ಹಾಕಿದೆ

ತಿರುವಾಂಕೂರು ಮಹಾರಾಜರವರ ಆಗಮನ

ಸ್ಟೇಷನ್ನಿನಲ್ಲಿ ಅಪೂರ್ವ ಸ್ವಾಗತ

ಸ್ವಂ ಸು.] ಮೈಸೂರು ೨೧

ತಿರುವಾಂಕೂರು ಸಂಸ್ಥಾನದ ಶ್ರೀಮನ್ಮಹಾರಾಜರವರಾದ ಶ್ರೀ ಬಾಲಾ ರಾಮವರ್ಮರವರು ಈ ದಿನ ಮಧ್ಯಾಹ್ನ ೧ ಗಂಟೆಗೆ ಬೆಂಗಳೂರಿನಿಂದ ಸ್ಪೆಷಲ್ ರೈಲಿನಲ್ಲಿ ಆಗಮಿಸಿದರು. ರೈಲ್ವೆ ಸ್ಟೇಷನ್ನಿನಲ್ಲಿ ನಮ್ಮ ಸ್ವಾಮಿಯವರ ಶ್ರೀಮನ್ಮಹಾರಾಜರವರು ಅವರನ್ನು ಸ್ವಾಗತಿಸಿದರು. ನಂತರ ದಿವಾನರಾದ ಪ್ರಧಾನ ಶಿರೋಮಣಿ ಎನ್. ಮಾಧವರಾಯರು, ಶ್ರೀ ತಂಬೂಚೆಟ್ಟಿಯವರು, ಸಚಿವರಾದ ಶ್ರೀಗಳಾದ ಅನಂತರಾಮಯ್ಯ, ಶ್ರೀನಿವಾಸ ಅಯ್ಯಂಗಾರ್, ಗುಂಡಪ್ಪಗೌಡರು, ಅಪ್ಪಾಜಿಗೌಡರನ್ನು ಪರಿಚಯಮಾಡಿ ಕೊಟ್ಟರು. ಪೌರಸಭಾ ಅಧ್ಯಕ್ಷರಾದ ಶ್ರೀ ರಾಮಚಂದ್ರರಾವ್ ಜೋಷಿಯವರು ತಿರುವಾಂಕೂರು ಸಂಸ್ಥಾನಾಧೀಶರಿಗೆ ಪುಷ್ಪಹಾರಗಳನ್ನು ಸಮರ್ಪಿಸಿದರು. ಸ್ಟೇಷನ್ನಿನಲ್ಲಿ 'ಗಾರ್ಡ್ ಆಫ್ ಆನರ್' ಸಲ್ಲಿಸಿ, ನಾಲ್ಕು ಕುದುರೆಗಳಿಂದ ಅಲಂಕೃತವಾದ ಕೋಚಿನಲ್ಲಿ ಇವರು ಮಹಾರಾಜರೊಡನೆ ಮೆರವಣಿಗೆಯಲ್ಲಿ ಬಿಜಯಮಾಡಿ ಲಲಿತಮಹಲ್ ಭವನಕ್ಕೆ ತೆರಳಿದರು. ದಾರಿಯುದ್ದಕ್ಕೂ ತಳಿರುತೋರಣಗಳಿಂದ ಅಲಂಕೃತವಾಗಿದ್ದ ರಸ್ತೆಯ ಎರಡು ಭಾಗಗಳಲ್ಲೂ ಅಸಂಖ್ಯಾತ ಜನರು ಕಿಕ್ಕಿರಿದು ಸುಸ್ವಾಗತವನ್ನು ನೀಡಿದರು.

ತಿರುವಾಂಕೂರು ಮಹಾರಾಜರವರ ಆಗಮನದ ಗೌರವಾರ್ಥವಾಗಿ ಅರಮನೆಯು ಬತೇರಿಯಿಂದ ೨೧ ತುಪಾಕಿಗಳನ್ನು ಹಾರಿಸಲಾಯಿತು.

ಮಹಾರಾಜರವರ ಮಾತೆಯವರಾದ ಶ್ರೀಮನ್ಮಹಾರಾಣಿ ಸೇತುಪಾರ್ವತೀಬಾಯಿಯವರೂ ಮತ್ತು ದಿವಾನರಾದ ಸರ್ ಸಿ. ಪಿ. ರಾಮಸ್ವಾಮಿ ಅಯ್ಯರವರೂ ಸಹ ಆಗಮಿಸಿದರು.

ಈ ದಿನ ಸಂಜೆ ತಿರುವಾಂಕೂರು ಮಹಾರಾಜರವರು ಗಂಧದ ಎಣ್ಣೆ ಕಾರ್ಖಾನೆ, ರೇಷ್ಮೆ ಕಾರ್ಖಾನೆ ಮತ್ತು ಯುದ್ಧೋದ್ಯಮ ವಸ್ತು ಪ್ರದರ್ಶನಗಳಿಗೆ ಭೇಟಿ ಕೊಟ್ಟರು.

ರಾತ್ರಿ ೯ ಗಂಟೆಗೆ ಅರಮನೆಯಲ್ಲಿ ಆವರ ಗೌರವಾರ್ಥವಾಗಿ ಸಂಗೀತ ಮತ್ತು ಅರಮನೆಯ ಮೈದಾನದಲ್ಲಿ ಬಾರ್ಜ್ ಲೈಟ್ ಟ್ಯಾಟೂ ಏರ್ಪಡಿಸಲಾಗಿದೆ.

ದಿವಾನರ ಸಹಾಯ

ಉಜಿರೆಯಲ್ಲಿ ಬಡವರು ಮತ್ತು ಹರಿಜನ ವಿದ್ಯಾರ್ಥಿಗಳಿಗೆ ಊಟದ ಸೌಕರ್ಯವನ್ನು ಒದಗಿಸಲು ಮಾಡಿರುವ ವ್ಯವಸ್ಥೆಗೆ ದಿವಾನರಾದ ಪ್ರಧಾನಶಿರೋಮಣಿ ಶ್ರೀ ಎನ್. ಮಾಧವರಾಯರು ತಾವು ದಿವಾನರಾಗುವವರೆಗೆ ತಿಂಗಳಿಗೆ ೧೦ ರೂ. ಸಹಾಯ ಮಾಡುವುದಾಗಿ ತಿಳಿಸಿರುವರೆಂದು ಗೊತ್ತಾಗಿದೆ. ಮತ್ತು ಶ್ರೀ ಎ. ಕೆ. ಶ್ರೀನಿವಾಸಮೂರ್ತಿ ಇವರುಗಳು ೧೦೦ ರೂ ಕೊಟ್ಟಿರುವರು. ಇತರ ಮಹನೀಯರುಗಳಿಂದಲೂ ಸಹಾಯ ನಿರೀಕ್ಷಿಸಲಾಗಿದೆ.

ರೋಂಗೆ ಧಕ್ಕೆ

ನಿನ್ನೆ ಮೈತ್ರರಾಷ್ಟ್ರದವರು ರೋಂ ಮೇಲೆ ನಡೆಸಿದ ಧಾಳಿಯ ಫಲವಾಗಿ ಆ ನಗರದ ಬಹಳ ಭಾಗಕ್ಕೆ ಧಕ್ಕೆ ಉಂಟಾಯಿತೆಂದು ಹೇಳಲಾಗಿದೆ.

ಬರೋಡಾ ರಾಜರ ವಿವಾಹದ ಗೊಂದಲ

ವಧುವಿನತಂದೆಗೂ ಅಸಮ್ಮತಿಕರವಾಗಿದೆ

ಬರೋಡಾ ಸಂಸ್ಥಾನದ ಮಹಾರಾಜರು ಪಿರಾ ಪ್ರಾಂತ್ಯದ ಮರಾಠ ಸರದಾರರ ಮಗಳನ್ನು ಎರಡನೇ ಆವರ್ತಿ ಮದುವೆಯಾಗಿರುವ ಅಂಶವು ವಧುವಿನ ತಂದೆಗೂ ಅತ್ಯಂತ ಅಸಮಾಧಾನವನ್ನುಂಟುಮಾಡಿದೆ. ಅವರು ಹೀಗೆ ಹೇಳಿದ್ದಾರೆ:—

ಈ ವಿವಾಹದ ಕ್ರಮವನ್ನು ನಾನು ಸಂಪೂರ್ಣವಾಗಿ ಖಂಡಿಸುತ್ತೇನೆ ಎಂದೇ ಅತ್ಯಂತ ಹೇಯವಾದದ್ದು. ಅದಕ್ಕೆ ನನ್ನ ಸಮ್ಮತಿ ಇಲ್ಲವೇ ಇಲ್ಲ. ನನ್ನ ಸಂಪೂರ್ಣ ಸಿಟ್ಟಿಗೂ ಇದಕ್ಕೆ ತೀರ ವಿರುದ್ಧವಾಗಿದೆ.

ಈ ನನ್ನ ಮಗಳಿಗೂ ನನಗೂ ಕೆಲವು ವರ್ಷಗಳಿಂದ ಸಂಪರ್ಕವೇ ಇಲ್ಲ. ನನ್ನ ಮನೆಗೆ ಕೂಡ ಬಾರದಿದ್ದರೆ ಅವಳಿಗೆ ಹೇಳಿದ್ದೇನೆ. ಮೊದಲನೇ ಗಂಡನನ್ನು ಅವಳು ತ್ಯಜಿಸಿದ್ದು, ಮಹಾರಾಜರೊಡನೆ ಸೇರಿದ್ದು, ಈಚೆಗೆ ಬ್ರಹ್ಮ ಸಮಾಜದ ಮೂಲಕ ಹಿಂದೂ ಮತಕ್ಕೆ ಸೇರಿದ್ದು—ಇವೆಲ್ಲವೂ ನನಗೆ ಅತ್ಯಂತ ಬೇಸರವನ್ನುಂಟುಮಾಡಿವೆ. ಪ್ರಾಚ್ಯ ಧರ್ಮಗಳಿಂದ ಇಸ್ಲಾಂ ಮತ್ತು ಸನಾತನ ಮತಗಳು, ಬ್ರಹ್ಮ ಸಮಾಜವೂ ಇಂತಹ ತುಚ್ಛ ಕಾರ್ಯದ ಉದಾಹರಣೆಗಳಾದುದಕ್ಕಾಗಿ ನಾನು ಶೋಕಿಸುತ್ತ ಈ ಮದುವೆಯನ್ನು ವರ್ಣಿಸಲಾರೆನು.

ರೈಲಿನೊಳಗೆ ಹಾವು

ಮದರಾಸಿನಿಂದ ಹೊರಟಿದ್ದ ಗ್ರ್ಯಾಂಡ್ ಟ್ರಂಕ್ ಎಕ್ಸ್‌ಪ್ರೆಸ್ ರೈಲಿನ ಕಕ್ಷೆಯೊಂದರ ಕೋಣೆಯಲ್ಲಿ ಒಂದು ನಾಗರಹಾವು ಅಡ್ಡಿದ ಕೆಲಸಗಾರನು ಕಂಡನು. ಅದನ್ನು ಹಿಡಿದು ಕೊಂದರು. ಈ ಜಾತಿಯ ಹಾವು ಕೆಲವು ಕೋಣೆಯ ಬಳಿ ಅದು ಜೀವ ತೆಗೆ ಕೊಂಡವರ ಮೇಲೆ ಸೇಡು ತೀರಿಸಿಕೊಳ್ಳುವುದೆಂಬ ನಂಬಿಕೆ ಇರುವುದರಿಂದ ಸಮ್ಮತಿ ಬಾರದ ನಾವಿದರು.

ಮತ್ಸ್ಯಶಾಲಾ ಮಾಲೀಕ

ಗಾಂಧೀ ಸೇವಾ ಸಂಘದ ನಗರ ದ ಧ್ಯಕ್ಷರಾದ ಶ್ರೀ ಸತೀಶ್ ... ನ ಮತ್ಸ್ಯಶಾಲೆಯವರು ನಾಗಪ್ಪನ ಮನೆಯ ಬಳಿ ಸುತ್ತಿ ಸಮಯದಲ್ಲಿ ಮೂಲೆಯಿಂದ ಹೊರಬಂದ ಒಂದು ಹಾವು ಕಚ್ಚಿದ್ದರಿಂದ, ಈಗ ಅವರನ್ನು ಆಸ್ಪತ್ರೆಗೆ ಸಾಗಿಸಲಾಗಿದೆಯೆಂದೂ ತಿಳಿದುಬಂದಿದೆ.

ವಿದ್ಯಾರ್ಥಿ ಸಂಸ್ಥೆ ಅಕ್ರಮ

ಮದರಾಸ್ ಅಧಿಕಾರಿಗಳು ಸುಮಾರು ನಲವತ್ತು ಸಾವಿರ ಸದಸ್ಯರನ್ನುಳ್ಳ ರಾಷ್ಟ್ರೀಯ ವಿದ್ಯಾರ್ಥಿ ಸಂಸ್ಥೆಯನ್ನು ಸರ್ಕಾರವು ಅಕ್ರಮ ಕೂಟವೆಂದು ಸಾರಿದೆ.

ಜಪಾನ್ ನಗರಗಳ ಪಾಲಿ

ಜಪಾನಿನ ಭಾರಿ ಭಾರಿ ನಗರಗಳನ್ನೆಲ್ಲಾ ಪಾಲಿ ಮಾಡುವ ಅಗತ್ಯ ಅರಂಭವಾಗಿ ಬಿಟ್ಟಿತೆಂದು ಟೋಕಿಯೋ ರೇಡಿಯೋ ಹೇಳಿದೆ. ಟೋಕಿಯೋ ನಗರವನ್ನು ಖಾಲಿ ಮಾಡುವ ಬಗ್ಗೆ ಚರ್ಚಿಸಲು ಜಪಾನ್ ಮಂತ್ರಿ ಮಂಡಳಿ ಸಭೆ ಸೇರಿದುದಾಗಿ ಗೊತ್ತಾಗಿದೆ.

ಭಾರತದ ಬಾಂಬರುಗಳು

ಹಿಂದಿನ ತಿಂಗಳು ಸ್ವಾತಂತ್ರ್ಯರಾಗಲಿರುವ ಕೇಂದ್ರ ಸರ್ಕಾರದ ಬೋಂಬರು ಕಾರ್ಖಾನೆಯವರ ಸರ್ ಆರ್ಚಿಬಾಲ್ಡ್ ವಾನ್ಸ್ವೆಲ್‌ರವರ ಸ್ಥಾನದಲ್ಲಿ ಸರ್ ಎ. ರಾಮಸ್ವಾಮಿ ಮೊದಲಿಯಾರ್‌ರವರನ್ನು ನೇಮಿಸಲಾಗುವುದೆಂದು ವದಂತಿ ಹರಡಿದೆ.

ಐರ್ಲೆಂಡಿನಲ್ಲಿ ಜರ್ಮನ್ ಪ್ಯಾರಚೂಟ್ ಯೋಧರು

ಐರ್ಲೆಂಡಿನಲ್ಲಿ ಜರ್ಮನ್ ವಿಮಾನದಿಂದ ಇಳಿದ ಎರಡು ಪ್ಯಾರಚೂಟ್ ಯೋಧರನ್ನು ಇಳಿಸಿದ ವಿಷಯ ಈಗ ಹೊರಬಿದ್ದಿದೆ. ಜರ್ಮನ್ ಸಾರಸದಲ್ಲಿ ಜರ್ಮನಿಗೆ ಸಹಾಯಕವಾಗಿ ರೇಡಿಯೋ ಪ್ರಚಾರ ಮಾಡುತ್ತಿದ್ದ ದಕ್ಷಿಣ ಐರ್ಲೆಂಡಿನ ಜಾನ್ ಓರೇಲಿ ಮತ್ತು ರಿಚರ್ಡ್ ಕೆನಿ ಎಂಬುವರನ್ನು ಡಿಸೆಂಬರ್ ತಿಂಗಳಲ್ಲಿ ವಿಮಾನದಿಂದ ಇಳಿಸಲಾಯಿತೆಂದೂ, ಅವರುಗಳನ್ನು ಈಗ ವಶಪಡಿಸಿಕೊಳ್ಳಲಾಗಿದೆಯೆಂದೂ ಅದಕ್ಕೆ ಅವರು ಉತ್ತರ ಐರ್ಲೆಂಡಿಗೆ ತಪ್ಪಿಸಿಕೊಂಡು ಹೋದರೆಂದು ಹೇಳಲಾಗಿದೆ.

ಸ್ವರೆಯಾದ ಹಾ ರೈಲು ಮಾರ್ಗ ಛಿದ್ರ

ಸೋವಿಯಟ್ ಪಡೆಗಳ ಪ್ರಗತಿಯ ಫಲವಾಗಿ ಲೆನಿನ್‌ಗ್ರಾಡ್ ಬಳಿ ಜರ್ಮನರ ವಶದಲ್ಲಿದ್ದ ರೈಲು ಮಾರ್ಗವನ್ನು ಛಿದ್ರ ಮಾಡಿದರು.

೧೫ ತೊಲ ಚಿನ್ನದ ಗಟ್ಟಿಯ ಮೋಸ

ಸ್ವಂ ಸು] ಮೈಸೂರು ೨೧

ದೊಡ್ಡಪೇಟೆಯ ಚಿನ್ನ, ಬೆಳ್ಳಿ ವ್ಯಾಪಾರಿಗಳಾದ ಶ್ರೀ ಬಿ. ಎಸ್. ರಾಮಚಂದ್ರ ಶೆಟ್ಟಿಯವರ ಅಂಗಡಿಯಲ್ಲಿ ಮೊನ್ನೆ ೧೭ನೇ ತಾ|| ಸಂಜೆ ಅಗಸೂರಿನವನೆಂದು ಹೇಳಿದ ಯಾರೋ ಒಬ್ಬನು ೧೦೫೦ ರೂ. ಬೆಲೆ ಬಾಳುವ ಸುಮಾರು ೧೫ ತೊಲ ಚಿನ್ನದ ಗಟ್ಟಿಯನ್ನು ಕೊಂಡುಕೊಳ್ಳುವನೆಂದು ತಿಳಿಸಿ, ಅದನ್ನು ತೆಗೆದುಕೊಂಡು, ನಂತರ ಅಂಗಡಿಯವರು ಗಲಾಟೆಯಲ್ಲಿದ್ದಾಗ ಅತನು ಅದನ್ನು ಅಪಹರಿಸಿಕೊಂಡು ಹೊರಟು ಹೋದನೆಂದು ಪೋಲೀಸರಿಗೆ ಫಿರ್ಯಾದು ಬಂದಿದೆ. ಲಷ್ಕರ್ ಪೋಲೀಸರು ಮುಂದಿನ ತನಿಖೆ ನಡೆಸುತ್ತಿದ್ದಾರೆ.

ಹೆಂಡದಂಗಡಿ ದೂರ ಹೋಗಲಿ

ಮೈಸೂರು ಪೌರಸಭೆಯ ಸಾಧಾರಣ ಸಭೆ ಇದೇ ೨೯ ನೇ ತಾ|| ಶನಿವಾರ ಸೇರುವುದು. ನಗರ ನಿವಾಸಿಗಳ ವಾಸದ ಮನೆಗಳ ನಡುವೆ ಮತ್ತು ಪ್ರಾಮುಖ್ಯ ಸ್ಥಳಗಳಲ್ಲಿ ತೆರೆಯಲಾಗಿರುವ ಹೆಂಡದಂಗಡಿಗಳನ್ನು ಅಲ್ಲಿಂದ ಬದಲಾಯಿಸಬೇಕು' ಎಂಬ ಠರಾವನ್ನು ಅಂದಿನ ಸಭೆಯ ಮುಂದೆ ಶ್ರೀ ಟಿ. ವೆಂಕಟರಾಮಯ್ಯನವರು ಮಂಡಿಸುವರಾಗಿದ್ದಾರೆ.

ಚಿನ್ನದ ಚೈನು ಹೋಗಿದೆ

ದೊಡ್ಡ ಪೇಟೆ ಸಂಗ್ರಹ ಅಂಗಡಿ ಶ್ರೀ ಕೆ. ಯಂಗಯ್ಯಶೆಟ್ಟಿ ಎಂಬುವರ ರಾಧಾಕೃಷ್ಣ ಎಂಬ ಮಗುವಿನ ಕೊರಳಲ್ಲಿದ್ದ ೩೦ ರೂ. ಬೆಲೆ ಬಾಳುವ ಚಿನ್ನದ ಚೈನು ನಿನ್ನೆ ಮಗು ಆಟವಾಡುತ್ತಿದ್ದಕ್ಕೆ ಹೋಗಿ ವಾಪಸು ಬಂದಾಗ ಅದು ಇರಲಿಲ್ಲವೆಂದು ಪೋಲೀಸರಿಗೆ ಫಿರ್ಯಾದು ಬಂದಿದೆ.

ಮತ್ತೊಂದು ಮಗುವಿನ ಮರಣ

ನಾಗಮಂಗಲದ ತಾ|| ನಲ್ಲಿಗೆರೆಯಲ್ಲಿ ಸಿಂಗೇಗೌಡ ಎಂಬಾತನು ತನ್ನ ಅಣ್ಣನಾದ ನಂಜೇಗೌಡ, ಅತನ ಹೆಂಡತಿ ಸಿಂಗಮ್ಮ ಮತ್ತು ನಾಲ್ಕು ಮಕ್ಕಳಿಗೆ ಹೊಡೆದು ಅದರ ಪರಿಣಾಮವಾಗಿ ಸಿಂಗಮ್ಮ ಮತ್ತು ಒಂದು ಮಗುವು ಮರಣ ಹೊಂದಿದರೆಂದೂ ಮತ್ತು ನಂಜೇಗೌಡ ಮತ್ತು ಮಕ್ಕಳನ್ನೂ ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸೇರಿಸಲಾಗಿದೆಯೆಂದೂ ಪ್ರಕಟವಾಗಿದೆಯಷ್ಟೆ. ಅವರ ಪೈಕಿ ಒಂದು ಮಗುವು ನಿನ್ನೆ ಸಂಜೆ ಮೃತಿ ಹೊಂದಿತೆಂದು ಹೇಳಲಾಗಿದೆ.

ಹಸು ಮೂರು ಕರು ಹಾಕಿದೆ

ಸ್ವಂ ಸು] ಚಾಮರಾಜನಗರ ೨೧

ಈ ಊರಿನ ಕಂಟ್ರಾಕ್ಟರಾದ ಶ್ರೀ ಎನ್. ನರಸಿಂಹಮೂರ್ತಿಯವರ ಮನೆಯಲ್ಲಿ ಒಂದು ಹಸುವು ಮೂರು ಕರುಗಳನ್ನು ಹಾಕಿದೆ. ಇದರ ಪೈಕಿ ಒಂದು ಗಂಡು, ಎರಡು ಹೆಣ್ಣು. ಮೂರೂ ಕರುಗಳೂ ಬದುಕಿವೆ. ನೂರಾರು ಜನರು ಬಂದು ನೋಡಿ ಆಶ್ಚರ್ಯ ಪಡುತ್ತಿದ್ದಾರೆ.

ವಿದ್ಯುಚ್ಛಕ್ತಿ ಅಭಾವದ ಕಾರಣಕ್ಕಾಗಿ ಕಚೇರಿಗಳ ಅಂಗಡಿಗಳ ವಿದ್ಯುದ್ದೀಪಗಳನ್ನು ರಾತ್ರಿ ವೇಳೆಗೆ ಹೆಚ್ಚು ಉರಿಸಬಾರದು. ಅಲ್ಲದೆ ಆ ದಿನ ಸಂಜೆಯಾಗಲ್ಲಿ ಪ್ರದರ್ಶನಗಳ ಸಮಯದಲ್ಲೂ ಆಜ್ಞೆ ಮಾಡಿದೆ.

ದಾಸಪ್ಪನವರ ಸ್ಮಾರಕ

ಸ್ವಂ. ಸು.] ಬೆಂಗಳೂರು ೨೦

ಮೈಸೂರು ಸ್ಟೇಟ್ ವೃತ್ತಪತ್ರಿಕಾ ಸಂಘದ ಆಶ್ರಯದಲ್ಲಿ ೨೩ ನೇ ತಾ|| ಸಂಜೆ ಸ್ಟೇಟ್ ಆಸೆಂಬಲ್ ಹಾಲಿನಲ್ಲಿ ವಿ. ಎಲ್. ಶ್ರೀನಿವಾಸಶಾಸ್ತ್ರಿಗಳವರು ಇಂಟರ್ ಕಾಲೇಜಿನ ಒಳ ಅಂಗಣದಲ್ಲಿ "ಭಾರತದ ಪ್ರಮುಖ ಪಾತ್ರ" ಎಂಬ ವಿಷಯವಾಗಿ ದಾಸಪ್ಪನವರ ಸ್ಮಾರಕ ಭಾಷಣ ಮಾಡುವರು. ಸಂಘದ ಅಧ್ಯಕ್ಷರಾದ ಶ್ರೀ ಪಿ. ಆರ್. ರಾಮಯ್ಯನವರು ಅಧ್ಯಕ್ಷತೆ ವಹಿಸುವರು.

೧೦ ಸಾವಿರ ರೂ. ದಾನ

ದಂಡಿನ ವಿ ಟಿ ಪಿ ಚಿಕ್ಕಬ್ಯಾಟರಾಜ ಶ್ರೀ ಕೃಷ್ಣಸ್ವಾಮಿ ರಾಯರವರು ಬಸವನಗುಡಿಯಲ್ಲಿರುವ ನ್ಯಾಷನಲ್ ಹೈಸ್ಕೂಲಿನ ಸಿ ಟ್ರಾಫ್ಟ್ ಬಿಲ್ಡಿಂಗ್ ಫಂಡಿಗೆ ೧೦ ಸಾವಿರ ರೂ.ಗಳನ್ನು ಉದಾರವಾಗಿ ದಾನಮಾಡಿರುವರು.

ಇದೇ ಫಂಡಿಗೆ ಬೆಂಗಳೂರ್ ಬಲ್ಬ್ಸ್ ನ ಮೆನೇಜರಾದ ಶ್ರೀ ಜಿ ಎ ಆಚಾರ್ಯರು ೫೦೦೦ ರೂ. ಗಳನ್ನು ಅರ್ಪಿಸಿರುವರು.

ಮತ್ತೊಬ್ಬ ಮಹನೀಯರು ೧೦೦೦ ರೂ ದಯಪಾಲಿಸಿರುವರೆಂದು ಗೊತ್ತಾಗಿದೆ.

ಒಲಂಪಿಕ್ ಪಂದ್ಯಗಳು

ಮೈಸೂರು ಒಲಂಪಿಕ್ ಪಂದ್ಯಗಳು ನಾಳೆ ಮತ್ತು ನಾಳಿದ್ದು ಓಟಿ ಮೈ. ಎಂ. ಸಿ ಎ ಮೈದಾನದಲ್ಲಿ ನಡೆಯುವುವು. ಶ್ರೀಮಾನ್ ರಾಜ ಜಯಚಾಮರಾಜರವರಿಗೆ ಬಹುಮಾನ ವಿತರಣೆ ನಿಯೋಗವಿದೆ.

ತಮಿಳು ಸಂಘ

ವಿಶ್ವವಿದ್ಯಾನಿಲಯದ ತಮಿಳು ಸಂಘದ ೮ ನೇ ವಾರ್ಷಿಕೋತ್ಸವವು ಇಂದು ಗಡಿಕ ರಾತ್ರಿ ಭವನದಲ್ಲಿ ನಡೆಯಿತು. ರಾಜಮಂತ್ರಪ್ರವೀಣ ಕೆ ವಿ ಅನಂತರಾಮನ್ ರವರು ಅಧ್ಯಕ್ಷತೆ ವಹಿಸಿದ್ದರು. ಧರ್ಮಪ್ರಕಾಶ ಎಲ್ ಎಸ್ ವೆಂಕಟಾಚಾರ್ಯರು ಸಂಘದ ಮುಖ್ಯ ಭಾಷಣ ಮಾಡಿದರು.

ಪರಾಜಯಕ್ಕೆ ಕಾರಣ

ಬೆಂಗಳೂರು ಪೌರಸಭಾ ಉಪಾಧ್ಯಕ್ಷ ಚುನಾವಣೆಗೆ ಕಾಂಗ್ರೆಸ್ ಪಕ್ಷದವರು ಶ್ರೀ ಎ. ಕೆ. ಬಸವಲಿಂಗರಾಜೂರರವರನ್ನು ನಿಲ್ಲಿಸಿದ್ದು ಚುನಾವಣೆ ನಡೆದಾಗ ಕಾಂಗ್ರೆಸ್ ಸದಸ್ಯರು ಅವರಿಗೆ ಬೆಂಬಲ ಕೊಡದಿರಲು ಶ್ರೀ ಬಸವಲಿಂಗರಾಜೂರರವರು ಪಕ್ಷದ ಶಿಸ್ತಿಗೆ ವಿರೋಧವಾಗಿ ನಡೆದುದೇ ಕಾರಣವೆಂದು ಕಾಂಗ್ರೆಸ್ ಪಾರ್ಟಿ ಲೀಡರ ಸಮಿತಿ ಕಾರ್ಯದರ್ಶಿಗಳಾದ ಶ್ರೀ ಕೆ. ಆರ್. ಮಾಧವಾಚಾರ್ಯರು ಒಂದು ಹೇಳಿಕೆ ನೀಡಿದ್ದಾರೆ.

ರೈಲು ಹರಿದು ಸಾವು

೧೮ ನೇ ತಾ|| ಸಂಜೆ ಮೈಸೂರಿನಿಂದ ಚನ್ನಪಟ್ಟಣಕ್ಕೆ ಹೋದ ಗೂಡ್ಸ್ ಗಾಡಿಯು ೩೦ ವರ್ಷದ ಮಾಗಿಯೊಬ್ಬಳ ಮೇಲೆ ಹರಿದಾಗ ಅವಳನ್ನು ಆಸ್ಪತ್ರೆಗೆ ಸಾಗಿಸಲಾಯಿತು. ಸ್ವಲ್ಪ ಹೊತ್ತಾದಮೇಲೆ ಆಕೆಯು ಮೃತಪಟ್ಟಳೆಂದು ವರದಿಯಾಗಿದೆ.

ಆಸಫ್‌ಅಲಿ ಕಾರು ಹರಾಜು

ದೆಹಲಿಯ ಶ್ರೀಮತಿ ಆಸಫ್‌ಅಲಿಯವರು ತಲೆತಪ್ಪಿಸಿಕೊಂಡಿರುವರೆಂದು ತಿಳಿದುಬಂದಿದೆ. ಅವರಿಗೆ ಸೇರಿದ ಹಲವು ಪದಾರ್ಥಗಳನ್ನು ಹರಾಜು ಹಾಕಲಾಯಿತು. ಆ ಪೈಕಿ ಬೇಬಿ ಆಸ್ಟಿನ್ ಕಾರೊಂದನ್ನು ೩೦೦೦ ರೂ. ಗಳಿಗೆ ಯಾರೋ ಕೊಂಡುಕೊಂಡರು.

ಪಕ್ವಸಾರರವರ ಸ್ಥಿತಿ ಕಳವಳ

ಬೊಂಬಾಯಿ ನ್ಯಾಯವಿಧಾಯಕ ಸಭಾಧ್ಯಕ್ಷರಾದ ಶ್ರೀ ಮಂಗಳದಾಸ್ ಪಕ್ವಸಾರರವರಿಗೆ ಹೊಟ್ಟೆನೋವಿನ ಕಾರಣಕ್ಕಾಗಿ ಆಪರೇಷನ್ ನಡೆದಿತ್ತು. ಈಗ ಅವರ ಸ್ಥಿತಿ ಚಿಂತಾಜನಕವಾಗಿದೆಯೆಂದು ತಿಳಿದುಬಂದಿದೆ.

ಶಾಂತಿಸ್ಥಾಪನೆಗಾಗಿ ಯಜ್ಞ

ಜಗತ್ತಿನ ಶಾಂತಿಗಾಗಿ ಅಲಹಾಬಾದಿನ ಸಂಕೀರ್ತನ ಪ್ರಚಾರ ಸಮಿತಿ ಸ್ಥಾಪಕರು ಯಜ್ಞವೊಂದನ್ನು ಏರ್ಪಡಿಸಿರುವರು. ಈ ಯಜ್ಞವನ್ನು ಯಾವಾಗ ಆರಂಭಿಸಬೇಕೆಂಬ ಬಗ್ಗೆ ೨೩ ನೇ ತಾ|| ಸೇರುವ ಸಮ್ಮೇಳನದಲ್ಲಿ ತೀರ್ಮಾನಿಸಲಾಗುವುದು.

ಭಾರತದ ಪತ್ರಿಕೋದ್ಯೋಗಿ ಮಿಲಿಟರಿ ವಶ

ಲಂಡನ್ನಿನಲ್ಲಿ ಭಾರತದ ಪತ್ರಿಕೋದ್ಯೋಗಿಯಾದ ಶ್ರೀ ಸುರೇಶ್‌ವೈದ್ಯ ಎಂಬುವರು ಸೈನ್ಯಕ್ಕೆ ಸೇರಬೇಕೆಂದು ಕಳುಹಿಸಿದ ಆರ್ಡರನ್ನು ನಿರಾಕರಿಸಿದರೆಂದು ಅವರನ್ನು ಪೋಲೀಸ್ ಕೋರ್ಟಿನ ಮುಂದೆ ಹಾಜರ್ಪಡಿಸಿ ನಂತರ ಮಿಲಿಟರಿಯವರಿಗೆ ಒಪ್ಪಿಸಬೇಕೆಂದು ಆಜ್ಞೆ ಮಾಡಲಾಯಿತು.

ಇಟಲಿ ಖೈದಿಗಳು ಸಿಂಹಳಕ್ಕೆ

ಬಹುಮಂದಿ ಇಟಲಿ ಯುದ್ಧ ಖೈದಿಗಳನ್ನು ಹಡಗುಗಳ ಕೊಲಂಬೋವಿಗೆ ಕರೆತರಲಾಗಿದೆ. ಇವರಿಂದ ಮಿಲಿಟರಿ ಸಂಬಂಧದ ಕೆಲಸಗಳನ್ನು ಮಾಡಿಸಲಾಗುವುದೆಂದು ಅಧಿಕಾರಯುತವಾಗಿ ತಿಳಿದುಬಂದಿದೆ.

Edited, printed and published by A. R. Nagarajan, at the Sadhvi Press, D Subbiah Road, Mysore.

ಬೇ ಕಾನೂನು

ಸ್ವಂ. ಸು.] ಚಾಮರಾಜನಗರ ೨೦

ಫಸಲಿಗೆ ಡಿಕ್ಲರೇಷನ್ ಕೊಡುವ ಬಗ್ಗೆ ಸರ್ಕಾರ ಕಾನೂನು ಮಾಡಿರುವುದಷ್ಟೆ. ಅಧಿಕಾರಿಗಳು ಈ ಪ್ರಾಂತ್ಯದಲ್ಲಿ ಬೇ ಕಾನೂನು ಚಲಾಯಿಸುತ್ತಿರುತ್ತಾರೆಂಬ ವದಂತಿ ಇದೆ. ಒಂದು ಎಕರೆ ಬೆಳೆಯಲ್ಲಿ ೩ ಪಲ್ಲ ಸರ್ಕಾರಕ್ಕೆ ಕೊಟ್ಟರೆ ಆಸ್ತಿಗೆ ಚೀಟಿ ಕೊಡುವುದಾಗಿ ಹೇಳಿ ಈ ತಾಲ್ಲೂಕಿನ ಹೊಂಗನೂರು ಗ್ರಾಮದಲ್ಲಿ ಸುಮಾರು ೫೦೦ ಪಲ್ಲ ಭತ್ತ ಜಮಾವಣೆಯಾಗಿದೆಯೆಂದು ತಿಳಿದು ಬರುತ್ತದೆ. ರೈತರಿಗೆ ಸಿಕ್ಕುವುದು ಬಹಳ ಕಷ್ಟವಾಗಿದೆ. ಡಿಕ್ಲರೇಷನ್ ಪ್ರಕಾರ ನೆಲ್ಲಿ ರೈತ ತನಗಿರುವ ಬೇರೆ ಬೇರೆ ಗ್ರಾಮಗಳ ಜಮೀನುಗಳ ವಿವರ ಬರೆದು ಕೊಡಲು ಆವಕಾಶವಿದ್ದರೂ ಒಂದೊಂದು ಜಮೀನಿಗೂ ಬೇರೆ ಬೇರೆ ಫಾರಂ ಭರ್ತಿಮಾಡಿ ತರಬೇಕೆಂದು ಅಧಿಕಾರಿಗಳು ಹೇಳುತ್ತಿರುವರಂತೆ. ಈ ತೊಂದರೆಗಳನ್ನು ತಪ್ಪಿಸಲು ಸಂಬಂಧಪಟ್ಟವರು ಗಮನ ಕೊಡುವರೆಂದು ನಂಬಿದೆ.

ಧಾರಣೆ ವ್ಯತ್ಯಾಸ

ಮೈಸೂರು ಸರ್ಕಾರಿ ಡಿಪೋಗಳಲ್ಲಿ ಗೋಧಿ ರೂ. ಗೆ ೩ ಸೇರು ಗೋಧಿ ಹಿಟ್ಟು ಪೌಂ. ೧ ಕ್ಕೆ ೦-೧೧-೬, ಮತ್ತು ರವೆ ಆಣೆ ಇದ್ದರೂ, ಇಲ್ಲಿ, ಗೋಧಿ ರೂ. ೧ ಕ್ಕೆ ೩ ಸೇರು ಅರ್ಧ ಚಟಾಕು, ಗೋಧಿ ಹಿಟ್ಟು ಪೌಂ ೧ ಕ್ಕೆ ೦-೧೪-೦ ಮತ್ತು ರವೆ ೦-೯-೬ ಗೆ ವಿಕ್ರಯಮಾಡುತ್ತಿರುತ್ತಾರೆ. ವ್ಯತ್ಯಾಸ ಹೆಚ್ಚಾಗಿರುವುದು ಬಹಳ ಆಶ್ಚರ್ಯವಾಗಿದೆ. ಇದನ್ನು ಸಂಪಾದಿಸುವರೆಂದು ನಂಬಲಾಗಿದೆ.

ಬಂಗ್ಲಿ ಬೇಕಾಗಿದೆ

ಮೈಸೂರಿನಲ್ಲಿ ಒಂದು ಬಂಗ್ಲಿ ಬಾಡಿಗೆಗೆ ಬೇಕಾಗಿದೆ. ಸ್ವತಂತ್ರ, ವಿಶಾಲ ಮತ್ತು ಆವರಣ ಉಳ್ಳದ್ದಾಗಿರಬೇಕು. ಆಯುರ್ವೇದ ಆಸ್ಪತ್ರೆ ಮತ್ತು ಸಂಶೋಧನಾಲಯವನ್ನು ನಡೆಸಲು ಯೋಗ್ಯವಾಗಿರಬೇಕು.

ಅಭಯ C/O ಸಾಧ್ವಿ

ಇವರಿಗೆ ಬರೆಯಿರಿ ಅಥವಾ ನೋಡಿರಿ.

ಸಿಂಧ್ ರಾಜಕೀಯ ಬಂದಿಗಳು

ಕೇಂದ್ರ ಸರ್ಕಾರವು ಸಿಂಧ್ ಸರ್ಕಾರಕ್ಕೆ ಸಿಂಧ್ ಪ್ರಾಂತ್ಯದಲ್ಲಿನ ರಾಜಕೀಯ ಬಂದಿಗಳನ್ನು ಬಿಡುಗಡೆಮಾಡಲು ನಮ್ಮ ಅಭ್ಯಂತರವೇನಿಲ್ಲ ಎಂದು ತಿಳಿಸಿದೆ. ಸಿಂಧ್ ಸರ್ಕಾರದವರೇ ಎಲ್ಲರನ್ನೂ ಬಿಡುಗಡೆ ಮಾಡಲು ಇನ್ನೂ ಹಿಂದೆ-ಮುಂದೆ ನೋಡುತ್ತಿರುವರು. ಕಾಂಗ್ರೆಸ್ಸಿನವರು ಹೊರಬಂದರೆ ಮಂತ್ರಿಮಂಡಲಕ್ಕೆ ಧಕ್ಕೆ ಬರಬಹುದೆಂಬ ಭೀತಿಯೇ ಇದಕ್ಕೆ ಕಾರಣ.

ಚೀಣೀಯರ ಸಹಾನುಭೂತಿ

ಚೀಣೀಯರು 'ಭಾರತದ ಬಿಕ್ಕಟ್ಟು ಜಾಗ್ರತೆ ಪರಿಹಾರವಾಗಲಿ' ಎಂದು ಹಾರೈಸುತ್ತಿರುವರೆಂದು ಇಂಗ್ಲೆಂಡಿನಲ್ಲಿರುವ ಚೀಣಾ ಗುಡ್‌ವಿಲ್ ನಿಯೋಗದವರು ತಿಳಿಸಿರುವರು.

ರೈಲ್ವೆ ದರ ಹೆಚ್ಚುವುದು

ಮುಂದಿನ ವರ್ಷದಿಂದ ರೈಲ್ ಪ್ರಯಾಣದ ದರಗಳನ್ನು ನೂರಕ್ಕೆ ೨೫ ರಿಂದ ೪೦ ರವರೆಗೆ ಹೆಚ್ಚಿಸಲಾಗುವುದೆಂದು ಅಧಿಕಾರಯುತವಾಗಿ ತಿಳಿದುಬಂದಿದೆ.

ಸ್ವೀಕಾರ

ಹಾಸನದ ಕನ್ನಡ ಸಾಹಿತ್ಯ ಪ್ರಚಾರ ಮಾಲಿಕೆಯವರ ಸರ್ವ ಜನ ಸುಲಭವಾದ ೧೯೪೪ ನೇ ಕ್ಯಾಲೆಂಡರ್‌ನ್ನು ನಾವು ಅವರಿಂದ ಸ್ವೀಕರಿಸಿದ್ದೇವೆ.

ಚಳಿಗಾಲ

ಅತ್ಯುತ್ತಮವಾದ ರಗ್ಗುಗಳಿಗೂ, ಪುಲ್ಲೋವರ್, ಕೋಟಿಂಗ್, ಕಂಬಳಿ ಪಗ್ಗರಿಗಳಿಗೂ ಎಲ್ಲೂ ಹುಡುಕಬೇಡಿ.

ನೇರವಾಗಿ ನಮ್ಮಲ್ಲಿಗೆ ಬನ್ನಿ. ಕಡಿಮೆ ಬೆಲೆಗೆ ಉತ್ತಮವಾದ ಮಾಲು ಹೊಂದುವಿರಿ.

ಜಿ. ವಿ. ಸೂರ್ಯನಾರಾಯಣ ಶೆಟ್ಟಿ ಅಂಡ್ ಸನ್ಸ್

ಜೂಯಲರ್ಸ್ & ರೆಡಿಮೇಡ್ ಡ್ರೆಸ್ ಎಂಪೋರಿಯಂ,

ಸಯ್ಯಾಜಿರಾವ್ ರೋಡ್, ಮೈಸೂರು.

ಶ್ರೀ ಲಕ್ಷ್ಮೀ ರಮಣ ಸೌಖ್ಯ ಕಾಫಿ

೧೯೧೧ ನೇ ಇಸವಿಯಿಂದ ಪ್ರತ್ಯೇಕವಾಗಿ ವ್ಯಾಪಾರ ನಡೆಸುವ ಏರ್ಪಾಡು ಮಾಡಿರುತ್ತೆ

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿಪುಡಿ

ಯನ್ನೇ ಉಪಯೋಗಿಸಿ.

ಡಿ. ಪುಟ್ಟೈಯ್ಯ, ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ನಮ್ಮಲ್ಲಿ ಎಲ್ಲಾ ಮತ್ತು ಸಂಗೀಪೇಟೆ ಹೆಚ್ ಆಫೀಸಿನಲ್ಲೂ ರವೆ, ಗೋಧಿಹಿಟ್ಟು ಮತ್ತು ಮೈದಾಹಿಟ್ಟು ಸಹ ದೊರೆಯುತ್ತೆ. ಎಲ್ಲಾ ಬೇಳೆ ಮತ್ತು ಅಕ್ಕಿ ಸಕ್ಕರೆ ಕೂಡ ಕಾರ್ಡುಗಳಿಗೆ ದೊರೆಯುತ್ತವೆ.

ರೇಷನಿಂಗ್ ಸೌಕರ್ಯ

ಸರ್ಕಾರದವರು ರೇಷನಿಂಗ್ ಕಾರ್ಡುಗಳಿಗೆ ಪದಾರ್ಥಗಳನ್ನು ಚಾಮರಾಜಪೇಟೆ ನಮ್ಮ ಅಂಗಡಿಯಲ್ಲಿ ಮಾರಲು ಅವಕಾಶ ಕೊಟ್ಟಿರುತ್ತಾರೆ. ನಮ್ಮಲ್ಲಿ ಸದರಿ ಸಾಮಾನುಗಳನ್ನು ಪಡೆಯಲು ಇಷ್ಟವುಳ್ಳ ಮಹನೀಯರು ತಮ್ಮ ತಮ್ಮ ರೇಷನ್ ಕಾರ್ಡು ಸಮೇತ ನಮ್ಮಲ್ಲಿಗೆ ಜಾಗ್ರತೆ ಹಾಜರಾಗಿ ಅವರುಗಳ ಹೆಸರನ್ನು ರಿಜಿಸ್ಟರ್ ಮಾಡಿಸಬೇಕಾಗಿ ವಿನಂತಿ.

ಎಂ. ಎಸ್. ನಾಗಣ್ಣ ಅಂಡ್ ಸನ್ಸ್

೧೦೦ ಅಡಿ ರಸ್ತೆ, ಮೈಸೂರು.

ಸಂಪುಟ ೨] ಶನಿವಾರ ೨೨--೧--೪೩ [ಸಂಚಿಕೆ ೧೫೯

ಅಮೆರಿ ಬದಲು ಗ್ರಿಗ್

ಜಪಾನರು ಅಮೆರಿಕಾ ಮುತ್ತಿಗೆಗೆ ಪ್ರಯತ್ನಿಸಿದಾಗ ಅಲ್ಲಿದ್ದ ಜಪಾನರು ಸಹಕರಿಸಿದರು

ತಿರುವಾಂಕೂರು ಮಹಾರಾಜರ ಕಾರ್ಯಕ್ರಮ

ಸ್ವಂ ಸ] ಮೈಸೂರು ೨೧

ತಿರುವಾಂಕೂರು ಸಂಸ್ಥಾನಾಧೀಶರು ಈ ದಿನ ಬೆಂಗ್ಳೂರು ಎಳೆಯ ರಾಜ, ಶ್ರೀಮನ್ಮ ಹಾರಾಣಿ ಸೇತು ಪಾರ್ವತಿಬಾಯಿ ಮತ್ತು ದಿವಾನರಾದ ಸರ್ ಸಿ ಪಿ ರಾಮಸ್ವಾಮಿ ಅಯ್ಯರ್‌ರವರೊಡಗೂಡಿ ಚಾಮುಂಡಿ ಬೆಟ್ಟಕ್ಕೆ ದಯಮಾಡಿಸಿ ದೇವರ ದರ್ಶನ ಮಾಡಿದರು. ನಂತರ ಮ್ಯೂಸಿಯಂ, ಚಾಮರಾಜೇಂದ್ರ ಟೆಕ್ನಿಕಲ್ ಇನ್ಸ್ಟಿಟ್ಯೂಟ್‌ಗೆ ಭೇಟಿ ಇತ್ತರು.

ಸಂಜೆ ಶ್ರೀಮನ್ಮಹಾರಾಜರವರು ಕೃಷ್ಣರಾಜಸಾಗರಕ್ಕೆ [illegible] ಬೃಂದಾವನದ ವಿದ್ಯುದ್ದೀಪದ ಸೊಬಗನ್ನು ನೋಡಿ [illegible]ರು.

ಸರ್. ಸಿ. ಪಿ. ಯವರು

ತಿರುವಾಂಕೂರು ದಿವಾನರಾದ ಸರ್ ಸಿ. ಪಿ. ರಾಮಸ್ವಾಮಿ ಅಯ್ಯರ್‌ರವರು ನಾಳೆ ವಿಶ್ವವಿದ್ಯಾನಿಲಯದಲ್ಲಿ ಮೊದಲ ಸಿಗೆ [illegible] ಭಾಷಣ ಬೆಳೆಸುವರು.

ಶಾರದಾ ವಿಲಾಸ ಹೈಸ್ಕೂಲ್

ಇಂದು ಮತ್ತು ನಾಳೆ ಮೈಸೂರು ಶಾರದಾ ವಿಲಾಸ ಹೈಸ್ಕೂಲಿನ ದಿನಾಚರಣೆ ನಡೆಯುವುದು. ಸಿ. ಪಿ. ಸಿ. ಪ್ರೊಫೆಸರ್ [illegible] ಆಗಿರುವ ಶ್ರೀ ಸಿ [illegible] ಅಧ್ಯಕ್ಷರ ವಹಿಸುವರು. ಆಟಪಾಟಗಳು, ಭಾಷಣ, ಸ್ಪರ್ಧೆ, ನಾಟಕ, ಬಹುಮಾನ ವಿನಿಯೋಗಗಳಾಗುವುವು. ಈ ಶಾಲಾ ಸ್ಥಾಪಕರಾಗಿದ್ದ ದಿವಂಗತರಾದ ಶ್ರೀ ಕೆ ಗಂಗಾಧರರಾಯರ ಭಾವಚಿತ್ರ ಅನಾವರಣವನ್ನು ಮಾಡಲಾಗುವುದು.

ಮಾಸ್ತಿಯವರ ಭಾಷಣ

ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾದ ರಾಜಸೇವಾಸಕ್ತ ಶ್ರೀ ಮಾಸ್ತಿ ವೆಂಕಟೇಶಯ್ಯಂಗಾರ್‌ರವರು ವಿಶ್ವವಿದ್ಯಾನಿಲಯ [illegible] ಸಂಘದ ಆಶ್ರಯದಲ್ಲಿ ೨೪ ನೇ ಸೋಮವಾರ ಸಾಯಂಕಾಲ ೬ ಘಂಟೆಗೆ ಮಹಾರಾಜ ಕಾಲೇಜಿನ ಉಪನ್ಯಾಸ [illegible] ಭಾಷಣ ಮಾಡುತ್ತಾರೆ. ಸರ್ವರಿಗೂ ಆಹ್ವಾನವುಂಟು.

ಗಾಯಕಮ್ಮನವರಿಗೆ ಸನ್ಮಾನ

ಮೈಸೂರು ಪ್ರಸಿದ್ಧ ಭರತನಾಟ್ಯ ಪ್ರವೀಣ ಶ್ರೀಮತಿ ಜೆಟ್ಟಿ ತಾಯಮ್ಮನವರಿಗೆ [illegible] ಶಿಷ್ಯವರ್ಗದವರೂ ಮತ್ತು ಪ್ರೇಕ್ಷಕರೂ ನಾಳೆ ಬಾನುವಾರ ಸಂಜೆ [illegible] ರಂಗದಲ್ಲಿ [illegible] ಶ್ರೀ [illegible] ಅಯ್ಯಂಗಾರ್‌ರವರ ಅಧ್ಯಕ್ಷತೆಯಲ್ಲಿ ಸತ್ಕಾರ ಮತ್ತು ಸಂಗೀತ ಕಚೇರಿ ಏರ್ಪಡಿಸಿರುವರು.

ಶ್ರೀ ಸದ್ಗುರು ಸೇವಾ ಮಂಡಲಿ

ಶ್ರೀ ಸದ್ಗುರು [illegible] ಸಂಸ್ಥೆ [illegible] ನಿನ್ನೆ ದಿನ ಸಾರ್ವಜನಿಕ ಸಭೆ [illegible] ಶ್ರೀಮಾನ್ [illegible] ಹರಿಕಥಾ [illegible] ಎಂಬ [illegible] ವಿಷಯವನ್ನು ಆಡಿಕೊಂಡು ಸರ್ವರಿಗೂ [illegible] ಆನಂದಪಡಿಸಿದರು.

ಬಿ. ಕಾಂ. ಡಿಗ್ರಿ ಕೋರ್ಸಿಗೆ ಏರ್ಪಾಡು

ಸ್ವಂ ಸ] ಮೈಸೂರು ೨೧

ಮೈಸೂರು ವಿಶ್ವವಿದ್ಯಾನಿಲಯದ ಅಕೆಡೆಮಿಕ್ ಕೌನ್ಸಿಲ್ಲಿನ ಸಭೆಯು ಈ ದಿನ ಮಧ್ಯಾಹ್ನ ೨ ಗಂಟೆಗೆ ವೈಸ್ ಛಾನ್ಸಲರಾದ [illegible] ಅಧ್ಯಕ್ಷತೆಯಲ್ಲಿ ನೆರೆಯಿತು.

ವಿಶ್ವವಿದ್ಯಾನಿಲಯದ ಕಾಮರ್ಸ್ ಡಿಪ್ಲೊಮಾ ಕೋರ್ಸಿಗೆ ಬದಲಾಗಿ ಬಿ. ಕಾಂ. ಡಿಗ್ರಿ ಕೋರ್ಸನ್ನು ಏರ್ಪಡಿಸಬೇಕೆಂದು ಶ್ರೀ ಬಿ [illegible] ಸೂಚಿಸಿದರು. [illegible] ಅನುಮೋದಿಸಿದರು.

[illegible] ಡಿಪ್ಲೊಮಾ ಕೋರ್ಸಿಗೂ ಬಿ. ಕಾಂ. ಡಿಗ್ರಿ ಕೋರ್ಸಿಗೂ [illegible] ಎರಡಕ್ಕೂ [illegible] ಡಿಪ್ಲೊಮಾ ಕೋರ್ಸಿನ ಜೊತೆಗೆ ಡಿಗ್ರಿ ಕೋರ್ಸು [illegible] ಸಭೆಯು ಅಂಗೀಕರಿಸಿತು.

[illegible] ಎಂ ಎ ಪರೀಕ್ಷೆಯು ಮತ್ತು [illegible] ಅವರನ್ನು [illegible] ಶ್ರೀ [illegible] ರಾಜಕಟ್ಟೆಯವರನ್ನು [illegible]

೩೦ ಸಾವಿರ ರೂ. ದಾನ

ಹಾಸನ ಜಿಲ್ಲೆಯ [illegible] ಪ್ಲಾಂಟರಾದ [illegible] ಅಯ್ಯಂಗಾರ್‌ರವರು ಬಡ ವಿದ್ಯಾರ್ಥಿಗಳ ವಿದ್ಯಾಭ್ಯಾಸ ಸೌಕರ್ಯಕ್ಕಾಗಿ ವೇತನ ಕೊಡಲು ದಾನ ಮಾಡಿರುವ ೩೦ ಸಾವಿರ ರೂ [illegible] ಸ್ವೀಕರಿಸಲಾಯಿತು.

ಮೈಸೂರು ರಾಜಕೀಯವನ್ನು ಪ್ರತಿನಿಧಿಸುವುದಿಲ್ಲ

ಮೈಸೂರು ಸಂಸ್ಥಾನದಲ್ಲಿ [illegible] ಪ್ರತಿನಿಧಿಗಳಿಂದ ರಾಜಕೀಯ [illegible] ಆಂದೋಲನವನ್ನು ನಡೆಸಲು ಶ್ರೀ ಟಿ ಎಸ್. [illegible]ರವರು ವಹಿಸಿದ ಶ್ರೀ ಸಿ ರಾಜಗೋಪಾಲಾಚಾರಿಯವರಿಗೆ ಆಹ್ವಾನ [illegible] ಕೂಡಿದ [illegible] ಸೂಕ್ತ [illegible] ಮೈಸೂರು ರಾಜಕೀಯದಲ್ಲಿ [illegible] ದಕ್ಕೆ ಇಷ್ಟವಿಲ್ಲ [illegible] ಎಂದು ಹೇಳುತ್ತಾರೆ.

ಕಂಟ್ರಾಕ್ಟರುಗಳ ಸಂಘ

ಮೈಸೂರು ಇಂಜನಿಯರಿಂಗ್ ಕಂಟ್ರಾಕ್ಟರುಗಳ ಸಂಘದ ವಾರ್ಷಿಕ ಸಭೆಯು ನಾಳೆ ಏನೆ ಮಧ್ಯಾಹ್ನ ರಾಜಧಾನಿಯ ಸಹಕಾರ ಭವನದಲ್ಲಿ ನಡೆಯುವುದು. ಶ್ರೀ ಕೆ. [illegible] ಬಿ [illegible]ಯವರು ಅಧ್ಯಕ್ಷತೆ ವಹಿಸುವರು.

ಸಾಗರಕಟ್ಟೆಯಲ್ಲಿ ಉಪ್ಪು ಕೊಳೆಯುತ್ತಿದೆಯೆ?

ಸಾಗರಕಟ್ಟೆ ಸ್ಟೇಷನ್ನಿನಲ್ಲಿ [illegible] ೩೦೦ ಉಪ್ಪಿನ ಮೂಟೆಗಳನ್ನು ಕೈಬಿಟ್ಟಿರುವ "ಸಾಗರಕಟ್ಟೆ" ಸ್ಟೇಷನ್ನಿನಲ್ಲಿ ಇಳಿಸಿದ್ದಾರೆ. [illegible] ತಿಂಗಳ ಹಿಂದೆ ಕೊಳೆಯುತ್ತಿದೆ. ನಾಗರಿಕರು ಈ ವಿಷಯ ಕುರಿತು [illegible] ಅಧಿಕಾರಿಗ[illegible] ಬಂದಿಲ್ಲ [illegible] ಬೇಕು [illegible]

ಸಪ್ರ್ರೂ-ಮೈಸರಾಯರ ಭೇಟಿ

ಸರ್ ತೇಜ್ ಬಹದ್ದೂರ್ ಸಪ್ರೂರವರು ಮೈಸೂರಿನಲ್ಲಿ [illegible] ಕ್ರಿಯಾದ ನಾಯಕ [illegible] ಸ್ಟೇಟ್ಸ್ [illegible] ಸಾಧನೆಯಂತೆ, ಮೈಸೂರಿನಲ್ಲಿ [illegible] ರೆಗೂ ಆಹ್ವಾನ ಕಳುಹಿಸಿದ್ದಾರೆ.

ಸುರೇಶ್ ವೈದ್ಯರಿಗೆ ಕೋರ್ಟ್ ಮಾರ್ಷಲ್

ನೈಸ್ನಲ್ಲಿ ಸ್ವೇರ್ [illegible] ಬಂಧನ [illegible] ದ್ದ ಪ್ರಕಟಿಸಿದ್ದ ಬರಹಗಳ [illegible] ವೈದ್ಯರನ್ನು [illegible] ಅವರ ವಿರುದ್ಧವಾಗಿ ಮಿಲಿಟರಿ ಕೋರ್ಟಿನಲ್ಲಿ [illegible] ಆವರ [illegible] ಕೋರ್ಟ್ [illegible]

ಅಮೆರಿ ಪತ್ನಿ ಸಮೇತ ಗಣಿಯಲ್ಲಿ ಮಡಿಯಲಿ

[illegible] ಕಾರ್ಯ [illegible] ಅವರ [illegible] ಸ್ಟೀ [illegible] ರನ್ನು [illegible] ಸರಿ [illegible] ಮಾರ್ಗವಾಗಿ [illegible] ನೆಗೆಯುವುದೆ [illegible] ದಯೆಂದು [illegible] ಶಕ್ತನ [illegible] ಗಣಿಯಲ್ಲಿ [illegible] ಬರಿದು [illegible]

ಅಮೆರಿ ಸ್ಥಾನಕ್ಕೆ ಗ್ರಿಗ್

ಬ್ರಿಟಿಷ್ ಸರ್ಕಾರದಲ್ಲಿ ನಡೆಯಬಹುದಾದ ಬದಲಾವಣೆಗಳ ಬಗ್ಗೆ ಪತ್ರಿಕೆ ಊಹಾಪೋಹಗಳು ಹೇಳುವುದು: ಸರ್ ಜೇಮ್ಸ್ ಗ್ರಿಗ್‌ರ ಸ್ಥಾನಕ್ಕೆ ಲಾರ್ಡ್ ಬೀವರ್ ಬ್ರೂಕ್‌ರನ್ನು ನೇಮಿಸಿ, ಗ್ರಿಗ್‌ರನ್ನು ಭಾರತ ಕಾರ್ಯದರ್ಶಿಯನ್ನಾಗಿ ನೇಮಿಸುವರೆಂದು ಲಂಡನ್ ರಾಜಕೀಯ ವಲಯದಲ್ಲಿ ಕೇಳಲಾಗುತ್ತದೆ.

ಜಪಾನರ ಮುತ್ತಿಗೆಗೆ ಸಹಾಯ

ಯುದ್ಧ ಪ್ರಾರಂಭದಲ್ಲಿ ಅಮೆರಿಕಾದ ಪಶ್ಚಿಮ ತೀರಗಳನ್ನು ಮುತ್ತಲು ಹೋದ ಜಪಾನೀ ವೈಮಾನಿಕರಿಗೆ ಅಲ್ಲಿದ್ದ ಜಪಾನೀ ನಿವಾಸಿಗಳು ಸಹಕರಿಸುವ ಸಲುವಾಗಿ ಸನ್ನೆಗಳನ್ನು ಮಾಡುತ್ತಿದ್ದರೆಂದು, ಡಾ॥ ಜಾನ್ [illegible] ರವರು ಪಶ್ಚಿಮ ತೀರದಿಂದ ಜಪಾನೀಯರನ್ನು ಖಾಲಿ ಮಾಡಿದ ಪ್ರಸಂಗದ ವರದಿಯಲ್ಲಿ ಸಮರ್ಥಿಸಿರುವರು. ಅಲ್ಲದೆ ರಕ್ಷಣೆ ಇಲ್ಲದೆ ಇದ್ದ ಮೂರು ಸ್ಥಳಗಳ ಮೇಲೆ ಜಪಾನರು ಧಾಳಿ ಮಾಡಲು ಇದೇ ಕಾರಣವೆಂದೂ ಅವರು ಬರೆದಿರುವರು.

ಸೀರಂಪುರ ಯುವರಾಜರೂ ಪ್ರತಿಭಟಿಸುವರು

ಬರೋಡಾ ಮಹಾರಾಜರ ವಿವಾಹದ ವಿಷಯದಲ್ಲಿ ಸೀರಂಪುರದ ಯುವರಾಜರು ಪ್ರತಿಭಟಿಸಿ [illegible] ವಿರೋಧವಾಗಿ ನಡೆಯುತ್ತಿರುವ ಸೀರಂಪುರ ರಾಜಕುಮಾರಿ ಸೀತಾದೇವಿಯವರೊಡನೆ ತಮಗೆ ಸಂಬಂಧ ಕಡಿದು ಹೋಗಿದೆಯೆಂದೂ ಹೇಳಿರುವರು.

ಜವಹರಲಾಲರ ಶೋಕ

ಪಂಡಿತ ಜವಹರಲಾಲ್ ನೆಹರೂರವರು ಅಹಮದ್‌ನಗರ ಜೈಲಿನಲ್ಲಿರುವ ತಮ್ಮ ಸಹೋದರಿ ಶ್ರೀಮತಿ ವಿಜಯಲಕ್ಷ್ಮಿ ಪಂಡಿತ್‌ರಿಗೆ ಅವರ ಪತಿ ಗತಿಸಿದ್ದಕ್ಕಾಗಿ ಶೋಕವನ್ನು ವ್ಯಕ್ತಪಡಿಸಿ ಒಂದು ಕಾಗದ ಕಳುಹಿಸಿದ್ದಾರೆ.

ಯೂರೋಪಿಯನ್ ಅಧಿಕಾರಿ ಬೈದದ್ದು

ಇಂದೂರು ಸಂಸ್ಥಾನದ ಬಾರ್ವಾನ್ [illegible] ಸ್ಥಳದ ಯೂರೋಪಿಯನ್ ಸ್ಟೇಷನ್ ಮಾಸ್ಟರೊಬ್ಬರನ್ನು ಲಂಚ ಪಡೆದದಕ್ಕಾಗಿ ದಸ್ತಗಿರಿ ಮಾಡಲಾಗಿದೆ. ಆತನ ಬಳಿ ಇದ್ದ ಲಂಚವಾಗಿ ಪಡೆದುದೆಂದು ಹೇಳಲಾದ ರೂ ನೋಟುಗಳನ್ನು ವಶಪಡಿಸಿಕೊಳ್ಳಲಾಗಿದೆ.

ತಾಜ್‌ಮಹಲ್ ಹೋಟೆಲಿನಿಂದ ಬಿದ್ದರು

ಮೈಸೂರಿನ ದಿವಂಗತ ಶ್ರೀ ಕಿರಣ್ ಪ್ರಸಾದ್ ಬಹದ್ದೂರ್‌ರವರ ಪುತ್ರ ಶ್ರೀ ರಾಜಾ [illegible] ಪ್ರಸಾದ್ ಬಹದ್ದೂರ್ ಎಂ ಎ [illegible] ಯವರು ಬೊಂಬಾಯಿನ ತಾಜ್ ಮಹಲ್ ಹೋಟೆಲಿನ ಒಂದಂತಸ್ತಿನಿಂದ ಕೆಳಕ್ಕೆ ಬಿದ್ದು ತತ್ಕ್ಷಣವಾಗಿ ಆಸ್ಪತ್ರೆಗೆ ಒಯ್ಯಲಾಯಿತಾದರೂ ಮರಣ ಹೊಂದಿದರು.

ಬಂಗಾಳಕ್ಕೆ ಮೇಲೆ ಧಾಳಿ

ಜಪಾನ್ ಬಂಗಾಳ ಮೇಲೆ ಅಮೆರಿಕ ವಿಮಾನಗಳು, ನಿನ್ನೆ ಮತ್ತು ಆಚೆ ಮೊನ್ನೆ ಭಾರಿ ಧಾಳಿ ನಡೆಸಿ ಬಂದುದಾಗಿ ಹೇಳಲಾಗಿದೆ [illegible]

ಬಹಿರಂಗ ಸಭೆ

ಸ್ವಂ. ವ.] ಮಂಡ್ಯ ೨೧

ಇಲ್ಲಿನ ಸಿಹಿನೀರು ಕೊಳದ ಮೈದಾನದಲ್ಲಿ ನಿನ್ನೆ ಸಂಜೆ ಶ್ರೀ ವಸ್ತ್ರೀಗೌಡರ ಅಧ್ಯಕ್ಷತೆಯಲ್ಲಿ ಸೇರಿದ ಬಹಿರಂಗ ಸಭೆಯಲ್ಲಿ ಶ್ರೀಗಳಾದ ಎ. ಜಿ. ಬಂಡಿಗೌಡರು, ಸಾಹುಕಾರ್ ಚನ್ನಯ್ಯನವರು, ಎಚ್. ಕೆ. ವೀರಣ್ಣಗೌಡರು, ಬಿ. ಎ. ಕೃಷ್ಣರವರು, ಎ. ರಾಮಣ್ಣನವರು ಮತ್ತು ಬಿ. ಜಿ. ನಂಜಪ್ಪನವರು ಭಾಷಣ ಮಾಡಿ ಸಂಘಶಕ್ತಿಯು ಅವಶ್ಯಕವಾದುದೆಂದೂ, ಮೈಸೂರು ಕಾಂಗ್ರೆಸ್ ಕಳೆದ ಮೂರು ವರ್ಷಗಳಿಂದ ರಾಜಕೀಯ ಕೈದಿಗಳಿಗಾಗಿ ಹೇಗೆ ದುಡಿಯುತ್ತಿದೆಯೆಂಬುದನ್ನು ವಿವರಿಸಿ ಭಾಷಣ ಮಾಡಿದರು.

ಸಕ್ಕರೆ ಗಿರಣಿ ಕೂಲಿಗಾರರ ಸಂಘಕ್ಕೆ ಬರುವ ಚುನಾವಣೆಗೆ ಭಾಗವಹಿಸುವವರನ್ನು ಆರಿಸಬೇಕೆಂಬ ತೀರ್ಮಾನದಂತೆ ಶ್ರೀ ಎಚ್. ಕೆ. ವೀರಣ್ಣಗೌಡರನ್ನು ಅಧ್ಯಕ್ಷಸ್ಥಾನಕ್ಕೂ, ಶ್ರೀ ಎಂ. ಆರ್. ಕೃಷ್ಣಮೂರ್ತಿಯವರನ್ನು ಕಾರ್ಯದರ್ಶಿ ಸ್ಥಾನಕ್ಕೂ ಉಮೇದುವಾರರಾಗುವಂತೆ ತೀರ್ಮಾನಿಸಲಾಗಿದೆ.

ಜರ್ಮನ್ ಹೊಸ ಧಾಳಿ

ರಷ್ಯಾ ರಣರಂಗಗಳ ಸ್ಥಿತಿ ನೀವರ್ ಡ್ಲಿಪರ್ ರಣರಂಗದಲ್ಲಿ ಜರ್ಮನರು ಹೊಸದಾಗಿ ಭಾರಿ ಧಾಳಿಯನ್ನು ಆರಂಭಿಸಿರುವರೆಂದು ತಿಳಿದುಬಂದಿದೆ.

ಸೀಪ್ಲೇನ್ ನೆಲೆಗೆ ಏಟು

ಸ್ಯಾವಂಗರ್ ಹತ್ತಿರ ಸೀಪ್ಲೇನ್ ನೆಲೆಯ ಮೇಲೆ ಬ್ರಿಟಿಷ್ ವಿಮಾನಗಳು ಧಾಳಿ ಮಾಡಿ ಅಲ್ಲಿದ್ದ ಹತ್ತು ವಿಮಾನಗಳನ್ನು ನಷ್ಟಗೊಳಿಸಿವೆ.

ಅಕ್ಕಿ ಬಿಕರಿಯಲ್ಲಿ ಅನ್ಯಾಯ

ಸ್ವಂ. ವ.] ಚಾಮರಾಜನಗರ ೨೧

ಸರ್ಕಾರದವರು ಅಕ್ಕಿ ಬೆಲೆ ನಿರ್ಧರಿಸಿರುವುದು ಸರಿಯಷ್ಟೆ, ಷೆಡ್ಯೂಲ್ ರೇಟು ರೂ. ಒಂದಕ್ಕೆ 3½ ಸೇರು ಇದ್ದರೂ ಬಿಕರಿ ಮಾತ್ರ 3½ ಸೇರು ಅರ್ಧ ಪಾವು ಅಲ್ಲದೆ ಹೊಸ ಅಕ್ಕಿಗೂ ಸಲ್ಲ ಒಂದಕ್ಕೆ 27 ರೂ.

ತುಮಕೂರು ನಗರಸಭೆ

ನಿನ್ನೆ ಮಧ್ಯಾಹ್ನ ನಡೆದ ತುಮಕೂರು ಪೌರಸಭಾಧ್ಯಕ್ಷ ಚುನಾವಣೆಯಲ್ಲಿ ಕಾಂಗ್ರೆಸ್ ಉಮೇದುವಾರರಾದ ಶ್ರೀ ಎಂ. ವಿ. ರಾಮರಾಯರು ಸರ್ವಾನುಮತದಿಂದ ಚುನಾಯಿತರಾದರು. ಉಳಿದ ಉಮೇದುವಾರರು ತಮ್ಮ ಉಮೇದುವಾರಿಕೆಗಳನ್ನು ವಾಪಸು ಪಡೆದಿದ್ದರು.

ಅಕ್ಕಿ ಬೆಲೆ ಇಳಿಯುವುದೆ?

ಭಾರತ ಸರ್ಕಾರದವರು ಅಕ್ಕಿ ಬೆಲೆ ಬಗ್ಗೆ ತಾತ್ಕಾಲಿಕವಾಗಿ ಒಂದು ನಿರ್ಧಾರಕ್ಕೆ ಬಂದಿರುವರು. ಅದರಂತೆ ಈಗಿನ ಅಕ್ಕಿ ಬೆಲೆಯನ್ನು ಇಳಿಸುವಂತೆ ಎಲ್ಲ ಸರ್ಕಾರಗಳಿಗೂ ತಿಳಿಸಿರುವರೆಂದು ಹೇಳಲಾಗಿದೆ.

ಪೋಲೀಸರ ವಶ

ಬೊಂಬಾಯಿ ನಗರದ ಪೋಲೀಸರು ನಗರದಲ್ಲಿ ಪ್ರಚಾರವಾಗುತ್ತಿದ್ದ ಸ್ವಾತಂತ್ರ್ಯ ದಿನಾಚರಣೆ ಸಂಬಂಧದ ಎಲ್ಲ ಹಸ್ತ ಪತ್ರಿಕೆಗಳನ್ನೂ ತಮ್ಮ ವಶ ಪಡಿಸಿಕೊಂಡರು.

ಯುದ್ಧ ಮಂಡಳಿಕ್ಕೆ

ಸರ್ ಫಿರೋಜ್ ಖಾನ್‌ನೂನರು ಯುದ್ಧ ಮಂತ್ರಿ ಮಂಡಲದಲ್ಲಿ ಭಾರತ ಪ್ರತಿನಿಧಿಯಾಗಿರುವಂತೆ ವೈಸರಾಯರು ನೇಮಿಸಿದ್ದಾರೆ. ರಾಜರ ಪ್ರತಿನಿಧಿಯನ್ನು ಸಧ್ಯದಲ್ಲೇ ಆರಿಸಲಾಗುವುದು.

ವಿದ್ಯಾಭ್ಯಾಸಕ್ಕೆ ೬೧ ಕೋಟಿ

ಬರೋಡಾದಲ್ಲಿ ಸೇರಿದ್ದ ಕೇಂದ್ರ ಸಲಹಾ ಸಮಿತಿಯವರು ರಾಷ್ಟ್ರೀಯ ವಿದ್ಯಾಭ್ಯಾಸಕ್ಕಾಗಿ ೬೧ ಕೋಟಿ ರೂ. ವೆಚ್ಚದ ಯೋಜನೆಯನ್ನು ಅಂಗೀಕರಿಸಿದ್ದಾರೆ.

ಅಬಲೆಯರೇ ಪ್ರಬಲರು

ಮಾನವನು ಹಂದಿಗಳ ವಂಶಸ್ಥನೆಂದ ಹೇಳಿದ ಮದರಾಸ್ ಪ್ರೆಸಿಡೆನ್ಸಿ ಕಾಲೇಜು ಪ್ರಾಣಿಶಾಸ್ತ್ರ ಪ್ರೊಫೆಸರ್ ಡಾ|| ರಾಮಾನುಜಂರವರು ಇನ್ನೊಂದು ಹೊಸ ತತ್ವವನ್ನು ನಿರೂಪಿಸಿ, ಗಂಡು-ಹೆಣ್ಣುಗಳಲ್ಲಿ ನಿಜವಾಗಿಯೂ ಹೆಂಗಸರೇ ಹೆಚ್ಚು ಶಕ್ತಿಯುಳ್ಳವರೆಂದು ಸಾರಿದ್ದಾರೆ.

ದೀಪದ ನಿರ್ಬಂಧವಿಲ್ಲ

ಮದರಾಸಿನಿಂದ ಇಪ್ಪತ್ತೈದು ಮೈಲಿಯಿಂದಾಚೆ ಇರುವ ಸ್ಥಳಗಳಲ್ಲಿ ಬ್ಲಾಕ್ ಔಟ್ ಮುಂತಾದ ನಿರ್ಬಂಧಗಳನ್ನು ಮದರಾಸ್ ಸರ್ಕಾರದವರು ತೆಗೆದಿದ್ದಾರೆ.

ಹಸ್ತ ಪತ್ರಿಕೆಗಳೂ ಕೂಡದು

ಹಾಗದದ ಅಭಾವದ ಕಾರಣ ಯಾವ ಹಸ್ತಪತ್ರಿಕೆಗಳನ್ನೂ, ಪೋಸ್ಟರ್‌ಗಳನ್ನೂ ಮುದ್ರಿಸಿ ಹಂಚದಂತೆ ಲಕ್ನೋ ಮ್ಯಾಜಿಸ್ಟ್ರೇಟರು ಆಜ್ಞೆ ಮಾಡಿದ್ದಾರೆ. ಸಿನಿಮಾದವರೂ ನೋಟೀಸುಗಳನ್ನು ಹಂಚಕೂಡದು.

ಲಾಠಿ ಪ್ರಕರಣ - - ನಿಲುವಳಿ ಸೂಚನೆ

ಸರ್ದಾರ್ ಮಂಗಳಸಿಂಗರವರು ಬರುವ ಕೇಂದ್ರ ಶಾಸನ ಸಭಾಧಿವೇಶನಕ್ಕೆ ಅಮೃತಸರದ ಹಿಂದೂ ಮಹಾಸಭಾಧಿವೇಶನ ಕಾಲದಲ್ಲಿ ನಡೆದ ಲಾಠಿ ಪ್ರಕರಣದ ಬಗ್ಗೆಯೂ ಹರಿಪ್ಪುರದ ಗಲಭೆ ಬಗ್ಗೆಯೂ ಎರಡು ನಿಲುವಳಿ ಸೂಚನೆಗಳನ್ನು ಕಳುಹಿಸಿರುವರು.

ಹಿಟ್ಲರನಿಗೆ ಆಶ್ರಯವೆಲ್ಲಿ?

ಅರ್ಜೆಂಟೈನಾದಲ್ಲಿ ಯುದ್ಧಾನಂತರ ವಿಶ್ರಾಂತಿ ತೆಗೆದುಕೊಳ್ಳಲು ಹಿಟ್ಲರನು ಒಂದು ಸ್ಥಳವನ್ನು ಗೊತ್ತುಮಾಡಿಕೊಂಡಿರುವನೆಂದು ಹೇಳಲಾಗಿದೆ.

ಅಮೆರಿಕಾದಲ್ಲಿ ಲಕ್ಷ ವಿಮಾನ

ಕಳೆದ ವರ್ಷ ತಯಾರಿಸಿದುದಕ್ಕಿಂತ ಶೇ|| ೫೦ ರಷ್ಟು ಹೆಚ್ಚಾಗಿ ವಿಮಾನಗಳನ್ನು ತಯಾರಿಸುವ ಯೋಜನೆಯಂತೆ ಅಮೆರಿಕದಲ್ಲಿ ಈ ವರ್ಷ ಒಂದು ಲಕ್ಷಕ್ಕಿಂತ ಹೆಚ್ಚಾಗಿ ವಿಮಾನಗಳು ತಯಾರಾಗಲು ಏರ್ಪಾಡಾಗಿದೆ.

ಭಿಕ್ಷುಕರಿಗೆ ಸೌಕರ್ಯ

ಬೊಂಬಾಯಿ ನಗರದಲ್ಲಿರುವ ಭಿಕ್ಷುಕರಿಗೆ ಸಹಾಯ ನೀಡಲು ಅಲ್ಲಿನ ಸರ್ಕಾರದವರು ಒಂದು ಶಾಸನವನ್ನು ಸಿದ್ಧಗೊಳಿಸುತ್ತಿರುವರು. ಆ ಶಾಸನ ಜಾರಿಗೆ ಬಂದರೆ ಅಲ್ಲಿನ ಭಿಕ್ಷುಕರುಗಳಿಗೆ ವಾಸಕ್ಕೆ ಮುನಿಸಿಪಾಲಿಟಿ ಮನೆಗಳು ಸಿಕ್ಕುವುವು. ದೃಢಕಾಯರಾದ ಭಿಕ್ಷುಕರಿಗೆ ಶಿಕ್ಷಣ ಕೊಟ್ಟು ವೃತ್ತಿ ಕಲ್ಪಿಸಿ ಕೊಡಲಾಗುವುದು.

1944

ಈ ಕಾಲದಲ್ಲಿ

ದುಡ್ಡು

ಹತ್ತಿರವಾಗಲೀ ಡಿಪಾಜಿಟ್ ಆಗಲೀ ಇರುವುದಕ್ಕಿಂತ

ಮನೆ, ಬಂಗ್ಲೆ, ಸೈಟು, ಗದ್ದೆ

ಇತ್ಯಾದಿಗಳನ್ನು

ಕೊಳ್ಳಿರಿ

ಶಾಶ್ವತವಾದ

ಆಸ್ತಿ

ಆಗುವುದು.

ಈ ದಿನವೇ ನಿರ್ಧರಿಸಿ.

ಈಗಿನ ಕಾಲದ ಹಣಕ್ಕೆ ಬೆಲೆಯಿಲ್ಲ

ಹೆಚ್ಚಾದ

ಹಣವೇ

ಬೇಕೆಂದರೆ ನಿಮ್ಮ ಮನೆ

ಮಾರಿಬಿಡಿ.

ಬಿ. ಎಸ್. ಸುಬ್ಬರಾವ್

ಏಜೆಂಟ್ ಅಕೌಂಟಿಂಗ್ ಕೋ,

(ಜಗನ್ಮೋಹನ ಬಂಗ್ಲೆ ಎದುರು)

ಮೈಸೂರು.

Edited, printed and published by A. R. Nagarajan, at the Sadhvi Press, D.Subbiah Road, Mysore.

ಚಳಿಗಾಲ

ಅತ್ಯುತ್ತಮವಾದ ರಗ್ಗುಗಳಿಗೂ, ವುಲ್ಲನ್ ಕೋಟಿಂಗ್, ಕಂಬಳಿ ವಸ್ತ್ರಗಳಿಗೂ ಎಲ್ಲೂ ಹುಡುಕಬೇಡಿ.

ನೇರವಾಗಿ ನಮ್ಮಲ್ಲಿಗೆ ಬನ್ನಿ. ಕಡಿಮೆ ಬೆಲೆಗೆ ಉತ್ತಮವಾದ ಮಾಲು ಹೊಂದಿರಿ.

ಜಿ. ವಿ. ಸೂರ್ಯನಾರಾಯಣ ಶೆಟ್ಟಿ ಅಂಡ್ ಸನ್ಸ್

ಜ್ಯೂಯಲರ್ಸ್ & ರೆಡಿಮೇಡ್ ಡ್ರೆಸ್ ಎಂಪೋರಿಯಂ,

ಸಯ್ಯಾಜಿರಾವ್ ರೋಡ್, ಮೈಸೂರು.

ಈ ದಿನ —

ಒಲಂಪಿಯಾದಲ್ಲಿ

ಮುರಾರಿಯವರ

ಬದಲ್ತಿ ದುನಿಯ

ಅಭಿನಯ:—ಮುಮ್ತಾಜ್ ಶಾಂತಿ, ಕೆ. ಸಿ. ಡೇ, ತ್ರಿಲೋಕ್ ಕಪೂರ್.

ಪ್ರತಿ ದಿನ ಮೂರು ಆಟಗಳು

ಕರ್ನಾಟಕ ಫಿಲಂಸ್‌ರವರ ಹಂಚಿಕೆ.

ಸ್ತ್ರೀಯರ ಸೌಕರ್ಯಕ್ಕಾಗಿ

ಈ|| ೧-೧-೪೪ ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡುತ್ತೇವೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿ ಪುಡಿ

ಯನ್ನೇ ಉಪಯೋಗಿಸಿ.

ಡಿ. ಪುಟ್ಟಯ್ಯ ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ವಿ. ಸೂ.—ಇಲ್ಲೂ ಮತ್ತು ಸಂತೆಪೇಟೆ ಬ್ರಾಂಚ್ ಆಫೀಸಿನಲ್ಲೂ ರವೆ, ಗೋಧಿಹಿಟ್ಟು ಮುಮ್ಮ ಸ್ವಾದಿಷ್ಟ ಸಹ ದೊರೆಯುತ್ತೆ. ಅಲ್ಲದೆ ಜೋಳ ಮತ್ತು ರಾಗಿ ಶಕ್ಕರೆ ರೇಷನ್ ಕಾರ್ಡುಗಳಿಗೆ ದೊರೆಯುತ್ತವೆ.

ಅಪೇರಾ ಟಾಕೀಸ್

ಪ್ರತಿ ದಿನ ಮೂರು ಆಟಗಳು

20-1-44 ರಿಂದ

ಚಾರಲ್ಸ್ ಲಾಫ್ಟನ್, ಸರ್ ಸೆಡ್ರಿಕ್ ಹಾರ್ಡ್‌ವಿಕ್, ಥಾಮಸ್ ಮಿಚೆಲ್, ಮುರೀನ್ ಒಹರಾ ಪಾತ್ರವಹಿಸಿರುವ

ದಿ ಹಂಚ್‌ಬ್ಯಾಕ್ ಆಫ್ ನೋಟ್ರಡೇಮ್

ಸಂಪುಟ ೨] ಭಾನುವಾರ ೨೩--೧--೪೪ [ಸಂಚಿಕೆ ೧೬೦

ಆರ್ಜೆಂಟೈನಾ ರಾಯಭಾರಿ ದಸ್ತಗಿರಿ

ಕಲ್ಕತ್ತಾದಲ್ಲಿ ದೇವರ ನೈವೇದ್ಯಕ್ಕೆ ರೇಷನ್ ಕೊಡುವುದಿಲ್ಲ
ಸ್ತ್ರೀಯರಿಂದ ದುಡಿಸದಂತೆ ಚಕ್ರವರ್ತಿನಿಯವರಲ್ಲಿ ಮೊರೆ

ವೈಸರಾಯರ ನಿರ್ಲಕ್ಷ್ಯ

ರಾಜಕೀಯ ವಿಚಾರದ ಪ್ರಸ್ತಾಪವನ್ನು ವೈಸ್ರಾಯರು ಮಾಡಲೊಪ್ಪದಿದ್ದುದರಿಂದ ಅವರನ್ನು ಭೇಟಿಮಾಡಿದವರುಗಳ ಮನಃ ಕ್ಲೇಶಕ್ಕೆ ಕಾರಣವಾಗುತ್ತದೆ, ಶಾಸನ ಸಭೆಯಲ್ಲಿ ಮುಂದಿನ ತಿಂಗಳು ವೈಸರಾಯರು ಭಾಷಣ ಮಾಡುವಾಗ ರಾಜಕೀಯ ತೊಡಕುಗಳನ್ನೇ ಅವರು ಮುಂದೊತ್ತುವರೆಂದೂ, ಬ್ರಿಟಿಷ್ ಪರಿಹಾರಕ್ಕಾಗಲಿ ನಾಯಕರ ಬಿಡುಗಡೆಗಾಗಲಿ ಗಮನಕೊಡುವುದಿಲ್ಲವೆಂದೂ ಹೇಳಲಾಗಿದೆ

ಕಾಂಗ್ರೆಸ್ ಸೋಷಲಿಸ್ಟ್ ಕಛೇರಿ ಪತ್ತೆ

ಕಾಂಗ್ರೆಸ್ ಸೋಷಲಿಸ್ಟ್ ಪಕ್ಷದ ಗುಟ್ಟಿನ ಕಛೇರಿಯನ್ನು ದಿಲ್ಲಿಯ ಪೋಲೀಸರು ಬಲು ಪ್ರಯಾಸದಿಂದ ಪತ್ತೆಮಾಡಿರುವರು. ಅಲ್ಲಿದ್ದ ಅಕ್ಷೇಪಕರವಾದ ಹಸ್ತಪತ್ರಿಕೆಗಳನ್ನೂ ಕೆಲ ಪುಸ್ತಕಗಳನ್ನೂ ಮುಟ್ಟುಗೋಲು ಹಾಕಿಕೊಳ್ಳಲಾಯಿತು. ದಿಲ್ಲಿಯ ಪಿ॥ ಅಬ್ದುಲ್ ಕ್ವಯಾಂ ಎಂಬ ಕಾಂಗ್ರೆಸ್ ಸೋಷಿಯಲಿಸ್ಟ್ ಮುಖಂಡನನ್ನು ರಕ್ಷಣಾ ಶಾಸನ ರೀತ್ಯಾ ಬಂಧಿಸಿರುತ್ತಾರೆ.

ಭಾರತಕ್ಕೆ ಸ್ವಾತಂತ್ರ್ಯ-ಶಾಸನ ಸಭೆಗೆ ನಿರ್ಣಯ

ಯುದ್ಧಾನಂತರ ಒಂದು ವರ್ಷದೊಳಗಾಗಿ ಭಾರತಕ್ಕೆ ಸ್ವಾತಂತ್ರ್ಯ ಕೊಡುವುದಾಗಿ ಘೋಷಿಸಬೇಕು. ರಾಜಕೀಯ ಬಂದಿಗಳನ್ನು ಬಿಡುಗಡೆ ಮಾಡಬೇಕು, ಎಂಬ ನಿರ್ಣಯಗಳನ್ನ ಬರಲಿರುವ ಕೇಂದ್ರ ಶಾಸನ ಸಭೆಯ ಮುಂದೆ ಸರ್ದಾರ್ ಮಂಗಲಸಿಂಗರು ಮಂಡಿಸುವರೆಂದು ತಿಳಿದುಬಂದಿದೆ.

ನೈವೇದ್ಯಕ್ಕೆ ರೇಷನ್ ಇಲ್ಲ

ಕಲ್ಕತ್ತಾ ನಗರದಲ್ಲಿ ರೇಷನಿಂಗ್ ಜಾರಿಗೆ ತರಲಾಗುವುದರಿಂದ ಆ ಕಾಲಕ್ಕೆ ಹಿಂದೂ ಸಂಸ್ಥೆಗಳಲ್ಲಿ ದೇವರುಗಳ ನೈವೇದ್ಯಕ್ಕಾಗಿ ಪ್ರತ್ಯೇಕವಾದ ರೇಷನನ್ನು ಕೊಡಲಾಗುವುದಿಲ್ಲವೆಂದು ತಿಳಿಸಲಾಗಿದೆ

ಸರೋಜಿನಿಯವರ ಸಂತಾಪ

ಶ್ರೀಮತಿ ಸರೋಜಿನಿನಾಯುಡುರವರು ಅಲಹಾಬಾದಿಗೆ ಬಂದು ಶ್ರೀಮತಿ ವಿಜಯಲಕ್ಷ್ಮಿ ಪಂಡಿತರನ್ನು ಖುದ್ದಾಗಿ ಕಂಡು ಶ್ರೀ ಆರ್. ಎಸ್. ಪಂಡಿತರ ನಿಧನದ ಬಗ್ಗೆ ತಮ್ಮ ಸಂತಾಪವನ್ನು ವ್ಯಕ್ತ ಪಡಿಸಿ ಹಿಂತಿರುಗಿದರು.

ಬಿರುದು ಪದ್ಧತಿ ರದ್ದುಮಾಡಿ

ಸರ್ದಾರ ಮಂಗಳಸಿಂಗರು ಬಿರುದು ಬಾವಲಿಗಳನ್ನು ಕೊಡುವ ಪದ್ಧತಿ ವಜಾ ಮಾಡಬೇಕೆಂದು ಕೇಂದ್ರ ಶಾಸನ ಸಭೆಗೆ ಸೂಚನೆ ಕಳುಹಿಸಿರುವರು

ಸ್ವಾತಂತ್ರ್ಯ ದಿನೋತ್ಸವಕ್ಕೆ ಅಡ್ಡಿ

ಜನೇ ೨೬ ನೇ ತಾ॥ ನಡೆಯಬೇಕಾಗಿರುವ ಸ್ವಾತಂತ್ರ್ಯ ದಿನಾಚರಣೆ ಸಿಂಧ್ ಪ್ರಾಂತ್ಯದಲ್ಲೆಲ್ಲೂ ನಡೆಯಕೂಡದೆಂದು ಆಜ್ಞೆ ಹೊರಟಿದೆ

ಹೆಂಗಡನೆ ಸ್ತ್ರೀಯರ ಬಿಡುಗಡೆ

ಗಾಂಧೀಜಿ ಮೊದಲಾದ ಎಲ್ಲರನ್ನೂ ಬಿಡುಗಡೆ ಮಾಡಬೇಕೆಂದು ಪತ್ರವನ್ನು ... ಕೇಳಿ ಪ್ರಾಂತ್ಯದ ಮಹಿಳಾ ಸಂಘಗಳಲ್ಲಿ ... ನಿರ್ಣಯ ... [illegible]

ಬರೋಡಾ ದಿವಾನರ ರಾಜೀನಾಮೆ ಸುದ್ದಿ

ಬರೋಡಾ ಅರಸರ ಎರಡನೇ ಮದುವೆ ಬಗ್ಗೆ ಕೇಂದ್ರ ಸರ್ಕಾರದ ಮನೋಭಾವ ಯಾವ ರೀತಿಯಾಗಿದೆಯೆಂಬ ಬಗ್ಗೆ ಇನ್ನೂ ಏನೂ ಗೊತ್ತಾಗಿಲ್ಲ. ಈ ಮದುವೆಯನ್ನು ಪ್ರತಿಭಟಿಸಲು ಬರೋಡಾ ದಿವಾನರು ರಾಜೀನಾಮೆಯಿತ್ತಿರುವರೆಂಬ ಊಹಾಪೋಹಗಳು ನಿರಾಧಾರವಾದವೆಂದು ತಿಳಿದು ಬಂದಿದೆ. ಕೂಡಲೇ ಯಾವ ಬಿಕ್ಕಟ್ಟೂ ಉದ್ಭವಿಸದಿದ್ದರೂ ಮದುವೆ ಶಾಸನಕ್ಕೆ ವಿರೋಧವಾಗಿ ನಡೆದಿರುವ ಕಾರಣ ಅನೇಕ ತೊಂದರೆಗಳು ಏಳುವುದು ಖಂಡಿತವೆಂದು ಗೊತ್ತಾಗಿದೆ.

ಬರೋಡಾ ವಿವಾಹಕ್ಕೆ ಸುಧಾರಕರ ಪ್ರತಿಭಟನೆ

ಬೊಂಬಾಯಿ ಪ್ರಾಂತ್ಯದ ಸಮಾಜ ಸುಧಾರಣಾ ಸಂಘದವರು ಬರೋಡಾ ಮಹಾರಾಜರ ದ್ವಿತೀಯ ವಿವಾಹವನ್ನು ಖಂಡಿಸಿ ಠರಾವನ್ನು ಮಾಡಿದ್ದಾರೆ. ಇತರ ಪ್ರಾಂತ್ಯಗಳಿಗೂ ಮೇಲ್ಪಂಕ್ತಿಯಾಗುವಂತೆ ಬಹುಪತ್ನೀತ್ವವನ್ನು ವಿರೋಧಿಸಿ ಬರೋಡಾದಲ್ಲಿ ಮಾಡಿರುವ ಕಾನೂನನ್ನು ಮಹಾರಾಜರೇ ಉಲ್ಲಂಘಿಸಿ, ಎಲ್ಲರಿಗೂ ಕೆಟ್ಟ ದಾರಿಯನ್ನು ತೋರಿಸಿರುವುದಲ್ಲದೆ ಇಂತಹ ಉತ್ತಮ ಕಾನೂನುಗಳು ಇತರ ಕಡೆಗಳಲ್ಲೂ ಜಾರಿಗೆ ಬರುವುದಕ್ಕೆ ಅಡಚಣೆಯುಂಟು ಮಾಡಿದ್ದಾರೆಂದು ಠರಾವಿನಲ್ಲಿ ಹೇಳಲಾಗಿದೆ.

ವಿಶ್ವೇಶ್ವರಯ್ಯನವರ ಒಪ್ಪಿಗೆ

ಹಿಂದೂಸ್ಥಾನದ ಆರ್ಥಿಕ ಅಭಿವೃದ್ಧಿಗಾಗಿ ಸರ್ ಪುರುಷೋತ್ತಮದಾಸ್, ಠಾಕೂರ್‌ದಾಸ್ ಮೊದಲಾದವರು ಸಿದ್ಧಗೊಳಿಸಿರುವ ೧೦೦ ಸಾವಿರ ಕೋಟಿ ರೂಪಾಯಿಗಳ ಯೋಜನೆಯನ್ನು ಸರ್ ಎಂ. ವಿಶ್ವೇಶ್ವರಯ್ಯನವರು ಸ್ವಾಗತಿಸಿದ್ದಾರೆ. ಸರ್ಕಾರದವರ ಸಹಾನುಭೂತಿಯೂ ಇದ್ದರೆ, ಅತ್ಯಂತ ಉತ್ತಮವಾಗಬಹುದೆಂದು ಹೇಳಿದ್ದಾರೆ

ಶಿವಾಜಿ ನಾಟಕ ಕೂಡದು

ಗುಂಟೂರಿನ ಮುಸಲ್ಮಾನರ ... ಅಕ್ಷೇಪಣೆ ಎತ್ತಿದ ಪ್ರಯುಕ್ತ ಅಲ್ಲಿ ಶಿವಾಜಿ ನಾಟಕವನ್ನು ಆಡದಂತೆ ... ಪ್ರಾಂತದ ಅಧಿಕಾರಿಗಳು ನಿಷೇಧಿಸಿದ್ದಾರೆ

ಚಕ್ರವರ್ತಿನಿಯರು ಪ್ರವೇಶಿಸಬೇಕು

ಹಿಂದೂಸ್ಥಾನದ ಕಲ್ಲಿದ್ದಲು ಗಣಿಗಳಲ್ಲಿ ಸ್ತ್ರೀಯರಿಂದ ಕೆಲಸ ಮಾಡಿಸುತ್ತಿರುವುದನ್ನು ತಪ್ಪಿಸಲು ಬ್ರಿಟಿಷ್ ಚಕ್ರವರ್ತಿನಿಯವರು ಪ್ರವೇಶಿಸಬೇಕೆಂದು ಪ್ರಾರ್ಥಿಸಿ ಭಾರತ ರಾಷ್ಟ್ರೀಯ ಮಹಿಳಾ ಸಮಿತಿಯವರು ಅವರಿಗೆ ಒಂದು ತಂತಿ ಕಳುಹಿಸಿದ್ದಾರೆ. ಈ ರೀತಿ ಕೆಲಸ ಮಾಡಿಸುವುದು ಲೀಗ್ ಆಫ್ ನೇಷನ್ಸ್ ನಿಬಂಧನೆಗಳಿಗೆ ವಿರುದ್ಧವಾಗಿದೆಯೆಂದೂ ಬೇರೆ ಯಾವ ಮಿತ್ರರಾಷ್ಟ್ರಗಳಲ್ಲೂ ಇಂಥಾ ಪದ್ಧತಿಯಿಲ್ಲವೆಂದೂ ಅದರಲ್ಲಿ ನಮೂದಿಸಲಾಗಿದೆ

ಧಾನ್ಯ ಜೋಪಾನ

ಜನರನ್ನು ಕಷ್ಟದಿಂದ ಪಾರುಮಾಡಬೇಕಾದರೂ ಆಹಾರ ವಿಭಾಗದವರಾಗಲಿ ಧಾನ್ಯವನ್ನು ಜೋಪಾನಮಾಡಬೇಕು. ಇತ್ತಾರ ಕಡೆಯಿಂದ ಹಣಗಳನ್ನು ಸಾಧ್ಯವಾದಷ್ಟು ಕಡಿಮೆ ಮಾಡಿ ಎಂದು ಭಾರತ ಆಹಾರ ಮಂತ್ರಿ ಶ್ರೀ ಜೆ. ಪಿ. ಶ್ರೀವಾಸ್ತವರವರು ಸಾರ್ವಜನಿಕರಲ್ಲಿ ಮನವಿ ಮಾಡಿಕೊಂಡಿರುವರು.

೨೮ ಜನರ ಮರಣ

ಬಂಗಾಳದ ಟಿಪ್ಪೆರಾ ಜಿಲ್ಲೆಯಲ್ಲಿ ಸಂಚರಿಸಿಬಂದ ಬಂಗಾಳ ಶಾಸನ ಸಭೆಯ ಸದಸ್ಯರಾದ ಧೀರೇಂದ್ರನಾಥ ದತ್ತರು ನವಂಬರ್ ತಿಂಗಳ ಮೊದಲನೆ ವಾರದಲ್ಲಿ ೨೮ ಜನರು ... ಸತ್ತಿರುವರೆಂದು ಹೇಳಿರುವರು

ಆರ್ಜೆಂಟೈನಾ ರಾಯಭಾರಿ ಬೈದು

ಪಿತೂರಿ ನಡೆಸಿದ್ದರ ಆಪಾದನೆಗಾಗಿ ಬ್ರಿಟಿಷ್ ಅಧಿಕಾರಿಗಳು ಟ್ರಿನಿಡಾಡಿನಲ್ಲಿ ಆರ್ಜೆಂಟೈನ್ ರಾಯಭಾರಿಯಾದ ಸಿನಾರ್ ಎಲ್‌ವಡೊರವನ್ನು ದಸ್ತಗಿರಿ ಮಾಡಿರುವುದಾಗಿ ವರದಿಯಾಗಿದೆ

ಆಸ್ಟ್ರೇಲಿಯಾದಲ್ಲಿ ಭಾರತ ಹೈಕಮಿಷನರ್

ಆಸ್ಟ್ರೇಲಿಯಾದಲ್ಲಿ ಭಾರತದ ಹೈಕಮಿಷನರ್ ... ಒಬ್ಬರನ್ನು ನೇಮಿಸಲು ಭಾರತ ಸರ್ಕಾರದವರು ನಿರ್ಧರಿಸಿರುವರು ... ಜನರನ್ನು ನೇಮಿಸಲಾಗುವುದು ... ಪ್ರಕಟವಾಗಬಹುದಾಗಿದೆ

ಸಿ. ಪಿ. ಯವರಿಗೆ ಸತ್ಕಾರ

ಸ್ವಂ. ಸು.] ಮೈಸೂರು ೨೩

ತಿರುವಾಂಕೂರು ದಿವಾನರಾದ ಸರ್. ಸಿ. ಪಿ. ರಾಮಸ್ವಾಮಯ್ಯರ್‌ರವರಿಗೆ ಮಾರ್ಕೆಟ್ ಮಾಲೀಕರಾದ ಶ್ರೀ ಕೆ. ಸಿ. ತಾರಾಮಯ್ಯರವರು ಈ ದಿನ ಬೆಳಗ್ಗೆ ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದರು. ಮಂತ್ರಿಗಳಾದ ರಾಜಮಂತ್ರ ಪ್ರವೀಣ ಕೆ. ವಿ. ಅನಂತರಾಮ್, ಶ್ರೀ ಹೆಚ್. ಬಿ. ಗುಂಡಪ್ಪಗೌಡರು ಎಂ. ಎ. ಶ್ರೀನಿವಾಸನ್ ಮತ್ತು ಜೆ. ಮಹಮದ್ ಇಮಾಂರವರೂ ಮತ್ತು ಅನೇಕ ಅಧಿಕಾರಿ ಮತ್ತು ಇತರ ದೊಡ್ಡ ಮನುಷ್ಯರೂ ಬಂದಿದ್ದರು. ಫೋಟೋ ಆದ ನಂತರ ಎಲ್ಲರಿಗೂ ರುಚಿಕರವಾದ ಉಪಹಾರಗಳು ಆದವು. ಸರ್. ಸಿ. ಪಿ. ಯವರೂ ಇತರರೂ ಮಾರ್ಕೆಟ್ಟಿನ ವ್ಯವಸ್ಥೆಗಳನ್ನು ನೋಡಿ ಮೆಚ್ಚಿದರು.

ಬಾವಿಗೆ ಬಿದ್ದು ಮರಣ

ಕಿಲ್ಲೇಮೊಹಲ್ಲಾ ಕರಿಕಟ್ಟೆ ಬೀದಿಯ ಕಳೂರು ಮಠದ ಹತ್ತಿರ ರಾಜಮ್ಮ ಎಂಬ ೮೦ ವರ್ಷದ ಓರ್ವ ಮುದುಕಿಯು ಬುದ್ಧಿಸ್ವಾಧೀನವಿಲ್ಲದೆ ಮೊನ್ನೆ ರಾತ್ರಿ ಬಾವಿಗೆ ಬಿದ್ದು ಮರಣಹೊಂದಿದಳೆಂದು ವರದಿಯಾಗಿದೆ.

— —

ಕೊಲ್ಲಾಪುರದಲ್ಲಿ ಲೂಟಿ

ಚೇಗಾನ್ ಮತ್ತು ಸಿಡೊರ್ ಎಂಬ ಕೊಲ್ಲಾಪುರ ಸಂಸ್ಥಾನದ ಎರಡು ಗ್ರಾಮಗಳಲ್ಲಿ ಸಶಸ್ತ್ರರಾದ ಲೂಟಿಕೋರರು ಚಾವಡಿಗಳಿಗೆ ನುಗ್ಗಿ ಸರ್ಕಾರೀ ಕಾಗದಪತ್ರಗಳನ್ನು ಸುಟ್ಟು ಶಸ್ತ್ರಾಸ್ತ್ರಗಳನ್ನು ಹೊತ್ತುಕೊಂಡು ಹೋದರೆಂದು ವರದಿಯಾಗಿದೆ. ಮತ್ತೊಂದು ಗುಂಪು ಕೊಲ್ಲಾಪುರದಿಂದ ೩ ಮೈಲಿ ದೂರದ ಆಲ್ಟೆ ಎಂಬಲ್ಲಿನ ಸೇಂದೀ ಅಂಗಡಿಗೆ ಮುತ್ತಿ ಧಾಳಿ ನಡೆಸಿರುವರು

ಬೆಲ್ಲದ ಸಮ್ಮೇಳನ

ಅಖಿಲ ಭಾರತ ಬೆಲ್ಲದ ಸಮ್ಮೇಳನವು ಮೊನ್ನೆ ದಿನ ದೆಹಲಿಯಲ್ಲಿ ಇಂಡಿಯಾ ಬೆಲ್ಲದ ಕಂಟ್ರೋಲರಾದ ಶ್ರೀ ಎನ್. ಸಿ. ಮೆಹತಾರವರ ಅಧ್ಯಕ್ಷತೆಯಲ್ಲಿ ನಡೆದು, ಬೆಲ್ಲದ ಅಭಾವದ ಕಡೆಗೆ ಸರಬರಾಜು ಮಾಡುವ ಬೆಲೆಯನ್ನು ನಿರ್ಧರಿಸುವ ವಿಷಯಗಳು ಚರ್ಚಿಸಲ್ಪಟ್ಟವು.

ನಾಜಿ ಗೂಢಚಾರರಿಗೆ ಸೂಚನೆ

ಮಿತ್ರರ ದ್ವಿತೀಯ ರಂಗದ ಗುಟ್ಟನ್ನು ಅರಿಯಲು ನಾಜಿಗಳು ಕಾಟವಿಟ್ಟು ರಾಷ್ಟ್ರಗಳಲ್ಲಿರುವ ಗುಪ್ತ ಪಡೆಗಳಿಗೆ ಸೂಚನೆ ಕೊಟ್ಟಿರುವರು. ಜಿಬ್ರಾಲ್ಟರ್ ಸಮೀಪದ ಪ್ರದೇಶಕ್ಕೆ ಜಪಾ, ಮಿತ್ರರ ಕಾರ್ಯಾಚರಣೆ ಸ್ಥಾನಕ್ಕೆ ಸಮೀಪವಾಗಿರುವ ಕಾರಣ ಜರ್ಮನ್ ಪ್ರಯಾಣಿಕರ ಪ್ರವೇಶಕ್ಕೆ ಅವಕಾಶ ಕೊಡುವುದಿಲ್ಲವೆಂದು ಸ್ಪೈನ್ ಸರ್ಕಾರ ತಿರಸ್ಕರಿಸಿದೆ.

ದ್ವಿತೀಯರಂಗದ ಸಿದ್ಧತೆ

ದ್ವಿತೀಯ ರಣರಂಗದ ಆಮೆರಿಕ ಬಾಂಬಿಂಗ್ ಮುಖಂಡರಾದ ಜ॥ ಕಾರ್ಲ್ ಸ್ಪಾಟ್ಜರು ಇಂಗ್ಲೆಂಡಿಗೆ ಬಂದಿರುವರು. ಜ॥ ಐಸನ್‌ಹೋವರ್‌ರ ಜೊತೆ ಸಹ ಇಂಗ್ಲೆಂಡ್ ತಲುಪಿ, ಮಿತ್ರರಾಷ್ಟ್ರ-ಕಮಾಂಡರ್ ಚಾರ್ಜ್‌ವಹಿಸಲು ಸಿದ್ಧರಾಗಿರುವರು.

ದಸ್ತಗಿರಿ

ಸ್ವಂ ಸು] ಬೆಂಗಳೂರು ೨೨.

ರೈಲ್ವೆ ಮೇಲ್ ಸರ್ವಿಸ್ ಪೋರ್ಟರ್ ಆದ ಅಬ್ದುಲ್ ಅಜೀಜ್ ಎಂಬುವನನ್ನು ಪ್ಯಾಗ್ರ್ಯಾಂಡ್ ಪೋಲೀಸಿನವರು ದಸ್ತಗಿರಿ ಮಾಡಿದ್ದಾರೆ. ಸ್ಟಾಂಪುಗಳನ್ನು ಅನೇಕ ಸಲ ನಾಗಿ ಓಂ ಏರ್ ಮೈಲ್ ಕಾಗದಗಳನ್ನು ಅವನು ಬಚ್ಚಿಟ್ಟುಕೊಂಡಿದ್ದನೆಂಬುದೇ ಇದಕ್ಕೆ ಕಾರಣ.

ಗ್ಯಾಸ್ಪೆಡ್‌ನಲ್ಲಿ ಕಳ್ಳಿದ್ದಲು ಕಳುವು ಮಾಡಿದ್ದರೆಂಬ ಅಪಾದನೆ ಮೇಲೆ ಮಲ್ಲೇಶ್ವರಂ ಪೋಲೀಸಿನವರು ೪ ಜನರನ್ನು ದಸ್ತಗಿರಿ ಮಾಡಿದ್ದಾರೆ.

ಮೆಹರಿನ ಶೇಟಿ ಮುತ್ತು ಎಂಬುವನನ್ನು ಸಿಟಿ ರೈಲ್ವೆ ಸ್ಟೇಷನ್ ಪ್ಲಾಟ್‌ಫಾರಂನಲ್ಲಿ ತಿರುಗಾಡುತ್ತಿದ್ದಾಗ ಗುಮಾನಿಯ ಮೇಲೆ ಪೋಲೀಸರು ದಸ್ತಗಿರಿ ಮಾಡಿದ್ದಾರೆ.

ಉದಾರ ದಾನ

ಹರಿಜನ ದೇವಾಲಯ ಪ್ರವೇಶ ಸಮಿತಿಗೆ ಶ್ರೀ ಯು. ಎಲ್. ರಾಮಚಂದ್ರರಾಯರು ೫೦ ರೂ ಗಳ ಉದಾರ ದಾನ ಮಾಡಿದ್ದಾರೆ.

ರಹದಾರಿ ಇಲ್ಲದ ಅಕ್ಕಿ

ಕಳೆದ ೧೮ ನೇ ತಾ|| ಚೌಳೂರಿನಿಂದ ಬೆಂಗಳೂರಿಗೆ ಸುಮಾರು ೬ ಚೀಲಗಳಲ್ಲಿ ಅಕ್ಕಿಯನ್ನು ನಿಗದಿ ಪ್ರಮಾಣದಂತೆ ತಲಾ ೧೦ ಸೇರಿಗಿಂತಲೂ ಹೆಚ್ಚು ಅಕ್ಕಿಯನ್ನು ರಹದಾರಿ ಇಲ್ಲದೆ ರೈಲಿನಲ್ಲಿ ಸಾಗಿಸುತ್ತಿದ್ದರೆಂದು ಗೋರಿಪಾಳ್ಯದ ಗಂಗೋಜಿರಾವ್, ಅಬ್ದುಲ್‌ಹುಸೇನ್ ಮತ್ತು ಮೊಹಿಯುದ್ದೀನ್ ಎಂಬುವರ ಮೇಲೆ ರೈಲ್ವೆ ಪೋಲೀಸರು ಮೊಕದ್ದಮೆ ಹೂಡಿದ್ದಾರೆ.

ಅಕ್ಕಿ ವಿಕರಿಯಲ್ಲಿ ಅನ್ಯಾಯ

ಸ್ವಂ. ಸು] ಚಾಮರಾಜನಗರ ೨೨

ಸರ್ಕಾರದವರು ಅಕ್ಕಿ ಬೆಲೆ ನಿರ್ಧರಿಸಿರುವುದು ಸರಿಯಷ್ಟೆ. ನಡ್ಮಲ್ ರೇಟು ರೂ ಒಂದಕ್ಕೆ 3½ ಸೇರು ಇದ್ದರೂ ಇಲ್ಲಿ ಮಾತ್ರ 3½ ಸೇರು ಅರ್ಧ ಪಾವು ಅಲ್ಲದೆ ಹೊಸ ಅಕ್ಕಿಗೂ ಪಲ್ಲ ಒಂದಕ್ಕೆ ರೂ. 37-10-0. ಹಳೇ ಅಕ್ಕಿಗೂ ಅಷ್ಟೆ ಭತ್ತ ಮಾತ್ರ ಪಲ್ಲ 1 ಕ್ಕೆ 9-8-0 ರೂ. ನಂತೆ ಕೊಳ್ಳುತ್ತಿರುತ್ತಾರೆ. ಇದು ವರ್ತಕರಿಗೆ ಮಾರಿನ ಲಾಭವಲ್ಲವೆ? ಇದನ್ನು ಜಾಗ್ರತೆ ಸರಿಪಡಿಸುವರೆಂದು ನಂಬಲಾಗಿದೆ.

ಕ್ಯಾಸೆಯವರೊಡನೆ ಭೇಟಿ

ಬಂಗಾಳ ಪ್ರಧಾನರಾದ ಸರ್ ನಾಜಿಮುದ್ದೀನರವರೂ, ಇತರ ಮಂತ್ರಿಗಳೂ ನೂತನ ಗೌರ್ನರ್ ಮಿ|| ಆರ್. ಜಿ. ಕ್ಯಾಸೆಯವರನ್ನು ಮೊನ್ನೆ ದಿನ ಭೇಟಿಮಾಡಿದರು.

ಬರ್ಲಿನ್ ಮೇಲೆ ಅಗಾಧ ಧಾಳಿ

ಗುರುವಾರ ರಾತ್ರಿ ಬರ್ಲಿನ್-ಮೇಲೆ ಮಿತ್ರ ವಿಮಾನ ಧಾಳಿನಡೆಸಿದಾಗ ೨೩೦೦ ಟನ್ ಬಾಂಬುಗಳನ್ನು ಸುರಿಸಿದವು. ನಿಮಿಷಕ್ಕೆ ೭೭ ಟನ್ ಬಾಂಬುಗಳಂತೆ ಅರ್ಧಗಂಟೆ ಏಕಪ್ರಕಾರವಾಗಿ ಸುರಿಸಲಾಯಿತು. ಇದರಿಂದ ಬರ್ಲಿನ್ ಮತ್ತು ಇತರ ರೇಡಿಯೋ ಸ್ಟೇಷನ್‌ಗಳು ಕೆಲಸಮಾಡಲಿಲ್ಲ. ಜರ್ಮನ್ ವಿಮಾನಗಳು ಹೆಚ್ಚು ಪ್ರತಿಭಟಿಸಲಿಲ್ಲ. ಕಳೆದ ನವಂಬರ್ ೧೮ ರಲ್ಲಿ ಬರ್ಲಿನ್ ಮೇಲೆ ಧಾಳಿ ಆರಂಭವಾದಾಗಿನಿಂದ ಇದುವರೆಗೆ ಆ ನಗರದ ಮೇಲೆ ೧೬ ಸಾವಿರ ಟನ್ ಬಾಂಬುಗಳನ್ನು ಸುರಿಸಲಾಗಿದೆ.

ಜಪಾನರಿಗೆ ಕಷ್ಟ

ಜಪಾನಿನ ಪ್ರಧಾನರಾದ ಟೋಜೋರವರು ಟೋಕಿಯೋವಿನಲ್ಲಿ ಡೈಯಟ್ ಸಭೆಯಲ್ಲಿ ಮಾತನಾಡುತ್ತಾ, ದಿನಗಳು ಉರುಳಿದಂತೆಲ್ಲಾ ನಮ್ಮ ಕಷ್ಟಗಳು ಹೆಚ್ಚುತ್ತಿವೆ. ಇವನ್ನು ಧೈರ್ಯದಿಂದಲೂ, ಶಕ್ತಿಯಿಂದಲೂ ಎದುರಿಸಬೇಕು ಎಂದು ನುಡಿದರು. ಮುಂದುವರಿಯುತ್ತಾ ಯಾವುದಕ್ಕೂ ಆಹಾರ ಸರಬರಾಜು ಮಾರ್ಗ ಅತ್ಯಾವಶ್ಯಕವಾದದ್ದು. ಹೋದವರ್ಷಕ್ಕಿಂತ ಈ ವರ್ಷ ನಮ್ಮ ವಿಮಾನ ಶಕ್ತಿಯು ದ್ವಿಗುಣವಾಗಿದೆ ಎಂದರು. ಯಾರು ವಿಜಯದಲ್ಲಿ ದೃಢ ನಂಬಿಕೆಯಿಂದ ಹೋರಾಡುವರೋ ಅವರಿಗೆ ಜಯವು ಸಿದ್ಧ ಎಂದು ತಿಳಿಸಿದರು.

ಮುಸೋಲಿನಿ ಮಗಳ ಬಂಧನ

ಕೌಂಟ್ ಸಿಯಾನೋ ಗಲ್ಲಿಗೇರಿಸುವುದಕ್ಕೆ ಎರಡು ದಿವಸ ಮುಂಚೆ ಸಿಯಾನೋ ಪತ್ನಿ ಎಡ್ಡಾ ಸ್ವಿಟ್ಜರ್ಲೆಂಡಿಗೆ ಗುಪ್ತ ರೀತಿಯಲ್ಲಿ ಬಂದಳೆಂದು ಸ್ವಿಸ್ ಅಧಿಕೃತ ಪ್ರಕಟಣೆ ತಿಳಿಸಿದೆ. ಅಲ್ಲಿ ಸಿಯಾನೋ ಪತ್ನಿ ಮತ್ತು ಅವಳ ೩ ಮಕ್ಕಳನ್ನೂ ಬಂಧನದಲ್ಲಿ ಡಲಾಯಿತೆಂಬುದಾಗಿ ವರದಿಯಾಗಿದೆ.

ಅಮೆರಿಕನ್ ಡಿಪ್ಲೋಮೇಟ್ ಪತ್ನಿಗೆ ಗುಂಡೇಟು

ಮಾಜಿ ಅಮೆರಿಕನ್ ಡಿಪ್ಲೋಮೇಟ್ ೬ ಬ್ಬರ ಪತ್ನಿ ಶ್ರೀಮತಿ ಫ್ರ್ಯಾಂಕ್ ಸ್ಟ್ಯಾರ್ ವಿಲಿಯಂ ಎಂಬಾಕೆ ಚೀನಾದೇಶದ ಹೋಟೆಲ್ ಒಂದರಲ್ಲಿ ಇರಲಾಗಿ ಯಾರೋ ಅಪರಿಚಯಸ್ಥರೊಬ್ಬರು ಆಕೆಯ ಮೇಲೆ ಗುಂಡುಹಾರಿಸಿದ್ದಾರೆ. ಆಕೆ ತಲೆಗೆ ತೀವ್ರವಾದ ಏಟುಬಿದ್ದಿದೆ. ಪೋಲೀಸರು ಪತ್ತೆಗಾರಂಭಿಸಿರುವರು.

ತುರ್ಕಿ ಜಹಜು ಮುಳುಗಿತು

ಗಲ್ಲಿಪೋಲಿಯಿಂದ ವಾಪಸು ಬರುತ್ತಿದ್ದ ಟ್ರಿಕ್ ಎಂಬ ತುರ್ಕಿ ಪ್ರಯಾಣಿಕರಿದ್ದ ಜಹಜನ್ನು ಮರ್ಮರಾ-ಸಮುದ್ರದಲ್ಲಿ ಮುಳುಗಿಸಿರುವರೆಂದು ವರದಿಯೊಂದು ಹೇಳುತ್ತದೆ.

ರೇಷನ್ ನೋಡಿ ತೆಗೆದುಕೊಳ್ಳಿ

ಚಾಮುಂಡಿ ಬಡಾವಣೆಯ ೧೧ ನೇ ಡಿಪೋವಿನಲ್ಲಿ ದಪ್ಪ ಅಕ್ಕಿಯನ್ನೂ 3½ ಸೇರಿನಂತೆ ಮಾರಿದ್ದಾರೆ. ಜನರು ಬೇರೆ ಮಾರ್ಗವಿಲ್ಲದೆ ಹೇಗೆಯೋ ತೆಗೆದುಕೊಂಡು ಬಿಟ್ಟಿದ್ದಾರೆ. ಸುದ್ದಿ ತಿಳಿದು ಹೋಗಿ ನೋಡುವಲ್ಲಿ "ಸಣ್ಣ ಅಕ್ಕಿ ಮೂಟೆಗಳ ಲೆಖ್ಖದಲ್ಲಿ ಇದನ್ನು ಕಳುಹಿಸಿದ್ದಾರೆ. ಆದ್ದರಿಂದ ಆ ರೇಟಿನಲ್ಲೇ ಮಾರಿದ್ದೇವೆ. ಜನರ ಅದೃಷ್ಟ" ಎಂದು ಹೇಳಿದ್ದಾರೆ.

ಇಂಥ ಘಟನೆ ಅಲ್ಲಲ್ಲೇ ನಡೆಯುತ್ತಿದೆ. ಬೇರೇ ಡಿಪೋಗಳಲ್ಲಿ ಇದೇತರದ ಅಕ್ಕಿಯು 4¼ ಸೇರಿನಂತೆ ವಿಕರಿಯಾಗುತ್ತಿದೆ. ಈ ವಿಷಯವನ್ನು ರೇಷನ್ ಅಧಿಕಾರಿಗಳ ಗಮನಕ್ಕೆ ತರಲಾಯಿತು. ಅಂಥ ತಪ್ಪಾದಾಗ ಅದನ್ನು ಮಾರಬಾರದೆಂದು ಕಛೇರಿಗೆ ರಿಪೋರ್ಟುಮಾಡುವಂತೆ ತಿಳುವಳಿಕೆಯನ್ನು ಎಲ್ಲಾ ಡಿಪೋಗಳಿಗೂ ಕಳುಹಿಸಲು ಒಪ್ಪಿದ್ದಾರೆ.

ಮಹಾಜನರು ಇಂತಹ ಅನುಮಾನ ಬಂದಾಗ ಸರಿಯಾಗಿ ನೋಡದೆ ತೆಗೆದುಕೊಳ್ಳಬಾರದೆಂದು ಪ್ರಾರ್ಥನೆ.

ವಿ. ಎಸ್. ಸೂರ್ಯನಾರಾಯಣರಾವ್,
ಮುನಿಸಿಪಲ್ ಕೌನ್ಸಿಲರ್.

ಸೈಕಲ್ ಬೆಲೆ ನಿಗದಿ

ಬೊಂಬಾಯಿ ಮತ್ತು ಕಲ್ಕತ್ತಾ ನಗರಗಳಲ್ಲಿ ಬೈಸಿಕಲ್‌ಗಳ ಪರಮಾವಧಿ ಬೆಲೆಯನ್ನು ಸರ್ಕಾರದವರು ನಿಗದಿಮಾಡಿ ಒಂದು ಪ್ರಕಟಣೆ ಹೊರಡಿಸಿದ್ದಾರೆ. ಬಿ. ಎಸ್. ಎ. ರ್ಯಾಲಿ ಅಥವಾ ಹರ್ಕ್ಯುಲಿಸ್ ಸೈಕಲ್‌ಗಳಿಗೆ ತಲಾ ೧೪೦ ರೂ. ನಂತೆಯೂ, ನ್ಯೂ ಹಡ್ಸನ್, ಹಂಬರ್, ಫಿಲಿಪ್ಸ್, ಕ್ರೋಮ್ ಅಥವಾ ಫೋನಿಕ್ಸ್ ಬೈಸಿಕಲ್‌ಗಳಿಗೆ ತಲಾ ೧೩೫ ರೂ ನಂತೆಯೂ ಬೆಲೆ ಗೊತ್ತುಮಾಡಲಾಗಿದೆ. ಇಂಡಿಯಾದ ಇತರ ಊರುಗಳಲ್ಲಿ ಚಿಲ್ಲರೆ ವಿಕರಿ, ಮೇಲ್ಕಂಡ ಬೆಲೆಗೆ ಶೇ|| ೧೦ ಕ್ಕಿಂತ ಹೆಚ್ಚಾಗಿರಕೂಡದು. ಸೈಕಲ್‌ನ ಸಾಮಾನುಗಳ ಬೆಲೆಯನ್ನು ಗೊತ್ತುಮಾಡಲಾಗುವುದು.

ಆಹ್ವಾನ ಪತ್ರಿಕೆಗಳ ಆಕಾರ

೧೫ ಚದುರ ಅಂಗುಲಗಳಿಗಿಂತ ಹೆಚ್ಚಾಗಿರುವ ಆಹ್ವಾನ ಪತ್ರಿಕೆಗಳನ್ನೂ, ೬ ಚದುರ ಅಂಗುಲಗಳಿಗಿಂತ ಹೆಚ್ಚಾಗಿರುವ ವಿಸಿಟಿಂಗ್ ಕಾರ್ಡುಗಳನ್ನೂ ಅಚ್ಚು ಹಾಕಿಸಕೂಡದೆಂದು ಇಂಡಿಯಾ ಸರ್ಕಾರದವರು ಆಜ್ಞೆಮಾಡಿ ೧೯೪೩ ರ ಪೇಪರ್ ಕಂಟ್ರೋಲ್ ಆಜ್ಞೆಗೆ ತಿದ್ದುಪಡಿಯನ್ನು ಮಾಡಿದ್ದಾರೆ.

ಕಾಲೇಜ್ ಸ್ಲೇಟು

ತಿರುಚನಾಪಳ್ಳಿಯ ಬಾಬು ಇಂಡಸ್ಟ್ರೀಸ್‌ರವರು ತಯಾರಿಸಿರುವ ಕಾಲೇಜ್ ಸ್ಲೇಟ್ ಎಂಬ ಪುಸ್ತಕವನ್ನು ನಾವು ಆದರದಿಂದ ಸ್ವೀಕರಿಸಿದ್ದೇವೆ. ಈ ಪುಸ್ತಕದ ಹಾಳೆಗಳು ಸ್ಲೇಟಿನ ಹಾಗೆ ಇವೆ. ಅದರ ಮೇಲೆ ಬಳಪದಿಂದ ಬರೆದು ಅಳಿಸಬಹುದು. ಕಾಗದ ಮತ್ತು ಸ್ಲೇಟು ಅಭಾವವಾಗಿರುವುದರಿಂದ ಪ್ರಯುಕ್ತ ಈ ಪುಸ್ತಕದಲ್ಲಿ ಕಾಲೇಜ್ ವಿದ್ಯಾರ್ಥಿಗಳು, ಹೈಸ್ಕೂಲ್ ವಿದ್ಯಾರ್ಥಿಗಳು ಮತ್ತು ವರ್ತಕರು ಇದರಲ್ಲಿ ಬರೆಯಲು ಬಹಳ ಅನುಕೂಲವಾಗಿದೆ. ಮಹಾಜನಗಳು ಇದನ್ನು ತೆಗೆದುಕೊಂಡು ಪ್ರೋತ್ಸಾಹಿಸಬೇಕು. ಈ ಪುಸ್ತಕದ ಮೈಸೂರ್ ಸ್ಟೇಟ್ ಏಜೆನ್ಸಿಯನ್ನು ಚಾಮರಾಜ ನಗರದ ಶ್ರೀ ಎಸ್. ಸತ್ಯನಾರಾಯಣರವರು ತೆಗೆದುಕೊಂಡಿದ್ದಾರೆ. ಹೆಚ್ಚಿನ ವಿವರಗಳನ್ನು ಅವರಿಂದ ಕೇಳಿ ತಿಳಿದುಕೊಳ್ಳಬಹುದು.

ಪೆಟ್ರೋಲ್ ದರ ಹೆಚ್ಚಿಸಿದೆ

೧೯೪೪ ನೇ ಜನವರಿ ೨೨ ರಿಂದ ಪೆಟ್ರೋಲ್ ದರವನ್ನು ಮುಖ್ಯ ಬಂದರುಗಳಲ್ಲಿ ಗ್ಯಾಲನ್ ಒಂದಕ್ಕೆ ೧-೧೪-೦ ರೂ ನಿಂದ ೨ ರೂ. ಗಳಿಗೆ ಹೆಚ್ಚಿಸಲಾಗಿದೆ. ಆದರೆ ಸೀಮೆ ಎಣ್ಣೆ ದರದಲ್ಲಿ ಬದಲಾವಣೆಯನ್ನೇನೂ ಮಾಡಿಲ್ಲ.

ಆಕಾಶವಾಣಿ

ಜನವರಿ ೨೪ ನೇ ಸೋಮವಾರ-೮-೦೦ ಗೀತಗೋವಿಂದ ೮-೩೦ ನಾಗಸ್ವರ ವಾದನ: ವಿದ್ವಾನ್ ನಾರಣಪ್ಪನವರಿಂದ.

ಚಳಿಗಾಲ

ಅತ್ಯುತ್ತಮವಾದ ರಗ್ಗುಗಳಿಗೂ, ಪುಲ್ಲ ಕೋಟಿಂಗ್, ಕಂಬಳಿ ವಸ್ತ್ರಗಳಿಗೂ ಎಲ್ಲೂ ಹುಡುಕಬೇಡಿ.

ನೇರವಾಗಿ ನಮ್ಮಲ್ಲಿಗೆ ಬನ್ನಿ. ಕಡಿಮೆ ಬೆಲೆಗೆ ಉತ್ತಮವಾದ ಮಾಲು ಹೊಂದುವಿರಿ.

ಜಿ. ವಿ. ಸೂರ್ಯನಾರಾಯಣ ಶೆಟ್ಟಿ ಅಂಡ್ ಸನ್ಸ್

ಜ್ಯೂಯಲರ್ಸ್ & ರೆಡಿಮೇಡ್ ಡ್ರೆಸ್ ಎಂಪೋರಿಯಂ,

ಸಯ್ಯಾಜಿರಾವ್ ರೋಡ್, ಮೈಸೂರು.

Edited, printed and published by A. R. Nagarajan at the Sadhvi-Press, D.Subbiah Road, Mysore.

ಸ್ತ್ರೀಯರ ಸೌಕರ್ಯಕ್ಕಾಗಿ

ತಾ|| ೧೧ ೧೯೪೩ ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿರುತ್ತೆ

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿಪುಡಿ

ಯನ್ನೇ ಉಪಯೋಗಿಸಿ

ಟಿ. ಪುಟ್ಟಯ್ಯ ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ಸೂ - ಇಲ್ಲಿಯ ಮತ್ತು ಸಂತೆಪೇಟೆ ಹೆಡ್ ಆಫೀಸಿನಲ್ಲೂ ರವೆ, ಗೋಧಿಹಿಟ್ಟು ಮತ್ತು ಮೈದಾಹಿಟ್ಟು ಸಹ ದೊರೆಯುತ್ತೆ. ಅಲ್ಲದೆ ಬಾರಾ ಮೆಣಸು ಕಲ್ಲುಸಕ್ಕರೆ ರೇಷನ್ ಕಾರ್ಡುಗಳಿಗೆ ದೊರೆಯುತ್ತವೆ.



ಹೊಸದಾಗಿ ಬಂದಿವೆ !

Truthful READY MADE CLOTHES MADURA

ಸೊಗಸು ಸಿದ್ಧ ಪಡಿಸಿರುವ ತರಹೇವಾರಿ ಮಕ್ಕಳ ನವೀನ ಮಾದರಿ ಉಡುಪುಗಳು ಫ್ರಾಕುಗಳು, ಜಂಪರುಗಳು.

ಹೊಸ ನಮೂನೆಯ ಸೀರೆಗಳು ಮತ್ತು ಕರವಸ್ತ್ರಗಳು ಇಲ್ಲಿ ದೊರೆಯುತ್ತವೆ

ಸ್ವದೇಶಿ ಸ್ಟೋರ್ಸ್

ನಾಸಪ್ರಕಾಶ್ ಭವನ, ಮಾದರ್ ಕೆರೆ, ಮೈಸೂರು.

WEEKLY EDITION

ಸಂಪುಟ ೮] ಸೋಮವಾರ ೨೪--೧--೪೪ [ಸಂಚಿಕೆ ೧೩

ಪಶ್ಚಿಮ ಇಟಲಿಯಲ್ಲಿ ಮಿತ್ರರು ಇಳಿದರು

ಯುದ್ಧ ಕರ ಕಾನೂನು ತಿದ್ದುಪಡಿ ಬಗ್ಗೆ ಕೋಲಾಹಲ

'ಜರ್ಮನಿ-ಜಪಾನುಗಳನ್ನು ಸೋಲಿಸಲು ದೀರ್ಘಕಾಲ ಬೇಕು'

ಕೃಷ್ಣರಾಜೇಂದ್ರ ಗಿರಣಿ ಮುಷ್ಕರ ಮುಕ್ತಾಯವೆ?

[ಸ್ವಂ. ಸು.] ಮೈಸೂರು ೨೪

ಮೇಲ್ಕಂಡ ಸಂಘದ ಕಾರ್ಯಕಾರಿ ಸಮಿತಿ ಮೀಟಿಂಗು ತಾ|| ೨೩-೧-೪೪ ರಲ್ಲಿ ಶ್ರೀ ಟಿ. ಮರಿಯಪ್ಪನವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಂಡಂತೆ ತೀರ್ಮಾನಿಸಲಾಯಿತು:—

"ಕೆಲಸಗಾರರಿಗೂ ಮಿಲ್ಲಿನವರಿಗೂ ಉಂಟಾಗಿರುವ ಭಿನ್ನಾಭಿಪ್ರಾಯಗಳನ್ನು ಪಂಚಾಯಿತಿ ಕೋರ್ಟು ವಿಚಾರಿಸುತ್ತಿರುವುದರಿಂದ ಕೆಲಸಗಾರರು ಮುಷ್ಕರವನ್ನು ನಿಲ್ಲಿಸಿ, ಮತ್ತೆ ಕೆಲಸಕ್ಕೆ ಹೋಗುವುದು ಯೋಗ್ಯವೆಂದು ಮೈಸೂರು ಕಾಂಗ್ರೆಸ್ ಮಾಜಿ ಅಧ್ಯಕ್ಷರಾದ ಶ್ರೀಯುತ ಹೆಚ್. ಸಿ. ದಾಸಪ್ಪನವರೂ ಮತ್ತು ಪಂಚಾಯಿತಿ ಕೋರ್ಟಿನ ಅಧ್ಯಕ್ಷರಾದ ರಿಟೈರ್ಡ್ [illegible] ಜಸ್ಟಿಸ್ ಟಿ. ಸಿಂಗಾರವೇಲು ಮೊದಲಿಯಾರ್‌ರವರೂ ಅಪ್ಪಣೆ ಕೊಡಿಸಿರುವುದರಿಂದ, ಈ ಅಂಶವನ್ನು ಸಂಘದ ಜನರಲ್ ಬಾಡಿ ಸಭೆಯ ಮುಂದೆ ತಾ|| ೨೪-೧-೪೪ರಲ್ಲಿ ಸ್ಪೆಷಲ್ ಮೀಟಿಂಗ್‌ನಲ್ಲಿ ಇಟ್ಟು ಅವರ ಅನುಮತಿ ಪಡೆದ, ಮುಷ್ಕರವನ್ನು ನಿಲ್ಲಿಸಬಹುದೆಂದೂ, ಕೆಲಸಕ್ಕೆ ಹಿಂತಿರುಗಬಹುದೆಂದೂ ಕೆಲಸಕ್ಕೆ ಹೋದನಂತರ ಪರಸ್ಥಳಕ್ಕೆ ಹೋಗಿರುವ ಕೆಲಸಗಾರರು ಬರಲು ಅವಕಾಶವಾದಲ್ಲಿ ಅಂಥವರಿಗಾಗಿ ಫೆಬ್ರವರಿ ೧೫ರ ವರೆಗೆ ಕಾಲಾವಕಾಶ ಕೊಡಬೇಕೆಂದೂ ತೀರ್ಮಾನಿಸಲಾಯಿತು.

ಕೆಲಸಗಾರರಲ್ಲಿ ಹೆಚ್. ಸಿ. ದಾಸಪ್ಪನವರ ವಿನಂತಿ

ಅತ್ಯಂತ ಶಾಂತಿಯಿಂದ [illegible] ಬಹು ದಿನಗಳಿಂದಲೂ ನೀವು ಮುಷ್ಕರವನ್ನು ನಡೆಸಿದ್ದೀರಿ. ಇಷ್ಟು ದೀರ್ಘವಾಗಿ ಯಾರೂ ಮುಷ್ಕರ ನಡೆಸಿರುವುದು ನಮಗೆ ಗೋಚರವಾಗಿದೆ. ನೀವು ಅನಂತ ಅಭಿನಂದನೆಗಳಿಗೆ ಅರ್ಹರಾಗಿದ್ದೀರಿ. ಈಗಾಗಲೇ ವಿಚಾರಣಾ ಸಮಿತಿ ನೇಮಕವಾಗಿ ವಿಚಾರಣೆ ನಡೆಯುತ್ತಿರುವ ನಿಮಿತ್ತ ನೀವು ಸಹ ಈ ಪರಿಸ್ಥಿತಿಯನ್ನು ಗಮನಿಸಿ, ಅದರಂತೆ ವರ್ತಿಸುವುದು ಉತ್ತಮ. ನಿಮ್ಮ ತ್ಯಾಗ ನಷ್ಟವಾಗುವುದಿಲ್ಲ. ನನ್ನ ಅಭಿಪ್ರಾಯದಲ್ಲಿ ನೀವು ಮುಷ್ಕರ ಮುಂದುವರಿಸಬೇಕಾದ ಅಗತ್ಯವಿಲ್ಲ. ಮುಷ್ಕರದ ಉದ್ದೇಶ ಸಾಧನೆಯಾಗಿದೆ. ಆದ ಕಾರಣ ನೀವು ನಿಮ್ಮ ಕೆಲಸಗಳಿಗೆ ಸೇರಬೇಕೆಂದು ನನ್ನ ಮನವಿ. ವಿಚಾರಣಾ ಸಮಿತಿಯವರ ನಿಷ್ಪಕ್ಷಪಾತವಾಗಿ ಯುಕ್ತವಾದ ತೀರ್ಮಾನವನ್ನು ಕೊಡುವರೆಂದು ನೀವು ನಂಬಬಹುದು. [illegible] ಅನ್ಯೋನ್ಯವಾಗಿ ಮುಂದುವರಿಯಲೇ ಬೇಕು. ನಿಮ್ಮ ಈ ಮುಷ್ಕರವು ನೀವು ಆರಿಸಿದ ಮಾರ್ಗ. ಉಂಟುಮಾಡುವುದರಲ್ಲಿ ಸಂದೇಹವಿಲ್ಲ. ನೀವು ಗಿರಣಿ ಬಿಟ್ಟಿದ್ದೀರಿಯಾದರೂ ನಿಮ್ಮ ಜೊತೆಗಾರರ ಹೆಚ್ಚಿನ ಮೆಚ್ಚುಗೆ ಪಡೆಯುವ ಸಲುವಾಗಿಯೂ ತಡಮಾಡದೆ ಕೆಲಸಕ್ಕೆ ಹಿಂತಿರುಗುವುದು ಶ್ರೇಯಸ್ಕರ.

ನಾಟ್ಯ ಗುರುಗಳಿಗೆ ಸನ್ಮಾನ

ರಾಜಧಾನಿಯ ಸುಪ್ರಸಿದ್ಧ ಭರತನಾಟ್ಯ ಅಧ್ಯಾಪಿಕೆಯರಾದ ಶ್ರೀಮತಿ ಜಟ್ಟಿ ತಾಯಮ್ಮನವರ [illegible] ಅವರ ಶಿಷ್ಯರೂ ಅಭಿಮಾನಿಗಳೂ [illegible] 'ಭವನ'ದಲ್ಲಿ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್‌ರವರ ಅಧ್ಯಕ್ಷತೆಯಲ್ಲಿ ಒಂದು ಸಮಾರಂಭವನ್ನು ಏರ್ಪಡಿಸಿದ್ದರು. ಸಂಗೀತವಾದ ಮೇಲೆ ಶ್ರೀಮತಿ ಕಮಲಮ್ಮನವರು ಅಭಿನಯಗಳನ್ನು ತೋರಿಸಿದರು. ಶ್ರೀ ಎಸ್. ಎನ್. ಸ್ವಾಮಿಯವರ ನರ್ತನ ನಡೆಯಿತು. ಪ್ರಾಚೀನ ಕಲೆಗಳಲ್ಲೊಂದಾದ ನೃತ್ಯ ಕಲೆಯನ್ನು ಪುನರುದ್ಧರಿಸಬೇಕೆಂಬ ವಿಷಯವಾಗಿ ಅಧ್ಯಕ್ಷರು ಭಾಷಣ ಮಾಡಿದ ಮೇಲೆ ಸಭೆ ಮುಗಿಯಿತು.

ತಿರುವಾಂಕೂರು ಮಹಾರಾಜರು

ರಾಜಧಾನಿಯಲ್ಲಿ ೩ ದಿವಸಗಳಿಂದಲೂ ತಂಗಿದ್ದ ತಿರುವಾಂಕೂರು ಸಂಸ್ಥಾನಾಧೀಶರು ನಿನ್ನೆ ರಾತ್ರಿ ೯-೩೦ ಗಂಟೆಗೆ ಸ್ಪೆಷಲ್ ಟ್ರೈನಿನಲ್ಲಿ ಮೈಸೂರಿಗೆ ಪ್ರಯಾಣ ಬೆಳಸಿದರು. ಇಂದು ಅವರು ಚಾಮುಂಡೇಶ್ವರೀ ದೇವಾಲಯ ಮತ್ತು [illegible] ನಗಳಿಗೆ ಭೇಟಿ ಇತ್ತು, ರಾತ್ರಿ [illegible] ಕ್ಕೆ ಪ್ರಯಾಣ ಬೆಳೆಸುವರು.

ಅಂಚೆ-ಚೀಲಗಳ ಅಪಹರಣ

ಶುಕ್ರವಾರ ಬೆಳಿಗ್ಗೆ ಅಂಚೆ ಹೊತ್ತು ತರುತ್ತಿದ್ದ ಮೋಟಾರೊಂದನ್ನು ಕೊಲ್ಹಾಪುರ್-ಕರಾಡ್ ರಸ್ತೆಯಲ್ಲಿ [illegible] ಗುಂಪೊಂದು ಮುತ್ತಿ ವಾಹನದ ಸಿಬ್ಬಂದಿಯ ಪೋಲೀಸಿನವನ ಮೇಲೆ ಬಿದ್ದು ಅವನ ಬಳಿ ಇದ್ದ ಬಂದೂಕನ್ನು ಕಿತ್ತುಕೊಂಡ. ಅಲ್ಲಿದ್ದ ಅಂಚೆ ಚೀಲಗಳನ್ನೆಲ್ಲಾ ಅಪಹರಿಸಿಕೊಂಡು ಹೋಗಿರುವರು. ಅವರ ಗುಂಡಿನೇಟಿನಿಂದ ಮೋಟಾರ್ ಡ್ರೈವರ್ ಒಬ್ಬ [illegible] ಪೋಲೀಸಿನವನಿಗೂ ಡ್ರೈವರಿಗೂ ಗಾಯಗಳಾಗಿವೆ.

ಮಹದೇವ ದೇಸಾಯಿಯವರಿಗೆ ಮಹಾತ್ಮರ ಅಂತ್ಯಸೇವೆ

ಮಹದೇವ ದೇಸಾಯಿಯವರ ಮೃತ ದೇಹವನ್ನು ಮಹಾತ್ಮ ಗಾಂಧೀಜಿಯವರು ತಮ್ಮ ನಡುಗುತ್ತಿದ್ದ ಕೈಗಳಿಂದ ತೊಳೆದು, ಒಂದು ಗಂಟೆ ಕಾಲ ಗಂಧವನ್ನು [illegible] ಹಚ್ಚಿ, ತಮ್ಮ ಸ್ವಹಸ್ತದಿಂದಲೇ [illegible] ಅವರ ಚಿತೆಗೆ ಬೆಂಕಿ ಇಟ್ಟು, ಅಂತ್ಯಕ್ರಿಯೆಗಳನ್ನೆಲ್ಲಾ ನಡೆಸಿದರೆಂದು [illegible] ಗಾಂಧೀಜಿ [illegible] ನಾಯಿಡುರವರು ತಿಳಿಸಿರುವರು.

ಪಶ್ಚಿಮ ಇಟಲಿಯಲ್ಲಿ ಮಿತ್ರರು

ಜ|| ಅಲೆಕ್ಸಾಂಡರ್ ಸೇನೆಯ ಬ್ರಿಟಿಷ್ ಮತ್ತು ಅಮೇರಿಕ ದಳಗಳು ಶನಿವಾರ ಬೆಳಿಗ್ಗೆ ಪಶ್ಚಿಮ ಇಟಲಿ ತೀರದ ಶತ್ರು ಸಾಲಿನ ಹಿಂಬದಿಯಲ್ಲಿ ಇಳಿದವೆಂದು ಮಿತ್ರರ ಕೇಂದ್ರ ಕಛೇರಿಯಿಂದ ಪ್ರಕಟಣೆ ಹೊರಟಿದೆ. ಇಟಲಿಯಲ್ಲಿ ಮಿತ್ರ ದಳಗಳು ಜ|| ಅಲೆಗ್ಸಾಂಡರ್‌ರವರ ಸೂಚನೆಯಂತೆ ಕಾರ್ಯಾಚರಣೆ ನಡೆಸುತ್ತಿರುವರು. ಇಲ್ಲಿ ಬ್ರಿಟಿಷರು ಈಗ ಮಿಂಟರ್ನೋ ಎಂಬ ಪಟ್ಟಣವನ್ನು ಹಿಡಿದಿರುವರು.

ಬ್ರಿಟನ್ನಿನ ಭಾರತೀಯರಲ್ಲಿ ಕೋಲಾಹಲ

ಬ್ರಿಟನ್ನಿನ 'ಯುದ್ಧ ಕರ' ಕಾನೂನನ್ನು ತಿದ್ದುಪಾಟು ಮಾಡಿದ ಪರಿಣಾಮದಿಂದ ೩ ತಿಂಗಳಿಗೆ ಮೇಲ್ಪಟ್ಟು ಬ್ರಿಟನ್ನಿನಲ್ಲಿ ವಾಸಿಸುತ್ತಿರುವ ಭಾರತೀಯರೂ 'ಹೊರಗಿನವರ' ಯುದ್ಧ ಕರಕ್ಕೆ ತಲೆಬಾಗಬೇಕಾಗಿದೆ. ಈ ತಿದ್ದುಪಡಿ ಬ್ರಿಟನ್ನಿನಲ್ಲಿರುವ ಭಾರತೀಯರಲ್ಲಿ ದೊಡ್ಡ ಕೋಲಾಹಲವನ್ನು ಎಬ್ಬಿಸಿದೆ. ಲಂಡನ್ನಿನ ಭಾರತ ಸ್ವಾತಂತ್ರ್ಯ ಚಳುವಳಿ ಸಮಿತಿಯವರೂ [illegible] ಸಹಿಯಾಗಿರುವ ಬಹಿರಂಗ ಪತ್ರವೊಂದನ್ನು ಮಿ|| ಚರ್ಚಿಲ್‌ರಿಗೆ ಕಳುಹಿಸುವವರಾಗಿದ್ದಾರೆ.

೩೦ ನಾಜಿ ವಿಮಾನಗಳು ಬ್ರಿಟಿಷ್ ತೀರ ದಾಟಿದುವು

೨೧ನೇ ತಾ|| ರಾತ್ರಿ ಲಂಡನ್ನಿನ ಮೇಲೆ ಜರ್ಮನರು [illegible] ದಾಳಿ ಮಾಡಿದರು. ೩೦ ಜರ್ಮನ್ ವಿಮಾನಗಳು ಬ್ರಿಟಿಷ್ ತೀರವನ್ನು ದಾಟಿ ಹೋದುವು. ಆಗ ಲಂಡನ್ ವಿಮಾನಧ್ವಂಸಕಗಳನ್ನು ಎದುರಿಸಲು [illegible] ಕೆಲ [illegible].

ಸ್ವಾತಂತ್ರ್ಯ ದಿನಾಚರಣೆಯ ಮಹತ್ವ

ಬರಲಿರುವ ಸ್ವಾತಂತ್ರ್ಯ ದಿನಾಚರಣೆ ಬಗ್ಗೆ ಶ್ರೀಮತಿ ಸರೋಜಿನಿನಾಯಿಡು ತಾರವೊಂದನ್ನು [illegible] ಈ ದಿನಾಚರಣೆ [illegible].

ಡಾ|| ಶಾಮಶಾಸ್ತ್ರಿಗಳ ನಿಧನ

[ಸ್ವಂ. ಸು.] ಮೈಸೂರು ೨೪

ಅರ್ಥಶಾಸ್ತ್ರ ವಿಶಾರದ ಮಹಾ ಮಹೋಪಾಧ್ಯಾಯ ಡಾ|| ಶಾಮಶಾಸ್ತ್ರಿಗಳವರು ನೆನ್ನೆ ಮಧ್ಯಾಹ್ನ ರಾಜಧಾನಿಯ ಚಾಮುಂಡಿ ಬಡಾವಣೆಯಲ್ಲಿರುವ ತಮ್ಮ ಮನೆಯಲ್ಲಿ ನಿಧನರಾದರೆಂದು ತಿಳಿಸಲು ತುಂಬಾ ವಿಷಾದಿಸುತ್ತೇವೆ.

ದಿವಂಗತರು ೧೯೧೭ ರಿಂದ ೧೯೨೮ ರ ವರೆಗೆ ರಾಜಧಾನಿಯ ಓರಿಯಂಟಲ್ ಲೈಬ್ರರಿಯಲ್ಲಿ ಕ್ಯೂರೇಟರಾಗಿದ್ದರು. ಮತ್ತು ಆ ಕಾಲದಲ್ಲಿ ಕೆಲವು ವರ್ಷಗಳು ಶಾಸನ ಇಲಾಖೆಯ ಡೈರೆಕ್ಟರಾಗಿಯೂ ಮಹಾರಾಜ ಕಾಲೇಜಿನ ಚರಿತ್ರೆಯ ಅಧ್ಯಾಪಕರಾಗಿಯೂ ಇದ್ದರು. ಅವರು ಅರ್ಥಶಾಸ್ತ್ರದಲ್ಲಿ ಮಹಾ ಪಂಡಿತರಾಗಿದ್ದು ಹಲವು ಪ್ರಖ್ಯಾತವಾದ ಪುಸ್ತಕಗಳನ್ನು ಬರೆದಿದ್ದರು. ಕೌಟಿಲ್ಯನ ಅರ್ಥಶಾಸ್ತ್ರವನ್ನು ಇವರು ಬರೆದು ಇಡೀ ದೇಶದ ಮೆಚ್ಚುಗೆಗೆ ಪಾತ್ರರಾದರು. ಇವರ ಪ್ರೌಢಿಮೆಯನ್ನು ಮೆಚ್ಚಿ ಕಲ್ಕತ್ತಾ ವಿಶ್ವವಿದ್ಯಾನಿಲಯದ ವೈಸ್‌ಛಾನ್ಸಲರಾಗಿದ್ದ ಡಾ|| ಅಸುತೋಷ್ ಮುಖರ್ಜಿಯವರು ಇವರನ್ನು ಹಲವು ವರ್ಷಕಾಲ ತಮ್ಮ ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕರಾಗಿರಲು ಕರೆದುಕೊಂಡು ಹೋಗಿದ್ದರು. ದಿವಂಗತ ಶ್ರೀಮನ್ನಾಲ್ವಡಿ ಕೃಷ್ಣರಾಜ ಒಡೆಯರವರು ಇವರ ಪಾಂಡಿತ್ಯಕ್ಕೆ ಮೆಚ್ಚಿ ಅವರಿಗೆ ಅರ್ಥಶಾಸ್ತ್ರ ವಿಶಾರದ ಎಂಬ ಬಿರುದನ್ನು ಕೊಟ್ಟಿದ್ದರು.

ಇವರಿಗೆ ಕಲ್ಕತ್ತಾ ವಿಶ್ವವಿದ್ಯಾನಿಲಯದವರು ಡಾಕ್ಟರೇಟ್ ಪದವಿಯನ್ನೂ ದಯಪಾಲಿಸಿದ್ದರು.

ದಿವಂಗತರಿಗೆ ೭೬ ವರ್ಷ ವಯಸ್ಸಾಗಿತ್ತು. ಅವರ ಗೌರವಾರ್ಥವಾಗಿ ಈ ದಿನ ಓರಿಯಂಟಲ್ ಲೈಬ್ರರಿಗೆ ರಜಾ ಕೊಡಲಾಗಿದೆ.

ಗೆಲ್ಲಲು ಬಹುಕಾಲಬೇಕು

ಜರ್ಮನಿ ಮತ್ತು ಜಪಾನನ್ನು ಸೋಲಿಸಲು ಬಹುಕಾಲ ಬೇಕೇಬೇಕಾಗುವುದು. ಆ ವರೆಗೆ ನಮ್ಮ ಯುದ್ಧಶಕ್ತಿ ಹೆಚ್ಚಿದಷ್ಟೂ ಆ ಕಾಲ ಕಡಿಮೆಯಾಗುವುದು—ಎಂಬುದಾಗಿ ವಿಮಾನ ಮಂತ್ರಿ ಸರ್ ಆರ್ಚಿಬಾಲ್ಡ್ ಸಿಂಕ್ಲೇರ್‌ರು ಹೇಳಿರುವರು.

ಗಾಂಧಿ-ನೆಹರು ಬಿಡುಗಡೆ ಅಗತ್ಯ

[ಸ್ವಂ ಸು ಪ್ರೋ] ಬೆಂಗಳೂರು ೨೪

ಈ ಯುದ್ಧವು ಮುಗಿದ ವೇಳೆ ವಿಶ್ವದ ಯಾವುದೋ ಒಂದು ಕಡೆ ನಡೆಯಲಿರುವ ಶಾಂತಿ ಸಮ್ಮೇಳನದಲ್ಲಿ ಭಾರತದ ಪರವಾಗಿ ಭಾಗ ವಹಿಸಲು ಅನುಕೂಲಿಸುವಂತೆ ಎಲ್ಲರೂ ಮಹಾತ್ಮಾಗಾಂಧಿ, ನೆಹರು ಮತ್ತು ಇತರ ಕಾಂಗ್ರೆಸ್ ನಾಯಕರ ಬಿಡುಗಡೆಗೆ ಒತ್ತಾಯಪಡಿಸಬೇಕು. ಅಲ್ಲದೆ ಪ್ರಾಂತ್ಯಗಳಲ್ಲಿಯೂ, ಕೇಂದ್ರದಲ್ಲಿಯೂ ಸಾರ್ವಜನಿಕರ ನಂಬಿಕೆಗೆ ಅರ್ಹವಾಗಿರುವ ಸರಕಾರವಿದ್ದು ಅವರಿಬ್ಬರೂ ಸಮ್ಮೇಳನದಲ್ಲಿ ಭಾಗ ವಹಿಸುವ ಮಹತ್ವವಾದ ಅವಕಾಶವನ್ನು ಭಾರತವು ಉಪಯೋಗಿಸಿಕೊಳ್ಳಬೇಕು."

ಎಂಬುದಾಗಿ ರೈಟ್ ಆ|| ಡಾ|| ವಿ. ಎಸ್. ಶ್ರೀನಿವಾಸಶಾಸ್ತ್ರಿಗಳು ನಿನ್ನೆ [illegible] ತಿಳಿಸಿರುವರು.

ನಾನೇಕೆ ಮದುವೆಯಾಗುವುದಿಲ್ಲ ?

ಶ್ರೀಮತಿ ಎಚ್. ಎಂ. ಪಾರ್ವತಮ್ಮ, ಎಂ.ಎ.,

ವಿವಾಹ ಸಮಸ್ಯೆ

ಮದುವೆ ಎಂಬ ಮಾತು ಕೇಳಿದೊಡನೆ ಯೇ ಎಲ್ಲರಿಗೂ ಒಂದು ಬಗೆಯ ಸಂತೋಷ ಆಗುವುದು. ಮದುವೆ ಆಗುವುದು ಪ್ರತಿಯೊಬ್ಬ ವ್ಯಕ್ತಿಯ ಜೀವನದಲ್ಲಿ ಒಂದು ಮುಖ್ಯ ಘಟನೆ ಆಗುವುದೇ ಇದಕ್ಕೆ ಕಾರಣ. ಲಗ್ನ ಮಾಡಿಕೊಳ್ಳುವುದರಿಂದ ಕಷ್ಟ ಸುಖಗಳಲ್ಲಿ ಭಾಗಿ, ಪರಸ್ಪರ ಸ್ನೇಹದಿಂದ ಬಾಳಿ, ಸುಖದಲ್ಲಿ ಸಂತೋಷದಿಂದ ಹಾಡಿ ಜೀವನ ನಡೆಸಿಕೊಂಡು ಹೋಗುತ್ತಾರೆ. ಆದ್ದರಿಂದ ವಿವಾಹವಾಗುವುದರಿಂದ [illegible] ಒಂದು ರೀತಿಯ ಉದ್ವೇಗದಿಂದ [illegible] ವಿಷಯವನ್ನು "ತ[illegible] ನನ್ನ ಮಡದಿ, ನನ್ನ ಹೆಂಡತಿ, [illegible] ನನ್ನವೇ ಬೇಕು [illegible]—ಎಂಬ ಅಭಿಪ್ರಾಯ [illegible] ದಲ್ಲಿ [illegible] ಬರುವುದು.

ಹೀಗಿರುವಾಗ ನಾನು "ಮದುವೆ ಮಾಡಿಕೊಳ್ಳುವುದಿಲ್ಲ" ಎಂದು ಹೇಳಿದರೆ [illegible]. ನನ್ನ ಈ ಸಂಕಲ್ಪಕ್ಕೆ ಕಾರಣವಿಲ್ಲದೇ ಇಲ್ಲ.

ಕಾರಣಗಳನ್ನು ತಿಳಿಸುವುದಕ್ಕಿಂತ ಮೊದಲು, ಜನರಿಗೆ ನನ್ನ ವಿಷಯದಲ್ಲಿರುವ ಭಾವನೆಗಳನ್ನು ಸ್ವಲ್ಪ ತಿಳಿಸಿದರೆ ಅಪ್ರಕೃತವಾಗಲಾರದು.

ಆಶ್ಚರ್ಯ; ಪರಿತಾಪ

ವಿವಾಹವಾಗಲು ಇಷ್ಟಪಡದವರನ್ನು ನೋಡಿದರೆ, ಬಹುಮಂದಿ—ಏನೋ ಒಂದು ವಿಚಿತ್ರ ಪ್ರಾಣಿಯನ್ನು ಕಂಡಂತೆ ನಟಿಸುವರು. ಮತ್ತು "ಇವರೇನು ಮದುವೆ ಮಾಡಿಕೊಂಡು ಸುಖವಾಗಿ, ಸುಖವಾಗಿರಬಾರದೇ" ಎಂದು ಮರುಕ ತೋರಿಸುವರು. ಇನ್ನು ಕೆಲವರು "ಅಯ್ಯೋ ಪಾಪ! ಸರಿಯಾದ ವರ ಸಿಕ್ಕಿಲ್ಲವೇನೋ" ಎಂದು ಕೊರಗುವರು. ಮತ್ತೆ ಕೆಲವರು "ಏನೋ ಅಸಾಧಾರಣ ವ್ಯಕ್ತಿಗಳೇ ಇರಬಹುದು! ಮದುವೆಮಾಡಿಕೊಂಡು ಒಬ್ಬರ ಕೈಕೆಳಗೆ ಇರಬೇಕೆಂದರೆ ಇವರಿಗೆ ಸಂಕೋಚವೇನೋ" ಎಂದು ಮಿಡುಕುವರು. ಇವರ ಈ ಬಗೆಯ ಟೀಕೆಗಳಿಗೆ ಕಾರಣ—ತಮ್ಮಂತೆ ನಾವೂ ಆಗಲಿಲ್ಲವಲ್ಲ ಎಂಬುದು ಇರಬಹುದು! ಅವರ ಈ ವಿಧವಾದ ಮಾತುಗಳು ನಮ್ಮ ಮನಸ್ಸಿನಮೇಲೆ ಯಾವ ಬಗೆಯ ಭಾವನೆಯನ್ನೂ ಉಂಟುಮಾಡಲಾರವು.

ನಾನು ಈಗ ಇಷ್ಟೆಲ್ಲಾ ಹೇಳಿದ ಮೇಲೆ ಪಿಮಗೆ, ಈಗ ವಿದ್ಯಾವತಿಯರು ಕೆಲವರು ಲಗ್ನ ಮಾಡಿಕೊಳ್ಳದಿರುವುದು ಒಂದು Fashion ಅಲ್ಲ; ಇದಕ್ಕೆ ಏನೋ ಕಾರಣ ಇರಬಹುದು; ಆದ್ದರಿಂದ ಅದನ್ನು ತಿಳಿದುಕೊಳ್ಳೋಣ; ಎಂಬ ಕುತೂಹಲ ಹುಟ್ಟಬಹುದು. ಅಂತ ತಿಳಿದು ನಾನು ಈಗ ವಿವಾಹವಾಗದಿರಲು ಸಂಕಲ್ಪಿಸಿರುವುದರ ಕಾರಣಗಳನ್ನು ತಿಳಿಸುವೆನು.

ನಾನು ಮದುವೆ ಆಗುವುದಿಲ್ಲ ಎನ್ನುವುದಕ್ಕೆ ಕಾರಣ ಒಂದಲ್ಲ, ಎರಡಲ್ಲ, ನಾನಾ ಕಾರಣಗಳಿವೆ.

ಮೊದಲನೆಯದಾಗಿ, ಈಗ ನಾವಿರುವ ಪರಿಸ್ಥಿತಿಯು ನಮ್ಮನ್ನು ವಿವಾಹವಾಗಬೇಕೆಂಬ ಕಟ್ಟಿಗೆ ಸಿಲುಕಿಸುವುದಿಲ್ಲ. ಸ್ವಾತಂತ್ರ್ಯ ಮನುಷ್ಯರಾಗಿದ್ದೇವೆ ಎರಡಕ್ಷರ, ಕೊಂಚ ತಿಳುವಳಿಕೆ, ನಮ್ಮ ಅನ್ನ ನಾವು ದುಡಿದುಕೊಳ್ಳಬಲ್ಲೆವು ಎಂಬ ಆತ್ಮವಿಶ್ವಾಸ ಇವೆ.

ಸುಖ ಬೇಕು; ದುಃಖವೇಕೆ ?

ಮದುವೆಯಾದರೆ ಸುಖ ದುಃಖಗಳಲ್ಲಿ ಸಮಭಾಗಿಗಳಾಗಬೇಕು—ನನ್ನ ಅಭಿಪ್ರಾಯವೂ ಅನ್ನೇ. ಆದರೆ ಇದು ಸಾಧ್ಯವೇ? ಈ ಅಂಶದಲ್ಲಿ ನನಗೇನೂ ವಿರೋಧ ಭಾವನೆಯಿಲ್ಲ. ಆದರೆ ನಿಜವಾಗಿ ನೋಡುವುದಾದರೆ ಸುಖ ಹಂಚಿಕೊಳ್ಳಲು ಸಿದ್ಧರಾಗಿದ್ದರೂ ದುಃಖದಲ್ಲಿ ಭಾಗಿಯಾಗುವುದೆಂದರೆ ಏಕೋ ಮನಸ್ಸು ಹಿಂಜರಿಯುತ್ತದೆ. ಇದನ್ನು ನೀವು ಸ್ವಾರ್ಥಪರತೆ ಎನ್ನಬಹುದು; ಅನ್ನಿ. ಈ ಸುಖದುಃಖಗಳ ಪಾಲುಗಾರಿಕೆಗೆ ಏಕೆ ಮನ ಸೋಲಬೇಕು? ಏಕಾಂಗಿಯಾಗಿದ್ದರೆ ಸುಖ ಬಂದರೆ,—ಗೊತ್ತೇ ಇದೆಯಲ್ಲ—ನಿರಾತಂಕವಾಗಿ ಒಬ್ಬಳೇ ಅನುಭವಿಸಬಹುದು. ದುಃಖ ಬಂದಿತೆಂದರೆ, ಎದುರಿಸುವುದು ಕಷ್ಟ ಆಗಬಹುದಾದರೂ, ನಾನೇ ಸ್ವತಃ ಪ್ರತಿಭಟಿಸಿದೆನಲ್ಲ ಎಂಬ ಸಮಾಧಾನ ಇರುವುದು. ಇದೂ ಅಲ್ಲದೆ ಇನ್ನೂ ಒಂದು ವಿಷಯವಿದೆ—ಈ ಸುಖದುಃಖದ ಹಂಚಿಕೆ (ಕನಿಷ್ಠಪಕ್ಷ ಗಂಡನ್ನು ಹಂಚಿಕೊಳ್ಳಲು ಹವಣಿಸಿದಂತೆಯೇ ಸರಿ) ಅನ್ನಿ—ಇದರಲ್ಲಿ ಎಂದರೆ ಈ ಹಂಚಿಕೆ ವ್ಯಾಪಾರದಲ್ಲಿ ಬಹಳ ಜನ ಮೋಸಹೋಗಿದ್ದಾರೆ. ಮುಂದೆ ಮೋಸಹೋಗಲೂಬಹುದು. ಕೆಲವರ ದುರದೃಷ್ಟ! ದುಃಖದ ಪಾಲೇ ಹೆಚ್ಚಾಗಿ ದೊರೆಯುವುದು; ಮತ್ತೆ ಕೆಲವು ಸಂದರ್ಭಗಳಲ್ಲಿ ಸಮಭಾಗಿಗಳಾಗುವವರು ಇದ್ದರಲ್ಲ—ಅವರು ಮತ್ತೊಬ್ಬ ರಿಗೆ (partner)- ಇರುವ ದುಃಖ, ತಮಗೆ ಗೊತ್ತೇ ಇಲ್ಲ ಎನ್ನುವಂತೆ ನಟಿಸುತ್ತಾರೆ. ಆದ ಇವರ ಗತಿ ಏನು? ಎರಡು ಕಣ್ಣು ಕಾಣದ ದಾಂಪತ್ಯದ ಕಥೆ ನಿಮಗೆ ಗೊತ್ತಿರಬಹುದು, ಹಾಗಾಗುತ್ತವೆ. ಆದ್ದರಿಂದ ನಾನೇನೋ ಈ ಹಂಚಿಕೆ ವಿಷಯದಲ್ಲಿ ತೊಡಕು ಇರುವುದರಿಂದ ಅದರ ಗೊಡವೆಯೇ ಬೇಡ ಅಂತ ನಿರ್ಧರಿಸಿಬಿಡುತ್ತೇನೆ.

ಇನ್ನೊಂದು ಕಾರಣ ಏನು ಎಂದರೆ, ಎಲ್ಲಾ ಮನುಷ್ಯರ ಮನೋಭಾವವು ಒಂದೇ ತರಹ ಇರುವುದಿಲ್ಲ. ಅಂತಹ ಸಂದರ್ಭದಲ್ಲಿ ಹೊಂದಿಕೆಯಾಗಿ ಜೀವನ ನಡೆಸುವುದು ಬಹಳ ದುರ್ಲಭವಾದೀತು. ಮನೋಭಾವ ಅಭಿರುಚಿಗಳು, ಆದರ್ಶಗಳು, ವಿದ್ಯಾಸಂಸ್ಕಾರಗಳ ಅಂತರ ಭಿನ್ನವಾದಲ್ಲಿ ಜೀವನ ಜುಗುಪ್ಸೆಗೆ ಕಾರಣ ಅಲ್ಲವೇ? ನಮ್ಮ ಪ್ರತ್ಯಕ್ಷ ಅನುಭವದಲ್ಲಿ ಇಂತಹ ಉದಾಹರಣೆಗಳು ಎಷ್ಟೋ ಇಲ್ಲ! ಅಲ್ಲದೆ, ಹೊಂದಿಕೆಯ ಪ್ರಕೃತಿಯವರನ್ನೇ ಅರಿಸಿ ಹುಡುಕಿ ಲಗ್ನವಾಗುವುದು ನಮ್ಮ ಈಗಿನ ಸಮಾಜದ ಪರಿಸ್ಥಿತಿಯಲ್ಲಿ ಸಾಧ್ಯವಿಲ್ಲವಾಗಿದೆ.

ಸಂಕುಚಿತ ಭಾವನೆ

ವಿವಾಹಿತಳಾಗದೆ ಇರುವುದಕ್ಕೆ ಇನ್ನೊಂದು ಪ್ರಬಲ ಕಾರಣ ಜೀವನದ ಆದರ್ಶ. ನನ್ನ ಆದರ್ಶಸಾಧನೆಗೆ ವೈವಾಹಿಕ ಜೀವನ ಸಹಕಾರಿಯಾಗಲಾರದು ಎಂಬೊಂದು ನಂಬಿಕೆ—ಅದು ಮೂಢನಂಬಿಕೆಯಿರಬಹುದು—ನನ್ನ ಮನಸ್ಸಿನ ಮೇಲೆ ಹೆಚ್ಚಿನ ಪ್ರಭಾವವನ್ನು ಮಾಡಿದೆ. ಮದುವೆ ಮಾಡಿಕೊಂಡರೆ ನಮ್ಮ ಬುದ್ಧಿ, ಶಕ್ತಿ, ಅಭಿಮಾನ, ಆಸಕ್ತಿ ಎಲ್ಲಾ "ನನ್ನ ಮನೆ, ನನ್ನ ಮಕ್ಕಳು" ಎಂಬ ಸಂಕುಚಿತ ಮನೋಭಾವನೆಯಿಂದ ಆವರಿಸಲ್ಪಡಬಹುದು. ಒಂದು ವೇಳೆ ವಿಶಾಲಭಾವನೆ ಉಂಟಾದರೂ ಕೂಡ, ಸ್ವಾರ್ಥಕ್ಕೆ ಬಹು ಭಾಗ ಮೀಸಲಾಗುವುದೂ ಆದೀತು. ಆದರೆ ಹೀಗೆ ಹೇಳುವಾಗ ವಿವಾಹಿತರಾದ ಕೆಲವರು ಶ್ರೇಷ್ಠ ಸ್ತ್ರೀಯರು ನನ್ನ ಗಮನದಲ್ಲಿ ಇಲ್ಲದೇ ಇಲ್ಲ. ಅವರು ವೈವಾಹಿಕ ಜೀವನದ ಆತಂಕಗಳಿದ್ದರೂ ಅನನ್ಯ ಸಾಧಾರಣ ಶ್ರೇಷ್ಠ ರಮಣಿಯರು. ಆದರೆ ಅವರಿಗೆ ಒದಗಿದ ಅವಕಾಶ ನನಗೆ ಒದಗದಿರಬಹುದು.

ಮದುವೆ ಮಾಡಿಕೊಳ್ಳುವುದು ಒಂದು ರೀತಿಯ ಆಕರ್ಷಣೆಯಿಂದ. ರೂಪ, ವಿದ್ಯೆ, ಅಧಿಕಾರ, ಪದವಿ, ಬುದ್ಧಿ ಅಥವಾ ಐಶ್ವರ್ಯ ಇವುಗಳು ಸ್ತ್ರೀ ಪುರುಷರ ಮನಸ್ಸನ್ನು ಸೆಳೆದು ಅವರ ಒಲವು ವಿವಾಹದಲ್ಲಿ ಪರ್ಯವಸಾನವಾಗಬಹುದು. ಆದರೆ ಇವೆಲ್ಲ ನನ್ನ ಮನಸ್ಸನ್ನು ಆಕರ್ಷಿಸುವುದಿಲ್ಲ. ಎಂದರೆ ಯುವಕರ ವಿಚಾರದಲ್ಲಿ ತಾತ್ಸಾರ ಭಾವನೆ ಇದೆ ಎಂದಲ್ಲ. ಅವಕ್ಕೆ ಪ್ರತಿಯಾಗಿ ನನಗೆ ಅವರಲ್ಲಿ ಗೌರವಭಾವನೆ ಇದೆ. ಅವರ ಶ್ರೇಷ್ಠ ಗುಣಗಳನ್ನು ಒಪ್ಪಿಕೊಂಡಿದ್ದೇನೆ.

ಸಂಗಾತಿತನ ಬೇಕು

ನನ್ನ ಅಭಿಪ್ರಾಯದಲ್ಲಿ ಮದುವೆಮಾಡಿಕೊಳ್ಳುವುದು ಕೇವಲ ಸ್ನೇಹಬಾಂಧವ್ಯಕ್ಕಾಗಿ. ಭಕ್ತಿಯಿಂದ ಪತಿಸೇವೆಯನ್ನು ಮಾಡಿ ಮೋಕ್ಷ ಪಡೆಯಬೇಕು. ಪತಿಯಿಂದ ಜೀವನ ಸುಖವನ್ನು ಪಡೆಯಬೇಕೆಂಬುದೇ ನನ್ನ ಅಭಿಪ್ರಾಯದಲ್ಲಿ ಅತಿ ಪ್ರಮುಖವಲ್ಲ. ಏಕಾಂಗಿಗಳಿಗೆ ಕಾಲ ಕಳೆಯುವುದು ಹಿಂದ ಬೇಸರವಾಗುವುದು. ಆದ್ದರಿಂದ ಸಂಗಾತಿತನಕ್ಕಾಗಿ, ಮನೋರಂಜನೆಗಾಗಿ ಪ್ರೌಢಸ್ತ್ರೀಯರು ಮದುವೆ ಆಗುವರು. ಪುಸ್ತಕ ಓದುವುದರಿಂದ ಕಾಲ ಕಳೆಯಲು ಸಾಧ್ಯವಿಲ್ಲವೇ? ಮನೋರಂಜನೆಗಾಗಿ ನಾವು ನಾನಾ Hobbyಗಳನ್ನಿಟ್ಟುಕೊಳ್ಳಬಹುದು.

ನಮ್ಮಲ್ಲಿ ನೋಡಿ, ಮದುವೆ ಆದ ಮೇಲೆ ಸಾಧಾರಣವಾಗಿ ಹೆಂಗಸು ತನ್ನ ಗಂಡನ ಪೋಷಣೆಗೆ ಒಳಪಡುತ್ತಾಳೆ. ಆಕೆಯ ಮಕ್ಕಳು ಪಾಲಿಸ್ಸಿಗೆ ಹರ್ಷವನ್ನುಂಟುಮಾಡುವರು. ಗೂಡಲೇ ಇಷ್ಟ ಇರಲಿ, ಇಲ್ಲದೇ ಹೋಗಲಿ, ಒಂದು ವಿಧವಾದ ತೃಪ್ತಿ ಆಕೆಯನ್ನು ಆವರಿಸುತ್ತದೆ ಎಂತರೆ ಈಗ ಆ

(ಮುಂದಿನ ಪುಟ ನೋಡಿ)

ಅಮೃತ

ಸಿಡಿದ ಜ್ವರ, ಮಲೇರಿಯಾ ಜ್ವರ, ಜ್ವರದ ಗಡ್ಡೆ, ಇವುಗಳ ಮೇಲೆ ಬಹಳ ಚೆನ್ನಾಗಿ ಕೆಲಸ ಮಾಡುತ್ತದೆ.

ಪಂಡಿತ

ಕೆ. ಎ. ವೆಂಕಟರಾಮಯ್ಯ

ನಾಗ ಬೋರ್ಡ್ ವೈದ್ಯಶಾಲಾ,

ಬಲಂಪೇಟೆ ಚಾಮರಾಜನಗರ ರಸ್ತೆ.

ನವಯೌವನ

ಕೆಮ್ಮು, ಬಲಹೀನತೆ, ಮಲಬದ್ಧತೆ, ವೀರ್ಯಸ್ಖಲನ, ಧಾತುವಿಕಾರ ಮೊದಲಾದುವನ್ನು ಶೀಘ್ರದಲ್ಲೇ ಪರಿಹರಿಸಲು ಮದನಮಂಜರಿ ಮಾತ್ರೆಗಳು ದಿವ್ಯ ಔಷಧ

ಡಬ್ಬಿ ಒಂದಕ್ಕೆ ರೂ. 1

ಮದನಮಂಜರಿ ಫಾರ್ಮಸಿ,

164 ಚಿಕ್ಕ ಬಜಾರು, ಮೈಸೂರು

ಅಶೋಕಾ ಫಾರ್ಮಸಿ

ಬ್ಯಾಂಕು ರಸ್ತೆ, ಮೈಸೂರು

ಗಂಡಿ ಪೇಟೆ, ಬಿ ಎನ್. ಕೃಷ್ಣಪ್ಪ

ಟಿ. ಸಿ. ನಟರಾಜ್

ಔಷಧಾಲಯ

ಇವರಲ್ಲಿ ನೇತ್ರಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ

ಅತ್ಯಗತ್ಯವಾಗಿ ಬೇಕಾದ ಎಲ್ಲಾ ಇಂಗ್ಲಿಷ್ ಔಷಧಿಗಳೂ ಸದಾ ಕಾಲದಲ್ಲಿಯೂ ದೊರೆಯುವುದಲ್ಲದೆ ಸಮಸ್ತ ವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸುಲಭ ಖರ್ಚಿನಿಂದ ಮಾಡಲ್ಪಡುತ್ತದೆ

ಝಂಡೂರವರ ಆಯುರ್ವೇದೀಯ ಸಿದ್ಧೌಷಧಿಗಳಲ್ಲವೂ ಸದಾ ದೊರೆಯುತ್ತವೆ

ಈ ದಿನ —

ಒಲಂಪಿಯಾದಲ್ಲಿ

ಮುಂದುವರಿಯುವರ

ಬದಲ್ತಿ ದುನಿಯ

ಅಭಿನಯ:—ಮಮ್ತಾಜ್ ಶಾಂತಿ, ಕೆ. ಸಿ. ಡೇ, ತ್ರಿಲೋಕ್ ಕಪೂರ್.

ಪ್ರತಿ ದಿನ ಮೂರು ಆಟಗಳು

ಕರ್ನಾಟಕ ಫಿಲಂಸ್‌ರವರ ಹಂಚಿಕೆ.

ಸ್ತ್ರೀಯರ ಸೌಕರ್ಯಕ್ಕಾಗಿ

ಕಳೆದ ೧೦-೧೨ ವರ್ಷಗಳಿಂದ ಪ್ರತ್ಯೇಕವಾಗಿ ವ್ಯಾಪಾರ ಶುದ್ಧವಾದ ಪ್ರಸ್ತುತ ಮಾಡುತ್ತಿ

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿಪುಡಿ

ಯನ್ನೇ ಉಪಯೋಗಿಸಿ.

ಡಿ. ಪುಟ್ಟಯ್ಯ ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ವಿ. ಸೂ.—ಇಲ್ಲಿಗೆ ಮತ್ತು ಸಂತೆಪೇಟೆ ಹೆಡ್ ಆಫೀಸಿನಲ್ಲೂ ರವೆ, ಗೋಧಿಹಿಟ್ಟು, ಮತ್ತು ಮೈದಾಹಿಟ್ಟು ಸಹ ದೊರೆಯುತ್ತೆ. ಆಲ್ಲದೆ ಬೂರಾ ಮತ್ತು ಕಲ್ಲು ಸಕ್ಕರೆ ರೇಷನ್ ಕಾರ್ಡುಗಳಿಗೆ ದೊರೆಯುತ್ತವೆ.

ವಾರ ಭವಿಷ್ಯ

೨೪-೧-೮೪ ರಿಂದ ೩೦-೧-೮೪ರ ವರೆಗೆ
(ಶ್ರೀ ನಿತ್ಯಾನಂದ ಸ್ವಾಮಿಗಳಿಂದ)

ಮೇಷ—ಈ ವಾರ ನೀವು ಆಲಸ್ಯವನ್ನು ತೊರೆದು ಕಾರ್ಯತತ್ಪರರಾಗಿರಿ. ಆರೋಗ್ಯ ಚೆನ್ನಾಗಿದ್ದರೂ ಮಾನಸಿಕ ಸ್ಥಿತಿ ಉತ್ತಮವಾಗಿರಲಾರದು. ಸಾಂಪತ್ತಿಕ ಸ್ಥಿತಿ ಚೆನ್ನಾಗಿಲ್ಲ, ಆದರೆ ಮಿತ್ರರ ಸಹಾಯ ದೊರೆಯುತ್ತದೆ. ವ್ಯಾಪಾರ ಮತ್ತು ಪ್ರವಾಸಾದಿಗಳಲ್ಲಿ ತಕ್ಕುಪಿಸಿದೆ. ತಾ|| ೨೭, ೨೮ ಆರ್ಥಿಕ ಲಾಭ, ಆಪ್ತರ ಭೇಟಿ.

ವೃಷಭ—ಜನರನ್ನು ಒಳ್ಳೆಯವರನ್ನಾಗಿ ಮಾಡಿಕೊಳ್ಳಿ. ಅದರಿಂದಲೇ ನಿಮಗೆ ಲಾಭ. ಆರ್ಥಿಕ ಸ್ಥಿತಿ ಉತ್ತಮವಾಗಿದೆ. ಮಾನಸಿಕ ಸ್ಥಿತಿ ಕೊಂಚ ತಾಪದಾಯಕ. ಅನಾರೋಗ್ಯ. ವ್ಯಾಪಾರ ಮತ್ತು ಪ್ರವಾಸಗಳಲ್ಲಿ ದುಷ್ಟರಿಂದ ಬಾಧೆ. ಅಪ್ರಿಯ ವಾರ್ತೆ. ತಾ|| ೨೮ ಕ್ಲೇಶ, ಕಲಹ.

ಮಿಥುನ – ಈ ವಾರ ನೀವು ಎಷ್ಟು ಕೌಶಲ್ಯದಿಂದ ವರ್ತಿಸಿದರೂ ದೈವವು ನಿಮ್ಮನ್ನು ಅನೇಕ ತೊಂದರೆಗಳಿಗೀಡುಮಾಡುವುದು. ಆರೋಗ್ಯ ಕೆಡುವುದು. ವ್ಯಾಪಾರಾದಿಗಳಲ್ಲಿ ಹಾನಿ ಸಂಭವಿಸಿ, ಆರ್ಥಿಕ, ಮಾನಸಿಕ ಸ್ಥಿತಿ ಕೆಡುವುವು. ಪ್ರವಾಸದಲ್ಲಿ ವಿಘ್ನ. ತಾ|| ೨೫, ೨೬ ಜಗಳ, ಮನಸ್ತಾಪ, ಹೆಚ್ಚು ಖರ್ಚು.

ಕರ್ಕ ಈ ವಾರ ನಿಮಗೆ ಎಲ್ಲ ದೃಷ್ಟಿಯಿಂದಲೂ ಚೆನ್ನಾಗಿದೆ. ಆರೋಗ್ಯ ಉತ್ತಮಗೊಳ್ಳುವುದು. ಆರ್ಥಿಕ ಪ್ರಾಪ್ತಿ ಚೆನ್ನಾಗಿರುವುದು. ವ್ಯಾಪಾರಾದಿಗಳಲ್ಲಿ ಲಾಭ. ಉದ್ಯೋಗದಲ್ಲಿ ಪ್ರಗತಿ. ಪ್ರವಾಸದಲ್ಲಿ ಉತ್ತಮ ಫಲ. ತಾ|| ೨೭, ೨೮ ಹೆಚ್ಚು ಲಾಭ ಮತ್ತು ಖರ್ಚು.

ಸಿಂಹ ಈ ವಾರ ನಿಮಗೆ ಬಹಳ ಆಲಸ್ಯವಾಗಬಹುದು. ವ್ಯಾಪಾರ ನೌಕರಿಗಳಲ್ಲಿ ದುಷ್ಟರಿಂದ ತಡೆ, ಆರೋಗ್ಯವು ಚೆನ್ನಾಗಿದ್ದರೂ ಮಾನಸಿಕ ಸ್ಥಿತಿ ಕೆಡುವುದು. ಆರ್ಥಿಕ ಪರಿಸ್ಥಿತಿಯು ಉತ್ತಮವಾಗಿರುವುದು. ಪ್ರವಾಸದಲ್ಲಿ ಯಶ. ತಾ|| ೨೫, ೨೬ ಹೆಚ್ಚು ಖರ್ಚು, ಸ್ವಲ್ಪ ಕಿರುಕುಳ.

ಕನ್ಯಾ— ಸಂಶಯಪಡಬೇಡಿ, ನಿಮ್ಮ ಬುದ್ಧಿಯ ಸದ್ವಿನಿಯೋಗವಾಗಲಿ. ಆರೋಗ್ಯ ಚೆನ್ನಾಗಿರುವುದು. ಮಾನಸಿಕ ಆರ್ಥಿಕ ಸ್ಥಿತಿಗಳು ಸಾಧಾರಣವಾಗಿರುವುವು. ವ್ಯಾಪಾರ ಉದ್ಯೋಗಗಳಲ್ಲಿ ಯಶ. ಪ್ರವಾಸಗಳು ಸಾಧಾರಣ. ತಾ|| ೨೭, ೨೮ ಆಲಸ್ಯ, ಭಯ, ದುಸ್ವಪ್ನ ದರ್ಶನ.

ತುಲಾ—ಈ ವಾರ ನಿಮ್ಮ ಆರೋಗ್ಯ ಆರ್ಥಿಕ ಮತ್ತು ಮಾನಸಿಕ ಸ್ಥಿತಿಗಳು ಸಾಧಾರಣವಾಗಿರುವುವು. ಪ್ರವಾಸ, ದಾನ ಧರ್ಮಗಳಲ್ಲಿ ಅಡಚಣೆ. ಕಲಹ, ದುಃಖ, ಹಾನಿ ಇವುಗಳ ಸಂಭವ, ಪ್ರಿಯ ಜನರ ವಿಯೋಗ. ಅಪ್ರಿಯ ವಾರ್ತೆ. ತಾ|| ೨೫, ೨೬ ಕ್ಲೇಶ.

ವೃಶ್ಚಿಕ—ಈ ವಾರ ನಿಮ್ಮ ಆರೋಗ್ಯ ಚೆನ್ನಾಗಿದ್ದರೂ ಮಾನಸಿಕ ತೊಂದರೆ ಇದೆ. ವ್ಯಾಪಾರ ಉದ್ಯೋಗಾದಿಗಳಲ್ಲಿ ಹಾನಿ ಸಹೋಗುವ ಸಂಭವವಿರುವುದರಿಂದ ಸಾಂಪತ್ತಿಕ ಸ್ಥಿತಿ ಸಾಧಾರಣ. ಸ್ತ್ರೀಯರಿಂದ ಅಪಮಾನ. ಈ ವಾರ ಪ್ರವಾಸ ನಿಲ್ಲಿಸಿದರೆ ಉತ್ತಮ. ತಾ|| ೨೭ ಧನಸಹಾಯ, ಮನಶ್ಶಾಂತಿ.

ಧನುಸ್ಸು—ಈ ವಾರ ಪರೋಪಕಾರದ ಕಾರ್ಯಗಳು ನಿಮ್ಮಿಂದ ಜರುಗುವುವು. ಮಾನಸಿಕ ಆರ್ಥಿಕ ಮತ್ತು ಆರೋಗ್ಯ ದೃಷ್ಟಿಯಿಂದ ಉತ್ತಮವಾಗಿದೆ. ಉದ್ಯೋಗ ನೌಕರಿ ಪ್ರವಾಸಗಳಲ್ಲಿ ಲಾಭ, ಪ್ರಗತಿ. ಸತ್ಪುರುಷರ ಸಹವಾಸ, ಮಿತ್ರ ಸಹಾಯ, ತೀರ್ಥಕ್ಷೇತ್ರ ಸಂದರ್ಶನ ಇವು ಲಭಿಸುವುವು. ತಾ|| ೨೫ ಮಿತ್ರ ಭೇಟಿ.

ಮಕರ—ನಿಮ್ಮ ಸಂಶಯ ಮತ್ತು ಚಂಚಲ ಸ್ವಭಾವದಿಂದ ಜನರಲ್ಲಿ ಕಾರಣವಿಲ್ಲದೆ ದ್ವೇಷ ಹುಟ್ಟಿಸಿಕೊಳ್ಳುವಿರಿ. ಆರೋಗ್ಯ ಆರ್ಥಿಕ ಸ್ಥಿತಿ ಚೆನ್ನಾಗಿದ್ದರೂ ಮಾನಸಿಕ ಸ್ಥಿತಿ ಚೆನ್ನಾಗಿಲ್ಲ. ವ್ಯಾಪಾರಾದಿಗಳಲ್ಲಿ ನಿಮ್ಮ ಸ್ವಭಾವದಿಂದ ಹಾನಿ ಸಂಭವಿಸುತ್ತದೆ. ತಾ|| ೨೭, ೨೮ ಸ್ತ್ರೀಯರಿಂದ ಲಾಭ, ಕಲಹ, ಧನನಾಶ.

ಕುಂಭ—ಈ ವಾರ ದುಷ್ಟ ಸಹವಾಸದ ಫಲವಾಗಿ ನಿಮ್ಮಿಂದ ನೀಚ ಕೃತ್ಯಗಳು ಜರುಗುವುವು. ಆರೋಗ್ಯ, ಆರ್ಥಿಕ ಸ್ಥಿತಿ ಚೆನ್ನಾಗಿದ್ದರೂ ಮಾನಸಿಕ ಚಿಂತೆ. ವ್ಯಾಪಾರ ನೌಕರಿಗಳಲ್ಲಿ ಶತ್ರುಗಳಿಂದ ಹಾನಿ. ಪ್ರವಾಸದಲ್ಲಿ ವಿಘ್ನ. ತಾ|| ೨೫, ೨೭, ೨೮ ಕಲಹ, ಹಾನಿ, ಸಂತಾಪ, ಧನನಾಶ, ಖರ್ಚು, ವಿಯೋಗ.

ಮೀನ—ಸೋಮಾರಿತನವನ್ನು ಬಿಟ್ಟು ಚುರುಕಾಗಿರಿ. ಈ ವಾರ ಅಕಸ್ಮಾತ್ತಾಗಿ ಲಭಿಸುವ ಧನವನ್ನು ನಿಮ್ಮ ಆಲಸ್ಯದಿಂದ ಕಳೆದುಕೊಳ್ಳುವಿರಿ. ಉದ್ಯೋಗ ನೌಕರಿಗಳಲ್ಲಿ ಹಾನಿ, ಆರೋಗ್ಯ ಚೆನ್ನಾಗಿದೆ. ಸಾಂಪತ್ತಿಕ ಮಾನಸಿಕ ಸ್ಥಿತಿ ಸಾಧಾರಣವಾಗಿರುತ್ತವೆ. ತಾ|| ೨೬, ೨೮, ೩೦ ವ್ಯಥೆ, ವ್ಯಾಪಾರದಲ್ಲಿ ಧನವ್ಯಯ.

ಚಳಿಗಾಲ

ಅತ್ಯುತ್ತಮವಾದ ರಗ್ಗುಗಳಿಗೂ,
ಸೂಟಿಂಗ್ ಕೋಟಿಂಗ್, ಕಂಬಳಿ
ವಗೈರೆಗಳಿಗೂ ಎಲ್ಲೂ ಹುಡುಕಬೇಡಿ.

ನೇರವಾಗಿ ನಮ್ಮಲ್ಲಿಗೆ ಬನ್ನಿ. ಕಡಿಮೆ
ಬೆಲೆಗೆ ಉತ್ತಮವಾದ ಮಾಲು
ಹೊಂದುವಿರಿ

ಜಿ. ವಿ. ಸೂರ್ಯನಾರಾಯಣ ಶೆಟ್ಟಿ ಅಂಡ್ ಸನ್ಸ್
ಜ್ಯೂಯಲರ್ಸ್ & ರೆಡಿಮೇಡ್ ಡ್ರೆಸ್ ಎಂಪೋರಿಯಂ,
ಸಯ್ಯಾಜಿರಾವ್ ರೋಡ್, ಮೈಸೂರು

(ಹಿಂದಿನ ಪುಟದಿಂದ)

ವಳು ಒಂದು ಸೆರೆಗೆ ಸಿಕ್ಕಿ ತೃಪ್ತಳಾಗುತ್ತಾಳೆ. ಈ ಬಗೆಯ ತೃಪ್ತಿ ಇದೆಯಲ್ಲಾ ಅದು ಸ್ತ್ರೀಯ ಪ್ರಗತಿಗೆ ಅಡಚಣೆ ಎಂದು ನನ್ನ ಭಾವನೆ. ಮದುವೆಯಾಗದೆ ಇರತಕ್ಕವರಿಗೆ ಹ್ಯಾಗಾದರೂ ಜೀವನದಲ್ಲಿ ಒಂದು ಉತ್ತಮಗತಿ, ಪದವಿ ಪಡೆಯಬೇಕು ಎನ್ನುವ ಆಸೆಯೂ ಆಕಾಂಕ್ಷೆಯೂ ಇರುವುದೂ ಸಹಜ. ಇವು ಅವಳನ್ನು ಎಂಥ ಕಷ್ಟ ಬಂದರೂ ಸಹಿಸುವುದಕ್ಕೂ ಮುಂದುವರಿಯುವುದಕ್ಕೂ ಹುರಿದುಂಬಿಸುತ್ತವೆ. ಆದ್ದರಿಂದ ಸ್ತ್ರೀಯ ಪ್ರಗತಿಗೆ ಅನುಕೂಲವಾಗುವ ಈ ಅತೃಪ್ತಿ, ಆಸೆ, ಆಕಾಂಕ್ಷೆಗಳು ಅವಿವಾಹಿತರ ಜೀವನದಲ್ಲಿ ಕಂಡುಬರುವುದೂ ನನ್ನ "ಮದುವೆಯಾಗುವುದಿಲ್ಲ" ಎಂಬ ಸಂಕಲ್ಪಕ್ಕೆ ಕಾರಣ.

ಉಭಯ ಸಂಕಟ

ಹೀಗೆ ಹೇಳುತ್ತಾ ಇರುವಾಗ ನಿಮಗೆ ಅಲ್ಲಿ ಹೊಳೆದಿರಬಹುದಾದ ಒಂದು ವಿಷಯ ನನ್ನ ಗಮನಕ್ಕೆ ಬಾರದೇ ಇಲ್ಲ. ವಿರಾಗಿಯಾಗಿ ಬಾಳುವುದರಲ್ಲಿ ಯಾವುದೋ ಒಂದು ರೀತಿಯ ಸುಖ ಸಿಕ್ಕುತ್ತದೆ ಎಂದು ನಿರೀಕ್ಷಿಸಿ ಕೆಲವರು ಲಗ್ನ ಆಗುವುದಿಲ್ಲ ಮತ್ತು ಅವರು ಎಣಿಸುವ ಈ ಸುಖದ ಪರಿಮಾಣ ದಿನೇದಿನೇ ಮೇಲೇರಿ ಏರಿ, ಎಂದೋ ಒಂದು ದಿವಸ ಅತಿ ಉತ್ಕಟ ಸ್ಥಿತಿಗೆ ಬರಬಹುದು. ಆದರೆ ಅದು ಯಾವಾಗಲೂ ಅಲ್ಲೇ ಹಾಗೆ ಇರಲಾರದು—ಅಲ್ಲಿಂದ ಕೆಳಗಿಳಿಯಲೇ ಬೇಕು – ಆ ಅವಸ್ಥೆಯಲ್ಲಿ ನಿಮಗೆ ಅಶಾಂತಿ ಹುಟ್ಟಿ—ಸುಖವಿಲ್ಲದಿದ್ದರೂ ಚಿಂತೆ ಇಲ್ಲ ಶಾಂತಿಯಾದರೂ ಸಿಕ್ಕೀತು ಎಂತ ನಂಬಿ—ಮದುವೆಯಾಗ್ತೀರಿ, ವೃದ್ಧಕನ್ಯೆಯರು ಕೆಲವರು ಮದುವೆಮಾಡಿಕೊಳ್ಳುತ್ತಿರುವುದಕ್ಕೆ ನಿದರ್ಶನ ಅಲ್ಲೇ? ಅಂತ ಯಾರಾದ್ರೂ ಹೇಳಬಹುದು. ಆದರೆ ನನಗಿಲ್ಲೊಂದು ಸಮಸ್ಯೆ—ಒಂದು ರೀತಿಯ ಸುಖ ಸಿಗುತ್ತೆ ಅಂತ ಮದುವೆಮಾಡಿಕೊಳ್ಳುವುದು ಸಹಜ ಅಲ್ವೆ? ಈ ಸುಖವೂ ದಿನೇದಿನೇ ಮೇಲೇರಿ, ಕೊನೆಗೆ ಎಂದಾದ್ರೂ ಒಂದು ದಿನ ಹಾಗೆ ಒಂದು ಉತ್ಕಟ ಸ್ಥಾನ ಮುಟ್ಟುತ್ತದೆ. ಇದರಲ್ಲಿ ಸಂದೇಹವೇ ಇಲ್ಲ. ಆಮೇಲೆ ಅದೂ ಕೆಳಗಿಳಿಯಲೇ ಬೇಕು—ಈ ಅವಸ್ಥೆಯಲ್ಲಿ ಸಮಾಧಾನವಿರಬೇಕಾದ್ರೆ ಒಂದು ದಾರಿ ಹುಡುಕಬೇಕಲ್ಲ! ಆ ದಾರಿ ಯಾವುದು? ವೈರಾಗ್ಯ ಅಲ್ಲ—ಮದುವೆ ಎಂದರೆ ಅದೂ ಇಲ್ಲ; ಕಾರಣ ಅದರಿಂದಲೇ ಆ ನಿರಾಶೆ ಆಗಿರುವುದು. ಆಗ ನಮ್ಮ ಗತಿ ಏನು? ಆದಕ್ಕೇನೇ, ಮದುವೆ ಮಾಡಿಕೊಂಡು, ಸಿಗುವ ಸುಖವನ್ನು ಒಂದು ಪರಿಮಿತದ ಸೆರೆಗೆ ಸಿಕ್ಕಿಸಿ, ಪಂಜರದೊಳಗೆ ಬಿದ್ದ ಕೀಟದ ಹಾಗೆ ಒದ್ದಾಡುವುದಕ್ಕಿಂತ ಇರುವಷ್ಟು ಸುಖವನ್ನು ಭದ್ರವಾಗಿ, ಜೋಪಾನವಾಗಿ ಇಟ್ಟುಕೊಳ್ಳುವುದು ಉಚಿತ ಅನ್ನಿಸುತ್ತದೆ.

ಜನರು ಮದುವೆ ಮಾಡಿಕೊಳ್ಳುವುದು ಪ್ರಪಂಚ ಹುಟ್ಟಿದಂದಿನಿಂದಲೂ ಇದೆ. ಇದರಲ್ಲಿ ಸಂತೋಷ, ಸಡಗರ, ಸಂಭ್ರಮ ತೋರಿಸಬೇಕಾದ ಅಗತ್ಯ ಅನೇಕರಿಗೆ ಇದ್ದೀತು. ವಿವಾಹವಾಗುವುದು ಪ್ರಕೃತಿ ನಿಯಮ ಎಂದು ಒಪ್ಪಿದರೆ, ಹಾಗೆಯೇ ಮದುವೆಯಾಗದಿರುವುದೂ ಪ್ರಕೃತಿ ನಿಯಮ ಎಂದು ಒಪ್ಪಕೂಡದೇಕೆ? ಈ ಅಭಿಪ್ರಾಯ ಸಧ್ಯದಲ್ಲಿ ವಿಚಿತ್ರವಾಗಿ ಕಂಡರೂ ಕಾಲ ಕಳೆದಂತೆಲ್ಲಾ ರೂಢಿಗೆಬಂದು ಬಲ ಪಡೆಯಬಹುದೀತು. ಆಗ ಈಗ ನಾನು ಹೇಳಿದ ಕಾರಣಗಳು ಆಶ್ಚರ್ಯವಾಗದೆ ಸರ್ವ ಸಾಧಾರಣ ಆದಾವು!

'ತರಂಗರಂಗ'

ದಿವ್ಯವಾದ ಸಾಬೂನು

ಬೆಲೆಯಲ್ಲಿ ಕಿರಿದಾದರೂ ಗುಣದಲ್ಲಿ ಹಿರಿದು



ಮೈಸೂರು ಸ್ಯಾಂಡಲ್ ಸೋಪಿನಿಂದ ಬಂಗಾರಕಾಂತಿಯು ಹೊಸದಾಗುವುದಲ್ಲದೆ ಅದರ ಚೆಳ್ಳನೆಯ ಬುರುಗು ರೋಮ ರಂಧ್ರಗಳನ್ನೆಲ್ಲಾ ಹೊಕ್ಕು ಮೈದೊಗಲಿನ ಕಸವನ್ನೆಲ್ಲಾ ತೆಗೆದುಹಾಕುವುದು. ಅದರ ಮೆತ್ತನೆಯ ಗುಣವೂ, ಸುಗಂಧವೂ ಚಿತ್ತಾಕರ್ಷವೆನಿಸುವುವು.

ಮೈಸೂರು ಸ್ಯಾಂಡಲ್ ಸೋಪ್

ಕಿತ್ತಳೇ ಹಣ್ಣಿನ ಸಿಪ್ಪೆ ಎಷ್ಟಿದ್ದರೂ ಬೇಕು

ಅಶೋಕಾ ಫಾರ್ಮಸಿ,
ದಳೇ ಮೈಸೂರು ಬ್ಯಾಂಕ್ ರಸ್ತೆ,
ಮೈಸೂರು.

ಉತ್ತರ ಭಾರತದಲ್ಲಿ ಪ್ರವಾಸ

[ಸ್ವಂ. ವ.] ಬೆಂಗಳೂರು ೨೩.

ಶ್ರೀ ಎಸ್. [illegible] ಯವರು ಮುಂದೆ ಬೊಂಬಾಯಿಗೆ ಪ್ರಯಾಣಮಾಡಿ [illegible] ಅವರು ಉತ್ತರ ಭಾರತದ ಅನೇಕ [illegible]ಗಳಿಗೆ ಭೇಟಿಯಿತ್ತು ಅಲ್ಲಿನ [illegible] ರಾಜಕೀಯ [illegible] ನಡೆಸುವರು.

ವಿದ್ವಾಂಸ ಸಮ್ಮೇಳನ

[illegible] ಗಂಟೆಗೆ [illegible] ಸಮ್ಮೇಳನವು ಶ್ರೀ [illegible] ರವರ ಅಧ್ಯಕ್ಷತೆಯಲ್ಲಿ ಸರ್ ಪುಟ್ಟಣ್ಣಚೆಟ್ಟಿ ನಗರ ಭವನದಲ್ಲಿ ನ[illegible] ದಿವಾನ್ [illegible] ಶ್ರೀ [illegible] ಅವರು ಪ್ರಾರಂಭೋತ್ಸವ [illegible] ಸಮ್ಮೇಳನ ೩ ದಿನ ನಡೆಯಲಿದೆ.

ಪ್ರೊಪರ್ಟಿ ಬಾವಿ ಸಭೆ

ಮೈಸೂರಿನ [illegible] ರಾಮಸ್ವಾಮಿ ಶ್ರೀ ಟಿ ಎಸ್ [illegible] ಅಯ್ಯಂಗಾರ್ ಮತ್ತು ಶ್ರೀ [illegible] ಲಿಂಗೇಗೌಡರ ಪ್ರಯತ್ನ [illegible] ಪ್ರೊಪರ್ಟಿ ಬಾವಿ ಸಭೆಯು [illegible] ಇಲ್ಲಿ ನಡೆಯಿತು [illegible] ಇತ್ಯಾದಿ ವಿಷಯಗಳನ್ನು ಪರಿಶೀಲಿಸಲಾಯಿತೆಂದು ಗೊತ್ತಾಗಿದೆ.

ಮೈಸೂರು ಶ್ರೀ ಮನ್ಮಹಾರಾಜರವರ ಸನ್ನಿಧಿಯಿಂದ [illegible] ಪಡೆದ [illegible] ಅಂಗಡಿ.

ಚೆನ್ನಾಗಿ ಹೊಲಿದ ಸೂಟ್ ಧರಿಸಿದ್ದರ ನೀವು ಎಷ್ಟು ಸೊಗಸಾಗಿ ಕಾಣುವಿರಿ !

ಅದಕ್ಕೆ ಒಳ್ಳೆ ಹೊಲಿಗೆ ಅಗತ್ಯ.

ನಿಮ್ಮ ದೇಹಕ್ಕೆ ಹೊಂದುವಂತೆ ತೃಪ್ತಿಕರವಾಗಿ ಹೊಲಿದುಕೊಡಬಲ್ಲವರು

ಬಿ. ವಿಠಲ್ ಬ್ರದರ್ಸ್,

ಪ್ರಸಿದ್ಧ ದರ್ಜಿಗಳು ಮತ್ತು ಬಟ್ಟೆ ವ್ಯಾಪಾರಿಗಳು,

ಶ್ರೀ ಹರ್ಷ ರಸ್ತೆ, ಮೈಸೂರು

Edited, printed and published by A. R. Nagarajan, at the Sadhvi Press, D Sub[illegible] Road, Mysore

ಲಿಂಗಮನಗೌಡ ಲಾ ಕಾಲೇಜಿಗೆ ಛಾಂಪಿಯನ್ ಷಿಪ್

ನಿನ್ನೆ ದಿನ ಸರ್ ಪುಟ್ಟಣ್ಣಚೆಟ್ಟಿರ ನಗರ ಭವನದಲ್ಲಿ ವಿಶ್ವವಿದ್ಯಾನಿಲಯ ಸಂಘದವರು ಪ್ರೊಫೆಸರ್ ಟಿ ಎಸ್ ವೆಂಕಣ್ಣಯ್ಯನವರ ಸ್ಮಾರಕ ಚರ್ಚೆಯನ್ನು ನಡೆಸಿದರು ರಾಜಸೇವಾಸಕ್ತ ಶ್ರೀ ಬಿ ಎಂ. ಶ್ರೀಕಂಠಯ್ಯನವರಿತ್ತಿರುವ ಛಾಂಪಿಯನ್ ಷಿಪ್ ಕಪ್ಪು ಬೆಳಗಾಂವಿಯ ರಾಜಾಲಿಂಗಮನಗೌಡ ಲಾ ಕಾಲೇಜಿಗೆ ದೊರೆಯಿತು. ಪ್ರಥಮ ಬಹುಮಾನವನ್ನು ಸಹ ಅದೇ ಕಾಲೇಜಿನ ಪ್ರತಿನಿಧಿಗಳಾದ ಶ್ರೀ ಟಿ ಕೃಷ್ಣಭಟ್ಟರು ಗಳಿಸಿದರು. ದ್ವಿತೀಯ ಬಹುಮಾನವನ್ನೂ ಕೂಡ ಅದೇ ಕಾಲೇಜಿಗೆ ಸೇರಿದ ಶ್ರೀ ಕೆ. ಆರ್. ಸೀತಾರಾಮಶಾಸ್ತ್ರಿಗಳು ಹೊಂದಿದರು ತೃತೀಯ ಬಹುಮಾನವು ಸೆಂಟ್ರಲ್ ಕಾಲೇ

ಹರಾಜು ನೋಟೀಸು

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ:—ಮೈಸೂರು ಸಿಟಿ ಇಂಪ್ರೂವ್ಮೆಂಟ್ ಟ್ರಸ್ಟ್ ಬೋರ್ಡಿಗೆ ಸೇರಿದ ಹೊಸ ಸಂತೇಪೇಟೆ ಎಕ್ಸ್‌ಟೆನ್ಷನ್‌ನಲ್ಲಿ ನ್ಯೂ ಸಯ್ಯಾಜಿರಾವ್ ರೋಡಿಗೆ ಎದುರಿನಲ್ಲಿರುವ ಅಕ್ಯೂಪ್ತವಾದ ೧೯ ಶಾಪ್ ಸೈಟುಗಳನ್ನು ತಾರೀಖು ೩೦–೧–೧೯೪೪ರ ನೆಯ ಭಾನುವಾರ ಬೆಳಗ್ಗೆ ೧೧ ಗಂಟೆಗಾಗಲಿ ತಾರೀಖು ೧೬–೧–೧೯೪೪ರ ನೆಯ ಮಧ್ಯಂ ಹರಾಜು ಇಸ್ತಿಹಾರ್‌ನಲ್ಲಿ ಕಂಡ ಷರತ್ತುಗಳಿಗೆ ಒಳಪಡಿಸಿ ಬಹಿರಂಗವಾಗಿ ಹರಾಜು ಮಾಡಲಾಗುತ್ತೆ. ವಿವರಗಳನ್ನು ಆಫೀಸಿನಲ್ಲಿ ತಿಳಿಯಬಹುದು

(ಸಹಿ)

ಆರ್. ರಾಮಚಂದ್ರರಾವ್

ಬೊಂಬೋರೆ,

ಛೇರ್ಮನ್.

ಮೈಸೂರು ದೊಡ್ಡಕೆರೆ ಮೈದಾನದಲ್ಲಿ ನಡೆಯುವ

15 ಜೊತೆ

ಅಮೋಘವಾದ ಕುಸ್ತಿಗಳು

ತಾ|| 6-2-44 ನೇ ಭಾನುವಾರ

ಮೈಸೂರು ದೇವರಾಜ ಮೊಹಲ್ಲಾ

ಪೈ|| ಪುಟ್ಟಯ್ಯ ಉ|| ಕುಚೇಲನಿಗೂ

ಉಸ್ತಾದ್ ಪಾಪಯ್ಯನವರ ಮಗ

ಪೈ|| ಶ್ರೀಕಂಠಯ್ಯನಿಗೂ

ಮತ್ತು ಬೆಂಗಳೂರು ಅರಳೀಪೇಟೆ

ಪೈ|| ಕೆಂಪಣ್ಣನಿಗೂ

ಮೈಸೂರು ವಜೀರ್‌ಬಾದ್ ಮೊಹಲ್ಲಾ

ಪೈ|| ರಾಮಸ್ವಾಮಿಗೂ

ಮತ್ತು ಮೈಸೂರು ಮಂಡಿ ಮೊಹಲ್ಲಾ

ಪೈ|| ಕೃಷ್ಣಾಜಿ ಉ|| ಬುಡ್ಡನಿಗೂ

ಪೈ|| ರಾಮುನಿಗೂ

ಕಂಟ್ರಾಕ್ಟರುಗಳು:—

ಅರಕೆರೆ ಪುಟ್ಟಮಲ್ಲೇಗೌಡ ಉ|| ಸ್ವಾಮಿ ಮತ್ತು ಮೈಸೂರಿನ ಚಲ್ಲರೆ ಅಂಗಡಿ ಎಂ. ಟಿ. ಮಚ್ಚೇಗೌಡ.

ಒಲಿಂಪಿಕ್ ಛಾಂಪಿಯನ್ ಷಿಪ್ ಎ. ಎಫ್. ಐ. ಗೆ

ವೈ ಎಂ ಸಿ. ಎ. ಮೈದಾನದಲ್ಲಿ ನಡೆದ ಮೈಸೂರು ಒಲಿಂಪಿಕ್ ಪಂದ್ಯಗಳು ನಿನ್ನೆ ಮುಕ್ತಾಯಗೊಂಡಿತು. ರಾಜವೈದ್ಯ ಪ್ರವೀಣ ಡಾ|| ಎಸ್. ಸುಬ್ಬರಾಯರು ಗೆದ್ದವರಿಗೆ ಬಹುಮಾನ ವಿನಿಯೋಗ ಮಾಡಿದರು. ಎ ಎಫ್ ಐ ರವರು ಈ ವರ್ಷವೂ ಒಲಿಂಪಿಕ್ ಛಾಂಪಿಯನ್ ಷಿಪ್ಪನ್ನು ಪಡೆದರು.

ಈ ಸ್ಪರ್ಧೆಗಳಲ್ಲಿ ಈ ಸಲ ಪೋಲ್‌ವಾಲ್ಟ್ ಡಿಸ್ಕಸ್ ಥ್ರೋ ಮತ್ತು ಹಾಪ್ ಜಂಪ್ ಮತ್ತು ಜಂಪಿನ ಹಿಂದಿನ ಮೈಸೂರು ರಿಕಾರ್ಡ್ ಮುರಿಯಲಾಯಿತು.

[illegible]ಜ್ ವಿದ್ಯಾರ್ಥಿ ಜಿ ಎ ನರಸಿಂಹಮೂರ್ತಿಗೆ ದೊರಕಿತು. ಚರ್ಚೆಯ ವಿಷಯ "ಇಂದು ಕರ್ಣಾಟಕದಲ್ಲಿ ಮತ್ತೊಂದು ವಿಶ್ವವಿದ್ಯಾನಿಲಯದ ಆವಶ್ಯಕತೆ ಇದೆ." ಸೂಚಕರು ಶ್ರೀ ಗೋಕಾಕರು.

ಪೌರಸಭಾಧ್ಯಕ್ಷರಾದ ಶ್ರೀ ಎಂ. ಎ. ಗೋಪಾಲಸ್ವಾಮಿ ಅಯ್ಯಂಗಾರ್ಯರು ಜಯಶೀಲರಾದವರಿಗೆ ಬಹುಮಾನ ವಿನಿಯೋಗ ಮಾಡಿದರು.

ರಜತ ಮಹೋತ್ಸವ

ಬಸವನಗುಡಿ ದೇಶೀಯ ವಿದ್ಯಾಶಾಲೆಯ ರಜತ ಮಹೋತ್ಸವದ ಆರಂಭೋತ್ಸವವನ್ನು ಶುಕ್ರವಾರ ರಾತ್ರಿ ರೈ|| ಆ|| ಡಾ|| ಎ ಎಸ್. ಶ್ರೀನಿವಾಸಶಾಸ್ತ್ರಿಗಳು ನೆರವೇರಿಸಿದರು. ನಿನ್ನೆ ಶಾಲೆಯ ಹಿಂದಿನ ತರುಣರ ಸಭೆ ಶ್ರೀ ಜಿ. ಎ. ಆಚಾರ್ಯರ ಅಧ್ಯಕ್ಷತೆಯಲ್ಲಿ ಜರುಗಿತು. ಇಂದು ಬೆಳಿಗ್ಗೆ ಇಂದಿನ ವಿದ್ಯಾರ್ಥಿಗಳೂ, ಅಧ್ಯಾಪಕರೂ ಮತ್ತು ಹಿಂದಿನ ತರುಣರೂ ಯೂನಿಫಾರಂ ಧರಿಸಿ, ಇಡೀ ಕಲ್ಯಾಣನಗರಿಯ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆಯಲ್ಲಿ ತೆರಳಿದರು

ಶಾಲೆಯ ಹಿಂದಿನ ತರುಣರು ೨,೦೦೦ ರೂ. ನಿಧಿಯನ್ನು ಶಾಲೆಗೆ ಅರ್ಪಿಸಿದರು.

ಸರ್ ಮಿರ್ಜಾ ಇಸ್ಮಾಯಿಲ್, ಶ್ರೀ ಸಿ. ರಾಜಗೋಪಾಲಾಚಾರಿ, ಸರ್ ಸಿ. ಆರ್. ರೆಡ್ಡಿ, ಸರ್ ಸಿ. ಪಿ ರಾಮಸ್ವಾಮಿ, ಪ್ರಧಾನ ಶಿರೋಮಣಿ ಎ. ಮಾಧವರಾವ್ ಇವರುಗಳೇ ಆದಿಯಾಗಿ ಅನೇಕರು ಈ ಶಾಲೆಯ ಉತ್ತರೋತ್ತರ ಶ್ರೇಯಸ್ಸನ್ನು ಕೋರಿ ಸಂದೇಶಗಳನ್ನು ಕಳುಹಿಸಿದ್ದರು.

ಮನೆ, ಗದ್ದೆ, ಬಂಗ್ಲೆ, ತೋಟ, ಸೈಟು ಬಿಲೆಗಿವೆ

1. ಮೈಸೂರು ಕೃಷ್ಣರಾಜಮೊಹಲ್ಲ [illegible] ನಂ. 1169 ಜಾಗ 18'×34, ಗಾರೆ, ಚಟ್ಟಿಗೆ, ಮಂಗಳೂರು ಹೆಂಚು, ಫ್ಲಷ್, ಕಟ್ಟಡ ಹೊಸದು ರೂ. 2,500—0—0

2. ಮೈಸೂರು ಕೃಷ್ಣರಾಜಮೊಹಲ್ಲ ಚಾಮುಂಡಿಪುರಂ 6 ನೇ [illegible] ಹಾಲಿ ಫ್ಲೋರ್ ಹಾಕಿರುವ ನಲ್ಲಿ, ಫ್ಲಷ್, ಕಾಂಪೌಂಡ್ ಇರುವ ಮಂಗಳೂರು ಹೆಂಚಿನ ಮನೆ ರೂ 2,300—0—0.

3. ಮೈಸೂರು ಲಷ್ಕರ್‌ಮೊಹಲ್ಲ [ದೊಡ್ಡಪೇಟೆ] ಮಹಡಿ, ನಲ್ಲಿ, ದೀಪ ಇರುವ ಹೈರೋಡ್ ಮನೆ [ಸೆಂಟ್ ಫಿಲೋಮಿನಾ ಚರ್ಚ್ ಎದುರು 376] ರೂ. 5,000.

4. ಬಂಗ್ಲೆ ಸೈಟು—ವಾಣಿವಿಲಾಸ ರೋಡಿನಲ್ಲಿ [illegible] ಬಂಗ್ಲೆ ಪಕ್ಕದಲ್ಲಿದೆ. 165'×70. ಬೆಲೆ 13,500.

5. [illegible] ನಲ್ಲಿ [ಚಾಮುಂಡಿಪುರಂ] ನಲ್ಲಿ, ದೀಪ, ಫ್ಯಾನ್, ಕಾಂಪೌಂಡ್, [illegible] ಬಂಗ್ಲೆ. [ಹಾಲಿ ಸರ್ಕಾರಿ ಮಾಧ್ಯಮಿಕ ಶಾಲೆ ಇದೆ] ಬೆಲೆ 15,000—0—0

6. [illegible] [New Lakshmipuram Extension] ನಲ್ಲಿ, ಮಹಡಿ, ಫ್ಲಷ್, ಔಟ್ ಹೌಸ್, ಕಾಂಪೌಂಡ್, ಗ್ಯಾರೇಜ್, ದೀಪ ಇರುವ ಬಂಗ್ಲೆ, ಬೆಲೆ 20,000—0—0

7. ಶ್ರೀಮನ್ಮಹಾರಾಜರವರ ಛತ್ರದ ಪಕ್ಕದ ವಿಳ್ಯದೆಲೆ ತೋಟ 2 ಎಕರೆ 16 ಗುಂಟೆ 5,000—0—0

8. ಶ್ರೀರಂಗಪಟ್ಟಣದ ತಾಲ್ಲೂಕಿಗೆ ಸೇರಿದ 15 ಎಕ್ರೆ ಗದ್ದೆ, 60 ಪಲ್ಲ ಮಾಲ್ ಗುತ್ತಿಗೆ. ರೂ 18,750—0—0

9. [illegible] ಕಬ್ ತಾಲ್ಲೂಕು [illegible] ಫಲವತ್ತಾದ [illegible] ಹಣ್ಣಿನ ತೋಟ [Orchard] 3 ಎಕ್ರೆ, 7½ ಗುಂಟೆ, [illegible], ಬೆಲೆ 9,200—0—0 ರೂ

10. ಚಾಮರಾಜನಗರದ ಹತ್ತಿರ 7 ಮೈಲಿ ದೂರದಲ್ಲಿ ಸದಾ ನೀರಿರುವ 150 [illegible] 115 ಎಕ್ರೆ ಖುಷ್ಕಿ ಜಮೀನು—ಚಾಮರಾಜನಗರ-ಸತ್ಯಮಂಗಲ ರಸ್ತೆಯಲ್ಲಿದೆ. [ಹರದನಹಳ್ಳಿ ಸೋಟ್ಸ್] ಬೆಲೆ 8,500—0—0

11. ಜಗನ್ಮೋಹನ ಬಂಗ್ಲೆ ದಕ್ಷಿಣಭಾಗದಲ್ಲಿ ಮಹಡಿ, ನಲ್ಲಿ, ದೀಪ, ಕಾಂಪೌಂಡ್, ಫ್ಲಷ್ ಇರುವ ಹೊಸ್ಸ ಕಟ್ಟಡ ಉಳ್ಳ, [illegible] ಮನೆ 7,500—0—0 ರೂ ಸ್ಕೂಲು, ಕಾಲೇಜು, ಮಾರ್ಕೆಟ್, ಸ್ಟೇಷನ್, ಪೇಟೆ ಎಲ್ಲವಕ್ಕೂ ಹತ್ತಿರ.

12. ಬೆಂಗಳೂರು ಮಲ್ಲೇಶ್ವರಂ 6 ನೇ ಕ್ರಾಸ್ ರಸ್ತೆಯಲ್ಲಿ ನಲ್ಲಿ, ದೀಪ, ಕಾಂಪೌಂಡ್ ಇರುವ ಒಳ್ಳೆ ಬಾಡಿಗೆ ಬರುವ ಮಂಗಳೂರು ಹೆಂಚಿನ ಮನೆ. 9,300 ರೂ.

13. ಮಲ್ಲೇಶ್ವರಂ 15 ನೇ ಕ್ರಾಸ್‌ನಲ್ಲಿ 70'×110 ಇರುವ ಬಂಗ್ಲೆಯ ಸೈಟು 6,500—0—0 ರೂ

ಬೇಕಾದವರು ನನಗೆ ಬರೆಯಬಹುದು.

ಬಿ. ಎಸ್. ಸುಬ್ಬರಾವ್,

ಜಗನ್ಮೋಹನ ಬಂಗ್ಲೆ ಎದುರು, ಮೈಸೂರು.

ಭಾರತ ಸಂಸ್ಕೃತಿ ಘನತೆ
ಮಾಸ್ತಿಯವರ ಭಾಷಣ

ಸ್ವಂ ಸ.] ಮೈಸೂರು ೨೩

ನಿನ್ನೆ ಸಂಜೆ ಯೂನಿಯನ್ ಆಶ್ರಯದಲ್ಲಿ ಕನ್ನಡ ಪರಿಷತ್ತಿನ ಉಪಾಧ್ಯಕ್ಷರಾದ ಶ್ರೀ ಮಾಸ್ತಿ ವೆಂಕಟೇಶಯ್ಯಂಗಾರ್ಯರವರು ಮಹಾರಾಜಾ ಕಾಲೇಜ್ ಅಂಗಳದಲ್ಲಿ ಭರತಖಂಡದ ಸಂಸ್ಕೃತಿ ವಿಷಯವಾಗಿ ಭಾಷಣಮಾಡಿದರು. ಶ್ರೀ ಟಿ ಪಿ ಕೈಲಾಸಂರವರು ಅಗ್ರಾಸನದಲ್ಲಿ ಮಂಡಿಸಿದ್ದರು.

ಕಾರ್ಯದರ್ಶಿಗಳಾದ ಶ್ರೀ ಸಿದ್ಧಯ್ಯನವರು ಮಾಸ್ತಿಯವರನ್ನು ಸಭಿಕರಿಗೆ ಪರಿಚಯ ಮಾಡಿಕೊಟ್ಟು ಶಿವಮೊಗ್ಗಾದಲ್ಲಿ ಕನ್ನಡ ಸಮ್ಮೇಳನದಲ್ಲಿ ಅಧ್ಯಕ್ಷ ಬೇಂದ್ರೆಯವರು ಶ್ರೀ ಕೈಲಾಸಂರವರನ್ನು ಬರುವ ಸಮ್ಮೇಳನದ ಅಧ್ಯಕ್ಷರನ್ನಾಗಿ ಮಾಡಬಂತೆ ಶಿಫಾರಸನ್ನು ಉಪದೇಶಿಸಿ ಅದಕ್ಕಾಗಿ ಮಾಸ್ತಿಯವರು ದುಡಿಯುವರೆಂದು ನಂಬಿರುವುದಾಗಿ ಹೇಳಿದರು. ಅಲ್ಲದೆ ಶ್ರೀ ಕೈಲಾಸಂರವರ ಒಗ್ಗೆ ಬೇಂದ್ರೆಯವರು ಅಧ್ಯಕ್ಷ ಪೀಠದಿಂದ ನುಡಿದ ಮಾತುಗಳನ್ನು 'ಸಾಧ್ವಿ' ಪತ್ರಿಕೆಯೊಂದು ಬಿಟ್ಟು ಉಳಿದ ಪತ್ರಿಕೆಗಳು ಪ್ರಕಟಿಸದೆ ಹೋಗಿರುವುದು ಆಶ್ಚರ್ಯಕರವಾಗಿದೆಯೆಂದು ಹೇಳಿದರು.

ಅನಂತರ ಶ್ರೀ ಮಾಸ್ತಿಯವರು ಸುಮಾರು ೨ ಗಂಟೆಗಳ ಕಾಲ ಭಾರತ ಸಂಸ್ಕೃತಿಯ ವಿಷಯವನ್ನು ಕುರಿತು ಬಹಳ ಸ್ವಾರಸ್ಯವಾಗಿ ಮಾತನಾಡಿದರು. ಭರತಖಂಡ ಹೊಂದಿರುವಷ್ಟು ಪ್ರಾಚೀನ ಸಂಸ್ಕೃತಿಯನ್ನು ಜಗತ್ತಿನಲ್ಲಿ ಮತ್ತಾವ ದೇಶವೂ ಹೊಂದಿಲ್ಲ. ಜಗತ್ತಿನಲ್ಲಿ ಯಾವ ಒಂದು ಮಹತ್ ಕಾರ್ಯವಾಗಬೇಕಾದರೂ ಭಾರತ ಸಂಸ್ಕೃತಿ ಸಲಹೆಯನ್ನು ಪಡೆಯಬೇಕು. ನಮ್ಮ ದೇಶದ ಸಂಸ್ಕೃತಿ ಘನತೆಯನ್ನು ಮೀರಿದ ಸಂಸ್ಕೃತಿ ಮತ್ತೊಂದಿಲ್ಲವೆಂದು ಒತ್ತಿ ಹೇಳಿದರು. ಶ್ರೀ ಕೈಲಾಸಂರವರು ಬೇರೆಬೇರೆ ದೇಶಗಳ ಸಂಸ್ಕೃತಿಗಳನ್ನು ಒಂದಕ್ಕೊಂದಕ್ಕೆ ಹೋಲಿಸಿ ಎರಡು ನಿಮಿಷ ಮಾತನಾಡಿ ಎಲ್ಲರನ್ನೂ ನಗಿಸಿದರು. ಕೊನೆಯಲ್ಲಿ ಶ್ರೀ ರಾಮರಾವ್ ರು ಎಲ್ಲರಿಗೂ ವಂದನೆಯನ್ನರ್ಪಿಸಿದ ಮೇಲೆ ಸಭೆ ಮುಗಿಯಿತು

ಪರಿಷತ್ತಿಗೆ ಅರಮನೆ ಪ್ರತಿನಿಧಿಗಳು

ಮೈಸೂರು, ಅರಮನೆ ಸರ್ವಾಧಿ ರಾಜ್ ಎ. ಎಸ್. ನರಸಿಂಹಯ್ಯನವರು ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯನಿರ್ವಾಹಕ ಸಮಿತಿಗೆ ಸದಸ್ಯರಾಗಿ ನೇಮಕವಾಗಿದ್ದಾರೆ.

ಗಿರಿಣಿ ಕೂಲಿಕಾರರ ಸಭೆ

ದಾವಣಗೆರೆ, ದಾವಣಗೆರೆ ಬತ್ತಿ ಗಿರಿಣಿ ನೌಕರರು ಶ್ರೀ ಕೃಷ್ಣರಾವ್ ರವರ ಮುಂದಾಳತನದಲ್ಲಿ ಕೆಲಸಗಾರರ ಸಂಘದವರು ಒಂದು ವಿಶೇಷ ಸಭೆ ಸೇರಿಸಿದ್ದಾರೆ. ಆ ಸಭೆಯಲ್ಲಿ ಮಹತ್ವದ ಸ್ವಾತಂತ್ರ್ಯ ದಿನಾಚರಣೆ ಕುರಿತು ವಿಚಾರವನ್ನು ಪರಿಶೀಲಿಸಲಾಗುವುದು

ನಾಯಕರ ಸಮಾಲೋಚನೆ

ಮೈಸೂರು, ಸಂಸ್ಥಾನದ ಕಾಂಗ್ರೆಸ್ ನಾಯಕರು ಇನ್ನು ಒಂದೆರಡು ದಿವಸಗಳಲ್ಲೇ ಸಭೆ ಸೇರಿ ಪರಿಸ್ಥಿತಿ ಮತ್ತು ಜವಾಬ್ದಾರಿ ಪ್ರತಿನಿಧಿ ಕ್ಷೇತ್ರಗಳ ವಿಷಯವಾಗಿ ಸರ್ಕಾರದಿಂದ ಪತ್ರ ಬರೆಯುವ ವಿಚಾರ, ಇವುಗಳನ್ನು ಪರಿಶೀಲಿಸುವರು. ಬೆಂಗಳೂರಿನಲ್ಲಿ ಕಲೆತು ಸಮಾಲೋಚನೆ ನಡೆಸುವರೆಂದು ತಿಳಿದುಬಂದಿದೆ

ಸಂಪುಟ ೨] ಮಂಗಳವಾರ ೨೫-೧-೪೪ [ಸಂಚಿಕೆ ೧೬೧

ಬಂಗಾಳಾ ಮಂತ್ರಿಗಳ ರಾಜೀನಾಮೆ ?

ಕೇಂದ್ರ ಸರ್ಕಾರ ಕಾಂ|| ನಾಯಕರನ್ನು ಖುಲಾಸೆಮಾಡುವುದೆ
ಕತ್ತೆಕಿರುಬಗಳು ಶಿಶುಗಳನ್ನು ಅಪಹರಿಸುತ್ತಿವೆ

ಶಂಕರಪ್ಪ ಸ್ಮಾರಕ ಚರ್ಚೆ

ದಿವಂಗತ ಶಂಕರಪ್ಪನವರ ಸ್ಮಾರಕಾರ್ಥವಾಗಿ ವಿದ್ಯಾರ್ಥಿ ಸಂಘದವರು ನಡೆಸುವ ವ್ಯಾಸಂಗ ಚರ್ಚೆಯು ಶ್ರೀ ಎಂ ಲಕ್ಷ್ಮೀನಾರಾಯಣರಾವ್ ರವರ ಅಧ್ಯಕ್ಷತೆಯಲ್ಲಿ ನಡೆದಿದ್ದು ಶಂಕರಪ್ಪ ಸ್ಮಾರಕ ಚರ್ಚಾ ಫಲಿತಾಂಶ ಈ ಕೆಳಗೆ ಕಂಡಂತೆ ಇದೆ. 'ಹಿಂದಿಯಿಂದಲೇ ಸಮಾಜಕ್ಕೆ ಹಾನಿ' ಎಂಬ ವಿಷಯವಾಗಿ ಚರ್ಚಿಸಲಾಯಿತು. ಕಾಲೇಜಿನ ಪ್ರಥಮ ಬಹುಮಾನ ಶಾಂತಿನ ಕಾಲೇಜಿನ ಶ್ರೀ ಕೆ ಕುಮಾರಸ್ವಾಮಿ, ದ್ವಿತೀಯ ಬಹುಮಾನ ಸಂಸ್ಕೃತ ಕಾಲೇಜಿನ ವೀರಭದ್ರಾಚಾರ್ಯ, ತೃತೀಯ ಬಹುಮಾನ ಮಹಾರಾಣಿ ಕಾಲೇಜಿನ ಭಾಗ್ಯರತ್ನ ರವರಿಗೂ. ಸ್ಕೂಲ್ ಪ್ರಥಮ ಬಹುಮಾನ ಮಹಾರಾಜ ಕಾಲೇಜಿನ ಕುಳಕರ್ಣಿ, ದ್ವಿತೀಯ ಮ. ಕೃ. ತೃತೀಯ ಬಹುಮಾನಗಳು ರಾಜಾ ವಿಜಯ ಸ್ಮರಣಾರ್ಥ ಸ್ಮಾರಕ ವಿತರಣೆಯೊಂದಿಗೆ ಸಭೆ ಮುಗಿಯಿತು.

ಸ್ವಾತಂತ್ರ್ಯ ದಿನಾಚರಣೆ

ತಾ|| ೨೬-೧ ೪೪ ನೇ ಬುಧವಾರ ಸ್ವಾತಂತ್ರ್ಯ ದಿನಾಚರಣೆ ಸಂಬಂಧವಾಗಿ ಬೆಳಿಗ್ಗೆ ೯ ಗಂಟೆಗೆ ಸುಬ್ಬರಾಯನಕೆರೆ ಮೈದಾನದಲ್ಲಿ ಧ್ವಜಾರೋಹಣ, ಸಾಯಂಕಾಲ ೭ ಗಂಟೆಗೆ ಅಲ್ಲೇ ಬಹಿರಂಗಸಭೆಯೂ ನಡೆಯುತ್ತವೆಯೆಂದೂ, ಶ್ರೀ ಎಸ್. ರಂಗರಾಮಯ್ಯನವರು ಅಧ್ಯಕ್ಷತೆವಹಿಸುತ್ತಾರೆಂದೂ ಶ್ರೀ ಇ ಮ ಸಂಜೀವಪ್ಪನವರು ತಿಳಿಸುತ್ತಾರೆ

ದೇಶೀಯ ವಿದ್ಯಾಶಾಲೆಯಲ್ಲಿ

ಕೃಷ್ಣಮೂರ್ತಿಪುರದಲ್ಲಿರುವ ದೇಶೀಯ ವಿದ್ಯಾಶಾಲೆಯಲ್ಲಿ ನಾಳೆ ಬೆಳಿಗ್ಗೆ ೭ ಗಂಟೆಗೆ ಪ್ರಭಾತಫೇರಿ ಮತ್ತು ೮ ಗಂಟೆಗೆ ಶಾಲಾ ಪಟ್ಟನ್ನನವರ ಧ್ವಜಾರೋಹಣ ಅನಂತರ ಸಮಾರಂಭವು ನೆರವೇರುವುದು. ಈ ಸಮಾರಂಭಕ್ಕೆ ಎಲ್ಲರೂ ಭಾಗವಹಿಸಬೇಕಾಗಿ ಕೋರಿದೆ. ೯ ಗಂಟೆಯಿಂದ ಆಟ ಪಾಟ ಸ್ಪರ್ಧೆ ಮತ್ತು ಪ್ರಥಮ ಸ್ಥಾನದ ಬಹುಮಾನ ವಿತರಣೆಯು ಶಾಲಾಂಗಣದಲ್ಲಿ ಜರುಗಲಿರುವುವು

ದಿವಾನರ ಪ್ರಯಾಣ

ಪ್ರಧಾನ ದಿವಾನರಾದ ಎನ್. ಮಾಧವರಾಯರು ನಾಳೆಯ ೨೬ ನೇ ತಾ|| ದೆಹಲಿಗೆ ಹೋಗಲಿರುವರೆಂದು ಗೊತ್ತಾಗಿದೆ

ಪೋಲೀಸ್ ಅಧಿಕಾರಿಗಳಿಗೆ ಬಹುಮಾನ

ನಿನ್ನೆ ಸಂಜೆ ಜಿಲ್ಲಾ ಕಛೇರಿಯ ಮೈದಾನದಲ್ಲಿ ಜಿಲ್ಲಾ ಪೋಲೀಸ್ ಪರೇಡ್ ಜಿಲ್ಲಾ ದಿವಾನಗಳಾದ ಶ್ರೀ ರಣಜೋರ್ ಸಿಂಗ್ ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಜಿಲ್ಲೆಯಿಂದ ಹೊರಗಡೆಗೆ ಕಳ್ಳತನದಿಂದ ಆಹಾರ ಪದಾರ್ಥಗಳು ಹೋಗದಂತೆ ಮುಚುವ ಕೆಲಸದಲ್ಲಿ ಹೆಚ್ಚಿನ ಕೆಲಸವನ್ನು ಮಾಡಿದ ಸುಮಾರು ೬೦ ಮಂದಿ ಪೋಲೀಸ್ ಅಧಿಕಾರಿಗಳಿಗೆ ದ್ರವ್ಯ ರೂಪದಲ್ಲಿ ಬಹುಮಾನವನ್ನು ಹಂಚಲಾಯಿತು. ಎವರ ಪೈಕಿ ಇನ್ಸ್ಪೆಕ್ಟರಾದ ಶ್ರೀ ಶಿವಲಿಂಗಾಚಾರ್ಯ ಮತ್ತು ಶ್ರೀ ಆರ್. ಎಸ್. ಹನುಮಂತಶೆಟ್ಟಿ, ಸಬ್ ಇನ್ಸ್ಪೆಕ್ಟರು, ಶ್ರೀ ಎ. ಸಿ. ದೊರೆಸ್ವಾಮಿ, ಟಿ. ಮುತ್ತಣ್ಣ ಮತ್ತು ಬಿ ಆರ್. ಮಾಧವರಾಯರುಗಳಿಗೆ ಬಹುಮಾನಗಳು ದೊರೆತವು

ಹೊಸ ನಾಟಕ

ಮೈಸೂರು ನಾಟಕ ಸಂಘದವರು ತಮ್ಮ ನೂತನ ಉದ್ಯಮವಾದ 'ಇಂದೂ ರಾಣಿ ಅಥವಾ ಬಾಲ ಯ' ಎಂಬ ಚರಿತ್ರಾರ್ಹ ನಾಟಕವನ್ನು ಇದೇ ತಿಂಗಳು ೨೦ ನೇ ತಾ|| ಭಾನುವಾರ ಸಂಜೆ ೭ ಗಂಟೆಗೆ ಟೌನ್ ಹಾಲಿನಲ್ಲಿ ಅಭಿನಯಿಸುವರು

ಕೇಸಿ ಸರ್ವಾಧಿಕಾರಿ ?

ತುಂಬಿದ ಬಂಗಾಳಾ ಮಂತ್ರಿ ಮಂಡಲವು ಇಷ್ಟರಲ್ಲೇ ರಾಜೀನಾಮೆ ಕೊಡಬಹುದೆಂದೂ ಆಕೂಡಲೇ ಪರಿಸ್ಥಿತಿ ವಿಕ್ರಮ ಅಕ್ರಮಗಳ ಬಗ್ಗೆ ನಡೆಯಬಹುದೆಂದೂ ಈ ಇಲ್ಲವಾದಲ್ಲಿ ನೂತನ ಗೌರ್ನರಾದ ಮಿ|| ಕೇಸಿಯವರ ಪ್ರಾಂತ್ಯದ ಎಲ್ಲ ಅಧಿಕಾರವನ್ನೂ ತಮ್ಮ ಸ್ವಾಧೀನಕ್ಕೆ ತೆಗೆದುಕೊಳ್ಳುವರೆಂದೂ ತಿಳಿದುಬಂದಿದೆ

ಬಿಕ್ಕಟ್ಟು ಪರಿಹಾರವಾಗುವುದೆ ?

ಸರ್ಕಾರದವರು ಕಾಂಗ್ರೆಸ್ ನಾಯಕರನ್ನು ಬಿಡುಗಡೆ ಮಾಡುವ ವಿಷಯ ಬಹಳ ದಿನದಲ್ಲಿ ಮತ್ತೆ ಹೆಚ್ಚುತ್ತಿದೆ. ಸೈನ್ಯಾಧಿಪತಿ ತಮ್ಮ ಭಾರತ ಪ್ರವಾಸ ಮುಗಿಸಿಕೊಂಡು ಶ್ರೀ ರಾಜಗೋಪಾಲಾಚಾರ್ ಮತ್ತು ವೈಸ್ರಾಯರಿಗೆ ಅಧ್ಯಕ್ಷ ಕಾಂಗ್ರೆಸ್ ನಾಯಕರು ಇದರೊಳಗೆ ದೇಶದ ಬಿಕ್ಕಟ್ಟಿನ ಬಗ್ಗೆ ಏನಾದರೂ ಒಂದು ತೀರ್ಮಾನವಾಗುವುದೆಂದು ಹೇಳಲಾಗಿದೆ

ಸ್ವಾತಂತ್ರ್ಯ ದಿನಾಚರಣೆಗೆ ಅಡ್ಡಿ

ಇಂದಿನಿಂದ ೨೭ ನೇ ತಾ|| ವರೆಗೆ ಮದ್ರಾಸಿನಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಸಂಬಂಧವಾಗಿ ಸಾರ್ವಜನಿಕ ಸಮಾರಂಭಗಳು ನಡೆಯಕೂಡದೆಂದು ಮದ್ರಾಸ್ ಸರ್ಕಾರದವರು ಪ್ರತಿಬಂಧಿಸಿದ್ದಾರೆ

ಒರಿಸ್ಸಾದಲ್ಲಿ ಕಾಂಗ್ರೆಸ್ ಅಶಿಸ್ತು

ಒರಿಸ್ಸಾ ಸರ್ಕಾರದೊಡನೆ ಸಹಕರಿಸಬೇಕೆಂದು ನಿರ್ಧರಿಸಿರುವ ಕಾಂಗ್ರೆಸ್ ಪ್ರಮುಖರ ಮೇಲೆ ಅಲ್ಲಿನ ಅಸೆಂಬ್ಲಿ ಕಾಂಗ್ರೆಸ್ ಪಕ್ಷದ ನಾಯಕರು ಶಿಸ್ತಿನ ಕ್ರಮ ಕೈಗೊಳ್ಳುವರು. ಈಗಾಗಲೇ ಪಕ್ಷದ ಕಾರ್ಯದರ್ಶಿಯವರ ಮೇಲೆ ಶಿಸ್ತಿನ ಕ್ರಮ ಜರುಗಿಸಲಾಗಿದೆ

ಕತ್ತೆಕಿರುಬಗಳು ಶಿಶುಗಳನ್ನು ಭಕ್ಷಿಸುತ್ತಿವೆ

ಸಂಯುಕ್ತ ಪ್ರಾಂತ್ಯದ ಜೋನ್ ಪುರ್ ಜಿಲ್ಲೆಯಲ್ಲಿ ಕತ್ತೆಕಿರುಬಗಳ ಭಾಧೆಗಳು ಜನರನ್ನು ಭೀತಿಗೊಳಿಸಿ ಪೀಡಿಸುತ್ತಿದೆ. ಕಳೆದ ತಿಂಗಳು ಅವು ಅನೇಕ ಶಿಶುಗಳನ್ನು ಕೊಂಡೊಯ್ದವೆಂದೂ, ಗೊತ್ತಾಗಿದೆ. ಆ ಪೈಕಿ ಆಂಜಿವ ಹೊಂದಿದ್ದ ಹಲವು ಶಿಶುಗಳು ದೊರೆತಿವೆ. ಮಾನವ ರಕ್ತದ ರುಚಿ ಒಂದು ಕತ್ತೆಕಿರುಬವನ್ನು ಬಲಿಗೊಟ್ಟಿತು. ಆ ಜಿಲ್ಲೆಯ ಸಕ್ಕರೆ ಕಾರ್ಖಾನೆಯ ಕೂಲಿಯೊಬ್ಬನನ್ನು ಕೊಲ್ಲಲು ಪ್ರಯತ್ನಿಸುವ ಸಾಹಸಕಾರ್ಯಕ್ಕೆ ಪ್ರೇರೇಪಿಸಿತು. ಆದರೆ ಇತರರು ಅವನ ಪ್ರಾಣ ಉಳಿಸಿದರು. ಇವುಗಳ ಹಾವಳಿಯನ್ನು ತಪ್ಪಿಸುವವರಿಗೆ ೨೦೦ ರೂ ಬಹುಮಾನ ಕೊಡುವುದಾಗಿ ಆ ಜಿಲ್ಲಾಧಿಕಾರಿಗಳು ಪ್ರಕಟಿಸಿದ್ದಾರೆ.

೧೦೦ ರೂ. ನೋಟು ಇಲಿ ಭಕ್ಷಿಸಿತು

ಕಾಶಿಯ ಅಂಚೆ ಕಛೇರಿಯಲ್ಲಿ ಸೇರಿಕೊಂಡಿರುವ ಇಲಿಯೊಂದು, ಪೆಟ್ಟಿಗೆಯನ್ನು ಕೊರೆದು ಒಳಗಿದ್ದ ನೂರು ರೂಪಾಯಿನ ನೋಟನ್ನು ತನ್ನ ಬಿಲಕ್ಕೆ ಕೊಂಡೊಯ್ದು ಬಹು ಭಾಗವನ್ನು ಭಕ್ಷಿಸಿದ್ದುದು ಪತ್ತೆಯಾಗಿದೆ. ಪೈವಸ್ಥಾಪ್ ನೋಟಿನ ಸಂಬರಿನ ಭಾಗ ಇಲಿಗೆ ಆಹಾರವಾಗಿಲ್ಲವಾಗಿ ಅದನ್ನು ಕರೆನ್ಸಿ ಕಛೇರಿಗೆ ರವಾನಿಸಿ ನೋಟನ್ನು ಇಲಿ ಹಾಳುಮಾಡಿತೆಂದು ತಿಳಿಸಲಾಗಿದೆ

ಟಾಸ್ನೊ ರಷ್ಯನರ ಹಸ್ತಗತ

ಮಾಸ್ಕೋದಿಂದ ನೇರವಾಗಿ ಲೆನಿನ್ ಗ್ರಾಡಿಗೆ ಹೋಗುವ ಟಾಸ್ನೊ ಎಂಬ ಸ್ಟೇಷನ್ನಿಗೆ ಈಗ ರಷ್ಯನರಿಂದ ವಿನಃ ಶುತ್ರು ಸ್ಥಳವು. ಆ ನಗರ ಅತಿ ಶೀಘ್ರದಲ್ಲೇ ರಷ್ಯಾ ಸೈನಿಕರ ಹಸ್ತಗತವಾಗುವ ಸ್ಥಿತಿಯಲ್ಲಿದೆ

ರಷ್ಯಾ ಪೋಲ್ ಒಪ್ಪಂದ ಸಾಧ್ಯವೆ ?

ಪೋಲರಿಗೂ ರಷ್ಯನರಿಗೂ ಒಪ್ಪಂದ ಮಾಡಿಕೊಳ್ಳುವ ಬಗ್ಗೆ ಸಹಕರಿಸುವ ಪ್ರಯತ್ನದ ಪರಿಣಾಮ ತಿಳಿಯದಂತಾಗಿದೆ. ರಷ್ಯನರು ಮಧ್ಯವರ್ತಿಯನ್ನು ಕೇಳಿರುವ ಶರತ್ತನ್ನು ಪರಿಗಣಿಸಿ ಇತ್ಯರ್ಥವಾಗುವುದು. ರಷ್ಯನ್ನರ ಸಹಕಾರವಿಲ್ಲದೆ ಏನೂ ಸಾಗದೆಂದು ಸರ್ವಾಧ್ಯಕ್ಷರು ನಾಯಕ ಪಿ|| ಚರ್ಚಿಲ್ ಹೇಳಿದ್ದಾರೆ

ಅಲ್ಯೂಮಿನಿಯಂ ಹತೋಟಿ ಆಜ್ಞೆ

ಸ್ವಂ ವ] ಬೆಂಗಳೂರು ೨೪

ಸರ್ಕಾರದವರು ಅಲ್ಯೂಮಿನಿಯಂ ಹತೋಟಿ ಆಜ್ಞೆಯನ್ನು ಹೊರಡಿಸಿ, [illegible] ವ್ಯಾಪಾರಿಗಳನ್ನು ಕಂಟ್ರೋಲರು [illegible]. ಅದರಂತೆ ಯಾರೂ ಕಂಟ್ರೋಲರಿಂದ ರಹದಾರಿ ಪಡೆಯದೆ ಅಲ್ಯೂಮಿನಿಯಂ ಪದಾರ್ಥಗಳನ್ನು ತಯಾರು ಮಾಡುವುದಕ್ಕಾಗಲಿ ಮಾರುವುದಕ್ಕಾಗಲಿ ಅವಕಾಶವಿಲ್ಲವಾಗಿದೆ.

ಮೈಸೂರು ಜಂಖಾನಾಕ್ಕೆ ವಿಜಯ

ಸರ್ ವಿಜಯ ಮೆಮೋರಿಯಲ್ ಕ್ರಿಕೆಟ್ ಟೂರ್ನಮೆಂಟ್ ಸೆಮಿ ಫೈನಲ್ಸಿನಲ್ಲಿ ಮೈಸೂರ್ ಜಂಖಾನದವರು [illegible] ಇನ್ನಿಂಗ್ಸಿನಲ್ಲಿ [illegible] ಇಂಡಿಯನ್ ಜಂಖಾನದವರನ್ನು [illegible] ರನ್ನುಗಳಿಂದ ಸೋಲಿಸಿದರು.

ಮದರಾಸ್ ಗೌರ್ನರ ಸಲಹೆಗಾರರ ಆಗಮನ

ಮದರಾಸ್ ಗೌರ್ನರ ಸಲಹೆಗಾರರಾದ ಶ್ರೀ ಎಸ್. ವಿ. ರಾಮಮೂರ್ತಿಯವರು [illegible] ಬೆಳಿಗ್ಗೆ ಇಲ್ಲಿಗೆ ಆಗಮಿಸಿದರು. [illegible] ವಿಚಾರದಲ್ಲಿ [illegible] ಮತ್ತು [illegible] ಮಂತ್ರಿಗಳೊಡನೆ ಚರ್ಚಿಸಿದರು. [illegible] ಇಲ್ಲಿ ಪ್ರಮುಖ [illegible] ಹಲವು ಅಧಿಕಾರಿಗಳನ್ನು ಕಂಡು ಮಾತನಾಡುವವರಾಗಿದ್ದಾರೆ.

ಸ್ತ್ರೀ ಮಾನಭಂಗ ಪ್ರಯತ್ನ

ಬೆಂಗಳೂರು ಶಾಸ್ತ್ರೀ ಹೋಟೆಲ್‌ನಲ್ಲಿ [illegible] ಸ್ತ್ರೀಯೊಬ್ಬಳ ಮಾನಭಂಗ ಮಾಡಲು ಪ್ರಯತ್ನಿಸಿದ ಕಾರಣಕ್ಕಾಗಿ ಆ ಹೋಟೆಲಿನಲ್ಲಿದ್ದ [illegible] ದಸ್ತಗಿರಿ ಮಾಡಲಾಗಿದೆ. ಸ್ತ್ರೀಗೂ ಆಕೆ [illegible] ಬಂಧುಗಳೂ [illegible]

ಕಿರುಬಗಳ ಹಿಂಸೆ

[illegible] ಬೇಲೂರು [illegible] ಗ್ರಾಮಗಳ ಹತ್ತಿರ [illegible] ಕಿರುಬಗಳು [illegible] ಹಲಕೆಲವು [illegible] ತಿಳಿದು ಬಂದಿದೆ.

ಕೃಷ್ಣರಾಜನಗರದ ಪೌರಸಭೆ

ಕೃಷ್ಣರಾಜನಗರ ಪೌರಸಭೆಯ ಚುನಾವಣೆಯನ್ನು ಏಪ್ರಿಲ್ ಅಂತ್ಯದವರೆಗೆ ಸರ್ಕಾರದವರು ಮುಂದೂಡಿರುವರು.

ಆಹಾರ ಹಂಚಿಕೆ ಅವ್ಯವಸ್ಥೆ

ಸ್ವಂ ವ] ಚಾ|| ನಗರ ತಾ|| ೨೪

ಈ ಊರಿನ ಪೌರಸಭೆಯವರು ಪುರನಿವಾಸಿಗಳಿಗಾಗಿ ವ್ಯವಸ್ಥೆಗೊಳಿಸಿರುವ ಆಹಾರ ಪದಾರ್ಥಗಳ ಹಂಚಿಕೆ ಕ್ರಮ ಸಮರ್ಪಕವಾಗಿಲ್ಲ. ಈ ಪದ್ಧತಿ ಹೋಗಿ ಈ ಊರಿನಲ್ಲೂ ರೇಷನಿಂಗ್ ಕ್ರಮ ಜಾರಿಗೆ ಬಂದರೆ ಸ್ಥಿತಿ ಉತ್ತಮಗೊಳ್ಳುವುದೆಂದು ನಿವಾಸಿಗಳ ಅಭಿಮತ. ಪೌರಸಭೆಯವರು ತೆರೆದಿರುವ ಆಹಾರ ಡಿಪೋಗಳಲ್ಲಿ ಕೆಲಸ ಮಾಡುತ್ತಿರುವವರಿಗೆ ಕೊಡುತ್ತಿರುವ ಸಂಬಳ ಅತ್ಯಲ್ಪ. ಈ ಯುದ್ಧ ಕಾಲದಲ್ಲಿ ಅವರಿಗೆ ಸಂಬಳಗಳನ್ನು ಹೆಚ್ಚಿಸದೇ ಹೋದರೆ ತೊಂದರೆ ತೋರದಿರದು. ಸರಬರಾಜಿನಲ್ಲಿಯೂ ಅವ್ಯವಸ್ಥೆ ತಪ್ಪಿಲ್ಲ. ಸಮುದ್ರದ ನೆಂಟಸ್ತನ ಉಪ್ಪಿಗೆ ಬಡತನ ಎಂಬಂತೆ ಈ ಪ್ರಾಂತ್ಯ ಜೋಳ ಬೆಳೆಯುವ ಪ್ರದೇಶವಾದರೂ ಇಲ್ಲಿ ಜೋಳವೇ ಇಲ್ಲ. ಈ ಅವ್ಯವಸ್ಥೆ ಆದಷ್ಟು ಜಾಗ್ರತೆ ನೀಗಲೆಂದು ಹಾರೈಸಲಾಗಿದೆ.

ಗ್ರಾಮೋದ್ಧಾರ ಕಾರ್ಯ

ಸ್ವ ವ] ಮಂಡ್ಯ ೨೪

ನೆನ್ನೆ ದಿನ ಮಂಡ್ಯ ಸಬ್-ಡಿವಿಷನ್ ಆಫೀಸರಾದ ಶ್ರೀ ಚನ್ನರುದ್ರಯ್ಯನವರು ಮತ್ತು ಜಿಲ್ಲಾ ಬೋರ್ಡ್ ಸದಸ್ಯರಾದ ಶ್ರೀ ಕೆ. ಚಿಕ್ಕಲಿಂಗಯ್ಯನವರು ಹಾಲಕೆರೆ ಗ್ರಾಮಕ್ಕೆ ಹೋಗಿ ಊರಿನವರೊಡನೆ ಸಹಕರಿಸಿ ಊರಿನಲ್ಲಿದ್ದ ತಿಪ್ಪೆ ಗುಂಡಿಗಳನ್ನು ಮುಚ್ಚಿಸಿದ್ದಲ್ಲದೆ ಗ್ರಾಮಸ್ಥರಿಗೆ ಸ್ಟೌಗಳನ್ನು ಹಂಚಿಕೊಟ್ಟರು. ಶ್ರೀ ಕೆ. ಚಿಕ್ಕಲಿಂಗಯ್ಯನವರು ಬಡಾವಣೆಗೆ ಗುದ್ದಲಿ ಪೂಜೆ ಮಾಡಿದರು.

ಬ್ರಿ|| ಸಾರ್ವಜನಿಕರ ವಿಷಾದ

ಪಾರ್ಲಿಮೆಂಟಿನಲ್ಲಿ ನಡೆದ ಭಾರತ ಸ್ತ್ರೀ ಗಣಿ ಕೂಲಿಗಳ ವಿಷಯದ ಚರ್ಚೆಯು ಬ್ರಿಟನ್ ಸಾರ್ವಜನಿಕರನ್ನು ದಿಗಿಲು ಬಡಿಸಿದೆಯೆಂದು ತಿಳಿದುಬಂದಿದೆ.

ಸ್ತ್ರೀ ಕೂಲಿಗಳಿಗೆ ಒತ್ತಾಯವಿಲ್ಲ

ಗಣಿಯೊಳಗೆ ಸ್ತ್ರೀ ಕೂಲಿಗಳು ಕೆಲಸ ಮಾಡಕೂಡದೆಂದು ಹಾಕಲಾಗಿದ್ದ ಪ್ರತಿಬಂಧವನ್ನು ತೆಗೆಯಲಾಗಿದೆ; ಅಷ್ಟೆ. ಸ್ತ್ರೀ ಕೂಲಿಗಳು ಗಣಿಗಿಳಿದು ಕೆಲಸ ಮಾಡಲು ತಮಗಿಷ್ಟವಿದ್ದಲ್ಲಿ ಮಾತ್ರ ಕೆಲಸಕ್ಕೆ ಸೇರಲು ಅವಕಾಶವಿದೆಯೇ ವಿನಃ ಒತ್ತಾಯವೇನಿಲ್ಲವೆಂದು ಭಾರತ ಸಚಿವ ಶ್ರೀ ಅಂಬೇಡ್ಕರ್ ರವರು ಹೇಳುವರು.

Edited, printed and published by A R. Nagarajan, at the Sadhvi Press, D Subbiah Road, Mysore.

ಹೆಂಗಸಿನ ಮೂಗು ಕುಯ್ದ

ಮದರಾಸಿನ ಅಬ್ರಹಾಂ ಎಂಬುವನು ತನ್ನ ಮಿತ್ರನಿಗೆ ಬೈಸಿಕಲ್ ಒಂದನ್ನು ಮಾರಿ ಅವನಿಂದ ಹಣ ಬರುವುದು ತಡವಾಗಲಾಗಿ ಇಬ್ಬರೂ ವ್ಯಾಜ್ಯವಾಡುತ್ತಿದ್ದಾಗ ಕೊಂಡಾತನ ಪತ್ನಿ ಮೇರಿ ಗ್ರೇಸ್ ಎಂಬುವಳು ನಡುವೆ ಬರಲು ಅಬ್ರಹಾಮನು ಆಕೆ ಮೂಗನ್ನು ರೇಜರ್‌ನಿಂದ ಕುಯ್ದನೆಂಬ ಆಪಾದನೆ ಊರ್ಜಿತವಾದ ಕಾರಣ ಮೊನ್ನೆ ಮದರಾಸ್ ಚೀಫ್ ಪ್ರೆಸಿಡೆನ್ಸಿ ನ್ಯಾಯಾಧೀಶರು ಆತನಿಗೆ ೧೮ ತಿಂಗಳ ಕಠಿಣ ಸಜಾ ವಿಧಿಸಿದರು.

ಸರಲಾ ಬೇರ ದಸ್ತಗಿರಿ

ವಾರ್ಧಾ ಶಿಕ್ಷಣ ಸಮಿತಿ ಸದಸ್ಯರಾದ ಶ್ರೀಮತಿ ಸರಲಾ ಬೇರವರನ್ನು ಮೊರಾದಾಬಾದ್ ನಿಲ್ದಾಣದಲ್ಲಿ ದಸ್ತಗಿರಿ ಮಾಡಿರುವರು. ಆಕೆಯು ಅಲ್ಮೋರಾವನ್ನು ಬಿಟ್ಟು ಸಮೀಪದ ಕೌಸನೀ ಎಂಬ ಸ್ಥಳದ ತಮ್ಮ ಮನೆಯಲ್ಲೇ ನಿಲ್ಲಬೇಕೆಂದು ಆಜ್ಞೆಯಾಗಿತ್ತು. ಈ ಆಜ್ಞೆಯನ್ನು ಉಲ್ಲಂಘಿಸುವುದಾಗಿ ಜಿಲ್ಲಾ ನ್ಯಾಯಾಧೀಶರಿಗೆ ಆಕೆ ತಿಳಿಸಲು ದಸ್ತಗಿರಿ ಆಗಿದೆ.

ಅಂಬಾಯ್ನಕ್ಕೆ ಬಾಂಬಿನೇಟು

ಅಂಬಾಯ್ನ ದ್ವೀಪದ ಮೇಲೆ ಮಿತ್ರ ವಿಮಾನಗಳು ೪೦ ಟನ್ ಬಾಂಬುಗಳನ್ನು ಸುರಿಸಿ ಬಂದಿವೆ. [illegible] ದ್ವೀಪದಾಚೆ ಹೋಗುತ್ತಿದ್ದ ಶತ್ರುನೌಕೆಯೊಂದಕ್ಕೆ ಬೆಂಕಿ ಹಚ್ಚಲಾಯಿತು. [illegible] ಹತ್ತಿರ ಸೈನಿಕರಿಂದ ತುಂಬಿದ್ದ ನಾಲ್ಕು ಶತ್ರು ದೋಣಿಗಳನ್ನು ಮುಳುಗಿಸಲಾಗಿದೆ.

ಚಳಿಗಾಲ

ಅತ್ಯುತ್ತಮವಾದ ರಗ್ಗುಗಳಿಗೂ, ಪುಲ್ಲರ್ ಕೋಟಿಂಗ್, ಕಂಬಳಿ ವಗೈರೆಗಳಿಗೂ ಎಲ್ಲೂ ಹುಡುಕಬೇಡಿ.

ನೇರವಾಗಿ ನಮ್ಮಲ್ಲಿಗೆ ಬನ್ನಿ. ಕಡಿಮೆ ಬೆಲೆಗೆ ಉತ್ತಮವಾದ ಮಾಲು ದೊರೆಯುವುದು

ಜಿ. ವಿ. ಸೂರ್ಯನಾರಾಯಣ ಶೆಟ್ಟಿ ಅಂಡ್ ಸನ್ಸ್

ಜ್ಯೂಯಲರ್ಸ್ & ರೆಡಿಮೇಡ್ ಡ್ರೆಸ್ ಎಂಪೋರಿಯಂ,

ಸಯ್ಯಾಜಿರಾವ್ ರೋಡ್, ಮೈಸೂರು.

೧ ಕೋಟಿ ಜನಕ್ಕೆ ಅರೆಹೊಟ್ಟೆ

ಮಲಬಾರಿನಿಂದ ತಿರುವಾಂಕೂರಿನವರೆಗೆ ಇರುವ ಪ್ರದೇಶದ ನಿವಾಸಿಗಳಲ್ಲಿ ಸುಮಾರು ಒಂದು ಕೋಟಿ ಜನ ಅರೆಹೊಟ್ಟೆ ಊಟಮಾಡುತ್ತಿರುವರು. ಈ ದುಸ್ಥಿತಿ ಕೇಂದ್ರ ಸರ್ಕಾರದ ಆಡಳಿತ ವಿಚಕ್ಷಣೆಯ ಹುಳುಕನ್ನು ಹೊರಸೂಸುತ್ತಿದೆ. ಈಗಲೆ ಎಚ್ಚರಿಕೆ ತೆಗೆದುಕೊಳ್ಳದಿದ್ದಲ್ಲಿ ಈ ಜನರ ಭವಿಷ್ಯ ಅತಿ ದುಃಖಕ್ಕೊಳಗಾಗುವ ಸಂಭವವಿದೆಯೆಂದು ಆ ಪ್ರದೇಶದಲ್ಲಿ ಸಂಚರಿಸಿದ ಪಂಡಿತ ಕುಂಜ್ರೂರವರು ಅಭಿಪ್ರಾಯಪಟ್ಟಿರುವರು.

ಮದಾಂಗ್ ಬಳಿ ಮುಂದೋಟ

ರಾಮೂ ನದಿ ಕಣಿವೆ ಬಳಿ ಇರುವ ಮಿತ್ರ ಸೇನೆ ಮದಾಂಗ್ ಮತ್ತು ಬೋಜಂಗಿ ಕಡೆಗಳಿಗೆ ಈಗ ಮತ್ತಷ್ಟು ದೂರ ಮುನ್ನುಗ್ಗಿವೆ. ರಾಮೂ ನದಿ ಬಳಿ ಇದ್ದ ಜಪಾನರನ್ನು ಹೊಡೆದೋಡಿಸಲಾಯಿತು.

ಅರ್ಜಂಟೈನಾದಲ್ಲಿ ಗೂಢಚಾರರ ಬೇಟೆ

ಬ್ರಿಟನ್ನಿನವರು ಅರ್ಜಂಟೈನಾ ರಾಯಭಾರಿಯನ್ನು ದಸ್ತಗಿರಿ ಮಾಡಿದ ಮೇಲೆ ಅರ್ಜಂಟೈನಾ ಪೋಲೀಸರು ಗೂಢಚಾರರ ಬೇಟೆ ನಡೆಸಿ, ಈಗಾಗಲೆ ಬಹುಮಂದಿಯನ್ನು ದಸ್ತಗಿರಿಮಾಡಿದ್ದಾರೆ.

ಹರಾಜು ನೋಟೀಸು

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ—ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿಗೆ ಸೇರಿದ ಹೊಸ ಸಂತೇಪೇಟೆ ಎಕ್ಸ್‌ಟೆನ್‌ಷನ್‌ನಲ್ಲಿ [illegible] ಸಯ್ಯಾಜಿರಾವ್ ರೋಡಿಗೆ ಎದುರಿನಲ್ಲಿರುವ [illegible] ಸೈಟುಗಳನ್ನು ತಾರೀಖು [illegible] ನೆಯ [illegible] ಬೆಳಿಗ್ಗೆ ೧೧ ಗಂಟೆಗಾಗಲು ತಾರೀಖು [illegible] ನೆಯ [illegible] ಹರಾಜು [illegible] ಸೈಟುಗಳ [illegible] ಮಾಡಲಾಗುತ್ತೆ. ವಿವರಗಳನ್ನು ಆಫೀಸಿನಲ್ಲಿ ತಿಳಿಯಬಹುದು.

(ಸಹಿ)

ಆರ್. ರಾಮಚಂದ್ರರಾವ್ ಬೊಂಭೋರೆ,

ಛೇರ್ಮನ್.

ಸ್ತ್ರೀಯರ ಸೌಕರ್ಯಕ್ಕಾಗಿ

[illegible] ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿರುತ್ತೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿ ಪುಡಿ

ಯನ್ನೇ ಉಪಯೋಗಿಸಿ.

ಟಿ. ಕ್ರಿಷ್ಣಯ್ಯ ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

[illegible] ಸಂತೇಪೇಟೆ ಹೆಡ್ ಆಫೀಸಿನಲ್ಲೂ ರವೆ, ಗೋಧಿಹಿಟ್ಟು [illegible]

ಟೆಂಡರ್ ನೋಟೀಸ್

ಮೈಸೂರು ಅರಮನೆ [illegible] ಬೇಕಾದ ದಿನಸಿ ವಗೈರೆ ಸಾಮಾನುಗಳಿಗಾಗಿ ಮೊಹರು ಮಾಡಲ್ಪಟ್ಟ ಟೆಂಡರುಗಳು ಈ ಕೆಳಗೆ ರುಜು ಮಾಡಿರುವವರಿಂದ ೧೨-೨-೧೯೪೪ ನೇ ಶನಿವಾರ ಮಧ್ಯಾಹ್ನ ೨ ಘಂಟೆವರೆಗೆ ತೆಗೆದುಕೊಳ್ಳಲ್ಪಡುತ್ತವೆ.

ಮೋದೀಖಾನೆ ಮುನ್ಷಿಯಿಂದ ಹೆಚ್ಚು ವಿಷಯಗಳನ್ನು ತಿಳಿದುಕೊಳ್ಳಬಹುದು.

ಮೈಸೂರು [illegible]

10-1-1944 [illegible]

ಸಂಪುಟ ೨] ಬುಧವಾರ ೨೬--೧--೪೪ [ಸಂಚಿಕೆ ೧೬೨

ಫ್ರಾಂಕೊ ವಿರುದ್ಧ ಪಿತೂರಿ ಬಲವಾಗುತ್ತಿದೆ

ಸಮರನಿರತ ಸರ್ಕಾರದಿಂದ ನ್ಯಾಯ ನಿರೀಕ್ಷಿಸುವುದೆಂತು?

ಮೋಸ ಮತ್ತು ಫೋರ್ಜರಿಗಾಗಿ ಐ.ಸಿ.ಎಸ್. ಅಧಿಕಾರಿ ಸೆರೆ

ಸ್ವಾತಂತ್ರ್ಯ ದಿನಾಚರಣೆ

[ಸ್ವಂ ಸು] ಮೈಸೂರು ೨೬

ಈ ದಿನಬೆಳಗ್ಗೆ ಹಿಂದೆ ತಿಳಿಸಿದ್ದ ಕಾರ್ಯಕ್ರಮದಂತೆ ದೇಶೀಯ ವಿದ್ಯಾಶಾಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆನಡೆಯಿತು ಪ್ರಾತಃಕಾಲ 6 ಗಂಟೆಗೆ ರಾಷ್ಟ್ರೀಯ ಗೀತೆಗಳೊಡನೆ ಪ್ರಭಾತಫೇರಿ ನಡೆಯಿತು 8 ಗಂಟೆಗೆ ಶ್ರೀ ಎಸ್. ಚನ್ನಯ್ಯನವರು ರಾಷ್ಟ್ರೀಯ ಧ್ವಜಾರೋಹಣಮಾಡಿ ಧ್ವಜದ ವಿಚಾರ ಮಾತನಾಡಿದರು. ಸಂಜೆ ಸೂಲುವ ಸ್ಪರ್ಧೆಯನ್ನೂ, ಪ್ರಬಂಧ ಸ್ಪರ್ಧೆಯನ್ನೂ ಬಾಲಕರುಗಳಿಗಾಗಿ ಏರ್ಪಡಿಸಲಾ.

ಸುಬ್ಬರಾಯನಕೆರೆಯಲ್ಲಿ ಬೆಳಗ್ಗೆ ೯ ಗಂಟೆಗೆ ರಾಷ್ಟ್ರೀಯ ಧ್ವಜಾರೋಹಣ ನಡೆಯಿತು. ಶ್ರೀಮಾನ್ ಟಿ. ಮರಿಯಪ್ಪನವರು ರಾಷ್ಟ್ರೀಯ ಧ್ವಜವನ್ನು ಹಾರಿಸಿದರು ಜನಗೆ ಶ್ರೀಮಾನ್ ಎಂ. ಎಲ್. ನಂಜರಾಜೇ ಅರಸರು ಮೈಸೂರು ಜಾವುಟವನ್ನು ಹಾರಿಸಿದರು. ರಾಷ್ಟ್ರಗೀತೆಯೊಡನೆ ಸಭೆ ಮುಕ್ತಾಯವಾಯಿತು

ಕಾಲೇಜಿನಲ್ಲಿ ಸ್ವಾತಂತ್ರ್ಯ ದಿನಾಚರಣೆ

ಕಾಲೇಜಿನ ವಿದ್ಯಾರ್ಥಿಗಳು ಕಾಲೇಜ್ ಪ್ರಾಂಗಣದಲ್ಲಿ ಇಂದು ಮಧ್ಯಾಹ್ನ ಸಭೆ ಸೇರಿ ಸ್ವಾತಂತ್ರ್ಯ ಪ್ರತಿಜ್ಞೆಯನ್ನು ಸ್ವೀಕರಿಸಿದರು. ಯೂನಿಯನ್ ಕಾರ್ಯದರ್ಶಿ ಶ್ರೀ ಎಂ ಸಿದ್ದಯ್ಯನವರು, ಸರೋಜಿನಿ ನಾಯುಡುವರ ಸ್ವಾತಂತ್ರ್ಯದಿನದ ಸಂದೇಶವನ್ನು ಓದಿದರು ವಂದೇಮಾತರಂ ಗೀತೆಯೊಡನೆ ಸಭೆ ಮುಗಿಯಿತು

ಪ್ರಮಾಣವಚನ ಸ್ವೀಕಾರ

ಸಂಜೆ ೭ ಗಂಟೆಗೆ ಸುಬ್ಬರಾಯನ ಕೆರೆಯಲ್ಲಿ ಬಹಿರಂಗ ಸಭೆ ಸೇರಿ ಸರ್ವರೂ ಸ್ವಾತಂತ್ರ್ಯ ಪ್ರಮಾಣವನ್ನು ಸ್ವೀಕಾರ ಮಾಡುವರು. ವಿದ್ಯಾರ್ಥಿಗಳೂ ಇದರಲ್ಲಿ ಪಾಲುಗೊಳ್ಳಬೇಕೆಂದು ವಿದ್ಯಾರ್ಥಿ ಸಂಘದ ಕಾರ್ಯದರ್ಶಿಗಳು ಕೋರುತ್ತಾರೆ

ಪ್ರಭುಗಳಿಂದ ಶಂಕುಸ್ಥಾಪನೆ

ಹೊಳೆಹೊನ್ನೂರು ಬಳಿ ಭದ್ರಾನದಿಗೆ ಕಟ್ಟಲಿರುವ ಸೇತುವೆಯ ಶಂಕುಸ್ಥಾಪನಾ ಮಹೋತ್ಸವವನ್ನು ಶ್ರೀಮನ್ಮಹಾರಾಜರು ನೆರವೇರಿಸುವರಾಗಿ ತಿಳಿದುಬಂದಿದೆ.

ಅಧಿಕಾರ ನಿವೃತ್ತಿ

ಜಸ್ಟಿಸ್ ಶ್ರೀ ಸುಬ್ರಹ್ಮಣ್ಯ ಅಯ್ಯರ್‌ರವರು ಮಾರ್ಚಿ ೧೦ ನೇ ತಾ|| ನಿಂದ ಅಧಿಕಾರದಿಂದ ನಿವೃತ್ತರಾಗುವರೆಂದು ಗೊತ್ತಾಗಿದೆ.

ಟಿ. ನರಸೀಪುರದ ತಾ|| ಸಮ್ಮೇಳನ

ಮೇಲ್ಕಂಡ ಸಮ್ಮೇಳನವನ್ನು ಇದೇ ಜನವರಿ ಮಾಹೆ ೩೯ ನೇ ತಾ|| ಶನಿವಾರ ಮಧ್ಯಾಹ್ನ ಶ್ರೀ ರಾವ್ ಬಹದ್ದೂರ್ ಎಂ ರಾಮಸ್ವಾಮಿಯವರ ಅಧ್ಯಕ್ಷತೆಯಲ್ಲಿ ಟಿ. ನರಸೀಪುರದಲ್ಲಿ ನೆರವೇರಿಸಲು ನಿಶ್ಚಯಿಸಿರುವರು

ಟಪಾಲ್ ಚೀಲ ಕದ್ದರು

ಕೆಲವು ದಿನಗಳ ಕೆಳಗೆ ರಾತ್ರಿ ೧೦ ಗಂಟೆಯಲ್ಲಿ ಹೊಳಲ್ಕೆರೆ ಅಂಚೆ ಕಛೇರಿಯಿಂದ ರೈಲ್ವೆ ನಿಲ್ದಾಣಕ್ಕೆ ಟಪಾಲನ್ನು ಒಯ್ಯುತ್ತಿದ್ದಾಗ ಯಾರೋ ಕಳ್ಳರು ಟಪಾಲು ಚೀಲವನ್ನು ಕದ್ದಿರುವರೆಂದು ಸಮಾಚಾರ ಬಂ

ಅಕ್ಷರ ಪ್ರಚಾರ ಸಭೆ

[ಸ್ವ ಸು] ಮಂಡ್ಯ ೨೫

ಮೊನ್ನೆ ದಿನ ಸಾಯಂಕಾಲ ಬಸರಾಳು ಗ್ರಾಮದಲ್ಲಿ ನಮ್ಮ ಅಕ್ಷರ ಪ್ರಚಾರ ಸಭೆಯು ನೆರೆದಿತ್ತು. ಮಂಡ್ಯದಿಂದ ಆಗಮಿಸಿದ್ದ ಮಂಡ್ಯ ಜಿಲ್ಲಾ ಕಾರ್ಯದರ್ಶಿಯವರಾದ ಶ್ರೀ ಎಂ ಎನ್ ಲಕ್ಷ್ಮೀನಾರಾಯಣರಾಯರು ಮತ್ತು ವ್ಯವಸ್ಥಾಪಕರು ಭಾಷಣ ಮಾಡಿ ಜನತೆಗೆ ವಿದ್ಯೆಯ ಆವಶ್ಯಕತೆ ಎಷ್ಟರಮಟ್ಟಿಗೆ ಬೇಕಾಗಿದೆ ಎಂಬ ವಿಚಾರದ ಮೇಲೆ ಭಾಷಣಮಾಡಿದರು. ಶ್ರೀಮಾನ್ ರಾದ ಶ್ರೀಕಂಠಯ್ಯನವರು ಭಾಷಣಮಾಡಿ ಎಲ್ಲರಿಗೂ ವಂದಿಸಿದರು

ಬಸರಾಳಿನಲ್ಲಿ ಜಿಲ್ಲಾ ಬೋರ್ಡ್ ಆಶ್ರಯದಲಿ ನಡೆಯುತ್ತಿರುವ ೩ ವಯಸ್ಕರ ತರಗತಿಗಳನ್ನು ಕಾರ್ಯದರ್ಶಿಯವರು ಪರಿಶೀಲಿಸಿದರು. ಬಸರಾಳಿನಲ್ಲಿ ಪುಸ್ತಕದ ಭಂಡಾರ ತೆರೆಯಲು ಪಂಚಾಯ್ತಿಯವರು ೩೦ ರೂ ಗಳನ್ನು ಕೊಡುವುದಾಗಿ ವಾಗ್ದಾನಮಾಡಿದ್ದಾರೆ

ಆಮರಣಾಂತ ಉಪವಾಸ

ಫೈಜಾಬಾದ್ ಶಾಲೆಯೊಂದರ ಉಪಾಧ್ಯಾಯರಾದ ಪಿ|| ಅನಂತರಾಮ್‌ರವರು ಸ್ಕೂಲ್ ಆವರಣದಲ್ಲಿ ಕುಳಿತು ಉಪಾಧ್ಯಾಯರುಗಳಿಗೆ ನ್ಯಾಯವಾಗಿ ಸಲ್ಲಬೇಕಾದ ಸೌಕರ್ಯಗಳು ಒದಗಿಲ್ಲವಾಗಿ ಅವು ಸಲ್ಲುವವರೆವಿಗೂ ಮರಣವೊಂದ ಪ್ರಾಪ್ತಿವರೆಗೂ ಲಕ್ಷ್ಯವಿದೆ ದೀರ್ಘ ಉಪವಾಸವನ್ನು ಆರಂಭಿಸಿದ್ದಾರೆ ಆಹಾರವು ಅವರಿಗೆ ನೀರಿನಲ್ಲಿ ತೆಗೆದುಕೊಳ್ಳುವ ಕೋರಿಕೆಗೂ ಇಲ್ಲ. ಆ ಸಾಗರಾಂತರ ಉಪವಾಸ ಹೂಡುವುದಾಗಿ ಒಂದು ತಿಂಗಳ ಮುಂಚೆಯೇ ಅಧಿಕಾರಿಗಳಿಗೆ ತಿಳಿಸಿ, ಅವರು ನಿರ್ಲಕ್ಷ್ಯವಾಗಿ ಉಪವಾಸ ಪ್ರಾರಂಭಿಸಿದ್ದಾರೆ

ಬಂಗಾಳದ ಭವಿಷ್ಯದ ಬಗ್ಗೆ ಭೀತಿ

ಈ ವರ್ಷ ಬಂಗಾಳದಲ್ಲಿ ಮತ್ತೆ ಕ್ಷಾಮವು ತಲೆದೋರುವ ಸಾಗಿದೆ ಪ್ರಸ್ತುತ ಆಡಳಿತದ ವಿಧಾನಗಳಲ್ಲಿ ಕ್ರಾಂತಿಕಾರಕವಾದ ಮಾರ್ಪಾಡು ಮೊದಲಾಗಿ ಕ್ಷಾಮವನ್ನು ತಡೆಯಲಸಾಧ್ಯ—ಎಂದು ಹಿಂದೂ ಮಹಾಸಭಾ ಅಧ್ಯಕ್ಷರಾದ ಡಾ|| ಶ್ಯಾಮಪ್ರಸಾದ ಮುಖರ್ಜಿಯವರು ಹೇಳಿರುವರು.

ಐ.ಸಿ.ಎಸ್ ಅಧಿಕಾರಿ ಖೈದು

ಇಂಡಿಯನ್ ಸಿವಿಲ್ ಸರ್ವಿಸ್ ಆಫೀಸರಾದ ಬಂಗಾಲ್ ಸೆಟಲ್ಮೆಂಟ್ ಸಬ್ ಕಲೆಕ್ಟರ್ ಶ್ರೀ ಟಿ ಎಸ್. ಸ್ವಾಮಿನಾಥನ್‌ರವರು ರಾಜಮಹೇಂದ್ರಿ ಮ್ಯಾಜಿಸ್ಟ್ರೇಟ್ ಕೋರ್ಟಿನ ನಿಧಿ ಸಂಬಂಧವಾದ ಸಾರ್ವಜನಿಕ ಪತ್ರ ಒಂದಕ್ಕೆ ಫೋರ್ಜರಿ ಮಾಡಿದರೆಂಬ ಕಾರಣಕ್ಕಾಗಿ ಅವರನ್ನು ಜಿಲ್ಲಾ ಪೋಲೀಸ್ ಸೂಪರಿಂಟೆಂಡೆಂಟರು ಖೈದು ಮಾಡಿರುವರು. ಇದೇ ಸಂಬಂಧವಾಗಿ ರಾಜಮಹೇಂದ್ರಿ ಮ್ಯಾಜಿಸ್ಟ್ರೇಟ್ ಕೋರ್ಟಿನ ಗುಮಾಸ್ತನೊಬ್ಬನು ಬಂಧನಕ್ಕೊಳಗಾಗಿರುವನು. ಶ್ರೀ ಸ್ವಾಮಿನಾಥನ್‌ರವರನ್ನು ಕೂಡಲೆ ರಾಜಮಹೇಂದ್ರಿಗೆ ಕಳುಹಿಸಲಾಯಿತು. ಸ್ವಾಮಿನಾಥನ್ ಸ್ಥಳಕ್ಕೆ ಬೆಂಗಾಲ್ ಸೆಟಲ್ಮೆಂಟ್ ಸಬ್ ಕಲೆಕ್ಟರನ್ನಾಗಿ ಮತ್ತೊಬ್ಬ ಐ.ಸಿ.ಎಸ್. ಆಫೀಸರಾದ ಶ್ರೀ ಪಿ. ಕೆ. ವಾಸುದೇವನ್‌ರವರನ್ನು ನೇಮಿಸಲು ನಿರ್ಣಯಿಸಿರುವುದಾಗಿ ತಿಳಿದು ಬಂದಿದೆ

ಯುದ್ಧಕ್ಕೆತೊಡಗಿರುವ ಸರ್ಕಾರದಿಂದ ನ್ಯಾಯ ದೊರಕೀತೆ?

ಅನ್ಯಾಯವನ್ನು ಸುಧಾರಿಸಲು ಜನ್ಯಾರೀತಿಯಲ್ಲಿ ಪ್ರಯತ್ನಿಸುವುದೇ ಯುದ್ಧ. ಸಮರವು ಅನ್ಯಾಯಗಳನ್ನು ಹೆಚ್ಚಿಸುವುದು ಕೊನೆಗೆ ನ್ಯಾಯವನ್ನು ಗೆರವುದು ಮುಗ್ಧರ ಗಿಡ ದಾಕ್ಷಿಣ್ಯದಲವನ್ನು ಹೇಗೆ ಕೊಡುವುದಿಲ್ಲವೋ ಹಾಗೆಯೇ ಯುದ್ಧದಲ್ಲಿ ನಿರತವಾಗಿರುವ ಸರ್ಕಾರವು ನ್ಯಾಯ ಸಲ್ಲಿಸಲಾರದು ಎಂಬುದಾಗಿ ಮಿ|| ಲಾಸ್ಕಿ ಮ್ಯಾಕ್ಸ್‌ರವರು ಲಂಡನ್ ಸ್ವರಾಜ ಭವನ ಸಂಘದ ಆಶ್ರಯದಲ್ಲಿ ನಡೆದ ಭಾರಿ ಬಹಿರಂಗ ಸಭೆಯಲ್ಲಿ ಮಾತನಾಡುತ್ತಾ ತಿಳಿಸಿದ್ದಾರೆ.

ರೋಂಗೆ ೨೦ ಮೈಲಿ ದೂರದಲ್ಲಿ ಮಿತ್ರರು

ರೋಂ ನಗರಕ್ಕೆ ದಕ್ಷಿಣ ದಿಕ್ಕಿನಲ್ಲಿ ಬಂದಿಳಿದ ಅಮೆರಿಕಾ ಮತ್ತು ಬ್ರಿಟಿಷ್ ಸೈನಿಕರು ರೋಂಗೆ ೨೦ ಮೈಲಿ ದೂರದಲ್ಲಿರುವ ನೆಟ್ಟೂನೋ ಎಂಬ ಬಂದರನ್ನು ವಶಪಡಿಸಿಕೊಂಡಿರುವರು ಈಗ ಲಿಟ್ಟೋರಿಯ ಎಂಬ ವಿಮಾನ ನಿಲ್ದಾಣದ ಕಡೆಗೆ ಅವರು ನುಗ್ಗುತ್ತಿದ್ದಾರೆ.

ಸಾಬೂನು ಸಾಗಿಸಲು ಅಡ್ಡಿ

ಬೆಂಗಳೂರು ನಗರದಿಂದ ಸಾಬೋನನ್ನು ಹೊರಕ್ಕೆ ಸಾಗಿಸಕೂಡದೆಂದು ಇಲ್ಲಿನ ಸರ್ಕಾರ ಆಜ್ಞಾಪಿಸಿದೆ.

ಫ್ರಾಂಕೊ ನಾಯಕತ್ವ ಸ್ಥೈರ್ಯಗೆ ಹಾನಿ

ಫ್ರಾಂಕೊ ಆಡಳಿತವನ್ನು ಕೊನೆಗಾಣಿಸಲು ಸ್ಪೈನಿನಲ್ಲಿ ಕೆಲಸ ಮಾಡುತ್ತಿರುವ ಗುಪ್ತ ಪಕ್ಷದವರು ದೇಶದ ಎಲ್ಲ ಸಂಗಡದವರಿಂದಲೂ ಬೆಂಬಲ ಪಡೆಯಲು ಯತ್ನಿಸಿ ಫಲಗಳಿಸುತ್ತಿರುವರೆಂದೂ ಅವರು ಒಂದು ಮನವಿ ಹೊರಡಿಸಿ ಫ್ರಾಂಕೊ ನಾಯಕತ್ವ ಸ್ಥೈರ್ಯಗೆ ಹಾನಿ ಎಂದು ಸಾರಿರುವರೆಂದೂ ಇವರ ಪಕ್ಷಕ್ಕೆ ಬೆಂಬಲ ಹೆಚ್ಚುತ್ತಿದೆಯೆಂದೂ ತಿಳಿದು ಬಂದಿದೆ.

ಬ್ರಿಟನ್ನಿಗೆ ಹೆಚ್ಚು ಕಷ್ಟ

ಇದುವರೆಗೆ ಕಾಣದ ಕಷ್ಟವನ್ನು ಬ್ರಿಟನ್ ಈ ವರ್ಷದ ಯುದ್ಧದಲ್ಲಿ ಅನುಭವಿಸಬೇಕಾಗುತ್ತದೆ ಈ ಸಾರಿ ಕಾರ್ಯಾಚರಣೆಗೆ ಹೆಚ್ಚು ವಿಮಾನಗಳು ಬೇಕು. ಈ ವರ್ಷ ಯೂರೋಪ್ ಯುದ್ಧ ಮುಗಿಯದೆ ಹೋದಲ್ಲಿ ಅದಕ್ಕೆ ಯುದ್ಧ ಸಾಮಗ್ರಿ ತಯಾರಿಕೆಯೇ ಕಾರಣವೆಂದು ಹೇಳಬೇಕಾಗುವುದು—ಎಂಬುದಾಗಿ ಸರ್ ಸ್ಟಾಫರ್ಡ್ ಕ್ರಿಪ್ಸ್‌ರು ಮಿಡ್ಲೆಂಡ್ಸಿನ ಕಾರ್ಖಾನೆ ಕೆಲಸಗಾರರನ್ನು ಕುರಿತು ಮಾತನಾಡುತ್ತಾ ಹೇಳಿರುವರು.

ನಾರ್ವೆ ಪ್ರಧಾನಿಗೆ ಹಿಟ್ಲರನ ಸ್ವಾಗತ

ನಾರ್ವೆ ಪ್ರಧಾನ ಮಂತ್ರಿ ಕ್ವಿಸ್‌ಲಿಂಗ್‌ನನ್ನು ಹಿಟ್ಲರನು ಆದರದಿಂದ ಬರಮಾಡಿಕೊಂಡು ಜರ್ಮನಿ ಭವಿಷ್ಯದ ಬಗ್ಗೆ ಪ್ರಮುಖ್ಯವಾದ ಹಲವು ವಿಷಯಗಳನ್ನು ಅವನೊಡನೆ ಚರ್ಚಿಸಿದನೆಂದು ತಿಳಿದುಬಂದಿದೆ.

ಉಪಾಧ್ಯಾಯರುಗಳಿಗೆ ಭತ್ಯ

ಆಹಾರ ಪದಾರ್ಥಗಳ ಬೆಲೆಯು ಮಿತಿಮೀರಿರುವುದರಿಂದ, ಸಂಸ್ಥಾನದ ಏಡೆಡ್ ಪ್ರೈಮರಿ ಮತ್ತು ದೊಡ್ಡ ಮರಾತ್ರಿ ಸ್ಕೂಲುಗಳ ಉಪಾಧ್ಯಾಯರುಗಳಿಗೆ ಸಹಾಯ ಮಾಡುವ ಅಂಶವನ್ನು ಸರ್ಕಾರದವರು ಕೂಲಂಕಷವಾಗಿ ಪರಿಶೀಲಿಸಿ ಈಗ ಹಾನಿ ಒಂದು ಆಜ್ಞೆ ಹೊರಡಿಸಿದ್ದಾರೆ. ೧೯೪೩ ನೇ ಜುಲೈ ೧ ನೇ ತಾ|| ನಿಂದ ಏಡೆಡ್ ಪ್ರೈ|| ಸ್ಕೂಲು ಉಪಾಧ್ಯಾಯರುಗಳಿಗೆ ತಲಾ ಮಾಹೆಯಾನಾ ಮೂರು ರೂ ನಂತೆಯೂ, ಮಿಡ್ಲ್ ಸ್ಕೂಲ್ ಉಪಾಧ್ಯಾಯರಿಗೆ ಎರಡು ರೂ ನಂತೆಯೂ ಹಂಗಾಮಿಯಾಗಿ ಭತ್ಯವನ್ನು ಹೆಚ್ಚು ಮಾಡಿರುವರು ಮಿಷನ್ ಅಥವ ಇತರ ಸಂಸ್ಥೆಗಳ ಶಾಲೆಗಳಿಗೆ ಇದು ಅನ್ವಯಿಸುವುದಿಲ್ಲ.

ಶೃಂಗೇರಿ ಗುರುಗಳ ಅಸ್ವಸ್ಥತೆ

ಶೃಂಗೇರಿ ಮಠದ ದೊಡ್ಡ ಗುರುಗಳಿಗೆ ದೇಹಾಲಸ್ಯವಾಗಿದೆಯೆಂದು ತಿಳಿದು ಬಂದಿದೆ. ಹಿಂದೊಂದು ಬಾರಿ ಗುರುಗಳನ್ನು ಗುಣ ಪಡಿಸಿದ ಹೈದರಾಬಾದಿನ ಆಯುರ್ವೇದ ಪಂಡಿತರು ಈ ಸಾರಿಯೂ ಚಿಕಿತ್ಸೆ ಮಾಡಲು ಬಂದರೆಂದೂ ಗುರುಗಳನ್ನು ಕಾಣಲು ಅವರಿಗೆ ಅವಕಾಶ ದೊರಕಲಿಲ್ಲವೆಂದೂ ಹೇಳಲಾಗಿದೆ. ಶ್ರೀ ಜಗದ್ಗುರು ಮಹಾಸ್ವಾಮಿಗಳಿಗೆ ಶೀಘ್ರ ಆರೋಗ್ಯ ಭಾಗ್ಯ ಲಭಿಸಲೆಂದು ಎಲ್ಲರೂ ಹಾರೈಸುತ್ತಿರುವರು.

ಬೇವಿನ ಮರದಿಂದ ಹಾಲು

ಸುಮಾರು ೮ ೧೦ ದಿನಗಳಿಂದ ಶಿವಮೊಗ್ಗಾ ತಾಲ್ಲೋಕಿನ ನೆಂದ ಮೇಲಿನ ಹಂಸವಾಡಿ ಗ್ರಾಮದ ಹತ್ತಿರವಿರುವ ಬೇವಿನ ಮರ ಒಂದರಲ್ಲಿ ಬೆಳ್ಳಗೆ ಹಾಲು ಸೋರುತ್ತಿದೆ

ಜನಸಮೂಹ ಸೇ...

ಅಧ್ಯಕ್ಷರ ಆಯ್ಕೆ ವಜಾವಾಗಿದೆ

ಸ್ವಂ. ವ.] ಬೆಂಗಳೂರು ೨೫

ಬೆಂಗಳೂರು ಹೈಕೋರ್ಟ್ ಸಭಾಧ್ಯಕ್ಷ ಚುನಾವಣೆಯಲ್ಲಿ ಪಿಟಿಷನ ವಹಿಸ್ಕಾರಮಾಡಲ್ಪಟ್ಟಿರಲಿಲ್ಲ. ಪಿಟಿ. ಒಹೋಟಿ ವಿಗಿಷ ರೀತಿ ಯಲ್ಲಿ ಪ್ರಾಂತ್ಯಗಳು ನಡೆದುವು ಆದ ಕಾರಣ, ಶ್ರೀ ಎಂ. ಎ ಗೋಪಾಲಸ್ವಾಮಿ ಅಯ್ಯಂಗಾರ್ಯರು ಅಧ್ಯಕ್ಷರಾದುದನ್ನು ರದ್ದು ಮಾಡಬೇಕೆಂದು ಶ್ರೀಗಂದ ಕೆ ಎಂ ಸ್ವಾಮಿ. ಸಿ ಎಸ್ ನರಸಿಂಗರಾವ್ ಮತ್ತು ಇತರರು ನ್ಯಾಯಾಂಗ ದಾಖಲೆ ಕಾರ್ಯದರ್ಶಿಗಳಿಗೆ ಅರ್ಜಿ ಹಾಕಿದ್ದಾರೆ.

ಸರಾಣಿನಿಗೆ ಕುಡುಗೋಲಿನ ಪೆಟ್ಟು

ಭದ್ರಾವತಿಯ ಪರಾಣ್ ಸ್ಟೀಲ್ ವರ್ಕ್ಸ್‌ನ ಮಹಮದ್ ಎಂಬುವನನ್ನು ಸಿ. ಎಸ್. ಕೃಷ್ಣಾ ಅದ ಪಕ್ಕೀರ ಎಂಬುವನು ಕುಡುಗೋಲಿನಿಂದ ಹೊಡೆದು ಗಾಯಪಡಿಸಿದ್ದರಿಂದ ಆತನನ್ನು ಆಸ್ಪತ್ರೆಗೆ ಸಾಗಿಸಿ, ಸೋಜನವಿಗೆ ಚಿಕಿತ್ಸೆ ಮಾಡಲಾಗುತ್ತಿದೆ ಎಂದು ತಿಳಿದುಬಂದಿದೆ.

ತವರ ಚಿನ್ನವಾದೀತೆ?

ಬಸ್ಸಾಬಾಬ ಎಂಬುವನು ಭದ್ರಾವತಿ ಎಲ್ಲಿ ರವರ ಮತ್ತು ಹಿತ್ತಾಳೆ ಒಡವೆಗಳನ್ನು ಚಿನ್ನದ ಒಡವೆಗಳೆಂದು ಪ್ರಕಟಿಸಿ ಮಾರುತ್ತಿದ್ದು ಪೋಲೀಸರ ಕೈಗೆ ಸಿಕ್ಕಿಬಿದ್ದಿದ್ದಾನೆ.

ವಿದ್ಯಾರ್ಥಿಗಳಿಗೆ ಸೀಮೆಎಣ್ಣೆ

ವಿದ್ಯಾರ್ಥಿಗಳೆಲ್ಲಾ ಪರೀಕ್ಷೆಗಳು ಸಮೀಪಿಸುತ್ತಿರುವುದರಿಂದ ಸಾಮಾನ್ಯವಾಗ ಬೇಕಾಗುವುದಕ್ಕಿಂತ ಹೆಚ್ಚಾಗಿ ಸೀಮೆಎಣ್ಣೆ ಅವರಿಗೆ ಈಗ ಬೇಕಾಗುವುದು. ಆದರೆ ಈಗ ವಾರಕ್ಕೆ ಅರ್ಧ ಸೀಸೆ ಮಾತ್ರ ಅವರಿಗೆ ದೊರಕುತ್ತಿದೆ. ಇದರಿಂದ ಅವರ ವಿದ್ಯಾಭ್ಯಾಸಕ್ಕೆ ತೊಂದರೆಯಾಗಿದೆ. ವ್ಯಾಸಂಗವನ್ನು ಬಿಟ್ಟು ಇತರ ಕಡೆಗಳಲ್ಲಿ ವಿದ್ಯಾರ್ಥಿಗಳಿಗೆ ವಾರಕ್ಕೆ ಒಂದು ಸೀಸೆ ಹೆಚ್ಚಾಗಿ ಕೊಡುತ್ತಿದ್ದಾರೆ. ಅದ್ದರಿಂದ ಮೈಸೂರಿನಲ್ಲೂ ವಿದ್ಯಾರ್ಥಿಗಳಿಗೆ ವಾರಕ್ಕೆ ಈಗ ಕೊಡುವುದಕ್ಕಿಂತ ಒಂದು ಸೀಸೆ ಅಧಿಕವಾಗಿ ಕೊಡಬೇಕು. ಹೀಗೆ ಮಾಡಿ ವಿದ್ಯಾರ್ಥಿಗಳ ಪಡುತ್ತಿರುವ ತೊಂದರೆಯನ್ನು ತಪ್ಪಿಸಬೇಕು. ರೇಷನಿಂಗ್ ಸಂಬಂಧಪಟ್ಟ ಅಧಿಕಾರಿಗಳು ಈ ವಿಷಯದಲ್ಲಿ ಕಾರ್ಯಪ್ರವೃತ್ತರಾಗಬೇಕು ಎಂದು ವಿದ್ಯಾರ್ಥಿ ಸಂಘದ ಕಾರ್ಯದರ್ಶಿಗಳು ತಿಳಿಸುತ್ತಾರೆ.

Edited, printed and published by A. R. Nagarajan, at the Sadhvi Press, D Sub Fish Road, Mysore.

Daily 3 Shows
NEW OPERA TALKIES
From 27-1-44
THAT NIGHT IN RIO
(TECHNI-COLOR)
Starring
Alice Faye, Don Ameche
Carmen Miranda.

ಬಚ್ಚಲು ನಿರ್ಮಾಣದ ಅವ್ಯವಸ್ಥೆ

ಸ್ವಾಮಿ!

ವಿಶ್ವನೊಹಲ್ಲು ಹಸುವಿನ ಕರುಹಟ್ಟಿ ರಸ್ತೆಯಲ್ಲಿ ರಾಂಪುರಾಜ ಅರಸಿನವರ ದೇವಾಲಯದ ಉತ್ತರ ದಿಕ್ಕಿನ ಗೋಡೆಗೆ ಸೇರಿದಂತೆ (ಮುಂಚೆ ಅವರ ಎದುರುಗಡೆ ಗೋಡೆಪಕ್ಕದಲ್ಲಿದ್ದ) ದೊಡ್ಡ ಬಚ್ಚಲನ್ನು ನಿರ್ಮಿಸಲಾಗಿದೆ. ಇದು ವಿನಾಯಕನ ಪದುವೆಯಂತೆ ಕೆಲಸ ನಡೆಯುತ್ತಲೇ ಇದೆ. ಈ ಕೆಲಸಾರಂಭದಲ್ಲೇ ಎಷ್ಟೋ ಜನ ಬೈಸಿಕಲ್‌ನವರು ರಾತ್ರಿ ಕತ್ತಲುವೇಳೆಯಲ್ಲಿ ಭಾರಿ ಕಲ್ಲು, ಮಣ್ಣು, ಗುಡ್ಡೆಗಳ ಮೇಲೆ ಬಿದ್ದು ಕಾಲು ಮುರಿದುಕೊಂಡು ತಿಂಗಳ ಗಟ್ಟಲೆ ಉಪಚರಿಸಿಕೊಂಡಿದ್ದಾಯಿತು. ಸ್ವಲ್ಪತ ಕೆಲಸ ಮುಗಿದಿದೆಯೆಂದು ಅದರ ಮೇಲೆ ಚಪ್ಪಡಿ ಹಾಸಿ ಮಣ್ಣು ಹಾಕಿಲ್ಲ. ಇಲ್ಲಿ ಕೆಲಸ ಅರ್ಧಂಬರ್ಧ ಎಂದು ದೀಪವಿಲ್ಲದ ರಸ್ತೆಯಲ್ಲಿ ಓಡಾಡುವ ಜನರಿಗೆ ತಕ್ಕ ಎಚ್ಚರಿಕೆ ಕೊಡುವ ಕಾರ್ಯಕ್ರಮವೂ ನಡೆದಿಲ್ಲ. ಅಂತೂ ಈ ಮೊಹಲ್ಲಾದಲ್ಲಿ ಎಷ್ಟೋ ಜನ ಹೆಂಗಸರು, ಮಕ್ಕಳು, ಜಾನುವಾರುಗಳು ಕತ್ತಲಲ್ಲಿ ಬಿದ್ದು ಆಸ್ಪತ್ರೆಗೆ ಹೋಗುತ್ತಿರುವ ಸುದ್ದಿಯೂ ಆಗಾಗ್ಗೆ ಬರುತ್ತಲೇ ಇದೆ. ಇಷ್ಟಾದರೂ ಮೊಹಲ್ಲಾ ಕೌನ್ಸಿಲರ ನಿಗಾಕ್ಕೆ ಇದು ಬಂದಿದೆಯೋ, ಇಲ್ಲವೋ ತಿಳಿಯದು. ಈಗಲಾದರೂ ಪೌರ ಸಭೆಯು ಈ ವಿಷಯಕ್ಕೆ ಕೂಡಲೆ ಗಮನ ಕೊಟ್ಟು ತಕ್ಕ ಏರ್ಪಾಡುಮಾಡುವುದೆಂದು ಆಶಿಸುವ

ಓರ್ವ ಕಂದಾಯದಾರ.

ಪತ್ರಿಕೋದ್ಯೋಗಿ ಸಮ್ಮೇಳನ

'ಸ್ವದೇಶ ಮಿತ್ರನ್' ಪತ್ರಿಕಾ ಸಂಪಾದಕರಾದ ಶ್ರೀ ಸಿ. ಆರ್. ಶ್ರೀನಿವಾಸನವರು ಮಂಗಳೂರಲ್ಲಿ ಜರಗಲಿರುವ ಚತುರ್ಥ ಅಖಿಲ ಕರ್ನಾಟಕ ಪತ್ರಿಕೋದ್ಯೋಗಿ ಸಮ್ಮೇಳನದ ಅಧ್ಯಕ್ಷತೆ ವಹಿಸಲು ಒಪ್ಪಿಕೊಂಡಿರುವರು. ಸಮ್ಮೇಳನವು ಫೆಬ್ರವರಿ ತಾ: ೧೯ ಮತ್ತು ೨೦ ರಲ್ಲಿ ಜರಗಲಿರುವುದು. ಮಂಗಳೂರಿನಲ್ಲಿ ಪ್ರತಿನಿಧಿಗಳು ತಮ್ಮ ಪ್ರತಿನಿಧಿ ಹಾಕಲು ಸವೇಕ ಕೂಡಲೆ ಸ್ವಾಗತ ಸಮಿತಿ ಕಾರ್ಯದರ್ಶಿಗಳಿಗೆ ತಮ್ಮ ಹೆಸರು ವಿಳಾಸ ತಿಳಿಸಬೇಕಾಗಿ ಸ್ವಾಗತಾಧ್ಯಕ್ಷರು ಕೋರಿದ್ದಾರೆ.

ಹರಾಜು ನೋಟೀಸು

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ:—ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿಗೆ ಸೇರಿದ ಹೊಸ ಸಂತೇಪೇಟೆ ಎಕ್ಸ್‌ಟೆನ್‌ಷನ್ನಲ್ಲಿ ನ್ಯೂ ಸಯ್ಯಾಜಿರಾವ್ ರೋಡಿಗೆ ಎದುರಿನಲ್ಲಿರುವ ಆಕ್ಟ್ರಾಯ್ ಮಾರ್ಕೆಟ್ ಸೈಟುಗಳನ್ನು ತಾ: ೩೦-೧-೪೪ ನೆಯ ಭಾನುವಾರ ಬೆಳಿಗ್ಗೆ ೧೧ ಗಂಟೆಯಿಂದ ತಾ: ೧೫-೧-೪೪ ನೆಯ ಮಂಗಳವಾರ ಟ್ರಸ್ಟ್ ಆಫೀಸ್‌ನಲ್ಲಿ ಕಂಡ ಷರತ್ತುಗಳಿಗೆ ಒಳಪಡಿಸಿ ಬಹಿರಂಗವಾಗಿ ಸೈಟುಗಳ ಹರಾಜು ಮಾಡಲಾಗುತ್ತೆ. ವಿವರಗಳನ್ನು ಆಫೀಸಿನಲ್ಲಿ ತಿಳಿಯಬಹುದು

(ಸಹಿ)

ಆರ್. ರಾಮಚಂದ್ರರಾವ್

ಬೋರ್ಡ್ ಛೇರ್,

ಛೇರ್ಮನ್.

ವರ್ಣ ಗೀತೆ

ಉದಿಗಾ. ಎ. ಕೆ. ಮಿಕ್ಸೆಡ್ ಪ್ರೈಮರಿ ಸ್ಕೂಲ್ ಹೆಡ್ಮಾಸ್ಟರ್ ಶ್ರೀ ಎ. ವಿ ನರಸಿಂಹಯ್ಯಂಗಾರ್ಯರಿಂದ ರಚಿತವಾದ "ವರ್ಣ ಗೀತೆ" ಎಂಬ ಪುಸ್ತಕವನ್ನು ನಾವು ಕೃತಜ್ಞತೆಯಿಂದ ಸ್ವೀಕರಿಸಿದ್ದೇವೆ

ಅದ್ಭುತ ರೆಕ್ಕೆಗಳ ವಿಮಾನ

೨೦೦ ಅಡಿಗಳ ರೆಕ್ಕೆಗಳನ್ನು ಹೊಂದಿದ ಪ್ರಪಂಚದಲ್ಲೆಲ್ಲಾ ಅತ್ಯಂತ ಭಾರಿಯಾದ ಫ್ಲೈಯಿಂಗ್ ಬೋಟನ್ನು ಇನ್ನರಲ್ಲೇ ಶಾಂತಿಸಾಗರ ಸಮುದ್ರದಲ್ಲಿ ಉಪಯೋಗಿಸುವುದಾಗಿ ಲಂಡನ್ನಿನಿಂದ ಸಮಾಚಾರ ಬಂದಿದೆ.

ಯುದ್ಧಾನಂತರ ಮುಂದೇನು

ಯುದ್ಧ ಕೊನೆಗೊಂಡಮೇಲೆ ನೀವೇನು ಮಾಡಬೇಕೆಂದಿರುವಿರಿ? ಹಣ ಕೂಡಿಟ್ಟಿರುವವರಿಗೆ ಸದವಕಾಶಗಳು ಕಾದಿರುತ್ತವೆ - ಒಳ್ಳೆಯ ನೌಕರಿಗಳಿಗಾಗಿ ಬದಲಾವಣೆ ಹೊಂದುವುದು, ಲಾಭದಾಯಕವಾಗಿ ಕೆಲಸ ಕೊಳ್ಳುವುದು, ಚಿಕ್ಕದಾಗಿ ಒಂದು ಮನೆ ಕಟ್ಟುವುದು, ಯೋಗ್ಯವಾಗಿ ಸಂಪಾದಿಸಿದ ವಿಶ್ರಾಂತಿಯನ್ನನುಭವಿಸುವುದು. ಧಾರಣೆಗಳು ಈಗ ಹೆಚ್ಚಿರುವುದನ್ನು ನೋಡಿದಲ್ಲಿ ನಿಮಗೆ ಅತ್ಯವಶ್ಯಕವಾದುವುಗಳನ್ನು ಮಾತ್ರವೇ ಕೊಳ್ಳುವುದು ಮತ್ತು ನಿಮ್ಮಿಂದ ಸಾಧ್ಯವಾದಷ್ಟು ಹಣವನ್ನು ಬರಲಿರುವ ಹೋಗುವ ಮುಂಬರುವ ದಿನಗಳಿಗೆ ಕೂಡಿಡುವುದು ಪೂರ್ಣ ವ್ಯವಹಾರಜ್ಞಾನವೇ ಸರಿ. ಈಗಲೇ ಆರಂಭಿಸಿರಿ!

ಮುಂಬರುವ ದಿನಗಳಿಗಾಗಿ ಕೂಡಿಡಿ

ನೀವು ಕೂಡಿಟ್ಟ ಹಣವು ಸುರಕ್ಷಿತವಾಗಿ ವಿನಿಯೋಗಿಸಲ್ಪಟ್ಟಿದೆಯೆಂಬುದರ ಬಗ್ಗೆ ಖಾತ್ರಿ ಮಾಡಿಕೊಳ್ಳಿ. ಬಂಗಾರ, ಬೆಳ್ಳಿ, ಆಭರಣಗಳು, ಭೂಮಿ, ಕಟ್ಟಡ, ಅಥವಾ ಸಾಮಾನುಗಳಮೇಲೆ ವಿನಿಯೋಗಿಸುವುದರಿಂದ ಅನುಕೂಲವಾಗುವುದಿಲ್ಲ; ಏಕೆಂದರೆ ಇವುಗಳ ಬೆಲೆ ಈಗ ವಿಪರೀತ ಹೆಚ್ಚಿದೆ ಮತ್ತು ಎಂದಾದರೊಂದು ದಿನ ಅನಿರೀಕ್ಷಿತವಾಗಿ ನಿಮ್ಮ ಗಳಿಕೆಯ ಅರ್ಧ ಭಾಗವನ್ನು ಹಣದ ಮೌಲ್ಯವು ಮಾಯವಾಗಿ ಹೋಗಬಹುದು.
ಭದ್ರತೆಗೆ ಮತ್ತು ಶಾಶ್ವತ ಮೌಲ್ಯಕ್ಕೆ ಸರಕಾರ ಸೇವಿಂಗ್ಸ್ ನಿಧಿ, ಬ್ಯಾಂಕ್ ಸೇವಿಂಗ್ಸ್ ಡಿಪಾಜಿಟ್, ಪೋಸ್ಟ್ ಆಫೀಸ ಸೇವಿಂಗ್ಸ್ ಬ್ಯಾಂಕ್ ಅಥವಾ ಇವೆಲ್ಲಕ್ಕೂ ಉತ್ತಮವಾದ ಸರ್ಕಾರಿ ಸಾಲಗಳು ಮತ್ತು ಸೇವಿಂಗ್ಸ್ ಸರ್ಟಿಫಿಕೇಟುಗಳು. ಇವುಗಳಲ್ಲಿ ನಿಮ್ಮ ಹಣವನ್ನು ಹಾಕಿ



ಬಾಷ್ಟ್ರೀಯ ಯುದ್ಧ ಮುಖವನರು ದೇಶೀಯರಿಗೆ ನಡೆಸುವ ಘೋಷಣೆ

CPII 30-88

ಸಂಪುಟ ೨] ಗುರುವಾರ ೨೭--೧--೪೪ [ಸಂಚಿಕೆ ೧೬೩

ಅರ್ಜೆಂಟೈನಾ ಶತ್ರು ಪಕ್ಷ ಬಿಡುವುದು

ಕೃಷ್ಣರಾಜೇಂದ್ರ ಗಿರಣಿ ಕೂಲಿಗಳು ಕೆಲಸಕ್ಕೆ ಹಿಂತಿರುಗಿದರು

"ಕಾಂಗ್ರೆಸ್ಸಿನವರು ಜಿನ್ನಾ ಬೆಂಬಲಕಾರರಲ್ಲ"

ಸ್ವಾತಂತ್ರ್ಯ ದಿನೋತ್ಸವ

ಸ್ವಂ ಸ.] ಮೈಸೂರು ೨೭

ನಿನ್ನೆ ಸಂಜೆ ಸುಬ್ಬರಾಯನಕೆರೆ ಬಂಗಲೆಯಲ್ಲಿ ಶ್ರೀ ಎಸ್. ರಂಗರಾಮಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಧ್ವಜ ಬಹಿರಂಗ ಸಭೆ ನಡೆಯಿತು. ರಾಷ್ಟ್ರಗೀತೆಯಾದ ವೇಳೆ ಅಧ್ಯಕ್ಷರು ಸ್ವಾತಂತ್ರ್ಯ ಪ್ರತಿಜ್ಞೆಯನ್ನು ಓದಿದವರು ನೆರೆದಿದ್ದವರೂ ಸಹ ಅದನ್ನು ಉಚ್ಚರಿಸಿ ಪ್ರಮಾಣವನ್ನು ಸ್ವೀಕರಿಸಿದರು.

ಅನಂತರ ಸಿದ್ಧಾರ್ಥ ನಿಲಯದ ಕಾರ್ಯದರ್ಶಿಗಳಾದ ಶ್ರೀ ನಾಗಭೂಷಣಂರವರು ಭಾಷಣ ಮಾಡಿ ಪ್ರಪಂಚದ ಸ್ವಾತಂತ್ರ್ಯವನ್ನು ಸಾಧಿಸಲು ಭಾರತ ಸ್ವರಾಜ್ಯ ಕೇವಲ ... ವಿನಃ ಕೇವಲ ಸ್ವಾರ್ಥ ಸಾಧನೆಗಲ್ಲ ಎಂದು ಹೇಳಿದರು. ವಿಶ್ವವಿದ್ಯಾಲಯ ಸಂಘದ ಕಾರ್ಯದರ್ಶಿ ಶ್ರೀ ಬಿ. ... ಸಿದ್ದಯ್ಯನವರು ಮಾತನಾಡಿ, ... ಕಾಲೇಜುಗಳಿಗೆ ಹೆಚ್ಚಿನ ಶಿಕ್ಷಣ ಮತ್ತು ... ವನ್ನು ಕಲಿತು ದೇಶದ ಕಡೆ ... ವನ್ನು ಸಲ್ಲಿಸಲು ... ಎಂದು ನುಡಿದ.

ಕೊಯಮುತ್ತೂರಿನ ಶ್ರೀ ವಿ. ಷಾಲಿಂಗಸ್ವಾಮಿಯವರು ... ಭಾಷಣ ಮಾಡಿ ಸ್ವಾತಂತ್ರ್ಯ ದಿನಾಚರಣೆಯ ಮೊದಲು ಆರಂಭವಾದ ಒಗೆ ... ಎಂಬುದನ್ನು ವಿವರಿಸಿದರು. ... ಶ್ರೀ ಭೂಪಾಲಂ ಪುಟ್ಟಸಂಜಪ್ಪನವರು ... ಸ್ವಾತಂತ್ರ್ಯ ಪ್ರತಿಜ್ಞೆಯ ... ಸರ್ವಜನ ... ವನ್ನು ... ತಿಳಿಸಿದರು. ... ಭಾಷಣ ಮಾಡಿ ... ಸ್ವಾತಂತ್ರ್ಯ ... ; ಎಲ್ಲರಲ್ಲೂ ಏಕಮನಸ್ಸು ... ದು ಒತ್ತಿ ಹೇಳಿದರು. ವಿದ್ಯಾರ್ಥಿ ಮುಖಂಡರಾದ ಶ್ರೀ ಎಂ. ವಿ. ಕೃಷ್ಣಪ್ಪನವರು ... ಮಾತನಾಡಿ ಮುಂದಿನ ಪ್ರಜಾ ... ಯುವಕರಲ್ಲಿ ದೇಶ ಪ್ರೇಮ ... ಬೇಕೆಂದು ... ವೆಂದು ತಿಳಿಸಿದರು. ಶ್ರೀ ಹರಿದಾಸಾಚಾರ್ಯರು ... ಭಾಷಣ ... ಸ್ವಾತಂತ್ರ್ಯ ದಿನಾಚರಣೆಯ ... ಗಾಗಿ ಪ್ರಾರ್ಥನೆ ... ಅಧ್ಯಕ್ಷರು ಮಹಾತ್ಮ ಗಾಂಧೀಜಿಯವರ ... ಇದೇ ... ಮುಂದಿನ ವರ್ಷದ ವೇಳೆಗೆ ನಮ್ಮ ಸ್ವಾತಂತ್ರ್ಯ ... ದು ತಿಳಿಸಿದರು. ವಂದೇಮಾತರಂ ... ಯೊಡನೆ ಸಭೆ ವಿಸರ್ಜನೆಯಾಯಿತು.

ಹಿಂದೀ ಪ್ರಚಾರ ಸಭೆಯಲ್ಲಿ

ಹಿಂದೀ ಪ್ರಚಾರ ಸಭೆಯ ಆಶ್ರಯದಲ್ಲಿ ... ಪ್ರಚಾರ ... ಕಾರ್ಯದರ್ಶಿಗಳಾದ ಶ್ರೀಮಾನ್ ಪಿ. ಗೋಪಾಲಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ, ಸಭೆಯ ... ಗಳ ಸಂಬಂಧ ಸ್ವಾತಂತ್ರ್ಯ ದಿನಾಚರಣೆಯನ್ನು ... ನಡೆಸಲಾಯಿತು. ಸಭೆಯು ಪ್ರಾರ್ಥನೆಯಿಂದ ... ಹಾಡು, ಉಪನ್ಯಾಸ ಭಾಷಣಗಳಿಂದ ... ವಂದನಾರ್ಪಣೆ ... ಸ್ವಾತಂತ್ರ್ಯದ ಪ್ರತಿಜ್ಞೆಯನ್ನು ... ಪ್ರತಿಯೊಬ್ಬರೂ ಸ್ವೀಕಾರ ಮಾಡಿ ... ದ ಪರಿಸಮಾಪ್ತವಾಯಿತು.

ಕೆಲಸಕ್ಕೆ ಹಿಂದಿರುಗಿದರು

ಸ್ವಂ ಸ.] ಮೈಸೂರು ೨೭

ಸಮಾರು ಹಿಂದಿನಿಂದಲೂ ಮೈಸೂರು ಕೃಷ್ಣರಾಜೇಂದ್ರ ಗಿರಣಿ ಕೆಲಸಗಾರರು ಮುಷ್ಕರ ನಡೆಸುತ್ತಿದ್ದರಷ್ಟೆ. ಈ ದಿನ ಅವರೆಲ್ಲರೂ ಮುಷ್ಕರವನ್ನು ವಾಪಸ್ಸು ಮಾಡಿ ಕೆಲಸಕ್ಕೆ ಹಿಂದಿರುಗಿದರೆಂದು ತಿಳಿದುಬರುತ್ತದೆ.

ನಿನ್ನೆ ದಿನ ಸಾಯಂಕಾಲ ಗಿರಣಿ ಕೆಲಸಗಾರರು ಶ್ರೀ ಟಿ ... ಅವರ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ, ಕೆಲಸಕ್ಕೆ ಹಿಂದಿರುಗುವಂತೆ ತೀರ್ಮಾನ ಮಾಡಿದರು. ಶ್ರೀ ಗೋಪಾಲ ... ಎ ಕೃಷ್ಣ ... ಮುಂತಾದವರು ಭಾಷಣ ಮಾಡಿ ಕೆಲಸಗಾರರು ಇಷ್ಟು ದಿವಸವೂ ... ಶಾಂತಿ, ಶಿಸ್ತುಗಳಿಂದ ... ವನ್ನು ... ವಾಗಿ ನಡೆಸಿದುದಕ್ಕೆ ಅಭಿನಂದನೆ ಸಲ್ಲಿಸಿದರು.

ಕರಪತ್ರಗಳ ... ಕೆಲಸಗಾರರನ್ನು ... ಕೆಲಸಕ್ಕೆ ತೆಗೆದುಕೊಳ್ಳಲಾಗುವುದೆಂದು ಹೇಳಲಾಗಿದೆ.

೧೬೦೦ ರೂ. ಗಳ ದಾನ

ಶ್ರೀ ಟಿ ಎಸ್. ಅನಂತರಾಮಯ್ಯರವರು ಶ್ರೀ ... ಮೆಮೋರಿಯಲ್ ಎಂಡೋಮೆಂಟ್ ವಿದ್ಯಾರ್ಥಿವೇತನ ನಿಧಿಗಾಗಿ ೧೬೦೦ ರೂ ಗಳನ್ನು ದಾನ ಮಾಡಿರುವರು ... ಬಡ ವಿದ್ಯಾರ್ಥಿಗಳ ವೇತನಕ್ಕಾಗಿ ವಿನಿಯೋಗಿಸಲ್ಪಡುವುದು.

ಶಾರದಾ ವಿಲಾಸ ಹೈಸ್ಕೂಲಿಗೆ ಪ್ರೋತ್ಸಾಹ

ಈ ಶಾಲೆಯಲ್ಲಿ ಸ್ಥಾಪಿಸಲಾಗಿರುವ (ಆವಾಡ) ... ಶ್ರೀ ... ೭೦೦ ರೂ ಗಳನ್ನೂ ಶ್ರೀ ಎಸ್. ಶ್ರೀರಂಗಾಚಾರ್ಯರವರು ೧೦೦ ರೂ ಗಳನ್ನೂ ಕೊಟ್ಟಿರುತ್ತಾರೆ.

ಇಲ್ಲಿನ ... ೧೦೦ ರೂ ಗಳ ... ಕೊಟ್ಟಿರುತ್ತಾರೆ.

ಶ್ರೀ ... ಸಂಸ್ಥೆಯ ... ಗಳನ್ನು ಕೊಡುತ್ತಾರೆ ... ಇರುತ್ತಾರೆ

ಟಿ. ಎಸ್ ಸುಬ್ಬಣ್ಣನವರ ದಸ್ತಗಿರಿ

ನಿನ್ನೆ ದಿನ ನಡೆದ ಸ್ವಾತಂತ್ರ್ಯ ದಿನಾಚರಣೆ ಸಂಬಂಧವಾಗಿ ಕಾಂಗ್ರೆಸ್ ಕೆಲಸಗಾರರಾದ ಶ್ರೀ ಟಿ ಎಸ್. ಸುಬ್ಬಣ್ಣನವರನ್ನು ... ರಾತ್ರಿ, ಅಕ್ಷೇಪಣಾರ್ಹವಾದ ... ಹೊಂದಿದ್ದರೆಂಬ ಮತ್ತು ಅಕ್ಷೇಪಣೆಯ ... ಪ್ರಚಾರ ಮಾಡುತ್ತಿದ್ದರೆಂಬ ಕಾರಣದ ಮೇಲೆ ಭಾರತ ರಕ್ಷಣಾ ಶಾಸನದ ... ಸೆಕ್ಷನ್‌ಗಳ ಮೇರೆಗೆ ಪೋಲೀಸಿನವರು ದಸ್ತಗಿರಿ ಮಾಡಿದರು. ನಿನ್ನೆಯ ದಿನ ಪೋಲೀಸಿನವರು ನಗರ ಸ್ವಾತಂತ್ರ್ಯ ... ಶ್ರೀ ಸುಬ್ಬಣ್ಣನವರನ್ನು ... ಶೋಧನೆ ... ನಡೆದಿದೆ.

ಸ್ಕೌಟ್ ರ್ಯಾಲಿ

ಈ ದಿನ ಸಂಜೆ ಡಿ. ಬನುಮಯ್ಯ ಸ್ಕೂಲ್ ಆವರಣದಲ್ಲಿ ಮೈಸೂರು ನಗರದ ಎಲ್ಲಾ ಸ್ಕೂಲುಗಳ ಸ್ಕೌಟ್ ರ್ಯಾಲಿ ನಡೆಯುವುದು. ... ಶ್ರೀ ಆರ್ ... ರಾವ್ ... ಯವರು ಅಧ್ಯಕ್ಷತೆ ವಹಿಸುವರು. ವಿಜಯಿಗಳಿಗೆ ಬಹುಮಾನಗಳು ಹಂಚಲ್ಪಡುವುವು.

ಪ್ರತಿಬಂಧಕ

ಶ್ರೀಮತಿ ಸರೋಜಿನಿಯವರು ಯಾವ ಭಾಷಣಗಳನ್ನೂ ಮಾಡಕೂಡದೆಂದೂ, ಮೆರವಣಿಗೆಗಳಲ್ಲಿ ಭಾಗ ವಹಿಸಕೂಡದೆಂದೂ, ಪತ್ರಿಕೆಗಳಿಗೆ ಹೇಳಿಕೆಗಳನ್ನು ಕೊಡಕೂಡದೆಂದು ಲಾಹೋರ್ ಜಿಲ್ಲಾ ಮ್ಯಾಜಿಸ್ಟ್ರೇಟರು ಪ್ರತಿಬಂಧಕಾಜ್ಞೆ ಹೊರಡಿಸಿದ್ದಾರೆ.

ಅರ್ಜೆಂಟೈನಾ ಆಕ್ಸಿಸ್ ವಿರೋಧ

ಶತ್ರು ರಾಷ್ಟ್ರಗಳೊಡನೆ ರಾಜತಂತ್ರ ಸಂಬಂಧವನ್ನು ಪ್ರಜೆಗಳು ಅರ್ಜೆಂಟೈನಾ ಸರ್ಕಾರವು ನಿರ್ಧರಿಸಿದೆ.

ಭಾರತವನ್ನೂ ಸೇರಿಸಿಕೊಂಡರು

... ರಾಷ್ಟ್ರಗಳ ... ಸಂಸ್ಥೆಯ ... ಭಾರತವನ್ನು ... ಸೇರಿಸಿಕೊಂಡಿದ್ದಾರೆ.

ಗ್ರಾಮ ಸುಧಾರಕರ ಸಮ್ಮೇಳನ

ಸ್ವ.ವಿ.ಸು.] ಹಾಸನ ೨೬

ಅಖಿಲ ಮೈಸೂರು ಗ್ರಾಮ ಸುಧಾರಕರ ಪ್ರಥಮ ಸಮ್ಮೇಳನವು ಈ ದಿನ ಮಧ್ಯಾಹ್ನ ೩ ಗಂಟೆಗೆ ಇಂಪೀರಿಯಲ್ ಟಾಕೀಸ್ ಮಂದಿರದಲ್ಲಿ ಅತಿ ವಿಜೃಂಭಣೆಯಿಂದ ನೆರವೇರಿತು. ರೆವಿನ್ಯೂ ಕಮೀಷನರಾದ ರಾಜಸೇವಾ ಪ್ರಸಕ್ತ ಎಂ. ಶೇಷಾದ್ರಿಯವರು ಅಧ್ಯಕ್ಷತೆ ವಹಿಸಿದ್ದರು. ಸ್ಥಳೀಯ ಸಂಸ್ಥೆಗಳ ಸಚಿವರಾದ ಶ್ರೀ ಹೆಚ್. ಬಿ ಗುಂಡಪ್ಪಗೌಡರು ಸಮ್ಮೇಳನದ ಆರಂಭೋತ್ಸವವನ್ನು ನಡೆಸಿದರು.

ಶ್ರೀ ಪುಟ್ಟರಂಗಯ್ಯರಿಂದ ಲಾವಣಿ ಮತ್ತು ಇತರರಿಂದ ಸ್ವಾಗತಗೀತೆ ಪಠಣವಾದ ನಂತರ, ಸಮ್ಮೇಳನ ಸ್ವಾಗತ ಸಮಿತಿ ಅಧ್ಯಕ್ಷರಾದ ಶ್ರೀ ವೈ. ಧರ್ಮಪ್ಪನವರು ಬಿನ್ನವತ್ತಳೆಯನ್ನು ಅರ್ಪಿಸಿ, ಎಲ್ಲರನ್ನೂ ಸ್ವಾಗತಿಸಿದರು.

ಅನಂತರ ಸಚಿವರಾದ ಶ್ರೀ ಗುಂಡಪ್ಪಗೌಡರು ಸಮ್ಮೇಳನ ಆರಂಭೋತ್ಸವವನ್ನು ನಡೆಸಿ, ಭಾಷಣ ಮಾಡಿ ಗ್ರಾಮೋದ್ಧಾರದಿಂದಲೇ ದೇಶೋದ್ಧಾರವಾಗಬೇಕೆಂದು ತಿಳಿಸಿದರು.

ಅಧ್ಯಕ್ಷರಾದ ಶ್ರೀ ಶೇಷಾದ್ರಿಯವರು ನಂತರ ಭಾಷಣಮಾಡಿ ಹೋಬಳಿ ಕೆಲಸಗಾರರ ಕರ್ತವ್ಯಗಳನ್ನು ನಿರೂಪಿಸಿದರು.

ನಂತರ ಶ್ರೀ ದೇಶದಾಸರವರು "ನಾನು ಸುಧಾರಕನಾದರೆ" ಎಂಬ ವಿಷಯದ ಮೇಲೂ, ದರ್ಜ ಪ್ರಕಾಶ ಎಲ್. ಎಸ್. ವೆಂಕಟಾಜಿರಾಯರು "ಗ್ರಾಮ ಪುನರುಜ್ಜೀವನ ಮತ್ತು ಉಪಕರಣಗಳು" ಎಂಬ ವಿಷಯದ ಮೇಲೂ ಭಾಷಣಮಾಡಿದರು. ಜಿಲ್ಲೆಯಲ್ಲಿ ಮೂರು ವರ್ಷದಿಂದ ಕೆಲಸಮಾಡಿದ ಒಂದೊಂದು ಸುಧಾರಕರಿಗೂ ಬಹುಮಾನಗಳನ್ನು ಕೊಡಲು ಸಿದ್ಧವಾಗಿದ್ದೇನೆಂದು ಶ್ರೀ ... ತಿಳಿಸಿದರು. ಮೈಸೂರು ಸಂಸ್ಥಾನವನ್ನೆಲ್ಲಾ ... ಪಲ್ಲಿಗಳಲ್ಲಿ ... ಹೆಚ್ಚಾಗಿ ಸ್ಥಾಪಿಸಬೇಕೆಂದು ತಿಳಿಸಿದರು.

ರಾಜಿಗಿಂತ ಸಾವು ಲೇಸು

ರಾಜಿಗಾಗಿಯೇ ಕರೆಯನ್ನು ... ಬರುವ ಜನರು ಎಲ್ಲರೂ ಅಲ್ಲೇ ಸಾಯುವುದು ಮೇಲೆಂದು ನನಗನ್ನಿಸಿದೆ. ದೇಶೋದ್ಧಾರಕ್ಕಾಗಿ ಇಟ್ಟಿರುವ ಹೆಜ್ಜೆಯನ್ನು ಅದು ತಪ್ಪೆಂದು ನಮಗೆ ಮನದಟ್ಟು ಮಾಡುವ ತನಕ ನಾವು ಹಿಂತೆಗೆಯುವುದಿಲ್ಲ. ದೇಶವಲ್ಲದ ಗಲಭೆಗಳಿಗೂ ಕಾಂಗ್ರೆಸ್ ನಿರ್ಧಾರಕ್ಕೂ ಏನೇನೂ 'ಸಂಬಂಧವಿಲ್ಲ. ಕಾಂಗ್ರೆಸ್ಸಿನವರೂ, ಗಾಂಧೀಜಿಯವರೂ ಜಪಾನರ ಬೆಂಬಲಿಗರೆಂದು ಭಾವಿಸುವುದು ... ಎಂದು ... ಹೇಳಿದರು.

ನಿಧನ

ರಾಜಧಾನಿಯಲ್ಲಿ ಕೆಲ ವರ್ಷಗಳ ಹಿಂದೆ 'ಫ್ರೆಂಡ್ಸ್ ಆಫ್ ಮೈಸೂರ್' ಎಂಬ ಆಂಗ್ಲ ವಾರಪತ್ರಿಕೆಯನ್ನು ನಡೆಸುತ್ತಿದ್ದ ಶ್ರೀ ಕೆ. ಶೇಷಾದ್ರಿರಾಯರು ಈ ದಿನ ಪ್ರಾತಃಕಾಲ ಮೈಸೂರು ... ರಸ್ತೆಯಲ್ಲಿರುವ ಜೈನ ಬೋರ್ಡಿಂಗ್ ಹೋಟೆಲಿನ ಬಳಿ ಹೋಗುತ್ತಿದ್ದಾಗ ಎದೆನೋವಿನಿಂದ ... ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರ ವಯಸ್ಸು ೬೦. ಮೃತರಿಗೆ ... ಪುತ್ರರೂ ಇದ್ದಾರೆ. ಮೃತರ ಆತ್ಮಕ್ಕೆ ಜಗದೀಶನು ಶಾಂತಿಯನ್ನು ಕೊಡಲೆಂದು ಕೋರುತ್ತೇವೆ.

ಹೆಂಗಸಿನ ತಲೆ ಕತ್ತರಿಸಿದರು

ಸ್ವಂ. ವ] ನಂಜನಗೂಡು ೨೬

ಕೆಲವು ದಿನಗಳ ಕೆಳಗೆ ಒಂದು ದಿನ ರಂ ವಿ ನಂಜನಗೂಡು ತಾ|| ದೊಡ್ಡ ಕವಲಂ ದೆ ಹೋಬಳಿ ಕಾಳೇಶ್ವರ ಗ್ರಾಮದ ಸಿಂ ಅಪ್ಪನ ನಂಜುಂಡಯ್ಯ ತನ್ನ ಹೆಂಡತಿ ದೇ ವೀರಮ್ಮನೊಡನೆ ಹೊಲವನ್ನು ನೋಡಿಸಿ ತ ಮ್ಮನ್ನು ಜಿಡಿಸುತ್ತಿದ್ದಾಗ ಕಿಟ್ಟಯ್ಯ, ಮ ...ಯ್ಯ ಮತ್ತು ... ಈ ಮೂವರು ... ಹೊಲಕ್ಕೆ ... ದೇವೀರಮ್ಮನ ತ ಲೆಯನ್ನು ... ಕತ್ತರಿಸಿ ... ನಂಜುಂಡಯ್ಯನನ್ನು ... ಮಾಡಿದ್ದಾರೆ. ನಂಜುಂಡಯ್ಯನ ... ನಂಜುಂಡಯ್ಯನು ... ಗೊತ್ತಾಗಿದೆ ... ನಡೆಸುತ್ತಿದ್ದಾರೆ.

ಸೀಮೆ ಎಣ್ಣೆ ಅವ್ಯವಸ್ಥೆ

ಸ್ವಂ. ವ] ಕೃಷ್ಣರಾಜನಗರ ೨೬

ಕೃಷ್ಣರಾಜನಗರದಲ್ಲಿ ... ರೇಷನಿಂಗ್ ... ಸೀಮೆ ಎಣ್ಣೆಯನ್ನು ... ಒಂದು ಆಣೆಗೆ ... ಇದರಿಂದ ... ಜನರಿಗೆ ... ಗುಂಪನ್ನು ... ಈ ಅಂಗಡಿಗಳು ... ಸೀಮೆ ಎಣ್ಣೆ ... ಜನರಿಗೆ ... ತೊಂದರೆಯಾಗುತ್ತಿದೆ. ... ಸೀಮೆ ಎಣ್ಣೆಯನ್ನು ಹಂಚಿಸಿದ್ದಾ ರೆ. ... ವ್ಯವಸ್ಥೆಯಲ್ಲಿ ... ಅಧಿಕಾರಿ ಗಳು ಈ ... ಜನರಿಗೆ ತೊಂದರೆ ಯಾಗದಂತೆ ನೋಡಿಕೊಳ್ಳಬೇಕೆಂದು ನಂ ಬಲಾಗಿದೆ

ಸಚಿವರ ಪ್ರವಾಸ

ಸ್ವಂ. ವ ಫ್ರೋ] ಬೆಂಗಳೂರು ೨೬

ಕೃಗಾರಿಕೆ ಮತ್ತು ಸರಬರಾಯಿ ಸಚಿವ ರು ನಾಳೆ (೨೮ ರಿಂದ) ಐದು ದಿವಸ ಹಾಸ ನ ಜಿಲ್ಲೆಯಲ್ಲಿ ಪ್ರವಾಸ ಮಾಡುವರು. ನಾಳೆ ಸಂಜೆ ಹಾಸನದಲ್ಲಿ ನಡೆಯುವ ... ಮೈಸೂರು ... ಪ್ರದರ್ಶನದಲ್ಲಿ ... ವಿನಿಯೋಗಿಸುವರು. ತಾ|| ೩೧ ... ಹೊಳೆನರಸೀಪುರದಲ್ಲಿ ... ತಾ|| ೩೦ ... ಕೊಟ್ಟಿರುವ ... ತಾ|| ... ಪಟ್ಟಣ ... ಸಂಜೆ ... ಹೊಳೆನರಸೀಪುರದಿಂದ ಬೆಂಗಳೂರಿಗೆ ವಾಪಸು ಬರುವರು.

ಮಾನನಷ್ಟ ಮೊಕದ್ದಮೆ

ಬಿನ್ನಿಗೆ ... ಪ್ರತಿನಿಧಿಗಳನ್ನು ... 'ವಿಶ್ವಕರ್ನಾಟಕ' ಮತ್ತು 'ಜನವಾಣಿ' ಸಂಪಾದಕರುಗಳಾದ ಶ್ರೀ ಎ. ಕೆ. ... ಮಾನನಷ್ಟ ಮೊಕ ದ್ದಮೆ ಹೂಡಿದ್ದಾರೆ. ತಮ್ಮ ಪತ್ರಿಕೆಯ ಲ್ಲಿ ... ಮೊಕದ್ದ ಮೆ ಹೂಡುವುದಾಗಿಯೂ ನೋಟಿಸು ... ಸಂಪಾದಕರಿಗೆ ನೋಟೀಸು ಕೊಟ್ಟಿ ದ್ದಾರೆ.

ಡೈರೆಕ್ಟರುಗಳು

ಸ್ವಂ. ವ] ಹಾಸನ ೨೬

ಶ್ರೀ ಲಕ್ಷ್ಮೀನರಸಿಂಹಸ್ವಾಮಿ ಕೋ-ಆಪರೇಟಿವ್ ಬ್ಯಾಂಕ್ ಡೈರೆಕ್ಟರುಗಳಾಗಿ ಈ ಕೆಳಗೆ ಕಂಡವರು ಚುನಾಯಿತರಾಗಿರು ತ್ತಾರೆ.— ಶ್ರೀಗಳಾದ ಎಸ್. ಎಂ. ಅನಂತ ರಾವ್, ... ನಾಯ್ಡು, ಸುಬ್ಬರಾವ್, ತಿಮ್ಮಪ್ಪಯ್ಯ, ನಾರಾಯಣರಾವ್, ಅನಂ ತಸ್ವಾಮಿ ಶಿವಭೂಷಣ ಮೊದಲಿಯಾರ್, ರಾಜಪ್ಪ, ಶ್ರೀಕಂಠಯ್ಯ ಮತ್ತು ... ನೇಮಿಸಿಯದ್ದೀರ.

ನ್ಯಾಂಕಿಂಗ್ ಪ್ರಧಾನಿಯನ್ನು ಕೊಲ್ಲುವ ಯತ್ನ

ನ್ಯಾಂಕಿಂಗ್ ಸರ್ಕಾರದ ಪ್ರಧಾನ ಮಂ ತ್ರಿ ವಾಂಗ್ ಚಿಂಗ್ ವಿಯವರನ್ನು ಕೊಲ್ಲಲು ಪ್ರಯತ್ನಿಸಿದ ಆರು ಮಂದಿಯನ್ನು ಪೈದು ಮಾಡಿ ಕೂಡಲೆ ಗಲ್ಲಿಗೇರಿಸಲಾಯಿತೆಂದು ಜರ್ಮನರ ಅಧೀನದಲ್ಲಿರುವ ಏಜಿ ರೇಡಿ ಯೊ ತಿಳಿಸಿದೆ

ಜರ್ಮನ್ ರಾಯಭಾರಿ-ಜಪಾನ್ ಮಂತ್ರಿ ಭೇಟಿ

ಟೋಕಿಯೋದಲ್ಲಿರುವ ಜರ್ಮನಿ ರಾಯ ಭಾರಿಯು ಮೊನ್ನೆ ಜಪಾನ್ ವಿದೇಶಾಂಗ ಮಂತ್ರಿಯನ್ನು ಭೇಟಿ ಮಾಡಿ ಒಂದು ಗಂ ಟೆಯ ಕಾಲ ಅಂತರಾಷ್ಟ್ರೀಯ ಪರಿಸ್ಥಿತಿ ಬ ಗ್ಗೆ ಮಾತುಕತೆ ನಡೆಸಿದರೆಂದು ವರದಿಯಾ ಗಿದೆ.

ರೋಮಿನಲ್ಲಿ ಕರ್ಫ್ಯೂ ಆಜ್ಞೆ

ರೋಮ್ ನಗರದಲ್ಲಿ ಪಿತೂರಿ ಚಟುವಟಿ ಕೆಗಳು ಜರುಗುತ್ತಿವೆಯಾದ್ದರಿಂದ ಸಂಜೆ ೭ ರಿಂದ ಬೆಳಿಗ್ಗೆ ೬ ಗಂಟೆ ವರೆಗೆ ಕರ್ಫ್ಯೂ ಆಜ್ಞೆ ಜಾರಿಯಲ್ಲಿರುವುದೆಂದು ತಿ ಳಿದುಬಂದಿದೆ.

ಇದ್ದಿಲು ಬದಲು ಗೋಧಿ.

ಅರ್ಜೆಂಟೈನಾಕ್ಕೆ ಕಲ್ಲಿದ್ದಲು ಒದಗಿ ಸುವುದು ಅಸಾಧ್ಯವಾಗಿರುವುದರಿಂದ ಅಲ್ಲಿನ ರೈಲ್ವೆ ಇಂಜಿನುಗಳಿಗೆ ಕಲ್ಲಿದ್ದಲಿಗೆ ಬದಲ ಅಲ್ಲಿ ಹೇರಳವಾಗಿ ಸಿಕ್ಕುವ ಗೋಧಿಯನ್ನೇ ಹಾಕಿ ಉರಿಸಿ ಉಪಯೋಗ ಹೊಂದುತ್ತಿ ರುವರೆಂದು ಲಾರ್ಡ್ ವೇವಲ್‌ರು ಯುದ್ಧ ... ವಾಗಿ ವಿಪರೀತ ಪರಿಸ್ಥಿತಿ ಉದ್ಭವಿಸುತ್ತ ದೆಂದು ಹೇಳುತ್ತಾ ಉದಹರಿಸಿರುವರು.

ಬಿಕ್ಕಟ್ಟು ಪರಿಹಾರಕ್ಕೆ ಯತ್ನ

ದೇಶದ ಬಿಕ್ಕಟ್ಟನ್ನು ಬಗೆಹರಿಸುವ ಮಾ ರ್ಗಗಳನ್ನು ಕಂಡು ಹಿಡಿಯಲು ಪ್ರಾಂತಿಕ ಶಾಸನ ಸಭಾ ಸದಸ್ಯರುಗಳನ್ನೂ, ಕೇಂದ್ರ ಶಾಸನ ಸಭಾ ಸದಸ್ಯರುಗಳನ್ನೂ ಕೂಡಿಸಿ, ಸಮ್ಮೇಳನ ಒಂದನ್ನು ನಡೆಸಬೇಕೆಂದು ಮ ದರಾಸ್ ಶಾಸನ ಸಭಾ ಕಾಂಗ್ರೆಸ್ ಸದಸ್ಯ ರು ಸಭೆ ಸೇರಿ ಯೋಚಿಸಿರುತ್ತಾರೆ.

ಟ್ರಸ್ಟ್ ಬೋರ್ಡ್

ಶ್ರೀಗಳಾದ ಪಿ. ಸೀತಾರಾಮಯ್ಯ ಮ ತ್ತು ಡಾ. ಪಿ. ನಂಜಪ್ಪನವರುಗಳನ್ನು ಮೈ ಸೂರು ಸಿಟಿ ಟ್ರಸ್ಟ್ ಬೋರ್ಡಿಗೆ ಸದಸ್ಯರ ನ್ನಾಗಿ ಚುನಾಯಿಸಿರುವುದನ್ನು ಸರ್ಕಾರ ದವರು ಅಂಗೀಕರಿಸಿದ್ದಾರೆ.

ಈ ದಿನ — ಒಲಂಪಿಯಾದಲ್ಲಿ

ಮೂರಾರಿಯವರ

ಬದಲ್ತಿ ದುನಿಯ

ಅಭಿನಯ:—ಮುಮ್ತಾಜ್ ಶಾಂತಿ, ಕೆ. ಸಿ. ಡೇ, ತ್ರಿಲೋಕ್ ಕಪೂರ್.

ಪ್ರತಿ ದಿನ ಮೂರು ಆಟಗಳು

ಕರ್ನಾಟಕ ಫಿಲಂಸ್‌ರವರ ಹಂಚಿಕೆ.

ಬಂಗ್ಲೆ ಬಿಕರಿಗಿದೆ

Door No. 1525, ನರಸಿಂಹರಾಜ ಮೊಹಲ್ಲಾ ... ದೊಡ್ಡ ... ರಸ್ತೆಯಲ್ಲಿದೆ. ಸೈಟು 90'x100'.

—ವಿವರಗಳಿಗೆ—

ಆರ್. ಗುಂಡೂರಾವ್, ಮೈಸೂರು.

ಬಿಸಿನೆಸ್ ಬ್ಯೂರೋ, ಮೈಸೂರು.

ಹರಾಜು ನೋಟೀಸು

ಇದರಿಂದ ಸಮಸ್ತ ಜನರಿಗೂ ತಿಳಿ ಯಪಡಿಸುವುದೇನೆಂದರೆ-ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿಗೆ ಸೇ ರಿದ ... ಎಕ್ಸ್‌ಟೆನ್ಷನ್‌ನಲ್ಲಿ ... ಸೈಟು ಗಳನ್ನು ... ಹರಾಜು ... ಸೈಟುಗಳ ... ಹರಾಜು ... ಆಫೀಸಿನಲ್ಲಿ ತಿಳಿಯಬಹುದು

(ಸಹಿ)

ಆರ್. ರಾಮಚಂದ್ರರಾವ್

ಬೊಂಬ್ರೋರೆ, ಛೇರ್ಮನ್.

ಹೊಸದಾಗಿ ಬಂದಿವೆ!

Tailors READY MADE CLOTHES KAPURA

ಜೊಲದು ... ಮಕ್ಕಳ ನವೀನ ಮಾದರಿ ಕುಪ್ಪಸಗಳು, ಫ್ರಾಕುಗಳು, ಜಂಪರುಗಳು.

ಹೊಸ ನಮೂನೆಯ ಸೀರೆಗಳು ಮತ್ತು ಕರವಸ್ತ್ರಗಳು ಇಲ್ಲಿ ದೊರೆಯುತ್ತವೆ.

ಸ್ವಾಸ್ತಿಕ್ ಸ್ಟೋರ್ಸ್

ವಾಸಪ್ರಕಾಶ್ ಭವನ, ಮಾಡರ್ನ್ ಕೆಫೆ, ಮೈಸೂರು.

Daily 3 Shows

NEW OPERA TALKIES

From 27-1-44

THAT NIGHT IN RIO

(TECHNI-COLOR)

Starring:

Alice Faye, Don Ameche Carmen Miranda.

ಚಳಿಗಾಲ

ಅತ್ಯುತ್ತಮವಾದ ರಗ್ಗುಗಳಿಗೂ, ವುಲ್ಲನ್ ಕೋಟಿಂಗ್, ಕಂಬಳಿ ಪಟ್ಟಿಕೆಗಳಿಗೂ ಎಲ್ಲಾ ...

ನೇರವಾಗಿ ನಮ್ಮಲ್ಲಿಗೆ ಬನ್ನಿ. ಕಡಿಮೆ ಬೆಲೆಗೆ ಉತ್ತಮವಾದ ಮಾಲು ಹೊಂದುವಿರಿ.

ಜಿ. ವಿ. ಸೂರ್ಯನಾರಾಯಣ ಶೆಟ್ಟಿ ಅಂಡ್ ಸನ್ಸ್

ಜುಯಲರ್ಸ್ & ರೆಡಿಮೇಡ್ ಡ್ರೆಸ್ ಎಂಪೋರಿಯಂ,

ಸಯ್ಯಾಜಿರಾವ್ ರೋಡ್, ಮೈಸೂರು.

ಸ್ತ್ರೀಯರ ಸೌಕರ್ಯಕ್ಕಾಗಿ

... ಇಂದ ಪ್ರತ್ಯೇಕವಾಗಿ ... ಮಾಡಲಿರುತ್ತೆ

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿ ಪುಡಿ.

ಯನ್ನೆ ಉಪಯೋಗಿಸಿ.

ಡಿ. ಪುಟ್ಟಯ್ಯ ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

... ಹೆಚ್ ಆಫೀಸಿನಲ್ಲಿ ... ಗೋಧಿಹಿಟ್ಟು ಮತ್ತು ಮೈದಾಹಿಟ್ಟು ... ದೊರೆಯುತ್ತೆ. ... ಸಕ್ಕರೆ ... ದೊರೆಯುತ್ತವೆ.

Edited, printed and published by A. R. Nagarajan, at the Sadhvi Press, D.Subbiah Road, Mysore

ಮೈಸೂರು ಡಿ.ಎಸ್.ಪಿ. ವರ್ಗ

ಸ್ವಂ ಸು] ಮೈಸೂರು ೨೮

ಮೈಸೂರು ಜಿಲ್ಲಾ ಪೋಲೀಸ್ ಸೂಪರಿಂಟೆಂಡೆಂಟರಾಗಿದ್ದ ಶ್ರೀ ಶೇಷಗಿರಿರಾಯರನ್ನು ಕೋಲಾರಕ್ಕೆ ಸಬ್ ಡಿವಿಜನ್ ಅಧಿಕಾರಿಗಳನ್ನಾಗಿ ವರ್ಗಾಯಿಸಿ, ಅಲ್ಲಿ ಸಬ್ ಡಿವಿಜನ್ ಅಧಿಕಾರಿಗಳಾಗಿರುವ ಶ್ರೀ ಎಸ್ ಸಿ ಗುಂಡಪ್ಪಶೆಟ್ಟಿಯವರನ್ನು ತುಮಕೂರು ಜಿಲ್ಲಾಧಿಕಾರಿಗಳ ಪರ್ಸನಲ್ ಅಸಿಸ್ಟೆಂಟರನ್ನಾಗಿ ವರ್ಗಮಾಡಿರುವರು.

ಎಮ್ಮೆ ವಧೆಗೆ ತಡೆ

ಮೈಸೂರು ಸರ್ಕಾರದವರು ಹಿಂದೆ ಜಾರಿಗೆತಂದ ಗೋವಧೆ ನಿಷೇಧದ ಶಾಸನಕ್ಕೆ ಈಗ ಬಸರಿ ಎಮ್ಮೆಗಳನ್ನೂ ಬೀಜದ ಕೋಣಗಳನ್ನೂ, ೧೦ ವರ್ಷಕ್ಕೆ ಕಡಿಮೆ ವಯಸ್ಸಿನ ಎಮ್ಮೆಗಳನ್ನೂ ವಧಿಸಕೂಡದೆಂದು ತಿದ್ದುಪಾಟುಮಾಡಿರುವರು

ರಾಷ್ಟ್ರೀಯ ರಕ್ಷಣಾ ಬಲ

ಶ್ರೀ ಸಿ ಶ್ರೀಕಂಠಯ್ಯನವರು ಇದೇ ಮಾಹೆ ೨೧ ಮತ್ತು ೨೭ ನೇ ತಾರೀಖುಗಳಲ್ಲಿ ಚಿಕ್ಕದಳ್ಳಿ, ಸೀಗಳಪುರ, ಚೀಳನಪುರ ಕೆಂಪೇಗೌಡನ ಹುಂಡಿ ಗ್ರಾಮಗಳಿಗೆ ಭೇಟಿಕೊಟ್ಟು ಪ್ರಚಾರ ಕಾರ್ಯವನ್ನು ನಡೆಸಿ, ಜನಾನರನ್ನು ಎದುರಿಸುವುದಕ್ಕೆ ಸರ್ವ ವಿಧದಲ್ಲೂ ಸಹಕರಿಸಬೇಕೆಂದು ಕೋರಿದರು ಕೆಂಪೇಗೌಡನ ಹುಂಡಿಯಲ್ಲಿ ನಡೆದ ಸಭೆಯಲ್ಲಿ ಅಲ್ಲಿಗೆ ಒಂದು ಸರ್ಕಾರಿ ಡಿಪೋವನ್ನು ಕೊಡಬೇಕೆಂದೂ, ರಾಜಪರಮೇಶ್ವರಿ ನಾಲೆಯ ಕ್ಲಿ ಬೇಸಿಗೆಯಲ್ಲಿ ನೀರು ಕೊಡಬೇಕೆಂದೂ ವಸ್ಕರಿ ನಿರ್ಣಯಗಳು ಅಂಗೀಕೃತವಾದುವು

ಪೆಟ್ರೋಲ್ ಕೂಪನ್ ಹಂಚಿಕೆ

ಬರುವ ೩ ತಿಂಗಳ ಉಪಯೋಗಕ್ಕೆ ಬೇಕಾಗುವ ಪೆಟ್ರೋಲ್ ಎಣ್ಣೆಗಾಗಿ ಮೋಟಾರು ವಾಹನಗಳನ್ನು ಹೊಂದಿರುವವರಿಗೆ ರೇಷನ್ ಕೂಪನ್‌ಗಳನ್ನು ಇದೇ ೨೧ ನೇ ತಾ॥ ನಿಂದ ಆಯಾ ಮೊಹಲ್ಲಾ ರೇಷನ್ ಆಫೀಸುಗಳಲ್ಲಿ ಕೊಡಲಾಗುವುದು

ತಿರುವಾಂಕೂರು ಪ್ರಭುಗಳು ಮದರಾಸಿಗೆ

ಕೋಲಾರ ಚಿನ್ನದ ಗಣಿ ಪ್ರದೇಶಕ್ಕೆ ಹೋಗಬೇಕೆಂದು ಗೊತ್ತಾಗಿದ್ದ ಕಾರ್ಯಕ್ರಮವನ್ನು ನಿಲ್ಲಿಸಿ, ತಿರುವಾಂಕೂರು ಸಂಸ್ಥಾನ ಧೀರರೂ ಪರಿವಾರದವರೂ ನಿನ್ನೆ ಬೆಂಗಳೂರಿನಿಂದ ಮದ್ರಾಸಿಗೆ ಪ್ರಯಾಣ ಬೆಳಸಿದರು

ಶಾಲಾ ಹುಡುಗರಿಗೆ ಉಚಿತ ಊಟ

ಕಮ್ಮಸಂಸ್ಥಾನದ ಎಲ್ಲ ಶಾಲಾ ಮಕ್ಕಳಿಗೂ ಉಚಿತವಾಗಿ ಮಧ್ಯಾಹ್ನದ ಊಟವನ್ನು ಒದಗಿಸಲು ಕೊಚಿನ್ ಸರ್ಕಾರದವರು ನಿರ್ಧರಿಸಿರುವರು. ಈ ನಿರ್ಧಾರವನ್ನು ರಾಜ್ಯ ಉಪಸಭೆ ಕ್ಕರಿಸಿ. ಅಲ್ಲಿನ ಆಹಾರ ಸಚಿವರು ಪಕ್ಷದವರನ್ನು ಸ್ವೀಕರಿಸಿದರು ಕೈಗೊಂಡಿರುವರು

ಆಹಾರ ಹತೋಟಿ ಕಟ್ಟಳೆ

ಮೈಸೂರು ಮ್ಯುನಿಸಿಪಲ್ ಚೇರ್ಮನರಿಗಳು ಆಹಾರ ಹತೋಟಿ ಆಜ್ಞೆಗಳನ್ನು ಮೀರಿದರೆ ಸಾವಿರ ರೂಪಾಯಿಗಳವರೆಗೆ ದಂಡ ನಿಧಿಗಳ ವಿಧಿಸಬೇಕೆಂದು ನೇಮಿಸಿದ್ದಾರೆ

ಸಂಪುಟ ೨] ಶುಕ್ರವಾರ ೨೮--೧--೪೪ [ಸಂಚಿಕೆ ೧೬೪

ಗಾಚಿನಾವನ್ನು ರಷ್ಯನರು ಹಿಡಿದರು

ಸರೋಜಿನಿಯವರು ಸರ್ಕಾರಕ್ಕೆ ಬರೆದ ಪತ್ರ ಬೆಳಕಿಗೆ ಬಂದಿಲ್ಲ

ಜಪಾನಿನಲ್ಲಿ ೧೫ ಜಿಲ್ಲೆಗಳನ್ನು ಖಾಲಿ ಮಾಡುವ ನಿರ್ಧಾರ

ಜೈಲಿನಿಂದ ಸರ್ಕಾರಕ್ಕೆ ಸರೋಜಿನಿಯವರ ಪತ್ರ

೧೯೪೨ ರ ಗಲಭೆಗಳಿಗೆ ಕಾಂಗ್ರೆಸ್ ಕಾರಣವೆಂದು ಆರೋಪಿಸಿ ಹೊರಟ ಸರ್ಕಾರಿ ಪ್ರಕಟಣೆಯನ್ನು ಖಂಡಿಸಿ ಮಹಾತ್ಮರ ಉಪವಾಸ ಕಾಲದಲ್ಲಿ ಶ್ರೀಮತಿ ಸರೋಜಿನಿ ದೇವಿಯವರು ಜೈಲಿನಿಂದಲೇ ಸರ್ಕಾರಕ್ಕೆ ಒಂದು ಪತ್ರ ಬರೆದಿದ್ದರು. ಅದನ್ನು ಮಹಾತ್ಮರಿಗೆ ತೋರಿಸಿದ್ದರು. ಅದರಲ್ಲಿ ಕಾರ್ಯಕಾರಿ ಸಮಿತಿಯವರು ಯಾವ ಕಾರ್ಯಕ್ರಮವನ್ನೂ ನಿರ್ದೇಶಿಸಿಲ್ಲವೆಂದೂ, ಹಿಂಸಾ ಕೃತ್ಯಗಳಿಗೆ ಕಾಂಗ್ರೆಸ್ ಪ್ರೋತ್ಸಾಹವಿಲ್ಲವೆಂದೂ ಸಮರ್ಥಿಸಿದ್ದರು. ಆ ಕಾಗದವನ್ನು ಸರ್ಕಾರದವರು ಬೆಳಕಿಗೆ ತಂದಿಲ್ಲವೆಂದು ಸರೋಜಿನಿಯವರು ದೆಹಲಿಯ ಪತ್ರಿಕಾ ಪ್ರತಿನಿಧಿಗಳ ಸಮ್ಮೇಳನದಲ್ಲಿ ಹೇಳಿದ್ದಾರೆ.

ಸರ್ಕಾರವನ್ನು ಪ್ರಶ್ನಿಸಲಾಗುವುದು

ಸರೋಜಿನಿಯವರ ಪತ್ರವನ್ನು ಬೆಳಕಿಗೆ ತಂದೇಹೋದ ಬಗ್ಗೆ ಕಾರಣವೇನೆಂದು ಬರುವ ಕೇಂದ್ರ ಶಾಸನ ಸಭೆಯಲ್ಲಿ ಸರ್ಕಾರವನ್ನು ಪ್ರಶ್ನಿಸಲಾಗುವುದೆಂದು ತಿಳಿದು ಬಂದಿದೆ

ಗಾಚಿನ ರಷ್ಯರ ವಶ

ಲೆನಿನ್ ಗ್ರಾಡಿನ ಉತ್ತರ ದಿಕ್ಕಿಗೆ ೨೦ ಮೈಲಿದೂರದಲ್ಲಿರುವ ಗಾಚಿನವನ್ನು ರಷ್ಯನರು ಹಿಡಿದಿರುವುದಾಗಿ ಮಾಸ್ಕೋವಿನಿಂದ ಅಧಿಕಾರಯುತ ಪ್ರಕಟಣೆ ಹೊರಟಿದೆ

ಜಪಾನ್ ಕೈಗಾರಿಕಾ ಕ್ಷೇತ್ರ ಖಾಲಿ

ಟೋಕಿಯೋ ಪ್ರಾಂತ್ಯದ ೧೫ ಜಿಲ್ಲೆಗಳನ್ನೂ ನಗೋಯಾ ಭಾಗದ ೮ ಕೈಗಾರಿಕ ಪಟ್ಟಣಗಳನ್ನೂ ಖಾಲಿಮಾಡಲು ಜಪಾನರು ನಿರ್ಧರಿಸಿರುವುದಾಗಿ ತಿಳಿದುಬಂದಿದೆ

ರೋಂ-ಕ್ಯಾಸಿನೊ ರೈಲ್ವೆ

ಅತಿ ಮುಖ್ಯವಾದ ರೋಂ ಕ್ಯಾಸಿನೋ ರೈಲ್ವೆಮಾರ್ಗವನ್ನು ಇಟಲಿ ದೇಶ ಪ್ರೇಮಿಗಳು ಕತ್ತರಿಸಿ ಹಾಕಿರುವುದಾಗಿ ವಾರ್ತೆ ಬಂದಿದೆ

ಟಾಸ್ನೊ ಮುಕ್ತಿಗೆ

ಟಾಸ್ನೊ ನಗರವನ್ನು ರಷಿಯನ್ ಬಲವಾಗಿ ಮುತ್ತಿದ್ದಾರೆ. ಆ ನಗರದ ೫ ಕಿಲೋಮೀಟರಲ್ಲೇ ರಷ್ಯನರ ಪಡೆಯಾಗಿದೆಯೆಂದು ತಿಳಿದುಬಂದಿದೆ.

ಆಂಜನೇಯ ವಿಗ್ರಹದ ಅಪಹರಣ

ತಿಪ್ಪನಹಳ್ಳಿ ತಾಲ್ಲೂಕಿನ ನೇರಲ ತಿರುಮಲಗಾಣನಾಥಪುರ ಎಂಬ ಗ್ರಾಮದ ದೇವಸ್ಥಾನದಲ್ಲಿದ್ದ ಹಿತ್ತಾಳೆಯ ಆಂಜನೇಯ ವಿಗ್ರಹವನ್ನು ಶಿವರಾಮ್ ಸಿಂಗ್ ಎಂಬಾತ ಒಣಹುಲ್ಲಿನಲ್ಲಿ ಸೇರಿಸಿಕೊಂಡು ಕೊಂಡೊಯ್ಯುತ್ತಿದ್ದಾಗ ದಾರಿಯಲ್ಲಿ ಅವನನ್ನು ಕಂಡ ಅದಿ ದ್ರಾವಿಡರಿಬ್ಬರು ಹುಲ್ಲಿನ ಕಂತೆಯಲ್ಲಿ ಮುಸುಕಾಗಿ ಕಂಡ ಬಂದ ವಿಗ್ರಹವನ್ನು ಒಣ ಮೀನೆಂದು ಭಾವಿಸಿ ಅವನ ಕಂತೆಯನ್ನು ಬಿಚ್ಚಿ ನೋಡಲಾಗಿ ವಿಗ್ರಹದ ಕಳ್ಳನು ಸಿಕ್ಕಿಬಿದ್ದು ಪೋಲೀಸರ ವಶಕ್ಕೊಳಗಾದನು

ನೂರೇಳು ವರ್ಷದ ವೃದ್ಧನ ನಿಧನ

ಒರಿಸ್ಸಾ ಪ್ರಾಂತ್ಯದ ಒಂದು ಹಳ್ಳಿಯಲ್ಲಿ ಅರೋಗ ಧೃಢಕಾಯ ನಾಗಿದ್ದ ಮಹದೇವ್ ಚಂದ್ರತ್ರಿಪಾಠಿ ಎಂಬ ನೂರೇಳುವರ್ಷದ ವೃದ್ಧನು ಮರಣಹೊಂದಿರುವನು. ಆವನ ಹೆಂಡತಿಯು ಜೀವಂತಳಾಗಿದ್ದಾಳೆ ಆಕೆಯ ವಯಸ್ಸು ೯೯. ಮೃತನು ಈಗ ಕೆಲದಿನಗಳವರೆಗೂ ಧೃಢಕಾಯನಾಗಿದ್ದನೆಂದು ಗೊತ್ತಾಗಿದೆ

---

೧೮ ಮೀರಿದ ಅಮೇರಿಕನರೂ ಯುದ್ಧ ಸೇವೆಗೆ

೧೮ ರಿಂದ ೩೭ರ ವರೆಗಿನ ವಯಸ್ಸಿನ ಎಲ್ಲ ಅಮೇರಿಕನರನ್ನೂ ಯುದ್ಧ ಸೇವೆಗೆ ಸೇರುವಂತೆ ಈ ವರ್ಷ ಕರೆಯಬೇಕೆಂದು ತೀರ್ಮಾನಿಸಲಾಗಿದೆ

---

೧ ಆಣೆಗಾಗಿ ೧,೦೦೦ ರೂ. ಜುಲ್ಮಾನೆ

ಹಾವಗಡದ ವರ್ತಕರೊಬ್ಬರು ೧ ರೂಪಾಯಿಗೆ ಬೆಲೆ ಕೇಳುವಾಗ ೧ ಆಣೆ ಹೆಚ್ಚಿನ ಬೆಲೆ ತೆಗೆದುಕೊಂಡಕ್ಕಾಗಿ ಸಬ್ ಡಿವಿಜನ್ ಆಫೀಸರು ಅವರಿಗೆ ೧ ವರ್ಷ ಕಠಿಣ ಸಜಾ ಮತ್ತು ೧ ಸಾವಿರ ರೂ. ಜುಲ್ಮಾನೆ ವಿಧಿಸಿ ಮತ್ತೊಬ್ಬನ್ನು ೩೦೦ ಜಿಲ್ಲೆಯ ಸಬಿಗೆ ೨ ಆಣೆಯಂತೆ ಹಾರಿಸಿದ್ದಕ್ಕಾಗಿ ಅವನಿಗೂ ೧ ವರ್ಷ ಕಠಿಣ ಸಜಾ, ೧ ಸಾವಿರ ರೂ ಜುಲ್ಮಾನೆ ವಿಧಿಸಲಾಗಿದೆ.

ಗ್ರಾಮ ಕೈಗಾರಿಕೆ ವಸ್ತು ಪ್ರದರ್ಶನ

ಸ್ವಂ.ಸು] ಹಾಸನ ೨೭

ಅಖಿಲ ಮೈಸೂರು ಗ್ರಾಮ ಪಂಚಾಯತಿ ಸಮ್ಮೇಳನದ ಅಂಗವಾಗಿ ಗಂಧದ ಕೋಠಿಯಲ್ಲಿ ಏರ್ಪಡಿಸಲಾಗಿದ್ದ ಗ್ರಾಮ ಕೈಗಾರಿಕಾ ವಸ್ತು ಪ್ರದರ್ಶನದ ಪ್ರಾರಂಭೋತ್ಸವವನ್ನು ಸಚಿವ ಶ್ರೀ ಹೆಚ್ ಬಿ ಗುಂಡಪ್ಪಗೌಡರು ನಿನ್ನೆಯ ಸಂಜೆ ನೆರವೇರಿಸಿದರು ಪ್ರದರ್ಶನದಲ್ಲಿ ಕೈಗಾರಿಕೆ ಮತ್ತು ಕೃಷಿಗೆ ಬೇಕಾದ ಕಬ್ಬಿಣದ ಸಾಮಾನುಗಳೂ, ಬೆಲ್ಲ, ನೇಯ್ಗೆ ವಸ್ತುಗಳೂ ಇದ್ದುವು ಯಾರಿ ಕ್ರಮವನ್ನು ತೋರಿಸಿಕೊಡಲಾಗುತ್ತಿತ್ತು. ಸಚಿವರು ಇಂತಹ ಗೃಹ ಕೈಗಾರಿಕೆ ಪ್ರದರ್ಶನಗಳ ಆವಶ್ಯಕತೆಯನ್ನು ಒತ್ತಿ ಹೇಳಿ, ಪ್ರತಿಯೊಂದು ಜಿಲ್ಲೆಯಲ್ಲೂ ಪ್ರದರ್ಶನಗಳನ್ನು ಏರ್ಪಡಿಸಬೇಕೆಂದು ತಿಳಿಸಿದರು.

ರಾತ್ರಿ ಸ್ಕೌಟ್‌ಗಳ ಮತ್ತು ಗರ್ಲ್ ಗೈಡರುಗಳಿಂದ ವಿವಿಧವಿನೋದಾವಳಿ ನಡೆಯಿತು ಬೈಲಾಟ ಮತ್ತು ಯಕ್ಷಗಾನವೂ ಜರುಗಿತು

ಆರೋಗ್ಯ ಕೇಂದ್ರ ಆರಂಭೋತ್ಸವ

ಸ್ಥಳೀಯ ಸಚಿವರಾದ ಶ್ರೀಮಾನ್ ಹೆಚ್ ಬಿ ಗುಂಡಪ್ಪಗೌಡರು ಇದಿನ ಬೆಳಗ್ಗೆ ಕಲೇಶಪುರಕ್ಕೆ ದಯಮಾಡಿಸಿ ಅಲ್ಲಿ ಸ್ಥಾಪಿಸಿರುವ ಆರೋಗ್ಯ ಕೇಂದ್ರದ ಆರಂಭೋತ್ಸವವನ್ನು ನೆರವೇರಿಸಿದರು ಮುಂದೆ ಅರಕಲಗೂಡು ತಾಲ್ಲೂಕು ಬಾಳ್ಳುಪೇಟೆಯಲ್ಲಿ ಹೆರಿಗೆ ಆಸ್ಪತ್ರೆಯ ಶಂಕುಸ್ಥಾಪನೆಯನ್ನು ನೆರವೇರಿಸಿದರು.

ಉದಾರ ದಾನ

ಹಾಸನ ತಾ॥ ಶಾಂತಿಗ್ರಾಮದ ಕಲ್ಲಗೂಡಿನ ಹಳ್ಳಿಯ ಶ್ರೀ ಕರಿಗೌಡರು ಮೊಸಳೆ ಹೊಸಹಳ್ಳಿಯಲ್ಲಿ ಒಂದು ಆಸ್ಪತ್ರೆಯನ್ನು ಕಟ್ಟಿಸಲು ೫ ಸಾವಿರ ರೂ. ಗಳನ್ನು ದಾನ ಮಾಡಿದರು.

---

೬ ಲಕ್ಷ ಮೈಲಿ ರಷ್ಯನರ ವಶ

ನೊವೋರೋಡ್ ಪಶ್ಚಿಮದ ವಿಸ್ತಾರವಾಗ ೪ ಲಕ್ಷ ಚ ಮೈಲಿಗಳನ್ನು ಪ್ರದೇಶವು ಈಗ ರಷ್ಯನರ ವಶವಾಗಿದೆ. ಲೆನಿನ್‌ಗ್ರಾಡ್ ರಂಗದಲ್ಲಿ ೬ ಲಕ್ಷ ಚ ಮೈಲಿ ರಷ್ಯನರ ವಶವಾಗಿದೆ

ನಾಜಿಗಳ ಹೊಸ ಅಸ್ತ್ರ

ನಾರ್ವೆ ತೀರದ ಬಳಿ ಬರುತ್ತಿದ್ದ ಜರ್ಮನ್ ನೌಕೆಗಳನ್ನು ಮಿತ್ರರ ಬೊ ಫೈಟರುಗಳು ಮುತ್ತಿದಾಗ ಜರ್ಮನರು ಹಿಂದೆಂದೂ ಉಪಯೋಗಿಸದ ಒಂದು ರೀತಿಯ ಪ್ಯಾರಚೂಟ್ ಫ್ಲಾರೆನ್ ಟೈಲ್ಸ್ ಎಂಬ ಅಸ್ತ್ರವನ್ನು ಉಪಯೋಗಿಸಿ ಎದುರಿಸುತ್ತಿದ್ದರೆಂದು ತಿಳಿದುಬಂದಿದೆ

ಮೊಹಲ್ಲಾ ಪರಿಶೀಲನೆ

ಮೈಸೂರು ಪೌರಸಭಾ ಸದಸ್ಯರುಗಳ ಮೊಹಲ್ಲಾ ನಿವಾಸಿಗಳ ಕುಂದು ಕೊರತೆಗಳನ್ನು ತಿಳಿದುಕೊಳ್ಳಲು ತಾ॥ ೩೦-೧-೪೪ ನೇ ಭಾನುವಾರ ೯ ಘಂಟೆಯಿಂದ ೧೧ ಘಂಟೆಯವರೆಗೆ ಅಶೋಕ ಮೊಹಲ್ಲಾ, ಗಾಂಧಿ ಚೌಕ, ಶಿವ ರಾಂಪೇಟೆ, ಹಳೆಯ ಆಗ್ರಹಾರ ರಸ್ತೆಗಳಲ್ಲಿ ಸಂಚರಿಸುತ್ತಾರೆ ಆಲ್ಲಿನ ನಿವಾಸಿಗಳು ತಮ್ಮ ಮೊಹಲ್ಲಾ ಕುಂದುಕೊರತೆಗಳನ್ನು ತಿಳಿಸಬೇಕೆಂದು ಮೈಸೂರು ಸಿಟಿ ಮುನಿಸಿಪಲ್ ಕೌನ್ಸಿಲ್ ಪ್ರೆಸಿಡೆಂಟರು ಕೋರುತ್ತಾರೆ.

ಬೇಲೂರಿಗೆ ತಿರುವಾಂಕೂರು ರಾಜರ ಭೇಟಿ

ಸ್ವ. ವ.] ಬೇಲೂರು ೨೪

ತಿರುವಾಂಕೂರು ಸಂಸ್ಥಾನದ ಮಹಾರಾಜರು, [illegible] ಮತ್ತು [illegible] ತಮ್ಮ ಪರಿವಾರ [illegible] ಆಗಮಿಸಿದರು [illegible] ಬೇಲೂರು ಕ್ಷೇತ್ರದ [illegible] ಶ್ರೀ ಲಕ್ಷ್ಮಣ [illegible] ಅತಿಥಿಗಳಿಗೆ [illegible] ಶ್ರೀ [illegible] ಶ್ರೀ [illegible] ಶ್ರೀ [illegible] ಸ್ವಾಗತ ನೀಡಿದರು [illegible] ಜೀರ್ಣೋದ್ಧಾರವಾದ ನಂತರ, ಪಾರ್ಕ್ [illegible] ಅತಿಥಿಗಳಿಗೆ [illegible] ಪ್ರೇಕ್ಷಣೀಯ ಸ್ಥಳಗಳನ್ನು ಮತ್ತು [illegible] ಶಿಲ್ಪ [illegible] ಅನೇಕ ಶಿಲ್ಪಗಳನ್ನೂ ತೋರಿಸಿದರು. ನಂತರ ಹೊಯ್ಸಳರಾಜ, ವಿಷ್ಣುವರ್ಧನ ಮತ್ತು ಶಾಂತಲಾ [illegible] ಚಿತ್ರಗಳನ್ನೂ [illegible] ಅತಿಥಿಗಳು ಹಳೇಬೀಡಿಗೆ [illegible] ಅಲ್ಲಿಂದ ಮುಂದೆ ಬೇಲೂರು ಮಾರ್ಗವಾಗಿಯೇ ಹಾಸನಕ್ಕೆ ಪ್ರಯಾಣ ಬೆಳೆಸಿದರು. ಮಹಾರಾಜರ ಆಗಮನಾರ್ಥವಾಗಿ ಸ್ಥಳೀಯ ಸಂಘ ಸಂಸ್ಥೆಗಳಿಗೂ, ಬೀದಿಗಳಿಗೂ ಅಲಂಕಾರ ಮಾಡಲಾಗಿತ್ತು. ತಿರುವಾಂಕೂರು ಮಹಾರಾಜರ ಹೆಸರಿನಲ್ಲಿ ಇಲ್ಲಿ ಪರ್ಣಕೋತ್ಸವ ಸೇವೆ ನಡೆಯಿತು.

ರೇಷ್ಮೆ ರವಾನೆ ಪತ್ತೆ

ಸ್ವಂ ವ.] ಚಾಮರಾಜನಗರ ೨೭

ಚಾಮರಾಜನಗರದ ಪೋಲೀಸಿನವರು ಪುಣಜನೂರು ಬಳಿ ಮೈಸೂರು ಸಿಟಿ ಮಹಮ್ಮದ್ ಎಂಬುವರು ಸುಮಾರು ೧೭೦೦ ಪೌಂ, ರೇಷ್ಮೆ ದಾರವನ್ನು ರಹದಾರಿ ಇಲ್ಲದೆ ಸಾಗಿಸುತ್ತಿದ್ದಾಗ ಪತ್ತೆ ಹಚ್ಚಿ, ವಶಮಾಡಿಕೊಂಡಿದ್ದಾರೆ. ಮುಂದಿನ ತನಿಖೆ ಕ್ರಮ ನಡೆಸುತ್ತಿದ್ದಾರೆ.

ಇದೇ ಸಂದರ್ಭದಲ್ಲಿ ಅಬ್ದುಲ್ ಮಜೀದ್ ಸಾಹೇಬರೆಂಬುವರು ಸುಮಾರು ನಾಲ್ಕು ಸೇರು ರೇಷ್ಮೆಯನ್ನು ರಹದಾರಿಯಿಲ್ಲದೆ ಸಾಗಿಸುತ್ತಿದ್ದುದನ್ನು ಪತ್ತೆ ಹಚ್ಚಿ ತನಿಖೆ ನಡೆಸುತ್ತಿದ್ದಾರೆ.

ಪುಸ್ತಕಕ್ಕೆ ಬಹಿಷ್ಕಾರ

'ಕ್ರಾಂತಿಕಾರಿ ಕಹಾನಿಯು' ಎಂಬ ಶ್ರೀ ಉಗ್ರರವರ ಪುಸ್ತಕವನ್ನು ಮೈಸೂರು ಸರ್ಕಾರದವರು ಬಹಿಷ್ಕರಿಸಿರುವರು.

ಸುಸಮಯ

ನಮ್ಮಲ್ಲಿ ಎಲ್ಲಾ ರಯಿಣಾರು ಬೆಲ್ಲ ಗವರ್ನಮೆಂಟ್ ಕಂಟ್ರೋಲ್ ರೇಟಿಗಿಂತ ಕಮ್ಮಿ ಬೆಲೆಗೆ ಚಿಲ್ಲರೆಯಾಗಿಯೂ ಒಟ್ಟಾಗಿಯೂ ದೊರೆಯುತ್ತೆ.

ಕೆ. ಪಿ. ಚೆನ್ನಬಸಪ್ಪ,
ಬೆಲ್ಲದ ವ್ಯಾಪಾರಿ ಮತ್ತು ಮಿಲಿಟರಿ ಕಂಟ್ರಾಕ್ಟರ್
118, ದೇವರಾಜ ಮಾರ್ಕೆಟ್,
ಮೈಸೂರು.

Edited, printed and published by [illegible] R. Nagarajan, [illegible] Press, D Sub [illegible]

ಹರಾಜು ನೋಟೀಸು

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ:- ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿಗೆ ಸೇರಿದ ಹೊಸ ಸಂತೇಪೇಟೆ ಎಕ್ಸ್‌ಟೆನ್‌ಷನ್‌ನಲ್ಲಿ ನ್ಯೂ ಸಯ್ಯಾಜಿರಾವ್ ರೋಡಿಗೆ ಎದುರಿನಲ್ಲಿರುವ ಉತ್ಕೃಷ್ಟವಾದ ವರ್ಕ್ ಷಾಪ್ ಸೈಟುಗಳನ್ನು ತಾರೀಖು ೩೦-೧-೧೯೪೪ ನೇ ಭಾನುವಾರ ಬೆಳಿಗ್ಗೆ ೧೧ ಗಂಟೆಗಾದಮೇಲೆ ತಾರೀಖು ೧೮-೧-೧೯೪೪ ನೇ ಮಧ್ಯಾಹ್ನ [illegible] ಹರಾಜು ಇಸ್ತಿಹಾರ್‌ನಲ್ಲಿ ಕಂಡ ಷರತ್ತುಗಳಿಗೆ ಒಳಪಟ್ಟು ಬಹಿರಂಗವಾಗಿ ಸೈಟುಗಳ ಬಳಿ ಹರಾಜು ಮಾಡಲಾಗುತ್ತೆ. ವಿವರಗಳನ್ನು ಆಫೀಸಿನಲ್ಲಿ ತಿಳಿಯಬಹುದು.

(ಸಹಿ)
ಆರ್. ರಾಮಚಂದ್ರರಾವ್
ಬೊಂಬೋರೆ,
ಛೇರ್ಮನ್.

ತಾತಯ್ಯನವರ ಶಾಲೆಗೆ ಪ್ರೋತ್ಸಾಹ

ಸ್ವಂ. ವ.] ಮೈಸೂರು ೨೪

ಮೈಸೂರಿನ ವೃದ್ಧ ಪಿತಾಮಹ ಪೂಜ್ಯ ಶ್ರೀ ಎಂ. ವೆಂಕಟಕೃಷ್ಣಯ್ಯನವರ ಪಂಚಪ್ರಾಣವೆಂದು ಹೆಸರು ಪಡೆದಿರುವ ಶ್ರೀ ಶಾರದಾವಿಲಾಸ ಹೈಸ್ಕೂಲಿನಲ್ಲಿ ಕಳೆದ ವಾರ ಅಲ್ಲಿನ ಹಿರಿಯ ತರಗತಿಗಳ ಸಂಘದ ವಾರ್ಷಿಕ ದಿನೋತ್ಸವವನ್ನು ಬಹು ಸಂಭ್ರಮದಿಂದ ನೆರವೇರಿಸಿತು. ಅಂದಿನ ಸಮಾರಂಭದ ಅಧ್ಯಕ್ಷ ಪೀಠವನ್ನು ನಮ್ಮ ರಾಜಧಾನಿಯ ಗಣ್ಯ ವರ್ತಕರೂ, ಸಿ. ಪಿ. ಸಿ. ಮೋಟಾರ್ ಸರ್ವೀಸ್ಸಿನ ಮಾಲೀಕರೂ ಆದ ಶ್ರೀ ಸಿ. ಪೆರುಮಾಳ್ ಚೆಟ್ಟಿಯವರು ಅಲಂಕರಿಸಿದ್ದರು. ಅವರು ತಮ್ಮ ಅಧ್ಯಕ್ಷ ಮಣೆಯಿಂದ ಹೀಗೆ ನುಡಿದರು:—

"ಪ್ರತಿಯೊಬ್ಬ ವಿದ್ಯಾರ್ಥಿ ವಿದ್ಯಾರ್ಥಿನಿಯೂ ಬರೀ ನೌಕರಿ ಗಳಿಸುವ ಕಡೆಗೇ ಗಮನವೀಯದೆ ಸಮಾಜಕ್ಕೆ ಉಪಕಾರಿಯಾಗುವ ಸ್ವಾವಲಂಬನಾ ಮಾರ್ಗದಲ್ಲಿ ಶಿಕ್ಷಣ ಪಡೆಯಬೇಕು. ಯುದ್ಧಾನಂತರ ಬಹುಮಟ್ಟಿಗೆ ವೃದ್ಧಿಯನ್ನೈದಲಿರುವ ಕೈಗಾರಿಕೆಗಳಲ್ಲಿ ಯಶಃ ಕೀರ್ತಿಗಳನ್ನು ಗಳಿಸಲು ನಮ್ಮ ಬಾಲಕ ಬಾಲಿಕಿಯರುಗಳು ಇಂದಿನಿಂದಲೇ ತಕ್ಕ ಶಿಕ್ಷಣ ಪಡೆಯಬೇಕು. ನಮ್ಮ ಬಾಲಕ ಬಾಲಕಿಯರು ಚೆನ್ನಾಗಿ ವಿದ್ಯಾರ್ಜನೆ ಮಾಡಿ, ಮುಂದೆ ಸಂಸ್ಥೆಗಳಾಗಬೇಕಾದ ಭಾರವು ಉಪಾಧ್ಯಾಯರಿಗೆ ಸೇರಿದ್ದಾಗಿದೆ. ಈ ಸನ್ನಿವೇಶದಲ್ಲಿ ಅಧ್ಯಾಪಕರುಗಳು ಒಂದೇ ಕಾಲದಲ್ಲಿ ಅಜ್ಞಾನ ಮತ್ತು ದಾರಿದ್ರ್ಯದ ಮೇಲೆ ಹೋರಾಡಬೇಕಾಗುತ್ತದೆ. ನಾನು ಕೇವಲ ವಾಣಿಜ್ಯ ಪ್ರಪಂಚದಲ್ಲಿದ್ದವನಾದರೂ ತರುಣರ ಸ್ನೇಹ ಒಬ್ಬನಾದ್ದರಿಂದ ನನ್ನ ಕಿರಿಯರೊಂದಿಗೆ ಕಲೆತು ಸ್ವಲ್ಪ ಕಾಲವನ್ನು ಸಂತೋಷದಿಂದ ಕಳೆಯುವ ಸದವಕಾಶಕ್ಕೆ ಭಾಗಿಯಾಗಿದ್ದೇನೆ.

ತಾತಯ್ಯನವರ ಸ್ಮಾರಕ ದಿನವನ್ನು ಈ ಶಾಲೆಯು ನಡೆಸಲೇಬೇಕು. ವಿದ್ಯಾ ಸುಧಾರಕರ ಸಾಮಾನ್ಯ ಕೂಗು ಹಣವಿಲ್ಲ ಎಂದು. ಆದರೂ ಆಯಾ ಕಸಬಿಗೆ ತಕ್ಕಷ್ಟು ಜನರನ್ನು ತರಪೇತು ಮಾಡುವುದು ಕಷ್ಟವಲ್ಲ. ಬಹು ಶ್ಲಾಘ್ಯವಾದ ರೀತಿಯಲ್ಲಿ ಕೆಲಸ ಮಾಡುತ್ತಿರುವ ಈ ಶಾಲೆಗೆ ಒಳ್ಳೆಯ ಭವಿಷ್ಯವಿದೆ"—ಎಂದು ಮುಂತಾಗಿ ತಮ್ಮ ಅನುಭವವನ್ನು ತಿಳಿಸಿದರು.

ಜಮೀನು, ಬಂಗಲೆ ಕೊಳ್ಳುವವರಿಗೆ ಸುಸಮಯ

ಮನೆಗಳೂ ಬಂಗಲೆಗಳೂ ಜಮೀನುಗಳೂ ಸಹ ಖರೀದಿಗಿವೆ

ಮಾರುವವರಿಗಾಗಲಿ, ಕೊಳ್ಳುವವರಿಗಾಗಲಿ, ಹಣವನ್ನು ಗಳಿಸುವವರಿಗಾಗಲಿ ಸುಸಮಯ.

1.	ಒಂಟಿಕೊಪ್ಪಲು, ಎಲ್ಲಾ ಸೌಕರ್ಯದಿಂದಿರುವ ಸೈಟ್ 180-160 ಬೆಲೆ	ರೂ. 22,000
2	ಚಾಮುಂಡಿ ಎಕ್ಸ್‌ಟೆನ್‌ಷನ್ ಕಾಂಪೌಂಡ್ ಮತ್ತು ಔಟ್ ಹೌಸ್, ದೀಪ, ನಲ್ಲಿ ಮತ್ತು ತೆಂಗಿನ ಮರಗಳು ಸಹ ಸೈಟ್ 120-100	11,000
3	ಚಾಮುಂಡಿ ಎಕ್ಸ್‌ಟೆನ್‌ಷನ್ 2 ಕಟ್ಟಡಗಳು, ನಲ್ಲಿ, ದೀಪ ಸಹ ಇರುತ್ತೆ ಸೈಟ್ 120-60	13,000
4	ರಾಮಚಂದ್ರ ಅಗ್ರಹಾರ, 4 ಕಟ್ಟಡಗಳು ಮತ್ತು ಕೆಲಸ ಮಾಗಿಯುದ ಇರುವ 1 ಅಂಗಡಿಗಳು ಸಹ ಭೋಗ್ಯಕ್ಕೆ ...	10,000
5	ಇರ್ವಿನ್ ರೋಡು, 2 ಕಟ್ಟಡಗಳು, ದೀಪ, ಭಾವಿ, ಮೋಟಾರು ಗ್ಯಾರೇಜು ಔಟ್ ಹೌಸ್ ಸಹ ಸೈಟ್ 125-175	45,000
6	ಪಡುವಾರಹಳ್ಳಿ, ಹೊಸರಾಜ ಗಲ್ಲಿ	3,500
7	ನಲ್ಲಪ್ಪನ ಛತ್ರ, ದಿವಾನರ ಬೀದಿ, ದೀಪ, ನಲ್ಲಿಯಿಂದ ಕೂಡಿರುವ ಪುರಾತನ ಕಟ್ಟಡ ಸೈಟ್ 80-40 ...	16,000
8	ಚಿಕ್ಕ ಗಡಿಯಾರ, ಮನೆ ಸೈಟ್ 10-30	4,500
9	ಲಕ್ಷ್ಮೀಪುರಂ, ಬಂಗಲೆ ...	25,000
10	ಊಟಿಗೆ, ಎಲ್ಲಾ ಅನುಕೂಲತೆಯಿಂದಿರುವ ಬಂಗಲೆ	16,000
11.	ಊಟಿಗೆ, ಬಸ್ ಸ್ಟ್ಯಾಂಡ್ ಹತ್ತಿರ ಎಲ್ಲಾ ಸೌಕರ್ಯದಿಂದಿರುವ ಮನೆ	10,000
12.	ಊಟಿಗೆ, ಬಸ್ ಸ್ಟ್ಯಾಂಡ್ ಹತ್ತಿರ ...	7,000
13	ಚಾಮುಂಡಿ ಎಕ್ಸ್‌ಟೆನ್‌ಷನ್ ಹತ್ತಿರ ಬಂಗಲೆ	7,000
14	ನ್ಯೂ ಸಯ್ಯಾಜಿರಾವ್ ರೋಡ್, 1 ದೊಡ್ಡ ಕಟ್ಟಡ	13,000
15	ರಾಮಚಂದ್ರ ಅಗ್ರಹಾರ, ಮನೆ 1 ...	3,000
16	ಗೌರ್ನ್‌ಮೆಂಟ್ ಹೌಸ್ ರೋಡ್, ನಲ್ಲಿ, ದೀಪ, ಔಟ್ ಹೌಸ್, ಸಹಿತ ಕಾಂಪೌಂಡ್, ಎಲ್ಲಾ ಅನುಕೂಲತೆಯಿಂದ ಕೂಡಿರುವ ಬಂಗಲೆ 1	35,000
1.	ಇಟ್ಟಿಗೆ ರೋಡು, ಕರಿ, ಮಣ್ಣು ಸಹ 2½ ಎಕರೆ	6,000
2	ಶ್ರೀರಂಗಪಟ್ಟಣದ ಹತ್ತಿರ ಗಂಜಾಂ ಹತ್ತಿರದ ಕಾವೇರಿ ನದೀ ನೀರಾವರಿ ಗದ್ದೆ ಉತ್ಕೃಷ್ಟವಾದ ಜಮೀನು 8 ಎಕ್ರೆ 9 ಗುಂಟೆ, 48 ಖಂಡಗ ಗುತ್ತಿಗೆ ಬರತಕ್ಕ ಜಮೀನು ...	10,000
3	[illegible] ಹತ್ತಿರ ಇರುವ 32 ಎಕರೆ [illegible] ಜಮೀನು ಖರೀದಿಗೆ ಸಿದ್ಧವಾಗಿದೆ. ದೊಡ್ಡ ಕೆರೆ ಒಂಬತ್ತು [illegible] ಸುಮಾರು 10-2 ಖಂಡಿ [illegible] ಬರುವ ಜಮೀನು.	

Share-brokers and Agents
M. S. RAJA RAO,
C. M. & Sons. 32, Sayaji Rao Road, Mysore

ಮೈಸೂರು ನಾಟಕ ಸಂಘ.

೩೦—೧—೪೪ ನೇ ಭಾನುವಾರ
ಸಂಜೆ ೭ ಗಂಟೆಗೆ
ಮೈಸೂರು ಟೌನ್ ಹಾಲಿನಲ್ಲಿ

ಇಂದೂರು ರಾಣಿ
ಅಹಲ್ಯಾಬಾಯಿ

ಮಲ್ಹಾರರಾಯನ ದುಷ್ಕೃತ್ಯ, ಹರಿಹರ ಪಂತನ ಕಪಟತನದ ಭ್ರಾಂತಿ, ಗಂಗಾಧರರಾಯನ ನಡುವರ್ತನ, ಮುಕ್ತಾಬಾಯಿಯ ಪಾತಿವ್ರತ್ಯ, ಅಹಲ್ಯೆಯ ಕ್ಷಮಾಗುಣ, ತುಕೋಜಿಯ ರಾಜಭಕ್ತಿ, ಅಂಬಾದಾಸನ ಧರ್ಮಬೋಧೆ, ಇವುಗಳಿಂದ ಮನೋಹರವಾದ ಹೊಸ ನಾಟಕ [illegible]

[illegible] ಪ್ರೇಕ್ಷಕರ ಪ್ರೋತ್ಸಾಹ ಬೇಕೆಂದು ಪ್ರಾರ್ಥನೆ.

ಸಂಪುಟ ೨] ಶನಿವಾರ ೨೯—೧—೪೪ [ಸಂಚಿಕೆ ೧೬೫

ಆರ್ಜೆಂಟೈನಾದಲ್ಲಿ ಮಂತ್ರಿಗಳ ರಾಜೀನಾಮೆ

ಜಪಾನ್-ಜರ್ಮನಿಗಳ ಮೇಲೆ ಲೈಬೀರಿಯಾ ಯುದ್ಧ ಹೂಡಿತು
ಹೊಟ್ಟೆಗಿಲ್ಲದವರು ಮತ್ತೆ ಕಲ್ಕತ್ತಾ ಪ್ರವೇಶಿಸುತ್ತಿರುವರು

ಕಾಂಗ್ರೆಸ್‌ನವರ ಹೇಳಿಕೆ ಪ್ರಕಟಿಸಲು ಅಡ್ಡಿ

ನ್ಯಾಯಬಾಹಿರವಾದ ಸಂಸ್ಥೆಯೆಂದು ಘೋಷಿಸಲ್ಪಟ್ಟಿರುವ ಕಾಂಗ್ರೆಸ್ ಸಂಸ್ಥೆಗೆ ಸದಸ್ಯರ ಹೇಳಿಕೆಗಳೆಂದು ಭಾವಿಸಲಾಗುವ ಪ್ರಕಟಣೆಗಳನ್ನೂ ಗಾಂಧಿಯವರ ಹೇಳಿಕೆಗಳೆಂದು ಭಾವಿಸಲಾಗುವ ಪ್ರಕಟಣೆಗಳನ್ನೂ ಮತ್ತು ಅವುಗಳ ಮೇಲೆ ಟೀಕೆಗಳನ್ನೂ ಪ್ರಕಟಿಸುವ ಮುಂಚೆ ಸರ್ಕಾರದ ಪ್ರೆಸ ಪತ್ರಿಕಾ ಪರಿಶೀಲಕರ ಒಪ್ಪಿಗೆ ಪಡೆಯಬೇಕೆಂದು ದೆಹಲಿಯ ಹಿಂದೂಸ್ಥಾನ್ ಟೈಂಸ್ ಮತ್ತು ನ್ಯಾಷನಲ್ ಕಾಲ್ ಪತ್ರಿಕೆಗಳವರಿಗೆ ಸರ್ಕಾರದವರು ಆಜ್ಞಾಪಿಸಿದ್ದಾರೆ.

ಕಾಲೇಜ್ ಮೂಲಕ ಮತ ಪರಿವರ್ತನ ಕಾರ್ಯ

ಬೊಂಬಾಯಿ ವಿಶ್ವವಿದ್ಯಾನಿಲಯದ ಸೆನೆಟ್ ಮುಂದೆ ಅಲ್ಲಿನ ಸೋಫಿಯಾ ಕಾಲೇಜಿನ ಸ್ತ್ರೀ ವಿದ್ಯಾರ್ಥಿನಿಯರ ಪ್ರವೇಶಕ್ಕೆ ಸಂಬಂಧಿಸಿ ಚರ್ಚೆ ಬಂದಿದೆ. ಆ ಕಾಲೇಜಿನ ಓದುತ್ತಿದ್ದ ವಿದ್ಯಾರ್ಥಿನಿಯೋರ್ವಳ ಅಲ್ಲಿನ ಉಪಾಧ್ಯಾಯರು ಉಪದೇಶದಿಂದ ಮತ ಪರಿವರ್ತನೆ ನಡೆಸಿರುವುದೇ ಇದಕ್ಕೆ ಕಾರಣವಾಗಿದೆ. ಈ ಬಗ್ಗೆ ಬರುವ ತಿಂಗಳು ೧೨ ನೇ ತಾ|| ಸೇರುವ ಸೆನೆಟ್ ಸಭೆಯಲ್ಲಿ ಚರ್ಚೆ ನಡೆಯಲಿದೆ.

ಬಂಗಾಳಕ್ಕೆಲ್ಲಾ ರೇಷನಿಂಗ್

ಇಡೀ ಬಂಗಾಳಾ ಪ್ರಾಂತ್ಯದಲ್ಲೆಲ್ಲಾ ರೇಷನಿಂಗ್ ಕ್ರಮವನ್ನು ಸದ್ಯದಲ್ಲಿಯೇ ಜಾರಿಗೆ ತರುವುದಾಗಿ ಅಲ್ಲಿನ ಸರಕಾರದ ಸದಸ್ಯರು ತಿಳಿಸಿದ್ದಾರೆ. ಆಹಾರ ಪದಾರ್ಥಗಳ ಬೆಲೆಯನ್ನು ಕಡಿಮೆ ಮಾಡಲು ಸರ್ಕಾರದವರು ಬದ್ಧಕಂಕಣರಾಗಿರುವರೆಂದೂ ಅವರು ಹೇಳಿರುವರು.

ಕಲ್ಕತ್ತಾದಲ್ಲಿ ಪುನಃ ಹೊಟ್ಟೆಗಿಲ್ಲದವರು

ಸಣ್ಣ ಸಣ್ಣ ಗುಂಪುಗಳಲ್ಲಿ ಹೊಟ್ಟೆಗಿಲ್ಲದ ಜನರು ಪುನಃ ಕಲ್ಕತ್ತೆಗೆ ಪ್ರವೇಶಿಸುತ್ತಿರುವರೆಂದು ತಿಳಿದುಬಂದಿದೆ. ಇದರಿಂದ ಮುಂದೆ ಪುನಃ ಕಷ್ಟಕಾಲಗಳು ಪ್ರಾಪ್ತವಾಗಬಹುದೆಂಬ ಭೀತಿಯುಂಟಾಗಿದೆ. ಒಡನೆಯೇ ವೈದ್ಯಕೀಯ ಸಹಾಯವನ್ನು ಒದಗಿಸದಿದ್ದರೆ ಗ್ರಾಮಾಂತರಗಳಲ್ಲಿನ ಮರಣ ಸಂಖ್ಯೆಯು ಹೆಚ್ಚಾಗುವ ಲಕ್ಷಣಗಳಾಗುವವೆಂಬ ಭೀತಿಯುಂಟಾಗಿದೆ.

ಕಲ್ಕತ್ತಾ ಪೌರಸಭೆಯ ಸ್ವಾತಂತ್ರ್ಯ ಪ್ರೇಮ

ಕಲ್ಕತ್ತಾ ಪೌರಸಭೆ ೨೬ ನೇ ತಾ|| ಸ್ವಾತಂತ್ರ್ಯ ದಿನವನ್ನು ಆಚರಿಸಿತು. ಸಭೆಯಲ್ಲಿ ಸ್ವಾತಂತ್ರ್ಯ ಪ್ರತಿಜ್ಞೆ ಸ್ವೀಕಾರವಾಯಿತು. ಅಂದು ಏನೂ ಕಾರ್ಯಕ್ರಮ ನಡೆಸದೆ ಸಭೆ ಮುಂದ ಹೋಯಿತು. ಯೂರೋಪ್ಯ ಸದಸ್ಯರೊಬ್ಬರು ಮಾತ್ರ ಈ ಆಚರಣೆಗೆ ತಮ್ಮ ವಿರೋಧ ತೋರಿದರು.

ನಾಟಕ ನಡೆ ಕೂಡದು

ಬಿದವಾಡ ಕಮ್ಯೂನಿಸ್ಟ್ ಪಕ್ಷದವರು ಸ್ವಾತಂತ್ರ್ಯ ದಿನಾಚರಣೆ ಸಂಬಂಧವಾಗಿ ನಾಟಕ ಒಂದನ್ನು ಪ್ರದರ್ಶಿಸಲು ಸಿದ್ಧರಾಗಿದ್ದರು. ಅದನ್ನು ತಾ|| ೨೬, ೨೭ ಈ ದಿನಗಳು ಆಡಕೂಡದೆಂದು ಅಲ್ಲಿನ ನ್ಯಾಯಾಧೀಶರು ಆಜ್ಞಾಪಿಸಿದರೆಂದು ತಿಳಿದುಬಂದಿದೆ.

ಆರ್ಜೆಂಟೈನಾ ಬಿಕ್ಕಟ್ಟು

ನ್ಯಾಯಾಂಗ ಮಂತ್ರಿ, ವ್ಯವಸಾಯ ಮಂತ್ರಿ ಮತ್ತು ಇತರ ಖಾತೆಗಳ ನಾಲ್ವರು ಅಧಿಕಾರಿಗಳು ರಾಜೀನಾಮೆಯಿತ್ತುದರಿಂದ ಅರ್ಜೆಂಟೈನಾ ಸರ್ಕಾರದಲ್ಲಿ ದೊಡ್ಡ ಬಿಕ್ಕಟ್ಟುಂಟಾಗಿದೆ. ಅರ್ಜೆಂಟೈನಾವು ಶತ್ರು ರಾಷ್ಟ್ರಗಳ ಸಂಬಂಧವನ್ನು ತ್ಯಜಿಸಿದೆ.

ಅಮೇರಿಕನ್ ಸೇನೆ ದ್ವಿಗುಣಿತವಾಗುವುದು

ಸಮುದ್ರದಾಚೆ ಸಮರ ಸೇವೆ ಸಲ್ಲಿಸುತ್ತಿರುವ ಅಮೇರಿಕನ್ ಸೇನೆ ಈ ವರ್ಷದ ಕೊನೆ ಹೊತ್ತಿಗೆ ದ್ವಿಗುಣಿತವಾಗುವುದೆಂದು ಅಮೇರಿಕದ ಸಮರ ಮಂತ್ರಿ ಸ್ಟಿಂಸನರು ಹೇಳಿರುವರು.

ಬ್ರಿಟಿಷ್ ಯುದ್ಧ ಖೈದಿಗಳು ನೀರು ಪಾಲು

ಕಳೆದ ನವೆಂಬರ್ ೨೯ ರಲ್ಲಿ ಬ್ರಿಟಿಷ್ ಯುದ್ಧ ಖೈದಿಗಳನ್ನು ಸಾಗಿಸುತ್ತಿದ್ದ ಜಪಾನಿಗೆ ಸೇರಿದ ಹಡಗೊಂದು ಮುಳುಗಿದುದರ ಫಲವಾಗಿ ಹಲವಾರು ಬ್ರಿಟಿಷ್ ಯುದ್ಧ ಖೈದಿಗಳು ನೀರು ಪಾಲಾದರೆಂದು ಜಪಾನ್ ಸರ್ಕಾರ ಪ್ರಕಟಿಸಿದೆ.

ಜಪಾನ್ ಹಡಗು ನಾಶ

ಪೂರ್ವ ಚೀನಾ ಬಳಿ ಇದ್ದ ಜಪಾನಿನ ಡೈಸ್ಟ್ರೋಯರ್ ಹಡಗೊಂದನ್ನೂ ಎರಡು ಸಣ್ಣ ಫೈಟರ್ ಹಡಗುಗಳನ್ನೂ ಅಮೇರಿಕನ್ ಮತ್ತು ಚೀಣೀ ವಿಮಾನಗಳು ಮುಳುಗಿಸಿರುವುದಾಗಿ ಗೊತ್ತಾಗಿದೆ.

ಮಿತ್ರಸೇನೆ ತಳ್ಳಲ್ಪಡುವುದೆ ?

ರೋಮಿಗೆ ದಕ್ಷಿಣದಲ್ಲಿ ಭೀಕರ ಕಾಳಗ ಇಷ್ಟರಲ್ಲೇ ಪ್ರಾಪ್ತವಾಗುವುದಿದೆ. ಅಗ್ನಿ ಹೋರಾಟ ಹೂಡುವ ಮಿತ್ರದಳಗಳನ್ನು ಜರ್ಮನರು ಸಮುದ್ರದ ಕಡೆಗೆ ತಳ್ಳಿಕೊಂಡು ಬಂದು ಓಡಿಸುವ ಪ್ರಯತ್ನ ನಡೆಸಬಹುದು ಎಂಬುದಾಗಿ ಅನೇಕಾ ಯುದ್ಧ ಕಾರ್ಯದರ್ಶಿ ಮಿ|| ಹೆನ್ರಿ ಸ್ಟಿಂಸನರವರು ಹೇಳಿರುವರು.

ಮುಸೋಲಿನಿ ಸ್ಥಿತಿ ಕಳವಳ

ಕೋಮೋ ಬಳಿಯ ಡೆಸ್ಸೆನ್ಜಾನೊ ಎಂಬಲ್ಲಿ ಈಗ ಬಿಡಾರಮಾಡಿರುವ ಮುಸೋಲಿನಿ ದೇಹಸ್ಥಿತಿ ಸಂಪೂರ್ಣವಾಗಿ ಕೆಟ್ಟುಹೋಗಿದೆಯೆಂದೂ ಆ ಕಾರಣ ಕಳವಳಪ್ರದವಾಗಿದೆಯೆಂದೂ ವೈದ್ಯರು ಹೇಳುತ್ತಿರುವುದಾಗಿ ಒಂದು ವರದಿ ತಿಳಿಸುತ್ತದೆ.

ಲೈಬೀರಿಯಾ ಯುದ್ಧ ಹೂಡಿತು

ಮಧ್ಯ ಆಫ್ರಿಕಾದಲ್ಲಿರುವ ಸ್ವತಂತ್ರ ರಾಷ್ಟ್ರವಾದ ಲೈಬೀರಿಯಾ ದೇಶವು ಇದೇ ೨೬ ನೇ ತಾ|| ನಿಂದ ಜರ್ಮನಿ ಮತ್ತು ಜಪಾನುಗಳ ಮೇಲೆ ಯುದ್ಧ ಹೂಡಿತೆಂದು ಖಚಿತವಾಗಿ ತಿಳಿದುಬಂದಿದೆ.

೨೩,೦೬೦ ಮಂದಿ ಜೈಲಿನಲ್ಲಿ

ಭಾರತದಲ್ಲಿನ ರಾಜಕೀಯ ಬಂದಿಗಳ ಸಂಖ್ಯೆ ಎಷ್ಟೆಂದು ಕೇಳಲಾದ ಪ್ರಶ್ನೆಗೆ ಉತ್ತರವಾಗಿ ಮಿ|| ಅಮೆರಿಯವರು, ಕಳೆದ ನವೆಂಬರ್ ೧ ರ ಹೊತ್ತಿಗೆ ಭಾರತದಲ್ಲಿ ೨೩,೦೬೦ ಮಂದಿ ಕಾಂಗ್ರೆಸ್‌ನವರನ್ನು ಸೆರೆಮಾಡಲಾಗಿತ್ತು ಎಂದು ಹೇಳಿದ್ದಾರೆ.

ಬರಡೋಲಿಯವರ ಖುಲಾಸೆ

೧೯೪೨ ನೇ ಆಗಸ್ಟ್ ೧೦ ನೇ ತಾ|| ಸೆರೆ ಹಿಡಿದ ಅಸ್ಸಾಂ ಪ್ರಾಂತ್ಯದ ಮಾಜಿ ಪ್ರಧಾನಿ ಶ್ರೀ ಗೋಪೀನಾಥ್ ಬರ್‌ಡೋಲಿಯವರನ್ನು ಮೊನ್ನೆ ಆರೋಗ್ಯ ಕಾರಣಗಳಿಗಾಗಿ ಗೌಹತಿ ಬಂದೀಖಾನೆಯಿಂದ ಖುಲಾಸೆಮಾಡಲಾಯಿತು. ಆದರೆ ಅವರು ಗೌಹತಿಯನ್ನು ಬಿಟ್ಟುಹೋಗಕೂಡದೆಂದು ಅವರ ಮೇಲೆ ಪ್ರತಿಬಂಧಕಾಜ್ಞೆ ಹಾಕಲಾಗಿದೆ.

ಭಾರತದ ಬಗ್ಗೆ ವಿಶ್ವಾಸ

ರಾಷ್ಟ್ರಗಳು ಸ್ವತಂತ್ರವಾಗಿರಬೇಕೆಂದು ಕೋರುವುದೇ ಅಮೇರಿಕನರ ಸಂಪ್ರದಾಯ. ನಾನು ನಿಜವಾದ ಅಮೇರಿಕನಾದುದರಿಂದ ಭಾರತಕ್ಕೆ ಸ್ವಾತಂತ್ರ್ಯ ಸಿಗಬೇಕೆಂಬುದೇ ನನ್ನ ಮೊದಲನೆ ಹಾರೈಕೆ—ಎಂಬುದಾಗಿ ಅಮೇರಿಕಾ ಕಾಂಗ್ರೆಸ್ ಸದಸ್ಯರಾದ ಮಿ|| ಜೋ ಕಾಫೀರವರು ಘೋಷಿಸಿದ್ದಾರೆ.

ಭಾರತ ಭಿನ್ನವಾಗದು

ಭಾರತವು ಸರ್ವದಾ ವಿಭಾಗಿಸಲ್ಪಡದೆಯೇ ಉಳಿಯುವುದು. ಅದನ್ನು ಎಷ್ಟೇ ವಿಭಾಗವಮಾಡಿದರೂ ಎಲ್ಲವೂ ಒಂದಾಗದೆ ಇರಲಾರದು ಎಂದು ಪರೋಜಿನಿಯವರು ಅಭಿಪ್ರಾಯಪಟ್ಟಿದ್ದಾರೆ.

ಬರ್ಮಾ ಹೋರಾಟ

ಬರ್ಮಾದ ಚಿನ್‌ಗುಡ್ಡ ಪ್ರದೇಶದಲ್ಲಿರುವ ಮಿತ್ರರ ದೂರ ಸೈನ್ಯ ಈಗ ಅಲ್ಲಿನ ಶತ್ರು ದಳಗಳಿಗೆ ಹೋರಾಟ ಕೊಡುತ್ತಿದೆ. ಈ ಮಿತ್ರ ದಳ ಈಗ ಕೆಯೋಕ್ಟಾ ಎಂಬ ಪಟ್ಟಣವನ್ನು ಗೆದ್ದು ಉಳಿಸಿಕೊಂಡಿದೆ.

ಸಾರ್ವಜನಿಕ ಸಭೆ

ಸ್ವಂ.ಸು.] ಮೈಸೂರು ೨೯

ರಾಜಧಾನಿಯ ರಾಷ್ಟ್ರೀಯ ರಕ್ಷಣಾ ಬಲದ ಆಶ್ರಯದಲ್ಲಿ ಮೈಸೂರು ಅದಿಕಾರ ಟೆಕ್ಕುದರಲ್ಲಿ ೩೧ ನೇ ತಾ|| ಸೋಮವಾರ ಸಂಜೆ ಸಾರ್ವಜನಿಕ ಸಭೆ ನಡೆಯಲೇರ್ಪಾಡಾಗಿದೆ. ಆ ಸಭೆಯಲ್ಲಿ ರಾಷ್ಟ್ರೀಯ ರಕ್ಷಣಾಬಲದ ವಿಷಯವಾಗಿ ಉಪನ್ಯಾಸಗಳಾಗುತ್ತವೆ.

ಮೊಹಲ್ಲಾ ಪರಿಶೀಲನೆ

ಮೈಸೂರು ಪೌರಸಭಾ ಸದಸ್ಯರುಗಳು ಮೊಹಲ್ಲಾ ನಿವಾಸಿಗಳ ಕುಂದು ಕೊರತೆಗಳನ್ನು ತಿಳಿದುಕೊಳ್ಳಲು ತಾ|| ೩೦–೧–೪೪ ನೇ ಪ್ರಾತಃಕಾಲ ೯ ಘಂಟೆಯಿಂದ ೧೧ ಘಂಟೆಯವರೆವಿಗೆ ಲಷ್ಕರ್ ಮೊಹಲ್ಲಾ, ಗಾಂಧಿ ಚೌಕ, ರವೆ ಬೀದಿ, ಹಳ್ಳದ ಕೇರಿ, ಅಶೋಕ ರಸ್ತೆಗಳಲ್ಲಿ ಸಂಚರಿಸುತ್ತಾರೆ. ಅಲ್ಲಿನ ನಿವಾಸಿಗಳು ತಮ್ಮ ಮೊಹಲ್ಲಾ ಕುಂದುಕೊರತೆಗಳನ್ನು ತಿಳಿಸಬೇಕೆಂದು ಮೈಸೂರು ಸಿಟಿ ಮುನಿಸಿಪಲ್ ಕಾಂಗ್ರೆಸ್ ಪಾರ್ಟಿಯವರು ಕೋರುತ್ತಾರೆ.

ವಿಶ್ವಸಾಹಿತ್ಯ ಸಂಘ

ಇದೇ ಮಾಹೆ ೩೧ ನೇ ತಾ|| ಸೋಮವಾರ ಸಾಯಂಕಾಲ ರಾಜಧಾನಿಯ ಮಿಡ್ಲ್ ಸ್ಕೂಲಿನಲ್ಲಿ, ಮೇಲ್ಕಂಡ ಸಂಘದ ಆರಂಭೋತ್ಸವವನ್ನು ಮಹಾರಾಜಾ ಕಾಲೇಜಿನ ಅಧ್ಯಾಪಕರಾದ ಶ್ರೀ ಸಿ. ಆರ್. ನರಸಿಂಹಶಾಸ್ತ್ರಿಗಳವರು ನೆರವೇರಿಸುವರು. ಇದರ ಅಂಗವಾಗಿ ಶ್ರೀ ಕೆ. ಸಿ. ಮುತ್ತಣ್ಣನವರಿಂದ ನೃತ್ಯವನ್ನು ಏರ್ಪಡಿಸಲಾಗಿದೆ.

ಪೋಲೀಸ್ ಇನ್‌ಸ್ಪೆಕ್ಟರ್ ಜನರಲ್‌ಗಳು

ಸಂಸ್ಥಾನದ ಪೋಲೀಸ್ ಇಲಾಖೆಗೆ ಇಬ್ಬರು ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲೀಸ್‌ರವರನ್ನು ನೇಮಿಸಲು ಮೈಸೂರು ಸರ್ಕಾರದ ಆಜ್ಞೆಯಾಗಿದೆ. ಆ ಸ್ಥಾನಗಳಿಗೆ ಶ್ರೀ ಎಂ. ಕೆ. ಸೋಮಪ್ಪ ಮತ್ತು ಶ್ರೀ ಮುತ್ತೋಜಿರಾವ್ ಸಿಂಧ್ಯರವರು ಬರಬಹುದೆಂದು ಹೇಳಲಾಗುತ್ತಿದೆ.

ತುಂಗಭದ್ರಾನೀರಿನ ಹಂಚಿಕೆ

ತುಂಗಭದ್ರಾ ನದಿಗೆ ಮದರಾಸ್ ಸರ್ಕಾರದವರು ಕಟ್ಟಬೇಕೆಂದಿರುವ ಅಣೆಕಟ್ಟಿನ ಬಗ್ಗೆ ನದಿಯ ನೀರಿನ ಹಂಚಿಕೆ ವಿಷಯವಾಗಿ ಮದರಾಸ್ ಗೌರ್ನರರ ಅಡ್ವೈಸರ್ ಶ್ರೀ ಎಸ್. ವಿ. ರಾಮಮೂರ್ತಿಯವರು ಬೆಂಗಳೂರಿಗೆ ಬಂದು ಮೈಸೂರು ಸರ್ಕಾರದೊಡನೆ ಮಾತುಕತೆ ನಡೆಸುತ್ತಿದ್ದರಷ್ಟೆ. ಈಗ ಇಬ್ಬರೂ ಒಂದು ಒಪ್ಪಂದಕ್ಕೆ ಬಂದಿರುವರೆಂದು ಗೊತ್ತಾಗಿದೆ.

ವಿನಾಶಕಾರಕ ಚಳುವಳಿ ಬಗ್ಗೆ ಕಾನೂನು

ಮೈಸೂರು ಸರ್ಕಾರಕ್ಕೆ ವಿರೋಧವಾಗಿಯಾಗಲೀ ಮತ್ತು ಮಹಾರಾಜರ ಸೈನ್ಯಕ್ಕೆ ವಿರುದ್ಧವಾಗಿಯಾಗಲಿ ಅಥವಾ ಸಾರ್ವಭೌಮ ಸರ್ಕಾರದ ಯುದ್ಧ ಕಾರ್ಯಗಳಿಗೆ ವಿರೋಧವಾಗಿಯಾಗಲಿ ಚಳುವಳಿ ನಡೆಸುವವರಿಗೆ ದಂಡನೆ ಮರಣದಂಡನೆಯ ಶಿಕ್ಷೆ ವಿಧಿಸುವುದಕ್ಕೋಸ್ಕರ ತಯಾರಾಗಿರುವ ಮೈಸೂರಿನ ವಿನಾಶಕ ಚಳುವಳಿ ಕಾನೂನು ಇದೇ ೧೭ ನೇ ತಾ|| ಶ್ರೀಮನ್ಮಹಾರಾಜರವರ ಒಪ್ಪಿಗೆ ಪಡೆಯಿತೆಂದು ಸರ್ಕಾರದವರು ಪ್ರಕಟಿಸಿರುವರು.

ಕಾಂಗ್ರೆಸ್ಸಿನ ಸಹಕಾರ ಹಸ್ತ

ಸರ್ಕಾರ ಆಹಾರ ಪರಿಸ್ಥಿತಿಯನ್ನು ಉತ್ತಮಗೊಳಿಸಲು ಸರ್ಕಾರದೊಡನೆ ಕಲೆತು ಕೆಲಸಮಾಡಲು ಮೈಸೂರು ಕಾಂಗ್ರೆಸ್ ಈಗಲೂ ಸಿದ್ಧವಾಗಿದೆ. ಸರ್ಕಾರದ್ದೇ ಸಹಕಾರ ಬೇಡವೆಂಬ ಬಾಲ ಸ್ವ... ಎಂಬುದಾಗಿ ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕೆ. ಸಿ. ರೆಡ್ಡಿಯವರು ತಮ್ಮ ಇತ್ತೀಚಿನ ಭಾಷಣದಲ್ಲಿ ತಿಳಿಸಿರುವರು.

ನಾಮಕರಣದ ನೀತಿ

ರಾಜಧಾನಿಯ ಪತ್ರಿಕೋದ್ಯೋಗಿ ಸಂಘದವರು ಶಿವಮೊಗ್ಗದ ಶ್ರೀ ಭೂಪಾಳಂ ... ಬನಸಾಡಿಕೊಂ... ... ಕಾಂಗ್ರೆಸ್ಸಿನವರು ಸರ್ಕಾರದಿಂದ ... ಎವ ಸ್ವಾತಂತ್ರ್ಯವನ್ನು ಸ್ವೀಕರಿಸಿಕೊಳ್ಳುವ ಬಗ್ಗೆ ... ಅದ್ದರಿಂದ ಶಿವಮೊಗ್ಗದಲ್ಲಿ ... ನಮ್ಮ ಸರ್ಕಾರ ... ಕೇಂದ್ರ ಆಹಾರ ಸಮಿತಿಯಲ್ಲಿ ... ಈ ವಿಷಯದಲ್ಲಿ ಕಾಂಗ್ರೆಸ್ಸಿನ ನೀತಿ ... ಆಹಾರ ಪರಿಸ್ಥಿತಿಯ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ... ತಿಳಿಸಿದರು.

ಜರ್ಮನರ ಬಳಿ ೪೦೦ ಸಬ್ ಮರೀನ್

ಜರ್ಮನರು ಯುದ್ಧಾರಂಭ ಕಾಲದಲ್ಲಿ ೭೦ ಸಬ್ ಮರೀನ್ಗಳೊಡನೆ ಸಮರ ಪ್ರಾರಂಭಿಸಿದರು. ಅವರು ಈಗ ೪೦೦ ಸಬ್ ಮೆರೀನ್ಗಳಿಗಿಂತ ಹೆಚ್ಚು ಹೊಂದಿರುವರು. ಇತ್ತೀಚೆಗೂ ಅಟ್ಲಾಂಟಿಕ್ ಸಾಗರ ಸಮರದಲ್ಲಿ ಅವರು ಸೋಲು ಪಡೆಯುತ್ತಿರುವರು ಎಂದು ರಾಯಲ್ ಇಂಡಿಯನ್ ನೌಕಾದಳದ ಫ್ಲಾಗ್ ಆಫೀಸರ್ ವೈಸ್ ಅಡ್ಮಿರಲ್ ಜಿ. ಹೆಚ್. ಗಾಡ್ಫ್ರೇಯವರು ಹೇಳಿದ್ದಾರೆ.

ಚಳಿಗಾಲ

ಅತ್ಯುತ್ತಮವಾದ ರಗ್ಗುಗಳಿಗೂ, ವುಲ್ಲನ್ ಕೋಟಿಂಗ್, ಕಂಬಳಿ ವಸ್ತ್ರಗಳಿಗೂ ಎಲ್ಲೂ ಹುಡುಕಬೇಡಿ.

ನೇರವಾಗಿ ನಮ್ಮಲ್ಲಿಗೆ ಬನ್ನಿ. ಕಡಿಮೆ ಬೆಲೆಗೆ ಉತ್ತಮವಾದ ಮಾಲು ಹೊಂದುವಿರಿ

ಜಿ. ವಿ. ಸೂರ್ಯನಾರಾಯಣ ಶೆಟ್ಟಿ ಅಂಡ್ ಸನ್ಸ್

ಜೂಯಲರ್ಸ್ & ಪಿಡಿಗೋಡ್ಸ್ ಪ್ರೆಸ್ ಎಂಪೋರಿಯಂ,

ಸಯ್ಯಾಜಿರಾವ್ ರೋಡ್, ಮೈಸೂರು

ಕಾರ್ಮಿಕರಿಗೆ ಪರಿಹಾರ

ಕೆಲಸ ಮಾಡುತ್ತಿರುವಾಗ ಕಾರ್ಮಿಕರು ಅಕಸ್ಮಾತ್ತಾಗಿ ಮೃತರಾದರೆ ಅಂಥವರಿಗೆ ಪರಿಹಾರ ಕೊಡಬೇಕೆಂದು ಕೇಂದ್ರ ಸರ್ಕಾರ ಒಂದು ಆಜ್ಞೆಯನ್ನು ಹೊರಡಿಸಿದೆ.

ಅಮೇರಿಕನರ ಹೊಸ ಅಸ್ತ್ರ

ಸಿಸಿಲಿ, ಬ್ರಿಟನ್ನಿನ ಆರಾಮ ಮತ್ತು ಗಿಲ್ಬರ್ಟ್ ದ್ವೀಪದಲ್ಲಿ ಇತ್ತೀಚೆಗೆ ಹೊಸ ಗುಪ್ತ ಆಯುಧವನ್ನು ಅಮೇರಿಕನರು ಶತ್ರುಗಳ ಮೇಲೆ ಉಪಯೋಗಿಸಿದರೆಂದೂ, ಅದು ಬೆಂಕಿ ಚೆಲ್ಲುವ ರಾಕೆಟ್ಗಳೆಂದೂ ಗೊತ್ತಾಗಿದೆ.

ನಾಜಿಗಳ ವಾಪಸಾಗುವ ಯೋಚನೆ

ಮಿತ್ರ ಆಕ್ರಮಣ ಭೀತಿಗೊಳಗಾಗಿ ... ನಾಜಿಗಳು ಆಕ್ರಮಿಸಿಕೊಂಡ ಅನೇಕ ಪ್ರದೇಶಗಳಿಂದ ತಮ್ಮ ಸೇನೆಗಳನ್ನು ವಾಪಸು ಕರೆಸಿಕೊಳ್ಳಲು ಜರ್ಮನ್ ಯುದ್ಧ ಅಧಿಕಾರಿಗಳಿಗೆ ಸೂಚನೆಗಳನ್ನು ಕೊಟ್ಟಿದೆಯೆಂದು ಗೊತ್ತಾಗಿದೆ.

ಸ್ವೀಡ್ ಸರ್ಕಾರದ ಭರವಸೆ

ಸ್ವೀಡನ್ನಿಂದ ಬ್ರಿಟನ್ನಿಗೆ ಬರುತ್ತಿರುವ ಸಾಮಾನುಗಳು ಜಹಜುಗಳಲ್ಲಿ ಕಿತ್ತಲೆಹಣ್ಣಿನ ಪೆಟ್ಟಿಗೆಗಳಲ್ಲಿ ಬಾಂಬುಗಳಿರುತ್ತಿದ್ದುವಷ್ಟೆ. ಇವನ್ನು ಕಾರಣರಾದವರನ್ನು ಪತ್ತೆಮಾಡಿ ಶಿಕ್ಷಿಸುವುದಲ್ಲದೆ ಮುಂದೆ ಇಂತಹ ಅನಾಹುತಗಳಿಗೆ ಅವಕಾಶವಾಗದಂತೆ ನೋಡಿಕೊಳ್ಳುವುದಾಗಿ ಸ್ವೀಡ್ ಸರ್ಕಾರವು ಬ್ರಿಟನರಿಗೆ ಭರವಸೆಕೊಟ್ಟಿದೆ

ಹರಾಜು ನೋಟೀಸು

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸ ಪಡುವದೇನೆಂದರೆ:-ಮೈಸೂರು ಸಿಟಿ ಇಂಪ್ರೂವ್ಮೆಂಟ್ ಟ್ರಸ್ಟ್ ಬೋರ್ಡಿಗೆ ಸೇರಿದ ಹೊಸ ಸಂತೇಪೇಟೆ ಎಕ್ಸ್ಟೆನ್ಷನ್ನಲ್ಲಿ ನ್ಯೂ ಸಯ್ಯಾಜಿರಾವ್ ರೋಡಿಗೆ ಎದುರಿನಲ್ಲಿರುವ ಅತ್ಯುತ್ತಮವಾದ ೧೯ ಹಾಸ್ ಸೈಟುಗಳನ್ನು ತಾರೀಖು ೨೦-೧-೪೪ನೇ ಸೋಮವಾರ ಬೆಳಿಗ್ಗೆ ೧೧ ಗಂಟೆಗೆ ... ತಾರೀಖು ೧೬-೧-೪೪ ನೇ ... ಹರಾಜು ... ಬಹಿರಂಗವಾಗಿ ಸೈಟುಗಳ ಒಳ ಹರಾಜು ಮಾಡಲಾಗುತ್ತೆ. ವಿವರಗಳನ್ನು ಆಫೀಸಿನಲ್ಲಿ ತಿಳಿಯಬಹುದು

(ಸಹಿ)

ಆರ್. ರಾಮಚಂದ್ರರಾವ್

ಚೇರ್ಮನ್ ... ಬೋರ್ಡ್,

ಛೇರ್ಮನ್.

ಶ್ರೀ ಭಾರತೀ ಸಂಘ

ಭಾರತದ ಮಹಾಪುರುಷರ ಬಗ್ಗೆ ಚರ್ಚಾ ಸ್ಪರ್ಧೆ ಏರ್ಪಡಿಸಿದ್ದ ಅಖಿಲ ಕರ್ನಾಟಕ ಪ್ರಬಂಧ ಸ್ಪರ್ಧೆಯಲ್ಲಿ ಬಹುಮಾನ ಪಡೆದವರ ಹೆಸರುಗಳು:—

ಪ್ರಥಮ ಬಹುಮಾನ: ಮೈಸೂರು ಮಹಾರಾಣಿ ಹೈಸ್ಕೂಲಿನ ಬಿ. ಆರ್. ಪದ್ಮ ... ಮತ್ತು ಬೆಂಗಳೂರು ಸೆಂಟ್ರಲ್ ಕಾಲೇಜಿನ ಎಲ್. ಎಸ್. ಶೇಷಗಿರಿರಾವ್ ಮತ್ತು ನಿಜಾಪುರ ಎಸ್. ಎಸ್. ಹೈಸ್ಕೂಲಿನ ಬಸವಕುಮಾರ ಎಲ್. ಪಾಟೀಲರವರಿಗೆ.

ದ್ವಿತೀಯ ಬಹುಮಾನ: ಮೈಸೂರು ಮಹಾರಾಜ ಸಂಸ್ಕೃತ ಕಾಲೇಜಿನ ಕೆ. ಎಸ್. ... ಮತ್ತು ... ಮಹಾರಾಣಿ ಹೈಸ್ಕೂಲಿನ ಕೆ. ವಿ. ... ಇವರುಗಳಿಗೆ.

ತೃತೀಯ ಬಹುಮಾನ: ಮೈಸೂರು ಟ್ರೈನಿಂಗ್ ಕಾಲೇಜಿನ ಎಂ. ನೇಮಿಪ್ರಸಾದ್, ತುಮಕೂರು ಇಂಟರ್ ಕಾಲೇಜಿನ ಗುರು ಶ್ರೀನಿವಾಸಮೂರ್ತಿ ಮತ್ತು ಮೈಸೂರು ಮಹಾರಾಣಿ ಹೈಸ್ಕೂಲಿನ ಎಸ್. ಸುಶೀಲ ಮತ್ತು ಚಿಕ್ಕನಾಗಪ್ಪನ ಎಸ್. ನಾಗಲಕ್ಷ್ಮಿ ಮತ್ತು ... ಎಸ್. ಕೆ. ... ನಾಲ್ಕನೆ ಬಹುಮಾನ: ಮೈಸೂರು ಮಹಾರಾಜ ಸಂಸ್ಕೃತ ಕಾಲೇಜಿನ ಬಿ. ನರಸಿಂಹಾಚಾರ್ಯ, ... ಇಂಟರ್ ... ಕಾಲೇಜಿನ ಎಲ್. ನಂಜುಂಡ ... ಮತ್ತು ಮೈಸೂರು ಮಹಾರಾಣಿ ಹೈಸ್ಕೂಲಿನ ಎಸ್. ಕೆ. ... ಇವರಿಗೆ. ಐದನೆ ಬಹುಮಾನ: ಮೈಸೂರು ಮಹಾರಾಜ ... ಟ್ರೈನಿಂಗ್ ... ಕಾಲೇಜಿನ ... ಎಸ್. ನಾಗರತ್ನಮ್ಮ ಮತ್ತು ... ಸಿ. ಜಿ. ... ಕ್ರಿಶ್ಚಿಯನ್ ಹೈಸ್ಕೂಲಿನ ಬಿ. ... ಮೈಸೂರು ... ಹೈಸ್ಕೂಲಿನ ಕೆ. ... ಇವರಿಗೆ ... ಬಹುಮಾನವನ್ನು ಕೊಡಲಾಗಿದೆ.

Edited, printed and published by A. R. Nagaraju, at the Sadhvi Press, D. Subbiah Road, Mysore.

ಹೊರುವಳಿ ಅತೋಟಿ

... ಲ್ಲ ಅಧಿಕಾರಿಗಳ ... ಸರ್ಕಾರದ ... ಕೆಲವು ವರ್ತಕರು ... ಗಳನ್ನು ಜಿಲ್ಲೆಯಿಂದ ಜಿಲ್ಲೆಗೆ ಸಾಗಿಸಲು ... ಪರವಾನಗಿ ಪಡೆಯಬೇಕೆಂದು ... ಇದರಿಂದ ನಮ್ಮ ಮೈಸೂರು ... ಕ್ಕೆ ... ಕೆಲವು ... ಕಾರ್ಯ ... ಪಡೆದು ... ಅನೇಕ ... ದಿನನಿತ್ಯ ... ಪದಾರ್ಥ ... ಸರ್ಕಾರದವರು, ಸ್ಟೇಟ್ ... ಮಾಡಬೇಕು ...

ಚೌಡಯ್ಯ

ಸತ್ತವರ ಸಂಖ್ಯೆ ತಿಳಿಯದು

ಕ್ಷಾಮ ಮತ್ತು ಅಂಟು ಜಾಡ್ಯದ ದೆಸೆಯಿಂದ ಭಾರತದಲ್ಲಿ ಸಾಯುತ್ತಿರುವವರ ಸಂಖ್ಯೆ ಎಷ್ಟು ಎಂಬ ಪ್ರಶ್ನೆಗೆ, ನಿಷ್ಕೃಷ್ಟ ಅಂಕಿಗಳು ಇನ್ನೂ ತಿಳಿದು ಬಂದಿಲ್ಲವೆಂದು ಮಿ॥ ಅಮೆರಿ ... ಉತ್ತರ ... ಭಾರತದಲ್ಲಿ ... ಮಿ॥ ... ಬಂಗಾಳದಲ್ಲಿ ... ಪ್ರಶ್ನೆಗೆ ... ಎಂದು ಹೇಳಿದ್ದಾರೆ.

ಬಂಗ್ಲೆ ಬಿಕರಿಗಿದೆ

Door No. 4535, ... ಹೊಸಬೀದಿ ... ಕಟ್ಟಿದ, ... ಸೈಟು 90×100

—ವಿವರಗಳಿಗೆ—

ಆರ್. ಗೋಪಾಲರಾವ್,

ಮೈಸೂರು.

ಮೈಸೂರು ನಾಟಕ ಸಂಘ

೨೦—೧—೪೪ ನೇ ಭಾನುವಾರ

ಸಂಜೆ ೭ ಗಂಟೆಗೆ

ಮೈಸೂರು ಟೌನ್ ಹಾಲಿನಲ್ಲಿ

ಇಂದೂರು ರಾಣಿ ಅಹಲ್ಯಾಬಾಯಿ

ಮಲ್ಹಾರರಾಯನ ಮರಣ, ಪತಿಯ ನಂತರ ಆದ ಭ್ರಾಂತಿ, ಅಹಲ್ಯಾಬಾಯಿಯ ... ಮುಕ್ತಾಬಾಯಿಯ ... ಅಹಲ್ಯೆಯ ಕ್ಷಮಾಗುಣ, ... ರಾಜಭಕ್ತಿ, ... ಭರ್ಮಜೋಶಿ, ... ನೋಡಿ ...

... ದೃಶ್ಯ ...

ಶ್ರೀ ...

... ಪ್ರಸಿದ್ಧ ...

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿ ಪುಡಿ

... ಬಳಸಿರಿ

ಬಿ. ಪುಟ್ಟಣ್ಣಯ್ಯ ಅಂಡ್ ಸನ್ಸ್, ದೇವರಾಜ ಮಾರ್ಕೆಟ್, ಮೈಸೂರು

... ಆಫೀಸಿನಲ್ಲೂ ... ಕೊಡಲಾಗುತ್ತೆ ...

ಸಂಪುಟ ೨] ಭಾನುವಾರ ೩೦--೧--೪೪ [ಸಂಚಿಕೆ ೧೬೬

ರೋಂ ಉಳಿಸಿಕೊಳ್ಳಲು ಜರ್ಮನರ ವಿಶ್ವಪ್ರಯತ್ನ

ವಿಷವಾಯು ಪ್ರಯೋಗವನ್ನೆದುರಿಸಲು ಬ್ರಿಟನ್ನಿನಲ್ಲಿ ಸಿದ್ಧತೆ
ಸರೋಜಿನಿ ಮೇಲೆ ಕೇಂದ್ರಸರ್ಕಾರದ ಪ್ರತಿಬಂಧಕಾಜ್ಞೆ

ಜಾಮೀನು ಅರ್ಜಿ

ಸ್ವಂ.ವ.] ಮೈಸೂರು ೨೦

ಡಿಫೆನ್ಸ್ ಶಾಸನ ರೀತ್ಯಾ ಬಂಧಿಸಲ್ಪಟ್ಟು ರಿಮ್ಯಾಂಡಿನಲ್ಲಿರುವ ರಾಜಧಾನಿಯ ಕಾಂಗ್ರೆಸ್ ಕೆಲಸಗಾರರಾದ ಶ್ರೀ ಟಿ. ಎಸ್. ಸುಬ್ಬಣ್ಣನವರ ಮೇಲೆ ಪೋಲೀಸಿನವರು ನಿನ್ನೆ ದಿನ ಡಿಫೆನ್ಸ್ ಕಾನೂನಿನ ೩೮ ೧(b) ಮತ್ತು ೬ ೩೬ ನೇ ನಿಯಮಗಳ ಪ್ರಕಾರ ಚಾರ್ಜ್‌ಷೀಟ್ ಹಾಕಿದರು. ಅವರು ತಮ್ಮ ಬಳಿ ಸ್ವಾತಂತ್ರ್ಯ ದಿನಾಚರಣೆಗೆ ಸಂಬಂಧಪಟ್ಟ ಆಕ್ಷೇಪಣೆಕರವಾದ ಕರಪತ್ರಿಕೆಗಳನ್ನಿಟ್ಟುಕೊಂಡಿದ್ದರೆಂದೂ, ಊರು ರಸ್ತೆಯ ಮೇಲೆ ಯುದ್ಧ ವಿರುದ್ಧ ಘೋಷಣೆಗಳನ್ನು ಬರೆಯುತ್ತಿದ್ದರೆಂದೂ ಅಪಾದನೆ ಮಾಡಲಾಗಿದೆ.

ಶ್ರೀ ಸುಬ್ಬಣ್ಣನವರನ್ನು ಜಾಮೀನಿನ ಮೇಲೆ ಬಿಡುವಂತೆ ಅಡ್ವೊಕೇಟ್ ಶ್ರೀ ಕೆ ಶೇಷಾದ್ರಿಯವರು ಕೋರಿ ಅರ್ಜಿ ಸಲ್ಲಿಸಿದರು. ೨೧ ನೇ ತಾ|| ಸೋಮವಾರ ಈ ಬಗ್ಗೆ ಆಜ್ಞೆ ಆಗುವುದು. ಮೊಕದ್ದಮೆಯು [illegible] ೧೧ ನೇ ತಾ|| ಫೆಬ್ರವರಿಗೆ ಮುಂದುವರಿಸಲಾಗಿದೆ.

ಗೀತಾ ಭವನ

ರಾಜಧಾನಿಯ ಗೀತಾ ಪ್ರಚಾರಿಣೀ ಸಭೆಗಾಗಿ 'ಗೀತಾಭವನ' ವೆಂಬ ಹೆಸರಿನ ಒಂದು ಕಟ್ಟಡವನ್ನು ಕಟ್ಟಲು ಬಸ್ವಾರ್ ಮೊಹಲ್ಲಾ ವೆಲ್ಲಿಂಗ್‌ಟನ್ ಲಾಡ್ಜ್ ಬಳಿ ಟ್ರಸ್ಟ್ ಬೋರ್ಡಿನವರು ೧೫೦೨ ರೂ. ಗೆ ಒಂದು ನಿವೇಶನವನ್ನು ಕೊಟ್ಟಿದ್ದಾರೆ. ಕಟ್ಟಡವು ಸದ್ಯದಲ್ಲೇ ಆರಂಭವಾಗಲಿದೆ. ಅನೇಕ ಮಹನೀಯರು ಸಹಾಯ ಮಾಡಿದ್ದಾರೆ. ಇನ್ನೂ ಮಹಾಜನರಿಂದ ವಿಶೇಷವಾದ ಸಹಾಯವು ಆಗಬೇಕಾಗಿದೆ.

ಹೊರ ಹೋಗುತ್ತಿದ್ದ ಧಾನ್ಯ ತಡೆದದ್ದಕ್ಕೆ ಕಲ್ಲಿನೇಟು

೨೩ ದಿನಗಳ ಕೆಳಗೆ ಮೈಸೂರು ಗಡಿ ಚಿಕ್ಕ ಮಾಗಡಿ ಬಳಿ ಕಳ್ಳತನದಲ್ಲಿ ಹೊರಕ್ಕೆ ಸಾಗುತ್ತಿದ್ದ ಭತ್ತ ಮತ್ತು ಅಕ್ಕಿಯನ್ನು ಗಡಿ ಕಾವಲಿನ ಪೋಲೀಸರು ತಡೆಯಲಾಗಿ ಚಿಕ್ಕೇರೂರಿನ ಸುಮಾರು ೪೦ ೫೦ ಜನ ಕಾವಲಿನವರ ಮೇಲೆ ಕಲ್ಲುಗಳನ್ನೆಸೆದು ಹಿಡಿದರೆಂದೂ ಪೋಲೀಸಿನವರಿಗೆ ಗಾಯವಾಯಿತೆಂದೂ ಒಂದು ವರದಿ ತಿಳಿಸುತ್ತದೆ.

ಸಟ್ಟಾ ವ್ಯಾಪಾರಕ್ಕೆ ನಿಷೇಧ

ಬರುವ ತಿಂಗಳು ೨೧ ನೇ ತಾ|| ನಿಂದಾಚೆಗೆ [illegible], ಕೊಬ್ಬರಿ, ಅಡಿಕೆ, ಏಲಕ್ಕಿ, ಮೆಣಸಿನಕಾಯಿ, ಲವಂಗ, ಮೆಣಸು, ದಾಲ್ಚಿನ್ನಿ, ಜೀರಿಗೆ, ಅರಿಸಿನ ಮತ್ತು ಜಾಯಿಕಾಯಿ. ಈ ಪದಾರ್ಥಗಳ ಸಟ್ಟಾ ವ್ಯಾಪಾರ ನಡೆಸಕೂಡದೆಂದು ಸರ್ಕಾರ ನಿಷೇಧಿಸಿದೆ. ಮುಂಗಡವಾಗಿ [illegible]ಗಳನ್ನು ಮಾಡಿಕೊಂಡಿರುವ [illegible]ಗೆ ಮಾತ್ರ ಈ ನಿಷೇಧದಿಂದ ವಿನಾಯಿತಿ ಉಂಟು.

ಬರ್ಲಿನ್ ಮೇಲೆ ಬಾಂಬು

ಮಿತ್ರ ಪಕ್ಷ ವಿಮಾನಗಳು ಮತ್ತೆ ಬರ್ಲಿನ್ ಮೇಲಕ್ಕೆ ದಾಳಿ ಹೋಗಿ ೧೫೦೦ ಟನ್ ಬಾಂಬುಗಳನ್ನು ಸುರಿದು ಬಂದಿರುವರು. ಆ ನಗರವನ್ನು [illegible] ಕಳೆದ ೨ ತಿಂಗಳಲ್ಲಿ ಬರ್ಲಿನ್ ಮೇಲೆ ೩೦ ಸಹಸ್ರ ಟನ್ ತೂಕದ ಬಾಂಬುಗಳನ್ನು ಸುರಿಸಲಾಗಿದೆ.

ಸರೋಜಿನಿಯವರಿಗೆ ಭಾರತ ಸರ್ಕಾರದ ಆಜ್ಞೆ

ಭಾರತದ ಯಾವ ಸ್ಥಳದಲ್ಲೂ ನೀವು ಮೆರವಣಿಗೆ ಸಭೆ ಮುಂತಾದುವುಗಳಲ್ಲಿ ಭಾಗವಹಿಸಕೂಡದು, ಯಾವ ಪತ್ರಿಕೆಗೂ ಹೇಳಿಕೆ ಕೊಡಕೂಡದು ಮತ್ತು ಪತ್ರಿಕೆಗಳವರೊಡನೆ ವ್ಯವಹರಿಸಕೂಡದು ಎಂದು ಇಂಡಿಯಾ ಸರ್ಕಾರದವರು ಶ್ರೀಮತಿ ಸರೋಜಿನಿಯವರ ಮೇಲೆ ಪ್ರತಿಬಂಧಕಾಜ್ಞೆಯನ್ನು ಹಾಕಿರುವರು.

ಸರೋಜಿನಿಯವರ ಕಾರ್ಯಕ್ರಮ

ಮೊನ್ನೆ ರಾತ್ರಿ ಸರೋಜಿನಿ ನಾಯಿಡು ರವರು ಲಾಹೋರಿನಿಂದ ದೆಹಲಿಗೆ ಹೊರಟರು. ನಾಳಿದ್ದು ೧ ನೇ ತಾ|| ದೆಹಲಿಯಿಂದ ಕಲ್ಕತ್ತೆಗೆ ಹೊರಟು ಅಲ್ಲಿ [illegible] ಮತ್ತು ಅನಾಥ ಶಿಶುಗಳ ಸಂರಕ್ಷಣಾ ಕಾರ್ಯಕ್ಕಾಗಿ ಹೋಗಲಿದ್ದಾರೆ. ಅವರೊಡನೆ ಡಾ|| ಬಿ ಸಿ ರಾಯ್‌ರವರೂ ಹೋಗುವರು. ಮುಂದಿನ ತಿಂಗಳು ೩ನೇ ವಾರದ ವೇಳೆಗೆ ಸರೋಜಿನಿಯವರು ಬೊಂಬಾಯಿ ಸೇರುವರೆಂದು ಗೊತ್ತಾಗಿದೆ.

ಸಿಧ್ವರ ಖುಲಾಸೆ

ಸಿಂಧ್ ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ಆರ್. ಕೆ ಸಿಧ್ವರವರು ಹೃದಯ ರೋಗದಿಂದ ನರಳುತ್ತಿರುವ ಕಾರಣ ಪೆರೋಲ್ ಮೇಲೆ ಕರಾಚಿ ಸೆರೆಮನೆಯಿಂದ ಹೊರಗೆ ಬಂದು ಲಾಹೋರಿನಲ್ಲಿ ಚಿಕಿತ್ಸೆ ಹೊಂದುತ್ತಿರುವರು. ಅವರನ್ನು ಖುಲಾಸೆ ಮಾಡಿರುವುದಾಗಿ ಸಿಂಧ್ ಸರ್ಕಾರವು ಪ್ರಕಟಿಸಿದೆ.

ಭಕ್ಷ್ಯ ಭೋಜ್ಯಕ್ಕೂ ಮಿತಿ

ಹೋಟೆಲಿನವರು ಯಾರ ಊಟಕ್ಕೂ ಮೂರು ವಿಧವಾದ ಭಕ್ಷ್ಯಭೋಜ್ಯಗಳಿಗಿಂತ ಹೆಚ್ಚು ಮಾಡಕೂಡದೆಂದೂ ಅವರ ಬಿಲ್ಲು ೪ ರೂ ೧೧ [illegible] ಮೀರಕೂಡದೆಂದೂ ದೆಹಲಿ ಹೋಟೆಲಿನವರಿಗೆ ಸರ್ಕಾರದ ಆಜ್ಞೆಯಾಗಿದೆ. ಊಟಕ್ಕೆಂದಿಗೆ ತೆಗೆದುಕೊಳ್ಳಬಹುದಾದ ಮಾಂಸಕ್ಕೂ [illegible]ಗಳ ಬೆಲೆಯನ್ನು ಆ [illegible] ಜೊತೆಗೆ ಸೇರಿಸಿ ಹೆಚ್ಚು ಭಕ್ಷ್ಯಭೋಜ್ಯಗಳನ್ನು ನೀಡಬಹುದೆಂದು [illegible] ಮಾಡಿಕೊಳ್ಳಲಾಗಿದೆ.

ವಿಷವಾಯುವನ್ನೆದುರಿಸಲು ಬ್ರಿಟಿಷರ ಸಿದ್ಧತೆ

ದ್ವಿತೀಯ ರಣರಂಗ ಪ್ರಾರಂಭವಾದೊಡನೆಯೇ ಜರ್ಮನರು ಪ್ರತೀಕಾರವಾಗಿ ಬಿರುಸು ಕಾರ್ಯಕ್ರಮಗಳನ್ನು ಕೈಗೊಳ್ಳುವ ಕಾರಣ ಅವರು ವಿಷವಾಯುವನ್ನು ಪ್ರಯೋಗಿಸಬಹುದು. ಅದನ್ನು ತಡೆದುಕೊಳ್ಳಲು ನಾವು ಸಿದ್ಧರಾಗೋಣ-ಎಂದು ಬ್ರಿಟನ್ನಿನ ವಿಮಾನ ಘಾತಿ ಶಾಖೆಯ ಇನ್ಸ್‌ಪೆಕ್ಟರ್ ಜನರಲ್‌ರವರು ಎಚ್ಚರಿಸಿದ್ದಾರೆ.

ತುರ್ಕಿ-ರಷ್ಯಾ ಒಪ್ಪಂದವಾಗುವುದೇ ?

ತುರ್ಕಿಗೂ ರಷ್ಯಾಕ್ಕೂ ಪರಸ್ಪರ ಒಪ್ಪಂದದ ಸಲುವಾಗಿ ಮಾತುಕತೆಗಳ ಪೀಠಿಕೆ ಈಗಾಗಲೆ ಮೊದಲಾಗಿರುವುದಾಗಿ ಹೇಳಲಾಗುತ್ತಿದೆ. ಡಾರ್ಡನೆಲ್ಸ್ ಮತ್ತು ತುರ್ಕಿ ಇತರ ಕಾಲೋನಿಗಳ ಬಗ್ಗೆ ರಷ್ಯಾ ದೇಶವು ಆಸೆ ಹೊಂದಿಲ್ಲವೆಂಬುದು ಗ್ಯಾರಂಟಿಯಾಗುವ ತನಕ ತುರ್ಕಿ ದೇಶವು ಯುದ್ಧಕ್ಕಿಳಿಯುವುದಿಲ್ಲವೆಂದೂ ಆಕ್ಸಿಸ್ ಮೇಲೆ ಬೀಳಲು ತುರ್ಕಿ ಸೇನೆ ಬಲ್ಗೇರಿಯಾ ಮುಖೇನ ಬರಬೇಕಾಗಿರುವುದರಿಂದ ಅದಕ್ಕೆ ಅವಕಾಶವಾಗಬೇಕಾಗಿದೆಯೆಂದೂ ಅಂಕಾರಾದಲ್ಲಿ ಅಭಿಪ್ರಾಯಪಡಲಾಗಿದೆ.

ರೋಂ ಹೊರಗೆ ಸೈನ್ಯ ಜಮಾವಣೆ

ರೋಂ ಕಡೆಗೆ ನುಗ್ಗುತ್ತಿರುವ ಮಿತ್ರರ ಒತ್ತಡ ಬಲವಾಗಿದೆ. ಜರ್ಮನರು ರೋಂ ನಗರವನ್ನು ಉಳಿಸಿಕೊಳ್ಳುವ ಸಲುವಾಗಿ ರೋಂ ಹೊರಗಡೆ ತಮ್ಮ ಸೇನೆಗಳನ್ನು ಅಧಿಕ ಸಂಖ್ಯೆಯಲ್ಲಿ ಜಮಾಯಿಸುತ್ತಿರುವರು. ಅತಿ ಘೋರತರ ಕದನ ಜರುಗುವ ಸಂಭವ ಇದೆ.

ಲ್ಯೂಬಾನ್ ರಷ್ಯ ವಶ

ಲೆನಿನ್‌ಗ್ರಾಡಿಗೆ ಆಗ್ನೇಯ ದಿಕ್ಕಿನಲ್ಲಿರುವ ಲ್ಯೂಬಾನ್ ಎಂಬ ಪ್ರಮುಖ ರೈಲ್ವೆ ನಿಲ್ದಾಣವನ್ನು ಮತ್ತಿತರ ೮ ಊರುಗಳನ್ನೂ ರಷ್ಯನರು ವಶಪಡಿಸಿಕೊಂಡಿರುವರು. ಲೆನಿನ್‌ಗ್ರಾಡ್ ಕ್ಷೇತ್ರದಲ್ಲಿ ಜರ್ಮನರು ಹಿಮ್ಮೆಟ್ಟುತ್ತಿರುವರು. ಜರ್ಮನರ ವಶದಲ್ಲಿ ಉಳಿದಿರುವ ಒಂದೇ ಒಂದು ರೈಲ್ವೆ ಜಂಕ್ಷನ್ ಸ್ಥಾನವಾದ ಚುಡುವೋವನ್ನು ರಷ್ಯನರು ಸಂಪೂರ್ಣವಾಗಿ ಸುತ್ತುಗಟ್ಟಿ ಅಲ್ಲಿರುವ ಜರ್ಮನರನ್ನು ನಾಶ ಮಾಡುತ್ತಿರುವರು.

ಬ್ಲೇಡ್, ಸಿಗರೇಟ್ ಇತ್ಯಾದಿಗಳ ಬೆಲೆ ನಿಗದಿ

ಬ್ಲೇಡ್, ಟೆನಿಸ್ ಚೆಂಡು, ಸೋಪು, ಸಿಗರೇಟು ಮೊದಲಾದುವುಗಳ ಮಾರಾಟದ ಬೆಲೆಯನ್ನು ಕೇಂದ್ರ ಸರ್ಕಾರದವರು ಗೊತ್ತುಪಡಿಸಿದ್ದಾರೆ. ೧೦ ಬ್ಲೇಡುಗಳನ್ನೊಳಗೊಂಡ ಒಂದು ಪೆಟ್ಟಿಗೆಗೆ ೧೨ ಆಣೆಯಿಂದ ಎರಡೂವರೆ ರೂ. ವರೆವಿಗೆ ಬೆಲೆ ನಿಗದಿಯಾಗಿದೆ. ೫೦ ಸಿಗರೇಟುಗಳ ಡಬ್ಬಕ್ಕೆ ೧೫ ಆಣೆಯಿಂದ ೩ ರೂ|| ವರೆವಿಗಾಗುವುದು.

ಇಟಲಿ ಜನರಲ್‌ಗಳ ವಿಚಾರಣೆ

ಮಿತ್ರರಿಗೆ ಅನುಕೂಲವಾಗುವ ರೀತಿ ವ್ಯವಹರಿಸಿದರೆಂಬ ಕಾರಣಕ್ಕಾಗಿ ಇಟಲಿ ಸೇನೆಯ ೬ ಮಂದಿ ಜನರಲ್‌ಗಳನ್ನೂ ೫ ಮಂದಿ ಅಡ್ಮಿರಲ್‌ಗಳನ್ನೂ ಜರ್ಮನರು ಅವರಿಗಾಗಿ ನಿಯಮಿಸಿರುವ ಕೋರ್ಟಿನ ಮುಂದೆ ಹಾಜರ್ ಪಡಿಸಿ ವಿಚಾರಣೆ ನಡೆಸುವರೆಂದು ಗೊತ್ತಾಗಿದೆ.

ಯೋಟಮಾಲ್‌ನವರು ಉಲ್ಕಾಪಾತ ಕಂಡರು

ನಾಗಪುರದ ಬಳಿ ಯೋಟಮಾಲ್ ಎಂಬ ಸ್ಥಳದ ನಿವಾಸಿಗಳು ಇದೇ ೨೬ ನೇ ತಾ|| ಆಕಾಶದಲ್ಲಿ ಒಂದು ಅದ್ಭುತವನ್ನು ಕಂಡರು. ಮೊತ್ತ ಆಕಾಶದ ವಿಶೇಷ ಬೆಳಕಿನ ಉಲ್ಕಾಪಾತ ಒಂದು ಬಹು ಹೊತ್ತು ಕಾಣಿಸಿಕೊಂಡು ಒಂದು ರೀತಿ ಶಬ್ದ ಮಾಡಿ ಪಶ್ಚಿಮ ದಿಕ್ಕಿಗೆ ಹೋಗುತ್ತ ಹೋಗುತ್ತಾ ಕಣ್ಮರೆಯಾದ ಸಂಗತಿ ವರದಿಯಾಗಿದೆ.

ಬರೋಡಾ ಪ್ರಭುಗಳ ವಿವಾಹ ಖಂಡನೆ

ಬೊಂಬಾಯಿನ ವಿವಿಧ ಭಾಗಗಳ ಸ್ತ್ರೀ ಸಂಘಗಳವರು ಒಟ್ಟುಗೂಡಿ ಸಭೆ ಸೇರಿ ಬರೋಡಾ ಮಹಾರಾಜರು ಎರಡನೇ ಮದುವೆಯಾದ ಪ್ರಸಂಗವನ್ನು ತೀವ್ರವಾಗಿ ಖಂಡಿಸಿ ಮಹಾರಾಜರ ಬಗ್ಗೆ ಅಸಮಾಧಾನ ಸೂಚಿಸಿದ್ದಾರೆ. ಆ ಸಭೆಗೆ ಶ್ರೀಮತಿ ಅನ್ನಪೂರ್ಣ ದೇಶಮುಖ್‌ರವರು ಅಧ್ಯಕ್ಷರಾಗಿದ್ದರು. ೪೦೦ ಮಂದಿ ಹೆಂಗಸರು ಸಭೆಗೆ ಬಂದಿದ್ದರು.

ರೋಂ ಬಳಿ ಇರುವ ಮಿತ್ರರು

ರೋಂಗೆ ದಕ್ಷಿಣದಲ್ಲಿ ಈಗಾಗಲೆ ಮಿತ್ರರು ೬ ಮೈಲಿ ವಿಸ್ತಾರವಾಗಿ ಹರಡಿಕೊಂಡಿರುವರು. ಇದಕ್ಕೆ ಪೂರ್ವ ದಿಕ್ಕಿಗೆ ೩ ಮೈಲಿ ಆಚೆ ಉಗ್ರ ಕದನ ಜರುಗುತ್ತಿದೆ.

ಸ್ಪೈನ್‌ಗೆ ಪೆಟ್ರೋಲ್ ತಪ್ಪಿತು

ಸ್ಪೈನ್ ದೇಶವು ಅನುಸರಿಸುತ್ತಿರುವ ನೀತಿಯು ಸಮಾಧಾನಕರವಾಗಿಲ್ಲವಾಗಿರುವ ಪ್ರಯುಕ್ತ ಆ ದೇಶಕ್ಕೆ ಪೆಟ್ರೋಲ್ ಮುಂತಾದವುಗಳನ್ನು ರಫ್ತು ಮಾಡಕೂಡದೆಂದು ಅಮೆರಿಕಾ ಸರ್ಕಾರವು ನಿರ್ಧರಿಸಿದೆ.

ಮೈಸೂರು ಜಿಲ್ಲೆ ಡಿ. ಎಸ್. ಪಿ.

ಮೈಸೂರು ೨೦

ಮೈಸೂರು ಜಿಲ್ಲೆಯ ಡಿ.ಎಸ್.ಪಿ. ಅಧಿಕಾರಕ್ಕೆ ಬೆಂಗಳೂರು ಡಿ. ಎಸ್. ಪಿ. [illegible]ರವರನ್ನು ನೇಮಿಸಿ ಅವರ ಸ್ಥಾನಕ್ಕೆ ಬೆಂಗಳೂರು ಎ. ಆರ್.ಪಿ. ಅಧಿಕಾರಿಗಳಾದ ಶ್ರೀ ಸಿ. ಬಿ. ರಂಗಪ್ಪಯ್ಯಂಗಾರ್‌ರವರನ್ನು ನೇಮಿಸಲಾಗುವದೆಂದು ಗೊತ್ತಾಗಿದೆ.

ಹೆಂಡದಂಗಡಿಗಳು ದೂರ ಹೋಗಬೇಕು

ರಾಜಧಾನಿಯ ಪೌರಸಭೆಯ ಕಾರ್ಯಕಲಾಪಗಳು

ಸಂ. ಪ.] ಮೈಸೂರು ೩೦

ನಿನ್ನೆ ಸಾಯಂಕಾಲ ಶ್ರೀ ರಾಮಚಂದ್ರ ರಾವ್ ಪೋತೋಜಿಯವರ ಅಧ್ಯಕ್ಷತೆಯಲ್ಲಿ ಮೈಸೂರು ಪೌರಸಭೆಯ ವಿಶೇಷ ಸಭೆ ನಡೆಯಿತು. ಮೊದಲಿನಂತೆ ಸರ್ಕಾರದ ಕಾರ್ಯಕ್ರಮ ಸಮಿತಿಗಳ ಕಾರ್ಯಕಲಾಪಗಳ ರಿಪೋರ್ಟಿನ ಮೇಲೆ ಸಭೆಯ ಕೆಲಸ ಆರಂಭವಾಯಿತು.

ಸ್ವಚ್ಛ ವಿಭಾಗ ಆಸ್ಪತ್ರೆಯ ಒಂದು ಮನೆಯ ಮಸೂದೆಯ ಬಗ್ಗೆ ಶ್ರೀ ಎಂ. ಆರ್. ಶ್ರೀನಿವಾಸನವರು ಹಾಕಿದ್ದ ಪ್ರಶ್ನೆಗಳಿಗೆ ಅಧ್ಯಕ್ಷರು ಉತ್ತರ ಕೊಟ್ಟರು.

ಆಡಳಿತ ವರದಿ

ಪೌರಸಭೆಯ ಆಡಳಿತ ವರದಿಯ ವಿಚಾರವಾಗಿ ದೀರ್ಘ ಚರ್ಚೆ ನಡೆಯಿತು. ಈ ವರದಿಯಲ್ಲಿ ಯಾವ ಯಾವ ಅಂಶಗಳ ವಿವರಗಳನ್ನು ಕೊಡಬೇಕೆಂದು ಎರಡು ವರ್ಷದ ಹಿಂದೆಯೇ ಸೂಚಿಸಲಾಗಿತ್ತೋ ಆ ಕ್ರಮವನ್ನು ಅನುಸರಿಸದೆ ಇರುವುದರ ಬಗ್ಗೆ ಆಕ್ಷೇಪಣೆ ಮಾಡಲಾಯಿತು. ಶ್ರೀ ಗೋಪಾಲ ಆ ಪಿ ನಂಜಪ್ಪ, ಸಿ. ಸೀತಾರಾಮಯ್ಯ, ಎಂ. ಮಹಮದ್ ಸೇಟ್, ಆಹಮದ್ ಖಾನ್, ಶ್ರೀ ಬಿ ನಾರಾಯಣಸ್ವಾಮಿ ಇವರುಗಳು ಭಾಷಣ ಮಾಡಿ, ಈ ವರದಿಯು ಎಷ್ಟು ಅಸಂಪೂರ್ಣವಾಗಿದೆಯೆಂದು ಹೇಳಿದರು. ಸಭೆಯವರು ಕೇಳಿರುವ ವಿವರಗಳಿಲ್ಲವೂ ಅವರು ಕೇಳಿರುವ ಕ್ರಮದ ಸ್ಥಾನದಲ್ಲಿ ಇಲ್ಲದಿದ್ದರೂ ಬೇರೆ ಬೇರೆ ಸ್ಥಳಗಳಲ್ಲಿ ಸಂಪೂರ್ಣವಾಗಿ ಕೊಡಲ್ಪಟ್ಟಿವೆಯೆಂದು ಅಧ್ಯಕ್ಷರು ತಿಳಿಸಿದರು. ಪೌರಸಭಾ ಸದಸ್ಯರ ಪ್ರಶ್ನೆಗಳು ಕೂಡ ಅದರಲ್ಲಿಲ್ಲ ವೆಂಬುದನ್ನು ಶ್ರೀ ಬಿ ನಾರಾಯಣಸ್ವಾಮಿಯವರು ತಿಳಿಸಿದರು. ಇನ್ನು ಮುಂದೆ ಸಭೆಯವರ ಸೂಚನೆಯಂತೆ ಸೆಪ್ಟೆಂಬರ್ ತಿಂಗಳೊಳಗೇ ವರದಿಯನ್ನು ತಯಾರು ಮಾಡಿ ಒಂದು ವಿಶೇಷ ಸಭೆಯ ಮುಂದೆ ಇಡಬೇಕೆಂದೂ ಈಗ ಬಿಟ್ಟುಹೋಗಿರುವ ಅಂಶಗಳನ್ನು ಸೇರಿಸಿ ಸರ್ಕಾರಕ್ಕೆ ಕಳುಹಿಸಬಹುದೆಂದೂ ತೀರ್ಮಾನವಾಯಿತು.

ನಮ್ಮದು ಕನ್ನಡ ದೇಶ, ನಮ್ಮನ್ನಾಳುವವರು ಕನ್ನಡ ಪ್ರಭುಗಳು, ನಮ್ಮ ಸಭ್ಯರೂ ಕನ್ನಡದವ್ರ—ಆದ್ದರಿಂದ ನಮ್ಮ ಪೌರಸಭೆಯ ವರದಿಯನ್ನು ಕನ್ನಡದಲ್ಲಿಯೇ ತಯಾರಿಸಬೇಕೆಂದು ಶ್ರೀ ರಂಗನಾಮಯ್ಯನವರು ಹೇಳಿದರು.

ಗುಡಿಸುವವರ ಮಕ್ಕಳಿಗೆ ಶಾಲೆ

ಜಲಪುರಿಯಲ್ಲಿ ಗುಡಿಸುವವರ ಮಕ್ಕಳಿಗಾಗಿ ಒಂದು ಸ್ಕೂಲು ಕಟ್ಟಡವನ್ನು ಕಟ್ಟಿಸಲು ಅಂದಾಜು ತಯಾರಿಸಬೇಕೆಂಬ ನಿರ್ಣಯವನ್ನು ಶ್ರೀ ಆ. ಪಿ. ನಂಜಪ್ಪನವರು ತಂದರು. ಹರಿಜನರು ಮತ್ತು ಹಿಂದುಳಿದವರ ಜ್ಞಾನಾರ್ಜನೆಗೆ ಪ್ರೋತ್ಸಾಹ ಕೊಡುವುದು ಪೌರಸಭೆಯ ಕರ್ತವ್ಯವೆಂದು ಹೇಳಿದರು. ವಿದ್ಯಾಭ್ಯಾಸದ ಕಾರ್ಯಕ್ರಮವನ್ನು ಪೌರಸಭೆಯಿಂದ ತಪ್ಪಿಸಿ ಸರ್ಕಾರದವರೇ ವಹಿಸಿಕೊಂಡಿರುವರು; ಇದಕ್ಕಾಗಿ ರೂ. ಗೆ ಎರಡಾಣೆ ತೆಂಗೆಯನ್ನು ಹಾಕಿರುವರು, ಆದ್ದರಿಂದ ಈ ಕೆಲಸವನ್ನು ಸರ್ಕಾರದವರಿಂದಲೇ ಮಾಡಿಸಬೇಕು, ಎಂದು ಮಿ॥ ಮಹಮದ್ ಸೇಟರು ಹೇಳಿದರು. ಗುಡಿಸುವವರ ಹಿತಚಿಂತನೆಯು ಪೌರಸಭೆಯ ಒಂದು ವಿಶೇಷ ಜವಾಬ್ದಾರಿಯಾಗಿರುವುದರಿಂದ ಇದಕ್ಕೆ ಸಹಾಯ ಮಾಡಬೇಕೆಂದು ಶ್ರೀ ಬಿ. ನಾರಾಯಣಸ್ವಾಮಿಯವರು ಹೇಳಿದರು. ಇದು ಸರ್ಕಾರದವರ ಕರ್ತವ್ಯವೆಂದೂ, ಈ ಬಗ್ಗೆ ಜಿಲ್ಲಾ ವಿದ್ಯಾಧಿಕಾರಿಗಳಿಗೆ ತಾವು ಬರೆದಿರುವುದಾಗಿಯೂ ಅಧ್ಯಕ್ಷರು ತಿಳಿಸಿದರು. ಸ್ಕೂಲು ಕಟ್ಟಡವನ್ನು ಕಟ್ಟಿಸಲು ಒಂದು ಅಂದಾಜನ್ನು ತಯಾರಿಸುವಂತೆ ನಿರ್ಣಯವಾಯಿತು.

ಹೆಂಡದಂಗಡಿಗಳು ಹೋಗಬೇಕು

ಊರಿನೊಳಗಿರುವ ಹೆಂಡದಂಗಡಿಗಳನ್ನು ತೆಗೆದುಹಾಕಬೇಕೆಂಬ ನಿರ್ಣಯವನ್ನು ಶ್ರೀ ಎ ಕೃಷ್ಣಮೂರ್ತಿಯವರು ಸೂಚಿಸಿದರು. ದೇವಸ್ಥಾನಗಳು, ಸಂಸಾರಿಕರ ಮನೆಗಳು ಮತ್ತು ದೊಡ್ಡ ದೊಡ್ಡ ರಸ್ತೆಗಳ ಸಮೀಪದಲ್ಲಿ ಈ ಅಂಗಡಿಗಳಿರುವುದು ಈ ಮಾದರಿ ನಗರಕ್ಕೆ ಒಂದು ಕಳಂಕವೆಂದು ಅವರು ತಿಳಿಸಿದರು. ಶ್ರೀ ಸತ್ಯನಾರಾಯಣರಾಯರು ಅನುಮೋದಿಸಿ ಹೆಂಡವನ್ನು ಕುಡಿದು ರಸ್ತೆಗಳಲ್ಲಿ ಕುಡುಕರು ಮಾಡುವ ಹಾವಳಿಯನ್ನು ವಿವರಿಸಿದರು. ಶ್ರೀ ಸಿದ್ಧಯ್ಯನವರು ಹೆಂಡ ಕುಡಿಯುವುದನ್ನೇ ಸಂಪೂರ್ಣವಾಗಿ ವಜಾ ಮಾಡಬೇಕೆಂದು ಹೇಳಿದರು. ನಿರ್ಣಯವು ಮಂಜೂರಾಯಿತು.

ಹಣಕಾಸಿನ ಸ್ಥಿತಿ

ಪೌರಸಭೆಯ ಹಣಕಾಸಿನ ಸ್ಥಿತಿಯನ್ನು ವಿವರಿಸುವ ಒಂದು ವಿಮರ್ಶಾತ್ಮಕ ಹೇಳಿಕೆಯನ್ನು ಅಧ್ಯಕ್ಷರು ಸಭೆಯ ಮುಂದಿಡಬೇಕು— ಎಂಬ ನಿರ್ಣಯವನ್ನು ಶ್ರೀ ಬಿ. ನಾರಾಯಣಸ್ವಾಮಿಯವರು ಸೂಚಿಸಿದರು. ಶ್ರೀ ಸಿ. ಸೀತಾರಾಮಯ್ಯನವರು ಅನುಮೋದಿಸಿದರು. ಹೊಸ ವರ್ಷದ ಬಜೆಟ್ಟನ್ನು ತಯಾರಿಸುವ ಕಾಲವು ಸಮೀಪಿಸುತ್ತಿದೆಯೆಂದೂ ಆ ಸಮಯಕ್ಕೆ ಎಲ್ಲಾ ವಿವರಗಳನ್ನೂ ಕೊಡುವುದಾಗಿಯೂ ಅಧ್ಯಕ್ಷರು ತಿಳಿಸಿದರು. ಈಗ ಹೊಸ ಸಭೆಯು ರಚನೆಯಾಗಿರುವುದರಿಂದ ಅದಕ್ಕೆ ಹಣಕಾಸಿನ ಸ್ಥಿತಿಯು ತಿಳಿಯಬೇಕಾದುದು ಅಗತ್ಯವೆಂದು ಶ್ರೀ ಸಿ. ಸೀತಾರಾಮಯ್ಯನವರು ಹೇಳಿದರು. ನಿರ್ಣಯವು ಅಂಗೀಕೃತವಾಯಿತು.

ಅನಂತರ ಪ್ರಸಿದ್ಧೀಕರಣ ಸಮಿತಿ, ಪ್ರಚಾರ ಸಮಿತಿ, ಆರೋಗ್ಯ ಸಮಿತಿ, ಇವೇ ಮುಂತಾದುವುಗಳಿಗೆ ಸದಸ್ಯರನ್ನು ಚುನಾಯಿಸಲಾಯಿತು.

ರಾಜಧಾನಿಯ ವಿವಿಧ ಮೊಹಲ್ಲಾಗಳಲ್ಲಿ ನಡೆಯಬೇಕಾದ ಕಾರ್ಯಗಳ ಬಗ್ಗೆ ಹಣಗಳನ್ನು ಮಂಜೂರು ಮಾಡಲಾಯಿತು.

ರೆವಿನ್ಯೂ ಅಧಿಕಾರಿಗೆ ಶಿಕ್ಷೆ

ಲಂಚ ಪಡೆದರೆಂಬ ಅಪಾದನೆಗೆ ಗುರಿಯಾದ ಕೊಳ್ಳೇಗಾಲ ತಾಲ್ಲೂಕಿನ ಉಡಮಲೆಪೇಟೆಯ ಶ್ರೀ ಜಿ ಸೌಂದರರಾಜಯ್ಯಂಗಾರ್ ಎಂಬ ರೆವಿನ್ಯೂ ಅಧಿಕಾರಿಗಳಿಗೆ, ಅವರ ಮೇಲಿನ ಅಪಾದನೆ ರುಜುವಾತಾಗಿ ಜಿಲ್ಲಾ ನ್ಯಾಯಾಧೀಶರು ೧೮ ತಿಂಗಳು ಕಠಿನ ಶಿಕ್ಷೆ ಮತ್ತು ೧೫೦೦ ರೂ. ದಂಡವನ್ನು ವಿಧಿಸಿದ್ದಾರೆ.

ರಂಗೂನಿಗೆ ಏಟು

ಮೊನ್ನೆ ರಾತ್ರಿ ಬ್ರಿಟಿಷ್ ವಿಮಾನಗಳ ತಂಡವು ರಂಗೂನ್ ಮೇಲಕ್ಕೆ ಹೋಗಿ ಬಾಂಬುಗಳನ್ನು ಕೆಡವಿ ಬಂದವೆಂದು ವರದಿಯಾಗಿದೆ.

ಉಕ್ರೈನ್ ರಾಜಧಾನಿ

ಉಕ್ರೈನಿನ ಸೋವಿಯಟ್ ಸೋಷಲಿಸ್ಟ್ ರಿಪಬ್ಲಿಕ್ ಸರ್ಕಾರದ ರಾಜಧಾನಿಯನ್ನು ಕೀವ್ ನಗರಕ್ಕೆ ಬದಲಾಯಿಸಿಕೊಂಡಿರುವರೆಂದು ಗೊತ್ತಾಗಿದೆ.

ಚಳಿಗಾಲ

ಅತ್ಯುತ್ತಮವಾದ ರಗ್ಗುಗಳಿಗೂ, ವುಲ್ಲನ್ ಕೋಟಿಂಗ್, ಕಂಬಳಿ ವಗೈರೆಗಳಿಗೂ ಎಲ್ಲೂ ಹುಡುಕಬೇಡಿ.

ನೇರವಾಗಿ ನಮ್ಮಲ್ಲಿಗೆ ಬನ್ನಿ. ಕಡಿಮೆ ಬೆಲೆಗೆ ಉತ್ತಮವಾದ ಮಾಲು ಹೊಂದುವಿರಿ

ಜಿ. ವಿ. ಸೂರ್ಯನಾರಾಯಣ ಶೆಟ್ಟಿ ಅಂಡ್ ಸನ್ಸ್

ಜೂಯಲರ್ಸ್ & ರೆಡಿಮೇಡ್ ಡ್ರೆಸ್ ಎಂಪೋರಿಯಂ,

ಸಯ್ಯಾಜಿರಾವ್ ರೋಡ್, ಮೈಸೂರು

Edited, printed and published by A R Nagarajan at the Sadhvi Press, D.Subbiah Road, Mysore.

ಸ್ತ್ರೀಯರ ಸೌಕರ್ಯಕ್ಕಾಗಿ

೧-೧-೧೯೪೪ ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿರುತ್ತೆ

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿ ಪುಡಿ

ಯನ್ನೇ ಉಪಯೋಗಿಸಿ

ಡಿ. ಪುಟ್ಟಣ್ಣ ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ಪಿ. ಜಿ. - ಕಲ್ಲಿನ ಮತ್ತು ಗಂಗೋತ್ರಿ ರೇಷನ್ ಆಫೀಸಿನಲ್ಲೂ ರವೆ, ಗೋಧಿಹಿಟ್ಟು ಮತ್ತು ಮೈದಾ ಹಿಟ್ಟು, ಸಹ ದೊರೆಯುತ್ತೆ. ಅಲ್ಲದೆ ಬೂರಾ ಮತ್ತು ಕಲ್ಲು ಸಕ್ಕರೆ ರೇಷನ್ ಕಾರ್ಡುಗಳಿಗೆ ದೊರೆಯುತ್ತವೆ

ಹೊಸದಾಗಿ ಬಂದಿವೆ !

Truthful READY MADE CLOTHES MADURA

ಹೊಲೆದು ಸಿದ್ಧಪಡಿಸಿರುವ ತರತರವಾದ ಮಕ್ಕಳ ಹೊಸ ಮಾದರಿ ಉಡುಪುಗಳು, ಫ್ರಾಕುಗಳು, ಜಂಪರುಗಳು.

ಹೊಸ ಮಾದರಿಯ ಸೀರೆಗಳು ಮತ್ತು ರವಿಕೆಗಳು ಇಲ್ಲಿ ದೊರೆಯುತ್ತವೆ.

ಸ್ವಸ್ತಿಕ್ ಸ್ಟೋರ್ಸ್

ರಾಮಪ್ರಕಾಶ್ ಭವನ, ಸಾಹುಕಾರ್ ಕೆರೆ, ಮೈಸೂರು.

ಅಪೇರಾ ಟಾಕೀಸ್

ಪ್ರತಿ ದಿನ ಮೂರು ಆಟಗಳು

2-2-44 ರಿಂದ



(ಹಿಂದಿ) ನಾದಾನ್ (ಹಿಂದಿ)

ನಟವರ್ಗ:—ನೂರ್‌ಜಹಾನ್, ಮಸೂದ್, ನಾಯಮಾಪೇಠಿ

ಸಂಪುಟ ೮] ಸೋಮವಾರ ೩೧--೧--೪೪ [ಸಂಚಿಕೆ ೧೩

ಜುಡೋವ್ರೊ ನಗರ ರಷ್ಯನರ ವಶ

ವ್ಯವಸಾಯಗಾರರ ಸಮ್ಮೇಳನಕ್ಕೂ ಪ್ರತಿಬಂಧಕ

ಪ್ರೊ॥ ಭನ್ಸಾಲಿಯವರ ದಸ್ತಗಿರಿ

ಸತ್ಕಾರ ಕೂಟ

ಸ್ವಂ.ಸ.] ಮೈಸೂರು ೩೧

ಮೈಸೂರು ಸಂಸ್ಥಾನದ ಹಣಕಾಸಿನ ಕಾರ್ಯದರ್ಶಿಗಳಾದ ಶ್ರೀ ಎಂ. ವೀರರಾಜೇ ಅರಸಿನವರಿಗೆ ಶ್ರೀಮನ್ಮಹಾರಾಜರವರು ರಾಜಸೇವಾ ಪ್ರಸಕ್ತ ಎಂಬ ಬಿರುದನ್ನು ದಯಪಾಲಿಸಿದುದಕ್ಕಾಗಿ ಶ್ರೀಯುತರನ್ನು ಅಭಿನಂದಿಸಲು ಮೈಸೂರಿನ ಅರಸು ವರ್ಗದವರ ರಾಜಧಾನಿಯ ಅರಸು ಬೋರ್ಡಿಂಗ್ ಸ್ಕೂಲಿನಲ್ಲಿ ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದರು.

ಈ ಸಮಾರಂಭಕ್ಕೆ ಅನೇಕ ಮಾನ್ಯ ಮಹನೀಯರುಗಳು ಆಹ್ವಾನಿತರಾಗಿದ್ದರು.

ತಾಲ್ಲೂಕ್ ಸಮ್ಮೇಳನ

ಫೆಬ್ರವರಿ ೫ ನೇ ಶನಿವಾರ ಮಧ್ಯಾಹ್ನ ೧ ಗಂಟೆಗೆ ನಂಜನಗೂಡಿನ ಮುನಿಸಿಪಲ್ ಕಟ್ಟಡದಲ್ಲಿ ನಂಜನಗೂಡು ತಾಲ್ಲೂಕು ಸಮ್ಮೇಳನವು ಮೈಸೂರು ಜಿಲ್ಲಾ ಬೋರ್ಡ್ ಅಧ್ಯಕ್ಷರಾದ ಶ್ರೀ ಕೆ ಸಿ ಸುಬ್ಬಣ್ಣನವರ ಅಧ್ಯಕ್ಷತೆಯಲ್ಲಿ ಜರುಗಲಿದೆ.

ಸುಬ್ರಹ್ಮಣ್ಯಸ್ವಾಮಿ ಆರಾಧನೆ

ಮೈಸೂರು ನಜರ್‌ಬಾದ್ ರೋಡಿನಲ್ಲಿರುವ ಶ್ರೀ ಸುಬ್ರಹ್ಮಣ್ಯೇಶ್ವರಸ್ವಾಮಿಯವರ ದೇವಸ್ಥಾನದಲ್ಲಿ ಶ್ರೀ ಸುಬ್ರಹ್ಮಣ್ಯಸ್ವಾಮಿ ಆರಾಧನೆಯನ್ನು ಇದೇ ೨೯ ಮತ್ತು ೩೦ ನೇ ತಾ॥ ಗಳಲ್ಲಿ ಸದರಿ ದೇವಸ್ಥಾನದ ಟ್ರಸ್ಟಿಗಳೂ ಮತ್ತು ಪಂಡಿತ ನಂಜುಂಡಪ್ಪನವರೂ ಭಕ್ತಾದಿಗಳ ಸಹಾಯದಿಂದ ಬಹಳ ವಿಜೃಂಭಣೆಯಿಂದ ನಡೆಸಿದರು. ಭಾರಿ ಸಂತರ್ಪಣೆ ಸಹ ನಡೆಯಿತೆಂದು ತಿಳಿದುಬಂದಿದೆ.

ಕೇಂದ್ರ ಶಾಸನ ಸಭೆಯಲ್ಲಿ ಏಳಲಿರುವ ಪ್ರಶ್ನೆಗಳು

ಶ್ರೀಮತಿ ಸರೋಜಿನಿ ನಾಯಿಡುರವರ ಮೇಲೆ ಹಾಕಲಾಗಿರುವ ಪ್ರತಿಬಂಧಕಾಜ್ಞೆ ಬಗ್ಗೆಯೂ, ಡಿಹಲಿಯ "ನ್ಯಾಷನಲ್ ಕಾಲ್" ಮತ್ತು "ಹಿಂದೂಸ್ಥಾನ ಟೈಂಸ್" ಪತ್ರಿಕೆಗಳ ಮೇಲೆ ಹಾಕಲಾಗಿರುವ ನಿಷೇಧಾಜ್ಞೆ ವಿಚಾರವಾಗಿಯೂ ಬರುವ ಕೇಂದ್ರ ಶಾಸನ ಸಭೆಯಲ್ಲಿ ಪ್ರಶ್ನೆಗಳು ಏಳುವ ಸಂಭವವಿದೆಯೆಂದು ಹೇಳಲಾಗಿದೆ.

ನ್ಯಾಷನಲಿಸ್ಟ್ ಪಕ್ಷದ ಜಂಟಿ ಕಾರ್ಯದರ್ಶಿಗಳಾದ ಶ್ರೀ ಆರ್. ಆರ್. ಗುಪ್ತರವರು, ಶ್ರೀಮತಿ ಸರೋಜಿನಿಯವರು ಜೈಲಿನಿಂದ ಬರೆದ ಕಾಗದ ಪತ್ರಗಳನ್ನು ಸರ್ಕಾರದವರು ಪ್ರಕಟಿಸಲು ತಯಾರಾಗಿರುವರೇ? ಎಂಬ ಪ್ರಶ್ನೆ ಶಾಸನ ಸಭೆ ಮುಂದೆ ಚರ್ಚೆಗೆ ಬರಲು ಸೂಚಿಸಿ ಕೊಟ್ಟಿರುವರೆಂದೂ ತಿಳಿದಿದೆ.

ನ್ಯೂಯಾರ್ಕಿನಲ್ಲಿ ಭಾರತ ಸ್ವಾತಂತ್ರ್ಯ ದಿನೋತ್ಸವ

ಭಾರತಕ್ಕೆ ಸ್ವಾತಂತ್ರ್ಯ ಕೊಡಬೇಕೆಂದು ಮತ್ತು ವಿ ೨೬ ನೇ ತಾ॥ ನ್ಯೂಯಾರ್ಕಿನ ಟೌನ್‌ಹಾಲ್‌ನಲ್ಲಿ ಸಭೆ ನಡೆಸಿದರು. ಆ ಸಭೆಯಲ್ಲಿ ಭಾಗವಹಿಸಿದ್ದರು. ಅವರೆಲ್ಲರೂ ನ್ಯೂಯಾರ್ಕಿನ ವಿವಿಧ ಸಂಘಗಳ ಪ್ರತಿನಿಧಿಗಳು. ಆ ಸಭೆಯನ್ನು ಅಧ್ಯಕ್ಷರು ತೋರಿಸಿದಂತೆ ಆಚರಣೆ ಮೇಲೆ ನ್ಯೂಯಾರ್ಕ್ ಪೋಲೀಸರು ದಸ್ತಗಿರಿ ಮಾಡಿದರೆಂದು ವರದಿಯಾಗಿದೆ.

ಪ್ರೊ॥ ಭನ್ಸಾಲಿಯವರ ಕೈಸೆರೆ

ವಾರ್ಧಾ ಜಿಲ್ಲಾ ನ್ಯಾಯಾಧೀಶರು ಇದೇ ೨೫ ನೇ ತಾ॥ ನಿಂದ ೨೭ ನೇ ತಾ॥ ವರೆವಿಗೆ ವಾರ್ಧಾದಲ್ಲಿ ಸ್ವಾತಂತ್ರ್ಯ ದಿನಾಚರಣೆ ಸಂಬಂಧವಾಗಿ ಸಭೆಗಳಾಗಲೀ, ಮೆರವಣಿಗೆಗಳಾಗಲೀ, ಪ್ರದರ್ಶನಗಳಾಗಲೀ ಒಂದೂ ನಡೆಯಕೂಡದೆಂದು ನಿಷೇಧಿಸಿದ್ದರು. ೨೬ ನೇ ತಾ॥ ಸ್ವಾತಂತ್ರ್ಯ ದಿನಾಚರಣೆ ಸಂಬಂಧವಾಗಿ ಪ್ರೊ॥ ಭನ್ಸಾಲಿಯವರೂ ಮತ್ತಿತರರೂ ವಾರ್ಧಾದಲ್ಲಿ ಮೆರವಣಿಗೆ ಹೊರಟಿದ್ದ ಕಾರಣ ಪ್ರೊ॥ ಭನ್ಸಾಲಿಯವರನ್ನೂ ಮತ್ತು ಅವರ ಜೊತೆಯಲ್ಲಿದ್ದ ೮ ಮಂದಿಯನ್ನೂ ಪೋಲೀಸರು ದಸ್ತಗಿರಿ ಮಾಡಿರುವರೆಂದು ತಿಳಿದುಬಂದಿದೆ.

ವಿಕ್ಟರ್ ದೊರೆ ಸಿಂಹಾಸನ ತ್ಯಜಿಸಲಿ

ಇಟಲಿಯ ಪ್ರಸಕ್ತ ಪರಿಸ್ಥಿತಿಯಿಂದ ವಿಕ್ಟರ್ ಎಮಾನ್ಯುಯಲ್ ದೊರೆಗಳು ಸಿಂಹಾಸನ ತ್ಯಾಗಮಾಡಬೇಕಾದುದು ಆವಶ್ಯಕವಾದ ಪ್ರಥಮ ಕರ್ತವ್ಯವೆಂದು ಇಟಲಿ ಸ್ವಾತಂತ್ರ್ಯ ಚಳುವಳಿ ಸಂಘಗಳವರು ಬಾರಿಯಲ್ಲಿ ನಡೆಸಿದ ಸಮ್ಮೇಳನದಲ್ಲಿ ಠರಾವು ಮಾಡಿದ್ದಾರೆ.

ಚರಕಾ ವ್ರತಕ್ಕೆ ಐರ್ಲೆಂಡ್ ಪ್ರಧಾನಿಗಳ ಬೆಂಬಲ

ಚರಕದಲ್ಲಿ ನೂಲು ತೆಗೆದು ತಾವೇ ನೇಯ್ದ ಬಟ್ಟೆಯನ್ನು ಉಪಯೋಗಿಸತಕ್ಕದ್ದೆಂಬುದಾಗಿ ಐರ್ಲೆಂಡ್ ಸ್ವತಂತ್ರ ರಾಜ್ಯದ ಪ್ರಧಾನ ಮಂತ್ರಿಗಳಾದ ಡಿ ವಲೆರಾ ಅವರು ನೆಹರೂ ಮುಂತಾದವರ ... ಬರೆದ ಲೇಖನ ... ಸಭೆಯಲ್ಲಿ ... ವರದಿ ಮಾಡಿದ್ದಾರೆ.

ನಾಜಿಗಳ ದುಷ್ಕೃತ್ಯಕ್ಕೆ ಸ್ವೀಡನ್ ಧನ ಸಹಾಯ

ಸ್ವೀಡನ್ ಸರ್ಕಾರವು ಜರ್ಮನಿಗೆ ... ಬೇಕಾಗುವ ... ಕೊಡುತ್ತಿರುವ ... ಕಾರಣ ... ಸ್ವೀಡನ್‌ಗೆ ಒದಗುತ್ತಿದ್ದ ... ಗಳನ್ನು ತಮ್ಮ ಮುಂದೆ ... ಬೇಕೆಂದು ನಿರ್ಧರಿಸಿರುವರು.

ವ್ಯವಸಾಯಗಾರರ ಸಮ್ಮೇಳನ ಕೂಡದು

ಕಳೆದ ಗುರುವಾರ ರಾವ್‌ಬಹದ್ದೂರ್ ಆರ್. ನಾಚಿ ... ರವರ ಅಧ್ಯಕ್ಷತೆಯಲ್ಲಿ ... ನಲ್ಲಿ ನಡೆಯಲಿಕ್ಕಿದ್ದ ವ್ಯವಸಾಯಗಾರರ ಸಮ್ಮೇಳನ ನಡೆಯಕೂಡದೆಂದು ... ಪೋಲೀಸ್ ಅಧಿಕಾರಿಗಳು ನಿಷೇಧಾಜ್ಞೆ ಹೊರಡಿಸಿರುವರೆಂದು ತಿಳಿದುಬಂದಿದೆ.

ಒಪ್ಪಂದವಾಗಿಲ್ಲ

ತುಂಗಭದ್ರಾ ನದಿಯ ನೀರನ್ನು ಹಂಚಿಕೊಳ್ಳುವ ಬಗ್ಗೆ ಮೈಸೂರು ಸರ್ಕಾರಕ್ಕೂ ಮದರಾಸ್ ಸರ್ಕಾರಕ್ಕೂ ನಿರ್ದಿಷ್ಟವಾದ ಒಪ್ಪಂದವಿನ್ನೂ ಆಗಿಲ್ಲವೆಂದು ಒಂದು ವರದಿ ತಿಳಿಸುತ್ತದೆ.

ಪೋಲೀಸರ ಭವನದ ಗುರುತು

ರಂಗೂನ್ ಪಟ್ಟಣದ ... ಪಕ್ಕದ ... ಕ್ಯಾಸಲ್‌ಗ್ಯಾಡುಲ್‌ ಭವನದಲ್ಲಿರುವ ಪೋಲೀಸರ ಜೇಸಿಗೆ ವಿಶ್ರಾಂತಿ ಭವನದ ಗುರುತು ವೈಮಾನಿಕರಿಗುಂಟಾಗಲೀ ಎಂಬ ಉದ್ದೇಶದಿಂದ ಭವನದ ಮೇಲ್ ಭಾಗಕ್ಕೆ ಬಣ್ಣ ಬಳಿಯಲಾಗಿದೆಯೆಂದು ತಿಳಿದುಬಂದಿದೆ.

ಕಾಂಗ್ರೆಸ್ ಬಲ ಕುಗ್ಗಿಲ್ಲ

ಕಾಂಗ್ರೆಸ್ಸಿನ ಬಲ ಕುಗ್ಗಿ ಹೋಗಿದೆಯೆಂದು ಅಲ್ಲದೆ ... ಸರಿಯಲ್ಲ, ಈಗಲೂ ಎಲ್ಲ ಚುನಾವಣೆಗಳಲ್ಲೂ ಕಾಂಗ್ರೆಸ್ ಅಭ್ಯರ್ಥಿಗಳು ಸ್ಪರ್ಧಿಸಿದರೆ ಅವರೇ ಬಹುಮತದಲ್ಲಿ ಆರಿಸಿ ಬರುವುದರಲ್ಲಿ ಸಂಶಯವಿಲ್ಲ. ದೇಶದಲ್ಲಿ ಕಾಂಗ್ರೆಸ್ ಶಕ್ತಿ ಕುಗ್ಗಿಲ್ಲ ಎಂಬುದಾಗಿ ಲಿಬರಲ್ ಪಕ್ಷದ ನಾಯಕರಾದ ... ಚಿಮನ್‌ಲಾಲ್ ಸೆಟಲ್‌ವಾಡರವರು ಒಂದು ಹೇಳಿಕೆ ಕೊಟ್ಟಿದ್ದಾರೆ.

ಫ್ರಾನ್ಸಿನಲ್ಲಿ ಆಕ್ರಮಣ ಭೀತಿ

ಫ್ರೆಂಚ್ ... ಕರಾವಳಿ ಪ್ರದೇಶಗಳಿಂದ ... ಜನಗಳು ... ಬೇರೆ ಕಡೆಗೆ ಹೋಗುತ್ತಿದ್ದಾರೆ. ಹೀಗೆ ಹೊರಡುವವರ ಸಂಖ್ಯೆ ದಿನೇ ದಿನೇ ಅಧಿಕವಾಗುತ್ತಿದೆ. ... ಆಕ್ರಮಣ ... ಭಯವೇ ಕಾರಣ ಎಂದು ತಿಳಿದುಬಂದಿದೆ.

ಹೆಚ್ಚಿನ ರೇಷನ್ ದೊರಕಲು ತೊಂದರೆಯಾಗಿದೆ

ರೇಷನ್ ಜಾರಿಗೆ ಬಂದ ಮೇಲೆ ಮದುವೆ ಮುಂಜಿ ಮುಂತಾದ ವಿಶೇಷ ಸಂದರ್ಭಗಳಲ್ಲಿ ಬೇಕಾಗುವ ಹೆಚ್ಚು ಆಹಾರ ಪದಾರ್ಥಗಳನ್ನು ಪಡೆಯಲು ಕಷ್ಟವಾಗಿದೆ. ಹೆಚ್ಚಿನ ಪದಾರ್ಥಗಳು ಬೇಕೆಂದು ಕಾರಣ ತೋರಿಸಿ ರೇಷನಿಂಗ್ ಅಧಿಕಾರಿಗಳಲ್ಲಿ ಮನವಿಮಾಡಿಕೊಂಡರೆ ಅವರು ಫುಡ್ ಇನ್ಸ್‌ಪೆಕ್ಟರುಗಳಿಗೆ ಕಳುಹಿಸುವರು, ಫುಡ್ ಇನ್ಸ್‌ಪೆಕ್ಟರು ಕೆಲವರಿಗೆ ತಕರಾರಿಲ್ಲದೆಯೇ ಕೊಟ್ಟು, ಮತ್ತೆ ಕೆಲವರನ್ನು ಪೌರಸಭಾ ಸದಸ್ಯರ ಶಿಫಾರಸು ತೆಗೆದುಕೊಂಡು ಬನ್ನಿ ಎಂದು ಅಲೆಸುವರು. ಪೌರಸಭಾ ಶಿಫಾರಸು ಯಾತಕ್ಕಾಗಿ ಬೇಕೆಂಬ ಬಗ್ಗೆ ಯಾರಿಗೂ ತಿಳುವಳಿಕೆ ಕೊಟ್ಟಿಲ್ಲ. ಇಂತಹ ತೊಂದರೆ ತಪ್ಪುವಂತಾಗಬೇಕಾಗಿದೆಯೆಂದು ಪೌರಸಭಾ ಸದಸ್ಯರಲ್ಲೊಬ್ಬರಾದ ಶ್ರೀ ಎ. ಎಲ್. ಸೂರ್ಯನಾರಾಯಣರಾಯರವರು ಬರೆಯುತ್ತಾರೆ.

ಅಮೆರಿಕ ಮೈಸೂರು ವ್ಯಾಪಾರ

ನ್ಯೂಯಾರ್ಕಿನಲ್ಲಿ ಭಾರತದ ಟ್ರೇಡ್ ಕಮಿಷನರ್ ಆಗಿದ್ದ ಶ್ರೀ ಶ್ರೀನಿವಾಸನ್‌ರವರು ಬೆಂಗಳೂರಿಗೆ ಬಂದಿರುವರು. ಅವರೊಡನೆ ಮೈಸೂರು ಛೇಂಬರ್ ಆಫ್ ಕಾಮರ್ಸ್ ಅಧ್ಯಕ್ಷರಾದ ಶ್ರೀ ಎಸ್. ಎ. ಶ್ರೀನಿವಾಸನ್‌ರವರು ಮಾತುಕತೆ ನಡೆಸಿದರು. ಅಮೆರಿಕದೊಡನೆ ಮೈಸೂರು ವ್ಯಾಪಾರ ನಡೆಸಲು ಸೂಕ್ತ ಸೌಕರ್ಯಗಳನ್ನು ಒದಗಿಸುವುದಾಗಿ ಶ್ರೀ ಶ್ರೀನಿವಾಸನ್‌ರವರು ಭರವಸೆ ಕೊಟ್ಟಿರುವರು.

ಕೇಂದ್ರ ಸರ್ಕಾರದ ಆದಾಯ ಕಮ್ಮಿ ಬಿತ್ತು

೧೯೪೪-೪೫ ನೇ ಸಾಲಿನ ಭಾರತ ಸರ್ಕಾರದ ಆಯವ್ಯಯ ಪಟ್ಟಿಯನ್ನು ಪರಿಶೀಲಿಸಲಾಗಿ ವೆಚ್ಚಕ್ಕೆ ಆದಾಯದಲ್ಲಿ ೧೯೦ ಕೋಟಿ ರೂ. ಗಳು ಕಮ್ಮಿ ಬಿದ್ದು ಖರ್ಚು ಜಾಸ್ತಿಯಾಗಿರುತ್ತದೆಂದು ಗೊತ್ತಾಗಿದೆ.

ರಷ್ಯನರು ಚುಡೋವ್ರೊ ಹಿಡಿದರು

ರಷ್ಯನರು ಚುಡೋವ್ರೊ ಪಟ್ಟಣವನ್ನು ಹಿಡಿದು ಲೆನಿನ್‌ಗ್ರಾಡ್—ಮಾಸ್ಕೋ ರೈಲ್ವೆ ಮಾರ್ಗದಲ್ಲೆಲ್ಲೂ ಜರ್ಮನರು ಇರದಂತೆ ಮಾಡಿರುವರೆಂದು ಅಧಿಕಾರಯುತ ಪ್ರಕಟಣೆ ತಿಳಿಸಿದೆ.

ಲೆನಿನ್‌ಗ್ರಾಡ್‌ನಿಂದ ಲೀಗಾಗೆ ಹೋಗುವ ರೈಲ್ವೆ ಮಾರ್ಗದಲ್ಲಿನ ... ಎಂಬ ಜಂಕ್ಷನ್ನು ಈಗ ರಷ್ಯನರ ವಶವಾಗಿರುವುದಾಗಿ ವರದಿಯಾಗಿದೆ.

ಮಾಜಿ ಗೌರ್ನರ್‌ರಿಂದ ಗಾಂಧಿ ಪ್ರಶಂಸೆ

ಹರಿಜನರ ಉದ್ಧಾರಕ್ಕಾಗಿ ಗಾಂಧೀಜಿಯವರು ಕೈಗೊಂಡ ಕಾರ್ಯಕ್ರಮಗಳು ಅತ್ಯಂತ ಪವಿತ್ರ ಧ್ಯೇಯಗಳಿಂದ ಕೂಡಿರುವುದೆಂದು ಬಂಗಾಳದ ಮಾಜಿ ಗೌರ್ನರ್ ಜಾನ್ ಉಡ್‌ಹೆಡ್‌ರವರು ಗಾಂಧಿಯವರ ಮೇಲೆ ... ಬರೆದಿರುವ ... ರವರನ್ನು ಪ್ರಶಂಸಿಸುತ್ತ ತಿಳಿಸಿದ್ದಾರೆ.

ಸಾನೇತಕ್ಕೆ ಮದುವೆಯಾದೆ ?

ಮದುವೆಯು ಪವಿತ್ರ ಉದ್ದೇಶದ ಒಂದು ಸೃಷ್ಟಿ ನಿಯಮ

ಶ್ರೀಮತಿ ಸುಂದರಮ್ಮ ರಾಜನ್, ಬಿ ಎಸ್‌ಸಿ, ಬಿ.ಟಿ.

[illegible] ಮದುವೆಯಾದೆನೆಂದು [illegible] ಎಲ್ಲರಿಗೂ ಆಶ್ಚರ್ಯವನ್ನು [illegible] ಏಕೆಂದರೆ ಎಲ್ಲ [illegible] ಮದುವೆಯಾಗಿಕೊಳ್ಳುತ್ತಾರೆ. [illegible] ಆದರೆ [illegible] ವಿದ್ಯಾವತಿಯಾಗಿ [illegible] ಸ್ವಂತ [illegible] ಸಂತೋಷ [illegible] ವಿಚಾರ [illegible] ಇಟ್ಟುಕೊಳ್ಳದಿದ್ದ [illegible] ಏಕೆ?

ಸನ್ನಿವೇಶ, ಸಂದರ್ಭಗಳೇ ಪ್ರೇರಕ

[illegible] ಬಾಹ್ಯಪ್ರಪಂಚ, ನನ್ನ [illegible], ಇನ್ನಿತರ ಸಂದರ್ಭ [illegible] ಮದುವೆ [illegible] ಸ್ವಾತಂತ್ರ್ಯ, ವ್ಯಕ್ತಿ ಸ್ವಾತಂತ್ರ್ಯ [illegible] ಪ್ರೀತಿಪಾತ್ರರ [illegible] ಬಂಧುಬಳಗ [illegible] ಒಬ್ಬ [illegible] ತಂದೆಯೋ, ತಮ್ಮನೋ [illegible] ಪತಿ [illegible] ಇರುವ [illegible] ವ್ಯಕ್ತಿತ್ವವನ್ನು ಬಿಟ್ಟು [illegible] ಸ್ತ್ರೀ [illegible] ಜೊತೆಯಲ್ಲಿದ್ದರೂ ಕೂಡ [illegible] ಹೆಂಗಸರಿಗೆ [illegible] ಆದರ ಅಭ್ಯಾಸಮ್ಯಂದಿಂದಾಗಲಿ, [illegible] ಕೆಲಸಮಾಡಿಸಿಕೊಳ್ಳುವ ಸಂದರ್ಭಗಳು ಅನೇಕವು [illegible] ಕೆಲವುವೇಳೆ [illegible] ಎಷ್ಟೋ [illegible] ನನ್ನ ಕೆಲಸವನ್ನು ಇತರರಿಂದ ಹೀಗೆ ಎಷ್ಟು ದಿವಸ ಮಾಡಿಸಿಕೊಳ್ಳುವುದಕ್ಕಾಗುತ್ತದೆ? ಹಾಗೆ ಮಾಡಿಸಿಕೊಂಡರೂ ಕೆಲವು ವೇಳೆ ಜನರು ಅದಕ್ಕೆ ತಪ್ಪು ಅರ್ಥವನ್ನು ಕಲ್ಪಿಸಿರುವ ನಿದರ್ಶನಗಳೆಷ್ಟೋ ಇವೆ. ಇಷ್ಟೆಲ್ಲಾ ಗಲಾಟೆ ಘಟಿಸುವುದಕ್ಕಿಂತ ನನ್ನ ಪತಿ ಪ್ರತ್ಯೇಕ ಇದ್ದರೆ ಇದಕ್ಕೆಲ್ಲಾ ಅವಕಾಶವೇ ಇರುವುದಿಲ್ಲ. ಹೀಗೆ ನನ್ನ ಸನ್ನಿವೇಶ ಸಂದರ್ಭಗಳು ಮದುವೆಗೆ ಪ್ರೇರಕವಾಗಿವೆ.

ಸೃಷ್ಟಿನಿಯಮ ನಿವಾರಿಸಬಹುದಿಲ್ಲ

ಎರಡನೆಯದಾಗಿ, ಎಲ್ಲಾ ಜೀವಿಗಳ ಉದ್ದೇಶವೇನು? ಜನನ ಪ್ರದು ಮತ್ತು ವಂಶಾಭಿವೃದ್ಧಿ ಮಾಡುವುದು. ಇದು ಕೇವಲ ವಿಷಯಾಸಕ್ತಿಯಲ್ಲ. ಘನವಾದ, ಪವಿತ್ರವಾದ ಉದ್ದೇಶದಿಂದ ಕೂಡಿದ ನಿಸರ್ಗದ ನಿಯಮ. ಈ ಉದ್ದೇಶಕ್ಕೋಸ್ಕರವೇ—ಸ್ತ್ರೀ-ಗಂಡುಹೆಣ್ಣುಗಳಲ್ಲಿ ಪರಸ್ಪರ ಆಕರ್ಷಣ ಶಕ್ತಿಯನ್ನು ಇಟ್ಟಿದೆ. ವಸಂತ ಋತು—ಎಲ್ಲಾ ಕಡೆಗಳಲ್ಲೂ ಎಲೆ, ಹೂ ಕಳಕಳಿಸುತ್ತವೆ. ಏನೋ ಒಂದು ಬಗೆಯ ಉತ್ಸಾಹ, ಸ್ಫೂರ್ತಿ, ಸಂತೋಷ ಎಲ್ಲಾ ಜೀವಿಗಳಲ್ಲೂ ಕಂಡುಬರುತ್ತವೆ. ಗಂಡು ನವಿಲು ಹೆಣ್ಣಿನ ಎದುರಿಗೆ ರೆಕ್ಕೆಗಳನ್ನು ಬಿಚ್ಚಿಕೊಂಡು ಕುಣಿಯುತ್ತದೆ. ಏಕೆ? ಹೆಣ್ಣನ್ನು ಆಕರ್ಷಿಸಲು. ಕೋಗಿಲೆಯು ತನ್ನ ಇಂಪಾದ ಕಂಠದಿಂದ ಹಾಡಿ ತನ್ನ ನಲ್ಲೆಯೊಡನೆ ಇತರರನ್ನೂ ಹರ್ಷಗೊಳಿಸುತ್ತದೆ. ಸೃಷ್ಟಿಯೇ ಆನಂದದ ವಾತಾವರಣದಲ್ಲಿ ಕುಣಿಯುವ ಹಾಗೆ ತೋರುತ್ತದೆ. ಇದೆಲ್ಲಾ ಏಕೆ? ಸೃಷ್ಟಿಯು ಪ್ರೀತಿಯೊಂದು ಕಾರ್ಯಕಲಾಪ ರಚನೆಯನ್ನೊ ನೋಡಿದರೆ ಅದರ ರಹಸ್ಯ ಅಂಗವು ನಿಷ್ಪ್ರಯೋಜಕವಾಗಿಲ್ಲ. ಹಾಗಾದರೆ ಇಷ್ಟು ಸನಾತನ—ಸ್ತ್ರೀ-ಪುರುಷ—ಕುಟುಂಬದಲ್ಲಿ—ಜಾತಿಯಲ್ಲಿ ಏಕೆ? ಇಷ್ಟೆಲ್ಲಾ ಮಾಡಬೇಕಾದರೆ ಉದ್ದೇಶವೇನು? ಗಂಡುಹೆಣ್ಣುಗಳ ಪರಸ್ಪರ ಸಂಬಂಧ ಮಾನವ ಜಾತಿಯಲ್ಲಿ ಇದೇ ಸುದುವೆ ಸೃಷ್ಟಿಯ ನಿಯಮವನ್ನು ಯಾರೂ ಮೀರಲಾಗುವುದಿಲ್ಲ. ಮೀರಿದರೆ ಅನೇಕಾನೇಕ ಕೆಡಕುಗಳುಂಟಾಗುತ್ತವೆ.

ಸ್ತ್ರೀ ಸಚ್ಛೀಲ ರಕ್ಷಕೆ

ಪಾತಿವ್ರತ್ಯವಾಗಿಯೂ ಕೂಡ ಹೆಂಗಸು ಬಾಹ್ಯಪ್ರಪಂಚದ ಪರಿಣಾಮಕ್ಕೆ ಸಿಕ್ಕಿಯೂ ಏಕಪತ್ನೀವ್ರತವಾಗಿರಲಾಗ ಧೈರ್ಯವಿಲ್ಲ. ಕುಸುಮದಂತೆ ಕೋಮಲವಾದವಳು. ಗಂಡಸು ಕಾಲದಲ್ಲಿ ಬಲಿಷ್ಠನಾಗಿ ತನ್ನ ಕಾರ್ಯವನ್ನು ನವಿಸು ದುಡಿದುಮಾಡಿ ತಂದುಹಾಕುತ್ತಾನೆ. ದುಡಿಯುವ ಪ್ರಪಂಚದಲ್ಲಿ ಬಂದ ತನ್ನ ಪತಿಗೆ ತನಿಯನ್ನೂ ಒದಗಿಸುವವಳು ಸತಿ. ಮೃದು ವಚನಗಳಿಂದಲೂ, ಒಂದು ನಗೆಯಿಂದಲೂ ಅವನನ್ನು ಆನಂದಗೊಳಿಸಿ, ಇಕ್ಕಟ್ಟಿನಲ್ಲಿ ಅವನೊಡನೆ ಆತ್ಮರೂ, ಧೈರ್ಯ ಕೊಟ್ಟು, ತಕ್ಕ ಸಲಹೆ ಕೊಟ್ಟು ಅವನ ಬಾಳನ್ನು ಬೆಳಗುವವಳು ಸತಿ. ಇಲ್ಲಿ ಸಹಕಾರ, ಪ್ರೇಮ ವಿಶ್ವಾಸವು ಬೆಳೆಗಿ ಪ್ರಪಂಚವನ್ನೇ ಮುಗ್ಧಗೊಳಿಸುವ ಎಳೆ ಕಂದಗಳಲ್ಲಿ ಪರಿಣಮಿಸುತ್ತದೆ. ಹೀಗೆ ಪತಿಯು ತನ್ನ ಸತಿಯನ್ನು ಪ್ರೀತಿಸಿ ಸಲಹುತ್ತಾನೆ. ಪ್ರಪಂಚದ ಎಲ್ಲ ತಗ್ಗುಗಳಲ್ಲಿ ತನಗೆ ಕಷ್ಟಬಂದರೂ ಪಂಚತಿಯನ್ನು ಅದರ ಜ್ವಾಲೆಗೆ ಬಿಡುವುದಿಲ್ಲ. ಪತ್ನೀಶೀಲ ರಕ್ಷಣೆಮಾಡಿ ಮತ್ತು ಸಮಾಜದ ಪವಿತ್ರ ವೃದ್ಧಿಗೆ ಕಾರಣಕರ್ತನಾಗುತ್ತಾನೆ. ಆದ್ದರಿಂದಲೇ ಸ್ತ್ರೀಗೆ ಬಾಲ್ಯಾವಸ್ಥೆಯಲ್ಲಿ ತಂದೆಯೂ, ಯೌವನದಲ್ಲಿ ಪತಿಯೂ, ಮುಪ್ಪಿನಲ್ಲಿ ಪುತ್ರನೂ ರಕ್ಷಕರೆಂದು ಮನುವೂ ಕೂಡ ಹೇಳಿದ್ದಾನೆ.

ಸಂಸಾರ ಸುಖಸಾಗರ

ಈ ಸಂಸಾರ ಆಧಾರ ತ್ಯಾಗಕ್ಕಾಗಿ ಹೆಂಗಸು ಆತನ ಸಹಧರ್ಮಿಣಿಯಾಗಿಯೂ, ಕೆಲವು ವೇಳೆ ಆತನ ನಿಜ ಸ್ನೇಹಿತೆಯಾಗಿಯೂ, ಆತನ ಆರೈಕೆಯಲ್ಲಿ ಮಾತೆಯಾಗಿಯೂ ಇರುವಳು. ಹೀಗೆ ಸಹಕಾರದಿಂದಿರುವ ಬಾಳೇ ದಾಂಪತ್ಯವೆನ್ನುವರು. ಹೀಗೆ ಇರುವ ದಾಂಪತ್ಯವು ನಂದನ ವನದಂತಿರುವುದು. ಹೀಗೆ ಅನುಕೂಲ ದಾಂಪತ್ಯವಿಲ್ಲದಿದ್ದರೂ ತಮ್ಮ ಪತಿವ್ರತಾ ಶಕ್ತಿ ವಿವೇಚನೆಗಳಿಂದ ಆರೋಗ್ಯವನ್ನು ಯೋಗ್ಯವನ್ನಾಗಿ ಮಾಡಿ 'ಪ್ರೇಮಮಯ ಈ ಜಗವು, ತ್ಯಾಗಮಯ ಈ ಜಗವು' ಎಂಬುದನ್ನು ನಮ್ಮ ಸಾಧ್ವಿಯರನೇಕರು ತೋರಿಸಿದ್ದಾರೆ. ಹೀಗೆ ನಾವು ಮಾಡದೆ ಸ್ವಾತಂತ್ರ್ಯ ಕೊಟ್ಟುಬಿಟ್ಟು ಗಂಡಸರ ಗುಲಾಮರಾಗಬಾರದು ಎನ್ನುವುದು ಕೇವಲ ಸ್ವಾತಂತ್ರ್ಯಾಪೇಕ್ಷೆಯಲ್ಲ-ಇದು ಸ್ವಾರ್ಥಕ್ಕೆ ಕಟಿಯಾದ ಪ್ರಪಂಚವನ್ನೂ ಸಿಹಿಯಾಗಿ ಮಾರ್ಪಡಿಸುವುದು-Home, Sweet Home ಮತ್ತು ಎಷ್ಟೇ ದುಡಿದುಬಂದಿದ್ದರೂ ಮುದ್ದು ಮಕ್ಕಳ ಮುಖ ನೋಡಿದರೆ ಬಾಹ್ಯಪ್ರಪಂಚದ ಕಷ್ಟವನ್ನೆಲ್ಲಾ ಮರೆತು ತನ್ನ ಪ್ರಪಂಚದಲ್ಲಿ ತಲ್ಲೀನನಾಗುತ್ತೇನೆ. ಆದ್ದರಿಂದಲೇ ಒಬ್ಬ ಗ್ರಂಥಕಾರ ಹೀಗೆ ಹೇಳುತ್ತಾನೆ: "In those tiny dimples there is space enough to bury the sorrows of the world."

ವಿವಾಹದಿಂದ ಸೇನಾಬಲ ಹೆಚ್ಚುತ್ತದೆ

ಇನ್ನು ಕೆಲವರು ಹೇಳುತ್ತಾರೆ—ಒಂಟಿಯಾಗಿ ಇದ್ದರೆ ದೇಶ ಸೇವೆ ಹೆಚ್ಚಾಗಿ ಮಾಡಬಹುದು. ಮದುವೆಯಾದರೆ ಆ ಆದರ್ಶವನ್ನು ಬೋಧಿಸಲಾಗುವುದಿಲ್ಲ ಎಂದು. ವಿವಾಹವು ಒಂದು ಧರ್ಮಬಂಧನವೆಂದು ತಿಳಿದು ಆದರ್ಶವಾದ ಸಂಯಮವನ್ನಾಚರಿಸಿದರೆ ಸೇನೆಗಾಗಿ ಇನ್ನಷ್ಟು ಬಲವು ಬದರೊಳಗೆ ಬೆಳೆಯುವುದು ಹೆಚ್ಚಾಗಿ ತನ್ನ

(ಮುಂದಿನ ಪುಟ ನೋಡಿ)

ಬಂಗ್ಲೆ ಬಿಕರಿಗಿದೆ

Door No 4525, ನರಸಿಂಹರಾಜ ಮೊಹಲ್ಲಾ ಹಾರು ಕಟ್ಟಡ, ದೊಡ್ಡ ಶಾಂಪೋಂದಿನಲ್ಲಿ ವೀರ ರೋಡಿನಲ್ಲಿದೆ. ಸ್ಥಳ 90×100'

—ವಿವರಗಳಿಗೆ—

ಆರ್. ಗುಂಡೂರಾವ್,
ಮೈಸೂರು.
ಬಿಸಿನೆಸ್ ಮ್ಯಾನೇಜರ್, ಮೈಸೂರು

ನವಯೌವನ

ಕೆಮ್ಮು, ಉಬ್ಬಸ, ಮಲಬದ್ಧತೆ, ವೀರ್ಯಸ್ಖಲನ, ಧಾತುವಿಕಾರ ಮೊದಲಾದುವನ್ನು ಶೀಘ್ರದಲ್ಲೇ ಪರಿಹರಿಸಲು ಮದನಮಂಜರಿ ಮಾತ್ರೆಗಳು ದಿವ್ಯ ಔಷಧ. ಡಬ್ಬಿ ಒಂದಕ್ಕೆ ರೂ. 1

ಮದನಮಂಜರಿ ಫಾರ್ಮಸಿ,
184 ಚಿಕ್ಕ ಬಜಾರು, ಮೈಸೂರು
ಅಶೋಕಾ ಫಾರ್ಮಸಿ
ಬ್ಯಾಂಕು ರಸ್ತೆ, ಮೈಸೂರು
ಗುಂಡ್ಲುಪೇಟೆ: ಜಿ ಎಸ್. ಕೃಷ್ಣಪ್ಪ

ಟೆಂಡರ್ ನೋಟೀಸ್

ಮೈಸೂರು ಅರಮನೆಗೆ ೧೯೪೪-೪೫ ನೇ ಸಾಲಿಗೆ ಸಪ್ಲೈ ಬೇಕಾದ ದಿನಸಿ ವಗೈರೆ ಸಾಮಾನುಗಳಿಗಾಗಿ ಮೊಹರು ಮಾಡಲ್ಪಟ್ಟ ಟೆಂಡರುಗಳು ಈ ಕೆಳಗೆ ರುಜು ಮಾಡಿರುವವರಿಂದ ೧೫-೨-೧೯೪೪ ನೇ ಬಿನವಾರ ಮಧ್ಯಾಹ್ನ ೨ ಘಂಟೆವರೆಗೆ ತೆಗೆದುಕೊಳ್ಳಲ್ಪಡುತ್ತವೆ.

ಹೋದಿವಾನೆ ಮುನಿಯರಿಂದ ಹೆಚ್ಚು ವಿಷಯಗಳನ್ನು ತಿಳಿದುಕೊಳ್ಳಬಹುದು.

ಮೈಸೂರು
10 1 1944

ಸಾದೆಗ್ ಷಾ
ಮಜೂರು ಸೆಕ್ರೆಟರಿ

ಟಿ. ಸಿ. ನಟರಾಜ್

ಔಷಧಾಲಯ

ಇವರಲ್ಲಿ ನೇತ್ರಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.

ಅತ್ಯಗತ್ಯವಾಗಿ ಬೇಕಾದ ಎಲ್ಲಾ ಇಂಜಕ್ಷನ್ ಔಷಧಿಗಳೂ ಸದಾ ಕಾಲದಲ್ಲಿಯೂ ದೊರೆಯುವುದಲ್ಲದೆ ಸಮಸ್ತ ಮಕ್ಕಳಿಗೂ ಚಿಕಿತ್ಸೆಯು ಬಹು ಸುಲಭ ಛಾರ್ಜಿನಿಂದ ಮಾಡಲ್ಪಡುತ್ತದೆ.

ಝಂಡೂರವರ ಆಯುರ್ವೇದೀಯ ಸಿದ್ಧೌಷಧಿಗಳಲ್ಲೂ ಸದಾ ದೊರೆಯುತ್ತವೆ

ನವೀನ ಮಾದರಿ! ದೀರ್ಘ ಬಾಳಿಕೆ

ಕಡಿಮೆ ಬೆಲೆ !!

ದೇಶೀಯ ಕೈಗಾರಿಕೆ

ಕೈಮಗ್ಗದಿಂದ ಮಾಡಿದ ಎಲ್ಲಾ ಜಮಖಾನಗಳು ಮಾರಲ್ಪಡುತ್ತವೆ

ರಗ್ಗು, ಕಂಬಳಿ, ಕಂಬಳಿ ಕೋಟಿಂಗ್
ರತ್ನಕಂಬಳಿಗಳಿಗೆ

ಜಿ. ವಿ. ಸೂರ್ಯನಾರಾಯಣ ಶೆಟ್ಟಿ ಅಂಡ್ ಸನ್ಸ್,
ಜೂಯಲರ್ಸ್ & ರೆಡಿಮೇಡ್ ಡ್ರೆಸ ಎಂಪೋರಿಯಂ,
ಸಯ್ಯಾಜಿರಾವ್ ರೋಡ್, ಮೈಸೂರು

ಸ್ತ್ರೀ ಯ ರ ಸೌ ಕ ರ್ಯ ಕ್ಕಾ ಗಿ

೩೧-೧-೧೯೪೪ ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿದ್ದೇವೆ

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿ ಪುಡಿ

ಯನ್ನೇ ಉಪಯೋಗಿಸಿ.

ಡಿ. ಪುಟ್ಟಯ್ಯ ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ವಿ ಸೂ —ಇಲ್ಲೂ ಮತ್ತು ಸಂತೆಪೇಟೆ ಕಡೆ ಆಫೀಸಿನಲ್ಲೂ ರವೆ, ಗೋಧಿಹಿಟ್ಟು ಮತ್ತು ಮೈದಾಹಿಟ್ಟು ಸಹ ದೊರೆಯುತ್ತವೆ. ಅಲ್ಲದೆ ಬೂರಾ ಸಕ್ಕರೆ [illegible] ಸಕ್ಕರೆ ದೇಶೀ ಕಾರ್ಡುಗಳಿಗೆ ದೊರೆಯುತ್ತವೆ

ವಾರ ಭವಿಷ್ಯ

ತಾ|| ೨೧-೧-೪೪ ರಿಂದ ೨೭-೧-೪೪ ರವರೆಗೆ
(ಶ್ರೀ ನಿತ್ಯಾನಂದ ಸ್ವಾಮಿಗಳಿಂದ)

ಮೇಷ — ವಸ್ತ್ರೋತ್ಪನ್ನ ನಂಬಿ ಕೈಬಿಟ್ಟ ಹಣ ಕೊಟ್ಟು ಕಳೆದುಕೊಳ್ಳುವಿರಿ. ಈ ವಾರ ಆರೋಗ್ಯ, ಆರ್ಥಿಕ, ಪ್ರವಾಸ ಕುಟುಂಬವ್ಯವಹಾರಾದಿಗಳು ಸಾಧಾರಣವಾಗಿದ್ದರೂ ಮಾನಸಿಕ ಸ್ಥಿತಿ ಚೆನ್ನಾಗಿರಲಾರದು. ವ್ಯಾಪಾರ, ಉದ್ಯೋಗಗಳಲ್ಲಿ ಸಾಧಾರಣ. ತಾ|| ೨೫ ಬಾದರಾಯಣ, ಅಪ್ರಸಕ್ತ.

ವೃಷಭ — ನಿಮಗೆ ಈ ವಾರ ಆರ್ಥಿಕ, ಮಾನಸಿಕ ಮತ್ತು ಆರೋಗ್ಯ ಸರಿಯಾಗಿರುವುದು. ವ್ಯಾಪಾರಾದಿಗಳಲ್ಲಿ ಸ್ಪರ್ಧೆ [illegible] ಪ್ರವಾಸ, ಧರ್ಮಕಾರ್ಯಗಳಲ್ಲಿ ವಿಘ್ನ. ತಾ|| ೧[illegible] ನಿದ್ರಾನಾಶ, ಅಪ್ರಿಯ ಕಲ್ಪನೆ.

ಮಿಥುನ — ಬಹಳ ಕಾಲದಿಂದ ನಿರೀಕ್ಷಿಸಿದ ಸ್ಥಾನಾಂತರ ಶೀಘ್ರವಾಗಿ ಆರೋಗ್ಯ ಚೆನ್ನಾಗಿದ್ದರೂ ಮಾನಸಿಕ ಚಿಂತೆ, ವ್ಯಾಪಾರಾದಿಗಳಲ್ಲಿ ಕಷ್ಟನಷ್ಟ, ಆಪ್ತರಲ್ಲಿ ವಿರೋಧ, ಪ್ರವಾಸದಲ್ಲಿ ವಿಘ್ನ, ಧರ್ಮಕಾರ್ಯಗಳಲ್ಲಿ ಉದಾಸೀನತೆ. ತಾ|| ೧[illegible] ಅನಿರೀಕ್ಷಿತ ಲಾಭ.

ಕರ್ಕ — ಬಂಧು ಸ್ನೇಹಿತರ ಸಹಾಯದಿಂದ ಮನಸ್ಸಿಗೆ ಶಾಂತಿ. ಆರೋಗ್ಯ, ಮಾನಸಿಕ, ಆರ್ಥಿಕ ದೃಷ್ಟಿಯಿಂದ ಚೆನ್ನಾಗಿರುವುದು. ವ್ಯಾಪಾರ, ಉದ್ಯೋಗಾದಿಗಳಲ್ಲಿ ಪ್ರಗತಿ. ಪ್ರವಾಸ ಮತ್ತು ದಾನಧರ್ಮಾದಿಗಳು ನಿರ್ವಿಘ್ನವಾಗಿ ನೆರವೇರುವುವು. ತಾ|| ೨೫ ಪ್ರವಾಸಯೋಗ, ಅಪ್ತಭೇಟಿ, ಧನಲಾಭ.

ಸಿಂಹ — ದುಡುಕಿನ ಸ್ವಭಾವವನ್ನು ತಡೆಹಿಡಿದರೆ ಆರೋಗ್ಯ ಚೆನ್ನಾಗಿರುವುದು. ಅಲ್ಪ ಧನ ಪ್ರಾಪ್ತಿಯಾದರೂ ಹಚ್ಚು ಖರ್ಚು. ವ್ಯಾಪಾರಾದಿಗಳಲ್ಲಿ ಅನುಕೂಲ. ಪ್ರವಾಸಯೋಗ, ಬಂಧುಮಿತ್ರರಿಂದ ವಿಪತ್ತು. ಮಾನಸಿಕ ಅಶಾಂತಿ. ತಾ|| ೨೫ ಚಿಂತೆ, ಕಲಹ, ವಾದವಿವಾದ.

ಕನ್ಯಾ — ಈ ವಾರ ನಿಮಗೆ ಎಲ್ಲಾ ರೀತಿಯಲ್ಲಿ ಆರೋಗ್ಯ, ಆರ್ಥಿಕ, ಮಾನಸಿಕ ದೃಷ್ಟಿಯಿಂದ ಉತ್ತಮವಾದುದು. ಉದ್ಯೋಗಾದಿಗಳಲ್ಲಿ ಲಾಭ, ಪ್ರವಾಸ ಮತ್ತು ಧರ್ಮಕಾರ್ಯಗಳು ನಿರ್ವಿಘ್ನವಾಗಿ ನೆರವೇರುವುವು. ತಾ|| ೧[illegible] ಚಿಂತೆ, ಕಲಹ, ದುಃಖ.

ತುಲಾ — ಚೆನ್ನಾಗಿ ಯೋಚಿಸಿ ಕೆಲಸ ಮಾಡಿದರೆ ಆರೋಗ್ಯದಲ್ಲಿ ಹೆಚ್ಚು ಉತ್ತಮ, ಆರ್ಥಿಕ ಸ್ಥಿತಿ ಸಂಧಾರಣ, ಮಾನಸಿಕ ಚಿಂತೆ, ವ್ಯಾಪಾರಾದಿಗಳಲ್ಲಿ ತೊಂದರೆ, ಪ್ರವಾಸದಲ್ಲಿ ಹಾನಿ. ತಾ|| ೨೫ ಕಲಹ, ಕ್ಲೇಶ, ವಿಯೋಗ.

ವೃಶ್ಚಿಕ — ಈ ವಾರ ನಿಮ್ಮ ಮನಸ್ಸಿನ ಸ್ಥಿತಿ ಚಿಂತಾಜನಕವಾದುದು. ಆರೋಗ್ಯ ಚೆನ್ನಾಗಿರುವುದು. ಧನವು ಬಂದರೂ ನಿಂತಿರುವುದಿಲ್ಲ. ವ್ಯಾಪಾರ, ಉದ್ಯೋಗಾದಿಗಳಲ್ಲಿ ನಷ್ಟವಿರದೆ ಕಷ್ಟವಾಗುವುದು. ಪ್ರವಾಸವನ್ನು ನಿಲ್ಲಿಸಿ. ತಾ|| ೨೫ ದ್ರವ್ಯಲಾಭ.

ಧನುಸ್ಸು — ವ್ಯಕ್ತಿ ವಿರೋಧದಿಂದ ಉಂಟಾದ ಮನಸ್ತಾಪ, ಆರೋಗ್ಯ, ಮಾನಸಿಕ, ಆರ್ಥಿಕ ಸ್ಥಿತಿ ಸಾಧಾರಣ. ವ್ಯಾಪಾರ ಮತ್ತು ಪ್ರವಾಸಾದಿಗಳಲ್ಲಿ ವಿಘ್ನ ಬಂದರೂ ಚೆನ್ನಾಗಿದೆ. ಮಾನಸಿಕ ಚಿಂತೆ. ತಾ|| ೨೫ ಕೌಟುಂಬಿಕ ಚಿಂತೆ, ಕಲಹ.

ಮಕರ — ಭಗವಂತನ ಧ್ಯಾನದಲ್ಲಿ ಕಾಲವನ್ನು ಕಳೆದರೆ ಆರೋಗ್ಯ, ಮಾನಸಿಕ, ಸಾಂಪತ್ತಿಕ [illegible] ಉದ್ಯೋಗ ಬದಲು ಸ್ಥಿತಿ. ಪ್ರವಾಸವು ನಿರ್ವಿಘ್ನವಾಗಿ ನೆರವೇರುವುದು. [illegible]

ಕುಂಭ — [illegible] ಆರೋಗ್ಯ, [illegible] ಸ್ಥಿತಿ ಉತ್ತಮ. [illegible] ಪ್ರವಾಸಾದಿಗಳು [illegible] ತಾ|| ೨೫ [illegible]

ಮೀನ — ಆಲಸ್ಯ ಬಿಟ್ಟು ಉದ್ಯೋಗ ತತ್ಪರರಾಗಿ. ಈ ವಾರ ಆರೋಗ್ಯ, ಮಾನಸಿಕ, ಸಾಂಪತ್ತಿಕ, ವ್ಯಾಪಾರ, ಉದ್ಯೋಗಾದಿಗಳು ಮತ್ತು ಪ್ರವಾಸ ಮುಂತಾದ ಎಲ್ಲಾ ಕಾರ್ಯಗಳಲ್ಲಿಯೂ ಉತ್ತಮ ಫಲವಿರುವುದು. ತಾ|| ೨೫ ವ್ಯಸನ, ಭೋಜನ, ಪ್ರವಾಸ.

ನಾನೇತಕ್ಕೆ ಮದುವೆಯಾದೆ?
(ಹಿಂದಿನ ಸಂಚಿಕೆಯಿಂದ)

[illegible] ಜೀವನದ ಇತಿ [illegible] ಗಳು. ಮತ್ತು [illegible] ಜೀವನದಿಂದ [illegible] ಅನುಭವವಾಗುವುದು ಒಂದು [illegible] ದೂರವಿದೆ ಮಾಡುವ ಸ್ತ್ರೀ [illegible] ಆರೋಗ್ಯ, ಸಂತಸ, [illegible] ಗಿಂತ ಬಿಟ್ಟ ನೀವೆ [illegible] ನೆಯ ಬದ [illegible] ಸ್ವರ್ಗದಲ್ಲಿ [illegible]

ವೈರಾಗ್ಯ ಬೇಡ

[illegible] ಕಳೆದು ಹೋಗಿ [illegible] ವುದಿಲ್ಲ [illegible] ಎಂಬುವುದು [illegible] ಈ ಸಂದರ್ಭದಲ್ಲಿ ಕೆಲವು ವಾಕ್ಯಗಳು ನನಗೆ ಜ್ಞಾಪಕಕ್ಕೆ ಬರುತ್ತಿವೆ. ಅವೇನೆಂದರೆ —

ಬಹಳ ಬಾರಿ ವೈರಾಗ್ಯ ವು
ಬಡವರ ಕೆಲಸ ವು ಮನಸಿಗೆ ಮಾಡು
ವ್ಯಯಿಸಿ ಶುಕ್ರನು ಮಗ್ನ ವಿರದು
ಕಾಣದ ದುಃಖಿಗ [illegible] ಹಿಡಿದ
ಸತ್ತರೆ ಒಂದೇ ಸುಗಮ [illegible]

ಅದ್ದರಿಂದ ಈ ವೈರಾಗ್ಯದ ಬಾಬತ್ತಿನಲ್ಲಿ ನಮ್ಮ [illegible] ಕಲ್ಪಿತ ಪ್ರಪಂಚದ ಬಗ್ಗೆ [illegible] ಇರುವ ಜನಗಳನ್ನೆಲ್ಲ [illegible]

ಪುರಾಣ [illegible] ಜೀವನದ [illegible] ಎಷ್ಟು ಶ್ರೇಷ್ಠ [illegible]

ಮುಖ್ಯ [illegible] ಜೀವನವಾಗಿದೆ [illegible] ಇದೆ [illegible]

[illegible]

ಟ್ಟರೆ ಎರಡೂ ಇಲ್ಲ. ಮಾಡಿದ್ದರೂ ಪ್ರಯತ್ನಿಸಿದರೆ ದೂರವನ್ನು ಹೊಂದಲೇಬೇಕು.

ಗೃಹಸ್ಥಾಶ್ರಮ ಬಿಡಲಾಗದು

ಆದ್ದರಿಂದಲೇ ಮದುವೆಯು ಜೀವನದಲ್ಲಿ ನಡೆಯುವ ಸ್ವಾಭಾವಿಕ ಸಂಗತಿಯು. ಮತ್ತು ಅದೂ ಅದರ ನಿಯಮಿತ ಕಾಲದಲ್ಲೇ ಆಗುವುದು ಸ್ವಾಭಾವಿಕ. ಎಳೆಮಗುವಿಗೆ ಹಟ್ಟಿದ ತಡ ನಾವು ಅನ್ನ ತಿನ್ನಿಸುವುದಿಲ್ಲ. ಬೆಳೆದ ಮಗುವಿಗೆ ಹಾಲಿನ ಪಥ್ಯದಲ್ಲೇ ಇಡುವುದಿಲ್ಲ. ಅದೂ ಅಲ್ಲದೆ ಮಾಡಿದ ಹಣ್ಣಾಗ ತೆಗೆದ ಸೀಟು ನೆಟ್ಟ ಲಾಗವನ್ನು ಹತ್ತಿ ಬಿಟ್ಟು ಮತ್ತೆ ಕೆಲವನ್ನು ಬಿಟ್ಟ, ನೇರಿಕ್ಕೆ ಯಾರೂ ಮಾಡುವುದಿಲ್ಲ. ಮಕ್ಕಳು ಮತ್ತೆ ಲಾಗಿ ಹೋದರೆ, ಹೆಚ್ಚು ಆಗುವುದಿಲ್ಲ ಮತ್ತು ಸ್ವಾಭಾವಿಕವಾಗಿರುವುದು. ಹೀಗೆಯೇ ನಮ್ಮ ಹಿಂದೂ ಧರ್ಮ ಶಾಸ್ತ್ರದ ಪ್ರಕಾರ ಜೀವನವು ನಾಲ್ಕು ಆಶ್ರಮಗಳಿಂದ ಕೂಡಿದ್ದು, ಇವುಗಳಲ್ಲಿ ಒಂದೊಂದನ್ನೂ ಬಾಳಿಯೇ ಮುಂದೆ ಹೋಗಬೇಕು ಮತ್ತು ನಿಜವಾಗಿ ನೋಡಿದರೆ ಮುಖ್ಯ ಮೂರು ಗೃಹಸ್ಥಾಶ್ರಮದ ಮೇಲೆಯೇ ನಿಂತಿವೆ.

ಇವೆಲ್ಲಾ ಕಾರಣಗಳಿಂದ ನಾನು ಗೃಹಸ್ಥಾಶ್ರಮವನ್ನೇ ಸರ್ವೋತ್ಕೃಷ್ಟವಾದದ್ದೆಂದು ಪರಿಶೀಲಿಸಿ ಮದುವೆಯಾದೆ ಮತ್ತು ನಾನು ಅದರಲ್ಲಿ ಸುಖಿಯಾಗಿದ್ದೇನೆ.

'ತರಂಗರಂಗ'

ಆಕ್ಸಿಸ್ ಏಜೆಂಟರ ಚಟುವಟಿಕೆ

ಫ್ರೆಂಚ್ ಆಫ್ರಿಕಾದಲ್ಲಿನ ಸ್ಪೇನ ಪ್ಲಾಂತದಲ್ಲಿ ಆಕ್ಸಿಸ್ ಏಜಂಟರುಗಳು ಬಹಳ ಚುರುಕಾಗಿ ಕೆಲಸ ಮಾಡುತ್ತಿರುವುದಾಗಿ ಗೊತ್ತಾಗಿದೆಯೆಂದು ವಾಷಿಂಗ್‌ಟನ್ ಸ್ಟೇಟ್ ಇಲಾಖೆ ವರದಿಸಿದೆ.

ಮೈಸೂರು ಶ್ರೀ ಮಹಾರಾಜರವರ ಸನ್ನಿಧಾನದಿಂದ ಒಪ್ಪಿಗೆ ಪಡೆದ ಅಂಗಡಿ.

ಚೆನ್ನಾಗಿ ಹೊಲಿದ ಸೂಟ್ ಧರಿಸಿದ್ದರೆ ನೀವು ಎಷ್ಟು ಸೊಗಸಾಗಿ ಕಾಣುವಿರಿ!

ಅದಕ್ಕೆ ಒಳ್ಳೆ ಹೊಲಿಗೆ ಅಗತ್ಯ.



ನಿಮ್ಮ ದೇಹಕ್ಕೆ ಹೊಂದುವಂತೆ ತೃಪ್ತಿಕರವಾಗಿ ಹೊಲಿದುಕೊಡಬಲ್ಲವರು

ಬಿ. ವಿರಲ್ ಬ್ರದರ್ಸ್,
ಪ್ರಶಸ್ತಿ ಪಡೆದ ಹೊಲಿಗೆಗಾರರು ಮತ್ತು ಕಮೀಷನ್ ಏಜೆಂಟರು
ಶ್ರೀರಾಮಪೇಟೆ, ಮೈಸೂರು.

ದಿವ್ಯವಾದ ಸಾಬೂನು

ಬೆಲೆಯಲ್ಲಿ ಕಿರಿದಾದರೂ ಗುಣದಲ್ಲಿ ಹಿರಿದು



ಮೈಸೂರು ಸ್ಯಾಂಡಲ್ ಸೋಪಿನಿಂದ ಅಂಗಶುದ್ಧಿಯು ಪೂರ್ಣವಾಗುವುದಲ್ಲದೆ ಅದರ ನೊರೆಯು ಚರ್ಮದ ರಂಧ್ರಗಳನ್ನೆಲ್ಲಾ ಹೊಕ್ಕು ಮೈ ಕೊಳೆ ಕಳೆಯುವುದು. ಅದರ ಮೆತ್ತನೆಯ ಗುಣವೂ, ಸುಗಂಧವೂ ಚಿತ್ತಾಕರ್ಷಕವಾಗಿರುವುವು.

ಮೈಸೂರು ಸ್ಯಾಂಡಲ್ ಸೋಪ್

ಕಿತ್ತಲೇ ಹಣ್ಣಿನ ಸಿಪ್ಪೆ ಎಷ್ಟಿದ್ದರೂ ಬೇಕು

ಅಬ್ದುಲ್ ಕರೀಂ ಖಾದರ್ ಸಾಹೇಬ್,
ಹಳೇ ಮೈಸೂರು ಬ್ಯಾಂಕ್ ರಸ್ತೆ,
ಮೈಸೂರು.

[illegible]ಗೆ ಬೇಡಬೇಕಾಗಿಲ್ಲ

ಕಾಂಗ್ರೆಸ್ ಕಾರ್ಯಕಾರಿ ಸಮಿತಿಯವರು [illegible] ಕಾರ್ಯಕ್ರಮದ ವಿಚಾರವಾಗಿ [illegible] [illegible]

ಸರ್ಕಾರೀ ನೌಕರರ ಬಳಿ ಕಾಂ|| ಪ್ರಚಾರ ಪತ್ರಗಳು

[illegible] ಕಾಂಗ್ರೆಸ್ [illegible]

ಲಾಭ ತಡೆ ಕಾನೂನಿನಲ್ಲಿ ರಿಯಾಯಿತಿ

[illegible] ಕೇಂದ್ರ ಸರ್ಕಾರದವರು ಪ್ರಕಟಿ[illegible].

ಭಾರತ ಕಮ್ಯೂನಿಸ್ಟ್ ಮಾಸ್ಕೋವಿಗೆ

ಸುಪ್ರಸಿದ್ಧ ಪಂಡಿತರೂ ಕಮ್ಯೂನಿಸ್ಟ್ ನಾಯಕರೂ ಆದ ಪಂಡಿತ್ ರಾಹುಲ್ ಸಂಕೃತ್ಯಾಯನ ಎಂಬುವರು ಮಾಸ್ಕೋವಿಗೆ ತೆರಳುವವರಾಗಿದ್ದಾರೆಂದೂ ಅದಕ್ಕೆ ಭಾರತ ಸರ್ಕಾರದವರ ಸಮ್ಮತಿ ದೊರೆತಿದೆಯೆಂದೂ ಪಾಟ್ನಾದಿಂದ ವರದಿಯಾಗಿದೆ

ಜಪಾನರು ಹಿಡಿದಿರುವ ಯುದ್ಧ ಖೈದಿಗಳ ಸ್ಥಿತಿ

[illegible]ದಲ್ಲಿ ಜಪಾನರು ಬಂಧಿಸಿ ತಮ್ಮ ವಶ ಇಟ್ಟುಕೊಂಡಿರುವ ಬ್ರಿಟಿಷರ ಯುದ್ಧ ಖೈದಿಗಳ ಆರೋಗ್ಯವು ದಿನೇ ದಿನೇ [illegible] [illegible] ಕಾರ್ಯದರ್ಶಿಗಳಾದ ಮಿ|| ಈಡೆನ್ ರವರು ಕಾಮನ್ಸ್ ಸಭೆ[illegible]ಯಲ್ಲಿ ವಿಷಾದದಿಂದ ತಿಳಿಸಿದರು.

ಜಪಾನರ ನೀಚ ಕೃತ್ಯಗಳು

[illegible] ಸಿಕ್ಕಿರುವ ಮಿತ್ರಪಕ್ಷದ ಯೋಧರನ್ನು ಜಪಾನರು ಎಷ್ಟು ಕ್ರೂರವಾಗಿ ಹಿಂಸಿ[illegible] ಒಗ್ಗ ದೊರೆತಿರುವ ಸತ್ಯ ಕಥೆಗಳನ್ನು ಪ್ರಕಟಿಸಲು ಭಾರತ ಸರ್ಕಾರವು ನಿರ್ಧರಿಸಿದೆ.

Edited, printed and published by A. R. Nagarajan, at the Sadhvi Press, D.Subbiah Road, Mysore

ಜಾಂಬವ ಮತೀಯರ ಸಮ್ಮೇಳನ

[illegible] ತಾಲ್ಲೂಕು [illegible] ಮುಂದಿನ [illegible] ನೇ ತಾ|| ಜಾಂಬವ ಮತಸ್ಥರ ಸಮ್ಮೇಳನ ನಿರ್ಧರಿಸಿದೆಯೆಂದೂ ಅದಕ್ಕೆ [illegible] ದಯಮಾಡಿಸಬೇಕಲ್ಲದೆ ಶಕ್ತ್ಯನುಸಾರ ಧನ ಸಹಾಯ ಮಾಡಬೇಕೆಂದೂ [illegible] ಶ್ರೀ [illegible] ಶ್ರೀ [illegible] ಕೋರುತ್ತಾರೆ.

ಪ್ರಸಿದ್ಧ ಪತ್ರಿಕೆ

ಈ ಮುಂದಿನ [illegible] ಮಾಡುವುದೇನೆಂದರೆ:—

ಮೈಸೂರು ನಗರದೊಳಕ್ಕೆ ಪತ್ರ, [illegible], ಜೋಳ, ಅಕ್ಕಿ, [illegible] ಆಹಾರ ಸಾಮಗ್ರಿಗಳನ್ನು ಹೊರಗಡೆಯಿಂದ [illegible] ವಸ್ತುಗಳನ್ನು ತಂದ ಮಾರನೇ ದಿವಸವೇ ಸಂಬಂಧಪಟ್ಟ [illegible] (ವಾರ್ಡು ಟರ್) [illegible] ರೇಷನ್ ಕಾರ್ಡುಗಳನ್ನು [illegible] ರೇಷನಿಂಗ್ ಆಫೀಸುಗಳಲ್ಲಿ ಹಾಜರುಮಾಡಿ ಕಾರ್ಡಿನಲ್ಲಿ ತಕ್ಕ ಬದಲಾವಣೆಗಳನ್ನು ಮಾಡಿಸಿಕೊಳ್ಳತಕ್ಕದ್ದು

ಮೇಲ್ಕಂಡ ಬದಲಾವಣೆಗಳನ್ನು ಮಾಡಿಸಿಕೊಳ್ಳದೆ ರೇಷನ್ ಕಾರ್ಡುಗಳನ್ನು [illegible] ಹಾಜರುಮಾಡಿ ಅವರು ಹೊರಗಡೆಯಿಂದ ತಂದಿರುವ ರೇಷನಿಗೆ ಒಳಪಟ್ಟ ಆಹಾರ ವಸ್ತುಗಳನ್ನು ತೆಗೆದುಕೊಳ್ಳಕೂಡದು.

ತಪ್ಪಿದರೆ, ಅಂಥವರನ್ನು ಮೈಸೂರು ರೇಷನ್ ರೂಲ್ಸು ಅನುಸರಿಸಿ ಶಿಕ್ಷೆಗೆ ಗುರಿಪಡಿಸಲಾಗುತ್ತೆ.

ಟಿ. ವಿ. ರೆಡ್ಡಿ,
ಅಸಿಸ್ಟೆಂಟ್ ರೇಷನಿಂಗ್ ಆಫೀಸರ್,
ಮೈಸೂರು. ತಾ|| [illegible]

ವಿನ್ನಿಟ್ಸಾ ಬಳಿ ಹಿಂಜರಿದರು

ವಿನ್ನಿಟ್ಸಾ ಪೂರ್ವ ರಂಗದಲ್ಲಿ ಜರ್ಮನರ ಒತ್ತಡ ಹೆಚ್ಚಿದ ಕಾರಣ ರಷ್ಯನರು ಹಿಂದ[illegible]ಬೇಕಾಯಿತೆಂದು ವರದಿಯಾಗಿದೆ.

1944

ಈ ಕಾಲದಲ್ಲಿ

ದುಡ್ಡು

ಪತ್ತಿರವಾಗಲೀ [illegible] ಆಗಲೀ ಇಡುವುದಕ್ಕಿಂತ

ಮನೆ, ಬಂಗ್ಲೆ, ಸೈಟು, ಗದ್ದೆ

ಇವುಗಳನ್ನು

ಕೊಳ್ಳಿರಿ

ಶಾಶ್ವತವಾದ

ಆಸ್ತಿ

ಆಗುವುದು.

ಈ ದಿವಸವೇ ನಿರ್ಧರಿಸಿ.

[illegible] ಕಾಲವ ಕಾಯಕ್ಕೆ ಬೆಲೆಯಿಲ್ಲ

ಹೆಚ್ಚಾದ

ಹಣವೇ

ಬೇಕೆಂದರೆ ನಿಮ್ಮ ಮನೆ

ಮಾರಿಬಿಡಿ.

ಬಿ. ಎಸ್. ಸುಬ್ಬರಾವ್
ಸಿಟಿ ಆಕ್ಷನೀರಿಂಗ್ ಕೋ,
(ಜಗನ್ಮೋಹನ ಬಂಗ್ಲೆ ಎದುರು)
ಮೈಸೂರು.

ಮೈಸೂರು ಇನ್ಷೂರೆನ್ಸ್ ಕಂಪೆನಿ ಲಿಮಿಟೆಡ್

ಪ್ರಧಾನ ಕಛೇರಿ : : ಬೆಂಗಳೂರು ನಗರ

೧೯೪೩ ರಲ್ಲಿ ನಮ್ಮ ಉದ್ಯಮವು ೧೯೪೨ ನೇ ವರ್ಷದ ಉದ್ಯಮಕ್ಕಿಂತ ಸುಮಾರು ಎರಡರಷ್ಟು ಹೆಚ್ಚಿದೆ.

ಹೊಸ ಪ್ರಿಮಿಯಂ ಹುಟ್ಟುವಳಿಯು ಕಳೆದ ವರ್ಷದ ಹುಟ್ಟುವಳಿಗಿಂತ ದ್ವಿಗುಣಿತವಾಗಿದೆ

ಮೈಸೂರು, ಮದ್ರಾಸ್, ದಾವಣಗೆರೆ, ಉತ್ತರ ಕನ್ನಡ, ಹುಬ್ಬಳ್ಳಿ, ಕೊಲ್ಲಾಪುರ, ಸೋಲಾಪುರ, ಗುಲ್ಬರ್ಗ, ಬಳ್ಳಾರಿ, ಕೊಯಮುತ್ತೂರು ಮತ್ತು ಕೊಡಗುಗಳಲ್ಲಿ ಸಮರ್ಥರಾದ ಮತ್ತು ಸುವ್ಯವಸ್ಥಿತವಾದ ಆರ್ಗನೈಜೇಷನ್ [illegible] ಆಫೀಸುಗಳು ಸ್ಥಾಪಿತವಾಗಿದೆ

ನಮ್ಮ ಸಂಸ್ಥೆಯ ಪ್ರಥಮ ಮೌಲ್ಯ [First Valuation] ಹೆಚ್ಚಿನ ಲಾಭಾಂಶವನ್ನು ತೋರಿಸಿದೆ

ಕ್ಷೇತ್ರೋದ್ಯಮಿಗಳಿಗೆ [Field-workers] ಅಪೂರ್ವ ಯೋಗ! ಸುಸಂಧಿ!

[illegible] ಇನ್ಸ್‌ಪೆಕ್ಟರ್, ಆರ್ಗನೈಜರ್ ಮತ್ತು ಸ್ಪೆಷಲ್ [illegible] ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಜನರಲ್ ಮ್ಯಾನೇಜರ್:
ದಿ ಮೈಸೂರು ಇನ್ಷೂರೆನ್ಸ್ ಕಂಪೆನಿ ಲಿಮಿಟೆಡ್,
"ಲಕ್ಷ್ಮೀ ಸ್ಥಾನ", ಲಾಲ್‌ಬಾಗ್-ಕೋಟೆ ರಸ್ತೆ,
ಬೆಂಗಳೂರು ನಗರ.

ಅಪೇರಾ ಟಾಕೀಸ್

ಪ್ರತಿ ದಿನ ಮೂರು ಆಟಗಳು 2-2-44 ರಿಂದ



(ಹಿಂದಿ) ನಾದಾನ್ (ಹಿಂದಿ)

ನಟವರ್ಗ:— ನೂರ್‌ಜಹಾನ್, ಮಸೂದ್, ಮಾಯಾದೇವಿ.

ಸಂಪುಟ ೨] ಮಂಗಳವಾರ ೧--೨--೪೪ [ಸಂಚಿಕೆ ೧೬೭

ತಟಸ್ಥ ರಾಷ್ಟ್ರಗಳಿಗೆ ಪರೀಕ್ಷಾ ಕಾಲ

ಪ್ರಾಣಿಗಳಿಗೂ ರೇಷನ್ ಕೊಡಲು ಆನೆಯ ಅರ್ಜಿ

ಹಿಂದೂ ಮತ ತ್ಯಜಿಸಲು ಹರಿಜನರಿಗೆ ಅಂಬೇಡ್ಕರರ ಸಲಹೆ

ರೇಷನ್ನಿಗೆ ಆನೆಯ ಅರ್ಜಿ

ಅಹಮದಾಬಾದ್ ಸ್ವಾಮಿ ನಾರಾಯಣ ದೇವಾಲಯದ ಆನೆಯು ರೇಷನ್ ಬಗ್ಗೆ ಖುದ್ದಾಗಿ ಅಲ್ಲಿನ ಕಲೆಕ್ಟರ ಬಳಿಗೆ ಹೋಗಿ ಅರ್ಜಿಯನ್ನು ಸಲ್ಲಿಸಿದೆ ಎಂದು ತಿಳಿದುಬಂದಿದೆ. ದೇಶದ ಯುದ್ಧ ಪ್ರಯತ್ನಗಳಲ್ಲಿ ಪ್ರಾಣಿಗಳ ಪಾತ್ರವೂ ಉಂಟೆಂಬುದು ಅವರ ಅಭಿಪ್ರಾಯ. ಅದ್ದರಿಂದ ಯುದ್ಧವಾಗಲಿ, ಆಹಾರ ಸಾಮಗ್ರಿಗಳ ಅಭಾವವಾಗಲಿ ಪ್ರಾಣಿಗಳ ಜೀವನಕ್ಕೆ ಧಕ್ಕೆ ತರಕೂಡದೆಂದು ಅದರ ಪ್ರಾರ್ಥನೆ. ಬದುಕಲು ಪ್ರಾಣಿಗಳಿಗೂ ಹಕ್ಕಿದೆ. ಸಾಮಾನ್ಯವಾಗಿ ಪ್ರಾಣಿ ಮಾತ್ರಗಳನ್ನು, ಮುಖ್ಯವಾಗಿ ತನ್ನನ್ನೂ ರೇಷನ್ ಅಧಿಕಾರಿಗಳು ನಿರ್ಲಕ್ಷಿಸಕೂಡದೆಂದು ಅದು ಕೋರಿಕೊಂಡಿರುತ್ತದೆ. ಈ ಅರ್ಜಿಯು ಕಲೆಕ್ಟರರ ಹೃದಯವನ್ನು ಕರಗಿಸಿತು. ಅರ್ಜಿದಾರನಿಗೆ ಗ್ರಾಸವನ್ನು ಗೊತ್ತುಹಚ್ಚುವ ರೇಷನ್ ಆಫೀಸಿನಂತೆ ಅವರು ಸ್ಪೆಷಲ್ ಕಂಟ್ರೋಲರಿಗೆ ಶಿಫಾರಸು ಮಾಡಿರುವರು.

ನಿವೃತ್ತ ಪೊ|| ಇನ್|| ಗೆ ಶಿಕ್ಷೆ

[ಸ್ವಂ ವಾ] ಬೆಂಗಳೂರು ೩೧

ನಿವೃತ್ತ ಪೋಲೀಸ್ ಇನ್ಸ್‌ಪೆಕ್ಟರಾದ ಶ್ರೀ ರಾಮಾನುಜಾಚಾರಿ ಎಂಬುವರು ತಿಳಿದ ಕೇಸ್ಸಿನ ಕುರಿತು ತಪ್ಪು ಹೇಳಿಕೆ ಕೊಟ್ಟರೆಂಬ ಆಪಾದನೆ ಮೇಲೆ ಸಿಟಿ ಮ್ಯಾಜಿಸ್ಟ್ರೇಟರು ಇಂದು ಅವರಿಗೆ ೧೦೦ ರೂ. ದಂಡ ವಿಧಿಸಿದರು.

ಜವಾನರ ದಸ್ತಗಿರಿ

ಒಂದು ಮಾಹಿತಿಯನ್ನು ಫ್ಯಾಕ್ಟರಿಗಳ ಪತ್ರಗಳನ್ನು, ಡಿಕಾರ್ಡುಗಳನ್ನೂ ರಾತ್ರಿ [illegible] ಗಂಟೆಯಲ್ಲಿ ಸಾಗಿಸುತ್ತಿದ್ದರೆಂಬ ಆಪಾದನೆ ಮೇಲೆ ಚೀಫ್ ಇಂಜನಿಯರ್ ಆಫೀಸ್ ಜವಾನರಾದ ಲಿಂಗಯ್ಯ ಮತ್ತು ರಾಮಯ್ಯ ಎಂಬುವರನ್ನು ದಸ್ತಗಿರಿ ಮಾಡಲಾಗಿದೆ.

ಸನಾತನವಾದಿ ದಸ್ತಗಿರಿ

ಮದ್ರಾಸಿನಿಂದ ಪ್ರಕಟವಾಗುತ್ತಿದ್ದ ಸರಕಾರದಿಂದ ನಿಷೇಧಿಸಲ್ಪಟ್ಟ "ದಂಗೆ" ಎಂಬ ತಮಿಳು ಪತ್ರಿಕೆಗಳನ್ನು ಮಾರುತ್ತಿದ್ದುದಕ್ಕಾಗಿ ವೆಂಕಟಾಚಲಪತಿ ಎಂಬ ಸನಾತನವಾದಿಯನ್ನು ಪೋಲೀಸರು ದಸ್ತಗಿರಿ ಮಾಡಿದ್ದಾರೆ.

ಆಹಾರ ಅಭಾವ

ಅಮೇರಿಕೆಯಲ್ಲಿ ಆಹಾರ ಧಾನ್ಯಗಳ ಅಭಾವ ಹೆಚ್ಚುತ್ತಿದೆ. ಜನರು ಉಪವಾಸ ಮಾಡುವ ಕಾಲ ಬಂದಿದೆ. ಜನರು ತಿಂಗಳಿಂದ ಸಾಕಷ್ಟು ಆಹಾರವನ್ನು ಒದಗಿಸುವುದಾಗಿ ಆಡಳಿತಗಾರರು ಕೊಟ್ಟ ಭರವಸೆಯು ವಿಫಲವಾಗಿದೆ. ಮುಂದಿನ ತಿಂಗಳಿಗೆ ವಿಪತ್ತನ್ನು ತಪ್ಪಿಸಲು ಅವರು ಕೂಡಲೇ ತಕ್ಕ ಕ್ರಮ ಕೈಗೊಳ್ಳಬೇಕೆಂದು ನಂಬಲಾಗಿದೆ. ಆಹಾರ ಸಮಿತಿ ಸದಸ್ಯರು, ಅಮೇರಿಕಾ ಸರಕಾರದ ಮೇಲೆ ಒತ್ತಾಯ ತರುತ್ತಲಿದ್ದಾರೆ.

ಬ್ರಿಟಿಷ್ ಜವಾಬ್ದಾರಿ ವಹಿಸಿಕೊಳ್ಳಬೇಕು

5. ಚಾಮರಾಜಪುರಂ ಸಿಮೆಂಟ್ ಬ್ಲಾಕಿನಲ್ಲಿ ಕಾಂಪೌಂಡ್ ಇರುವ ಹೊಸ ಕಟ್ಟಡ ಡೋರ್ ನಂ 974 ರೂ. 4,000

6 ಇರ್ವಿನ್ ರೋಡಿನಲ್ಲಿರುವ ದೊಡ್ಡ ಮಾಳಿಗೆ ಮನೆ ರೂ 6,000

ಅಲ್ಲದೆ, ಚಾಮರಾಜಪುರಂ ಟೌನ್ ಹೈಸ್ಕೂಲ್ ಸ್ಕೂಲ್ ಮುಂಭಾಗದಲ್ಲಿ ಖಾಲಿ ಸೈಟು ರೂ. 1,000

ಎಂ. ವಿ. ವೆಂಕಟಸುಬ್ಬರಾವ್

ಮ್ಯಾನೇಜರ್,

ಭಾರತ್ ಬಿಲ್ಡಿಂಗ್ ಬ್ರೋಕರೇಜ್,

ಗಡಿಯಾರ ಚೌಕ, 301-2

ದೇವರಾಜ ಮಾರ್ಕೆಟ್, ಮೈಸೂರು.

Also please Remember To Insure Through

M. V. VENKATASUBBA RAO

HELPER.

Mysore Government Life Insurance Departments.

ಸ್ತ್ರೀಯರ [illegible]

[illegible]

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

[illegible] ಬ್ರಾಂಡ್ ಕಾಫಿ ಪುಡಿ

[illegible]

[illegible] ದೇವರಾಜ ಮಾರ್ಕೆಟ್. ಮೈಸೂರು

[illegible] ಆಫೀಸಿನಲ್ಲೂ ದೊರೆ, ಗಾಂಧಿಸ್ಕ್ವೇರು [illegible]

[illegible]



ಹೊಸದಾಗಿ ಬಂದಿವೆ !

Truthful READY MADE CLOTHES MADURA

[illegible]

[illegible]

ಸ್ವಾಸ್ತಿಕ್ ಸ್ಟೋರ್ಸ್

ಮಾದರ್ ಪೇಟೆ, ಮೈಸೂರು.

WEEKLY EDITION

ಸಂಪುಟ ೮] ಸೋಮವಾರ ೭--೩--೪೨ [ಸಂಚಿಕೆ ೧೪

ವಿಶಾಖಪಟ್ಟಣದ ಬಳಿ ಶತ್ರು ಧಾಳಿ

ಅಮೆರಿಕಾ ಅಧ್ಯಕ್ಷ ಪೀಠಕ್ಕೆ ವೆಂಡಲ್ ವಿಲ್ಕಿ ಸ್ಪರ್ಧಿಸುವರು
ರೇವಲ್ಲಿಯಲ್ಲಿ ಸೌದೆ ಸಿಕ್ಕದೆ ಶವವನ್ನು ಹೂತರು

ವಿಶಾಖಪಟ್ಟಣ ಪ್ರದೇಶದ ಮೇಲೆ ಶತ್ರು ಬಾಂಬು

ಇದೇ ತಿಂಗಳು ೪ ನೇ ತಾ|| ಶುಕ್ರವಾರ ರಾತ್ರಿ ಶತ್ರು ವಿಮಾನವು ವಿಶಾಖಪಟ್ಟಣದ ಪ್ರದೇಶದ ಮೇಲಕ್ಕೆ ಹಾರಿ ಬಂದು ಹಲಕೆಲವು ಬಾಂಬುಗಳನ್ನು ಕೆಡವಿದುದಾಗಿ ಮದರಾಸ್ ಸರ್ಕಾರದವರು ಪ್ರಕಟಿಸಿದ್ದಾರೆ. ಆಸ್ತಿಪಾಸ್ತಿಗಳಿಗೆ ನಷ್ಟವಾಗಲೀ, ಜನರಿಗೆ ಸಾವುನೋವಾಗಲೀ ಒಂದೂ ಸಂಭವಿಸಿಲ್ಲವೆಂದೂ ಅದೇ ಪ್ರಕಟಣೆ ತಿಳಿಸುತ್ತದೆ

ರಾಮಸ್ವಾಮಿಮೊದಲಿಯಾರ್‌ಗೆ ಹೋಂ ಮೆಂಬರ್ ಪಟ್ಟ?

ಹೋಂ ಮೆಂಬರ್ ಸ್ಥಾನಕ್ಕೆ ಸರ್ ರೆಜಿನಾಲ್ಡ್ ಮ್ಯಾಕ್ಸ್‌ವೆಲ್ಲರ ನಂತರ ಯಾರು ಬರುವರೆಂಬ ಬಗ್ಗೆ ಸರ್ಕಾರದ ಪ್ರಕಟಣೆ ತಡವಾಗಿರುವುದರಿಂದ ದೆಹಲಿಯಲ್ಲಿ ಊಹಾಪೋಹಗಳೆದ್ದಿವೆ. ಚತ್ತಾರಿ ನವಾಬರನ್ನೋ, ಸರ್ ಎ. ರಾಮಸ್ವಾಮಿ ಮೊದಲಿಯಾರರನ್ನೋ ಅಥವ ಸರ್ ಸುಲ್ತಾನ್ ಅಹಮದ್ ಖಾನರನ್ನೋ ಆ ಸ್ಥಾನಕ್ಕೆ ಆರಿಸಬಹುದೆಂದು ಹೇಳಲಾಗುತ್ತಿದೆ. ಆ ಪೈಕಿ ರಾಮಸ್ವಾಮಿ ಮೊದಲಿಯಾರರನ್ನು ನೇಮಿಸುವ ಸಂಭವವೇ ಹೆಚ್ಚೆಂದೂ ಊಹಿಸಲಾಗಿದೆ

ನ್ಯಾಷನಲ್ ಹೆರಾಲ್ಡ್ ಪ್ರೆಸ್ ಸರ್ಕಾರ ಬಿಟ್ಟುಕೊಟ್ಟಿತು

ಲಕ್ನೋದಿಂದ ಹೊರಡುತ್ತಿದ್ದ "ನ್ಯಾಷನಲ್ ಹೆರಾಲ್ಡ್" ಪತ್ರಿಕಾ ಕಛೇರಿಯನ್ನೂ ಮುದ್ರಣಾಲಯವನ್ನೂ ಸರ್ಕಾರದವರು ತಮ್ಮ ವಶ ಪಡಿಸಿಕೊಂಡಿದ್ದರಷ್ಟೆ. ಈಗ ಅಲ್ಲಿ ಕಾವಲಿಟ್ಟಿದ್ದ ಪೋಲೀಸರನ್ನು ಸರ್ಕಾರದವರು ವಾಪಸು ಕರೆಸಿಕೊಂಡಿರುವರಲ್ಲದೆ ಆ ಮುದ್ರಣಾಲಯ ಮತ್ತು ಕಛೇರಿಯನ್ನು "ನ್ಯಾಷನಲ್ ಹೆರಾಲ್ಡ್" ವ್ಯವಸ್ಥಾಪಕರಿಗೆ ವಾಪಸು ಮಾಡಿರುವರೆಂದು ತಿಳಿದು ಬಂದಿದೆ

ಸೈನಿಕರ ಗೋಭಕ್ಷಣ ತಪ್ಪುವುದೆ?

ಮುಸಲ್ಮಾನರಿಗೆ ಆಹಾರ ಒದಗಿಸುವ ಉದ್ದಿಷ್ಟ ಒಂದನ್ನೇ ಹೊಂದಿ ಪ್ರಾಂತ್ಯದ ರ ನಿಯಮವಿಲ್ಲದೆ ಗೋವಧೆ ನಡೆಸುತ್ತಿರುವುದನ್ನು ತಪ್ಪಿಸಬೇಕೆಂಬ ಠರಾವೊಂದು ಬಂಗಾಳ ಶಾಸನ ಸಭೆಯಲ್ಲಿ ಅಂಗೀಕೃತವಾಗಿದೆ. ಬಂಗಾಳಾ ಸರ್ಕಾರವು ಆ ಬಗ್ಗೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿಕೊಳ್ಳಲಿದೆ

ಯೂರೋಪಿಯನ್ನನ ದುಂಡಾವರ್ತಿ

ಇಬ್ಬರು ಯೂರೋಪಿಯನ್ನರು ಎರಡನೆಯ ತರಗತಿ ಟಿಕೇಟುಗಳನ್ನು ಕೊಂಡುಕೊಂಡು ಮೊದಲನೆ ತರಗತಿಯಲ್ಲಿ ಪ್ರಯಾಣ ಮಾಡುತ್ತಿದ್ದಾಗ ಬೆಂಗಳೂರ್ ಕಂಟೋನ್ಮೆಂಟಿನ ಟಿಕೆಟ್ ಕಲೆಕ್ಟರ್ ಮೊದಲನೆಯವನನ್ನು ಮೊದಲನೆ ತರಗತಿಯಿಂದಿಳಿಸಿ ಎರಡನೆಯ ತರಗತಿಯಲ್ಲಿ ಕುಳ್ಳಿರಿಸಿದನು. ಎರಡನೇ ತರಗತಿಯಲ್ಲಿ ಪ್ರಯಾಣಮಾಡುತ್ತಿದ್ದ ಮತ್ತೊಬ್ಬ ಯೂರೋಪಿಯನ್ನನು ತನ್ನ ಗಾಡಿಗೆ ಇವರನ್ನು ಹತ್ತಿಸಿದ ಟಿಕೆಟ್ ಕಲೆಕ್ಟರನ ಮೇಲೆ ಬಿದ್ದು ಅವನನ್ನು ರಕ್ತ ಬರುವಂತೆ ಹೊಡೆದನೆಂದು ವರದಿಯಾಗಿದೆ. ಪೋಲೀಸರು ತನಿಖೆ ನಡೆಸುತ್ತಿದ್ದಾರೆ.

ಶವ ಸಂಸ್ಕಾರಕ್ಕೆ ಫಜೀತಿ

ಆಂಧ್ರ ಪ್ರಾಂತ್ಯದ ರೇಪಲ್ಲಿ ಎಂಬಲ್ಲಿ ಸೌದೆ ಪೇರ್ಸ ಬಂದು ಅಭಾವ ಕಪ್ಪುವುದು ಎಂಬ ನಿರೀಕ್ಷಣೆಯಿಂದ ಅಲ್ಲಿನ ನಿವಾಸಿಗಳು ಇದ್ದಬದ್ದ ಸೌದೆಯನ್ನೆಲ್ಲಾ ಧಾರಾಳವಾಗಿ ಉಪಯೋಗಿಸಿ ಈಗ ಒಂದು ಸೀಳು ಸೌದೆಗೂ ಗತಿ ಇಲ್ಲದೆ ಹೋಗಿದೆ. ಸತ್ತ ಬೇರೊಬ್ಬನ ಶವವೊಂದನ್ನು ಸೌದೆಗೆ ಗತಿಯಿಲ್ಲದೆ ಹೂಳಬೇಕಾಯಿತೆಂದೂ ತಿಳಿದು ಬಂದಿದೆ

ಜೀವನ ಮಟ್ಟ ಏರಬೇಕು

ಪುನರ್ರಚನೆ ಎಂಬ ಮಾತು ಸರಿಯಲ್ಲ ಅಡಿಪಾಯವೇ ತಪ್ಪಾಗಿದೆ ಅಡಿಯಿಂದ ಬಿಡಿ ಹೊಸ ರಚನೆಯಾಗಬೇಕು. ಅದು ಭಾರತ ಸಮಸ್ಯೆ ಪರಿಹಾರಕ್ಕೆ ಮಾರ್ಗ. ರಚನಾತ್ಮಕ ಕಾರ್ಯ ಶ್ರದ್ಧೆಯಿಂದ ನಡೆದರೆ ಸಾಧಾರಣ ಪ್ರಜೆಯ ಜೀವನ ಮಟ್ಟವನ್ನು ಹೆಚ್ಚಿಸಬಹುದು. ಅದೇ ಅಗತ್ಯವಾಗಿ ಆಗಬೇಕಾಗಿರುವುದು ಎಂಬುದಾಗಿ ಭಾರತದ ಮಾಜಿ ಸಚಿವ ಶ್ರೀ ಎನ್. ಆರ್. ಸರ್ಕಾರ್ ರವರು ಕಲ್ಕತ್ತಾ ರೇಡಿಯೋದಿಂದ ಭಾಷಣ ಮಾಡುತ್ತಾ ಹೇಳಿದ್ದಾರೆ.

ಶಾಸನೋಲ್ಲಂಘನೆಯವರ ಬಿಡುಗಡೆ

ಪಂಜಾಬ್ ಸರ್ಕಾರದವರು ಮೊನ್ನೆ ಶ್ರೀಮತಿ ಶಾಸನೋಲ್ಲಂಘಿಯವರನ್ನೂ ಶ್ರೀ ಮುನ್ಷಿಹರಿಲಾಲರನ್ನೂ ಮತ್ತಿತರ ೧೩ ಮಂದಿ ರಾಜಕೀಯ ಬಂದಿಗಳನ್ನೂ ಬಿಡುಗಡೆ ಮಾಡಿದರು.

ಎಣ್ಣೆ ಸೈಪು ಸಾಲಿನ ನಿರ್ಮಾಣ

ಪರ್ಷಿಯನ್ ಕೊಲ್ಲಿ ಪ್ರದೇಶದಿಂದ ಭೂಮಧ್ಯ ಸಮುದ್ರತೀರಕ್ಕೆ ಎಣ್ಣೆ ರವಾನೆ ಪೈಪು ಸಾಲನ್ನು ನಿರ್ಮಿಸಲು ಅಮೆರಿಕಾ ಸರ್ಕಾರವು ನಿರ್ಧರಿಸಿರುವುದಾಗಿ ತಿಳಿದುಬಂದಿದೆ.

ವೈಸ್ರಾಯರು ಬಿಕಾನೀರ್‌ನಲ್ಲಿ

ಭಾರತದ ವೈಸ್ರಾಯ್ ದಂಪತಿಗಳು ಮೊನ್ನೆ ಬಿಕಾನೀರ್ ಸಂಸ್ಥಾನಕ್ಕೆ ಭೇಟಿ ಕೊಟ್ಟು ಬಿಕಾನೀರ್ ಮಹಾರಾಜರ ಅತಿಥಿಗಳಾಗಿ ದ್ದರು. ಸಂಸ್ಥಾನದ ಪ್ರಮುಖ ಸ್ಥಳಗಳನ್ನೆಲ್ಲ ಸಂದರ್ಶಿಸಿದರೆಂದು ವರದಿಯಾಗಿದೆ

ವೆಂಡಲ್‌ವಿಲ್ಕಿ ಅಧ್ಯಕ್ಷ ಸ್ಥಾನಕ್ಕೆ

ಅಮೇರಿಕಾ ಅಧ್ಯಕ್ಷ ಚುನಾವಣೆಗೆ ಮಿ|| ವೆಂಡಲ್‌ವಿಲ್ಕಿಯವರೂ ಉಮೇದುವಾರರಾಗಿ ನಿಲ್ಲುವರಂತೆ

ನಾಜಿ ವಿಮಾನ ನೆಲೆಗಳಿಗೆ ಹೊಡೆತ

ಮಧ್ಯ ಫ್ರಾನ್ಸಿನಲ್ಲಿರುವ ಜರ್ಮನರ ವಿಮಾನ ನೆಲೆಗಳಿಗೆ ನೆನ್ನೆ ಅಮೆರಿಕಾ ವೈಮಾನಿಕರು ಬಾಂಬುಗಳನ್ನು ಪ್ರಯೋಗಿಸಿ ಬಲವಾದ ಹೊಡೆತ ಕೊಟ್ಟು ಬಂದುದಾಗಿ ಸುದ್ದಿ ಬಂದಿದೆ.

ರೋಸ್ಟೋವ್ ರಷ್ಯನರು ಹಿಡಿದರು

ರೋಸ್ಟೋವ್ ಮತ್ತು ಲಿಸ್ ಪಟ್ಟಣಗಳನ್ನು ರಷ್ಯನರು ಹಿಡಿದಿರುವುದಾಗಿ ಸ್ಟಾಲಿನರು ಪ್ರಕಟಿಸಿದ್ದಾರೆ. ಆ ಪಟ್ಟಣಗಳನ್ನು ತಾವು ಖಾಲಿ ಮಾಡಿರುವುದಾಗಿ ಜರ್ಮನರು ಮೊನ್ನೆ ಪ್ರಕಟಿಸಿದ್ದರು.

ನಾಜಿಗಳಿಗೆ ಹೆಚ್ಚು ಒತ್ತಡ

ನಿಕೊಪಾಲ್ ಪ್ರದೇಶದಲ್ಲಿರುವ ತಮ್ಮ ದಳಗಳ ಮೇಲೆ ರಷ್ಯನರ ಒತ್ತಡ ಹೆಚ್ಚಿದೆಯೆಂದು ಜರ್ಮನರೇ ಒಪ್ಪಿಕೊಂಡಿದ್ದಾರೆ.

ರೋಮಿನಲ್ಲಿ ಹೊಟ್ಟೆಗಿಲ್ಲ

ಶನಿವಾರ ರಾತ್ರಿ ರೋಮ್ ರೇಡಿಯೋದಲ್ಲಿ ನಡೆಯುತ್ತಿದ್ದ ಸಂಗೀತ ಕಛೇರಿಯಾಗಿ ನಿಂತು, ಒಂದು ಪ್ರಕಟಣೆ ಹೊರಟಿತು. ರೋಮ್ ನಗರದಲ್ಲಿನ ಆಹಾರ ಪರಿಸ್ಥಿತಿ ಅತ್ಯಂತ ಕ್ಷೀಣವಾಗಿ ಹೋಗಿದೆ. ಇನ್ನು ಮುಂದೆ ಹೊರಗಿನ ಆಹಾರ ಸರಬರಾಜು ರೋಮಿಗೆ ಬರುವುದಿಲ್ಲ. ರೋಮಿನಲ್ಲಿ ಎಷ್ಟಿದೆಯೋ ಅಷ್ಟನ್ನೇ ಎಲ್ಲರೂ ತಮ್ಮ ತಮ್ಮ ಹೊಟ್ಟೆಗಳಿಗೆ ಹಂಚಿಕೊಳ್ಳಬೇಕಾಗಿದೆ ಎಂಬುದೇ ಆ ಪ್ರಕಟಣೆ

ವ್ಯವಹಾರ ಸಿಂತಿಟೆ

ಆಜ ಎಟ್ಲಿ ಗಾ ಸರ್ಕಾರವು ತಾನು ಯುದ್ಧ ಯಾವ ದೇಶಗಳೊಡನೆ ತನ್ನ ಡಿಪ್ಲೊಮ್ಯಾಟಿಕ್ ಸಂಬಂಧವನ್ನು ಕಡಿದುಕೊಂಡಿದೆಯೋ ಅವುಗಳೊಡನೆ ತಾನು ನಡೆಸುತ್ತಿದ್ದ ಎಲ್ಲ ವ್ಯವಹಾರಗಳನ್ನೂ ಸಂಪೂರ್ಣವಾಗಿ ನಿಲ್ಲಿಸುವುದಾಗಿ ತಿಳಿದುಬಂದಿದೆ

ವರ್ತಕರ ಮೂಲಕ ರೇಷನ್ ಹಂಚಿಕೆ

ಸ್ವಂ. ವ.]. ಮೈಸೂರು ೬

ಮೈಸೂರು ನಗರದಲ್ಲಿ ರೇಷನಿಂಗ್ ಆಹಾರ ಪದಾರ್ಥಗಳನ್ನು ತಕ್ಕ ಹತೋಟಿಯಲ್ಲಿ ವರ್ತಕರಿಂದ ವಿತರಿಸಲು ಸರ್ಕಾರದವರ ವಿಚಾರ ಮಾಡುತ್ತಲಿದ್ದಾರೆ. ವರ್ತಕರುಗಳಿಗೆ ದೊರೆಯುವ ವಿಷಯವನ್ನು ಪರಿಶೀಲಿಸಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಏರ್ಪಡಿಸಿದ್ದಾರೆ. ಸದರೀ ಸಮಿತಿ ಮೀಟಿಂಗ್ ಡಿ|| ಕಮೀಷನರಾದ ಶ್ರೀ ರಣಜೋಧ್ ಸಿಂಗ್‌ರವರ ಅಧ್ಯಕ್ಷತೆಯಲ್ಲಿ ನಿನ್ನೆ ನಡೆದು ವಿವರಗಳನ್ನು ಪರಿಶೀಲಿಸಿದರೆಂದು ಗೊತ್ತಾಗಿದೆ.

ಇಟಲಿ ಜಹಜುಗಳ ಬಂಧ ಮುಕ್ತಿಗೆ ಮಾರ್ಗ

ಸ್ಪೈನ್ ದೇಶದ ತೀರಪ್ರದೇಶಗಳಲ್ಲಿರುವ ಇಟಲಿಯವರಿಗೆ ಸೇರಿದ ಹಡಗುಗಳು ಬಡೋಗ್ಲಿಯೊ ಬಾವುಟಗಳನ್ನು ಹಾರಿಸಿಕೊಂಡು ಪ್ರಯಾಣ ಮಾಡಬಹುದೆಂದು ಅವಕಾಶ ಕೊಡಲಾಗಿದೆ. ಅದರಂತೆ ಈಗಾಗಲೇ ಮೂರು ಇಟಲಿ ಜಹಜುಗಳು ಬಡೋಗ್ಲಿಯೋ ಬಾವುಟವನ್ನೆತ್ತಿ ಕಟ್ಟಿಕೊಂಡು ಸ್ಪೈನ್ ತೀರಪ್ರದೇಶವನ್ನು ಬಿಟ್ಟು ಪ್ರಯಾಣ ಬೆಳೆಸಿವೆ

ಲಂಡನ್ನಿನಿಂದ ಭಾರತಕ್ಕೆ ಎಕ್ಸ್‌ಪ್ರೆಸ್ ಟಪಾಲು

ಬ್ರಿಟಿಷ್ ಅಂಚೆಯವರು ಲಂಡನ್ನಿನಿಂದ ಆಫ್ರಿಕಾ, ಇಂಡಿಯಾ, ಆಸ್ಟ್ರೇಲಿಯಾ, ನ್ಯೂಜಿಲೆಂಡ್ ಇವುಗಳನ್ನೆಲ್ಲಾ ಸಂಬಂಧಿಸುವ ಎಕ್ಸ್‌ಪ್ರೆಸ್ ಟಪಾಲು ಸೌಕರ್ಯವನ್ನು ಏರ್ಪಡಿಸಿಕೊಂಡಿರುವರೆಂದು ವಾರ್ತೆ ಬಂದಿದೆ,

ಯುದ್ಧ ಸಾಮಗ್ರಿ ಸಾಗಿಸುವಾಗ ಅನಾಹುತ

ಉತ್ತರ ಇಂಗ್ಲೆಂಡಿನ ತೀರ ಒಂದರಲ್ಲಿ ಯುದ್ಧ ಸಾಮಗ್ರಿ ಮದ್ದು ರವಾನಿಸಲು ಹೇರುತ್ತಿದ್ದಾಗ ಸಿಡಿದು ೧೫ ಮಂದಿ ಮೃತಪಟ್ಟರೆಂದೂ ೬೦ ಮಂದಿಗೆ ಗಾಯಗಳಾಗಿವೆಯೆಂದೂ, ಇನ್ನೂ ಅನೇಕರು ಪತ್ತೆಯಿಲ್ಲವೆಂದೂ ಗೊತ್ತಾಗಿದೆ

೧೫ ಮಂದಿ ಕಾಂಗ್ರೆಸ್ ಸದಸ್ಯರು ಶಾಸನ ಸಭೆಗೆ

ಕಾಂಗ್ರೆಸ್ ಪಕ್ಷದವರ ನಿರ್ಧಾರ ಏನೇ ಆಗಲಿ ತಾವಂತೂ ಕೇಂದ್ರ ಶಾಸನ ಸಭಾ ಕಾರ್ಯ ಕಲಾಪಗಳಲ್ಲಿ ಭಾಗವಹಿಸಿಯೇ ತೀರತಕ್ಕದ್ದೆಂದು ೧೫ ಮಂದಿ ಕಾಂಗ್ರೆಸ್ ಸದಸ್ಯರು ತೀರ್ಮಾನಿಸಿರುವುದಾಗಿ ತಿಳಿದು ಬರುತ್ತದೆ.

ಶಾ|| ಸ|| ಸದಸ್ಯರಿಗೆ ಅಸೌಕರ್ಯ

ಇಂದಿನಿಂದ ದೆಹಲಿಯಲ್ಲಿ ಕೇಂದ್ರ ಶಾಸನ ಸಭಾಧಿವೇಶನ ಪ್ರಾರಂಭವಾಗಲಿದೆ. ಅಧಿವೇಶನದಲ್ಲಿ ಭಾಗಿಗಳಾಗಲು ದೆಹಲಿಗೆ ಆಗಮಿಸಿರುವ ಶಾಸನ ಸಭಾ ಸದಸ್ಯರಿಗೆ ಆಹಾರ ಪದಾರ್ಥಗಳ ರೇಷನಿಂಗ್ ನಿಮಿತ್ತ ಕಷ್ಟವಾಗಿ ಪರದಾಡುತ್ತಿದ್ದಾರೆಂದು. ತಕ್ಕಷ್ಟು ಸಾಮಾನು ದೊರೆಯದೆ ಎಲ್ಲರಿಗೂ ಕಷ್ಟವಾಗಿದೆಯೆಂದೂ ಎಲ್ಲರಿಗೆ ವಿಪರೀತ ಅಭಾವವಾಗಿದೆಯೆಂದೂ ತಿಳಿದು ಬಂದಿದೆ. ಈ ಬಗ್ಗೆ ಶಾಸನ ಸಭೆಯಲ್ಲಿ ಪ್ರಶ್ನೆಗಳೇಳುವ ಸಂಭವವಿದೆ

ನನ್ನ ಮನವನ್ನು ಸೂರೆಗೊಂಡ ಮಹಾತ್ಮ

ಅಲ್ಲಿಂದಲೇ ಸ್ವರ್ಗದ ಬಾಗಿಲನ್ನು ತೆರೆಯುವ ಸುವರ್ಣ ಕೀಲಿ

ಲೇಖಕರು:— ಶ್ರೀ ಎಂ. ದೇವಪ್ರಸಾದ್, ಮೈಸೂರು.

[illegible] ಮನವನ್ನು ಸೂರೆಗೊಳ್ಳುವ [illegible] ಒಂದೊಂದು ಮನುಷ್ಯರಿಗೂ ಬೇ[illegible] ಆ ಕಾರ್ಯವನ್ನು ಮಾಡಬಲ್ಲ ವ್ಯ[illegible] ತನ್ನಲ್ಲೇ ಆಗಬೇಕು. ಆ [illegible] ಕಾರ್ಯವು ಎಂ[illegible] ಸಾಧ್ಯವಾಗುವಂತಿಲ್ಲ. [illegible] [illegible] ?

[illegible] ಮಹಾತ್ಮನೆಂಬ [illegible] [illegible] ನನಗೆ ತಿಳಿದ ಕೂಡಲೇ [illegible] ಆತನ [illegible] ನೋಡುತ್ತ [illegible] ಗಾಂಧೀಜಿಯೇ ಆ ಮ[illegible] ಆತನನ್ನು ಮಹಾತ್ಮನೆಂದು [illegible] ಪ್ರಪಂಚವನ್ನು, ಅದರಲ್ಲೂ [illegible] ಆತನಲ್ಲಿ ನಾನು ಮ[illegible] [illegible] ಕಣ್ಣಿನ [illegible] ? ಇಲ್ಲ [illegible] ಇಲ್ಲ. ಈ ನಾಗರಿಕ [illegible] ಆತನೇ ಮಹಾತ್ಮನೆಂಬ ನಾ[illegible] ಅವನೆಂಬುದು ಸರ್ವರಿಗೂ [illegible] ಹೊಗಿದೆ. ಈ ಮ[illegible] ಮಹಾ ವ್ಯಕ್ತಿಗಳ ಮನ[illegible] ಸೂರೆಗೊಳ್ಳುತ್ತಿರುವಲ್ಲಿ ನನ್ನಂಥಾ [illegible] ಒಬ್ಬ ಸಾಧಾರಣ ವ್ಯ[illegible] ಮನವನ್ನು ಸೂರೆಗೊಂಡಿರುವುದರ[illegible] ಆಶ್ಚರ್ಯವೇನಿದೆ? ಏನೂ ಇಲ್ಲ.

ಮಹಾ ವ್ಯಕ್ತಿ

ಒಬ್ಬನು ಮಹಾತ್ಮಾ ಗಾಂಧಿಯನ್ನು ನೋಡಿದ ಕೂಡಲೇ ಆತನ ವ್ಯಕ್ತಿತ್ವವು ಆ ಮನುಷ್ಯನ ಮನವನ್ನು ತನ್ನ ಕಡೆಗೆ ಸೆಳೆದುಕೊಳ್ಳದೆ ಇರದು. ಆತನನ್ನು ಮ[illegible] ನೋಡೋಣ ಎನ್ನಿಸುತ್ತದೆ ಆ ಮನುಷ್ಯನಿಗೆ. ಆ ವ್ಯಕ್ತಿತ್ವದಲ್ಲಿ [illegible] ಯಾವ [illegible] ಇರುವಂತೆ ಭಾಸ[illegible] ಇದು ನನ್ನ ಅನುಭವ ಮಾ[illegible] ಆಗಿಲ್ಲದೆ ಆತನನ್ನು ದರ್ಶಿಸುವ ಅ[illegible] ನನ್ನಂತೆ ಪಡೆದಿರತಕ್ಕ ಅನೇಕ ಜನಗಳ ಅಭಿಪ್ರಾಯವೂ ಆಗಿದೆ. ಆ[illegible] ಮುಗಿಯಿತು. [illegible] ಒಂದು ರೀತಿ[illegible] ಗಾಂಭೀರ್ಯವಿದೆ ಆತನ ಮಾತು[illegible] ಕೇಳುತ್ತಿದ್ದ[illegible] [illegible]

ಕೆಂತೆ ಆತನ ಮಾತುಗಳನ್ನು ಕೇಳುತ್ತಾ ಕುಳಿತುಕೊಳ್ಳುವರು. ಆತನ ಮಾತಿಗೆ ಆಕ್ಷೇಪಣೆ ಪ್ರತಿ ಮಾತನಾಡುವ ಎದೆಗಾರಿಕೆಯು ಯಾರಿಗೂ ಇರುವುದಿಲ್ಲ. ಆ ವ್ಯಕ್ತಿಯಲ್ಲಿ ಅಂಥಾ ಒಂದು ಅಸಾಧಾರಣವಾದ ಲಕ್ಷಣವು ಉನ್ನತವಾಗಿ ಎದ್ದು ಕಾಣುತ್ತಿರುವುದು.

ಗಾಂಧಿಜಿ ಭೀಷ್ಮಾಚಾರ್ಯರಂತೆ

ಈ ಮಾತುಗಳನ್ನು ಓದಿದ ಕೂಡಲೆ ಓದು ಜನರು ನಗಬಹುದು. ಈ ಮಾತುಗಳು ಓದುಗರನ್ನು ಹಾಸ್ಯಮಾಡಲೂ ಬಹುದು. ಆದರೆ ಸತ್ಯಾಂಶವನ್ನು ಕಂಡುಕೊಂಡನಂತರ ಹಾಗೆ ಮಾಡಲಾರರೆಂಬುದೇ ನನ್ನ ನಂಬಿಕೆ. ಆತನ ದೇಹವು ಬಹು ತೆಳ್ಳನೆಯ ಕಂಠವುಳ್ಳದ್ದು ನಿಜ. ಆತನ ಅಂದವು ಅಷ್ಟರಲ್ಲಿಯೇ ಇದೆ. ಒಬ್ಬ ಉನ್ನತ ದೇಹದ ವ್ಯಾಯಾಮಗಾರನು ಅದನ್ನು ಕಂಡರೆ ಜಿಗುಪ್ಸೆಪಟ್ಟುಕೊಳ್ಳುವಂತಿದೆ ಅದು. ಆದರೆ ಹಾಗೆ ಜಿಗುಪ್ಸೆ ಪಡಬಹುದಾದ ಆ ಉನ್ನತ ದೇಹಿಯು ಆ ಒಣಕಲು. ಇಂದಿನ ಮಹಾತ್ಮನು ತನ್ನ ದೇಹವನ್ನು ದಂಡಿಸಿರುವಂತೆ ದಂಡಿಸಿ ನೋಡಲಿ ಕಂಡುಕೊಳ್ಳುತ್ತ ಆವನ ಉನ್ನತ ದೇಹದ ತಿರುಳು. ಇಂಗ್ಲೆಂಡ್ ದೇಶದ ತನ್ನ ಸಂಚಾರ ಕಾಲದಲ್ಲಿಯೂ ಯಾವವಿಧವಾದ ಚಿಕಿತ್ಸೆಯ ಉಡುಪುಗಳನ್ನೂ ಕೋರದೆ, ಆರೋಗ್ಯವಾಗಿಯೇ ಇದ್ದು ತನ್ನ ಕಾರ್ಯಗಳನ್ನು ಮುಗಿಸಿಕೊಂಡು ಹಿಂತಿರುಗಿ ಸ್ವದೇಶಕ್ಕೆ ಬಂದ ದೇಹ ಅದು. ಹತ್ತಾರು ದೀರ್ಘ ಕಾಲದ ಉಪವಾಸಗಳನ್ನು ಮಾಡಿದರೂ ಕೇವಲ ಅಲ್ಪಕಾಲದಲ್ಲಿಯೇ ತನ್ನ ಹಿಂದಿನ ಸ್ಥಿತಿಯನ್ನು ಮುಟ್ಟಬಲ್ಲ ಶಕ್ತಿಯುಳ್ಳದ್ದು ಆ ದೇಹ. ರಕ್ತದ ಒತ್ತಡವು ಅಧಿಕವಾಗಿದ್ದರೂ ಅನೇಕ ಶ್ರಮಸಾಧ್ಯವಾದ ಕಾರ್ಯಗಳನ್ನು ಕೈಗೊಳ್ಳಲು ನವ ತರುಣನಂತೆ ಉತ್ಸುಕತೆಯಿಂದ ಮುಂದೆ ನುಗ್ಗಿ ಬರುವ ಚೈತನ್ಯ ಉಳ್ಳದ್ದು ಆ ದೇಹ. ಅದರ ವೈಚಿತ್ರ್ಯವನ್ನು ತಿಳಿಯಬೇಕಾದಲ್ಲಿ ಮಹಾತ್ಮ ಗಾಂಧಿಯು ಬಳ ವಿಶೇಷ ಸಂದರ್ಭಗಳಲ್ಲಿ ಇರುತ್ತಲಿರುವ ಪ್ರಸಿದ್ಧ ವೈದ್ಯ ಶಿರೋಮಣಿಗಳನ್ನೇ ಕೇಳಬೇಕಾಗಿದೆ. ಒಟ್ಟಿನಲ್ಲಿ ಹೇಳಬೇಕಾದರೆ ಮಹಾತ್ಮ ಗಾಂಧಿಯು ಭೀಷ್ಮಾಚಾರ್ಯರಂತೆ ಇಚ್ಛಾ ಮರಣಿಯೇ ಆಗಿರಬೇಕು.

ಉಪವಾಸ ಔತಣಕ್ಕೆ ಸಮ

ಎಂಥಾ ಭೀಕರ ಸನ್ನಿವೇಶದಲ್ಲಿಯೂ ಮಹಾತ್ಮನು ಅಧೈರ್ಯಪಟ್ಟಿಲ್ಲ, ಪಡುತ್ತಿಲ್ಲ, ಪಡಲಾರನೆಂಬುದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಎಂಥಾ ಶ್ರಮಸಾಧ್ಯವಾದ ಕಾರ್ಯವನ್ನು ಮಾಡಬೇಕಾದರೂ 'ನಾನು ಮುಂದು' ಎನ್ನುತ್ತಾ ಮುಂದೆ ನುಗ್ಗಬಲ್ಲವನು. ಎಂಥಾ ವ್ಯಕ್ತಿಯನ್ನಾದರೂ ಎದುರಿಸಬಲ್ಲ ವೀರನಾಗಿದ್ದಾನೆ. ಇಷ್ಟಕ್ಕೆಲ್ಲಾ ಆ ಒಣಕಲು ದೇಹದಲ್ಲಿ ಶಕ್ತಿ ಎಲ್ಲಿಂದ ಬರಬೇಕು. ಆ ಶಕ್ತಿಯು ಆತನ ಆತ್ಮದ್ದು. ಆದ್ದರಿಂದಲೇ ಆತನಿಗೆ ಸೆರೆಮನೆಯು ಅರಮನೆಯಾಗಿದೆ. ಅಪಮಾನವು ಮಾನವಾಗಿದೆ. ಉಪವಾಸವು ಔತಣವಾಗಿದೆ. ದಾರಿದ್ರ್ಯವು ಭೋಗವಾಗಿದೆ. ಆತನ ಅಸಾಧಾರಣ ಆತ್ಮಶಕ್ತಿಯ ಮುಂದೆ ಯಾವುದರ ಆಟವೂ ನಡೆಯುವಂತಿಲ್ಲವೆಂಬುದೇ ಈ ದೀನನ ನಂಬುಗೆ.

ಹಕ್ಕಿಗೆ ಹೋರಾಡಿ ಎಂದು ಕಲಿಸಿದಾತ

ಇಡೀ ಪ್ರಪಂಚದ ಮಾನವ ಕೋಟಿಯ ಪ್ರತಿಯೊಂದು ವ್ಯಕ್ತಿಗೂ ಸಮಸಮಾನವಾದ ಹಕ್ಕುಬಾಧ್ಯತೆಗಳಿವೆ—ಎಂಬುದನ್ನು ಪ್ರಕಾಶಕ್ಕೆ ತಂದು ಪ್ರತಿ ವ್ಯಕ್ತಿಯೂ ಅವುಗಳಿಗಾಗಿ ನ್ಯಾಯವಾದ ರೀತಿಯಲ್ಲಿ ಹೋರಾಡಿ ಅವುಗಳನ್ನು ದೊರಕಿಸಿಕೊಳ್ಳಲು ಪ್ರಯತ್ನಿಸಬೇಕೆಂಬುವನ್ನು ತೋರಿಸಿಕೊಟ್ಟ ಪುಣ್ಯಾತ್ಮನಲ್ಲವೇ ಆತನು? ಇದು ಮಾನವ ಕೋಟಿಗೆ ಆತನು ತಂದುಕೊಟ್ಟ ಬೆಳಕಲ್ಲವೆ? ಇದನ್ನು ತಂದುಕೊಡಲು ಆತನು ದಕ್ಷಿಣ ಆಫ್ರಿಕದಲ್ಲಿ ಪಟ್ಟ ಶ್ರಮವೆಷ್ಟೆಂಬುದನ್ನು ಎಲ್ಲರೂ ಬಲ್ಲರು. ಈಗಲೂ ಆ ಬೆಳಕನ್ನು ಕಾಣದ ನಮ್ಮಂಥವರಿಗೆ ಅದನ್ನು ದೊರಕುವಂತೆ ಮಾಡಲು ಆತನು ಮಾಡುತ್ತಿರುವ ವ್ಯವಸಾಯವು ಎಷ್ಟೆಂಬುದನ್ನು ನಾವು ಈದಿನ ನಮ್ಮ ಕಣ್ಣ ಮುಂದೆ ನೋಡುತ್ತಿಲ್ಲವೆ?

ತ್ಯಾಗಮೂರ್ತಿ

ಆತನು ಮಹಾ ತ್ಯಾಗಿ. ತ್ಯಾಗದ ಕೊನೇ ಅಂತಸ್ತನ್ನು ಏರಿ ಕುಳಿತಿರುವನೆಂದರೆ ಮಹಾತ್ಮ ಗಾಂಧಿ. ಅಷ್ಟ ಭೋಗಗಳನ್ನೂ ಕುಳಿತಲ್ಲಿಯೇ ಅನುಭವಿಸುವಷ್ಟು ಯೋಗ್ಯತೆ, ಅವಕಾಶಗಳು, ತನ್ನ ಮುಂದೆ ನರ್ತನಮಾಡುತ್ತಿದ್ದರೂ, ಅವುಗಳನ್ನು ಬೇಡವೆಂದು ದೂರತಳ್ಳಿಕೊಟ್ಟಿರುವವನೆಂದರೆ ಆತನಲ್ಲವೇ ಮಹಾತ್ಮ ಗಾಂಧಿ ಎಂಬ ತ್ಯಾಗಿ. ರಾಜನು ಸಮಸ್ತ ಭೋಗಗಳನ್ನೂ ಕಾಲಿನ ಕಸದಂತೆ ಭಾವಿಸಿ ಕೇವಲ ಲಂಗೋಟಿಯ ಮನುಷ್ಯನಂತೆ ನಮ್ಮ ಮುಂದೆ ಜೀವಿಸುತ್ತಿರುವ ಆ ತ್ಯಾಗಮೂರ್ತಿಯನ್ನು, ಆತನ ದೊಡ್ಡಸ್ತಿಕೆಯನ್ನೂ ಕಂಡು ತಲೆದೂಗದ ಮನುಷ್ಯನೂ ಒಬ್ಬ ಮನುಷ್ಯನೆ??

ಸರಳ ಜೀವಿ

ಕೇವಲ ಆಡಂಬರ ಜೀವನದಿಂದ ದುರ್ಬಲತೆಯೂ, ಸ್ವಾರ್ಥತೆಯಿಂದ ಪರಜನ ಪೀಡನೆಯೂ ಮಾನವನನ್ನು ಅಂಟಿ ಬಾರದಂತೆ ಹಿಂಬಟ್ಟುತ್ತವೆಂಬುದನ್ನು ತನ್ನ ಜ್ಞಾನ ಬಲದಿಂದ ತಿಳಿದು ತನ್ನ ಜೀವನದ ರೀತಿಯನ್ನೇ ಸಂಪೂರ್ಣವಾಗಿ ಮಾರ್ಪಡಿಸಿಕೊಂಡು ಕೇವಲ ಸಾಧಾರಣವಾದ ರೀತಿಯಲ್ಲಿ ಅದನ್ನು ಸಾಗಿಸುತ್ತಿರುವ ಆ ಮಹಾತ್ಮನ ಸಹವಾಸದಿಂದ ಅನೇಕರು ಬುದ್ಧಿ ಕಲಿಯಲು ಅವಕಾಶವಿಲ್ಲವೇ? ಸರಳ ಜೀವಿಯೊಬ್ಬನು ಮಾತ್ರ ಪರಹಿತ ಕಾರ್ಯಗಳನ್ನು ಮಾಡಲು ಸಾಧ್ಯವೇ ಹೊರತು ಇತರೇ ಜನಗಳಿಂದ ಅದೆಂದಿಗೂ ಸಾಧ್ಯವಿಲ್ಲ. ಈ ಸತ್ಯವನ್ನು ಮಹಾತ್ಮ ಗಾಂಧಿಯು ತನ್ನ ಜೀವನದ ಮೂಲಕವಾಗಿ ಈಗಲೂ ಪ್ರಪಂಚಕ್ಕೆ ತೋರಿಸಿಕೊಡುತ್ತಲೇ ಇರುವನು. ಆತನು ತುಳಿದು ಓಡಾಡುತ್ತಿರುವ ಈ ಸರಳ ಜೀವನ ಮಾರ್ಗವನ್ನು ತಾವೂ ತುಳಿದು ಓಡಾಡಲು ಸಿದ್ಧವಾಗಿರತಕ್ಕ ವ್ಯಕ್ತಿಗಳು ಅತಿ ವಿರಳವೆಂದೇ ಹೇಳಬೇಕಾಗಿದೆ.

ಮಹಾತ್ಮ ಗಾಂಧಿಯು ಮಹಾ ಪವಿತ್ರನು. ಯಾವ ವಿಧವಾದ ಅಪವಿತ್ರತೆಗೂ ಆತನ ದೇಹಾತ್ಮಗಳಲ್ಲಿ ಸ್ಥಳವಿಲ್ಲ. ಪರಮಾತ್ಮನಲ್ಲಿಯೂ ದೋಷವನ್ನು ಹುಡುಕುವ ಸ್ವಭಾವವುಳ್ಳ ನಾಸ್ತಿಕರಿಗೆ ಮಾತ್ರ ಆತನಲ್ಲಿ ಅಪವಿತ್ರತೆ ಕಂಡು ಬರಬಹುದೇ ಹೊರತು ನಿಜ ನರಿಗೆಂದಿಗೂ ಹಾಗಾಗಲಾರದು.

ಆತನ ದೇಶಾಭಿಮಾನವು ಅಗಾಧವಾದದು. ಆತನು ಹದಿನಾರಾಣೆ ದೇಶ ಭಕ್ತನು. ಇವರ ಬಿಡುಗಡೆ, ಉನ್ನತಿ ಇವುಗಳಲ್ಲಿ ಆತನಿಗಿರುವ ಅಭಿಮಾನವು ಅತ್ಯಧಿಕ. ಅದರ ಮುಂದೆ ಆತನಿಗೆ ಸ್ವರ್ಗ ಸುಖವೆಂಬುದು ಮಹತ್ವದಿಂದಿರಲಾರದು. ಆ ದೇಶದ ಮೇಲಿನ ಅಭಿಮಾನದಿಂದ ಆತನು ದಣಿಸಿ ಹೋಗುತ್ತಿರುವುದನ್ನು ಪ್ರತಿಯೊಬ್ಬ

(ಮುಂದಿನ ಪುಟ ನೋಡಿ)

|| ವಂದೇಮಾತರಂ ||

ನವೀನ ಮಾದರಿ! ದೀರ್ಘ ಬಾಳಿಕೆ! ಕಡಿಮೆ ಬೆಲೆ !!

ದೇಶೀಯ ಕೈಗಾರಿಕೆ

ಕೈಮಗ್ಗದಿಂದ ಮಾಡಿದ ಸಿಲ್ಕ್ ಪ ಚ್ಚೆ ಗೆ ಮಾದರಿಗಳಿಗೆ

ರಗ್ಗು, ಕಂಬಳಿ, ಕಂಬಳಿ ಕೋಟಿಂಗ ರತ್ನಕಂಬಳಿಗಳಿಗೆ

ಜಿ. ವಿ. ಸೂರ್ಯನಾರಾಯಣ ಶೆಟ್ಟಿ ಅಂಡ್ ಸನ್ಸ್

ಜುವೆಲರ್ಸ್ & ರೆಡಿಮೇಡ್ ಡ್ರೆಸ್ ಎಂಪೋರಿಯಂ,

ಸಯ್ಯಾಜಿರಾವ್ ರೋಡ್, ಮೈಸೂರು

ಪಿ. ಸಿ. ನಟರಾಜ್

ಔಷಧಾಲಯ

ಇವರಲ್ಲಿ ನೇತ್ರಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ

[illegible]

ನವಯೌವನ

ಕೊಬ್ಬು, ಬಲಹೀನತೆ, ಮಲಬದ್ಧತೆ, ವೀರ್ಯಸ್ಖಲನ, ಧಾತುಪರಿಣಾಮ ಮೊದಲಾದವನ್ನು ಶೀಘ್ರದಲ್ಲೇ ಪರಿಹರಿಸಲು ಮದನಮಂಜರಿ ಮಾತ್ರೆಗಳು ದಿವ್ಯ ಔಷಧ

ಡಬ್ಬಿ ಒಂದಕ್ಕೆ ರೂ. 1

ಮದನಮಂಜರಿ ಫಾರ್ಮಸಿ, 131 ಪೈನಾ ಬಜಾರು, ಮದರಾಸು.

ಅಶೋಕಾ ಫಾರ್ಮಸಿ ಬ್ಯಾಂಕು ರಸ್ತೆ, ಮೈಸೂರು

[illegible]

ಸ್ತ್ರೀಯರ ಸೌಕರ್ಯಕ್ಕಾಗಿ

[illegible] ರಿಂದ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿದೆ

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿ ಪುಡಿ

ನನ್ನೇ ಉಪಯೋಗಿಸಿ.

ಡಿ. ಪುಟ್ಟಯ್ಯ ಸನ್ಸ್ ಮಂಡಿ, ದೇವರಾಜ ಮಾರ್ಕೆಟ್, ಮೈಸೂರು

[illegible] ಸಂತೆಪೇಟೆ ಹೆಡ್ ಆಫೀಸಿನಲ್ಲೂ ಇವೆ, [illegible] ದೊರೆಯುತ್ತದೆ. [illegible] ದೊರೆಯುತ್ತವೆ.

ವಾರ ಭವಿಷ್ಯ

ತಾ|| ೭-೫-೪೪ ರಿಂದ ೧೩-೫-೪೪ರ ವರೆಗೆ

(ಶ್ರೀ ನಿತ್ಯಾನಂದ ಸ್ವಾಮಿಗಳಿಂದ)

ಮೇಷ—ಈ ವಾರ ನೀವು ಮೊದಲಿನಿಂದಲೇ ಎಚ್ಚರದಿಂದಿದ್ದು ಮುಂಬರುವ ಸಂಕಟದಿಂದ ಪಾರಾಗಿರಿ. ಆರೋಗ್ಯ ಚೆನ್ನಾಗಿದ್ದರೂ ಆರ್ಥಿಕ ತೊಂದರೆ ಹೆಚ್ಚುವುದು ವ್ಯಾಪಾರ ಉದ್ಯೋಗಾದಿಗಳಲ್ಲಿ ಇಳಿತ ಆದಾಯ. ಲಾಟರಿ ಸಟ್ಟಾಗಳಲ್ಲಿ ಪ್ರವೇಶಿಸಬೇಡಿ. ತಾ|| ೮, ೧೦ ಅಪ್ರೇಕ್ಷಿತ ಕಲಹ ವಾರ್ತೆ.

ವೃಷಭ—ಈ ವಾರ ನಿಮ್ಮ ಪರಿಸ್ಥಿತಿಯು ಸರ್ವದೃಷ್ಟಿಯಿಂದಲೂ ಸಧಾರಿಸಬಹುದು. ನೀವು ಎಲ್ಲಾ ವಿಷಯಗಳಲ್ಲಿಯೂ ಸ್ವಂತ ಅಭಿಪ್ರಾಯವನ್ನ ನಡಿಸಿ ಆರೋಗ್ಯ ಉತ್ತಮಗೊಳ್ಳುವುದು. ಮಾನಸಿಕ ಚಿಂತೆ ಕಡಿಮೆಯಾಗುವುದು. ವ್ಯಾಪಾರಾದಿಗಳಲ್ಲೂ ಸಹ ಪ್ರತ್ಯೇಕ ಕಡಿಮೆಯಾಗಬಹುದು. ತಾ|| ೮ ಮಾಹಿತ್ಯದ ಲಾಭದ ಸಂಭವ, ದ್ರವ್ಯಪ್ರಾಪ್ತಿ, ಸಹಾಯ.

ಮಿಥುನ—ಈ ವಾರ ಆರ್ಥಿಕ ವೃಷ್ಟಿಯಿಂದ ಕೂಡ ನಿರೀಕ್ಷೆಯಾಗಬಹುದು ಪ್ರವಾಸದಲ್ಲಿ ಹಾನಿ. ಆರೋಗ್ಯ, ಆರ್ಥಿಕ ಮತ್ತು ಮಾನಸಿಕ ಸ್ಥಿತಿಗಳು ಸಾಧಾರಣ. ವ್ಯಾಪಾರ, ಉದ್ಯೋಗಾದಿಗಳಲ್ಲಿ ಶತ್ರು ಪೀಡೆಯಿಂದ ಹಾನಿ ಸಂಭವಿಸಬಹುದು ತಾ|| ೮, ೧೦ ಮಿತ್ರ ಸಹಾಯ.

ಕರ್ಕ—ಪ್ರತಿಸ್ಪರ್ಧಿಗಳನ್ನು ಸೋಲಿಸಲು ಈ ವಾರ ಅನೇಕ ಸುಸಂದರ್ಭಗಳು ದೊರೆಯುವುವು. ಆರೋಗ್ಯ ಚೆನ್ನಾಗಿರುವುದು. ವ್ಯಾಪಾರಾದಿಗಳಲ್ಲಿ ಧನಪ್ರಾಪ್ತಿ, ಶುಭಕಾರ್ಯಗಳು ನಿರ್ವಿಘ್ನವಾಗಿ ನೆರವೇರುವುವು ವಿದ್ಯಾಸಂಸರ ಸಹವಾಸ ಲಾಭ ವ್ಯವಹಾರದಲ್ಲಿ ಜಯ ಗೌರವ ಪ್ರಾಪ್ತಿ.

ಸಿಂಹ—ದುಃಖದಿಂದ ದೂರವಾಗಿರಿ. ಆರೋಗ್ಯ, ಆರ್ಥಿಕ ಮತ್ತು ಮಾನಸಿಕ ಸ್ಥಿತಿ ಸಾಧಾರಣ ಉದ್ಯೋಗ, ವ್ಯಾಪಾರಾದಿಗಳಲ್ಲಿ ಲಾಭವಿಲ್ಲ ಪ್ರವಾಸ ಮತ್ತು ಶುಭ ಕಾರ್ಯಗಳಲ್ಲಿ ಉದಾಸೀನತೆ ತಾ|| ೮, ೯ ವ್ಯರ್ಥ ಕಾಲ ಹರಣ.

ಕನ್ಯಾ—ಈ ವಾರ ಆರ್ಥಿಕ ಸ್ಥಿತಿ ಸಾಧಾರಣ. ಮಂಗಳ ಕಾರ್ಯಗಳು ನಿರ್ವಿಘ್ನವಾಗಿ ನೆರವೇರುವುವು. ಅಪ್ರೇಕ್ಷಿತ ಆಗಮನ. ಉದ್ಯೋಗ, ವ್ಯಾಪಾರಾದಿಗಳಲ್ಲಿ ವಿರೋಧಿಗಳ ನಾಶ, ನಿಮ್ಮ ಪ್ರಗತಿ ದಾನ ಧರ್ಮಗಳು ಉತ್ತಮ. ತಾ|| ೯, ೧೦ ಸ್ವಾರ್ಯದಲ್ಲಿ ವ್ಯಯ, ಗಡಿಬಿಡಿ

ತುಲಾ—ಈ ವಾರ ಆರೋಗ್ಯ ಕೆಡಬಹುದು. ವ್ಯಾಪಾರ, ಉದ್ಯೋಗಾದಿಗಳಲ್ಲಿ ಬೆಜಾರು ಪ್ರಿಯಜನರ ವಿಯೋಗಳ್ಳ ಸಂಭವಿಸಬಹುದು. ಆರ್ಥಿಕ ಸ್ಥಿತಿ ಸಾಧಾರಣ ತಾ|| ೧೦, ೧೧ ದ್ರವ್ಯ ಪ್ರಾಪ್ತಿ, ಸಂಕಟದಿಂದ ಮುಕ್ತಿ

ವೃಶ್ಚಿಕ—ಫಲವೇನಾದರಾಗಲಿ, ಕರ್ತವ್ಯದ ಕಡೆ ದೃಷ್ಟಿಯಿರಲಿ ಈ ವಾರ ಆರೋಗ್ಯ ಉತ್ತಮ ಕೊಂಚ ಮಾನಸಿಕ ತೊಂದರೆ ಉದ್ಯೋಗಾದಿಗಳಲ್ಲಿ ಶತ್ರು ಪೀಡೆ ಪ್ರವಾಸದಲ್ಲಿ ತೊಂದರೆ ತಾ|| ೮ ಧನ ಸಹಾಯ, ಚಿಂತಾನಾಶ.

ಧನುಸ್ಸು—ಈ ವಾರ ಆರೋಗ್ಯ ಚೆನ್ನಾಗಿದ್ದರೂ ಗುಪ್ತ ಚಿಂತೆಯಿಂದ ತೊಳಲುವಿರಿ. ಧರ್ಮಕ್ಕಾಗಿ ಖರ್ಚು. ವ್ಯಾಪಾರಾದಿಗಳಲ್ಲಿ ಲಕ್ಷವಧಾನ ಪ್ರವಾಸ ಮತ್ತು ಸಾಂಪತ್ತಿಕ ಸ್ಥಿತಿ ಸಾಧಾರಣ. ತಾ|| ೮ ಖರ್ಚು ಅಧಿಕ

ಮಕರ—ಈ ವಾರ ಆರ್ಥಿಕ, ಮಾನಸಿಕ, ಆರೋಗ್ಯ ಸ್ಥಿತಿ ಚೆನ್ನಾಗಿರುವುವು ವ್ಯಾಪಾರ, ಉದ್ಯೋಗಾದಿಗಳಲ್ಲಿ ಯಶಸ್ಸು ದೊರಕುವುದು ಪ್ರವಾಸ ಮತ್ತು ಶುಭಕಾರ್ಯಗಳ ಯೋಗ ತಾ|| ೯, ೧೦ ಗಾ ಸಂತತಿಗೆ ಕ್ಲೇಶ, ಖರ್ಚು.

ಕುಂಭ—ಆರೋಗ್ಯ, ಮಾನಸಿಕ, ಆರ್ಥಿಕ ಸ್ಥಿತಿಗಳು. ಪ್ರವಾಸ ಮತ್ತು ವ್ಯಾಪಾರ ಉದ್ಯೋಗಾದಿಗಳಲ್ಲಿ ಅಲಕ್ಷ್ಯವುಂಟಾಗಬಹುದು ಹೆಚ್ಚು ಖರ್ಚು ತಾ|| ೮ ದುಃಖ, ಭಯ

ಮೀನ—ಈ ವಾರ ಆರೋಗ್ಯ, ಸಾಂಪತ್ತಿಕ, ಮಾನಸಿಕ, ವ್ಯಾಪಾರ, ಉದ್ಯೋಗ, ಪ್ರವಾಸ, ದಾನ ಧರ್ಮಾದಿ ಶುಭ ಕಾರ್ಯಗಳು, ಮುಂತಾದ ಎಲ್ಲಾ ದೃಷ್ಟಿಯಿಂದಲೂ ಉತ್ಕೃಷ್ಟ. ಗೌರವ ಪ್ರಾಪ್ತಿ ತಾ|| ೯, ೧೦, ೧೧ ಸತ್ಕಾರ್ಯಕ್ಕಾಗಿ ವೆಚ್ಚ ಅತಿಥಿ ಆಗಮನ

ಅಮೃತ

ಸಿತ್ತದ ಜ್ವರ, ಮಲೇರಿಯಾ ಜ್ವರ, ಜ್ವರದ ಗಡ್ಡೆ, ಇವುಗಳ ಮೇಲೆ ಬಹಳ ಚೆನ್ನಾಗಿ ಕೆಲಸ ಮಾಡುತ್ತದೆ.

ಪಂಡಿತ

ಕೆ. ವಿ. ವೆಂಕಟರಾಮಯ್ಯ

ಲಾ|| ಬೋರ್ಡ್ ವೈದ್ಯಶಾಲಾ,

ಅರಕಲಗೂಡು (ಹಾಸನ ಜಿಲ್ಲೆ)

ನನ್ನ ಮನವನ್ನು ಸೂರೆಗೊಂಡ ಮಹಾತ್ಮ

(ಹಿಂದಿನ ಪುಟದಿಂದ)

ಭಾರತೀಯನೂ ಕಂಡುಕೊಳ್ಳುವುದು. ಆತನು ತನ್ನ ದೇಶದ ಉದ್ಧಾರಕ್ಕಾಗಿ ನಡೆಸುತ್ತಿರುವ ಪ್ರಯಾಸವನ್ನು ನೋಡಿರಿ. ಅಗಾಧವಾದ ಸಾಗರದಂತಿರುವ ಆತನ ಸ್ವದೇಶ ಪ್ರೇಮವು ಎಂಥವನನ್ನಾದರೂ ದಂಗುಬಡಿಸಬಲ್ಲುದಾಗಿದೆ ತನ್ನ ದೇಶಕ್ಕಾಗಿ ಇಂಥಾ ಮಹತ್ತರವಾದ ತ್ಯಾಗವನ್ನು ಮಾಡಿರತಕ್ಕ ಆ ಪುಣ್ಯಾತ್ಮನಿಗೆ ಸ್ವರ್ಗದಲ್ಲಿ ಪರಮಾತ್ಮನಿಂದ ಬಹು ದೊಡ್ಡ ಸ್ಥಾನವು ಸಿದ್ಧವಾಗಿರುವುದನ್ನು ಪುನರಪಿ ಸಂದೇಹವಿಲ್ಲ.

ಸರ್ವರಲ್ಲೂ ಮಿತ್ರತ್ವ

ಆತನು ಸರ್ವರ ಮಿತ್ರ ಯಾರಲ್ಲಿಯೂ ಆತನಿಗೆ ವೈರವಿಲ್ಲ ಆತನು ಹಿಡಿದಿರುವ ವ್ರತದಂತೆ ತನ್ನ ದೇಶದ ಸ್ವಾತಂತ್ರ್ಯ

"ಕ್ಕಾಗಿ ಎ . . ನಾಗ್ತಿ . . ಸ್ವರೂ ಆತನಿಗೆ ತನ್ನ . . . ದ ಯಾವ ವಿಧವಾದ ಅಸಮಾ . . . ದೆಂಬುದು ಬಹು . . . ವಾಗಿದೆ ಇದು ಆತನ ವಿ . . . ದ ಒಂದು ವೈಚಿತ್ರ್ಯ ಆತನಿಗೆ ತನ್ನ ದೇಶ ಬಾಂಧವರ ಬಗ್ಗೆ ವಲ್ಲದೇ ಪ್ರೇಮವು ಪರಕೀಯರಲ್ಲಿಯೂ ಇದೆ ಈ ವಿಧವಾದ ಮನೋಭಾವವನ್ನು ಹೊಂದಿರುವುದು ಎಲ್ಲರಿಂದಲೂ ಸಾಧ್ಯವೇ? ಸಾಧ್ಯವೆನ್ನಲು ಏಕೋ ನಾಲಿಗೆಯು ತೊದಲುತ್ತಿದೆ ಈ ವಿಶ್ವಪ್ರೇಮಿ ಯ ವ್ಯಕ್ತಿಯಲ್ಲಿರುವ ವಿಶಾಲತೆಯನ್ನು ಕಂಡಾದರೂ ಇತರರು ಬುದ್ಧಿ ಕಲಿಯ ಬಾರದೇ???

ಗಾಂಧಿ ತತ್ವ

ಆತನು ಪರಮಭಕ್ತ ಪರಮಾತ್ಮನು ಆತನಿಗೆ ಸರ್ವದಾ ಮಾರ್ಗ ತೋರಿಸಿ ಕೊಡುವ ಮಿತ್ರ; ಅದ್ದರಿಂದಲೇ ಆತನ ಕಾರ್ಯಗಳಲ್ಲಿ ಮಾನವನಿಗೆ ಅಪ್ಪೋದುದೆಂದು. ಯಾವ ತತ್ವವನ್ನು ಮಾಡಬೇಕಾದರೂ ಆ ದಿವ್ಯ ಮಿತ್ರನ ಸಲಹೆಗಾಗಿ ಧ್ಯಾನಾಸಕ್ತನಾಗಿ ಕೆಲಕಾಲ ಕಳೆಯುವುದೇ ಆತನ ಮೊದಲಿನ ಕರ್ತವ್ಯ ಆತನು 'ನಿಮ್ಮ ವೈರಿಗಳನ್ನು ಪ್ರೀತಿಸಿರಿ. ನಿಮ್ಮನ್ನು ಹಿಂಸಿಸುವವರಿಗೋಸ್ಕರ ಪ್ರಾರ್ಥನೆ ಮಾಡಿರಿ" "ಒಬ್ಬನು ನಿನ್ನ ಬಲಗೆನ್ನೆಯ ಮೇಲೆ ಹೊಡೆದರ ಅವನಿಗೆ ನಿನ್ನ ಎಡಗೆನ್ನೆಯನ್ನು ತೋರಿಸು" ಎಂಬುದಾಗಿ ಬೋಧಿಸುತ್ತಾ ಲೋಕವನ್ನೆಲ್ಲಾ ಯುದ್ಧವೆಂಬ ಪ್ರಳಯಾಗ್ನಿಯಲ್ಲಿ ತಳ್ಳಕೊಡುವವನಲ್ಲ ಆತನು ಮೇಲಿನ ವಾಕ್ಯಗಳಲ್ಲಿ ಬಹು ಪರಿಶ್ರದ್ಧನಾಗಿ ಕಂಡು ಬರುವ ಅಹಿಂಸಾ ತತ್ವವಾದಿ ಮತ್ತು ಅವರ ನಿಷ್ಠಾಪೂರಕ ಆತನಿಗೆ ಅಹಿಂಸಾ ತತ್ವಕ್ಕಿಂತಲೂ ಹೆಚ್ಚಿನ ತತ್ವವಿಲ್ಲ. ಇದರಲ್ಲಿಯೇ ಆತನಿಗೆ ಆನಂದ ಅದೇ ಸ್ವರ್ಗದ ಬೀಗವನ್ನು ಬಿಚ್ಚುವ ಸುವರ್ಣ ಕೀಲಿ ಎಂಬುದನ್ನು ಆತನು ಬಲ್ಲ ಪರಮಾತ್ಮನು ತಾನು ಬಹವಾಗಿ ಪ್ರೀತಿಸುವ ಈ ತತ್ವವನ್ನು ತನ್ನ ಭಕ್ತನಿಗೆ ಬಹು ಚೆನ್ನಾಗಿ ಉಪದೇಶಿಸಿ, ಅದರ ಮೂಲಕವೇ ಲೋಕವನ್ನು ಸಾಕವನ್ನಾಗಿಮಾಡುವ ಕಾರ್ಯಭಾರವನ್ನು ಆತನಿಗೆ ವಹಿಸಿರುವನು ಆದ್ದರಿಂದಲೇ ಅಹಿಂಸೆಯು ಆತನ ಜೀವತತ್ವವಾಗಿದೆ ಅಸಹಾಯಕರು, ಈ ವಿಚಾರದಲ್ಲಿ ಹೇಳುವ ತೆರನಾಗಿ ಪೀಡಿಸಿದರೂ ಆತನೇನು ಅಳುಗುವದಿಲ್ಲ. ಹಿಂಸೆಯ ಮಾತೇ ಆತನಿಗೆ ಸೇರದು ಅದಕ್ಕಿಂತಲೂ ಅಸಹ್ಯವಾದ ಮಾತೇ ಆತನಿಗಿಲ್ಲ ದೋಣಿಗೆ ನೀರು ಹೇಗೆ ಬಾಧಕವೋ ಹಾಗೇ ಹೀ ಕ್ರೋಧವನ್ನು ಆತನಿಗೆ ಬಾಧಿಸದು ಈ ಕಾರಣದಿಂದಲೇ ಈಗ ನಡೆಯುತ್ತಿರುವ ಯುದ್ಧ ವಿಚಾರದಲ್ಲಿ ಆತನಿಗೆ ಸಂತಾಪವುಂಟಾಗಿದೆ ಅದನ್ನು ತಡೆಯಲು ಪ್ರಯತ್ನವನ್ನು ಪಟ್ಟು ವಿಫಲವಾಗಿ ಈಗ ಆ ಮನದಲ್ಲಿ ಮರುಗುತ್ತಿರುವನು ಆ ಸಾಧು ಶಿಖಾಮಣಿ ಕ್ರೂರತನ, ಸ್ವಾರ್ಥತೆ, ದುರಾಶೆ ಇತ್ಯಾದಿ ಹೀನ ಗುಣಗಳಿಂದ ತುಂಬಿತುಳುಕುತ್ತಿರುವವರಿಗೆ ಈ ವೈದಿಕ ತತ್ವೋಪದೇಶವು ರುಚಿಸುವುದೆಂತು! ಈ ತತ್ವವು ತನ್ನಲ್ಲಿ ಮಹೋನ್ನತವಾದ ಪರ್ವತವನ್ನಾದರೂ ನೆಲಸಮ ಮಾಡಬಲ್ಲ ಅದ್ವಿತೀಯ ಶಕ್ತಿಯನ್ನು ಅಡಗಿಸಿಟ್ಟುಕೊಂಡಿದೆಯೆಂಬುದಾದರೂ ಆ ಅಂಧರಿಗೆ ತಿಳಿಯುವ ಬಗೆಹೇಗೆ! ಇಂದು ಅವರು ಆತನ ಈ ತತ್ವವನ್ನು ತಿರಸ್ಕಾರದಿಂದ ಕಂಡು ಪರರ ವಿಚಾರವಾಗಿ ಸಾಸ್ಯವಾಗಿ ಮಾತನಾಡಿದರೂ ಮುಂದೆ ತಮ್ಮ ಹೀನ ಗುಣಗಳ ವಿಷಮ ಫಲಗಳನ್ನು ಉಣ್ಣುವಾಗ ಆ ವರ ಮಹತ್ವವನ್ನರಿತು ಪುರಸ್ಕಾರದಿಂದ ಅದನ್ನು ಕಾಣುವರೆಂಬುದೇ ಈ ಲೇಖಕರ ನಿರೀಕ್ಷೆ.

ಇಂಥಾ ಕಲ್ಯಾಣಗುಣಸಂಪನ್ನನಾದ ಮಹಾತ್ಮಗಾಂಧಿಯು ಒಬ್ಬನ ಮನವನ್ನು ಸೂರೆಗೊಂಡಿದ್ದಾನೆಂದರೆ ಅದರಲ್ಲಿ ಆಶ್ಚರ್ಯವೇನಿದೆ? ಆತನ ಈ ಅಲ್ಪ ವ್ಯಕ್ತಿಯ ಮನವನ್ನೇ ಏಕೆ, ಇಡೀ ಪ್ರಪಂಚದ ಪ್ರತಿಯೊಬ್ಬ ವ್ಯಕ್ತಿಯ ಮನವನ್ನೂ ಸೂರೆಗೊಂಡಿದ್ದಾನೆಂದರೆ ಅತಿಶಯೋಕ್ತಿಯಾಗಲಾರದು ಕೆಲವರು "ಬಿದ್ದರೂ ಮಾಸೆ ಮಣ್ಣಾಗಲಿಲ್ಲ" ವೆಂಬ ಭಾವವನ್ನು ಬಹಿರಂಗವಾಗಿ ತೋರುತ್ತಿದ್ದರೂ ಅವರು ಹೃದಯದ ಅಂತರಾಳದಲ್ಲಿ ಒಂದು ಕಿರುದನಿಯು, "ಹಾಗಲ್ಲ ಈ ಗಾಂಧಿಯು ನನ್ನ ಮನವನ್ನೂ ಸಹ ಸೂರೆಗೊಂಡಿದ್ದಾನೆ ಈತನು ನಿಜವಾಗಿಯೂ ಮಹಾತ್ಮನೇ" ಎಂದು ಅವರನ್ನು ಎಚ್ಚರಿಸುತ್ತಲೂ, ಕಂಗಿಸುತ್ತಲೂ ಇದೆಯೆನ್ನುವುದೇ ಈ ದೀನನ ನಂಬಿಗೆ ಪರಮಾತ್ಮನು ಈ ಮಹಾತ್ಮನನ್ನು ಚಿರಂಜೀವಿಯನ್ನಾಗಿ ಮಾಡಲಿ ಆತನ ಮೂಲಕ ಈ ಭರತನಾಡು ತನ್ನ ಗತ ವೈಭವನ್ನ ತಿರುಗಿ ಹೊಂದಿ ಮೆರೆಯಲಿ!

[ರಾಜಧಾನಿಯ ಭಾರತೀ ಸಂಘದ ಪ್ರಬಂಧ ಸ್ಪರ್ಧೆಯಲ್ಲಿ ಬಹುಮಾನ ಪಡೆದ ಲೇಖನವಿದು]

ಸಾಧ್ವಿ

ರಾಜಧಾನಿಯ

ರಾಷ್ಟ್ರೀಯ ದಿನ ಪತ್ರಿಕೆ

ಪ್ರತಿದಿನವೂ ಪ್ರಕಟವಾಗುವುದು

ಕೂಡಲೇ ಚಂದಾದಾರರಾಗಿರಿ!

ಚಂದಾ ತಿಂಗಳಿಗೆ ೦-೩-೦ ಮಾತ್ರ

ಸಡ್ಯಾಂಪಲ್ ಪ್ರತಿಗೆ ಬರೆಯಿರಿ. ೧೦೦

ಮ್ಯಾನೇಜರುಗಳಿಗೆ ಬರೆಯಿರಿ.

High Class

Aligarh Locks

Fresh Goods! Golden Opportunity!!

VISIT & PURCHASE EARLY.

SRI KRISHNA BHAVAN RESTAURANT

Caterers to His Highness the Maharaja of Mysore & Dealers in High Class Aligarh Locks.

MARKET SQUARE, MYSORE

ಆಪತ್ಕಾಲದಲ್ಲಿ ಟೆಲಿಫೋನ್ ಸಹಾಯ

[illegible]

ಬಂಗಾಳದಲ್ಲಿ ಸರಬರಾಜು ಅವ್ಯವಸ್ಥೆ

[illegible]

ಭಾರತದಲ್ಲಿ ಕ್ರೈಸ್ತ ಗುರುಗಳು ಹೆಚ್ಚುವರೆ?

[illegible] ಭಾರತದಲ್ಲಿ ಕ್ರೈಸ್ತ ಗುರು [illegible]

ಮಾರಾಟದ ಬೆಲೆ ಪ್ರದರ್ಶನೆ

[illegible] ಭಾರತ ಸರ್ಕಾರ ಆಜ್ಞಾಪಿಸಿದೆ.

ಜಿಲ್ಲಾಧಿಕಾರಿಗಳಿಗೆ ಹೆಚ್ಚಿನ ಅಧಿಕಾರ

[illegible]

ಬಾಂಬೆ ಮೇಲ್ ಅಪಾಯದ ತಪ್ಪಿತು

[illegible]

ಬರ್ಲಿನ್ ರೇಡಿಯೋ ಠಾಣೆಗೆ ಸ್ಥಾನ ಪಲ್ಲಟ

[illegible] ಪ್ರಸಿದ್ಧ ಬರ್ಲಿನ್ ರೇಡಿಯೋ [illegible] ಸುದ್ದಿ ಬಂದಿದೆ.

ಆಸ್ಟ್ರೇಲಿಯಾ ಚಿನ್ನದ ಗಣಿಗಳಲ್ಲಿ ಕೆಲಸ ನಿಂತಿದೆ

[illegible]

ಪಿಕ್‌ವಿಕ್ ಪೇಪರ್ಸ್ ಗ್ರಂಥ ಮುದ್ರಣದ ಮಾಲೀಕರ ಮರಣ

[illegible] ಡಿಕನ್ಸ್ [illegible] ಪಿಕ್‌ವಿಕ್ ಪೇಪರ್ಸ್ [illegible]

ಮೈಸೂರು ಶ್ರೀಮನ್ಮಹಾರಾಜರವರ ಸನ್ನಿಧಾನದಿಂದ ಒಪ್ಪಿಗೆ ಪಡೆದ ಅಂಗಡಿ.

ಮಹಾಜನರಿಗೆ ಸುತ್ತ ಮಾಡುವುದೇನೆಂದರೆ, ನಮ್ಮಲ್ಲಿ ಲೇಡೀಸ್ (ಬ್ಲೋಸ್ ಸ್ಪೆಷಲಿಸ್ಟ್) ಮತ್ತು ಜೆಂಟ್ಸ್ ಬಟ್ಟೆಗಳನ್ನು ಆಧುನಿಕ, ಅಭಿರುಚಿಗೆ, ನೀಳಿಗೆ ಸರಿಯಾಗಿ, ತಯಾರಿಸಿಕೊಡುತ್ತೇವೆ. ಜನಸೇವೆಯನ್ನೇ [illegible] ಒಂದು ಸಲ ಪರೀಕ್ಷಿಸಿರಿ.

ಬಿ. ವಿಠಲ್ ಬ್ರದರ್ಸ್,

[illegible]

ಸ್ಮಟ್ಸರ ಪುತ್ರಿಯರ ಗಂಡಾಂತರ

[illegible]

ನಿರಾಕರಣ ಕಾರ್ಯಕ್ಕೆ ಬೆಂಬಲ

[illegible]

ಬ್ರಿಟನ್ ಮೇಲೆ ಧಾಳಿ

[illegible]

ಬರ್ಮಾ-ಇಂಡಿಯಾ ಸಮ್ಮೇಳನ

[illegible]

ಸ್ತ್ರೀಯರಿಗೇ ಪ್ರತ್ಯೇಕ ಸೆರೆಮನೆ

ಬಿಹಾರ್ ಸರ್ಕಾರದವರು ಸ್ತ್ರೀ ಖೈದಿಗಳಿಗಾಗಿಯೇ ಪ್ರತ್ಯೇಕ ಸೆರೆಮನೆಗಳನ್ನು ಬರುವ ತಿಂಗಳಿನಿಂದ ತೆರೆಯುವವರಾಗಿದ್ದಾರೆ. ಬಿಹಾರ್ ಚರಿತ್ರೆಯಲ್ಲಿ ಆ ಪ್ರಾಂತ್ಯದಲ್ಲಿ ಸ್ತ್ರೀ ಬಂದೀಖಾನೆ ಆರಂಭವಾಗುವುದು ಇದೇ ಪ್ರಥಮ. ಆ ಬಂದೀಖಾನೆಯ ಉಸ್ತುವಾರಿಗೆ ಸ್ತ್ರೀ ಕೆಲಸಗಾರರನ್ನೇ ನೇಮಿಸುವರೆಂದು ತಿಳಿದುಬಂದಿದೆ.

ಮಕ್ಕಳನ್ನು ಕಾಪಾಡಿ ಎಂಬ ಚಳುವಳಿ

ಭಾರತದ ಮಕ್ಕಳನ್ನು ಕಾಪಾಡಿ ಎಂಬ ಅಖಿಲ ಭಾರತ ಸ್ತ್ರೀ ಸಮ್ಮೇಳನದವರ ಚಳವಳಿಯ ಸಭೆ ಮೊನ್ನೆ ಕಲ್ಕತ್ತಾದಲ್ಲಿ ಶ್ರೀಮತಿ ಸರೋಜಿನಿ ನಾಯುಡುರವರ ಅಧ್ಯಕ್ಷತೆಯಲ್ಲಿ ನಡೆಯಿತು. ಬಂಗಾಳದ ೧೦೦ ಮಕ್ಕಳ [illegible]

ಜರ್ಮನರ ಯುದ್ಧ ಯಂತ್ರ ಸಮವಿಲ್ಲ

[illegible]

ಕಾಡುಮೃಗದ ರಕ್ಷಣೆ

[illegible]

ಆಕಾಶವಾಣಿ

ಫೆಬ್ರವರಿ ೮ ನೇ ಮಂಗಳವಾರ

[illegible]

ದಿವ್ಯವಾದ ಸಾಬೂನು

ಬೆಲೆಯಲ್ಲಿ ಕಿರಿದಾದರೂ ಗುಣದಲ್ಲಿ ಹಿರಿದು



ಮೈಸೂರು ಸ್ಯಾಂಡಲ್ ಸೋಪಿನಿಂದ [illegible] ಮೊತ್ತ [illegible]

ಮೈಸೂರು ಸ್ಯಾಂಡಲ್ ಸೋಪ್

ಸಂಪುಟ ೨] ಮಂಗಳವಾರ ೮-೨-೪೪ [ಸಂಚಿಕೆ ೧೭೫

ಹಿಟ್ಲರನ ಸ್ವಂತ ಸೈನ್ಯವೂ ಯುದ್ಧಕ್ಕಿಳಿಯಿತು

ಅಕ್ಟೋಬರಿನಲ್ಲಿ ಯೂರೋಪ್ ಯುದ್ಧ ಮುಕ್ತಾಯವಂತೆ

ಹಂದಿ ಹೊಟ್ಟೆಯಲ್ಲಿ ಮಂಗ, ಮನುಷ್ಯ ಮತ್ತು ಆನೆ-ಜನನ

ಆಕಾಶವಾಣಿ-ಹೊಸ ಕಟ್ಟಡಕ್ಕೆ

ಸ್ವಂ ಸು.] ಮೈಸೂರು ೮

ಇದುವರೆವಿಗೆ ದಸರಾ ವಸ್ತು ಪ್ರದರ್ಶನ ಶಾಲೆಯ ಮಹಡಿಯ ಮೇಲಿರುವ ಆಕಾಶವಾಣಿ ಸಂಸ್ಥೆಯು ನಾಳೆ ನಾಡಿದ್ದರಿಂದ ವಾಣೀವಿಲಾಸದ ವಾಟರ್ ವರ್ಕ್ಸ್ ಬಳಿ ನಿರ್ಮಿತವಾಗಿರುವ ನೂತನ ಕಟ್ಟಡಕ್ಕೆ ವರ್ಗಾಯಿಸಲ್ಪಡುವುದೆಂದು ತಿಳಿಯಬಂದಿದೆ.

ಸತ್ಕಾರ

ರಾಜಧಾನಿಯ ಉದ್ಯೋಗೃಹದ ಅಧ್ಯಕ್ಷರಾದ ಮೋಹಿಯುದ್ದೀನ್ ಸಾಹೇಬ್ ಎಂ ಜಿ ಮೇಕ್ರಿಯವರನ್ನು ಸತ್ಕರಿಸಲು ಸದರಿ ಗೃಹದ ಸಮಿತಿಯವರು ೧೩ ನೇ ತಾ|| ಭಾನುವಾರ ಸಾಯಂಕಾಲ ೬ ಗಂಟೆಗೊಪ್ಪಲು ಅನಂದ ಭವನದಲ್ಲಿ ಒಂದು ಸತ್ಕಾರ ಕೂಟವನ್ನು ಏರ್ಪಡಿಸಿರುವರು.

ಚಲನ ಚಿತ್ರ ಸಮಿತಿ

ಮೈಸೂರು ಸಂಸ್ಥಾನದ ಚಲನ ಚಿತ್ರ ವಿಮರ್ಶ ಸಮಿತಿಯನ್ನು ಸರ್ಕಾರದವರು ಒಂದು ವರ್ಷದ ವರೆಗೆ ಪುನರ್ವ್ಯವಸ್ಥೆಗೊಳಿಸಿ ಆಜ್ಞೆ ಹೊರಡಿಸಿದ್ದಾರೆ. ಈ ಸಮಿತಿಯಲ್ಲಿ ಸರ್ಕಾರಿ ಮತ್ತು ಖಾಸಗೀ ಸದಸ್ಯರಿದ್ದಾರೆ. ಬೆಂಗಳೂರು ಪತ್ರಿಕೋದ್ಯೋಗಿಗಳಾದ ಶ್ರೀ ಎ. ನಂಜುಂಡರಾಮಯ್ಯನವರು ಸದಸ್ಯರ ಪೈಕಿ ಒಬ್ಬರು.

'ಕಿರಿಯರ ವಿಶ್ವಭಾರತಿ'

ಮೇಲ್ಕಂಡ ಮಾಸ ಪತ್ರಿಕೆಯ ಮಾರ್ಚಿ ಸಂಚಿಕೆಯು ನಮ್ಮ ಹಸ್ತಗತವಾಗಿದೆ. ಇದನ್ನು ಕೃತಜ್ಞತೆಯಿಂದ ಸ್ವೀಕರಿಸಿದ್ದೇವೆ. ಇದರಲ್ಲಿ 'ಮಂಜೇಶ ನಾಡಿನಲ್ಲಿ' ಎಂಬ ಉತ್ತಮ ಕವಿತೆ ಇದೆ. ಕನ್ನಡಕ್ಕೊಂದು ವಿಶ್ವಕೋಶ, ವಿದ್ಯಾರ್ಥಿಗಳೂ, ಗೀತಯೊಂದಿಗೆ, ಅವಳು, ಆದಿ-ವಾಕ್ಯ ಕಾಣಿಕೆ ಮುಂತಾದ ಸ್ವಾರಸ್ಯವಾದ ಲೇಖನಗಳೂ, ಇವೆ. ಬೆಲೆ ವರ್ಷಕ್ಕೆ ಸರ್ವರಿಗೂ ಗ್ರಾಹ್ಯವಾಗಿದೆ.

ಇಂದೂರು ರಾಣಿ ಅಹಲ್ಯಾಬಾಯಿ

ಮೈಸೂರು ನಾಟಕ ಸಂಘದವರು ನಾಟಕ ಕಲಾಧಿದೇವತೆಗೆ ಅರ್ಪಿಸಿರುವ ದ್ವಿತೀಯ ಕಾಣಿಕೆಯೇ ಚರಿತ್ರಾರ್ಹವಾದ ಇಂದೂರು ರಾಣಿ ಅಹಲ್ಯಾಬಾಯಿ ನಾಟಕ. ಈ ನಾಟಕವು ಎರಡನೇ ಸಾರಿ ನಿನ್ನೆ ಟೌನ್ ಹಾಲಿನಲ್ಲಿ ಅಭಿನಯಿಸಲ್ಪಟ್ಟಿತು. ನಾಟಕವು ಕಳೆದ ಒಂದು ವಾರದೊಳಗೆ ಉಡಿಗೆ ತೊಡಿಗೆ, ವೇಷ-ಭೂಷಣಗಳಲ್ಲಿ ಬಹಳ ಮಟ್ಟಿಗೆ ಸುಧಾರಿಸ್ಪಟ್ಟು ಕಳೆದ ನಾಟಕದ ಅನೇಕ ನ್ಯೂನಾತಿರೇಕಗಳು ಇದರಲ್ಲಿ ಮಾಯವಾಗಿದ್ದುವು. ಈ ನಾಟಕದ ಮಧ್ಯೆ ಲಘು ಹಾಸ್ಯ, ಇನ್ನಷ್ಟು ಉತ್ತಮ ಸಂಗೀತ ನ ಒಂದು ನೃತ್ಯ-ಇವನ್ನು ಸಂಯೋಜಿತವಾದೆಡೆಗಳಲ್ಲಿ ಸೇರಿಸುವುದರಿಂದ ಮತ್ತಷ್ಟು ಪುಷ್ಟಿಯನ್ನು ಕೊಡಲು ಅವಕಾಶವಿದೆ. [illegible] ಈ ನಾಟಕ ಕಲೋದ್ಯಮ [illegible] ವಾಗಿ ಶೀಘ್ರದಲ್ಲಿ ಸಂಘದ [illegible] ಗಳ ಬೆಂಬಲ ದೊರಕುವಂತಾಗುವುದು.

ಮುಖ್ಯ ದ್ವೀಪಗಳ ನಡೆ

[illegible]

ಹಿಟ್ಲರನ ಬಾಡಿಗಾರ್ಡ್ ಇಳಿಯಿತು

ಆಸ್ಸೋಸಿಯೇಟೆಡ್ ಪ್ರೆಸ್ಸ್ ರಂಗದಲ್ಲಿ ಜರ್ಮನರು ಹಿಟ್ಲರನ ಸ್ವಂತ ಅಂಗ ರಕ್ಷಕರಾದ ಎಸ್. ಎಸ್. ಬ್ರಿಗೇಡಿನವರನ್ನು ಹೋರಾಟಕ್ಕೆ ಕಳುಹಿಸಿದ್ದಾರೆ. ಜರ್ಮನರ ಧಾಳಿ ನಿಲ್ಲದೆ ಮತ್ತೂ ಏರುತ್ತಿದ್ದಾರೆ. ಆದರೆ ಜರ್ಮನ್ ಸೈನ್ಯಗಳು ಕೊಟ್ಟದಂತೆಲ್ಲಾ ಕದನವು ಬಿರುಸಾಗಬಹುದು. ಕ್ಯಾಸಿನೋ ಬಳಿಯಲ್ಲಿ ಕದನವು ಭೀಕರವಾಗಿದೆ.

ಸಿಂಧ್‌ನಲ್ಲಿ ಅಕ್ಕಿ ಅಧಿಕ

ಈ ಸಾರಿ ಸಿಂಧ್ ಪ್ರಾಂತ್ಯದಲ್ಲಿ ಅಕ್ಕಿ ವಿಪರೀತವಾಗಿ ಬೆಳೆದಿದೆ. ಧಾರಾಳವಾಗಿ ಮಾರಾಟವಾಗುತ್ತಿದೆ. ಕಂಟ್ರೋಲ್ ದರಕ್ಕಿಂತ ಕಡಿಮೆ ಬೆಲೆಗೆ ಹೋಗುತ್ತಿದೆ. ಲಕ್ಷ ಮೂಟೆ ಬೆಳೆದಿದೆ. ಆ ಪ್ರಾಂತ್ಯಕ್ಕೆ ಅದರಲ್ಲಿ ಅರ್ಧವೇ ಸಾಕು. ಉಳಿದುದನ್ನು ಹೊರಕ್ಕೆ ಕಳುಹಿಸಲಾಗುವುದು ಎಂದು [illegible] ಸರ್ಕಾರದವರೇ ರಫ್ತಿನ ಬೆಲೆ ಇಳಿಸಿದ್ದಾರೆ.

ಅ|| ಭಾ|| ಧರ್ಮ ಸಂಘ

ದೆಹಲಿಯಲ್ಲಿ ಯಮುನಾ ನದೀ ತೀರದಲ್ಲಿ ಅಖಿಲ ಭಾರತ ಧರ್ಮ ಸಂಘದ ಮೂರನೇ ಅಧಿವೇಶನವು ಸ್ವಾಮಿ ಹರಿಹರಾನಂದರವರ ಅಧ್ಯಕ್ಷತೆಯಲ್ಲಿ ನಿನ್ನೆ ಆರಂಭವಾಯಿತು. ಸಾವಿರಾರು ಜನ ಪಂಡಿತರೂ ಸನ್ಯಾಸಿಗಳೂ ಬಂದಿದ್ದರು. "ಭರತಖಂಡವು ಸ್ವತಂತ್ರವಾಗಬೇಕು; ಇದು ಆರ್ಯರ ಸ್ಥಾನ. ಪರಕೀಯ ರಾಜ್ಯದ ಗುರಿಯು ಕುಲಗೆಡಿಸೋದಾಗಿರುತ್ತದೆ. ಯಾರಿಗೂ ಕೇಡನ್ನು ಬಯಸದೆ ಎಲ್ಲರಿಗೂ ಕ್ಷೇಮವನ್ನು ಕೋರುವುದೇ ಸಂಘದ ಉದ್ದೇಶವೆಂದು ಸ್ವಾಮಿಗಳು ಹೇಳಿದರು.

ಜಮೀನು ಮೇಲೆ ಬಾಂಬು ಬಿತ್ತು

ಕಳೆದ ಶುಕ್ರವಾರ ಒರಿಸ್ಸಾ ತೀರಪ್ರದೇಶದಲ್ಲಿ ಬಾಂಬುಗಳು ಬಿದ್ದವಷ್ಟೆ. ಅವೆಲ್ಲವೂ ಮೈದಾನದ ಮೇಲೆ ಬಿದ್ದವೆಂದೂ ನಷ್ಟವಾಗಲಿ ಸಾವುನೋವುಗಳಾಗಲಿ ಸಂಭವಿಸಿಲ್ಲವೆಂದೂ ಹೇಳಲಾಗಿದೆ.

ಸರೋಜಿನಿ ವಾಗ್ಬಂಧನ ಸಮರ್ಥನೆ

ಶ್ರೀಮತಿ ಸರೋಜಿನಿದೇವಿಯವರ ಮೇಲೆ ಇಂಡಿಯಾ ಸರ್ಕಾರವು ಪ್ರಯೋಗಿಸಿರುವ ವಾಗ್ಬಂಧನ ಆಜ್ಞೆಯನ್ನು ಖಂಡಿಸಲು ಕೇಂದ್ರ ಶಾಸನ ಸಭೆಯಲ್ಲಿ ಶ್ರೀ ಎ. ಸಿ. ದತ್ತರು ತಂದ ಅವಸರದ ನಿರ್ಣಯವು ೪೦ ೪೭ ಓಟುಗಳಿಂದ ಬಿದ್ದು ಹೋಯಿತು. [illegible] ಮುಸ್ಲಿಂ ಲೀಗಿನವರೂ ರಾಷ್ಟ್ರೀಯ ಪಕ್ಷದವರೂ ಸಹ ಇದಕ್ಕೆ ಬೆಂಬಲವಿತ್ತರು. ಸ್ವತಂತ್ರರು ಸರ್ಕಾರದ ಕಡೆ ಸೇರಿದರು.

ಹೆಗ್ಗಡದೇವನಕೋಟೆ ತಾ|| ಸಮ್ಮೇಳನ

ಮೈಸೂರು ಪ್ರಜಾಪ್ರತಿನಿಧಿ [illegible]

ಹಂದಿಯ ಹೊಟ್ಟೆಯಲ್ಲಿ ಕಪಿ, ಮನುಷ್ಯ, ಆನೆ ಜನನ

ಸೃಷ್ಟಿ ವೈಚಿತ್ರ್ಯದಲ್ಲಿ ಒಂದು ಪ್ರಾಣಿಯ ಉದರದಿಂದ ಎರಡು, ಮೂರು, ನಾಲ್ಕು ಮಕ್ಕಳು ಗಂಡು, ಹೆಣ್ಣುಗಳೂ ಇಲ್ಲವೇ ಎಲ್ಲವೂ ಒಂದೇ ಜಾತಿಯವಾಗಿ ಜನನವಾಗುತ್ತಿರುವುದನ್ನು ಕೇಳುತ್ತಲೂ, ನೋಡುತ್ತಲೂ ಇದ್ದೇವೆ. ಆದರೆ ಇವೆಲ್ಲಕ್ಕಿಂತಲೂ ವಿಚಿತ್ರ ಮೇಘಾ ಕೇಳಿಗಿನ ಸುದ್ದಿಯನ್ನು ನೋಡಿದರೆ ಸೃಷ್ಟಿಕರ್ತನು ಯಾವ ಕಾರಣವಾಗಿ ತನ್ನ ಲೀಲೆಯನ್ನು ಜಗತ್ತಿಗೆ ತೋರಿಸುತ್ತಿರುವನೋ ಬಹುದು ಆಶ್ಚರ್ಯವಾಗುತ್ತದೆ- ಟ್ರಾವಂಕೂರ್ ಬಳಿ ಇರುವ ಪಣ್ಣುವಿಪುರದಲ್ಲಿ ರೈತರೊಬ್ಬರ ಮನೆಗೆ ಒಂದು ಹಂದಿಯು ಮೂರು ಮರಿಗಳನ್ನು ಪ್ರಸವಿಸಿತು. ಅದರಲ್ಲಿ ಒಂದಕ್ಕೆ ಮಂಗನ ಮುಖವೂ, ಮತ್ತೊಂದಕ್ಕೆ ಗಜರಾಜನ ಮುಖವೂ, ಮಗದೊಂದಕ್ಕೆ ಮನುಷ್ಯನ ಮುಖವೂ ಇತ್ತು. ಈ ಮೂರು ಪ್ರಾಣಿಗಳೂ ಸದ್ಯ ವೈದ್ಯಶಾಸ್ತ್ರ ಪರೀಕ್ಷೆ ಮಂದಿರಕ್ಕೆ ರವಾನಿಸಲ್ಪಟ್ಟಿವೆ. ಇವನ್ನು ನೋಡಲು ಪ್ರೇಕ್ಷಕರು ತಂಡೋಪತಂಡವಾಗಿ ಹೋಗುತ್ತಿದ್ದಾರೆ.

ಅವಸರ ಠರಾವಿಗೆ ಅನುಮತಿ ಇಲ್ಲ

ಕೇಂದ್ರ ಶಾಸನಸಭೆಯಲ್ಲಿ ಬಂಗಾಳದ ಅನ್ನಸಂಕಟ, ದರೋಡೆಗಳು, ಹಿಂದೂಸ್ತಾನ್ ಟೈಮ್ಸ್ ಮತ್ತು ನ್ಯಾಷನಲ್ ಕಾಲ್ ಪತ್ರಿಕೆಗಳಲ್ಲಿ ಮಹಾತ್ಮಾ ಗಾಂಧಿ ಮತ್ತು ಕಾರ್ಯಾಲೋಚನಾ ಸಮಿತಿಯವರ ಹೇಳಿಕೆಗಳನ್ನು ಪ್ರಕಟಿಸದಂತೆ ಆಗಿದ್ದ ಸರ್ಕಾರಿ ಆಜ್ಞೆಗೆ ಸಂಬಂಧಪಟ್ಟ ನಿರ್ಣಯವು ಇವುಗಳಲ್ಲೊಂದು. ಒಂಗಾಳ ಗೌರ್ನರ್ ನೇಮಕದ ಬಗ್ಗೆ ಕರೆಸ್ಸಿಂದು ಓಂದೂ ಸಭಾ ಮುಂದಾಳಿಗೆ ಬಂದ ಪ್ರಶಾಂಗದ ವಿಷಯ ಮತ್ತೊಂದು. ಶಾಸ್ತ್ರದಲ್ಲಿ ಅಧ್ಯಕ್ಷರ ಇತ್ತಿದ್ದ. ಇನ್ನೊಂದು ಎಲ್ಲವೂ ನಿರಾಕರಿಸಲ್ಪಟ್ಟವು.

ಸ್ವಮೇಧ್ಯಕ್ಕೆ ರೇಷನ್

[illegible] ಶ್ರೀ ಸತ್ಯಮೂರ್ತಿಯವರು ಹೇಳಿದ್ದಾರೆ.

ಅಕ್ಟೋಬರ್‌ನಲ್ಲಿ ಯುದ್ಧಾಂತ್ಯ

ಅಮೆರಿಕದ ರೂಸ್ವೆಲ್ಟರ ಪುತ್ರ ಲೆ|| ಫ್ರಾಂಕ್ಲಿನ್ ಡಿ. ರೂಸ್ವೆಲ್ಟರು ಅಕ್ಟೋಬರಿನೊಳಗೆ ಯೂರೋಪಿನ ಯುದ್ಧವು ಮುಕ್ತಾಯವಾಗುವದೆಂದು ಹೇಳಿದ್ದಾರೆ.

ಜಪಾನರಿಂದ ಟಾಂಗ್ ಆಕ್ರಮಣ

ಬರ್ಮಾ ಪ್ರಾಂತ್ಯದಲ್ಲಿ ಮಿತ್ರ ದೃಷ್ಟಿಯನ್ನು ತಪ್ಪಿಸಿ ನಾಲ್ಕನೇ ತಾ|| ಜಪಾನೀ ಪಟ್ಟಿಗಳು ಬಂದೊಂದು ಟಾಂಗ್ ಬಜಾರನ್ನು ಆಕ್ರಮಿಸಿತು. ಮಾರನೇ ದಿನ ಬಿರುಸಾದ ಕದನ ನಡೆಯಿತು. ಇಂಫಾಲ್ ಮತ್ತು ಫಾಲಂ ಬಳಿ ಶತ್ರು ರಾಣ್ಯಗಳಿಗೆ ಮಿತ್ರವಿಮಾನಗಳು ಬಲವಾದ ಪೆಟ್ಟು ಕೊಟ್ಟವು. ಶತ್ರುವಿಗೆ ಬಹಳ ನಷ್ಟವಾಯಿತು. ಮಿತ್ರವಿಮಾನವೊಂದೂ ಹಿಂದಿರುಗಿಲ್ಲ.

ಪತ್ರಿಕಾ ಸಂಪಾದಕರ ಬಂಧನ

ನ್ಯೂಸ್ ಪೇಪರ್ ಕಂಟ್ರೋಲ್ ಆಜ್ಞೆಗೆ ವಿರುದ್ಧವಾಗಿ ವರ್ತಿಸಿದರೆಂಬ ಕಾರಣದಿಂದ ಮದರಾಸಿನ 'ಸಿನಿಮಾ ತೂತು' ಎಂಬ ಪತ್ರಿಕಾ ಸಂಪಾದಕರನ್ನೂ ಮತ್ತು ಅವರ ಸಹೋದ್ಯೋಗಿಯನ್ನೂ ಪೋಲೀಸರು ಬಂಧಿಸಿದರೆಂದು ತಿಳಿದುಬಂದಿದೆ.

ಮತಾಂತರಗೊಳಿಸುವ ಹಕ್ಕು

ಬೊಂಬಾಯಿಯ ಸೋಫಿಯಾ ಕಾಲೇಜಿನ ವಿದ್ಯಾರ್ಥಿನಿಯೊಬ್ಬಳನ್ನು ಕಾಲೇಜಿನವರು ಮತಾಂತರ ಹೊಂದುವುದಕ್ಕಾಗಿ ಆ ಕಾಲೇಜಿನ ವಿಶ್ವವಿದ್ಯಾನಿಲಯದವರು ಕೊಟ್ಟಿದ್ದ ಅಂಗೀಕಾರವನ್ನು ರದ್ದುಪಡಿಸಲು ಒಂದು ನಿರ್ಣಯವು ಬಂದಿತ್ತು. ಈ ವಿಷಯವನ್ನು ಚರ್ಚಿಸಲು ಬೆಂಗಳೂರು ಬಿಷಪ್ಪರ ಅಧ್ಯಕ್ಷತೆಯಲ್ಲಿ ರೋಮನ್ ಕ್ಯಾಥೊಲಿಕರ ಮುಖ್ಯ ಸಭೆಯೊಂದು ನೆನ್ನೆ [illegible] ಬೆಂಗಳೂರು [illegible] ಕೊಡಿಕೊಳ್ಳಬೇಕೆಂದು [illegible] ನಿರ್ಧರಿಸಲಾಯಿತು.

ದಿವಾನರು

[ಸ್ವಂತ] ಬೆಂಗಳೂರು ೭

ದಿಲ್ಲಿಗೆ ತೆರಳಿದ್ದ ದಿವಾನರು ಈ ದಿವಸ ಸಂಜೆ ಬೆಂಗಳೂರಿಗೆ ವಾಪಸು ಬಂದರು. [illegible] ದಿಲ್ಲಿಗೆ ಪ್ರಯಾಣ ಬೆಳೆಸಿದರು.

ಅನೀತಿ ವ್ಯಾಪಾರಕ್ಕೆ ದಸ್ತಗಿರಿ

[illegible]

೭೦,೦೦೦ ರೂ. ನ ಮೋಸ

[illegible]

ಧಾನ್ಯಗಳ ರವಾನೆಗೆ ಅನುಮತಿ

ಬೇರೆ ಬೇರೆ ತಾಲ್ಲೂಕುಗಳಲ್ಲಿ [illegible] ಧಾನ್ಯವು ಸರ್ಕಾರದವರು [illegible] ತಾಲ್ಲೂಕಿನ [illegible] ತೆಗೆದುಕೊಳ್ಳ [illegible] ಬೇರೆ ಬೇರೆ ತಾಲ್ಲೂಕಿನ ಧಾನ್ಯಗಳನ್ನೆಲ್ಲಾ ಸರ್ಕಾರದವರಿಗೆ ಕೊಟ್ಟು [illegible] ಸರ್ಕಾರದ ಪ್ರಕಟನೆಯೊಂದು ತಿಳಿಸುತ್ತದೆ.

ಬ್ರಾಹ್ಮಣ ಸಮ್ಮೇಳನ

ಏಪ್ರಿಲ್ ೩ ಮತ್ತು ೪ ನೇ ತಾ|| ಗಳಲ್ಲಿ [illegible] ಮೈಸೂರು ಬ್ರಾಹ್ಮಣ ಸಮ್ಮೇಳನವನ್ನು [illegible] ನಡೆಸಲು ನಿಶ್ಚಯಿಸಿದೆ. [illegible] ವೆಂಕಟರಮಣಯ್ಯನವರು [illegible] ಶ್ರೀ [illegible] ಕಾರ್ಯದರ್ಶಿಯಾಗಿಯೂ ಚುನಾಯಿತರಾಗಿದ್ದಾರೆ.

|| ಸಾರ್ವಜನಿಕರು ||

ನವೀನ ಮಾದರಿ! ದೀರ್ಘ ಬಾಳಿಕೆ! ಕಡಿಮೆ ಬೆಲೆ!!

ದೇಶೀಯ ಕೈಗಾರಿಕೆ

[illegible] ಮಾಡಿದ [illegible] ಗಳು ಮಾದರಿಗಳನ್ನು

ರಗ್ಗು, ಕಂಬಳಿ, ಕಂಬಳಿ ಕೋಟಿಂಗ್ ರತ್ನಕಂಬಳಿಗಳಿಗೆ

[illegible] ನಾರಾಯಣ ಶೆಟ್ಟಿ [illegible]

[illegible] & ರಬಿನೋಡ್ ಪ್ರೆಸ್ ಬೆಂಗ್ಳೂರು [illegible]

[illegible]

ಬಸ್ಸಿನ ಸೌಕರ್ಯ

[ಸ್ವಂತ] ಕೃಷ್ಣರಾಜನಗರ ೭

ಈ ಊರಿನಲ್ಲಿ ಎಲ್ಲರಿಗೂ ಅನುಕೂಲವಾಗಿ [illegible] ಬಸ್ಸುಗಳನ್ನು [illegible] ಸಂತೆಯಲ್ಲಿ ಮಾತ್ರ [illegible] ವ್ಯವಸ್ಥೆ ಮಾಡಿದ್ದಾರೆ. ಬಾಕಿ ದಿವಸಗಳಲ್ಲಿ ಜನಗಳಿಗೆ ಬಸ್ಸಿಯ [illegible] ತೊಂದರೆ ಯಾಗುತ್ತದೆ. ಆದ್ದರಿಂದ ಅಧಿಕಾರಿಗಳು ಒಂದು ದಿವಸವನ್ನು [illegible] ಪ್ರಯತ್ನ ಮಾಡಬೇಕು.

ಈ ಊರಿನ [illegible] ಮತ್ತು ಅನೇಕ ಬೀದಿಗಳಲ್ಲಿ ನೀರು [illegible] ತೊಂದರೆಯಾಗುತ್ತದೆ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಜಾಗ್ರತೆ ಗಮನ ಕೊಡಬೇಕು.

ಶಿಷ್ಯ ಸ್ವೀಕಾರ

[illegible] ಶ್ರೀ ಟಿ. ಎಸ್. [illegible] ಶ್ರೀ [illegible] ಉತ್ತರದೇಶದ [illegible] ಶ್ರೀ [illegible] ಶ್ರೀ [illegible] ಎಂಬ [illegible] ಶಿಷ್ಯನನ್ನಾಗಿ ಸ್ವೀಕರಿಸಿದರು. ಅನೇಕ ಸಾಧುಗಳೂ ಮಹಾತ್ಮರೂ ಬಂದಿದ್ದರು. [illegible] ಬಹು ದಿವಸ [illegible] ವಾಪಸು ತೆರಳಿರುವರು.

ಪರಿಕರಣಗಳು ಮೂರಕ್ಕೆ ಮೀರದಿರಲಿ

ಒಂದು ಭೋಜನಕ್ಕೆ ಮೂರು ಪರಿಕರಣಗಳಿಗಿಂತ ಹೆಚ್ಚಾಗಿ [illegible] ಬೊಂಬಾಯಿ [illegible] ಸರ್ಕಾರದ ಆಜ್ಞೆಯಾಗಿದೆ.

ನಾಯಕರ ಬಿಡುಗಡೆಗೆ ಮುಸ್ಲಿಂ ಪತ್ರಿಕೆ ಒತ್ತಾಯ

ಭಾರತದ [illegible] ಕಾಂಗ್ರೆಸ್ ನಾಯಕರ ಬಿಡುಗಡೆಯಾಗಬೇಕೆಂದು ಕೂಗುತ್ತಿರುವರು. ಕಾಂಗ್ರೆಸ್ ವಿರೋಧಿಗಳಿಗೆ [illegible] ನಾಯಕರನ್ನು [illegible] ಈಗ ಬೇಕಾಗಿರುವುದು ಕಾಂಗ್ರೆಸ್ ನಾಯಕರ ಬಿಡುಗಡೆ. ಅವರ ಬಿಡುಗಡೆಯಾದರೆ ರಾಜಕೀಯ ಬಿಕ್ಕಟ್ಟು ಬಂದಿರವಾಗಿಯೂ ಕೂಡಲೇ ಪರಿಹಾರವಾಗುವುದು—ಎಂಬುದಾಗಿ ಲಾಹೋರಿನಿಂದ ಹೊರಡುವ [illegible] ಎಂಬ ಮುಸ್ಲಿಂ ಪತ್ರಿಕೆಯು [illegible] ಪ್ರಕಟಿಸಿದೆ.

ಸಾಧ್ವಿ

ರಾಜಧಾನಿಯ ರಾಷ್ಟ್ರೀಯ ದಿನ ಪತ್ರಿಕೆ

ಪ್ರತಿದಿನವೂ ಪ್ರಕಟವಾಗುವುದು

ಕೂಡಲೇ ಚಂದಾದಾರರಾಗಿರಿ!

[illegible] ತಿಂಗಳಿಗೆ 0-8-0 ಮಾತ್ರ

[illegible] 1 0-0

ನಾಲ್ಕಾಣೆ [illegible] ಬರೆಯಿರಿ.

ಮೈಸೂರು ಬ್ಯಾಂಕು ಷೇರುಗಳನ್ನು ಹೆಚ್ಚಿಸುವ ವಿಚಾರ

(ಬರೆದು ಬಂದುದು)

ಮೈಸೂರು ಬ್ಯಾಂಕಿನ ಮೂಲ ಧನ ಈಗ ೫೦ ಲಕ್ಷ ರೂಪಾಯಿಗಳು. ಈ ಮೂಲ ಧನವನ್ನು ಇನ್ನೂ ೫೦ ಲಕ್ಷ ರೂಪಾಯಿಗಳು ಹೆಚ್ಚಿಸಬೇಕೆಂದಿದ್ದಾರೆ—ಅಂದರೆ ಹೊಸದಾಗಿ ೧೦೦ ರೂಪಾಯಿನ ೫೦,೦೦೦ ಷೇರುಗಳು ಕೊಡುವರು. ಇವುಗಳನ್ನು ಈಗ ಬ್ಯಾಂಕಿನ ಷೇರುದಾರರಿಗೆ ಹಂಚಬೇಕೆಂದೂ, ಈಗ ಎಷ್ಟು ಷೇರುಗಳನ್ನು [illegible] ಅಷ್ಟು ಹೊಸ ಷೇರುಗಳನ್ನು ಅವರಿಗೆ ಕೊಡಬೇಕೆಂದೂ ಯೋಚಿಸುತ್ತಿದ್ದಾರೆ. ಈ ತಿಂಗಳು ೨೬ ರಲ್ಲಿ ನಡೆಯುವ ಮೀಟಿಂಗಿನಲ್ಲಿ ಈ ವಿಷಯ ಚರ್ಚೆಗೆ ಬರುವುದು. ಆದರೆ ಹೊಸ ಷೇರುಗಳನ್ನು ೧೦೦ ರೂಪಾಯಿಗಳಂತೆ ಕೊಡದೆ ಹೆಚ್ಚು ಬೆಲೆ [illegible] ಬೆಲೆ ಎಷ್ಟೆಂಬುದನ್ನು [illegible] ಡೈರೆಕ್ಟರುಗಳು ನಿರ್ಧರಿಸುವರೆಂದೂ ಹೇಳಲಾಗಿದೆ. ಇದರಿಂದ ಸಾಧಾರಣವಾದ ಷೇರುದಾರರಿಗೆ ತೊಂದರೆಯಾಗಬಹುದು.

ಒಬ್ಬರಿಗೆ ೫ ಷೇರು ಇದೆಯೆಂದು ಭಾವಿಸೋಣ. ಹೊಸದಾಗಿ ೫ ಷೇರುಗಳನ್ನು ೧೦೦ ರೂಪಾಯಿನಂತೆ ಕೊಟ್ಟರೆ ೫೦೦ ರೂಪಾಯಿಗಳನ್ನು [illegible] ಕೊಡಲು ಪ್ರಯತ್ನಿಸುವನು. ಆದರೆ ಹೊಸ ಷೇರುಗಳ ಬೆಲೆ ೫೦೦ ರಂತೆ [illegible] ೨,೫೦೦ ರೂ ಕೊಟ್ಟು ಅವುಗಳನ್ನು ಕೊಳ್ಳುವ ಶಕ್ತಿಯೇ ಅವನು ಬಿಡಬೇಕಾಗುವುದು. ಹೀಗೆ ಬಿಟ್ಟ ಷೇರುಗಳನ್ನೆಲ್ಲಾ ಲಕ್ಷಾಧಿಪತಿಗಳು ಕೊಳ್ಳುವರು. [illegible] ೫೦ ಲಕ್ಷ [illegible] ಧನದ ಜೊತೆಗೆ ಷೇರುಗಳನ್ನು ಹೆಚ್ಚು ಬೆಲೆಗೆ ಮಾರಿದ್ದರಿಂದ ಅ೦ ಲಕ್ಷ ರೂಪಾಯಿ ಲಾಭ ಬಂತೆಂದು ತೋರಿಸುವರು. ಇದನ್ನು ಲಕ್ಷಾಧಿಪತಿಗಳು [illegible] ಇನ್ನೂ ಹೆಚ್ಚಿಸಿಕೊಳ್ಳುವರು.

ನಮ್ಮ ಬ್ಯಾಂಕ್ ಹುಟ್ಟಿದ್ದು ಈ ದೇಶದ ಬಡವರ ಹಣದಿಂದ. ಈಗಿನ ಯೋಜನೆಯಿಂದ ಬಡವರಿಗೆ ನಷ್ಟವಾಗುವುದು. ಹೊಸ ಷೇರುಗಳನ್ನು ೧೦೦ ರೂಪಾಯಿಗಳಂತೆಯೇ ಕೊಡಬೇಕೆಂದು ಎಲ್ಲರೂ [illegible] ಡೈರೆಕ್ಟರುಗಳಿಗೆ [illegible] ಅವಶ್ಯಕ.

Edited, printed and published by A. R. Nagarajan, at the Sadhvi Press, D Subbiah Road, Mysore

ಸರ್ಕಾರದ ಒಪ್ಪಿಗೆ

ಮೈಸೂರು ಪೌರಸಭೆಗೆ ಶ್ರೀ ಬಿ. ನಾರಾಯಣಸ್ವಾಮಿಯವರು ಉಪಾಧ್ಯಕ್ಷರಾಗಿಯೂ, ಶ್ರೀ ಎಂ. ವಿ. ರಾಮಯ್ಯನವರು [illegible] ಪೌರಸಭೆಯ ಅಧ್ಯಕ್ಷರಾಗಿಯೂ [illegible] ಪೌರಸಭೆಗೆ ಶ್ರೀ ಪಟೇಲ್ [illegible] ಗೌಡರು ಉಪಾಧ್ಯಕ್ಷರಾಗಿಯೂ ಚುನಾಯಿತರಾಗಿರುವುದನ್ನು ಸರ್ಕಾರದವರು ಅಂಗೀಕರಿಸಿರುತ್ತಾರೆ.

ಕುಸ್ತಿ ಪಂದ್ಯ

ಮೈಸೂರು ದೊಡ್ಡ ಕೆರೆ ಮೈದಾನದಲ್ಲಿ ತಾ|| ೬-೨-೪೪ ನೇ ಭಾನುವಾರ ನಡೆದ ಕುಸ್ತಿಗಳಲ್ಲಿ ಪಟೇಲ್ ಅಹಮದ್ ಸಾಹೇಬರ ಗರಡಿ ಉಸ್ತಾದ್ [illegible] ನವರ ಮಗ ಪೈ|| ಶ್ರೀಕಂಠಯ್ಯ ಮತ್ತು [illegible] ಗರಡಿ ಪೈ|| ರಾಮು, ಸಮಾ ಗೆದ್ದು ಇವರಿಬ್ಬರಿಗೂ ಕಪ್ಪು ಮತ್ತು ಮೆಡಲ್ ಬಂದಿವೆ.

ಹರಿಕಥೆ

ಮೈಸೂರು ಡಿ. ಸುಬ್ಬಯ್ಯನವರ ಬೀದಿಯಲ್ಲಿರುವ ಶ್ರೀರಾಮ ಪ್ರೆಸ್ ಮಹಡಿಯ ಮೇಲೆ ತಾ|| ೯-೨-೪೪ ನೇ ಬುಧವಾರ ಪೂರ್ವವಾ ರಾತ್ರಿ ೭ ಗಂಟೆಗೆ ವೇ|| ಬ್ರ|| ಶ್ರೀ ವಿ ಲಕ್ಷ್ಮೀನಾರಾಯಣಶಾಸ್ತ್ರಿಗಳವರು "[illegible]" ಎಂಬ ಹರಿಕಥೆಯನ್ನು ಉಚಿತ ಸಂಗೀತವಾದ್ಯಗಳೊಡನೆ ನಡೆಸುತ್ತಾರೆ. ಸರ್ವರೂ ಆಹ್ವಾನಿತರು—ಎಂ ಬುದಾಗಿ ಸಂಗೀತ ವಿದ್ವಾನ್ ಎಸ್. ಕೃಷ್ಣಯ್ಯಂಗಾರ್ ರವರು ತಿಳಿಸುತ್ತಾರೆ.

ಸ್ವಾಮಿದಾಸರಿಗೆ ಪುತ್ರಿ ವಿಯೋಗ

ಶ್ರೀ ಜೆ. ಸ್ವಾಮಿದಾಸರವರ ೧೮ ವಯಸ್ಸಿನ ಪುತ್ರಿ [illegible] ಲಲಿತ ಕುಮಾರಿಯು ಟೈಫಾಯಿಡ್ ಜ್ವರದಿಂದ ಮೈಸೂರು ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಮೊನ್ನೆ ದಿನ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಅಮೃತ

ಸಿತ್ಥದ ಜ್ವರ, ಮಲೇರಿಯಾ ಜ್ವರ, ಜ್ವರದ ಗಡ್ಡೆ, ಇವುಗಳ ಮೇಲೆ ಬಹಳ ಚೆನ್ನಾಗಿ ಕೆಲಸ ಮಾಡುತ್ತದೆ.

ಪಂಡಿತ

ಕೆ. ವಿ. ವೆಂಕಟರಾಮಯ್ಯ

ವಿ|| ಬೋರ್ಡ್ ವೈದ್ಯಶಾಲಾ, ಅರಕಲವಾಡಿ (ಚಾಮರಾಜನಗರ ತಾ||).

ಸ್ತ್ರೀಯರ ಸೌಕರ್ಯಕ್ಕಾಗಿ

[illegible] ವರ್ಷಗಳಿಂದ [illegible] ವ್ಯಾಪಾರ [illegible] ಮಾಡುತ್ತಿ

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಪ್ಸಿ ಪೌಡರ್

[illegible]

[illegible], ದೇವರಾಜ ಮಾರ್ಕೆಟ್, ಮೈಸೂರು

[illegible] ಅಧಿಕವಾಗಿ [illegible] ಕೂದಲು [illegible] ಉದ್ದವಾಗಿಯೂ [illegible] ಬೆಳೆಯುತ್ತವೆ.

ಪ್ರಭುಗಳ ಪ್ರವಾಸ

ಸ್ವಂ ಸು.] ಮೈಸೂರು ೮

ಶ್ರೀ ಮನ್ಮಹಾರಾಜರವರು ೧೫ ನೇ ತಾ॥ ಭದ್ರಾವತಿಗೆ ಭೇಟಿಕೊಡುವರೆಂದು ಗೊತ್ತಾಗಿದೆ

ಶ್ರೀ ಶಾರದಾ ಪೂಜೆ

ರಾಜಧಾನಿಯಲ್ಲಿ ಹೊಸದಾಗಿ ಸ್ಥಾಪಿತವಾಗಿರುವ ಟ್ಯುಟೋರಿಯಲ್ ಇನ್ಸ್ಟಿಟ್ಯೂಟಿನ ಎಸ್. ಎಸ್. ಎಲ್. ಸಿ ವಿದ್ಯಾರ್ಥಿಗಳು ಶ್ರೀ ಆರ್. ನಾಗರಾಜರಾಯರ ನೇತೃತ್ವದಲ್ಲಿ ಇದೇ ೫ ನೇ ತಾ॥ ಸಂಗನವಾರ ಶ್ರೀ ಶಾರದಾ ಪೂಜೆಯನ್ನು ವಿಜೃಂಭಣೆಯಿಂದ ಆಚರಿಸಿದರು. ಶ್ರೀ ಬಿ. ಟಿ ರಾಮಸ್ವಾಮಿಯವರ ಕೊಳಲು ವಾದನವೂ ಹಾಗೂ ಕೆಲವು ಉಪಾಧ್ಯಾಯರುಗಳ ಮತ್ತು ವಿದ್ಯಾರ್ಥಿಗಳ ಭಾಷಣಗಳೂ ಆದ ಮೇಲೆ, ಪ್ರಾರ್ಥನೆಯ ದನಿ ಸಮಾರಂಭವು ಮುಕ್ತಾಯಗೊಂಡಿತು

ತೆರಿಗೆದಾರರ ಸಂಘದ ಪ್ರಾರಂಭೋತ್ಸವ

ಇದೇ ೧೩ ನೇ ತಾ॥ ಭಾನುವಾರ ಸಾಯಂಕಾಲ ರಾಜಧಾನಿಯ ಚಾಮರಾಜಪೇಟೆಯಲ್ಲಿರುವ ಸಹಕಾರ ಭವನದಲ್ಲಿ ಕೆಲ್ಲೆ ಪೇಟೆಯಲ್ಲಾ ತೆರಿಗೆದಾರರ ಸಂಘದ ಪ್ರಾರಂಭೋತ್ಸವವು ಶ್ರೀ ಆರ್. ರಾಮಚಂದ್ರರಾವ್ ಬೂಂಕೊಂಡಿರವರ ಅಧ್ಯಕ್ಷತೆಯಲ್ಲಿ ನಡೆಯುವುದಾಗಿದೆ. ಕಾರ್ಯಕ್ರಮದಲ್ಲಿ ವರದಿ ವಾಚನ ಮತ್ತು ಭಾಷಣಗಳನ್ನೇ ಏರ್ಪಡಿಸಲಾಗಿದೆ. ಸರ್ವರಿಗೂ ಆಹ್ವಾನವಿದೆ.

ಬಂಗಾಳಕ್ಕೆ ಬಟ್ಟೆ ಸಹಾಯ

ಮೈಸೂರು ವಿದ್ಯಾರ್ಥಿ ಸಂಸ್ಥೆಯವರು ಬಂಗಾಳದವರ ಸಹಾಯಕ್ಕಾಗಿ ಬಟ್ಟೆಗಳನ್ನು ಶೇಖರ ಮಾಡುತ್ತಿದ್ದರಷ್ಟೆ. ಈವರೆಗೂ ೧೫೦೦ ಬಟ್ಟೆಗಳನ್ನು ಶೇಖರ ಮಾಡಲಾಯಿತು. ಎಂದು ಬಟ್ಟೆಗಳು ಬಹಳ ಜೀರ್ಣವಾಗಿದ್ದುದರಿಂದ ಮಿಕ್ಕ ೧೦೦೦ ಬಟ್ಟೆಗಳನ್ನು ನೆನ್ನೆಯ ದಿನ ಬಂಗಾಳಾ ಪ್ರಾಂತೀಯ ವಿದ್ಯಾರ್ಥಿ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳಿಗೆ ರವಾನಿಸಲಾಯಿತು. ಇದಲ್ಲದೆ ಈ ಸಂದರ್ಭದಲ್ಲಿ ೧೫೦ ರೂ ಸಂಗ್ರಹವಾಯಿತು. ಮೈಸೂರು ಮಹಾರಾಜ ಕಾಲೇಜಿನಿಂದ ೩೫೦ ರಿಂದ ಚಾಮರಾಜ ಪಾಠಶಾಲೆಯಿಂದ ೭೦೦; ಹಾಸ್ಟೆಲಿನಿಂದ ೧೨೦, ಮಕ್ಕಳ ಕೂಟದಿಂದ ೧೧೦ ಮತ್ತು ಪುರ ಜನರಿಂದ ೧೫೦ ಬಟ್ಟೆಗಳು ಸಂಗ್ರಹವಾಯಿತು. ಈ ಸಂಗ್ರಹ ಕಾರ್ಯಕ್ಕಾಗಿ ಮೈಸೂರು ನಗರದ ಹಲವು ಸಂಸ್ಥೆಗಳು ಸಮಿತಿಯವರು ನೆರವು ಕೊಟ್ಟಿದ್ದಾರೆ. ಸಹಾಯ ಮಾಡಿದ ಪ್ರತಿಯೊಬ್ಬರಿಗೂ ವಿದ್ಯಾರ್ಥಿ ಸಂಸ್ಥೆಯವರು ಈ ಮೂಲಕ ವಂದನೆಗಳನ್ನು ಅರ್ಪಿಸುತ್ತಾರೆ.

ರೈ॥ ಆ॥ ಶಾಸ್ತ್ರಿಗಳಿಗೆ ಬಿನ್ನವತ್ತಳೆ

ತಂಜಾವೂರು ಜಿಲ್ಲೆಯ ತಿರುಗಟ್ಟಿಯ ಪೈ. ಎಂ. ಪಿ. ಸಿ. ಎಸ್. ಶಿವಸ್ವಾಮಿ ಅಯ್ಯರ್‌ರವರಿಗೆ ಈ ದಿನ ವಿಶೇಷ ಸಭಾರಂಭ ನಡೆಯಿತು. ಆ ಸಮಾರಂಭದ ವಿಷಯ ... ಶಾಸ್ತ್ರಿಗಳವರಿಗೆ ... ಬಿನ್ನವತ್ತಳೆಯನ್ನು ಸಮರ್ಪಿಸಲಾಯಿತು. ... ಪತ್ರಿಕೆಯ ... ಸಿದರು.

ಸಂಪುಟ ೨] ಬುಧವಾರ ೯-೨-೪೪ [ಸಂಚಿಕೆ ೧೯೬

ಇಷ್ಟರಲ್ಲೇ ಫಿನ್‌ಲೆಂಡು ಶಾಂತಿ ಯಾಚಿಸುವುದು

ಅಂ॥ರಾ॥ ರೆಡ್‌ಕ್ರಾಸ್ ನಾಯಕನನ್ನು ಜಪಾನರು ಕೊಂದರು

ತುರ್ಕಿಯಲ್ಲಿ ಮತ್ತೆ ಮತ್ತೆ ಭೂಕಂಪಗಳಾಗುತ್ತಲೇ ಇವೆ

ಫಿನ್‌ಲೆಂಡ್ ಶೀಘ್ರದಲ್ಲೇ ತಲೆ ಬಾಗುವುದು

ಲಂಡನ್ ತಡೆಯಲಾಗದಂತಾ ಹೊಡೆತಗಳಿಗೆ ಫಿನ್‌ಲೆಂಡ್ ಸಿಕ್ಕಿ ನಿಶ್ಶಕ್ತವಾಗಿ ಇರುವುದರಿಂದ ರಷ್ಯನರೊಡನೆ ಶಾಂತಿ ಒಪ್ಪಂದ ಮಾಡಿಕೊಳ್ಳುವ ಸೂಚನೆಗಳು ಕಂಡುಬರುತ್ತಿರುವುದಾಗಿ ಹೇಳಲಾಗಿದೆ.

ಸೇನಾಧಿಕಾರಿಗಳಿಗೆ ಸಹಾಯ

ಭಾರತ ಸೈನಿಕರ ತವರು ಮುದ್ದಿನ ನಿಧಿಯ ೧೫,೫೦,೦೦೦ ರೂಗಳನ್ನು ಸೈನ್ಯಾಧಿಕಾರಿಗಳ ಸಹಾಯಕ್ಕಾಗಿ ಕೊಟ್ಟಿರುವರು.

ದೇವನಾಗರಿ ಲಿಪಿಗಾಗಿ ಚಳುವಳಿ

ಕೋರ್ಟುಗಳಲ್ಲಿ ದೇವನಾಗರಿ ಲಿಪಿಯ ಉಪಯೋಗ ... ಆಗಬೇಕೆಂದು ... ಚಳುವಳಿಯನ್ನು ಆರಂಭಿಸಿರುವರೆಂದು ತಿಳಿದುಬಂದಿದೆ

ಹಿಂದೂ ಬಂಧಿತರನ್ನು ಮಾತ್ರ ಬಿಡಿ

ಈಗ ಬಿಡುಗಡೆಯಾಗಿರುವ ಬಂಧಿತರಲ್ಲಿ ಹಿಂದೂ ಬಂಧಿತರನ್ನು ಬಂಗಾಳ ಸರ್ಕಾರವು ಕೂಡಲೆ ಬಿಡುಗಡೆ ಮಾಡಬೇಕೆಂದು ಒತ್ತಾಯ ಪಡಿಸುವ ನಿರ್ಣಯವು ಬಂಗಾಳ ಪ್ರಾಂತೀಯ ಹಿಂದೂ ಮಹಾಸಭಾ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಅನುಮೋದಿತವಾಗಿದೆ

ನಿಕೋಬಾರ್‌ನ್ನು ಪ್ರತ್ಯೇಕಿಸಲಾಗಿದೆ

ನಿಕೋಬಾರ್ ದ್ವೀಪವನ್ನು ಸಂಪೂರ್ಣವಾಗಿ ಪ್ರತ್ಯೇಕಿಸಲಾಗಿದೆ. ... ಬಳಿ ಕದನ ನಡೆಯುತ್ತಿದೆ

ಸರೋಜಿನಿ ಬಗ್ಗೆ ನಿಬಂಧನೆ ಸೂಚನೆಗೆ ಅವಕಾಶವಿಲ್ಲ

ಶ್ರೀಮತಿ ಸರೋಜಿನಿಯವರ ... ಶ್ರೀ ಎನ್. ವಿ. ... ಸಭೆಯಲ್ಲಿ ... ಆಕ್ಷೇಪಿಸಿದರು

ತುರ್ಕಿಯಲ್ಲಿ ಮತ್ತೆ ಭೂಕಂಪ

ಭಾನುವಾರ ಅಂಕಾರಕ್ಕೆ ೧೫೦ ಮೈಲಿ ದೂರ ಅನಟೋಲಿಯಾದ ಬೋಲಿ ಎಂಬಲ್ಲಿ ಪುನಃ ಭೂಕಂಪವಾಯಿತು. ತತ್ಫಲವಾಗಿ ೧೫೦ ಜನ ಸತ್ತರೆಂದೂ ವರದಿಯಾಗಿದೆ

ಚಿತ್ತೂರಿನಲ್ಲಿ ಭೂಮಿ ಗುಡುಗಿತು

... ಚಿತ್ತೂರಿನಲ್ಲಿ ಭೂಮಿ ಗುಡುಗಿತು. ಈ ಅಲ್ಪ ರೀತಿಯ ಭೂಕಂಪದ ಹಾನಿ ಜನರಿಗೆ ಸಿಗಲಿಲ್ಲ

ಜರ್ಮನ್ ರಾಜಧಾನಿ ನರಕ

ಮಿತ್ರರ ವಿಮಾನ ಧಾಳಿ ಮಾಡುವಾಗ ಜರ್ಮನರು ಬರ್ಲಿನ್ ರಾಜಧಾನಿಯನ್ನು ಬೇರೆಡೆಗೆ ಈಗಾಗಲೇ ವರ್ಗಾಯಿಸಿರುವರೆಂದು ಹೇಳಲಾಗಿದೆ

ಹೆಲ್‌ಸಿಂಕಿ ಧಾಳಿ ವಿವರ

ಭಾನುವಾರ ಫಿನ್ಲೆಂಡಿನ ರಾಜಧಾನಿ ಹೆಲ್‌ಸಿಂಕಿಯ ಮೇಲೆ ರಷ್ಯನರು ಧಾಳಿ ನಡೆಸಿದರಷ್ಟೆ. ಆಗ ಅಲ್ಲಿನ ಬಿಲ್ಡಿಂಗ್ ಕೇಂದ್ರಗಳ ಪಟ್ಟಿ ಕೊಟ್ಟಿರುವುದಾಗಿಯೂ, ಕಲ್ಲಿದ್ದಲು ಬಂದರು, ಪವರ್ ಸ್ಟೇಷನ್, ರೈಲ್ವೆ ನಿಲ್ದಾಣಗಳನ್ನು ನಾಶಪಡಿಸುವುದಾಗಿಯೂ ... ಧಾಳಿ ಮಾಡಿದ ... ಬಿದ್ದಿತ್ತೆಂದು ... ರಷ್ಯನ್ ವಿಮಾನ ಹಾನಿಯಾಯಿತೆಂದು ಹೇಳಲಾಗಿದೆ ... ರಷ್ಯನ್ ವಿಮಾನ ಹಿಂತಿರುಗಿ ಬರಲಿಲ್ಲ

ವಿದೇಶದಿಂದ ೧೯೩ ಸಹಸ್ರ ಟನ್ ಧಾನ್ಯ

ಭಾರತಕ್ಕೆ ಕೆಲವು ಟಿಕ್ಕೆ ೧೯೩ ಸಹಸ್ರ ಟನ್ ಧಾನ್ಯ ತುಂಬಿದ ನೌಕೆಗಳು ವಿದೇಶದಿಂದ ಬಂದಿವೆಯೆಂದು ಹೇಳಲಾಯಿತು

ಪರಮಾಶೀರೂ ನ್ಯಾಯಸ್ಥಾನಕ್ಕೆ

... ಪರಮಾಶೀರೂ ... ನ್ಯಾಯಸ್ಥಾನಕ್ಕೆ ... ಹೋಗಲು ... ಅಮೆರಿಕನ್ ... ಪ್ರಯಾಣ ... ವ್ಯಾಪಾರದಲ್ಲಿ ... ದ ... ಬಗ್ಗೆ ಚರ್ಚಿಸಿ ಪರಿಗಣಿಸಿದರು.

ಚೈನ ಪ್ರಕಾಶರ ಜವಾಬ್ದಾರಿ

ಶ್ರೀ ಚೈನ ಪ್ರಕಾಶ ನಾರಾಯಣರನ್ನು ಬಂಧಿಸಿ ಇರಿಸಿಕೊಂಡಿರುವ ಜವಾಬ್ದಾರಿ ಕೇಂದ್ರ ಸರ್ಕಾರದ್ದಲ್ಲವೆ ಎಂದು ಕೇಳಲಾದ ಪ್ರಶ್ನೆಗೆ ಅದು ಪಂಜಾಬ್ ಸರ್ಕಾರದ ಜವಾಬ್ದಾರಿಯೇ ವಿನಾ ಕೇಂದ್ರ ಸರ್ಕಾರದ್ದಲ್ಲವೆಂದು ಅವರು ಹೇಳಿದರು

ರೆಡ್‌ಕ್ರಾಸ್ ನಾಯಕನ ಕೊಲೆ

ಅಂತರ ರಾಷ್ಟ್ರೀಯ ರೆಡ ಕ್ರಾಸ್ ಸಂಸ್ಥೆಯ ಪ್ರತಿನಿಧಿಯಾದ ಡಾ॥ ಎಫ್. ಪಾಲ್‌ಸಿಕ್ಕಿ ಎಂಬುವರು ಬೋರ್ನಿಯೋದಲ್ಲಿ ಇದ್ದ ಕಡೆ ಮರಣ ಹೊಂದಿದರೆಂದು ಟೋಕಿಯೋದಿಂದ ವರದಿಯಾಗಿದೆ. ಅವರು ಜಪಾನಿನಿಂದ ಯೂರೋಪಿಗೆ ತೆರಳಲು ಪ್ರಯತ್ನಿಸುತ್ತಿದ್ದಾಗ ಜಪಾನರೇ ಅವರನ್ನು ಕೊಂದು ಹಾಕಿರುವಂತೆ ತಿಳಿಯುವುದಾಗಿ ಲಂಡನ್ನಿನಲ್ಲಿ ಹೇಳಲಾಗಿದೆ.

ಜಪಾನರ ಕಳವಳ

ತಮಗೆ ಸೇರಿದ ಕ್ವಾಜೆಲಿನ್ ದ್ವೀಪಸ್ತೋಮದ ಮೇಲೆ ಮಿತ್ರರು ದಂಡೆಯಾತ್ರೆ ನಡೆಸಿ ಸಿದ್ಧರಾಗುತ್ತಿರುವರೆಂದು ಜಪಾನರು ಕಳವಳಗೊಂಡಿರುವುದಾಗಿ ತಿಳಿದುಬಂದಿದೆ.

ಹೆಲ್‌ಸಿಂಕಿಗೆ ಮತ್ತೆ ಏಟು

ಮೊನ್ನೆ ಬೆಳಗಿನ ಝಾವ ಹೆಲ್‌ಸಿಂಕಿ ನಗರವನ್ನು ಮತ್ತೆ ರಷ್ಯನರು ಧಾಳಿ ಮಾಡಿದರೆಂದು ಫಿನ್‌ಲೆಂಡ್ ಸರ್ಕಾರ ಪ್ರಕಟಿಸಿದೆ

ಕಸ್ತೂರಿಬಾಯಿ ಖುಲಾಸೆ ಇಲ್ಲ

ಶ್ರೀಮತಿ ಕಸ್ತೂರಿಬಾಯಿಯವರಿಗೆ ಆಗಾಗ್ಗೆ ಬರುತ್ತಿರುವ ಹೃದಯ ವೇದನೆಯು ಬಹು ಹಿಂದಿನಿಂದಲೂ ಅವರು ಅನುಭವಿಸುತ್ತಿರುವ ಪ್ರಾಮುಖ್ಯವಾದ ಕಾರಣವೂ ಮತ್ತು ಕಳೆದ ಡಿಸೆಂಬರ್ ೩೧ ರಲ್ಲಿ ಹೊರಡಿಸಿದ ಪ್ರಕಟಣೆಯಲ್ಲಿ ನಮೂದಿಸಿರುವ ಕಾರಣಗಳಿಂದಲೂ ಕಸ್ತೂರಿಬಾಯಿಯವರ ಬಿಡುಗಡೆ ಸಾಧ್ಯವಿಲ್ಲವೆಂದು ಹೋಂ ಮೆಂಬರು ಅಸೆಂಬ್ಲಿಯಲ್ಲಿ ಹೇಳಿದರು.

ಕಲ್ಕತ್ತಾ ಧಾಳಿ ಬಗ್ಗೆ ಸುಳ್ಳು ಹೇಳಿ ಶಿಕ್ಷೆಗೆ ಗುರಿಯಾದ

ಡಿಸೆಂಬರ್ ೫ ರಲ್ಲಿ ಕಲ್ಕತ್ತಾ ಮೇಲೆ ನಡೆದ ಧಾಳಿ ಬಗ್ಗೆ ಅಧಿಕ ನಷ್ಟವಾಯಿತೆಂದು ಸುಳ್ಳಿನ ಕಂತೆಯನ್ನು ಹರಡಿದ್ದಕ್ಕಾಗಿ ಜಿಲ್ಲಾ ಜಡ್ಜಿಯಾದ ... ಎಂಬ ಕಲ್ಕತ್ತಾದ ಕಂಟ್ರಾಕ್ಟರ್ ಒಬ್ಬನಿಗೆ ಅಲ್ಲಿನ ಪ್ರಸಿಡೆನ್ಸಿ ನ್ಯಾಯಾಧೀಶರು ೫೦೦ ರೂ ಜುಲ್ಮಾನೆ ಕಟ್ಟದಿದ್ದರೆ ಆರು ತಿಂಗಳ ಸಜ ವಿಧಿಸಿದ್ದಾರೆ

ನಾಜಿಗಳನ್ನು ರಷ್ಯದಿಂದ ಹೊರದೂಡಲಾಗುವುದು

ಜೆಸಿಗೆ ಆರಂಭದ ಹೊತ್ತಿಗೆ ನಾಜಿಗಳ ಒಟ್ಟು ರಷ್ಯದ ಎಲ್ಲಾ ಪ್ರದೇಶಗಳಿಂದಲೂ ಹೊರಹಾಕಲಾಗುವುದೆಂದು ಲಂಡನ್ನಿನ ರಾಜಕೀಯ ವಲಯದಲ್ಲಿ ಅಭಿಪ್ರಾಯಪಡಲಾಗಿದೆ

ವಿಮಾನಾಂಕಗಳ ಚಿತ್ತ ಹತ್ತಿತು

... ಬೇಕಾಗಿದ್ದು ... ವಿಮಾನ ... ಹೋರಾಟದ ... ಯುದ್ಧದ ... ಪ್ರತಿಪಾದಿಸಿ, ಇವು ... ಬಂದ ಹಿಂದಿನ ಭಾಗಗಳಲ್ಲಿ

ಪತ್ರಿಕೆಗೆ ಅನುಮತಿ ಇಲ್ಲ

ಸ್ಪೆಷಲ್] ಬೆಂಗಳೂರು, ೮

ಶ್ರೀ ಎಸ್. ಸಿ. ತಿಮ್ಮಾರೆಡ್ಡಿಯವರು 'ಎಳ ವಾಣಿ' ಎಂಬ ಕನ್ನಡ ವಾರ ಪತ್ರಿಕೆಯನ್ನು ಹೊರಡಿಸಲು ಸರ್ಕಾರದವರ ಅನುಮತಿ ಕೇಳಿದ್ದರು. ಆಗಿನವರ ಅಭಾವದ ಕಾರಣ ಅನುಮತಿ ಕೊಡುವುದಿಲ್ಲ ವೆಂದು ಸರ್ಕಾರದವರು ತಿಳಿಸಿರುವರು

ವಿದ್ಯಾಗಿರಿ ಅವಧಿ ಬಿಡ್ತಿ

... ಪ್ರಧಾನ ಸಿ ... ವಾದವರಾಗಿರುವ ಸೇ ... ಬಿಡ್ತಿ ... ದವರಾಗಿರುವಂತೆ ... ದೆ ... ಕೊಟ್ಟಿದ್ದಾರೆ

೧೯ ರಾಜಕೀಯ ಬಂದಿಗಳ ಬಿಡುಗಡೆ

... ರಕ್ಷಣಾ ನಿಯಮದ ಪ್ರಕಾರ ಬಂಧಿಸಲ್ಪಟ್ಟಿದ್ದ ... ಬಂದಿಗಳನ್ನು ... ಬಿಡುಗಡೆ ಮಾಡಲಾಗಿದೆ

ತಿಂದಿದ್ದನ್ನು ಪ್ರನಷ್ಟಪಹರಣ

... ಪಕ್ಷ ... ಒಂದನ್ನು ... ಮಾಡಿ ... ಸಿ, ಸಲ ... ವಾಡಿದವರ ಜಳ ... ಸಂಬಂಧಿಸಿದ ಪ್ರಸಂಗ ಒಂದು ಇತ್ತೀಚೆಗೆ ನಡೆದಿರುವುದಾಗಿ, ಇಂಥ ಪ್ರಸಂಗಗಳು ... ಇತರೆಡೆಗಳಲ್ಲೂ ನಡೆದಿರುವುದೂ ... ಸರ್ಕಾರದವರು ... ಪ್ರಬಲ ಕಾರ್ಯ ... ಕೈಗೊಳ್ಳುವರೆಂದು ಪ್ರಜೆಗಳು ನಿರೀಕ್ಷಿಸುತ್ತಿರುವರು.

ಜಪಾನರನ್ನು ಪ್ರತಿಭಟಿಸಕೂಡದೆಂದಿಲ್ಲ

ಭಾರತೀಯರು ಜಪಾನರನ್ನು ಪ್ರತಿಭಟಿಸಕೂಡದೆಂದು ಗಾಂಧಿ ಮಹಾತ್ಮರು ಗಾಂಧಿಯವರು ... ಬರೆದ ಪತ್ರದಲ್ಲಿ ... ಭಾರತದ ಸ್ವದೇಶೀಯ ಮಂತ್ರಿಗಳಾದ ಸರ್ ... ಸ್ವನವರು ... ಸಭೆಯಲ್ಲಿ ಹೇಳಿದರು.

೫ ಸಾವಿರ ಪೋಲೀಸ್‌ರ ಕೊಲೆಯಾಗಿದೆ

ಕಳೆದ ... ಚಳುವಳಿ ... ಸಾವಿರ ಪೋಲೀಸ್ ಪ್ರಜೆಗಳು ... ಕೊಲೆಯಾದರೆಂದು ... ಸರ್ಕಾರದವರು ಪ್ರಕಟಿಸಿದ್ದಾರೆ.

ಆರ್ಯರ ಅಧಿವೇಶನ

ಮುಂದಿನ ವಾರ ದೆಹಲಿಯಲ್ಲಿ ಆರ್ಯ ಕಾಂಗ್ರೆಸ್ ಅಧಿವೇಶನ ಜರುಗುವುದಾಗಿದೆ. ಭಾರತದಲ್ಲಿ ವಿ ... ಪ್ರಚಾರ ಕಾರ್ಯ ನಡೆಯುತ್ತಿದೆ ಎಂಬ ಬಗ್ಗೆ ಆ ಅಧಿವೇಶನದಲ್ಲಿ ಚರ್ಚೆ ನಡೆಯಲಿದೆ. ಸಾರ್ವಜನಿಕರ ... ಮತ್ತು ಸಂಪತ್ತನ್ನು ... ಮತಭೇದ ... ಸಾವಿರಾರು ... ವಿಷಯಗಳನ್ನು ... ಇತರ ಎಲ್ಲರಿಗೂ ... ವಾಸವಾಗಿರುವ ... ಮಾಡುವಂತೆ ಸರ್ಕಾರದವರನ್ನು ಒತ್ತಾಯ ಪಡಿಸಬೇಕೆಂಬ ನಿರ್ಣಯವು ಸಹ ಅಧಿವೇಶನದ ಒಪ್ಪಿಗೆಗಾಗಿ ಬರಲಿದೆಯೆಂದು ತಿಳಿದು ಬಂದಿದೆ

ಭಾರತದಲ್ಲಿದ್ದ ಇಟಾಲಿಯನ್ ಬಂದಿಗಳು ಹೊರಕ್ಕೆ

ಈಗಾಗಲೇ ಸಾವಿರಾರು ಇಟಾಲಿಯನ್ ಬಂದಿಗಳನ್ನು ಭಾರತದಿಂದ ಹೊರಕ್ಕೆ ಕಳಿಸಲಾಗಿದೆಯೆಂದೂ, ಇನ್ನು ಮುಂದೆಯೂ ... ಇಟಾಲಿಯನ್ ಬಂದಿಗಳನ್ನು ಹೊರಕ್ಕೆ ಕಳುಹಿಸುವುದಾಗಿಯೂ ಯುದ್ಧ ಕಾರ್ಯದರ್ಶಿ ಶ್ರೀ ... ವರು ಶಾಸನ ಸಭೆಯಲ್ಲಿ ತಿಳಿಸಿದರು

ವಯಸ್ಕರ ವಿದ್ಯಾಭ್ಯಾಸ ಪ್ರದರ್ಶನ

ಬೊಂಬಾಯಿನ ವಯಸ್ಕರ ವಿದ್ಯಾಭ್ಯಾಸ ಸಮಿತಿಯವರು ವಯಸ್ಕರ ವಿದ್ಯಾಭ್ಯಾಸ ಪ್ರದರ್ಶನ ಒಂದನ್ನು ಮುಂದಿನ ತಿಂಗಳು ನಡೆಸಲೇರ್ಪಾಡುಗಳನ್ನು ಮಾಡುತ್ತಿರುವರು. ಅದನ್ನು ಅಖಿಲ ಭಾರತ ಪ್ರದರ್ಶನವನ್ನಾಗಿ ಮಾಡಲು ಪ್ರಯತ್ನಗಳು ನಡೆಯುತ್ತಿವೆ.

ನಿಧನ

... ಬಂಡವಾಳಗಾರರಲ್ಲಿ ಸುಪ್ರಸಿದ್ಧ ... ಕಂಪನಿಯ ... ಬಳಗದ ... ಡೈರೆಕ್ಟರು ... ನಿನ್ನೆ ದಿನ ರಾತ್ರಿ ... ಗಂಟೆಯಲ್ಲಿ ... ತಮ್ಮ ಗೃಹದಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ಕೇವಲ ... ಜನ ಪ್ರಿಯರೂ ಆಗಿದ್ದರು. ಇವರ ಆತ್ಮಕ್ಕೆ ಜಗದೀಶನು ಶಾಂತಿಯನ್ನು ಕೊಡಲೆಂದು ಕೋರುತ್ತೇವೆ

ಸನಾತನಿಗಳ ಸಮ್ಮೇಳನ

ಅಖಿಲ ಭಾರತ ವರ್ಣಾಶ್ರಮ ಸ್ವರಾಜ್ಯ ಸಂಘದ ವಿಶೇಷ ಅಧಿವೇಶನ ಒಂದು ಜಗದ್ಗುರು ಶ್ರೀ ಶಂಕರಾಚಾರ್ಯ ಬ್ರಹ್ಮಾನಂದ ಸರಸ್ವತಿಯವರ ಅಧ್ಯಕ್ಷತೆಯಲ್ಲಿ ಕೆಲದಿನಗಳ ಕೆಳಗೆ ದೆಹಲಿಯಲ್ಲಿ ನಡೆಯಿತು. ಹಿಂದೂ ಸ್ತ್ರೀ ಹಕ್ಕು ಭಾದ್ಯತೆ, ವಿವಾಹ ಇವುಗಳಿಗೆ ಸಂಬಂಧಿಸಿದ ಸರ್ಕಾರಿ ಶಾಸನಗಳನ್ನು ಈ ಅಧಿವೇಶನ ಖಂಡಿಸಿತು. ... ಕ್ಷೇತ್ರ ಸ್ಥಾನಗಳಲ್ಲಿ ... ಕೊಡದೆಂದು ತೀರ್ಮಾನಿಸಿತು. ಸನಾತನ ಹಿಂದೂ ಧರ್ಮವನ್ನು ... ವಾರಿಗೂ ಹಿಂದೂಗಳು ... ಬೇಕೆಂದು ತಮ್ಮ ಮತವನ್ನು ಕಾಪಾಡಲು ಸರ್ವ ತ್ಯಾಗಕ್ಕೂ ಹಿಂದೂಗಳು ಸಿದ್ಧರಾಗಿರಬೇಕೆಂದೂ ಅಧ್ಯಕ್ಷರು ಮನವಿ ಮಾಡಿಕೊಂಡರು.

ಸಿಲೋನಿಗೆ ಆಮದು ಇಲ್ಲ

ಭಾರತದಲ್ಲಿ ಆಹಾರ ಪದಾರ್ಥ ಕಡಿಮೆ ... ಕಾರಣ ... ಹಿಂದೆ ಭಾರತ ಸರ್ಕಾರದ ಸಿಲೋನಿಗೆ ಗೋಧಿ ಮತ್ತು ಅಕ್ಕಿ ರಫ್ತನ್ನು ನಿಲ್ಲಿಸಿದೆ. ಆದರೆ ೨೦೦೦ ಟನ್ ದ್ವಿದಳ ಧಾನ್ಯಗಳನ್ನು ಕಳುಹಿಸಲಾಗುತ್ತಿದೆ. ಸಿಲೋನ್ ದ್ವೀಪದ ... ಭಾಗ ಜನಕ್ಕೆ ಮಾತ್ರ ಸಿಲೋನ್‌ನಲ್ಲಿ ಆಹಾರ ಸಿಗುವುದೆಂದೂ ಉಳಿದವರಿಗೆ ಹೊರಗಡೆಯಿಂದ ತರಿಸಿಕೊಳ್ಳಬೇಕಾಗಿದೆಯೆಂದೂ ಭಾರತದಲ್ಲಿ ಸಿಲೋನಿನ ಪ್ರತಿನಿಧಿಗಳಾಗಿರುವ ಸರ್ ... ಜಯತಿಲಕರವರು ಹೇಳಿದ್ದಾರೆ.

ಮಾರಾಮಾರಿ

... ಬೀದಿಗಳಲ್ಲಿ ... ಪ್ರದೇಶಗಳನ್ನು ಜರ್ಮನರೊಂದು ಬಾರಿ ಗೆಲ್ಲುವುದು ... ಪುನಃ ಕಿತ್ತುಕೊಳ್ಳುವುದು ಹೀಗೆ ಯುದ್ಧಗತಿಯು ಮಾರಾಮಾರಿಯಾಗಿದೆಯೆಂದು ತಿಳಿದು ಬಂದಿದೆ.

ಮಾರ್ಷಲ್ ಆಕ್ರಮಣಕಾಲದಲ್ಲಿ ಮಡಿದವರ ಸಂಖ್ಯೆ

ಮಾರ್ಷಲ್ ದ್ವೀಪವನ್ನು ಅಮೇರಿಕನರು ಹಿಡಿದಾಗ ೮ ಸಾವಿರ ಜಪಾನರನ್ನು ಕೊಲ್ಲಬೇಕಾಯಿತೆಂದೂ, ೨೩೯ ಜಪಾನರನ್ನು ಸೆರೆಹಿಡಿದರೆಂದೂ, ಅಮೇರಿಕನರ ಕಡೆ ೨೮೬ ಮಂದಿ ಸತ್ತರೆಂದೂ ೧೧೫೦ ಮಂದಿಗೆ ಗಾಯಗಳಾಗಿವೆಯೆಂದೂ ೮೩ ಮಂದಿ ತಪ್ಪಿಸಿಕೊಂಡಿರುವರೆಂದೂ ಈಗ ಗೊತ್ತಾಗಿದೆ

Edited, printed and published by A. R. Nagarajan, at the Sadhvi Press, D. Subbiah Road, Mysore.

ಜರ್ಮನರಿಗೆ ೨೦೦ ನಗರ ನಷ್ಟ

ದಕ್ಷಿಣ ಯುಕ್ರೇನಿನಲ್ಲಿ ರಷ್ಯನರ ಧಾಳಿಯಿಂದ ಕ್ರಿವಾಯ್‌ರಾಗ್, ನಿಕೋಪೋಲ್ ಮುಂತಾದ ಇನ್ನೂರು ನಗರಗಳು ಜರ್ಮನರ ಕೈಬಿಟ್ಟಿವೆ. ಮ್ಯಾಂಗನೀಸ್ ಗಣಿಗಳಿರುವ ನಗರವೊಂದು ಇದರಲ್ಲಿ ಸೇರಿದೆ. ಜರ್ಮನರ ಸೇನಾವ್ಯೂಹವನ್ನು ಒಂದು ನೂರು ಮೈಲಿಗಳವರೆಗೆ ಭೇದಿಸಲಾಗಿದೆ.

ಕ್ಯಾಸಿನೋಗೆ ಮುತ್ತಿಗೆ

ಇಟಲಿಯಲ್ಲಿ ಕ್ಯಾಸಿನೋವಿಗೆ ಮೂರು ದಿಕ್ಕುಗಳಿಂದ ಮುತ್ತಿಗೆ ಹಾಕಲಾಗಿದೆ. ನಗರದಲ್ಲಿರುವ ಜರ್ಮನರಿಗೆ ಹೊರಗಿನಿಂದ ಯಾವ ಸಂಪರ್ಕವೂ ಆಗದಂತೆ ತಡೆಗಟ್ಟಲ್ಪಟ್ಟಿದೆ.

ಅರಬ್ಬೀ ರಾಜ್ಯಗಳ ಸಂಘಟನೆ

ಈಜಿಪ್ಟ್ ಮತ್ತು ಅರಬ್ಬೀ ರಾಜ್ಯವಾದ ಯೇಮನ್ನಿನ ಪ್ರತಿನಿಧಿಗಳು ಕೈರೋವಿನಲ್ಲಿ ಸೇರಿ ಅರಬ್ಬೀ ರಾಜ್ಯಗಳ ಸಂಘಟನೆ ವಿಷಯವಾಗಿ ಮಾತುಕತೆ ನಡೆಸುತ್ತಿರುವರು ಎರಡು ರಾಜ್ಯಗಳೂ ಒಂದುಗೂಡಿ ಕೆಲಸ ಮಾಡಲು ಒಪ್ಪಿದ್ದಾಗಿದೆ.

ರೂಸ್‌ವೆಲ್ಟರಿಗೆ ವಿರೋಧ

ಅಮೇರಿಕದ ಕಾಂಗ್ರೆಸ್ ಸಭೆಯು ದಿನೇ ದಿನೇ ಅಧ್ಯಕ್ಷ ರೂಸ್‌ವೆಲ್ಟರಿಗೆ ವಿರೋಧವಾಗಿ ತಿರುಗುತ್ತಿದೆಯೆಂದು ಹೇಳಲಾಗಿದೆ. ... ವಿಷಯಗಳ ಚರ್ಚೆಯ ಸಮಯದಲ್ಲಿ ಕಾಂಗ್ರೆಸ್ಸಿನ ಸದಸ್ಯರು ಈ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದಾರೆ. ಅಧ್ಯಕ್ಷರು ತಮ್ಮ ಅಧಿಕಾರವನ್ನು ಹೆಚ್ಚಿಸಿಕೊಂಡು ಮುಂದಿನ ಚುನಾವಣೆಯಲ್ಲಿ ತಮ್ಮ ಬಲವನ್ನು ವೃದ್ಧಿಗೊಳಿಸುತ್ತಿರುವರೆಂದು ಅಪವಾದ ಮಾಡಲಾಗಿದೆ.

ಆಕಾಶವಾಣಿ

ನಾಳೆ ರಾತ್ರಿ ... ರಿಂದ ವಿದ್ವಾನ್ ಚಂದ್ರಶೇಖರಯ್ಯನವರ ಹಾಡುಗಾರಿಕೆ.

॥ ವಂದೇಮಾತರಂ ॥

ನವೀನ ಮಾದರಿ! ದೀರ್ಘ ಬಾಳಿಕೆ! ಕಡಿಮೆ ಬೆಲೆ !!

ದೇಶೀಯ ಕೈಗಾರಿಕೆ

ಕೈಮಗ್ಗದಿಂದ ತಯಾರಿಸಿದ ... ಗಳು ... ಮಾದರಿಗಳಲ್ಲಿ

ರಗ್ಗು, ಕಂಬಳಿ, ಕಂಬಳಿ ಕೋಟಿಂಗ್ ರತ್ನಕಂಬಳಿಗಳಿಗೆ

ಜಿ. ವಿ. ಸೂರ್ಯನಾರಾಯಣ ಶೆಟ್ಟಿ ಅಂಡ್ ಸನ್ಸ್

ಜ್ಯೂಯಲರ್ಸ್ & ರೆಡಿಮೇಡ್ ಡ್ರೆಸ್ ಎಂಪೋರಿಯಂ,

ಸಯ್ಯಾಜಿರಾವ್ ರೋಡ್, ಮೈಸೂರು.

ಪ್ರತಿದಿನ ೩ ಆಟಗಳು

ಶ್ರೀ ವೀರಾ ಟಾಕೀಸ್

10-2-44 ರಿಂದ

ಪಾವಕಿ ಸನ್ಯಾಲ್, ಕೌಶಲ್ಯ, ... ಮಿಶ್ರ, ... ಪಾಂಡೆ

...

ಬೇಕಾಗಿದ್ದಾರೆ

ಶ್ರೀರಂಗಪಟ್ಟಣದ ಅತಿ ಪುರಾತನ ಮಹಿಮೆಯುಳ್ಳ ಸ್ವಾಮಿ ಶ್ರೀ ಲಕ್ಷ್ಮೀನರಸಿಂಹಸ್ವಾಮಿ, ಶ್ರೀರಂಗಸ್ವಾಮಿ, ದೇವಾಲಯದಲ್ಲಿ ಅರ್ಚಕ ಕೆಲಸ ಮಾಡಿಕೊಂಡಿರಲು ತೆಂಕಲೆ ಶ್ರೀವೈಷ್ಣವ ವೈದಿಕ ಬ್ರಾಹ್ಮಣರೊಬ್ಬರು ಬೇಕಾಗಿದೆ. ... ಪಡಿತರ ... ಸಂಬಳ ... ಇತರ ವಿವರಗಳಿಗೆ ... ಸಂಗತಿ ತಿಳಿಯುವುದು

ಎಂ. ಕೆ. ಆನಂದಾಳ್ವಾರ್

(ವೈದಿಕ ... ಧರ್ಮದರ್ಶಿ)

೩೦೬, ದಿವಾನ್ಸ್‌ರೋಡ್, ಮೈಸೂರು

... ಕಾಫಿ ... ಶ್ರೀ ಯುತ ... ಗೆ

... ವರ್ಷಗಳಿಂದ ಪ್ರಖ್ಯಾತವಾಗಿ ... ಮಾಡುತ್ತಿರುವ

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿ ಪುಡಿ

ಸಗಟು ಮಾರಾಟಗಾರರು

ಕೆ. ಪುಟ್ಟಸ್ವಾಮಿ ... ಮಂಡಿ, ದೇವರಾಜ ಮಾರ್ಕೆಟ್, ಮೈಸೂರು

... ಲಿಲ್ಲೀ ... ಅಫೀಸಿನಲ್ಲಿಯೂ ... ಸಿಕ್ಕುವುದು ... ದೊರೆಯುತ್ತೆ ... ಬಿಡಿ ... ನಮ್ಮ ... ಕೊಳ್ಳಲು ... ಕೋರಿಕೊಳ್ಳುತ್ತೇನೆ

ಸಂಪುಟ ೨] ಗುರುವಾರ ೧೦-೨-೪೪ [ಸಂಚಿಕೆ ೧೭೭

ಅರಕಾನ್ ರಂಗದಲ್ಲಿ ಜಪಾನರ ಒತ್ತಡ

ಯುದ್ಧ ನಡೆ ಸಂಚಾಲಕತ್ವವನ್ನು ಅಮೆರಿಕಕ್ಕೆ ವಹಿಸಿ

ಸಿಲೋನ್ ತೀರದ ಮೇಲೆ ಶತ್ರು ಬಾಂಬು ಬಿತ್ತು

ಬಡವರಿಗೆ ಊಟದ ಸೌಕರ್ಯ

ಸ್ವಂ. ಸು] ಮೈಸೂರು ೧೦

ರಾಜಧಾನಿಯಲ್ಲಿರುವ ಭಿಕ್ಷುಕರು, ಪಾರಾನ್ನ ಮತ್ತು ಭಿಕ್ಷಾನ್ನದ ವಿದ್ಯಾರ್ಥಿಗಳು ಮತ್ತು ಇತರ ಬಡಜನರಿಗೆ ಊಟದ ಸೌಕರ್ಯವನ್ನೂ ಕಲ್ಪಿಸುವ ವಿಷಯವನ್ನೂ ಪ್ರಸ್ತಾಪಿಸಲು ಈ ದಿನ ಬೆಳಗ್ಗೆ ಪೌರಸಭೆಯ ಕಟ್ಟಡದಲ್ಲಿ ಪೌರಸಭಾಧ್ಯಕ್ಷರಾದ ಶ್ರೀ ರಾಮಚಂದ್ರರಾವ್ ಜೋಂಧೋರೆಯವರ ಅಧ್ಯಕ್ಷತೆಯಲ್ಲಿ ಒಂದು ಸಭೆ ನಡೆಯಿತು. ಅನೇಕ ಪೌರಸಭಾ ಸದಸ್ಯರೂ, ಇತರ ಖಾಸಗಿ ದೊಡ್ಡ ಮನುಷ್ಯರೂ ಬಂದಿದ್ದರು.

ಅಧ್ಯಕ್ಷರು ಸಭೆಯ ಉದ್ದೇಶವನ್ನು ತಿಳಿಸಿದರು. ತಿಂಗಳಿಗೆ ೫ ರೂ ನಂತೆ ಸಮಿತಿಯವರು ಕೊಟ್ಟು ಈಗ ೭೫ ವಿದ್ಯಾರ್ಥಿಗಳಿಗೆ ಮಾಡರ್ನ್ ಹೋಟೆಲಿನವರ ಮೂಲಕ ದಿನಕ್ಕೆ ಎರಡು ಹೊತ್ತು ಊಟವನ್ನು ಹಾಕಿಸುತ್ತಿರುವುದಾಗಿಯೂ, ಹೀಗೆಯೇ ೩೦೦ ವಿದ್ಯಾರ್ಥಿಗಳಿಗೆ ಏರ್ಪಡಿಸಬೇಕೆಂದಿರುವುದಾಗಿಯೂ ತಿಳಿಸಿದರು. ಭಿಕ್ಷುಕರು, ಮುಖ್ಯವಾಗಿ ಅಂಗವಿಕಲರು ರಸ್ತೆಗಳಲ್ಲಿ ಬಿದ್ದಿರುವವರ, ರೇಷನಿಂಗ್ ಸೌಕರ್ಯಗಳನ್ನು ಪಡೆಯದೆ ಭಿಕ್ಷವನ್ನು ಮಾಡದ ಇರುವವರು ಇವರೇ ಮೊದಲಾದವರು ಊಟ ಮತ್ತು ಬಟ್ಟೆಗೆ ಸೌಲಭ್ಯಗಳನ್ನು ಕಲ್ಪಿಸುವುದಕ್ಕಾಗಿ ಒಂದು ಸಮಿತಿಯನ್ನು ರಚಿಸಲಾಯಿತು. ಪೌರಸಭಾಧ್ಯಕ್ಷರೇ ಇದರ ಅಧ್ಯಕ್ಷರು. ಪೌರಸಭಾ ಸದಸ್ಯರಲ್ಲಿಯೂ ಮತ್ತು ಇತರ ಹಲವು ಮಹನೀಯರೂ ಸದಸ್ಯರು.

ಡಾ॥ ಎಂ. ಸಿ. ಜಿಪ್ಪ, ಶ್ರೀಗಳಾದ ಪಾಳೆಪಳ್ಳಿ ಸೀತಾರಾಮಯ್ಯ, ರಾ॥ ಬ॥ ಎಂ. ರಾಮಸ್ವಾಮಿ, ಸಿ. ನಂಜುಂಡಯ್ಯ, ಎಂ. ಆರ್. ಸಿ. ಬಸಪ್ಪ, ಜನಾರ್ಧನನಾಯಿಡು ಮೊದಲಾದವರು ಭಾಷಣ ಮಾಡಿ ಕೈಗೊಳ್ಳಬೇಕಾದ ಕೆಲಸಗಳನ್ನು ತಿಳಿಸಿದರು.

ಈ ಸಮಿತಿಗೆ ಶ್ರೀಗಳಾದ ಎಂ. ಆರ್. ಸಿ. ಬಸಪ್ಪನವರು ೧೦೧ ರೂ; ಪಿ. ಪುಟ್ಟಯ್ಯನವರು ೧೦೦ ರೂ; ಡಿ. ಬಿ. ವಿಶ್ವಂಭರಯ್ಯನವರು ೧೦೧ ರೂ ಮತ್ತು ಶ್ರೀ ಸಿ. ಪೆರುಮಾಳ್‌ಚೆಟ್ಟಿಯವರು ತಿಂಗಳಿಗೆ ೧೦೦ ರೂ ಗಳ ಸಹಾಯವನ್ನು ದಾನ ಮಾಡಿರುವರು.

ಶ್ರೀ ಭಾರತೀ ಸಂಘ

ಶ್ರೀ ಭಾರತೀ ಸಂಘವು ಭಾರತದ ಮಹಾ ಪುರುಷರ ಜ್ಞಾಪಕಾರ್ಥವಾಗಿ ಏರ್ಪಡಿಸಿದ್ದ ಅಖಿಲ ಕರ್ಣಾಟಕದ ಪ್ರಬಂಧ ಸ್ಪರ್ಧೆಗೆ ಇಡೀ ಕರ್ಣಾಟಕದ ೬೦ ಕಾಲೇಜು ಸ್ಕೂಲು ಸಂಸ್ಥೆಗಳ ೧೧೨ ಜನ ವಿದ್ಯಾರ್ಥಿನಿಯರುಗಳು ಭಾಗ ವಹಿಸಿದ್ದರು.

ಈ ಬಹುಮಾನಗಳನ್ನು ವಿದ್ಯಾರ್ಥಿನಿಯರುಗಳಿಗೂ ಸಂಸ್ಥೆಗಳಿಗೂ ಬಹುಮಾನವನ್ನು ಮಹಾರಾಜರವರ ಕೈಯಿಂದ ಕೊಡಿಸುವರು.

ತಿರುವಣ್ಣಾಮಲೈ ಭಗವಾನ್ ಶ್ರೀ ರಮಣ ಮಹರ್ಷಿ ... ನಗರದ ಸ್ವಾಮಿ ... ವಿವೇಕಾನಂದ ... ಸ್ವಾಮಿ ... ಗಳನ್ನು ಅವರಿಂದ ...

... ಮಂತ್ರಿ ... ರಂಗಾಚಾರ್ಯ ...

ವಿವಾಹದ ಮಹೋತ್ಸವಗಳು

ಈ ದಿನ ಬೆಳಗ್ಗೆ ರಾಜಧಾನಿಯ ... ರಿ ವಿಟ್ಟಲ ... ಸಭಾಂಗಣದಲ್ಲಿ ಕಾಂಗ್ರೆಸ್ ಕಾರ್ಯಕರ್ತರಾದ ಶ್ರೀ ಎ. ವಿ. ಶ್ರೀನಿವಾಸಮೂರ್ತಿಯವರಿಗೆ ... ಕಟಿಬಾಯಮ್ಮನವರ ಮಗಳು ... ನಾಗರತ್ನಮ್ಮನವರನ್ನು ಕೊಟ್ಟು ವಿವಾಹ ಮಹೋತ್ಸವವು ಜರುಗಿತು.

ರಾಜಧಾನಿಯ ಧನ್ವಂತರಿ ವೈದ್ಯಶಾಲಾ ಮಾಲೀಕರಾದ ಶ್ರೀ ಕೆ. ಪಿ. ಪುಟ್ಟಣ್ಣಶೆಟ್ಟಿಯವರ ಜೇಷ್ಠ ಪುತ್ರ ಶ್ರೀ ವೆಂಕಟೇಶ ಪ್ರಸಾದರವರಿಗೆ ... ಲಕ್ಷ್ಮೀನರಸಿಂಹ ... ಆಚಾರ ಶ್ರೀ ... ಪುತ್ರಿ ಚಿ॥ ಸೌ॥ ಕನ್ಯಾರತ್ನವನ್ನು ಕೊಟ್ಟು ಇಂದು ಬೆಳಗ್ಗೆ ವಿವಾಹ ನಡೆಯಿತು.

ಧರ್ಮ ಸಭಾ ಸ್ಥಾಪನೆ

ಭಾರತ ... ಧರ್ಮ ... ಸಂಸ್ಥೆಯ ಆರಂಭೋತ್ಸವವು ಇದೇ ... ನೇ ತಾ॥ ಭಾನುವಾರ ಸಂಜೆ ೫ ಘಂಟೆಯ ಸಮಯ ... ರ ಸಂಘದ ಭವನದಲ್ಲಿ ನಡೆಯುವುದಾಗಿ ತಿಳಿದುಬಂದಿದೆ.

ಹೈಕೋರ್ಟ್ ಜಡ್ಜರಿಗೆ ಜೀವದಾನ

ಸ್ವಂ. ಸು] ಬೆಂಗಳೂರು ೧೦

ಮೈಸೂರು ಹೈಕೋರ್ಟಿನ ಜಡ್ಜರಾದ ಶ್ರೀ ವೆಂಕಟರಂಗಯ್ಯಂಗಾರ್ಯರಿಗೆ ಬರುವ ಮೇ ತಿಂಗಳಿಂದ ಒಂದು ವರ್ಷಕಾಲ ಜೀವದಾನ ಕೊಡಲಾಗಿದೆ.

— —

ಜಮಖಂಡಿ ಪ್ರಜಾ ಮಂಡಲದ ಅಧ್ಯಕ್ಷತೆ

ಈ ತಿಂಗಳು ಕೊನೆ ವಾರದಲ್ಲಿ ಸೇರಲಿರುವ ಜಮಖಂಡಿ ಸಂಸ್ಥಾನದ ಪ್ರಜಾ ಮಂಡಲದ ವಾರ್ಷಿಕ ಅಧಿವೇಶನದ ಅಧ್ಯಕ್ಷತೆಯನ್ನು ಮೈಸೂರು ಕಾಂಗ್ರೆಸ್ಸಿನ ನಾಯಕರಾದ ಶ್ರೀ ಹೆಚ್. ಸಿ. ದಾಸಪ್ಪನವರು ವಹಿಸುವರೆಂದು ಗೊತ್ತಾಗಿದೆ.

ವಿನೋಬ ತೆರಿಗೆ ಬಚ್ಚಿದರು

... ವರು ... ತೆರಿಗೆ ... ವನ್ನು ಇನ್ನು ... ಪ್ರಕಟಿಸಿ ... ದ್ದಾರೆ.

ಜಪಾನರ ಕಾಳಗ ನಿಂತಿಲ್ಲ

ಅರಕಾನ್ ರಂಗದಲ್ಲಿನ ನಿಕಟದಾಂಗ್ ಕಣಿವೆ ಕಡೆಗೆ ಕಾಳಗ ನಡೆಸುತ್ತಿರುವ ಕೋಲುಗಳು ... ಜಪಾನ್ ದಳಗಳು ಇನ್ನೂ ಶತ್ರು ಕಾಳಗವನ್ನು ಮುಂದುವರಿಸುತ್ತಿರುವ ರೆಂದು ಮಿತ್ರರ ... ಕಮ್ಯಾಂಡ್ ಕೇಂದ್ರ ಕಛೇರಿಯಿಂದ ಪ್ರಕಟವಾಗಿದೆ.

— —

ತಾಲ್ಲೂಕು ಸಮ್ಮೇಳನ

ಸ್ವಂ. ಸು] ಚಿಕ್ಕಮಗಳೂರು

ಇದೇ ೬ ನೇ ತಾ॥ ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟ್ ಎಸ್. ಎ. ರಾಮಣ್ಣನವರ ಅಧ್ಯಕ್ಷತೆಯಲ್ಲಿ ತಾಲ್ಲೂಕು ಸಮ್ಮೇಳನವು ಈ ಊರಿನ ಪುರಭವನದಲ್ಲಿ ಜರುಗಿತು. ತಾಲ್ಲೂಕಿನ ಅನೇಕ ಭಾಗಗಳಿಂದ ಪ್ರತಿನಿಧಿಗಳು ಬಂದಿದ್ದರು. ಪ್ರತಿ ಇಲಾಖಾ ಸ್ಥಳೀಯ ಮುಖ್ಯಾಧಿಕಾರಿಗಳೂ ಭಾಗವಹಿಸಿದ್ದರು. ಚರ್ಚೆ ಮಾಡಲ್ಪಟ್ಟ ವಿಚಾರಗಳಲ್ಲಿ ಈ ಮುಖ್ಯವಾದವುಗಳು —

೧ ... ಗಳ ವಿಷಯಗಳಲ್ಲಿ ಮತ್ತು ... ವಿಷಯಗಳಲ್ಲಿ ಹೆಚ್ಚು ಗಮನ ಕೊಡಬೇಕು.

೨ ರೈತರಿಗೆ ಹೆಚ್ಚಿಗೆ ಆದಾಯವನ್ನು ಉಂಟುಮಾಡಲು ದಿನಸಿ ಧಾರಣೆಗಳನ್ನು ಹೆಚ್ಚಿಸಬೇಕು.

* * *

... ಒಂದು ಈ ಊರಿನ ವಿದ್ಯಾಲಯದಲ್ಲಿ ... ಶ್ರೀ ... ಶ್ರೀನಿವಾಸ ... ಗಳನ್ನು ಮಾಡುತ್ತಿದ್ದಾರೆ. ಅನೇಕ ಮಹನೀಯರು ... ಇವರ ಉಪನ್ಯಾಸಗಳನ್ನು ... ಪಡೆಯುತ್ತಿದ್ದಾರೆ.

— —

ಸಿಲೋನ್ ಮೇಲೆ ಶತ್ರು ಧಾಳಿ

ಕೊಲಂಬೊ ಇದೇ ... ಸಿಲೋನ್ ... ಬಾಂಬು ... ಇಂದು ... ಅಧಿಕಾರ ... ಪ್ರಕಟನೆ ...

ಪುಂಡಿ ಜಲಾಶಯದ ತೊಡಕು

ಮದರಾಸ್ ಪೌರಸಭೆಯವರು ಮದರಾಸ್ ಸರ್ಕಾರ ಇವರಿಬ್ಬರ ಪೈಕಿ ಪುಂಡಿ ಜಲಾಶಯ ಯಾರಿಗೆ ಸೇರಿದುದೆ ಬ ದುದನ್ನು ತೀರ್ಮಾನಿಸಿಲ್ಲವಾ ಜಲಾಶಯದ ಪ್ರಾರಂಭೋತ್ಸವ ಸಮಾರಂಭವನ್ನು ಸರ್ಕಾರದವರು ಮುಂದೆ ಹಾಕಿರುವರೆಂದು ತಿಳಿದುಬಂದಿದೆ.

— —

ಅಮೆರಿಕನರ ಸಂಚಾಲಕತ್ವ

ಅಮೆರಿಕಾವು ಈ ಯುದ್ಧದಲ್ಲಿ ಹೆಚ್ಚು ಯುದ್ಧ ಸಾಮಗ್ರಿಗಳನ್ನು ಒದಗಿಸಿದ್ದರೂ ಕೂಡ, ಲಂಡನ್ನಿನಿಂದ ಯುದ್ಧ ಕಾರ್ಯಾಚರಣೆ ಹಂಚಿಕೆಯನ್ನು ಮಾಡುತ್ತಿರುವುದು ಜಪಾನಿನ ಕದನಕ್ಕೆ ಅವರು ಹೆಚ್ಚು ಪ್ರಾಮುಖ್ಯತೆಯನ್ನು ಕೊಟ್ಟಿಲ್ಲ. ಇದನ್ನು ತಪ್ಪಿಸಿ ಅಮೆರಿಕಾವೇ ಕಾರ್ಯಾಚರಣೆಯ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕೆಂದು ನ್ಯೂಯಾರ್ಕಿನ “ಡೇಲಿ ನ್ಯೂಸ್” ಪತ್ರಿಕೆಯು ಅಭಿಪ್ರಾಯಪಟ್ಟಿದೆ.

ಕ್ವೆಜಾಲೀನ್ ಆಕ್ರಮಣ

ಕ್ವೆಜಾಲೀನ್‌ನನ್ನು ಸಂಪೂರ್ಣವಾಗಿ ಮಿತ್ರರು ಆಕ್ರಮಿಸಿಕೊಂಡಿರುವುದಾಗಿ ವಾಷಿಂಗ್‌ಟನ್ನಿನಿಂದ ಹೊರಟ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ನಿಕೊಪಾಲ್ ಹಿಡಿದರು

ನಿಕೊಪಾಲ್ ನಗರವನ್ನು ರಷ್ಯನರು ಹಿಡಿದಿರುವುದಾಗಿ ಮಾಸ್ಕೋವಿನಿಂದ ಅಧಿಕಾರೀ ಪ್ರಕಟಣೆ ಹೊರಟಿದೆ.

(ಹಿಂದಿನ ಪುಟದಿಂದ)

ಹೀಗಿರುವಾಗ ಜಪಾನ ನೆಟ್ಟದಿಂದ ನಿರ್ಮಿತವಾದ ಈ ಕಟ್ಟಡ ಅಂದವಾಗಿ ಸರಿಹೊಂದ ವ ನಾಲ್ಕು ನಕ್ಷತ್ರಗಳನ್ನು ತಯಾರಿಸಿ ಕಟ್ಟಿಸಿ ವರುಗಳಲು ಯಾರೂ ವಕ್ಕಿಲ್ಲ ವಾಯಿತೆ? ಪೊನ್ನಿನಂಥ್ಯದಲ್ಲಿ ಮಣ್ಣಿನ ಕಟ್ಟಡವನ್ನೂ ವಿಚಾರಗೊಳ್ಳಬೇಕೆ? ಸರ್ಕಾರದವರೇ ನೇಮಿಸಿಕೊಂಡಿರುವ ನಕ್ಷಾ ಕಲಾ ನಿಪುಣರು ಇದನ್ನು ಕೈಬಿಟ್ಟರೆ? ಅವರು ಕೊಟ್ಟ ಸಲಹೆಗಳನ್ನು ಅನುಸರಿಸಿ ಕೆಲಸ ಮಾಡಿಸಲಾರದೇ ಹೀಗಾಯಿತೆ? ಅಥವಾ ಬೇರೆಯೇ ಕಾರಣವಿಲ್ಲವೆ?

ಅಟ್ಟಿನಲ್ಲಿ “ಮಾರ್ಕೆಟ್ ವಿಷಯ” ಸರ್ಕಾರಕ್ಕೆ ವಿಚಾರವಾಗುತ್ತದೆ. ಕೂಡಲೇ ಸಂಪರ್ಕ ನಡೆಸಿ ಇದನ್ನು ಹೀಗೆಯೇ ಕೆಡಿಸದೆ ಸರಿಯಾಗಿ ಅಧಿಕಾರಿಗಳು ಗಮನ ಕೊಟ್ಟರೆ ಸುಲಭವಾಗಿ ಸರಿಹೋಗುತ್ತದೆ.

ಎಷ್ಟೋ ವೆಚ್ಚಮಾಡಿರಾ ಚಿಂತೆಯಿಲ್ಲ ಈಗ ನಿಲ್ಲುತ್ತಿರುವ ಕಟ್ಟಡವು ಕೂಡಲೇ ನಿಲ್ಲಿಸಿ. ಇದರ ಜೊತೆಗೆ ಪಕ್ಕದಲ್ಲಿರುವ ಪೇಟೆ ಸಾಲು ಕಟ್ಟಡಗಳನ್ನು ಅಕ್ಕಪಕ್ಕ ಎಲ್ಲಾ ಸರಿ ಸಂಬಂಧ ... ಸರ್ಕಾರದವರೇ ತಯಾರಿಸಿ ... ಹೊಸ ಕಟ್ಟಡವನ್ನು ನಿರ್ಮಿಸಬೇಕು.

ಎಷ್ಟು ... ಕಾರ್ಯದರ್ಶಿಗಳ ... ವನ್ನು ... ಕಟ್ಟಡವನ್ನು ... ದಿಂದಲೂ ಈ ಕಟ್ಟಡವನ್ನು ... ತ್ತೇನೆ.

“ಹಿತಾಭಿಮಾನಿ”

ರಾಜಧಾನಿಯ ನೀರು ಸರಬರಾಜಿನ ವ್ಯವಸ್ಥೆ

ಜಲಾಧಿಕಾರಿಗಳ ಹೊಸ ಸಲಹೆ

(ಸ್ವಂ ವ.) ಮೈಸೂರು ೧೦

ಮೈಸೂರು ನಗರದಲ್ಲಿ ನಿವಾಸಿಗಳಿಗೆ ಸರಬರಾಜಾಗಿ ಕುಡಿಯುವ ನೀರು ಒದಗದೆ ಬಹಳ ತೊಂದರೆಯಾಗಿರುವುದನ್ನು ಇದನ್ನು ನಿವಾರಿಸಲು ಈ ದಿನ ನ ಮ್ಯುನಿಸಿಪಲ್ ಕೌನ್ಸಿಲ್ ಸಭೆಯ ವಿಶೇಷ ಸಮಾಲೋಚನೆ ನಡೆಯಿತು. ಮೈಸೂರು ವಾಟರ್ ವರ್ಕ್ಸ್ ಸೂಪರಿಂಟೆಂಡೆಂಟ್ ನೀರು ಸರಬರಾಜಿನ ವ್ಯವಸ್ಥೆಗೆ ಕೆಲವು ಹೊಸ ಯೋಜನೆಗಳನ್ನು ಪರಿಶೀಲಿಸಲ್ಪಟ್ಟಿತು.

ಈ ಹೊಸ ಯೋಜನೆಗೆ ಫೆರೂಲ್ ಪದ್ಧತಿ ಎಂದು ಹೆಸರು. ನಲ್ಲಿಗಳ ಮೀಟರ್ ಗಳ ಬದಲು ನಲ್ಲಿಗಳಲ್ಲಿ ಎರಡು ಪಿತ್ತಾಳೆ ಕಂಬಿಗಳನ್ನಿಟ್ಟು ನೀರಿನ ವೇಗವನ್ನು ತಡೆಗಟ್ಟುವ ಪದ್ಧತಿಗೆ 'ಫೆರೂಲ್' ಎಂದು ಹೆಸರು. ನಗರದಲ್ಲಿ ಕೇವಲ ಹಳ್ಳದ ಭಾಗದಲ್ಲಿರುವ ಮನೆಗಳ ನಲ್ಲಿಗಳಿಗೆ ಮಾತ್ರ ಇದನ್ನು ಹಾಕಲಾಗುವುದೆಂದು. ಮೀಟರ್ ಇಲ್ಲದೆ ಇರುವ ಮನೆಗಳ ನಾಲಿ ಕರು ದಿನಕ್ಕೆ ಎಷ್ಟು ಗ್ಯಾಲನ್ ನೀರನ್ನು ವ್ಯರ್ಥ ಮಾಡುತ್ತ ನೀರನ್ನು ವ್ಯರ್ಥ ಮಾಡುತ್ತಿದ್ದಾರೆ ಎಂದು ಸೂಪರಿಂಟೆಂಡೆಂಟ್ ಹೇಳಿದರು ಅದು ವಿವರ ಹೀಗಿದೆ:—

ಒಬ್ಬೊಬ್ಬರಿಗೆ ಬೇಕಾಗುವ ನೀರಿನ ಪ್ರಮಾಣ ದಿನಕ್ಕೆ ೪೦ ಲಕ್ಷ ಗ್ಯಾಲನ್. ಮೈಸೂರು ನಗರಕ್ಕೆ ಬರುತ್ತಿರುವುದು ೭೦ ಲಕ್ಷ ಗ್ಯಾಲನ್. ಮೈಸೂರು ನಗರದ ಜನ ಈಗಿನ ಜನಸಂಖ್ಯೆ ಎರಡು ಲಕ್ಷ. ಇವರುಗಳಿಗೆ ಹಂಚಿದರೆ ತಲೆಗೆ ೩೫ ಗ್ಯಾಲನ್ ಆಗುತ್ತದೆ. ಬೆಂಗಳೂರು ನಗರ ಮತ್ತು ದಂಡುಗಳಿಗೆ ಹೋಲಿಸಿದರೆ, ಇದು ಬಹಳ ಧಾರಾಳವಾಗಿರುತ್ತದೆ. ಸಾಮಾನ್ಯವಾಗಿ ಜನರಿಗೆ ಒದಗಿಸುವ ನೀರಿನ ಪ್ರಮಾಣ ೧೫ ರಿಂದ ೨೫ ಗ್ಯಾಲನ್ ಗಳು ಈಗಿನ ಸರಬರಾಜು ಇದಕ್ಕಿಂತ ಹೆಚ್ಚು ಎರಡು ಪಟ್ಟು ಹೆಚ್ಚಾಗಿದೆ.

ರಾಜಧಾನಿಯಲ್ಲಿ ೭೦೦ ಸಾರ್ವಜನಿಕ ನಲ್ಲಿಗಳಿವೆ. ಮನೆಗಳಲ್ಲಿರುವ ನಲ್ಲಿಗಳು ೭೫೮೬ ಇವೆ. ಇವುಗಳ ಪೈಕಿ ಸಂಸಾರ ಗೃಹಗಳಲ್ಲಿರುವ ಎಲ್ಲ ನಲ್ಲಿಗಳಿಗೂ ಇತರ ಏಳು ಕಟ್ಟಡಗಳಿಗೂ ಮಾತ್ರ ಮೀಟರನ್ನು ಹಾಕಲಾಗಿದೆ. ಮೀಟರು ಹಾಕದೆ ಇರುವ ನಲ್ಲಿಗಳು ೬೨೫೭ ಇವೆ. ಪರೀಕ್ಷೆ ಮಾಡಿ ನೋಡಿದ್ದರಲ್ಲಿ ಈ ಮೀಟರ್ ಇಲ್ಲದ ಮನೆಗಳಲ್ಲಿ ಮಿತಿಮೀರಿದ ನೀರು ವ್ಯರ್ಥವಾಗುತ್ತಿರುವುದಾಗಿ ಗೊತ್ತಾಗಿದೆ. ಹಳ್ಳ ಪ್ರದೇಶಗಳಲ್ಲಿರುವ ನಲ್ಲಿಗಳಲ್ಲಿ ಹೆಚ್ಚು ನೀರು ವ್ಯರ್ಥವಾಗುತ್ತಿರುವುದರಿಂದ ಎತ್ತರದಲ್ಲಿರುವವರಿಗೆ ಸಾಕಷ್ಟು ನೀರು ದೊರೆಯುತ್ತಿಲ್ಲ. ಬೆಂಗಳೂರಿನಲ್ಲಿರುವಂತೆ ಇಲ್ಲಿಯೂ ಮೀಟರುಗಳನ್ನು ಹಾಕುವುದೇ ಇದಕ್ಕೆ ತಕ್ಕ ಪರಿಹಾರ. ಬೆಂಗಳೂರು ನಗರದಲ್ಲಿ ತಲೆ ಒಂದಕ್ಕೆ ದಿನಕ್ಕೆ ಸರಾಸರಿ ೧೫ ಗ್ಯಾಲನ್ ನೀರು ಮಾತ್ರ ಕೊಡಲಾಗುತ್ತಿದೆ. ದಂಡಿನಲ್ಲಿ ೧೨ ಗ್ಯಾಲನ್ ಮಾತ್ರ.

ಆದರೆ ಈಗ ಮೀಟರುಗಳು ದೊರೆಯುವುದಿಲ್ಲ.

ಆದ್ದರಿಂದ ಸದ್ಯಕ್ಕೆ ನೀರಿನ ಹತೋಟಿಯನ್ನು ಇಟ್ಟುಕೊಳ್ಳಲು ಫೆರೂಲ್ ಪದ್ಧತಿಯನ್ನು ಜಾರಿಗೆ ತರಬೇಕಾಗಿದೆ. ಇದರಿಂದ ನಲ್ಲಿಗಳಲ್ಲಿ ನೀರಿನ ವೇಗವು ಕಡಮೆಯಾಗಲ್ಪಡುತ್ತದೆ. ಇದನ್ನು ಜಾರಿಗೆ ತರಲು ಅವಶ್ಯವಾದವನ್ನು ಮಾಡಬೇಕಾಗುವುದು. ಮೀಟರುಗಳು ದೊರೆಯುವಲ್ಲಿ ಹಾಕುವ ಕ್ರಮವೂ ಜಾರಿ ಬಿಟ್ಟು ಪದ್ಧತಿ ಮೀಟರುಗಳು ಸಿಗುವಂತೆ ಇದಕ್ಕೂ ಮಾಡಬೇಕಾಗುವುದು.

ಈಗ ನಗರದಲ್ಲಿ ನೆಲ್ಲ ಹಾಕುತ್ತಿರುವ ನೀರಿನ ಪಟ್ಟಿಕೆ ಈ ರೀತಿ ಇದೆ:—

೧. ಮೀಟರು ಇರತಕ್ಕ ಖಾಸಗಿ ಮನೆಗಳು ೬೪೫೦

೨. ಸರ್ಕಾರಿ ಕಟ್ಟಡಗಳು ಕೋಟೆಗಳು ಅರಮನೆ ಮತ್ತು ಹೊಸ ಅರಮನೆ ಕಟ್ಟಡಗಳು ೬೪೫ ೯

೩. ಗೃಹಕೃತ್ಯಕ್ಕಲ್ಲದ ಸ್ಥಳಗಳು ೬೪೫ ೫

೪. ಮೀಟರು ಇಲ್ಲದ ಮನೆಗಳು ಮತ್ತು ಸಾರ್ವಜನಿಕ ನಲ್ಲಿಗಳು ೬೪೫ ೮

೭೦೦ ಸಾರ್ವಜನಿಕ ನಲ್ಲಿಗಳು ಮತ್ತು ೬೨೫೭ ಮೀಟರಿಲ್ಲದ ಮನೆಗಳಿಗೆ ೬೪೫ ೭೮—ಎಂದರೆ ೫,೭೫,೦೦೦ ಗ್ಯಾಲನ್ ಹೆಚ್ಚುವಾಗುತ್ತಿದೆ. ಸಾರ್ವಜನಿಕ ನಲ್ಲಿಗಳು ದಿನಕ್ಕೆ ಸಾವಿರ ಗ್ಯಾಲನ್ ವೆಚ್ಚವಾಗುತ್ತದೆಂದು ಇಟ್ಟುಕೊಂಡರೆ ಅವುಗಳಿಂದ ಒಟ್ಟು ೭,೦೦,೦೦೦ ಗ್ಯಾಲನ್ ಆಗುತ್ತದೆ. ಸರಾಸರಿ ಕಂದಾಯದ ಆದಾಯದ ಮೇರೆ ಫ್ಲಷಿಂಗ್ ಸಿಸ್ಟಂಗೂ ಸೇರಿ ಪ್ರತಿ ಮನೆಗೂ ತಿಂಗಳಿಗೆ ೬೫೦ ಗ್ಯಾಲನ್ ಆಗುತ್ತಿದೆ ಅಂದರೆ ದಿನಕ್ಕೆ ಸುಮಾರು ೧೦೦ ಗ್ಯಾಲನ್ ಆಯಿತು. ಆದರೂ ಈ ಊರಿನಲ್ಲಿ ೩೫

ಪ್ರತಿದಿನ ೩ ಆಟಗಳು

ಅಪೇರಾ ಟಾಕೀಸ್

10 2-44 ರಿಂದ

ನವೀನ ಸನ್ನಿವೇಶ, ಕೌತುಕ,

ಆಸ್ತಿ, ಪ್ರೇಮ, ರೊಮಾನ್ಸ್, ಸಾಹಸ

ನಿಮ್ಮನ್ನು ಮನರಂಜಿಸುವ

ಮೀರಾಬಾಯ್

ಹೊಸದಾಗಿ ಬಂದಿವೆ!

Truthful READY MADE CLOTHES MADURA

ಹೊಲೆದು ಸಿದ್ಧಪಡಿಸಿರುವ ತರತರವಾದ ಮಕ್ಕಳ ನವೀನ ಮಾದರಿ ಉಡುಪುಗಳು, ಫ್ರಾಕುಗಳು, ಜಂಪರುಗಳು.

ಹೊರ ಸಾಮಾನುಗಳು ಶರಟುಗಳು ಮತ್ತು ಕಡವಸ್ತ್ರಗಳು ಇಲ್ಲಿ ದೊರೆಯುತ್ತವೆ.

ಸ್ವಸ್ತಿಕ್ ಸ್ಟೋರ್ಸ್

ವಾಣಿಪ್ರಕಾಶ್ ಭವನ,

ಸಯ್ಯಾಜಿರಾವ್ ರಸ್ತೆ, ಮೈಸೂರು.

ಪತ್ರ ವ್ಯವಹಾರ

ವಾಣೀವಿಲಾಸ ಸರ್ಕಲ್ ವಿಕಾರವಾಗುತ್ತಿದೆ

ಸ್ವಾಮಿ,

ರಾಜಧಾನಿಯ ಕೃಷ್ಣರಾಜ ಮೊಹಲ್ಲಾದಲ್ಲಿರುವ "ವಾಣೀವಿಲಾಸ" ಸರ್ಕಲ್ಲಿನಿಂದ ಅನೇಕ ಮನೆಗಳು ಆಕ್ರಮಿಸಲ್ಪಟ್ಟಿವೆ. ಬಹು ಹಣ ವೆಚ್ಚವಾಗಿದೆ ಮುನಿಸಿಪಾಲಿಟಿ ಟ್ರಸ್ಟ್ ಬೋರ್ಡ್ ಮತ್ತು ಸರ್ಕಾರದವರು ಮಾಡಿದ್ದಾರೆ. ನಮ್ಮ ಕಾರ್ಯಕರ್ತರಾಗಿರುವ ಆಗಿನ ಮಹಾಸ್ವಾಮಿಯವರೂ ಅಂದಿನ ದಿವಾನರಾಗಿದ್ದ ಸರ್ ಮಿರ್ಜಾರವರೂ ಶ್ರಮವಹಿಸಿ ಬಂದು ಬಂದು ಸಲಹೆ ಕೊಟ್ಟಿದ್ದಾರೆ. ಅವರಿದ್ದಾಗಲೇ ಅದು ರೂಪುಗೊಂಡಿತು.

ಹೇಳಿಗೆ ತಕ್ಕಂತೆ ವಾಣೀ ವಿಲಾಸ ಮಾರ್ಕೆಟ್ಟು ಮತ್ತು ಶ್ರೀ ಕೃಷ್ಣರಾಜೇಂದ್ರ ಸೊಸೈಟಿ ಕಟ್ಟಡಗಳೂ ವ್ಯತ್ಯಾಸವಾಗಿ ಎದ್ದಿವೆ. ಇಲ್ಲಿ ಸೇರುವ ಐದು ರಸ್ತೆಗಳಲ್ಲೂ ಮೆಟ್ಟಿನ ಕಟ್ಟಡಗಳಿದ್ದು ಈ ಸರ್ಕಲ್ಲು ಪ್ರೇಕ್ಷಣೀಯವಾಗುತ್ತ ಬಂದಿದೆ.

ಈಗ ಉಳಿದಿರುವ ಭಾಗದಲ್ಲಿ ಏಳುತ್ತಿರುವ ಕಟ್ಟಡವು ಚಹಾ ಹೋಟೆಲಾಗಿ ಮೂಲೆಯಾಗಿ ರೂಪುಗೊಳ್ಳುತ್ತಿದೆ. ಕಲಾದೃಷ್ಟಿಯಿಂದ ಈ ಸರ್ಕಲ್ಲಿನ ಅಂದವೇ ಕೆಟ್ಟು ಹೋಗುತ್ತಿದೆ. ಇದರ ನಿರ್ಮಾಣಕ್ಕಾಗಿ ವಹಿಸಿರುವ ಶ್ರಮವೆಲ್ಲವೂ ನಿಷ್ಫಲವಾಗುವಂತಾಗಿದೆ. ಅಷ್ಟೇ ಅಲ್ಲ; ಮಾದರೀ ಪಕ್ಷಿಗೆ ಮಸಿ ಬಳಿದಂತಾಗಿದೆ.

ಕಳೆದ ವರ್ಷ ಸಂಸ್ಥಾನದ ಎಲ್ಲಾ ಜಿಲ್ಲೆಗಳಲ್ಲೂ ಮದ್ಯಪಾನವು ಹೆಚ್ಚಿತೆಂದು ಅಬ್ಕಾರಿ ವರದಿಯು ತಿಳಿಸುತ್ತದೆ. ಹೊಸ ಕೈಗಾರಿಕೆಗಳು ಹೆಚ್ಚಿ ಕೂಲಿಗಳಿಂದ ಹೆಚ್ಚು ಜನ ಶ್ರಮಜೀವಿಗಳು ಬಂದುದೂ ಜನರ ಸಂಪಾದನಾ ಶಕ್ತಿಯು ಹೆಚ್ಚಿದುದೂ ಇದಕ್ಕೆ ಕಾರಣವೆಂದು ಹೇಳಲಾಗಿದೆ.

ಸಿನಿಮಾಪನರಿಗೆ ಎಚ್ಚರಿಕೆ

ಚಿತ್ರಗಳನ್ನು ವಿಪರೀತವಾಗಿ ಜಾಹಿರಾತುಗಳು, ಪೋಸ್ಟರುಗಳು ಮೊದಲಾದ ಕಾಗದಗಳನ್ನು ಉಪಯೋಗಿಸುತ್ತಿರುವುದು ... ಕಾಗದಕ್ಕೆ ಪದೇಪದೇ ಬರುತ್ತಿರುವುದರಿಂದ ಮುಂದೆ ಇಂಥ ಪ್ರಸಂಗಗಳು ... ಭಾರತ ರಕ್ಷಣಾ ಶಾಸನದ ಪ್ರಕಾರ ಶಿಕ್ಷಿಸಲಾಗುವುದು ... ಸಿನಿಮಾ ... ಎಚ್ಚರಿಕೆ ಒಂದು ... ಹೊರಡಿಸಿದ್ದಾರೆ.

ಪತ್ನೀ ಸ್ವಾಧೀನಕ್ಕೆ ಮೊಕದ್ದಮೆ

ಬೆಂಗಳೂರಿನ ಒಬ್ಬ ಗೃಹಸ್ಥರು ತುಮಕೂರಿನಲ್ಲಿರುವ ತಮ್ಮ ಮಾವನ ಮೇಲೆ ಅಲ್ಲಿನ ಮುನ್ಸೀಫ್ ಕೋರ್ಟಿನಲ್ಲಿ ಪಿರ್ಯಾದು ಹೂಡಿ ಒಂದು ವರ್ಷದಿಂದ ಎಷ್ಟು ಹೇಳಿದರೂ ಮಾವನವರು ತಮ್ಮ ಹೆಂಡತಿಯನ್ನು ತಮ್ಮಲ್ಲಿಗೆ ಕಳುಹಿಸಿಕೊಟ್ಟಿಲ್ಲವೆಂದು ಪುಕಾರು ಮಾಡಿದ್ದರು. ಕೋರ್ಟಿನಲ್ಲಿ ಅವರ ಹೆಂಡತಿಯು ಅವರೊಡನೆ ಹೋಗುವುದಾಗಿ ಹೇಳಲು ಕಳುಹಿಸುವಂತೆ ನ್ಯಾಯಾಧೀಶರು ತೀರ್ಮಾನಿಸಿದರು.

ಲಾರಿ-ಜಟಕಾ ಪ್ರತಿಬಂಧಕ

ಚಿಕ್ಕಪೇಟೆ, ದೊಡ್ಡಪೇಟೆ, ಅರಳೇಪೇಟೆ ಬಳೇಪೇಟೆ, ಅಲಸೂರು-ಪೇಟೆ ಮತ್ತು ಅವೆನ್ಯೂ ರಸ್ತೆಗಳಲ್ಲಿ ಈ ತಿಂಗಳ ೧೭ ನೇ ತಾ॥ ನಿಂದ ೬ ತಿಂಗಳಕಾಲ ಮೋಟಾರು ಲಾರಿಗಳು ಮತ್ತು ಬಸ್ಸುಗಳು (ಅರಳೇಪೇಟೆಯಲ್ಲಿ ಬಸ್ಸುಗಳು ಮಾತ್ರ ಹೋಗಬಹುದು) ಓಡಾಡಕೂಡದೆಂದು ಬೆಂಗಳೂರು ಜಿಲ್ಲಾ ಮ್ಯಾಜಿಸ್ಟ್ರೇಟರು ಪ್ರತಿಬಂಧಿಸಿರುತ್ತಾರೆ.

ಸಂತಾಪ

ಸೇಲಮ್ಮಿನ ಶ್ರೀ ವಿಜಯ ರಾಘವಾಚಾರ್ಯರ ಮರಣಕ್ಕಾಗಿ ಬೆಂಗಳೂರು ಪೌರಸಭೆಯು ಸಂತಾಪ ಸೂಚಕ ನಿರ್ಣಯವನ್ನು ಮಾಡಿದ್ದಲ್ಲದೆ ಹೆಚ್ಚು ನಿಮಿಷಕಾಲ ಸಭಾ ಕಾರ್ಯಗಳನ್ನು ಮುಂದಕ್ಕೆ ಹಾಕಿತು.

ಬೊಂಬಾಯಿಯ ಅನರ್ಥ

ಬೊಂಬಾಯಿಯಲ್ಲಿ ನಡೆದ ಬೆಂಕಿ ಅನಾಹುತದಲ್ಲಿ ಬೆಂಕಿ ಆರಿಸುವ ದಳದ ನೈಕಿ ೧೫ ಜನ ಅಧಿಕಾರಿಗಳೂ ಯೋಧರೂ ಮಡಿದಿದ್ದಾರೆ. ೩೩ ಜನ ಪತ್ತೆಯಿಲ್ಲ. ಪೌರಸಭೆಗೆ ಸೇರಿದ ೩೩ ಫೈರ್ ಇಂಜನ್ನುಗಳು ಪತ್ತೆ ಇಲ್ಲ. ೧೫ ಕ್ಕೆ ನಷ್ಟವಾಗಿದೆ.

ಭೂಪಾಲಿನಲ್ಲಿ ವಿದ್ಯುಚ್ಛಕ್ತಿ

ನಾಲ್ಕು ಕೋಟಿ ರೂ. ವೆಚ್ಚದ ಭಾರಿ ವಿದ್ಯುದ್ಯೋಜನೆಯನ್ನು ಭೂಪಾಲ್ ಸಂಸ್ಥಾನದ ಸರ್ಕಾರದವರು ಪರಿಶೀಲಿಸುತ್ತಿರುವರು. ಇದರಿಂದ ವಿದ್ಯುಚ್ಛಕ್ತಿ ಅಗ್ಗವಾಗಿ ದೊರೆಯುವುದು. ಒಂದು ಲಕ್ಷ ಎಕರೆ ಜಮೀನು ಸಾಗುವಳಿಯಾಗುವುದು.

ಭೂಪಾಲಿಗೆ ದಶ ವಾರ್ಷಿಕ ಯೋಜನೆ

ಯುದ್ಧಾನಂತರ ೧೭ ಕೋಟಿ ರೂ. ಗಳ ಒಂದು ದಶವಾರ್ಷಿಕ ಯೋಜನೆಯು ಭೂಪಾಲ್ ಸಂಸ್ಥಾನದಲ್ಲಿ ಸಿದ್ಧವಾಗುತ್ತಿದೆ. ಜನರ ಸೌಖ್ಯ, ಆದಾಯ, ಆರೋಗ್ಯ, ವಿದ್ಯಾಭ್ಯಾಸ ಇವೇ ಮುಂತಾದ ಬಗ್ಗೆ ಈಗಿನಿಂದಲೇ ಕಾರ್ಯಕ್ರಮಗಳು ಆರಂಭವಾಗಿವೆ.

SAVE EMPTY

Beer Bottles

THE CHAMUNDI BREWERY,

Post Box 41, MYSORE

ಯೂರೋಪ್ ರಣರಂಗ

೩೦೦೦ ಮಿತ್ರ ವಿಮಾನಗಳು ಯೂರೋಪಿನ ಮೇಲೆ ನಿರಂತರವಾಗಿ ಆಕ್ರಮಣ ನಡೆಸುತ್ತಿವೆ. ಇದರಿಂದ ಜರ್ಮನಿಯ ಅನೇಕ ವಿಮಾನ ನಿಲ್ದಾಣಗಳೂ ರೈಲ್ವೆ ಸ್ಟೇಷನುಗಳೂ ನಿರ್ನಾಮವಾದುವು.

ಜರ್ಮನಿಯ ಕ್ಯಾಸಲ್ ನಗರದ ಮೇಲೆ ೭೫೦ ಅಮೆರಿಕದ ವಿಮಾನಗಳು ಧಾಳಿ ಮಾಡಿದುವು. ಇದರಿಂದ ಅನೇಕ ವಿಮಾನ ಕಾರ್ಖಾನೆಗಳೂ, ಜಲಾಶಯಗಳೂ ನಷ್ಟಗೊಂಡಿರುವುವು.

ಶತ್ರುಗಳ ೭೧ ಫೈಟರುಗಳೂ, ೨೧ ವಿಮಾನಗಳೂ ನಾಶವಾದುವು.

ಭೀತಿಯಿಲ್ಲ

ಯುದ್ಧ ಕ್ಷೇತ್ರದಿಂದ ಕೇವಲ ೧೦೦ ಮೈಲಿಗಳ ಒಳಗೆ ನಾವು ಇದ್ದೇವೆ. ಆದರೂ ಇಲ್ಲಿನ ಜನರಲ್ಲಿ ಭಯವುಂಟಾಗುವ ಸ್ಥಿತಿಯಿಲ್ಲ-ಎಂಬುದಾಗಿ ಸಿಲ್‌ಚಾರಿನ ಡೆ॥ ಕಮೀಷನರಾದ ಎಸ್. ಎನ್. ಮೈತ್ರರು ತಿಳಿಸಿದ್ದಾರೆ.

ಸಾವಿರಕ್ಕೊಂದು ಮಾತ್ರ ನಾಶ

ಮಿತ್ರ ಹಡಗುಗಳು ರಕ್ಷಣೆ ಪಡೆದು ಸಮುದ್ರದಲ್ಲಿ ಹೋಗುವಾಗ್ಗೆ ಕೇವಲ ಸಾವಿರಕ್ಕೆ ಒಂದರಂತೆ ಮಾತ್ರ ಮುಳುಗುತ್ತಿವೆಯೆಂದು ಬ್ರಿ॥ ನೌಕಾ ಮುಖ್ಯಾಧಿಕಾರಿ ಲಾರ್ಡ್ ಚಾಟ್‌ಫೀಲ್ಡರು ಹೇಳಿದ್ದಾರೆ.

ಜರ್ಮನಿಗೆ ತುರ್ಕಿಯ ಕ್ರೋಂ ಇಲ್ಲ

ತುರ್ಕಿಯು ಜರ್ಮನಿ ಮತ್ತು ಇತರ ಆಕ್ಸಿಸ್ ರಾಷ್ಟ್ರಗಳಿಗೆ ಕ್ರೋಂ ಅನ್ನು ಕಳಿಸುವುದನ್ನು ಕೂಡಲೆ ನಿಲ್ಲಿಸಿಬಿಡುವುದೆಂದು ಗೊತ್ತಾಗಿದೆ.

ಬ್ರಿಟಿಷ್ ನಿಲ್ದಾಣಗಳು ಅಮೆರಿಕಾಕ್ಕೆ ?

ಹಳೆಯದಾಗಿದ್ದ ೫೦ ಅಮೆರಿಕಾ ಡಿಸ್ಟ್ರಾಯರ್ ಹಡಗುಗಳನ್ನು ಕೊಟ್ಟು ೯೯ ವರ್ಷದ ಭೋಗ್ಯದ ಕರಾರಿನ ಮೇಲೆ ಅಮೆರಿಕದವರು ಇಂಗ್ಲೆಂಡಿನಿಂದ ಪಡೆದಿರುವ ಕೆಲವು ನಿಲ್ದಾಣ ಪ್ರದೇಶಗಳನ್ನು ಶಾಶ್ವತವಾಗಿ ಅಮೆರಿಕಾಕ್ಕೇ ಉಳಿಸಿಕೊಳ್ಳುವಂತೆ ಪ್ರಯತ್ನ ನಡೆಯಬೇಕೆಂದು ಅಮೆರಿಕದ ನೌಕಾ ಉಪಸಮಿತಿಯವರು ಶಿಫಾರಸ್ ಮಾಡಿದ್ದಾರೆ. ಈ ಪ್ರದೇಶಗಳಲ್ಲಿ ಅಮೆರಿಕದವರು ೧೫ ಕೋಟಿ ಡಾಲರ್ ವೆಚ್ಚ ಮಾಡಿದ್ದಾರೆ. ೯೯ ವರ್ಷಗಳನಂತರವೂ ಅವನ್ನು ಬಿಟ್ಟು ಕೊಡದಿರಲು ಯೋಚಿಸುತ್ತಿದ್ದಾರೆ.

ರಾಜಾಜಿಯವರಿಗೆ ಆತಿ ಬಿಟ್ಟಿಲ್ಲ

ಜಿನ್ನಾರೊಡನೆ ಸಂಧಾನವು ನಿಷ್ಪ್ರಯೋಜಕವೆಂದು ರಾಜಾಜಿಯವರು ಅಪ್ಪಟವಾಗಿ ತಿಳಿಸಿದ್ದಾರೆಂದು ವದಂತಿಯಾಗಿತ್ತಷ್ಟೆ. ಇದಕ್ಕೆ ಆಧಾರವಿಲ್ಲವೆಂದು ಹೇಳಲಾಗಿದೆ. ಜನಾಬರು ಇನ್ನೂ ಹಿಂದೂಸ್ಥಾನದ ಮೇಲೆ ದಂಡಯಾತ್ರೆ ಮಾಡಿಲ್ಲವೆಂದೂ ಕೇವಲ ಆತ್ಮ ರಕ್ಷಣೆಗಾಗಿ ಇಂಫಾಲಿನಲ್ಲಿ ಯುದ್ಧ ಹೂಡಿರ ಪರಿಂದೂ ಆಚಾರ್ಯರು ಹೇಳುವರು.

ಬೀಳ್ಕೊಡಲು ಹೋಗಿ ಮರಣ

ಮದರಾಸಿನ ಜಾಲಾ ಸುಬ್ಬರಾವ್ ಎಂಬುವರು ತಮ್ಮ ಅಳಿಯನನ್ನು ಬೆಜವಾಡಕ್ಕೆ ಕಳುಹಿಸಿಕೊಡಲು ಸ್ಟೇಷನ್ನಿಗೆ ಬಂದು ರೈಲು ಹೊರಟ ಒಂದು ನಿಮಿಷದೊಳಗೆ ನಿಲ್ದಾಣದಲ್ಲೇ ಹೃದಯಸ್ತಂಭನದಿಂದ ಮೃತರಾದರೆಂದು ತಿಳಿದುಬಂದಿದೆ.

ರಷ್ಯಾ ರಣರಂಗ

ಉತ್ತರ ಅಮ್ಮದಲ್ಲಿ ಪುನಃ ಯುದ್ಧವು ಆರಂಭಿಸಿದೆ. ಬಾಲ್ಟಿಕ್ ಪ್ರದೇಶಗಳಲ್ಲಿ ರಷ್ಯದ ವಿಮಾನಗಳು ಧಾಳಿ ಮಾಡುತ್ತಿವೆ. ಕ್ರಿಮಿಯಾದಲ್ಲಿ ರಷ್ಯದ ಸೈನ್ಯಗಳು ಮುಂದಕ್ಕೆ ನುಗ್ಗುತ್ತಿವೆ. ಸೆಬಾಸ್ಟೊಪೋಲ್ ಎಂಬಲ್ಲಿ ರಷ್ಯ ಸೈನ್ಯಗಳು ನಗರವನ್ನು ಎರಡೂ ಕಡೆಯಿಂದ ಮುತ್ತಿಗೆಹಾಕಿವೆ.

ಇಂಗ್ಲೆಂಡಿನಲ್ಲಿ ಅಮೆರಿಕದ ಹಣ

೩,೩೫,೨೫,೦೦,೦೦೦ ರೂ. ಗಳಷ್ಟು ಹಣವನ್ನು ಅಮೆರಿಕನ್ನರು ಇಂಗ್ಲೆಂಡಿನ ವಿವಿಧ ಸಂಸ್ಥೆಗಳಲ್ಲಿ ಹಾಕಿರುವುದಾಗಿ ಗೊತ್ತಾಗಿದೆ. ಬೇರೆ ದೇಶಗಳಲ್ಲಿ ಇಷ್ಟು ಭಾರಿ ಹಣವನ್ನು ಹಾಕಿರುವ ದೇಶಗಳಲ್ಲಿ ಇಂಗ್ಲೆಂಡೇ ಎರಡನೆಯದು.

ಒಂಟಿ ಕಾಲಿನವನಿಗೆ ಹೈಜಂಪ್ ಪ್ರಶಸ್ತಿ

ದಕ್ಷಿಣ ಆಫ್ರಿಕದ ಪ್ರಿಟೋರಿಯಾ ಎಂಬಲ್ಲಿ ನಡೆದ ಅಂತರ್‌ಪ್ರಾಂತೀಯ ಕ್ರೀಡಾಸ್ಪರ್ಧೆಯಲ್ಲಿ ಡಿ. ವಿಲಿಯರ್ಸ್ ಎಂಬ ಒಂದು ಕಾಲಿನ ಮನುಷ್ಯನು ತನ್ನ ಊರುಗೋಲನ್ನು ಎಸೆದು ಬಿಟ್ಟು ೫ ಅಡಿ ೭ ಅಂಗುಲ ಎತ್ತರಕ್ಕೆ ನೆಗೆದು ಹೈಜಂಪ್ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನವನ್ನು ಪಡೆದು ಎಲ್ಲರ ಪ್ರಶಂಸೆಗೂ ಪಾತ್ರನಾಗಿದ್ದಾನೆ.

Edited, printed and published by A. R. Nagarajan, at the Sadhvi Press, D. Subbiah Road, Mysore.

ಸ್ತ್ರೀಯರ ಸೌಕರ್ಯಕ್ಕೆ

ತಾ॥ ೧-೧-೧೯೪೪ರಿಂದಲೇ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿರುತ್ತೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿ ಪುಡಿ

ಉಪಯೋಗಿಸಿ.

ಡಿ. ಪುಟ್ಟೀರಮ್ಮ, ಏನಸಿಮುಂಡಿ, ದೇವರಾಜ ಮಾರ್ಕೆಟ್, ಮೈಸೂರು

ವಿ. ಸೂ.—ಇಲ್ಲಿ ದೇವರಾಜ ಮೊಹಲ್ಲಾ 4 ನೇ ನಂಬರ್ ದೇವರ ಡಿಪೋ ಮತ್ತು ನಮ್ಮ ಸಂತೇಪೇಟೆ ಬ್ರಾಂಚ್ ಆಫೀಸಿನಲ್ಲಿ ಡಿಪೋ 3 ನೇ ನಂಬರ್ ಡಿಪೋ ಇದೇ ಮಾರ್ಚಿ ಜನವರಿ ತಿಂಗಳಲ್ಲಿ ತೆರೆದಿರುತ್ತೆ.

ಮೈಸೂರಿಗೂ ರೇಷನ್ ಹೆಚ್ಚಿತು

ಮೈಸೂರು ೨೨

ಬೆಂಗಳೂರು ನಗರದಂತೆ ಮೈಸೂರು ನಗರದಲ್ಲೂ ಎ ತರಗತಿ ರೇಷನ್‌ಕಾರ್ಡ್ ಪಡೆದಿರುವವರಿಗೆ ತಲಾ ೧ ಪಾವು ಅಕ್ಕಿಯ ಜೊತೆಗೆ ಸೇ|| ೨೦ ಭಾಗ ಗೋಧಿಯನ್ನೂ, ಬಿ ತರಗತಿಯ ರೇಷನ್‌ಕಾರ್ಡ್ ಪಡೆದಿರುವವರಿಗೆ ತಲಾ ೧|| ಪಾವಿನಿಂದ ಅರ್ಧ ಸೇರಿಗೂ ರೇಷನ್ ಹೆಚ್ಚಿಸಲಾಗಿದೆಯೆಂದು ತಿಳಿಯಬರುತ್ತದೆ.

ಕಾಂಗ್ರೆಸ್ ಅಧ್ಯಕ್ಷರು

ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಟಿ. ಸುಬ್ರಹ್ಮಣ್ಯಂರವರೂ ಪಾರ್ಲಿಮೆಂಟರಿ ಸಮಿತಿ ಅಧ್ಯಕ್ಷರಾದ ಶ್ರೀ ಹೆಚ್. ಸಿದ್ದಯ್ಯನವರೂ ನಾಳೆ ಮಧ್ಯಾಹ್ನ ರಾಜಧಾನಿಗೆ ಆಗಮಿಸಿ ಜಿಲ್ಲಾಬೋರ್ಡ್ ಚುನಾವಣೆಗಳ ಸಂಬಂಧವಾಗಿ ಪ್ರವಾಸವನ್ನು ಕೈಗೊಳ್ಳಲಿರುವರು.

ಎಗ್ಜಿಬಿಷನ್ ಮ್ಯಾಚ್

ನಿನ್ನೆ ನಡೆದ ಎಗ್ಜಿಬಿಷನ್ ಮ್ಯಾಚ್‌ನಲ್ಲಿ ಮೈಸೂರು ರೈಲ್ವೆಯವರು ಮದ್ರಾಸ್ ಆಲ್ ಸ್ಟಾರ್ಸ್ ತಂಡದವರನ್ನು ೨-೧ ಗೋಲುಗಳಿಂದ ಗೆದ್ದರು.

ತುರ್ಕಿ-ಬ್ರಿಟಿಷ್ ಮಿತ್ರತ್ವ

ಜರ್ಮನಿ ಮತ್ತು ಇತರ ಆಕ್ಸಿಸ್ ರಾಷ್ಟ್ರಗಳಿಗೆ ನೆನ್ನೆ ರಾತ್ರಿ ೭ ಗಂಟೆಯಿಂದ ಕ್ರೋಮಿಯಂ ಕಳುಹಿಸುವುದನ್ನು ನಿಲ್ಲಿಸಲಾಗಿದೆ. ಬ್ರಿಟನ್ನಿನೊಡನೆ ಸ್ನೇಹವೇ ತುರ್ಕಿಯ ವಿದೇಶಾಂಗ ನೀತಿಯ ತಳಹದಿಯೆಂದು ತುರ್ಕಿ ಮಂತ್ರಿ ಮೆನಮೆಂಜಿಯೋಗ್ಲುರವರು ಹೇಳಿರುತ್ತಾರೆ. ೧೯೪೦ ರಲ್ಲಿ ಕ್ರೋಮ್ ಸರಬರಾಜಿನ ಬಗ್ಗೆ ತುರ್ಕಿ-ಬ್ರಿಟನ್ ಒಪ್ಪಂದ ಮುಕ್ತಾಯವಾದ ಮೇಲೆ ಬ್ರಿಟನ್ನಿನ ಸಮ್ಮತಿಯಿಂದಲೇ ತುರ್ಕಿಯು ಜರ್ಮನಿಗೆ ಕ್ರೋಮಿಯಂ ಸರಬರಾಜು ಮಾಡಲು ಒಪ್ಪಂದ ಮಾಡಿಕೊಂಡುದಾಗಿ ಅವರು ಹೇಳಿದ್ದಾರೆ. ಸಾಮಾನುಗಳಿಗೆ ಪ್ರತಿಯಾಗಿ ಸಾಮಾನು ಕೊಡುವುದೇ ತಮ್ಮ ವ್ಯಾಪಾರ ನೀತಿಯೆಂದು ಅವರು ಹೇಳಿರುವರು.

ಇಷ್ಟವಿಲ್ಲದ ಮದುವೆ

ತಂದೆತಾಯಿಗಳ ಇಷ್ಟದಂತೆ ೧೮ ವರ್ಷದ ಮಗಳಿಗೆ ಮದುವೆಯೊಂದು ನಿಶ್ಚಯವಾಯಿತು. ಆದರೆ ಮದುವೆಯ ದಿನ ಗಂಡಿನವರು ಹೆಣ್ಣಿನ ಮನೆಗೆ ಬಂದಾಗ ಹುಡುಗಿ ಆ ಮದುವೆ ಬೇಡವೆಂದು ತಿರಸ್ಕರಿಸಿದಳು. ಆದರೂ, ಗಂಡಿನವರ ನಿರ್ಬಂಧ ಹೆಚ್ಚಾಯಿತು. ಕಡೆಗೆ ಹುಡುಗಿಯ ಚಿಕ್ಕಪ್ಪನು ಪೋಲೀಸ್ ಮತ್ತು ಕೋರ್ಟಿನ ರಕ್ಷಣೆ ಬೇಡಿ ಗಂಡಿನವರನ್ನು ಶಾಂತ ರೀತಿಯಿಂದ ಕಳುಹಿಸಿಕೊಟ್ಟರು. ಇದು ನಡೆದದ್ದು ದೆಹಲಿಯ ಬಳಿ ಜೋಗಿವಾಡದಲ್ಲಿ.

ಹೊಸ ಜರ್ಮನ್ ಟ್ಯಾಂಕ್

ಜರ್ಮನರು ಹೊಸ ಮಾದರಿಯ ಕಿರಿಯ ರೀತಿಯ ಟ್ಯಾಂಕ್ ತಯಾರಿಸಿದ್ದಾರೆ. ಇದರ ತೂಕ ೪೫ ಟನ್. ಇದರಲ್ಲಿ ಬಹು ಗಟ್ಟಿಯಾದ ಚಿಲುಮೆ ೭.೫ ಸೆಂಟಿಮೀಟರಿನ ಫಿರಂಗಿ ಇದೆ. ಇದನ್ನು ಐವರು ನಡೆಸುತ್ತಾರೆ. ಒಹಳ ವೇಗವಾಗಿ ನಡೆಯುತ್ತೆ. ಇದುವರೆಗೂ ಇದರ ಮೇಲೆ ನಡೆದ ಪರೀಕ್ಷೆ ಬಹಳ ತೃಪ್ತಿಕರ.

ಸಂಪುಟ ೨] ಭಾನುವಾರ ೨೩--೪--೪೪ [ಸಂಚಿಕೆ ೨೪೫

ಕಡಲ್ಗಾಲುವೆಯಲ್ಲಿ — ಮಿತ್ರನೌಕಾ ಶೇಖರಣೆ

ಬೊಂಬಾಯಿ ಅನಾಹುತದಲ್ಲಿ ನೂರು ಕೋಟಿ ರೂ. ನಷ್ಟ
ಕೊಹಿಮಾ ಬಳಿ ಹೆಚ್ಚು ಜಪಾನೀ ಸೈನ್ಯ ಸಂಗ್ರಹ

ಇಂಗ್ಲೀಷ್ ಕಾಲುವೆಯಲ್ಲಿ ಸಮರ ನೌಕೆಗಳ ಸಂಗ್ರಹಣ

ಜರ್ಮನ್ ರೇಡಿಯೋ ಸುದ್ದಿ ಪ್ರಕಾರ—ಇಂಗ್ಲೀಷ್ ಕಡಲ್ಗಾಲುವೆಯಲ್ಲಿ ರಾಯಲ್ ನೌಕಾ ಬಲ ಸಂಗ್ರಹವಾಗುತ್ತಿದೆ. ಡನ್‌ಕರ್ಕ್ ಪ್ರಕರಣಾನಂತರ ಬೀಗ ನೌಕೆಗಳು ಸೇರುವುದು ಇದೇ ಬಾರಿಯದು. ಇದರಲ್ಲಿ ಅಮೆರಿಕಾ, ಫ್ರೆಂಚ್, ಇಟಲಿ ಮುಂತಾದ ಎಲ್ಲ ಮಿತ್ರ ದೇಶಗಳ ನೌಕಾ ಬಲಗಳೂ ಸೇರಿವೆ. ಇದಕ್ಕಾಗಿ ಪ್ರತಿನಿತ್ಯ ಲಂಡನಿನಿಂದ ಇಂಗ್ಲೆಂಡಿನ ಪೂರ್ವ ಮತ್ತು ದಕ್ಷಿಣ ಬಂದರುಗಳಿಗೆ ಸಕಲ ಪ್ರಕಾರವಾಗಿ ಸೈನ್ಯ ಸಾಗುತ್ತಿದೆ.

ಕೊಹಿಮಾ ಬಳಿ ಹೆಚ್ಚು ಶತ್ರು ಸೈನ್ಯಗಳು

ಜಪಾನೀ ಸೈನ್ಯಗಳು ಹೆಚ್ಚುಹೆಚ್ಚಾಗಿ ಕೊಹಿಮಾ ಗ್ಯಾರಿಸನ್ ಬಳಿ ಸಂಗ್ರಹವಾಗುತ್ತಿರುವುದಾಗಿ ವರದಿಯಾಗಿದೆ. ಜಪಾನೀ ಮಿತ್ರ ಸೈನ್ಯಗಳು ಮುಂದುವರಿಯುತ್ತಿವೆ. ಪಲೇಲ್ ರಸ್ತೆಯಲ್ಲಿ ಜಪಾನರು ಟ್ಯಾಂಕುಗಳೊಡನೆ ನಡೆಸಿದ ಧಾಳಿಯನ್ನು ಪ್ರತಿಭಟಿಸಲಾಯಿತು.

ಒಂದು ಗ್ರಾಮವು ೪ ಬಾರಿ ಕೈ ಬದಲಾಯಿಸಿತು

ಕೊಹಿಮಾ ಮೇಲೆ ಜಪಾನರು ಮತ್ತೆ ಮತ್ತೆ ಧಾಳಿ ನಡೆಸುವರೆಂಬ ಸೂಚನೆ ಇದೆ. ನಗರದ ಪಶ್ಚಿಮ ಭಾಗದಲ್ಲಿ ಕದನವು ಬಿರುಸಾಗಿದೆ. ಜಪಾನೀ ಕಾಲು ಬಲ ಸೈನ್ಯಗಳನ್ನು ಪ್ರತಿ ಧಾಳಿಯಿಂದ ಹೊರಡಿಸಲಾಗಿದೆ. ಜಪಾನೀ ಬಂದೂಕು ನಾಶ್ಯ ಫಿರಂಗಿಗಳಿಗೆ ಕೊಹಿಮಾ ಸೈನ್ಯ ಧಾಳಿಯ ತಕ್ಕ ಪ್ರತ್ಯುತ್ತರವನ್ನೀಯುತ್ತಿದ್ದಾರೆ.

ಇಂಫಾಲಿನ ಪಶ್ಚಿಮೋತ್ತರದ ಕುಂಗ್‌ಪಿ ಗ್ರಾಮವು ನಾಲ್ಕು ಬಾರಿ ಶತ್ರುಗಳ ವಶವಾಗಿ ಪುನಃ ನಮ್ಮ ವಶಕ್ಕೆ ಮಿತ್ರರಿಂದ ಶತ್ರು ವಶಕ್ಕೆ ಬದಲಾಯಿಸಿತು. ಕಡೆಗೆ ಅನೇಕ ಸಾವು ನೋವುಗಳ ನಡುವೆ ಮಿತ್ರರು ಅದನ್ನು ಕೈವಶಪಡಿಸಿದರು.

ಸಾವಿರ ಜನರಿಗೆ ೧ ರಾತ್ರಿ

ಸಾವಿರ ಜನರನ್ನು [illegible] ರಾತ್ರಿಗೂ ಒಂದೊಂದು ಸ್ತ್ರೀ [illegible] ಸರ್ಕಾರದಲ್ಲಿ [illegible] ಅದರಂತೆ [illegible] ೪೦ ಲಕ್ಷ ರೂ. ಮಂಜೂರಾಗಿದೆ.

ಬೊಂಬಾಯಿ ಅನಾಹುತದಲ್ಲಿ ನೂರು ಕೋಟಿ ನಷ್ಟ

ಬೊಂಬಾಯಿನ ಅನಾಹುತದಲ್ಲಿ ಬಂದರು ಸುತ್ತಲೂ ಇದ್ದ ಹಡಗು, ಧಾನ್ಯ, ಎಣ್ಣೆ ತೆಂಗಿನಕಾಯಿ, ಕಾಗದ, ಸೈನ್ಯದ ಸಾಮಾನು, ಕಟ್ಟಡಗಳು ಮುಂತಾಗಿ ಎಲ್ಲಾ ಸೇರಿ ೧ ನೂರು ಕೋಟಿ ರೂ. ಗೆ ಕಡಿಮೆಯಿಲ್ಲದಂತೆ ನಷ್ಟವಾಗಿದೆಯೆಂದು ಇನ್ಸೂರೆನ್ಸ್ ಕಂಪೆನಿಯವರು ಅಂದಾಜು ಮಾಡಿದ್ದಾರೆ. ಇದಕ್ಕಾಗಿ ಭಾರತ, ಬ್ರಿಟನ್ ಮತ್ತು ಇತರ ದೇಶಗಳ ಇನ್ಸೂರೆನ್ಸ್ ಕಂಪೆನಿಗಳ ೯ ಜನ ಪ್ರತಿನಿಧಿಗಳು ಹಾಗೂ ಈ ಅನಾಹುತ ನಡೆದ ಪ್ರದೇಶಗಳನ್ನು ಸರ್ಕಾರದವರ ಅಪ್ಪಣೆ ಪಡೆದು ಕಳೆದ ಎರಡು ದಿನಗಳಿಂದ ಪರಿಶೀಲಿಸುತ್ತಿದ್ದಾರೆ. ಅಪಘಾತವು ೩ ಮೈಲಿ ವಿಸ್ತೀರ್ಣ ಆವರಿಸಿದೆ. ಇದಿಷ್ಟು ಸ್ಥಳವೂ ಅಹಾರ ಪದಾರ್ಥ ಮುಂತಾದುವುಗಳಿಂದ ತುಂಬಿ ತುಳುಕುತ್ತಿದ್ದ ಸ್ಥಾನ. ಎಲ್ಲಾ ಭಸ್ಮವಾಯಿತು. ಕೆಂಡವಿನ್ನೂ ಆರಿಲ್ಲ. ಅದ್ದರಿಂದ ಎಂಥವರನ್ನೂ ಸಹ ಒಂದು ಗಂಟೆಗಿಂತ ಹೆಚ್ಚಾಗಿ ಆ ಪ್ರಾಂತ್ಯ ಓಡಾಡಲು ಅವಕಾಶ ಕೊಟ್ಟಿಲ್ಲ.

ನಿರಾಶ್ರಿತರಿಗೆ ಆಹಾರ ಪುನರ್ನಿವಾಸಿಗಳಿಗೆ

ಬೊಂಬಾಯಿನ ಬೆಂಕಿಯ ಅನಾಹುತದಿಂದ ನಷ್ಟಹೊಂದಿದ ಮನೆಯಿಲ್ಲದ ನಿರ್ಗತಿಕರಿಗೆ ಮಿಲಿಟರಿ ರಾಷ್ಟ್ರೀಯ ಪಡೆ ಬಟ್ಟೆ ಆಲುಗಡ್ಡೆ ಕೊಟ್ಟಿರುವರು. ಇಷ್ಟೇ ಅಲ್ಲ. ಎಲ್ಲಾ ಮಿಲಿಟರಿ ಭಾಗಗಳಿಂದಲೂ ಸೃತಿ ತೈಲಿನಲ್ಲಿಯೂ ಆಹಾರ ಪದಾರ್ಥ ಒದಗಿಸುವ ಪ್ರಯತ್ನ ಮಾಡುತ್ತಿದ್ದಾರೆ.

ಬ್ರಿಟಿಷರ ವ್ಯಾಪಾರ ನೀತಿ

[illegible] ಬ್ರಿಟಿಷರ ವ್ಯಾಪಾರ ನೀತಿಯು, [illegible] ಪ್ರಕಾರ, ಯೂರೋಪಿನ ಜನರು [illegible] ಹಾಗೂ ವ್ಯಾಪಾರದ ರಂಗದಲ್ಲಿ [illegible] ಸಹಕಾರಗಳಿಂದ ಕೂಡಿರುವುದು [illegible] ಸ್ಥಾಪಿಸಿ [illegible] ಕೆಲಸ ಮಾಡಬೇಕೆಂದು ಲಂಡನ್‌ನಲ್ಲಿ [illegible] ಎಲ್. ಎಸ್. [illegible] ಅವರು ನೀಡಿದ್ದಾರೆ.

ರೇಷನ್ ವ್ಯವಸ್ಥೆ

ಸ್ವಂ.ಸು.] ಕೃಷ್ಣರಾಜನಗರ ೨೨

ತಾ|| ೨೧-೪-೪೪ ರಿಂದ ಈ ಊರಿನಲ್ಲಿ ಸರ್ಕಾರದವರು ರೇಷನ್ ಕಾರ್ಡುಗಳ ಮೇರೆ ಪದಾರ್ಥಗಳನ್ನು ಕೊಡಲು ಜನಗಣತಿ ಮತ್ತು ಸಂಸಾರಗಳ ಲೆಕ್ಕಾಚಾರಗಳನ್ನು ತೆಗೆದುಕೊಳ್ಳಲು ಪ್ರಾರಂಭಿಸಿದ್ದಾರೆ.

ಈ ಊರಿನ ಬ್ರಾಹ್ಮಣ ಮಹಾಜನಸಭೆಯ ಆಶ್ರಯದಲ್ಲಿ ಪಟ್ಟಾಭಿಷೇಕದ ಪ್ರಯುಕ್ತ, ೧೯ ನೇ ತಾ|| ಸಂಗೀತವೂ, ೧೭ ನೇ ತಾ|| ಬ್ರಹ್ಮ ಗಮಕಿ ರಾಮಕೃಷ್ಣಶಾಸ್ತ್ರಿಗಳಿಂದ 'ರಾಮ ಪಟ್ಟಾಭಿಷೇಕ' ಎಂಬ ಹರಿಕಥೆಯೂ ನಡೆಯಿತು. ಅನೇಕ ಭಕ್ತ ಮಹನೀಯರುಗಳು ಆಗಮಿಸಿದ್ದರು.

---

೨ ನಿಮಿಷಕ್ಕೊಂದು ತಂತಿ

೨೧ ನೆಯ ತಾ|| ರಾಜಕುಮಾರಿ ಎಲಿಜಬೆತ್‌ರವರ ೧೮ ನೆಯ ವರ್ಷ ವರ್ಧಂತ್ಯುತ್ಸವ. ಆ ದಿನವನ್ನವರು ಬಹು ಸಂತೋಷದಿಂದ ಕಳೆದರು. ಆ ದಿನ ಅಕೆಗೆ ದೇಶದಾದ್ಯಂತದಿಂದಲೂ ೨ ನಿಮಿಷಕ್ಕೊಂದರಂತೆ ತಂತಿಯ ಶುಭ ಸಂದೇಶಗಳು ಬಂದವೆಂದು ಗೊತ್ತಾಗಿದೆ.

ಕ್ಯಾಸಿನೋ ಕದನ

ಸಿಪ್ರಿಯಾನಿಕೊ ಪ್ರಾಂತ್ಯದಲ್ಲಿ ಜರ್ಮನರು ಬಹಳ ಮುಂದೆ ನುಗ್ಗುತ್ತಿದ್ದಾರೆ. ಕ್ಯಾಸಿನೋ ರಣರಂಗದ ಎಲ್ಲಾ ಭಾಗಗಳಲ್ಲೂ ಬಿರುಸಾದ ಕದನ ನಡೆಯುತ್ತಿದೆ. ನಗರದೊಳಗೆ ಜರ್ಮನರ ಸಾಮ್ರಾಜ್ಯ ಗ ಹೆಚ್ಚಾಗಿಗಿದೆ. ಅಂಜಿಯೋ ಪ್ರದೇಶದಲ್ಲಿ ಮಿತ್ರ ಧಾಳಿಯು ಸಂಭವಿಸಬಹುದೆಂಬ ಭೀತಿಯಿಂದ ಜರ್ಮನರು ಗಾಬರಿಗೊಂಡಿದ್ದಾರೆ. ಉಭಯ ಪಂಗಡಗಳಿಂದಲೂ ಕಲ್ಲುಗಳ ಮೊಡೆತ ಹೆಚ್ಚುತ್ತಿದೆ.

ಅನೇಕ ವರ್ಷ ಯುದ್ಧ

ಯೂರೋಪಿನಲ್ಲಿ ದ್ವಿತೀಯ ರಂಗದ ಸಿದ್ಧತೆಗಳಾಗುತ್ತಿರುವಾಗಲೇ ಪೆಸಿಫಿಕ್‌ನಲ್ಲೂ ಭಾರಿ ಕಾರ್ಯಾಚರಣೆಗಳು ನಡೆಯುವುವು. ಅನೇಕ ವರ್ಷಗಳ ಯುದ್ಧಕ್ಕೆ ನಾವು ಸಿದ್ಧರಾಗಬೇಕು—ಎಂಬುದಾಗಿ ಆಸ್ಟ್ರೇಲಿಯದ ಮುಖ್ಯ ಮಂತ್ರಿ ಮಿ. ಕರ್ಟಿನ್‌ರು ಹೇಳಿದವರು.

ಜೆಕೊಸ್ಲೋವೇಕಿಯಾ ಪುನರುದ್ಧಾರ

ಯುದ್ಧಕ್ಕೆ ಮುಂಚೆ ಜೆಕೊಸ್ಲೋವೇಕಿಯಾಗೆ ಇದ್ದ ಸ್ಥಾನವನ್ನೇ ಪುನಃ ಅದು ಪಡೆಯಲು ಬ್ರಿಟಿಷ್ ಸರ್ಕಾರದ ಸಮ್ಮತಿಯಿದೆ ಎಂದು ಸ್ಪಷ್ಟವಾಗಿದೆಯೆಂದು ತಿಳಿದುಬಂದಿದೆ. ಆ ದೇಶದ ಮುಂಚೆ ಇದ್ದ ಎಲ್ಲೆಗಳೇ ಪರಿಗಣಿಸಲ್ಪಡುವುವು. ಇದೇ ರೀತಿ ಸಂದೇಶಗಳು, ಬ್ರಿಟಿಷ್ ಮತ್ತು ಜೆಕ್ ಸರ್ಕಾರಕ್ಕೂ ಕಳುಹಿಸಲ್ಪಟ್ಟವ.

ಬೊಂಬಾಯಿ ಪ್ರಾಂತ್ಯದಲ್ಲಿ ಅಧಿಕ ಬೆಳೆ

[illegible]

ವಿಮಾನದಳ

ಸ್ವಂ.ಸು.] ಬೆಂಗಳೂರು ೨೨

[illegible] ಡಿಟೋಪುಟಿ ಎಸ್. ಸೂಧಪ [illegible] ವಿಮಾನದಳದಲ್ಲಿ ನಾಳೆ [illegible] ಕಪ್ಟನ್ ಪಾರ್ಗ [illegible] ಭಾರತೀಯ ಸೈನಿಕರಿಗಾಗಿ [illegible] ಕ್ಯಾಂಟೀನಿನ ಆರಂಭೋತ್ಸವ [illegible] ನೆರವೇರಿಸುವರು.

ಪ್ರೊ|| ಸೂಪರಿಂಟೆಂಡೆಂಟರ ವರ್ಗ

ಶ್ರೀ ಸಿ. ಬಿ. ರಂಗಯ್ಯನವರು ಹೆಡ್ [illegible] ಅಸಿಸ್ಟೆಂಟ್. ಮಿ|| ಅಂಡರ್ [illegible] ಸೂಪರಿಂಟೆಂಡೆಂಟ್. [illegible] ಸೂಪರಿಂಟೆಂಡೆಂಟ್. ಶ್ರೀ ಬಿ. ಎಸ್. [illegible] ವಯ್ಯನವರು ಕಡೂರು [illegible] ಸೂಪರಿಂಟೆಂಡೆಂಟ್.

ಕನ್ನಾಂಬಾ ಆಗಮನ

[illegible] ಸಿನಿಮಾ ನಟಿ ಕನ್ನಾಂಬಾ [illegible] ಬೆಂಗಳೂರಿಗೆ ಬರುವುದಾಗಿ ತಿಳಿದುಬಂದಿದೆ

ಮಕ್ಕಳ ಕೂಟ

ಏಪ್ರಿಲ್ ೨೮, ೨೯, ೩೦ ನೇ ತಾ|| ಗಳಲ್ಲಿ ಬೆಂಗಳೂರಿನಲ್ಲಿ ಅಖಿಲ ಕರ್ನಾಟಕ ಮಕ್ಕಳ [illegible] ನಡೆಯುವುದು. ಮಂಗಳೂರಿನ ಶ್ರೀ ಪಿ [illegible] ಅಧ್ಯಕ್ಷತೆ ವಹಿಸುವರು. ಇದರೊಡನೆ ಮಕ್ಕಳ ಕೂಟದ ವಾರ್ಷಿಕೋತ್ಸವವೂ, ಪೋಷಕರ ಸಭೆಯೂ ನಡೆಯುವುವು

ವಿಶ್ವವಿದ್ಯಾಲಯ ಪರೀಕ್ಷೆಗಳು

ಇಂಜನಿಯರಿಂಗ್ ಡಿಗ್ರಿ, ಡಿಪ್ಲೋಮಾ, ಬಿ ಟಿ. ಡಿಗ್ರಿ, ಎಲ್ ಟಿ ಮತ್ತು ಎಲ್. ಎಂ. ಪಿ. ಇವುಗಳ ಫಲಿತಾಂಶಗಳು [illegible] ಸೋಮವಾರ ಬೆಳಿಗ್ಗೆ ೧೧ ಗಂಟೆಗೂ ಬಿ ಎ., ಬಿ ಎಸ್ ಸಿ, ಆನರ್ಸ್, ಇಂಟರ್ಮೀಡಿಯೆಟ್ ಮತ್ತು ಸ್ಕೂಲ್ ಫೈನಲ್ ಫಲಿತಾಂಶಗಳು [illegible] ನೇ ಸೋಮವಾರ ಬೆಳಿಗ್ಗೆ ೧೧ ಗಂಟೆಗೂ ಹೊರಬೀಳುತ್ತವೆ.

ನಷ್ಟ ಪರಿಹಾರ

ಕಳೆದ ವರ್ಷ ಮೇ ತಿಂಗಳಲ್ಲಿ ವಿಮಾನಗಳ ಆಕಸ್ಮಿಕದಿಂದ ಬಂಗಾಳದ ಕಿದ್ದರ್‌ಪೂರ್ [illegible] ವಾಸಿಗಳಿಗೆ ಉಂಟಾಗಿದ್ದ ನಷ್ಟ ಪರಿಹಾರವನ್ನು ಭಾರತ ಸರ್ಕಾರದವರು ಪೂರ್ತಿಯಾಗಿ [illegible] ಒಪ್ಪಿಕೊಂಡಿದ್ದಾರೆ

ಪಾರ್ಲಿಮೆಂಟಿನಲ್ಲೂ ಬ್ರಹ್ಮ ದ್ವೇಷವೇ?

ಕಾಮನ್ಸ್ ಸಭೆಯ ಸರ್ ಹರ್ಬರ್ಟ್ ವಿಲಿಯಂಸ್‌ರವರು ಈಚೆಗೆ ಸಭೆಯಲ್ಲಿ ಹೀಗೆ ನುಡಿದರೆಂದು ವರದಿಯಾಗಿದೆ-"ಇಂಡಿಯಾಕ್ಕೆ ಡೊಮಿನಿಯನ್ ಅಂತಸ್ತು ಕೊಡಬೇಕೆಂದು ಹೇಳಲಾಗಿದೆ. ಆದರೆ ಸ್ವಪ್ರತಿಷ್ಠೆಯಿಂದ ಕೂಡಿದ ಬ್ರಾಹ್ಮಣ ಕೋಮಿನ ಹಿಡಿತದಲ್ಲಿ ಸಿಕ್ಕಿಬಿದ್ದಿರುವ ದೇಶಕ್ಕೆ ಅದನ್ನು ಕೊಡುವುದು ಹೇಗೆ? ಅಸ್ಪೃಶ್ಯ ಜನಾಂಗದ ರಕ್ಷಣೆಯನ್ನು ಬ್ರಾಹ್ಮಣರಿಗೆ ಒಪ್ಪಿಸುವುದೇ? ಹಿಂದೆ ಕೊಟ್ಟಿರುವ ಭರವಸೆಗಳಲ್ಲಿ ಯಾವುದನ್ನೂ ನಾವು ಹಿಂದಕ್ಕೆ ತೆಗೆದುಕೊಳ್ಳಬೇಕಾಗಿಲ್ಲ. ಆದರೆ ನಾವು ಯಾವುದಾದರೂ ಅಧಿಕಾರವನ್ನು ಕೊಡುತ್ತೇವೆಂದರೆ, ಅದನ್ನು ತೆಗೆದು ಕೊಳ್ಳುತ್ತೇವೆನ್ನುವರು ಬೇಕಲ್ಲವೇ?"

ಸೆಂಟಿನಲ್ ಪತ್ರಿಕೆಗೆ ಅನುಮತಿ

ಕಳೆದ ವಾರ ಬೊಂಬಾಯಿ ಸರ್ಕಾರದವರು ನಿಷೇಧಿಸಿದ್ದ ಬೊಂಬಾಯಿ ಸೆಂಟಿನಲ್ ಪತ್ರಿಕೆಯನ್ನು ಹೊರಡಿಸಲು ಈಗ ಪುನಃ ಅವಕಾಶ ಕೊಟ್ಟಿದ್ದಾರೆ. ಸಂಪಾದಕರನ್ನು ಸರ್ಕಾರದವರು ಬರಮಾಡಿಕೊಂಡು ಸಮಾಧಾನಕರವಾದ ಒಡಂಬಡಿಕೆಯನ್ನು ಮಾಡಿಕೊಂಡಿರುವರೆಂದು ಹೇಳಲಾಗಿದೆ.

[ನಮ್ಮ ವಿಶ್ವಕರ್ನಾಟಕದ ವಿಷಯವಾಗಿಯೂ ಸರ್ಕಾರದವರು ಹೀಗೇಕೆ ಮಾಡಬಾರದು?—ಸಂ]

ಅಲ್ಯೂಮಿನಂ ಬೆಲೆ

ಪೌಂಡಿಗೆ ಹನ್ನೆರಡಾಣೆಗೆ ಮೀರಿ ಯಾರೂ ಅಲ್ಯೂಮಿನಂ ಚೂರುಗಳನ್ನು ಮಾರಕೂಡದೆಂದು ಭಾರತ ರಕ್ಷಣಾ ಶಾಸನದ ಪ್ರಕಾರ ಆಜ್ಞೆಯಾಗಿದೆ.

ಸಾಧ್ವಿ
ರಾಜಧಾನಿಯ
ರಾಷ್ಟ್ರೀಯ ದಿನ ಪತ್ರಿಕೆ
ಕೂಡಲೇ ಚಂದಾದಾರರಾಗಿರಿ!
ಚಂದಾ ತಿಂಗಳಿಗೆ 0-8-0 ಮಾತ್ರ
ಪರಸ್ಥಳಕ್ಕೆ ಟಪಾಲು ಮೂಲಕ 1-0-0

ಯುದ್ಧಾನಂತರ ಡೊಮಿನಿಯನ್ ಅಂತಸ್ತು

ಹಿಂದೂಸ್ಥಾನಕ್ಕೆ ಡೊಮಿನಿಯನ್ ಅಂತಸ್ತನ್ನು ಯುದ್ಧ ಕಳೆದನಂತರ ಆದಷ್ಟು ಬೇಗ ಕೊಡಲು ಪ್ರಯತ್ನ ಮಾಡಿದೆ. ಇದು ಪ್ರಾಮಾಣಿಕವಾದುದು. ಈಗ ನಾವು ನಮ್ಮ ಜೀವವನ್ನು ಉಳಿಸಿಕೊಳ್ಳಲು ಹೋರಾಡುತ್ತಿದ್ದೇವೆ ಪ್ರಪಂಚದ ಎಲ್ಲಾ ಸಮಸ್ಯೆಗಳನ್ನೂ ನಾವು ಬಗೆಹರಿಸಲು ಶಕ್ಯವಿಲ್ಲ- ಎಂದು ಮಿ|| ಚರ್ಚಿಲರು ಪಾರ್ಲಿಮೆಂಟಿನಲ್ಲಿ ಹೇಳಿರುವರು.

ಜಹಗೀರುದಾರರ ಸತ್ಯಾಗ್ರಹ

ಸಣ್ಣ ಸಂಸ್ಥಾನಗಳನ್ನು ದೊಡ್ಡ ಸಂಸ್ಥಾನಗಳೊಡನೆ ಸೇರಿಸುವುದಕ್ಕಾಗಿ ಇಂಡಿಯಾ ಸರ್ಕಾರದವರು ಮಾಡಿರುವ ಶಾಸನದಂತೆ ಕೆಲವು ತಾಲ್ಲೂಕುಗಳನ್ನು ಲಿಂಬ್ಡಿ ಸಂಸ್ಥಾನಕ್ಕೆ ಸೇರಿಸಿರುವ ಪ್ರಸಂಗವನ್ನು ತಾಲ್ಲೂಕಿನ ಜಹಗೀರುದಾರರುಗಳು, ಪ್ರತಿಭಟಿಸಿ ಲಿಂಬ್ಡಿ ಸಂಸ್ಥಾನದವರ ಯಾವ ಆಜ್ಞೆಗಳನ್ನೂ ತಾವು ಒಪ್ಪುವುದಿಲ್ಲವೆಂದೂ ಕಾಂಗ್ರೆಸ್ಸಿನ ರೀತಿಯಲ್ಲಿ ಅಸಹಕಾರದಿಂದ ಪ್ರತಿಭಟಿಸುವುದಾಗಿಯೂ ತಿಳಿಸಿದ್ದಾರೆ

ದೆಹಲಿ ಪತ್ರಿಕೆಗಳ ಮೇಲಿನ ಆಜ್ಞೆ ವಾಪಸು

ದೆಹಲಿಯ ಹಿಂದೂಸ್ಥಾನ್ ಟೈಂಸ್ ಮತ್ತು ನ್ಯಾಷನಲ್ ಕಾಲ್ ಎಂಬ ಪತ್ರಿಕೆಗಳು ಶ್ರೀಮತಿ ಸರೋಜಿನಿನಾಯುಡುರವರ ಹೇಳಿಕೆ ಪ್ರಕಟಿಸಿದ್ದಕ್ಕಾಗಿ ಸರ್ಕಾರದವರು ಹಾಕಿದ್ದ "ಲೇಖನ ಪ್ರಕಟಣಾ ನಿರ್ಬಂಧ" ಆಜ್ಞೆಯನ್ನು ವಾಪಸು ತೆಗೆದುಕೊಂಡಿದ್ದಾರೆ.

ಮಾಸ ಪತ್ರಿಕೆ ಬಹಿಷ್ಕಾರ

ಕರಾಚಿಯ ಭಾರತ ಜೀವನ ಎಂಬ ಮಾಸ ಪತ್ರಿಕೆಯ "ಸ್ವಾತಂತ್ರ್ಯ ಸಂಚಿಕೆ" ಯನ್ನು ಸಿಂಧ್ ಸರ್ಕಾರ ಬಹಿಷ್ಕರಿಸಿದೆ.

ಕ್ರಾಂತಿಕಾರರ ಬಂಧನ

ಅಪಾರ ಶಸ್ತ್ರ ಮತ್ತು ಮದ್ದು ಗುಂಡುಗಳನ್ನು ಸಂಗ್ರಹಿಸಿಟ್ಟುಕೊಂಡು ಒಳದೇಶ ಹೊರದೇಶಗಳೆರಡು ಕಡೆಯೂ ಕ್ರಾಂತಿಯುತವಾದ ಚಳುವಳಿ ನಡೆಸುತ್ತಿದ್ದ ೩೭ ಜನರ ಗ್ಯಾಂಗ್ ಒಂದನ್ನು ಲಕ್ನೋ ಗೂಢಚಾರ ದಳದವರು ಪತ್ತೆ ಮಾಡಿ ಹಿಡಿದಿದ್ದಾರೆ.

Edited, printed and published by A R. Nagarajan, at the Sadhvi Press, D Subbiah Road, Mysore.

ಬ್ರಿಟಿಷರು ಹೋದರೆ ಅನಾಹುತ

ಹಿಂದೂಸ್ಥಾನದಲ್ಲಿ ಸೈನಿಕ ಶಿಕ್ಷಣ ಪಡೆದವರು ಈಗಾಗಲೇ ಇಪ್ಪತ್ತು ಲಕ್ಷ ಜನರಿದ್ದಾರೆ. ಬ್ರಿಟಿಷರು ಹಿಂದೂಸ್ಥಾನವನ್ನು ಬಿಟ್ಟು ಹೊರಟ ಕೂಡಲೆ ಇವರು ಶಸ್ತ್ರಾಸ್ತ್ರಗಳನ್ನು ಹಿಡಿದು ಘೋರವಾದ ಅಂತರ್ಯುದ್ಧದಲ್ಲಿ ತೊಡಗುವರು. ಇದಕ್ಕಾಗಿ ಮಿ|| ಸಾವರ್ಕರರು ಹಿಂದೂಗಳನ್ನು ಹೆಚ್ಚು ಹೆಚ್ಚಾಗಿ ಸೈನ್ಯಕ್ಕೆ ಸೇರುವಂತೆ ಪ್ರೇರಿಸುತ್ತಿರುವರು—ಎಂದು ಮುಂಚೆ ಕಲ್ಕತ್ತೆಯ ಸ್ಟೇಟ್ಸ್‌ಮನ್ ಪತ್ರಿಕೆಯ ಮಾಜಿ ಸಂಪಾದಕರಾದ ಮಿ|| ಆಲ್‌ಫ್ರೆಡ್ ವಾಟ್ಸನ್ನರು ಇಂಗ್ಲೆಂಡಿನಲ್ಲಿ ಪ್ರಚಾರ ಮಾಡುತ್ತಿದ್ದಾರೆ.

ತಟಸ್ಥ ದೇಶಗಳೊಡನೆ ಸಮಾಲೋಚನೆ

ತುರ್ಕಿ ಮತ್ತು ಸ್ಪೇನ್ ದೇಶಗಳೊಡನೆ ಬ್ರಿಟನ್, ಅಮೆರಿಕಾಗಳು ಮಾತುಕತೆ ನಡೆಸಿರುವುದಾಗಿ ಅಮೆರಿಕದ ಸ್ಟೇಟ್ ಸೆಕ್ರೆಟರಿ ಮಿ|| ಕಾರ್ಡೆಲ್ ಹಲ್‌ರವರು ತಿಳಿಸಿದ್ದಾರೆ. ತುರ್ಕಿಯು ಜರ್ಮನಿಗೆ ಕ್ರೋಂ ಅನ್ನು ಸರಬರಾಜು ಮಾಡದಿರುವ ವಿಷಯದಲ್ಲಿ ಅವರು ಇನ್ನೇನೂ ಹೇಳಲಿಲ್ಲ

ಇಟಲಿಯಲ್ಲಿ ಹೊಸ ಸರ್ಕಾರ

ಎಲ್ಲಾ ಪ್ರಜಾ ಸತ್ತಾತ್ಮಕ ಪಂಗಡಗಳ ಪ್ರತಿನಿಧಿಗಳನ್ನೂ ಸೇರಿಸಿ, ಮಾ|| ಬಡೋಗ್ಲಿಯೋರವರು ಹೊಸ ಮಂಡಲವನ್ನು ರಚಿಸಿದ್ದಾರೆ. ರಾಜತ್ವಕ್ಕೆ ವಿರೋಧಿಗಳಾಗಿ [illegible] ಇರಬೇಕೆಂದು ಹೇಳುತ್ತಿದ್ದ ಕೌಂಟ್ ಸ್ಫೋರ್ಜಾರವರೂ ಅವರಲ್ಲಿರುವರು.

ರಷ್ಯದಲ್ಲಿ ನೂತನ ಸ್ಟಾಂಪು

ಹೊಸ ರೀತಿಯ ಸ್ಟಾಂಪುಗಳು ರಷ್ಯದಲ್ಲಿ ಈಗ ಜಾರಿಗೆ ಬಂದಿವೆ. ಅವುಗಳಲ್ಲಿ ರಷ್ಯಾ, ಅಮೆರಿಕ, ಮತ್ತು ಇಂಗ್ಲೆಂಡುಗಳ ಬಾವುಟಗಳಿವೆ.

SAVE EMPTY
Beer Bottles
THE CHAMUNDI BREWERY,
Post Box 47, MYSORE

ಸ್ತ್ರೀಯರ ಸೌಕರ್ಯಕ್ಕೆ
[illegible] ವ್ಯಾಪಾರ ಕೊಡುವ [illegible]
ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ
ಲಿಲ್ಲೀ ಬ್ರಾಂಡ್ ಕಾಫಿ ಪುಡಿ
ಉಪಯೋಗಿಸಿ.
[illegible], ದೇವರಾಜ ಮಾರ್ಕೆಟ್, ಮೈಸೂರು
[illegible] 4 ನೇ ನಂಬರ್ [illegible] ಮತ್ತು
[illegible] 3 ನೇ ನಂಬರ್ [illegible]
[illegible] ತೆರೆದಿರುತ್ತೆ
[illegible]

ಸರ್ವದಾ ಕೊಳ್ಳಿರಿ
[illegible] ಮತ್ತು
ಬೊಂಬಾಯಿ ಮಧುರ ತಿಂಡಿಗಳು
ಅಧುನಿಕ ರೀತಿಯಲ್ಲಿ ಮಾಡಿದ
[illegible] ಉಪಾಹಾರಗಳು
[illegible]
[illegible], ಮೈಸೂರು

ಸಂಪುಟ ೨] ಮಂಗಳವಾರ ೨೫-೪-೪೪ [ಸಂಚಿಕೆ ೨೩೬

ಕೊಹಿಮಾದಿಂದ ಮಿತ್ರರು ಪಾರಾದರು

ಗ್ರೀಕ್ ಯುದ್ಧ ನೌಕೆಗಳಲ್ಲಿ ಕೆಲಸಗಾರರ ದಂಗೆ

ಬೈಸ್ಕಲ್ - ಮೋಟಾರ್ ಢಿಕ್ಕಿ

ಮೈಸೂರು ೨೫

ಮೊನ್ನೆ ಕೃಷ್ಣವಿಲಾಸ ಅಗ್ರಹಾರದ ಬೀದಿ ಶೇಷಾದ್ರಿ ಭವನದ ಚೌಕದಲ್ಲಿ ರ ಟ್ಟಿ ಕಂಪನಿಯವರ ಮೋಟಾರು ಚಾಮ ರಾಜಪುರಂ ಪೋಸ್ಟಾಫೀಸ್ ನೌಕರರಾದ ಶ್ರೀ ಎ. ವಿ. ಕೃಷ್ಣಮೂರ್ತಿಯವರ ಬೈಸ್ಕ ಲ್ಲಿಗೆ ಢಿಕ್ಕಿ ಹೊಡೆದು, ಸ್ವಲ್ಪ ಜಖಂ ಆಯಿ ತು. ಪೋಲೀಸಿನವರು ಮೋಟಾರಿನವರ ಮೇಲೆ ಹತೋಟಿಯಿಲ್ಲದ ಓಡಿಸಿದ್ದಾಗಿ ಮೊ ಕದ್ದಮೆ ದಾಖಲು ಮಾಡಿದ್ದಾರೆ

ಉದಾರ ದಾನ

ರಾಜಧಾನಿಯ ಗಣಪತಿ ಪೂಜಾ ಮಹೋತ್ಸವ ಸಮಿತಿಗೆ ಬೆಂಗಳೂರಿನ ಧರ್ಮಶಾಸ್ತ್ರ ಶೀಲರಾದ ದೇವರಾವ್ ಶಿವರಾಂರವರು ೧೦ ಸಾವಿರ ರೂ ಕೊಟ್ಟಿರುವರು.

ಬ್ರಾಹ್ಮಣ ಸಮ್ಮೇಳನ

ಇಂದು ನಡೆಯಬೇಕಾಗಿದ್ದ ಬ್ರಾಹ್ಮಣ ಸಮ್ಮೇಳನವು ತಕ್ಕಷ್ಟು ಕಾಲಾವಕಾಶವಿಲ್ಲದ್ದರಿಂದ ಗಿ ಮುಂದಿನ ವಾರಕ್ಕೆ ಮುಂದುವರಿಸಲ್ಪಟ್ಟಿದೆ

ಹೊಸ ಫುಡ್ ಅಸಿಸ್ಟೆಂಟರು

ಮೈಸೂರು ಜಿಲ್ಲಾ ಫುಡ್ ಅಸಿಸ್ಟೆಂಟರಾಗಿದ್ದ ಶ್ರೀಮಾನ್ ನಿರಂಜನರಾಜೆ ಅರಸಿನವರ ಸ್ಥಾನಕ್ಕೆ ಶ್ರೀಮಾನ್ ಬಿ. ಟಿ. ಕೆಂಪಣ್ಣನವರು ಬಂದಿದ್ದಾರೆ. ನಿನ್ನೆ ಮಧ್ಯಾಹ್ನ ಛಾರ್ಜು ತೆಗೆದುಕೊಂಡರು.

ಫುಟ್ ಬಾಲ್

ಕಲ್ಕತ್ತಾವಿನ ಬಾಟಾ ಫುಟ್‌ಬಾಲ್ ಕ್ಲಬ್ಬಿಗೂ ಮೈಸೂರು ಮುಸ್ಲಿಂಸ್ ಕ್ಲಬ್ಬಿಗೂ ನಿನ್ನೆ ಸಂಜೆ ಮೈಸೂರು ದೊಡ್ಡಕೆರೆ ಮೈದಾನದಲ್ಲಿ ಸಿ. ಪಿ. ಸಿ. ಚಿನ್ನದ ಪದಕದ ಪಂದ್ಯಗಳ ಸಾಲಿನಲ್ಲಿ ನಡೆದ ಫುಟ್‌ಬಾಲ್ ಆಟದಲ್ಲಿ ಯಾವ ಕಡೆಯವರೂ ಗೋಲು ಗಳನ್ನು ಹೊಡೆಯದೆ ಇದ್ದುದರಿಂದ ಡ್ರಾ ಆಯಿತು. ನಾಳೆಯ ದಿನ ಡೆಲ್ಲಿಯ ಯಂಗ್ ಮೆನ್ಸ್ ಕ್ಲಬ್ಬಿಗೂ ಮೈಸೂರು ಬ್ಲೂಸ್ ಫುಟ್‌ಬಾಲ್ ಕ್ಲಬ್ಬಿಗೂ ಪಂದ್ಯವಿರುತ್ತದೆ.

ಕಾಂ॥ ಪಕ್ಷದ ಪ್ರಚಾರ

ಜಿಲ್ಲಾ ಬೋರ್ಡು ಚುನಾವಣಾ ಪ್ರಚಾರ ಸಂಬಂಧವಾಗಿ ಕಾಂ॥ ಪಕ್ಷದ ಪರವಾಗಿ ಶ್ರೀಗಳಾದ ಜೆ. ಸಿದ್ದಯ್ಯ, ಬಿ ನಾರಾಯಣಸ್ವಾಮಿ, ಇ ಪಿ. ನಂಜಪ್ಪ, ಇವರು ಗಳು ನಿನ್ನೆ ಕಳಲೆ, ಬೇಗೂರು, ಹುಂಗಳ, [illegible] ಪೇಟೆಗೆ ಹೋಗಿದ್ದರು ಇಂದು ತೆರಕಣಾಂಬಿ, ಹಂಚನಹಳ್ಳಿ, ರಾಮಸಮುದ್ರ, ಚಾಮರಾಜನಗರಕ್ಕೆ ಹೋಗಿರುವರು. ನಾಳೆ ನಂಜನಗೂಡು ಪ್ರಾಂತ್ಯ ಕಾರ್ಯಕ್ರಮವಿಟ್ಟುಕೊಂಡಿದ್ದಾರೆ.

ನ್ಯಾಷನಲಿಸ್ಟ್ ಪಕ್ಷ

ಸ್ಥಳೀಯ ನ್ಯಾಷನಲಿಸ್ಟ್ ಪಕ್ಷದವರು [illegible] ನೇ ತಾ॥ [illegible]ಪುರ, ಸರಗೂರು, [illegible] ಸಂತೆ, ಬೆಗ್ಗ [illegible]ಕೋಟೆ. [illegible] ನೇ ತಾ॥ [illegible], ಸಾಲಿಗ್ರಾಮ, ಗುಂಡೇನಹಳ್ಳಿ, ಕೃಷ್ಣರಾಜನಗರ, ೨೮ ನೇ ತಾ॥ ನಂಜನಗೂಡು, ಬಿಳಿಗೆರೆ, ಹುಲ್ಲಹಳ್ಳಿ, ೨೭ ನೇ ತಾ॥ [illegible], ಚಾಮರಾಜನಗರ, ಹರದನಹಳ್ಳಿ, ತೆರಕಣಾಂಬಿ. ಗುಂಡ್ಲುಪೇಟೆಗಳಲ್ಲಿ [illegible] ಪ್ರಚಾರ ಮಾಡುವರು.

ಜಪಾನರು ಶಾಂತಿ ಬಯಸಬಹುದು

ತಾವು ಗೆಲ್ಲಲಾರೆವೆಂದು ಮನವರಿಕೆಯಾದಾಗ ಜಪಾನರು ಶಾಂತಿ ಸಮಾಧಾನಗಳಿಗೆ ಪ್ರಯತ್ನಿಸುವರಲ್ಲಿ ಸಂದೇಹವೇ ಬೇಕಾಗಿಲ್ಲ. ನಾವು ದೀರ್ಘ ಹೋರಾಟಕ್ಕೆ ಸಿದ್ಧರಾಗಿರಬೇಕು—ಎಂದು ಜಪಾನಿಗೆ ಹಿಂದೆ ಅಮೆರಿಕಾ ರಾಯಭಾರಿಯಾಗಿದ್ದ ಮಿ॥ ಜೋಸೆಫ್ ಗ್ರ್ಯೂರವರು ಹೇಳಿರುವರು.

ಮಣಿಪುರ ಸಮರ ಸುದ್ದಿ

ಕೊಹಿಮಾ ಸುತ್ತಲೂ ಮಿತ್ರರು ತಮ್ಮ ಸ್ಥಾನಗಳನ್ನು ಭದ್ರಪಡಿಸಿಕೊಳ್ಳುತ್ತಿರುವರು. ಜಪಾನರೂ ಭಿನ್ನವಾದ ತಮ್ಮ [illegible]ಗಳನ್ನು ಪುನಸ್ಸಂಘಟಿಸಿಕೊಳ್ಳುತ್ತಿರುವರು. ಬಿಷನ್ಪುರದಲ್ಲಿ ಭೀಕರ ಕಾಳಗ ಜರುಗುತ್ತಿದೆ ಶತ್ರು [illegible] ತಡೆಗಟ್ಟಲಾಗಿದೆ

ದಿಮಾಪುರ ರಸ್ತೆ ತೆರೆಯಿತು

ಕೊಹಿಮಾದಿಂದ ದಿಮಾಪುರಕ್ಕೆ ಬರುವ ರಸ್ತೆಯಲ್ಲಿನ ತಡೆಗಳನ್ನು ತಕ್ಷಣಕ್ಕೆ ತೆಗೆದುಹಾಕಲಾಗಿದೆ. ಇದರಿಂದ ಕೊಹಿಮಾ ಉಳಿಸಿಕೊಳ್ಳಲು ನಿನ್ನೆ ಪ್ರಯತ್ನ ಮಾಡಿದ ದಳಕ್ಕಿದ್ದ ತಡೆ ನಿವಾರಣೆಯಾಗಿದೆ.

ಕೆಲೆಯಲ್ಲಿ ಆಸ್ಫೋಟನೆಗಳು

ಜರ್ಮನ್ ದಂಡಯಾತ್ರಾ ಕೇಂದ್ರವಾದ ಕೀಲ್ ಪಟ್ಟಣದ ಕಡೆಯಲ್ಲಿ ಮೊನ್ನೆ ಸೋಮವಾರ ರಾತ್ರಿ ಸತತ ಭಾರಿ ಆಸ್ಫೋಟನೆಯುಂಟಾಯಿತು. ಅದರ ಬೆಂಕಿ ೩ ಗಂಟೆ ಕಾಲ ಉರಿಯುತ್ತಿತ್ತು ಅಲ್ಲಿನ ಮದ್ದು ಸಂಗ್ರಹಾಲಯಕ್ಕೆ ಬೆಂಕಿ ಬಿದ್ದು ಆ ಭಾರಿ ಆಸ್ಫೋಟನೆಯುಂಟಾಗಿರಬೇಕೆಂದು ನಿರೀಕ್ಷಕರ ಅಭಿಪ್ರಾಯ.

ಚೀಣಾದಲ್ಲಿ ಭೀಕರ ಯುದ್ಧ

ಚೀಣಾದ ಹೊನಾನ್ ಪ್ರಾಂತ್ಯದಲ್ಲಿ ಮುಖ್ಯ ಪಟ್ಟಣ ಒಂದರಲ್ಲಾಗಿ ಮಿತ್ರರಿಗೂ, ಜಪಾನರಿಗೂ ಅತ್ಯಂತ ಭಾರಿ ಹೋರಾಟ ನಡೆಯುತ್ತಿದೆ. ಆ ಪಟ್ಟಣ ಹಿಡಿಯಲು ಜಪಾನರು ಮತ್ತೆ ಸೈನಿಕರನ್ನು ಕಳಿಸಿ [illegible] [illegible] [illegible] ನ್ನು ಉತ್ತರದಲ್ಲೂ [illegible] ಯುತ್ತಿದೆ. ಇಲ್ಲಿ ಕೇವಲ [illegible] ಗಳಲ್ಲಿ ೧೦೦೦೦ ಜಪಾನ್ ಯೋಧರನ್ನು ಕೊಲ್ಲಲಾಯಿತು.

ಪ್ರೊಫೆಸರ್‌ಗಳ ಕೆಲಸಕ್ಕೆ ಸಂಚಕಾರ

ಒರಿಸ್ಸಾದ ಬ್ರಹ್ಮಮೋಹನ ಕಾಲೇಜಿನ ಪ್ರೊಫೆಸರ್‌ಗಳಾದ ಪ್ರಫುಲ್ಲ ಚಕ್ರವರ್ತಿ, ಸುಧೀರ್, ಮಿಸ್ ಶಾಂತಿ ಸುಧಾ ಘೋಷ್ ಇವರುಗಳನ್ನು ೧೯೪೨ ನೇ ಆಗಸ್ಟ್‌ನಲ್ಲಿ ಬಂಧಿಸಿ ಸೆಕ್ಯೂರಿಟಿ ಖೈದಿಗಳನ್ನಾಗಿಡಲಾಯಿತಷ್ಟೆ. ಮಿಸ್ ಘೋಷ್‌ರವರು ಇತ್ತೀಚೆಗೆ ಬಿಡುಗಡೆಯಾಗಿರುವರು ಬ್ರಹ್ಮಮೋಹನ ಕಾಲೇಜ್ ಅಧಿಕಾರಿಗಳಿಗೆ ಈ ಮೂವರು ಪ್ರೊಫೆಸರುಗಳನ್ನೂ ವಜಾ ಮಾಡಬೇಕೆಂದು [illegible] ಆ ಕಾಲೇಜಿಗೆ ಸರ್ಕಾರದ ಗ್ರಾಂಟನ್ನು [illegible] ಬಂಗಾಳ ಸರ್ಕಾರದವರು ಸೂಚಿಸಿದ್ದಾರೆ

ಶಿವಪ್ರಸಾದರು ದೈವಾಧೀನರಾದರು

ಕಾಶಿ ವಿದ್ಯಾಪೀಠದ ಸ್ಥಾಪಕರಲ್ಲೊಬ್ಬರೂ ಹಿಂದೆ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಖಜಾಂಚಿಯಾಗಿದ್ದವರೂ ಆದ ಶ್ರೀ ಬಾಬು ಶಿವಪ್ರಸಾದ ಗುಪ್ತರವರು ಮೊನ್ನೆ ಬೆಳಗ್ಗೆ ಕಾಶಿಯಲ್ಲಿ ವಿಧಿವಶರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ರೈಲ್ವೆ ನಿಲ್ದಾಣದಲ್ಲಿ ಬೆಂಕಿ

ಅಹಮದಾಬಾದಿನ ಅಸರ್ವಾ ರೈಲ್ವೆ ನಿಲ್ದಾಣದಲ್ಲಿ ಜಕಸ್ಮಾತ್ ಅಗ್ನಿ ಬಿದ್ದಿತು ಹರಳೆ ೧೦೦ ಮೂಟೆ ಹತ್ತಿ ಭಸ್ಮವಾಯಿತು. ೧೦ ಸಾವಿರ ರೂಪಾಯಿಗಳ ನಷ್ಟ ಸಂಭವಿಸಿದೆ.

ಈ ವರ್ಷ ಶತ್ರುವಿಗೆ ಪರಾಜಯ

ಜರ್ಮನಿಯ ಹಮ್ ಡಾರ್ಟ್ ನಗರದ ಮೇಲೆ ಮಿತ್ರರ ಒಂದು ಸಾವಿರ ವಿಮಾನಗಳು ಧಾಳಿ ನಡೆಸಿ [illegible] ನಗರವನ್ನು ಸುತ್ತ ವಿಮಾನಗಳ ಮುತ್ತಿಗೆಗೊಳಗಾಯಿತು [illegible] ಶತ್ರುವಿನ ಸೋಲಿ[illegible] ನ ಪರಾಕ್ರಮ [illegible] ಈ ವರ್ಷ ಮುತ್ತಿಗೆಗಳು ಒಂದರಲ್ಲಿ [illegible]

ತಲೆ ಬೋಳಿಸಿದ ಗಂಡ

[illegible] ಜಿಲ್ಲೆ [illegible] [illegible] ವರ್ಷದ ಹೆಂಗ [illegible] [illegible] [illegible] ತಲೆ ಬೋಳಿಸುತ್ತಿದ್ದ [illegible] [illegible] [illegible] [illegible] ಗೆ ಶಿಕ್ಷೆ ವಿಧಿಸಲ್ಪಟ್ಟಿರುವನು.

ಗ್ರೀಕ್ ನೌಕೆಗಳಲ್ಲಿ ದಂಗೆ

ಗ್ರೀಕ್ ಯುದ್ಧ ನೌಕೆಗಳಲ್ಲಿ ಕೆಲಸಗಾರರು ದಂಗೆ ಎದ್ದಿದ್ದಾರೆ. ಈ ವಿಪರೀತ ಪಲ್ಲಟ ತೋರಿ ಬರುತ್ತಿದೆ. ನಾಲ್ಕು ಗ್ರೀಕ್ ಯುದ್ಧ ನೌಕೆಗಳ ಕೆಲಸಗಾರರು ಮೂರು ವಾರ ಹಿಂದೆಯೇ ಸರ್ಕಾರದ ಆಜ್ಞೆಯನ್ನು ತಿರಸ್ಕರಿಸಿ ಬಿಟ್ಟರು. ರಕ್ಷಣಾ ರ ಬಲವಂತವಾಗಿ ಕೆಲಸ ತೆಗೆಯಬೇಕಾಯಿತು. ಆಗ ಎರಡು ಪಕ್ಷಗಳವರೂ ಗುಂಡುಹಾರಿಸಿದರು ಹಲ ಕೆಲವು ಸಾವು ನೋವುಗಳು ಸಂಭವಿಸಿವೆ. ಆ ನೌಕೆಗಳನ್ನು ಸರ್ಕಾರ ವಶಪಡಿಸಿಕೊಂಡಿದೆ. ಗ್ರೀಕ್ ಪ್ರಧಾನಿ ರಾಜೀನಾಮೆ ಕೊಟ್ಟರು. [illegible] ಹೊಸ ಸರ್ಕಾರ ಬೇಕೆಂದು ಅನೇಕರು ಹಟ ಮಾಡುತ್ತಿದ್ದಾರೆ.

ಅಂಜಿಯೊ ಬಳಿ ವಿಜಯ

ಇಟಲಿ ಯುದ್ಧ ರಂಗದಲ್ಲಿರುವ ಅಮೆರಿಕನ್ ಯೋಧರು ಅಲ್ಲಿನ ಸಿಸ್ಟರ್ನಾಕ್ಕೆ ೪॥ ಮೈಲಿ ದಕ್ಷಿಣದಲ್ಲಿರುವ ಅಂಜಿಯೊ ವ್ಯೂಹದಲ್ಲಿ ಶತ್ರುಗಳನ್ನು ಹಿಡಿದು ವಿಜಯ ಗಳಿಸಿದ್ದಾರೆ

ಹಾಲೆಂಡಿಯ ಹಿಡಿದರು

ನ್ಯೂಗಿನಿಯ ಉತ್ತರ ತೀರಗಳಲ್ಲಿ ಹಲವೆಡೆ ಅಮೆರಿಕನರು ಬಂದಿಳಿದು ಅಲ್ಲಿನ ಅತ್ಯಂತ ಮುಖ್ಯ ನೆಲೆಯಾದ ಹಾಲೆಂಡಿಯ ಬಂದರನ್ನು ಆಕ್ರಮಿಸಿಕೊಂಡಿದ್ದಾರೆ.

ತಿರುವಾಂಕೂರು ದಿವಾನರು

ತಿರುವಾಂಕೂರು ದಿವಾನರು ತಮ್ಮ ಪದವಿಯನ್ನು ಬಿಡುವರೆಂದು [illegible] ಸುದ್ದಿ ಸುಳ್ಳೆಂದು ಅಧಿಕಾರಯುತವಾಗಿ ತಿಳಿದುಬಂದಿದೆ.

LATEST NEWS

ಅಕ್ಕಿಯ ಚೀಲ [illegible] ತಿಳಿಸಿ

ಸ್ವಂ. ಸು. ಪ್ರೋ[illegible] ಬೆಂಗಳೂರು ೨೫

[illegible] ಗಳಲ್ಲಿ ವಿಪರೀತ ಕಳ್ಳತನವಾಗುತ್ತಿದೆ. ಮಾ ಅನೇಕ ಜನ ಕೆಲವರು ಆಹಾರ ಪದಾರ್ಥಗಳ ಸಂಗ್ರಹಕ್ಕೆ ದೂರು ಕೊಟ್ಟಿರುವರು. ಹಾಗಿರುವ ದಕ್ಕೆ ಕೆಲವರು ಕೂಡಲೇ ತಾವು ಕೊಂಡ ವಿಷಯ ಅಥವಾ ಅಂಗಡಿಗೆ ಸುದ್ದಿ ತಿಳಿಸಿದರೆ ಆ ಮಾಲು ಮೇಲಿನ ಗುರುತನ್ನು ತಿಳಿಸಿದವರನ್ನು ಹಿಡಿದು ಶಿಕ್ಷಿಸಿ ವಸೂಲಿ ಅಕ್ಕಿಯನ್ನು ಸರ್ಕಾರಕ್ಕೆ ಒಪ್ಪಿಸಬೇಕೆಂದು [illegible] ಪ್ರಕಟಣೆ ಹೊರಡಿಸಿದ್ದಾರೆ.

ಪಟೇಲ ಕೇಡಿಗೆ ಶಿಕ್ಷೆ

ಮೈಸೂರು ೨೫

ಕೃಷ್ಣಪ್ಪ [illegible] ಪಟೇಲ ಕೇಡಿಯ ಬಸ [illegible]. [illegible] [illegible] [illegible] [illegible] [illegible] [illegible] ತಿಂಗಳ ಶಿಕ್ಷೆ ವಿಧಿಸಿದ್ದಾರೆ.

[illegible]

[illegible]

ಕಾಂಗ್ರೆಸ್ ಮುಖಂಡರ ಪ್ರವಾಸ

ಸ್ವಂ. ಸು.] ಅರಸೀಕೆರೆ ೨೪

೨೨ ನೇ ಶನಿ ಕಾಂಗ್ರೆಸ್ ಮಾಜಿ ಅಧ್ಯಕ್ಷರಾದ ಶ್ರೀ ಹೆಚ್. ಸಿ. ದಾಸಪ್ಪನವರು ಬೆಂಗಳೂರಿನಿಂದ ಅಲ್ಲಿಂದ ಮಧ್ಯಾಹ್ನ ... ಗೆ ... ಶ್ರೀಗಳಾದ ಹೆಚ್. ... ಮತ್ತು ಲಕ್ಷ್ಮಪ್ಪಗೌಡ ... ಕ್ಕೆ ಪ್ರಯಾಣಮಾಡಿ ... ದೊಡ್ಡ ಬಹಿರಂಗ ಸಭೆಯಲ್ಲಿ ... ಆಹಾರ ಅಭಾವ ಮತ್ತು ... ಕಾಂಗ್ರೆಸ್ಸಿಗೆ ಬೆಂಬಲ ... ಅಗತ್ಯವನ್ನೂ ವಿವರಿಸಿದರು. ... ಮಾರನೆ ಬೆಳಿಗ್ಗೆ ೬ ಗಂಟೆಗೆ ... ಸೇರಿದರು. ಅಲ್ಲಿಗೆ ಶ್ರೀ ... ಬಳ್ಳಾರಿ ಸಿದ್ದಮ್ಮನವರು ಈ ಮೊದಲೇ ಶ್ರೀ ಡಿ. ವಿ. ರಾಮಸ್ವಾಮಿಗಳ ಜೊತೆಯಲ್ಲಿ ಬಂದಿದ್ದರು. ಶ್ರೀ ಡಿ ವಿ ರಾಮಸ್ವಾಮಿಗಳು ಮುಖಂಡರಿಗೆ ಅಲ್ಲಿ ಸಿಂಗ್ರಿ ... ಕಾಂಗ್ರೆಸ್ ಪ್ರಥಮ ... ತೋರಿಸಿದರು. ಅತಿಥಿಗಳು ... ಶ್ರೀ ಡಿ. ವಿ. ರಾಮಸ್ವಾಮಿಗಳನ್ನು ವಂದಿಸಿದರು. ಇಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಶ್ರೀಮತಿ ಬಳ್ಳಾರಿ ಸಿದ್ದಮ್ಮನವರು, ಹಾರನಹಳ್ಳಿಯ ಜನರು ಕಾಂಗ್ರೆಸ್ಸಿಗಾಗಿ ಮಾಡಿರುವ ತ್ಯಾಗ ... ತ್ಯಾಗವೀರರನ್ನು ವಂದಿಸಿದರು. ಶ್ರೀ ದಾಸಪ್ಪನವರು ಹಾರನಹಳ್ಳಿಯಂತೆ ಮೈಸೂರುದೇಶವು ಮುಂದೆಬಂದರೆ ದೇಶದ ಕಲ್ಯಾಣವು ಜಾಗ್ರತೆ ಪ್ರಾಪ್ತವಾಗುವುದೆಂದು ಹೇಳಿದರು.

ನಂತರ ರಾತ್ರಿ ೧೧ ಗಂಟೆಗೆ ಅರಸೀಕೆರೆ ... ಶ್ರೀ ಡಿ. ವಿ. ರಾಮಸ್ವಾಮಿಗಳ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆ ನಡೆಯಿತು. ಶ್ರೀ ಚನ್ನಕೃಷ್ಣಯ್ಯನವರು ಕಾಂಗ್ರೆಸ್ಸಿನವರು ... ಬಂಧವಾಗಿ ... ಬಡವರಿಗೆ ಕೊಡಿಸಿದ ವಿಚಾರವನ್ನೂ, ಶ್ರೀ ಜನರಲ್‌ಸಿಂಗರು ಆರಸೀಕೆರೆಯಲ್ಲಿ ಆಹಾರದ ಹಂಚಿಕೆಯನ್ನು ಎಷ್ಟರಮಟ್ಟಿಗೆ ಶಿಸ್ತು ಮತ್ತು ಪ್ರಮಾಣಿಕತೆಯಿಂದ ನಿರ್ವಹಿಸಿಯಿಂಬುದನ್ನು ವಿವರಿಸಿದರು. ಶ್ರೀ ರಾಮಚಂದ್ರರಾಯರು ಕಾಂಗ್ರೆಸ್ಸಿನ ಸ್ವಾತಂತ್ರ್ಯ ಧ್ಯೇಯವನ್ನು ಸಾಧಿಸುವುದು ಪ್ರಸಂಗಾನುಸಾರವಾಗಿ ಒದಗುವ ಸಂಘ ಚಟುವಟಿಕೆಗಳಲ್ಲಿ ಭಾಗವಹಿಸಿ, ಜನಸಮುದಾಯಕ್ಕೆ ಸಾಧ್ಯವಾಗಬಹುದಾದ ಸೇವೆಸಲ್ಲಿಸುತ್ತಾ ಮುಂದುವರಿಯುತ್ತಿರುವುದನ್ನು ವಿವರಿಸಿ ... ಉಮೇದುವಾರರಿಗೆ ಬೆಂಬಲವನ್ನು ಕೋರಿದರು. ಶ್ರೀ ದಾಸಪ್ಪನವರು ೫ ವರ್ಷಗಳಿಂದ ಮೈಸೂರು ಕಾಂಗ್ರೆಸ್ ಮಾಡುವ ಸೇವೆಯಲ್ಲಿ ಮಹಾತ್ಮರ ... ಮೈಸೂರು ಕಾಂಗ್ರೆಸ್‌ಗೆ ದೊರೆತ ... ಮುಖಂಡತ್ವ ಮತ್ತು ಬೆಂಬಲವನ್ನು ವಿವರಿಸಿ ದೇಶದ ಒಗ್ಗಟ್ಟನ್ನು ... ಸರ್ವವಿಧದಲ್ಲಿಯೂ ... ಹಮೇಶಂದೂ, ಜುನಾವಣೆಯ ... ಕೋಮುವಾರ ಭಾವನೆ ... ಬೇಕೆಂದೂ ಮನಃಪೂರ್ವಕ ... ಮಧ್ಯರಾತ್ರಿ ... ಸಭೆಯು ಮುಕ್ತಾಯವಾಯಿತು.

Edited printed and published by R. Nagarajan, at the Press D Sub... Mysore.

ದಿವಾನರ ಆಗಮನ

ಸ್ವಂ.ಸು.] ಬೆಂಗಳೂರು ೨೪

ದೆಹಲಿಗೆ ಪ್ರಯಾಣ ಬೆಳಸಿದ್ದ ದಿವಾನರಾದ ಪ್ರಧಾನ ಶಿರೋಮಣಿ ಶ್ರೀ ಎನ್. ಮಾಧವರಾಯರೂ ಅವರೊಡನೆ ಹೋಗಿದ್ದ ಶ್ರೀ ಪಿ ಹೆಚ್. ಕೃಷ್ಣರಾಯರೂ ಮೊನ್ನೆ ಬೆಂಗಳೂರಿಗೆ ವಾಪಸು ಬಂದರು.

ಮೈಸೂರು ವಿದ್ಯುತ್ ಕಛೇರಿಗೆ ಮಿ॥ ಇಮಾಂರ ಭೇಟಿ

ಪಬ್ಲಿಕ್ ವರ್ಕ್ಸ್ ಸಚಿವರಾದ ಮಿ॥ ಜೆ. ಎಂ. ಇಮಾಂರವರು ಇಂಜನೀಯರುಗಳಾದ ಶ್ರೀ ನರಸಿಂಹಯ್ಯ, ಶ್ರೀ ಸಿ. ಆರ್ ಅಯ್ಯಂಗಾರ್ ಮತ್ತು ಮೈಸೂರು ವಿದ್ಯುತ್ ಶಾಖೆಯ ಶ್ರೀ ಹೆಚ್. ವಿ. ನಾರಾಯಣರಾವ್ ಇವರುಗಳೊಡನೆ ಶನಿವಾರ ಉದಕಮಂಡಲವನ್ನು ತಲುಪಿ ಮೊನ್ನೆ ಅಲ್ಲಿನ ಮೈಸೂರು ಹೈಡ್ರೊ ಎಲೆಕ್ಟ್ರಿಕ್ ಕಾರ್ಯಾಲಯಕ್ಕೆ ಭೇಟಿಕೊಟ್ಟು ಅಲ್ಲಿನ ಅಧಿಕಾರಿಗಳೊಡನೆ ಮಾತುಕತೆ ನಡೆಸಿದರು.

ಸನಾತನ ಪಡಿತರ ಪ್ರಮಾಣ

ಪಡಿ ಪದ್ಧತಿ ಜಾರಿಯಲ್ಲಿರುವ ಪ್ರದೇಶದಲ್ಲಿ ವಾಸವಾಗಿರುವ ಜಮೀನುದಾರರಿಗೂ ಸಹ ಆಯಾ ಪ್ರದೇಶದಲ್ಲಿ ಜಾರಿಯಲ್ಲಿರುವ ಕನಿಷ್ಟತರ ಪಡಿತರದ ಪ್ರಮಾಣದಲ್ಲೇ ದವಸ ಧಾನ್ಯಗಳ ಹಂಚಿಕೆ ನಿರ್ಧರಿಸಲಾಗುವುದೆಂದು ಸಂಸ್ಥಾನದ ಧಾನ್ಯ ಸಂಗ್ರಹ ಅಜ್ಞೆಗೆ ತಿದ್ದುಪಡಿಯೊಂದು ಪ್ರಕಟವಾಗಿದೆ.

ಆರೋಗ್ಯ ಮಂತ್ರಿಗಳು

ಸ್ವಂ.ಸು.] ಚಿಕ್ಕಮಗಳೂರು ೨೩

ಸ್ಥಳೀಯ ಸಂಸ್ಥೆಗಳ ಮಂತ್ರಿಯವರಾದ ಗುಂಡಪ್ಪಗೌಡರು ೨೦ ನೇ ತಾ॥ ಗುರುವಾರ ಈ ಊರಿಗೆ ದಯಮಾಡಿಸಿದರು. ದಾರಿಯಲ್ಲಿ ಈ ತಾಲ್ಲೂಕಿನ ವಸ್ತಾರೆ ಹಳ್ಳಿಯಲ್ಲಿ ಕಸಬಾ ಹೋಬಳಿ ಪಂಚಾಯ್ತಿಗಳ ಪರವಾಗಿ ಅವಲ್ದಾರ್ ಪ್ರೆಸಿಡೆಂಟ್ ಶ್ರೀ ಎಂ. ಪುಟ್ಟಯ್ಯನವರು ಅಭಿನಂದನಾ ಪತ್ರಿಕೆಯನ್ನು ಒಪ್ಪಿಸಿದರು. ಈ ಹೋಬಳಿಯ ಮೈಮಂ ಸ್ಕೂಲ್ ಮಾಸ್ಟರುಗಳು ಗ್ರಾಮ ಸುಧಾರಣೆಯ ವಿಚಾರದಲ್ಲಿ ಒಂದು ನಾಟಕವನ್ನು ಆಡಿದರು. ವಸ್ತಾರೆ ಹಳ್ಳಿಯಲ್ಲಿ ಒಂದು ಪುಸ್ತಕ ಭಂಡಾರವು ತೆರೆಯಲ್ಪಟ್ಟಿತು. ಮಂತ್ರಿಯವರು ಸೂಕ್ತ ರೀತಿಯಲ್ಲಿ ಹಳ್ಳಿಗರಿಗೆ ತಕ್ಕ ಉಪದೇಶವನ್ನು ಮಾಡಿದರು. ಸಾಯಂಕಾಲ ಚಿಕ್ಕಮಗಳೂರು ಪುರಭವನದಲ್ಲಿ ಇಲ್ಲಿನ ಮುನಿಸಿಪಾಲಿಟಿಯವರು ಒಂದು ಅಭಿನಂದನಾ ಪತ್ರಿಕೆಯನ್ನು ಅರ್ಪಿಸಿ ಈ ಊರಿನಲ್ಲಿ ಬೇಸಿಗೆಯಲ್ಲಿ ಕುಡಿಯುವ ನೀರಿನ ವಿಚಾರವಾಗಿರುವ ತೊಂದರೆಗಳನ್ನು ತಿಳಿಸಿದರು. ಮಂತ್ರಿಗಳು ತಮ್ಮ ಕೈಲಾದ ಮಟ್ಟಿಗೆ ತೊಂದರೆಯನ್ನು ನಿವಾರಿಸುವುದಕ್ಕೆ ತಕ್ಕ ಕ್ರಮವನ್ನು ಕೈಕೊಳ್ಳುತ್ತೇವಾಗಿ ಭರವಸೆಯಿತ್ತರು.

ನಿಧನ

ರಾಜಧಾನಿಯ ಸಿಟಿ ಕೋ-ಆಪರೇಟಿವ್ ಬ್ಯಾಂಕಿನ ಅಕೌಂಟೆಂಟರಾಗಿದ್ದ ಶ್ರೀ ಎ ಎಲ್. ನರಸಿಂಹಯ್ಯನವರು ಮೊನ್ನೆ ರಾತ್ರಿ ತಮ್ಮ ೪೫ ನೇ ವಯಸ್ಸಿನಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರ ಗೌರವಾರ್ಥವಾಗಿ ಬ್ಯಾಂಕಿಗೆ ನಿನ್ನೆ ರಜ ಕೊಡಲಾಗಿತ್ತು. ಭಗವಂತನು ದಿವಂಗತರ ಆತ್ಮಕ್ಕೆ ಶಾಂತಿಯನ್ನೀಯಲಿ.

ಹಿಂದೆ ಶಿವಮೊಗ್ಗೆಯಲ್ಲಿ ಸೇರಿದ್ದ ಅಖಿಲ ಕರ್ನಾಟಕ ಆಯುರ್ವೇದ ಸಮ್ಮೇಳನಕ್ಕೂ ಗುಂಟೂರು, ಕಾಶಿ ನಾಡುಗಳಲ್ಲಿ ನಡೆದಿದ್ದ ಅಖಿಲ ಭಾರತೀಯ ಅನುಸಂಧೀಯ ಆಯುರ್ವೇದೀಯ ವೈದ್ಯರ ಸಮ್ಮೇಳನಗಳಿಗೂ ಅಧ್ಯಕ್ಷರಾಗಿದ್ದ ಅಲ್ಲದೆ "ಪರ್ಸನಲ್ ಹೈಜಿಯನ್" ಎಂಬ ಪ್ರಸಿದ್ಧ ಇಂಗ್ಲೀಷ್ ಗ್ರಂಥಕರ್ತರಾದ ಡಾ॥ ಎಂ. ಆರ್. ಸ್ವಾಮಿಯವರು ಬೆಂಗಳೂರು ಬಸವನಗುಡಿಯಲ್ಲಿನ ತಮ್ಮ ಸ್ವಗೃಹದಲ್ಲಿ ಮೊನ್ನೆ ರಾತ್ರಿ ನಿಧನರಾದರು. ವಯಸ್ಸು ೫೬ ವರ್ಷವಾಗಿತ್ತು. ಇವರ ನಿಧನದಿಂದ ಆಯುರ್ವೇದ ಜಗತ್ತಿಗೆ ನಷ್ಟವುಂಟಾಗಿದೆ.

ಕಾರಿಗೆ ಸಿಕ್ಕಿ ಮರಣ

ಮಿಸೆಸ್ ಮಾರ್ಗರೆಟ್ ಸ್ಮಿತ್ ಎಂಬಾಕೆ ದಂಡಿನ ಕಛೇರಿ ರಸ್ತೆಯಲ್ಲಿ ಬೈಸಿಕಲ್ ಮೇಲೆ ಮೊನ್ನೆ ಹೋಗುತ್ತಿದ್ದಾಗ ಕಾರೊಂದು ಡಿಕ್ಕಿ ಹೊಡೆಯಿತಾಗಿ ಆಕೆ ಅದರ ಚಕ್ರಕ್ಕೆ ದೊರಕಿ ಎಸೆಯಲ್ಪಟ್ಟು ಮೃತಳಾದಳೆಂದು ವರದಿಯಾಗಿದೆ.

ರೇಷನ್ ಆಜ್ಞೆ ತಿದ್ದುಪಾಡು

ರೇಷನ್ ಗಾಡುಗಳನ್ನು ಬೆಳೆಸಿ, ಕಾರ್ಡುಗಳೊಂದು ಬರುವವರು, ಮೊದಲೇ ಕಂಟ್ರೋಲಿನಿಂದ ಅಪ್ಪಣೆ ಪಡೆದಿರುವವರು ವಿನಹ ಇನ್ನುಳಿದವರಾರೂ ರೇಷನ್ ಗೂಡುಗಳನ್ನು ಇಟ್ಟುಕೊಳ್ಳಕೂಡದೆಂದು ಸರ್ಕಾರದವರು ಕರ್ಬೋ ಕಂಟ್ರೋಲ್ ಆಜ್ಞೆಯಲ್ಲಿ ತಿದ್ದುಪಾಡುಮಾಡಿದ್ದಾರೆ.

ಬೇರೊಬ್ಬರ ಹೆಸರಿನಲ್ಲಿ ಎಲೆಕ್ಷನ್ ಪ್ರಕಟಣೆ

ಹಾಸನ ಜಿಲ್ಲಾ ಬೋರ್ಡು ಚುನಾವಣೆಯಲ್ಲಿ ಅರಸೀಕೆರೆ ತಾಲ್ಲೂಕಿಗೆ ಕಾಂಗ್ರೆಸ್ ಟಿಕೆಟ್ ಮೇಲೆ ನಿಂತಿರುವವರಿಗೆ ಓಟು ಕೊಡಿರೆಂದು ತುಮಕೂರು ವೀರಶೈವ ಸಮಾಜದ ಹೆಸರಲ್ಲಿ ಪ್ರಕಟಪತ್ರಿಕೆಯೊಂದು ಹೊರಟು ಅರಸೀಕೆರೆಯಲ್ಲಿ ಹಂಚಲ್ಪಟ್ಟಿದೆಯೆಂದೂ ಅದನ್ನು ತುಮಕೂರು ವೀರಶೈವ ಸಮಾಜದವರು ಹೊರಡಿಸಿಲ್ಲವೆಂದೂ ತಿಳಿದುಬಂದಿದೆ.

ವೈಸ್ರಾಯರು ಮುಂಬೈಯಲ್ಲಿ

ವೈಸರಾಯ್ ವೇವಲ್‌ರವರು ಪತ್ನೀಸಮೇತರಾಗಿ ಮೊನ್ನೆ ವಿಮಾನ ಮೂಲಕ ಮುಂಬೈ ನಗರವನ್ನು ಸೇರಿ ಅಲ್ಲಿ ಬೆಂಕಿ ಅನಾಹುತಕ್ಕೀಡಾದ ಸ್ಥಳಗಳನ್ನು ಪರಿಶೀಲಿಸಿದರು.

ದುರ್ಘಟನೆ ದೃಶ್ಯ

ಆ ಸಮಯದಲ್ಲಿ ಅವರು ಐದಂತಸ್ತಿನ ಮನೆಯೊಂದು ನೆಲಸಮವಾಗಿಹೋಗಿದ್ದುದನ್ನು ಕಂಡರು. ಬಟ್ಟೆ ಬರೆ, ಪುಸ್ತಕ, ಪತ್ರ, ಟ್ರಂಕುಗಳು ಇತ್ಯಾದಿ ವಸ್ತುಗಳಲ್ಲಿ ಬಿದ್ದಿದ್ದವು. ಕೆಲವು ಕಡೆ ಚಿನ್ನದ ಇಟ್ಟಿಗೆಗಳೂ ಸಿಕ್ಕವು. ಬಂದರು ಪ್ರದೇಶದಲ್ಲಿನ ಕೆಲವು ಸ್ಥಾನಗಳಲ್ಲಿ ಉರಿ ಆಡುತ್ತಲೇ ಇತ್ತು. ಬೆಂಕಿ ಆರಿಸುವವರು ಇನ್ನೂ ಕೆಲಸ ಮಾಡುತ್ತಲೇ ಇದ್ದರು.

ಸಿಕ್ಕರ ಅಸಹಕಾರ

ಪಂಜಾಬಿನಲ್ಲಿ ಮುಸ್ಲಿಂ ಲೀಗ್ ಮಂತ್ರಿಮಂಡಲಕ್ಕೆ ಸಿಕ್ಕರು ಸೇರುವುದಿಲ್ಲವೆಂದೂ ಅದಕ್ಕೆ ಯಾವ ವಿಧದಲ್ಲೂ ಸಹಕರಿಸುವುದಿಲ್ಲವೆಂದೂ ಪಂಜಾಬಿನ ಎಲ್ಲಾ ಸಿಕ್ ಪಂಗಡಗಳ ಮುಖಂಡರೂ ಅಲ್ಲಿನ ಡೆವಲಪ್‌ಮೆಂಟ್ ಮಂತ್ರಿ ಸರ್ದಾರ್ ಬಲದೇವಸಿಂಗ್‌ರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ನಿರ್ಣಯಿಸಿರುವರು.

ರಾಷ್ಟ್ರ ಪ್ರತಿನಿಧಿ ಸಮ್ಮೇಳನ

ನಿನ್ನೆಯಿಂದ ಲಂಡನ್ನಿನಲ್ಲಿ ಗಳ ರಾಷ್ಟ್ರಗಳ ಪ್ರತಿನಿಧಿಗಳ ಸಮ್ಮೇಳನ ಆರಂಭವಾಗಲೇಬೇಕಾಗಿತ್ತು. ಹೊಸ ಉಬ್ಬರವನ್ನು ಹೇಳುವ ಸಲುವಾಗಿ ಸಮ್ಮೇಳನ ನಡೆದಿದೆ. ವ್ಯಾಪಾರ, ಹಣ, ಬ್ಯಾಂಕಿಂಗ್ ಸಾಲದ ವ್ಯವಸ್ಥೆ ಮೊದಲಾದ ವಿಷಯಗಳು ಚರ್ಚೆಯಾಗುವುವು. ಈ ಸಮ್ಮೇಳನದಲ್ಲಿ ಇಂಡಿಯಾ, ಬ್ರಿಟನ್ ಸಂಯುಕ್ತ ಸಂಸ್ಥಾನ ಮತ್ತು ಮಧ್ಯಪ್ರಾಚ್ಯದ ಎಲ್ಲ ರಾಷ್ಟ್ರಗಳ ಪ್ರತಿನಿಧಿಗಳೂ ಭಾಗವಹಿಸುವರು.

ಫಿನ್ಲೆಂಡಿನಿಂದ ರಷ್ಯಾ ಷರತ್ತುಗಳ ತಿರಸ್ಕಾರ

ಫಿನ್ಲೆಂಡ್ ಸರ್ಕಾರವು ಸ್ವೀಡನ್ನಿನ ಮೂಲಕ ರಷ್ಯಾಕ್ಕೆ ಉತ್ತರವನ್ನು ಕಳುಹಿಸಿ ರಷ್ಯಾ ಷರತ್ತುಗಳನ್ನು ತಾನು ಅಂಗೀಕರಿಸುವುದಿಲ್ಲವೆಂದು ತಿಳಿಸಿದೆ. ಫಿನ್ಲೆಂಡು ತನ್ನ ಸೈನ್ಯವನ್ನು ಅರ್ಧಕ್ಕಿಳಿಸುವುದಲ್ಲದೆ ೬೦ ಕೋಟಿ ಡಾಲರು ಪರಿಹಾರವನ್ನು ಕೊಡಬೇಕೆಂದು ರಷ್ಯವು ಕೇಳಿತ್ತು. ಫಿನ್ಲೆಂಡ್ ಈಗ ತನ್ನ ಮನೆಗೆ ತಾನು ಯಜಮಾನನಾಗಿಲ್ಲವೆಂದೂ, ಜರ್ಮನರನ್ನು ಓಡಿಸಿ ಫಿನ್ಲೆಂಡಿನ ಸ್ವಾತಂತ್ರ್ಯವನ್ನು ರಕ್ಷಿಸಬೇಕಾಗಿದೆಯೆಂದೂ ರಷ್ಯವು ಹೇಳುತ್ತಿದೆ.

ಸ್ತ್ರೀಯರ ಸೌಖ್ಯಕ್ಕೆ

ತಾ॥ ೧-೧-೧೯೪೪ರಿಂದಲೇ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಟುಮಾಡಿರುತ್ತೇ

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿ ಪುಡಿ

ಉಪಯೋಗಿಸಿ.

ಡಿ. ಪುಟ್ಟಯ್ಯ, ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ಪಿ ಎಸ್.— ಇಲ್ಲಿ ದೇವರಾಜ ಮೊಹಲ್ಲಾ 4 ನೇ ನಂಬರ್ ರೇಷನ್ ಡಿಪೋ ಮತ್ತು ನಮ್ಮ ಸಂತೇಪೇಟೆ ಹೆಡ್ ಆಫೀಸಿನಲ್ಲಿ ಡಿಪೋ 3 ನೇ ನಂಬರ್ ಡಿಪೋ ಇವೆ. ಮಾರಾಟ ಆಗುತ್ತಿದೆ ತೆರೆದಿರುತ್ತೆ

ಈ ಎರಡು ಕಡೆಗಳಲ್ಲೂ ನಿಜವಾದ ಬೆಲೆ ಮೊದಲು ... ಕಾರ್ಡುಗಳಿಗೆ ... ಅನಾವರ ಸಕ್ಕರೆ ಕೊಡುವುದಕ್ಕೆ ಪ್ರಯತ್ನಿಸಿ ... ಸಿಕ್ಕದಿದ್ದರೆ ಕಲ್ಲಕ್ಕರೆ ಕೊಡಲ್ಪಡುತ್ತೆ

ಜಯಪ್ರದವಾದ

3 ನೇ ವಾರ

ವಾಣಿ

ಚಾಮುಂಡೇಶ್ವರಿ ಟಾಕೀಸ್

ಮತ್ತು

ಬೆಂಗಳೂರು ಮೂವಿಲ್ಯಾಂಡ್

ಸಂಪುಟ ೨]　ಬುಧವಾರ ೨೬-೬-೪೪　[ಸಂಚಿಕೆ ೩೩೭

ಎರಡು ಗುಡ್ಡಗಳು — ಜಪಾನರ ವಶ

ಮಿಲಿಟರಿ ಲಾರಿಗೆ ಮದರಾಸ್ ಸಿ. ಎಂ. ಜಿ. ತುತ್ತಾದರು
ಮುಸ್ಸೋಲಿನಿ ಮೋಟಾರಿಗೆ ಬಾಂಬಿನೇಟು

ಲಾರಿ ಅಪಘಾತದಲ್ಲಿ ಸಿ. ಎಂ. ಜಿ. ಮರಣ

ಮದರಾಸ್ ಪೋಸ್ಟ್ ಮಾಸ್ಟರ್ ಜನರಲ್‌ರಾದ ಮಿ|| ಎಫ್ ರಹಮಾನರವರು ನಿನ್ನೆ ದಿನ ಮಿಲಿಟರಿ ಲಾರಿ ಅಪಘಾತಕ್ಕೆ ಗುರಿಯಾಗಿ ಮರಣ ಹೊಂದಿದರು. ಅವರೂ, ಟೆಲಿಗ್ರಾಫ್ ಇಲಾಖೆ ಡೈರೆಕ್ಟರ್ ಮಿ|| ವಾಸನಾಯಕರೂ ರಸ್ತೆಯಲ್ಲಿ ನಿಂತಿದ್ದಾಗ ಮಿಲಿಟರಿ ಲಾರಿಯೊಂದು ರಭಸದಿಂದ ಬಂದು ಅವರಿಗೆ ಬಡಿದು ಉರುಳಿಸಿ ಹೊರಟುಹೋಯಿತು. ಆಸ್ಪತ್ರೆಗೆ ಸಾಗಿಸಲಾಗಿ ಮಿ|| ರಹಮಾನರು ಅಲ್ಲಿ ಸ್ವರ್ಗಸ್ಥರಾದರು. ನಾಯಕರು ಗುಣವಾಗುತ್ತಿದ್ದಾರೆ. ಇದೇ ಸಮಯದಲ್ಲಿಯೇ ಮಿಲಿಟರಿ ಲಾರಿಯೊಂದಕ್ಕೂ ಟ್ರಾಮ್ ಕಾರೊಂದಕ್ಕೂ ಭಾರಿ ಡಿಕ್ಕಿ ಹೊಡೆದು ಟ್ರಾಂ ಡ್ರೈವರಿಗೂ ಇತರರಿಗೂ ವಿಪರೀತ ಗಾಯಗಳಾದವು. ಲಾರಿ ಮತ್ತು ಟ್ರಾಮುಗಳ ಕೆಲವು ಭಾಗಗಳು ಸುಟ್ಟುಹೋದವು. ಗಾಯಗೊಂಡವರು ಆಸ್ಪತ್ರೆಗೆ ಸಾಗಿಸಲ್ಪಟ್ಟರು.

ಲಾರಿಗೆ ಆಹುತಿ

ಮೊನ್ನೆ ಮಧ್ಯಾಹ್ನ ಚಿಕ್ಕಮಗಳೂರು–ಹಾಸನ ರಸ್ತೆಯ ೯೬ ನೇ ಮೈಲಿಕಲ್ಲಿನ ಬಳಿ ಲಾರಿಯೊಂದು ಮರಕ್ಕೆ ಡಿಕ್ಕಿ ಹೊಡೆಯಿತೆಂದೂ ಚಿಕ್ಕಮಗಳೂರಿನ ಪ್ರಸಿದ್ಧ ಕಾಫಿ ಪ್ಲಾಂಟರ್ ಶ್ರೀ ಮಂಜುನಾಥರಾಯರು ಲಾರಿಗೂ ಮರಕ್ಕೂ ನಡುವೆ ಸಿಕ್ಕಿ ಆಕಸ್ಮಿಕವಾಗಿ ಮೃತಪಟ್ಟರೆಂದೂ ತಿಳಿದುಬಂದಿದೆ. ತನಿಖೆ ನಡೆಯುತ್ತಿದೆ.

ಯು ಬೋಟ್ ಪ್ರತಾಪ ಹೆಚ್ಚೇ ಇಲ್ಲ

ತಾವು ಮುಳುಗಿಸುವ ಪ್ರತಿಯೊಂದು ಮಿತ್ರ ವ್ಯಾಪಾರ ನೌಕೆಗೂ ಜರ್ಮನರು ಒಂದಕ್ಕಿಂತ ಜಾಸ್ತಿ ತಮ್ಮ ಯು ಬೋಟುಗಳನ್ನು ಕಳೆದುಕೊಳ್ಳುತ್ತಿರುವರು. ಅಮೆರಿಕನರು ಅಟ್ಲಾಂಟಿಕ್‌ನಲ್ಲಿ ಸಾಗಿಸುತ್ತಿರುವ ನೌಕೆಗಳ ಪೈಕಿ ಕೇವಲ ಶೇಕಡ ಒಂದರಲ್ಲಿ ಅರ್ಧದಷ್ಟನ್ನು ಜರ್ಮನರ ಯು-ಬೋಟುಗಳು ಮುಳುಗಿಸುತ್ತಿವೆ ಅಷ್ಟೆ—ಎಂದು ಅಮೆರಿಕಾ ೧೦ ನೇ ದಳದ ಚೀಫ್ ಆಫ್ ಸ್ಟಾಫ್ ಅಡ್ಮಿರಲ್ ಫ್ರಾನ್ಸಿಸ್ ಎಸ್ ಲೋ ರವರು ಹೇಳಿರುವರು.

ಕೊಹಿಮಾದಲ್ಲಿ ಕದನದ ಸಂಭವ

ಅಸ್ಸಾಂ ಪ್ರದೇಶದಲ್ಲಿ ಇನ್ನು ೬ ವಾರಗಳಲ್ಲಿ ಮಳೆಯು ಜೋರಾಗಿ ಆರಂಭವಾಗುವುದು. ಆದ್ದರಿಂದ ಅಷ್ಟರಲ್ಲಿ ಜಪಾನರು ಬಯಲಿಗೆ ಬಂದಿಳಿದು ಕದನಮಾಡಬೇಕು, ಇಲ್ಲದಿದ್ದರೆ ಬೆಟ್ಟಗುಡ್ಡಗಳಲ್ಲಿ ೫ ತಿಂಗಳ ಕಾಲ ಕಾದು ಕುಳಿತಿರಬೇಕು. ಇಂಫಾಲನ್ನು ಸುತ್ತುಗಟ್ಟುವುದೇ ಅವರ ಇಂದಿನ ಗುರಿಯೆಂದು ಕಾಣುತ್ತದೆ. ಇನ್ನೆರಡು ವಾರಗಳಲ್ಲಿ ಕೊಹಿಮಾ ರಂಗದಲ್ಲಿ ಭಾರಿ ಕದನಗಳು ಸಂಭವಿಸಬಹುದು.

ಚಾಂಗ್ಶಾ ನಗರಕ್ಕಾಗಿ ಜಪಾನರ ಹೋರಾಟ

ಹೊಸದಿ ನದಿಯ ತೀರದಲ್ಲಿರುವ ಚಾಂಗ್ಶಾ ನಗರವನ್ನು ಪ್ರಬಲ ಪಡೆಯೊಂದಿಗೆ ಜಪಾನರು [illegible] ಕಬಳಿಸಿದ್ದಾರೆ. ನಾನಾ ಕಡೆಗಳಲ್ಲಿ ಯುದ್ಧ ನಡೆಯುತ್ತಿದೆ. ಚಾಂಗ್ಶಾ ಪತನದ ಬಗ್ಗೆ [illegible] ಗ್ರಾಮಗಳ ಸ್ಥಿತಿ [illegible].

ಮುಸೋಲಿನಿ ಕಾರಿಗೆ ಬಾಂಬು

ಮುಸೋಲಿನಿಯು ಫ್ಯಾಸಿಸ್ಟ್ ನಾಯಕರೊಡನೆ ಸಮಾಲೋಚನೆಗಾಗಿ ಕಾರಿನಲ್ಲಿ ಹೋಗುತ್ತಿರುವಾಗ ವಿರೋಧಿ ಜನ ಅವನ ಕಾರಿಗೆ ಗುರಿಯಿಟ್ಟು ಯಾರೋ ಬಾಂಬು ಎಸೆದರೆಂದೂ, ಅದು ಕಾರಿನಿಂದ ಸ್ವಲ್ಪ ದೂರದಲ್ಲಿ ಬಿದ್ದು ಸಿಡಿದು ಯಾರಿಗೂ ಏನೂ ಅಪಾಯ ಒದಗಲಿಲ್ಲವೆಂದೂ ತಿಳಿದುಬಂದಿದೆ.

ಹಿಟ್ಲರ್ ಮುಸೋಲಿನಿ ಭೇಟಿ

ಇಟಲಿ ಮತ್ತು ಜರ್ಮನಿಗೆ ಸಂಬಂಧಿಸಿದ ಮಿಲಿಟರಿ, ರಾಜಕೀಯ ಮತ್ತು ಆರ್ಥಿಕ ವಿಚಾರಗಳ ಬಗ್ಗೆ ಹಿಟ್ಲರ್ ಮತ್ತು ಮುಸೋಲಿನಿ ಕಳೆದ ಎರಡು ದಿನಗಳ ಮಾತುಕತೆ ನಡೆಸಿದರು. ವಿಷಯ ಪ್ರಕಟ ಕೊಡಲ್ಪಟ್ಟಿಲ್ಲ.

ಚರ್ಮ ರವಾನೆ ಹತೋಟಿ

ಕಂಟ್ರೋಲರ ಅಪ್ಪಣೆ ಚೀಟಿ ಇಲ್ಲದ ಯಾರೂ ನಿನ್ನೆ ತಿಂಗಳು ೧೧ ನೇ ತಾರೀಖಿನ ದಿನ ರೈಲುಗಳಲ್ಲಿ ಚರ್ಮ ರವಾನೆ ಮಾಡಕೂಡದೆಂದು ಕೇಂದ್ರ ಸರ್ಕಾರದವರು ಆಜ್ಞೆಯೊಂದನ್ನು ಹೊರಡಿಸಿದ್ದಾರೆ. ಮಿಲಿಟರಿ ಕಾರ್ಯಗಳ ರವಾನೆಗೆ ಇದು ಅನ್ವಯಿಸುವುದಿಲ್ಲ.

ಮದರಾಸ್ ಘಟನೆಗಳ ವಿಚಾರಣೆ

ಮದರಾಸು ಪ್ರಾಂತ್ಯದ ಘಟನೆಗಳ ವಿಚಾರಣೆ ಕಾರ್ಯಭಾರವನ್ನು ಮಿ. ಡಿ. ಆರ್. ಸಿ. ರೀಲಿಯವರು, ಬಹುಮಟ್ಟಿಗೆ ಮುಗಿಸಿದ್ದಾರೆ. ಕೇಂದ್ರ ಸರ್ಕಾರದ ಅಪ್ಪಣೆಯಂತೆ ಸೆರೆ ಅನುಭವಿಸುತ್ತಿರುವ ಕೆಲವರ ವಿಚಾರಣೆ ಮಾತ್ರ ಬಾಕಿ ಇದೆ.

---

೬ ತಿಂಗಳು ಶಿಕ್ಷೆ

ಮೈಸೂರು ೨೬.

ಸಿದ್ಧಯ್ಯ ಎಂಬುವನು ನರಸಿಂಹರಾಜ ಮೊಹಲ್ಲಾದಲ್ಲಿ ೫೬ ಕಳವು ಮಾಡಿದ ಪ್ರಯುಕ್ತ [illegible] ನ್ಯಾಯಾಧೀಶರು ೬ ತಿಂಗಳು ಕಠಿಣ ಶಿಕ್ಷೆ ವಿಧಿಸಿದರು.

ಮನೆಗೆ ಬೆಂಕಿ ಹಚ್ಚಿದರು

[illegible]

LATEST NEWS

ಹೊಸ ಸೇವಿಂಗ್ಸ್ ಕ್ರಮ

ಸ್ವಂ.ಸು.ಪ್ರೋ.] ಬೆಂಗಳೂರು ೨೬.

ಟಪಾಲು ಇಲಾಖೆಯ ೫ ವರ್ಷದ ನ್ಯಾಷನಲ್ ಸೇವಿಂಗ್ಸ್ ಸರ್ಟಿಫಿಕೇಟುಗಳನ್ನು ಹೆಚ್ಚು ಜನರಿಗೆ ತಲುಪಿಸಲು ಸರ್ಕಾರದವರು ಒಂದು ಹೊಸ ಯೋಜನೆಯನ್ನು ಮಂಜೂರು ಮಾಡಿದ್ದಾರೆ. ಜನರು ತಮ್ಮ ಹಣವನ್ನು ಕೊಡಲು ಬರುವ ಸರ್ಕಾರಿ ಸ್ಥಳಗಳನ್ನು ... ಸುಲಭವಾದ ಸೌಕರ್ಯಗಳನ್ನು ... ಸಂಘಗಳ ಏಜೆಂಟರು ... ಬೆಂಗಳೂರು, ಮೈಸೂರು, ಶಿವಮೊಗ್ಗ ಮತ್ತು ಚಿತ್ರದುರ್ಗ ನಗರಗಳಲ್ಲಿ ಈ ಕೆಲಸಕ್ಕೆ ಏಜೆಂಟರಾಗಿ ಕೆಲಸಮಾಡಲಿಷ್ಟಪಡುವವರು ಅರ್ಜಿಗಳನ್ನು ... ಕಳುಹಿಸಿಕೊಳ್ಳಬಹುದು. ... ಶೇಕಡ ಎರಡೂವರೆಯಂತೆ ಕಮೀಷನ್ ಕೊಡಲ್ಪಡುವುದು.

ಧಾನ್ಯ ಮಾರಾಟ ಬೆಲೆ

ಸಾರ್ವಜನಿಕರ ಉಪಯೋಗಕ್ಕಾಗಿ ಆಹಾರ ಧಾನ್ಯಗಳನ್ನು ಸರ್ಕಾರಿ ಗೋಡೌನುಗಳಿಂದ ಚಿಲ್ಲರೆ ವರ್ತಕರುಗಳಿಗೆ ಯಾವ ದರದಲ್ಲಿ ಕೊಡಬೇಕೆಂಬ ಬಗ್ಗೆ ಕೆಲವೆಡೆಗಳಲ್ಲಿ ಸಂದೇಹಗಳಿದ್ದವು. ಏಪ್ರಿಲ್ ೬ ನೇ ತಾರೀಖಿನ ಗೆಜೆಟ್ಟಿನಲ್ಲಿ ಪ್ರಕಟವಾಗಿರುವ ಪಟ್ಟಿಯ ದರಗಳಿಗಿಂತ ಶೇಕಡ ... ಹೆಚ್ಚು ... ಸರ್ಕಾರಿ ಗೋಡೌನುಗಳಿಂದ ಚಿಲ್ಲರೆ ವರ್ತಕರು ಧಾನ್ಯಗಳನ್ನು ತೆಗೆದುಕೊಳ್ಳಲು ... ವೆಚ್ಚ ... [illegible]

ಗರ್ಭಿಣೀ ಸ್ತ್ರೀಯರಿಗೆ ಪಡಿತರ ರೇಷನ್

[illegible]

ದೇವರು ಕೊಟ್ಟರೂ ಪೂಜಾರಿ ಕೊಡ

ಬಂಧನದಲ್ಲಿರುವ ರಾಜಕೀಯ ಕೈದಿಗಳ ... ಸಂಬಂಧಿಕರಿಗೆ ಸರ್ಕಾರದವರು ಅನುಮತಿ ಕೊಟ್ಟಿರುವ ... ಆದರೆ ... ಅನೇಕ ... ಸಂದರ್ಭಗಳಲ್ಲಿ ... ಪೋಲೀಸರು ... ತಿಳಿದುಬಂದಿದೆ.

ಸ್ಕಾಂಡಿನೇವಿಯಾ ಭೂಪಟ ಮುಟ್ಟುಗೋಲು

... ಸ್ಕಾಂಡಿನೇವಿಯಾದ ಭಾರಿ ಭೂಪಟಗಳು ... ಆ ಭೂಪಟಗಳನ್ನು ... ಮುಟ್ಟುಗೋಲು ಹಾಕಿಕೊಂಡಿರುವರು ... [illegible]

೨ ಗುಡ್ಡಗಳು ಜಪಾನರ ವಶ

... ರಸ್ತೆಯಲ್ಲಿ ಜಪಾನರು ಎರಡು ಸಣ್ಣ ಗುಡ್ಡ ಪ್ರದೇಶಗಳನ್ನು ಹಿಡಿದಿರುವರು. ... ಪ್ರದೇಶದಲ್ಲಿ ... ತೀವ್ರವಾದ ಕದನವು ನಡೆಯುತ್ತಿದೆ. ಕೊಹಿಮಾ ... ಇಂಫಾಲ್-ಬಿಷ್ಣುಪುರ ರಸ್ತೆ ... ಸಾಮಾನ್ಯ ಜನರು ... ನಡೆಸಿಕೊಂಡು ಹೋಗುತ್ತಿದೆ.

ಸಂಸ್ಥಾನದ ಆಡಳಿತ ವರದಿ

ಮೈಸೂರು ಸಂಸ್ಥಾನದ ... ವಾರ್ಷಿಕ ವರದಿಯು ಪ್ರಕಟವಾಗಿದೆ ... [illegible]

ಕೈಲ್ಪೆ ಸ್ಟೇಷನ್ನ ತೊಂದರೆ

ಸ್ವಂ.ವ.] ತಿಪಟೂರು ೨೪

ಈ ಊರಿನ ರೈಲ್ವೆ ಸ್ಟೇಷನ್ನಿಗೆ ಟಿಕೆಟು ಗಳ ಕೌಂಟರ್ ನಲ್ಲಿನ ಇರಸ್ತವು ತುಂಬಾ ಕಷ್ಟದ ಕೆಲಸ. ೧ ಬೈಲಿನಿಂದ ಇಳಿದ ಪ್ರಯಾಣಿಕರು ಟಿಕೆಟು ಕೊಟ್ಟು ಹಳಿ ದಾಟಿ ಬರುವಂತಿಲ್ಲ. ಗಾಡಿ ಬಂದಾಗ ಮಾತ್ರ ಎಷ್ಟು ಪಾರ್ಸಲ್ ಬಂದು ಇಳಿಯುತ್ತ ಎಷ್ಟು ಪಾರ್ಸಲ್ ಹಾಕಬೇಕು ಎಂಬದನ್ನು ನೋಡಿಕೊಳ್ಳಬೇಕು. ಟಿವಟು ನೋಡಿಕೊಂಡು ಬರುವವರಿಗೂ ಇಳಿವವರಿಗೂ ವ್ಯವಸ್ಥೆ ಸಿಂತಿರಬೇಕು. ಇಂಥಾ ಕಷ್ಟವಾಗಿರುತ್ತೆ. ಆದ್ದರಿಂದ ರೈಲ್ವೆ ಅಧಿಕಾರಿಗಳು ಪ್ರಜೆಗಳ ಕಷ್ಟವನ್ನು ಪರಿಹಾರ ಮಾಡ ಪ್ರವಸ್ತಿಕ್ಯವಾಗಿ ಒಬ್ಬರ ಟಿಕೆಟ್ ಕಲೆಕ್ಟರನ್ನು ನೇಮಿಸುವುದು ಉತ್ತಮವಾಗಿರತ್ತೆ

ಶಿವಾಜಿ ಜಯಂತಿ

೨೪ ನೇ ತಾ|| ಸೋಮವಾರ ಪ್ರಾತಃ ೫.೩೦ ಗಂಟೆಯಿಂದ ರಾಜಬೀದಿಗಳಲ್ಲಿ ಶಿವಾಜಿ ಮಹಾರಾಜರ ಚಿತ್ರಪಟದ ಉತ್ಸವ ನಡೆಯಿತು. ಸಾಯಂಕಾಲ ೬|| ಗಂಟೆಯಿಂದ ಅಕ್ಕ ಬಾಲಿಕಾ ಪಾಠಶಾಲೆಯಲ್ಲಿ ತಿಪಟೂರು ಟೌನ್ ಮುನಿಸಿಪಲ್ ಪ್ರೆಸಿಡೆಂಟರಾದ ಶ್ರೀ ಪಲ್ಲಾಗಟ್ಟಿ ಅದವಪ್ಪನವರ ಅಧ್ಯಕ್ಷತೆಯಲ್ಲಿ ತಿಪಟೂರು ವರ್ತಕರಾದ ಬಿ. ಸಂಜಪ್ಪನವರ, ಬೆಂಗಳೂರಿನ ಪೌರ ಸಭಾ ಸದಸ್ಯರಾದ ಶ್ರೀ ಟಿ. ಎಲ್. ಗಂಗೋಪಾಧ್ಯಾಯರೂ, ಬೆಂಗಳೂರಿನ ಗವೀಪುರದ ಶ್ರೀ ಪಂಢರೀನಾಥಸ್ವಾಮಿಗಳವರೂ ಸಹ ಶಿವಾಜಿ ಮಹಾರಾಜರವರ ಚರಿತ್ರೆಯನ್ನು ಕುರಿತು ಬಹಳ ಸ್ವಾರಸ್ಯವಾಗಿ ಉಪನ್ಯಾಸ ಮಾಡಿದರು.

ಹರಿಕಥೆ

ತಿಪಟೂರು ಕನ್ನಿಕಾಪರಮೇಶ್ವರಿ ದೇವಸ್ಥಾನದಲ್ಲಿಯೂ, ವೈಶ್ಯಗಾಣಿಗರ ರಾಮ ಮಂದಿರದಲ್ಲಿಯೂ, ಮಂಗಳೂರಿಂದ ಬಂದಿರುವ ಗಾನ ಸಂಪನ್ನ, ದಾಸರು ಭಾಗೀರಥಿಬಾಯಿ ಎಂಬುವರು ೨-೩ ಕಥೆಗಳನ್ನು ನಡೆಸಿದರು. ಅವರ ಹರಿಕಥೆ ಮಾಡುವುದೂ ಮತ್ತು ತಾಳಕ್ಕೆ ತಕ್ಕಂತೆ ಪದ್ಯಗಳನ್ನು ಹಾಡಿಕೊಳ್ಳುತ್ತಾ ಹೇಳುವುದೂ ಸಂತೋಷವನ್ನು ಉಂಟುಮಾಡುವಂತೆ ಇತ್ತು.

ಇಂಫಾಲ್ ಬಳಿ ಕಾಳಗ

ಇಂಫಾಲಿನ ಪೂರ್ವದಿಕ್ಕಿನಲ್ಲೂ ಆಗ್ನೇಯ ದಿಕ್ಕಿನಲ್ಲೂ ಬಿರುಸಾದ ಕದನಗಳಾಗುತ್ತಿವೆಯೆಂದು ವರದಿಯಾಗಿದೆ

ತಿಂಗಳ ಗ್ರಾಸಕ್ಕೆ ಅವಕಾಶ

ಸ್ವಂ.ವ.] ಹೊಳೇನರಸೀಪುರ ೨೪

ಇದುವರೆಗೂ ಹೊಳೇನರಸೀಪುರದ ಟೌನಿನಲ್ಲಿ ಲೈಸನ್ಸಿಂಗ್ ಜಾರಿಗೆಬಂದ ಮೇಲೆ ಟೌನಿನ ಪ್ರಜೆಗಳಿಗೆ ನಿಗದಿಮಾಡಿರುವ ಪ್ರಕಾರ ದಿನಕ್ಕೆ ಪಡಿಭತ್ಯವನ್ನು ಅಳೆಯುತ್ತಿದ್ದರು. ಇದು ಕೊಂಚ ಬದಲಾವಣೆಯಾಗಿ ಬೇಕಾದವರು ಒಂದು ವಾರದ ಆಹಾರ ಪದಾರ್ಥವನ್ನು ಕೊಳ್ಳಬಹುದಾಗಿತ್ತು. ಈಗ ಪೌರ ಸಭಾ ಉಪಾಧ್ಯಕ್ಷರು ಬಹು ಸಾಹಸ ಪಟ್ಟು ಜನಗಳ ಗೋಳನ್ನು ನಿವಾರಿಸಲು, ಯಾರು ಬೇಕಾದರೂ ಒಂದು ತಿಂಗಳ ಗ್ರಾಸವನ್ನು ಪಡೆಯುವಂತೆ ಮಾಡಿರುವರಾಗಿ ತಿಳಿಯಬರುತ್ತೆ.

ಜಿಲ್ಲಾಧಿಕಾರಿಗಳಿಗೆ ಸತ್ಕಾರ

ಹಾಸನ ಜಿಲ್ಲಾಧಿಕಾರಿಗಳಾಗಿದ್ದು ಈಗ ವಿದ್ಯಾ ಇಲಾಖಾ ಕಾರ್ಯದರ್ಶಿಗಳಾಗಿ ವರ್ಗಾಯಿಸಲ್ಪಟ್ಟಿರುವ ಶ್ರೀಯುತ ಎಂ. ಎಸ್. ಹಿರಣ್ಣಯ್ಯನವರಿಗೆ ಸ್ಥಳೀಯ ಪೌರ ಸಭೆಯವರು ಮತ್ತು ಈ ತಾಲ್ಲೂಕಿನ ಗೌರವ ಹೋಬಳಿ ಕೆಲಸಗಾರರಾದ ಶ್ರೀ ಕೆ. ಆರ್. ಕೃಷ್ಣರಾವ್‌ರವರು ಮತ್ತು ಇತರ ಕೆಲವು ಮಹನೀಯರುಗಳು ಸತ್ಕಾರ ಕೂಟಗಳನ್ನು ಏರ್ಪಡಿಸಿದ್ದರು. ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳು ೨ ವರ್ಷದ ಅವಧಿಯಲ್ಲಿ ಎಸಗಿದ ಸೇವಾ ಪ್ರಶಂಸೆಮಾಡಲಾಯಿತು

ಸೀಮೆ ಎಣ್ಣೆ ವ್ಯವಸ್ಥೆ

ಕಳೆದ ೨ ವಾರದಿಂದ ಈ ಊರಿನಲ್ಲಿ ಸೀಮೆ ಎಣ್ಣೆ ಹಂಚುವಿಕೆಯ ವ್ಯವಸ್ಥೆ ಉತ್ತಮವಾಗಿಲ್ಲ. ಇದೂ ಕೂಡ ಪೌರಸಭೆಯವರ ಆಡಳಿತಕ್ಕೆ ಸೇರಿದೆ. ಹೊಸದರಲ್ಲಿ ಅಗಸ ...... ಅಂತಾಗಿದೆ ಪ್ರಜೆಗಳ ಗೋಳು ತಪ್ಪಿದರೆ ಅಷ್ಟೇ ಸಾಕು

ವಾರ್ಷಿಕೋತ್ಸವ

ಹೊಳೇನರಸೀಪುರದ ಮುನಿಸಿಪಲ್ ಹೈಸ್ಕೂಲಿನ ಹಳೇ ವಿದ್ಯಾರ್ಥಿ ಸಂಘದ ಪ್ರಥಮ ವಾರ್ಷಿಕೋತ್ಸವವು ಮೇ ಮಾಹೆ ೩ನೇ ವಾರದಲ್ಲಿ ನಡೆಯಲಿರುತ್ತೆಯಾಗಿ ಕಾರ್ಯದರ್ಶಿಯವರು ತಿಳಿಸುತ್ತಾರೆ

೧ ಸೇರು ಬೆಣ್ಣೆಗೆ ೧ ರೂ.

ಹೊಳೇನರಸೀಪುರದಲ್ಲಿ ಕಳೆದ ವಾರದಿಂದ ಬೆಣ್ಣೆ ಸೇರು ಒಂದು ರೂಪಾಯಿಗೆ ಏರಿದೆ. ಈವಾರ ಇನ್ನೂ ಹೆಚ್ಚುವ ಸಂಭವವಿದೆಯೆಂದು ಗೊತ್ತಾಗಿದೆ. ಇವೆಲ್ಲಾ ಬೆಣ್ಣೆ ತುಂಬುವವರಿಂದ ಆಗುತ್ತಿದೆಯೆಂಬ ವದಂತಿ ಇದೆ. ಇವರ ಕಡೆಗೆ ಅಧಿಕಾರಿಗಳು ನಿಗಾ ಕೊಟ್ಟಂತೆ ಕಾಣುವುದಿಲ್ಲ. ಬೆಲೆಗೆ ಮಿತಿ ಇರಬೇಕಲ್ಲವೆ?

ಕಾರ್ಲ್‌ಸ್ರೂಹ್‌ಗೆ ಏಟು

ಇಟಲಿ ಮತ್ತು ಫ್ರಾನ್ಸ್‌ಗಳಿಗೆ ರೈಲ್ವೆ ಮಾರ್ಗಕೂಡಿರುವ ಕಾರ್ಲ್ ಸ್ರೂಹ್ ನಗರದ ಮೇಲೆ ಬ್ರಿಟಿಷ್ ವಿಮಾನಗಳು ಭಾರಿ ಧಾಳಿ ನಡೆಸಿ ಬಂದಿವೆ. ಅಮೇರಿಕಾ ವೈಮಾನಿಕರು ಮ್ಯೂನಿಚ್ ಮೇಲೆ ಹಾರಿ ಭೀಕರ ಧಾಳಿ ನಡೆಸಿವೆ. ಮ್ಯೂನಿಚ್ ಮೇಲೆ ಧಾಳಿಗೆ ಹೋಗಿದ್ದ ವಿಮಾನಗಳ ಪೈಕಿ ಹಲವು ಶತ್ರು ಏಟಿಗೆ ಸಿಕ್ಕಿ ನಾಶವಾಗಿವೆ

ಕೊಹಿಮಾ ಕೈಬಿಟ್ಟಿಲ್ಲ

ಕೊಹಿಮಾ ಹಿಡಿದ ನ್ಯಾಗಿ ಜಪಾನರು ಹಾಗಾಗಲೇ ಎಂದು ಸರಿ ಪ್ರಕಟಿಸಿದವರಂತೆ. ಆದರೆ ಕೊಹಿಮಾ ಇನ್ನೂ ಮಿತ್ರರ ವಶದಲ್ಲಿಯೇ ಇದೆ

ಕೊಹಿಮಾವಿಗೆ ಸರಬರಾಜು

ಕೊಹಿಮಾ ಬಳಿಯ ಜಪಾನರ ಶಕ್ತಿಯನ್ನು ಮಟ್ಟಹಾಕಲು ಬೇಕಾಗುವ ಸೈನ್ಯ ಸಾಮಗ್ರಿಗಳೆಲ್ಲವೂ ಕೊಹಿಮಾಕಡೆಗೆ ತ್ವರಿತದಿಂದ ಸಾಗಿವೆ. ಪ್ರತಿ ಸ್ಥಾನಗಳ ಮೇಲೆ ಧಾಳಿ ನಡೆಯುತ್ತಿವೆ. ಅಲ್ಲಿನ ಕಣಿವೆಯಲ್ಲಿ ಮಿತ್ರ ಟ್ಯಾಂಕ್ ಪಡೆ ಮುಂದುವರಿಯುತ್ತಿದೆ

ಜರ್ಮನರ ಪ್ರಬಲತೆಗೆ ಪೆಟ್ಟು

ಕಾರ್ಪೇಥಿಯನ್ ಬೆಟ್ಟಗಳ ತಪ್ಪಲಿನಿಂದ ಜರ್ಮನರು ರಷ್ಯನರ ಮೇಲೆ ಪ್ರಬಲ ಆಕ್ರಮಣ ಧಾಳಿ ನಡೆಸುತ್ತಿರುವರು. ಆ ಧಾಳಿಗಳನ್ನೆಲ್ಲಾ ಹಿಮ್ಮೆಟ್ಟಿಸಿರುವುದಾಗಿ ಮಾಸ್ಕೋ ಪ್ರಕಟಣೆ ತಿಳಿಸಿದೆ

ಸೆಬಾಸ್ಟಪೋಲಿನಿಂದ ಓಟ

ಸೆಬಾಸ್ಟಪೋಲ್‌ದಿಂದ ಓಟ ಕೀಳಲು ಜರ್ಮನರು ಹಡಗುಗಳಲ್ಲಿ ಕಪ್ಪುಸಮುದ್ರದಲ್ಲಿ ಹೋಗುತ್ತಿದ್ದಾಗ ರಷ್ಯನರ ವಿಮಾನಗಳು ಅವರ ಮೇಲೆ ಧಾಳಿಮಾಡಿ ೬ ನೌಕೆಗಳನ್ನು ಮುಳುಗಿಸಿರುವವು

೧೧೧ ಜಪಾನ್ ವಿಮಾನ ನಾಶ

ನ್ಯೂಗಿನಿಯ ಉತ್ತರ ತೀರದಲ್ಲಿ ೧೧೧ ಜಪಾನರ ವಿಮಾನಗಳನ್ನು ಮಿತ್ರರು ಹೊಡೆದುರುಳಿಸಿರುವುದಾಗಿ ಅಧಿಕಾರ ಪ್ರಕಟಣೆ ಹೊರಟಿದೆ.

ಯುಕ್ರಲ್ ರಸ್ತೆಯಿಂದ ಅಟ್ಟಲಾಯಿತು

ಇಂಫಾಲ್ ವಾಯುವ್ಯಕ್ಕೆ ೨೦ ಮೈಲಿ ಉದ್ದದ ಇಂಫಾಲ್ ಯುಕ್ರಲ್ ರಸ್ತೆಯಲ್ಲಿದ್ದ ಜಪಾನ್ ಯೋಧರನ್ನೆಲ್ಲಾ ಹೊಡೆದಟ್ಟಲಾಗಿದೆ. ಆ ಪ್ರದೇಶದ ಹೋರಾಟದಲ್ಲಿ ೪೯೦೦ ಜಪಾನರು ಮಡಿದಿರುವರು

ಕಾಂಗ್ರೆಸ್ ಕಛೇರಿ ಶೋಧನೆ

ಅಲಹಾಬಾದಿನಲ್ಲಿನ ಅಖಿಲ ಭಾರತ ಕಾಂಗ್ರೆಸ್ ಸಮಿತಿ ಕಾರ್ಯಾಲಯಕ್ಕೆ ಹಾದ ಪ್ರಮುಖರ ಸ್ಥಾನ ಒಳಹೊಕ್ಕು ಅಲಹಾಬಾದ್ ಪೊಲೀಸರೂ, ನ್ಯಾಯಾಧೀಶರುಗಳೂ ೪ ಗಂಟೆಗಳ ಕಾಲ ಶೋಧನೆ ನಡೆಸಿದರು. ಯಾವುದೋ ಕೆಲವು ಕಾಗದಪತ್ರಗಳಿಗಾಗಿ ಹುಡುಕಲಾಯಿತು. ಏನು ದೊರಕಿತೊ ಗೊತ್ತಾಗಿಲ್ಲ. ಶೋಧನೆ ಮಾಡಿದ ಬಳಿಕ ಬೀಗ ಮುದ್ರೆ ಮಾಡಿಕೊಂಡು ಹಿಂತಿರುಗಿದರೆಂದು ಗೊತ್ತಾಗಿದೆ

ಬೊಂಬಾಯಿ ವರ್ತಕನ ದ್ರವ್ಯಾಪಹರಣ

ಬೊಂಬಾಯಿನ ವರ್ತಕ ಘೋಸಟಿಲಾಲ್ ಭೋಗೀಲಾಲ್‌ದಾ ಎಂಬುವನ ಮನೆಗೆ ಇಬ್ಬರು ಪೋಲೀಸ್ ಮತ್ತು ಮಿಲಿಟರಿ ಉದ್ಯೋಗಾಧಿಕಾರಿಗಳಿಗೆ ಸುಗ್ಗಿ ನೀನು ಶತ್ರುವಿನೊಡನೆ ಸಂಬಂಧವಿಟ್ಟುಕೊಂಡಿರಬಹುದೆಂದು ಅನುಮಾನ ಒಂದಿದೆ. ನಿನ್ನ ಅಂಗಡಿ ತನಿಖೆ ಮಾಡಬೇಕೆಂದು ಹೇಳಿ ಅಂಗಡಿಗೆ ಹೋಗಿ ಅಲ್ಲಿದ್ದ ೬೦ ಸಹಸ್ರ ರೂ. ನಗದನ್ನು ಅಪಹರಿಸಿಕೊಂಡು ಓಡಿಹೋಗಿರುವರೆಂದು ತಿಳಿದುಬಂದಿದೆ.

ಮತ್ತಷ್ಟು ಪರ್ಷಿಯಾ ಬೆಳ್ಳಿ

ಬೆಳ್ಳಿ ಬೆಲೆಯನ್ನು ಒಂದು ಸ್ಥಿತಿ ತಕ್ಕ ತರುವ ಉದ್ದೇಶದಿಂದ ಇಂಡಿಯಾ ಸರ್ಕಾರದವರು ಪರ್ಷಿಯಾದಿಂದ ಮತ್ತಷ್ಟು ಬೆಳ್ಳಿ ಕೊಂಡುಕೊಂಡಿದ್ದಾರೆ

ಇಂಗ್ಲೆಂಡಿನಿಂದ ಯಾರೂ ಹೊರಕ್ಕೆ ಹೋಗಕೂಡದು

ಅತ್ಯಗತ್ಯವಾದ ರಾಷ್ಟ್ರೀಯ ಕೆಲಸಕ್ಕಾಗಿ ಯಾರಾದರೂ ಇಂಗ್ಲೆಂಡಿನಿಂದ ಹೊರಕ್ಕೆ ಹೋಗಬಹುದೇ ವಿನಾ ಇತರರು ಹೋಗಕೂಡದೆಂದು ನಿರ್ಬಂಧವಾಗಿದೆ. ಇದು ತಾತ್ಕಾಲಿಕವಾದುದು. ಮಿಲಿಟರಿ ಕಾರಣಕ್ಕೆ ಎಷ್ಟುಕಾಲ ಅಗತ್ಯವೋ ಅಷ್ಟುಕಾಲ ಮಾತ್ರ ಈ ಆಜ್ಞೆ ಜಾರಿಯಲ್ಲಿರುವುದು.

ದಂಡಯಾತ್ರೆ ಎದುರಿಸಲು ಜರ್ಮನರ ಸಿದ್ಧತೆ

ಮಿತ್ರ ರಾಷ್ಟ್ರಗಳು ಯೂರೋಪ್‌ಮೇಲೆ ಹೂಡಲಿರುವ ದಂಡಯಾತ್ರೆಯನ್ನು ಎದುರಿಸುವುದಕ್ಕಾಗಿ ಜರ್ಮನರು ಡೆನ್ಮಾರ್ಕಿನಲ್ಲಿ ಸಿದ್ಧತೆಗಳನ್ನು ಮಾಡುತ್ತಿದ್ದಾರೆ. ಡೆನ್ಮಾರ್ಕಿಗೂ, ಸ್ವೀಡನ್ನಿಗೂ ಇರುವ ಸಂಬಂಧವನ್ನು ಕತ್ತರಿಸಲಾಗಿದೆ. ರಹಸ್ಯದಿಂದ ಜರ್ಮನರು ತಮ್ಮ ಕೆಲಸಗಳನ್ನು ನಡೆಸುತ್ತಿರುವರು

---

೩ ನೇ ವಾರ

ತಾ. 27-4-44 ರಿಂದ

ಸುಬೇದಾರ - - ಸುಬೇದಾರಿಣಿ

ಎ. ಎಂ. ಚನ್ನಪ್ಪ, ಟಿ. ಆರ್. ರಾಜಕುಮಾರಿ, ಕಾಮನಾಥ ತಿವಾರಿ, ಎಸ್. ಎನ್. ಕೃಷ್ಣನ್-ಟಿ. ಎ. ಮಧುರಂ ಮತ್ತು ಇತರರು

ಪ್ರಭಾತ್ ಟಾಕೀಸ್

SAVE EMPTY

Beer Bottles

THE CHAMUNDI BREWERY,

Post Box 17, MYSORE

Edited, printed and published by A. R. Nagarajan, at the Sadhvi Press, D. Subbaiah Road, Mysore

ಸ್ತ್ರೀ ಯ ರ ಸೌ ಕ ರ್ಯ ಕ್ಕೆ

ಹಾಲಿ ... ಬೆಲೆ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿರುತ್ತೆ

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರ್ಯಾಂಡ್ ಕಾಫಿ ಪುಡಿ

ಉಪಯೋಗಿಸಿ.

ಡಿ. ಪುಟ್ಟಸ್ವಾಮಯ್ಯ, ದಿನಸಿ ಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ಸೂಚನೆ — ಇಲ್ಲಿ ದೇವರಾಜ ಮೊಹಲ್ಲಾ 1 ನೇ ನಂಬರ್ ರೇಷನ್ ಡಿಪೋ ಮತ್ತು ನಮ್ಮ ಸಂತೇಪೇಟೆ ಬ್ರಾಂಚ್ ಆಫೀಸಿನಲ್ಲಿ ಡಿಪೋ 3 ನೇ ನಂಬರ್ ಇವೆರಡೂ ಇದ್ದು ಮಾರ್ಚಿ ಆಗಾಯಿತು ತೆರೆದಿರುತ್ತೆ

೫ ಎಂಡ. ಅಡಿಗೆಗಳಲ್ಲಿ ಸಿಟಿಯ ಜನರ ವೊಹಲ್ಲಾ ರೀಟೇಲ್ ಅಂಗಡಿಗಳಿಗೂ ಸರಬರಾಜು ಮಾಡಿ ಕೊಡುತ್ತೇವೆ. ಪ್ರತಿಯಾಗಿ ಬೂದಾ ಸೇರ ... ಅಪ್ಪಣೆ ಕೊಡಬೇಕು

ಸಂಪುಟ ೬] ಗುರುವಾರ ೨೭—೬—೪೩ [ಸಂಚಿಕೆ ೩೨೦

ಇಂಫಾಲ್ ಬಳಿ —
— ಮಿತ್ರರ ವಿಜಯ

ಹಾಲೆಂಡಿಯಾದಲ್ಲಿ ಜಪಾ ಆಡಳಿತ ಮುಂದುವರಿಯುವುದು
ಮಧುರೆಯಲ್ಲಿ ನೂರು ತಲೆ ಸರ್ಪದ ದರ್ಶನ

ಮೈಸೂರು ಬ್ಲೂಸ್‌ನವರ ಅದ್ಭುತ ವಿಜಯ

ಮೈಸೂರು —

ಮೈಸೂರು ಫುಟ್‌ಬಾಲ್ ಪ್ರೇಮಿಗಳಿಗೆ ನೆನ್ನೆ ದಿನ ನಡೆದ ಪಂದ್ಯವು ಒಂದು ಸ್ವಪ್ನದ ಭೋಜನದಂತಿತ್ತು. ಮೈಸೂರು ಬ್ಲೂಸ್ ಕ್ಲಬ್ಬಿನವರು ಎದುರಾಳಿ ಬೆಂಗಳೂರಿನ ಯಂಗ್‌ಮೆನ್ಸ್ ಕ್ಲಬ್ಬನ್ನು ನೆನ್ನೆ ಸಂಜೆ ಕೆ. ಪಿ. ಸಿ. ಚಿನ್ನದ ಪದಕದ ಪಂದ್ಯದಲ್ಲಿ ಒಂದು ಗೋಲಿನಿಂದ ಸೋಲಿಸಿದರು. ಹಿಂದೆ ಬೆಂಗಳೂರಿನಲ್ಲಿ ನಡೆದ ಎ. ಎಫ್. ಸಿ. ಪಂದ್ಯದಲ್ಲಿ ೨ ಗೋಲಿನ ಅಂತರದಿಂದ ಕ್ಲಬ್ಬನ್ನು ಸೋಲಿಸಿದ್ದರು. ಒಂದೆ ಮಹಾರಾಜಾ ಕಾಲೇಜಿನ ಫುಟ್‌ಬಾಲ್ ಕ್ಯಾಪ್ಟನ್ನರಾಗಿದ್ದ ಶ್ರೀ ವೆಂಕಟನಾರಾಯಣನವರು ಬ್ಲೂಸ್ ಪರವಾಗಿ ಗೋಲನ್ನು ಹೊಡೆದರು. ಫುಟ್‌ಬಾಲ್ ಪ್ರೇಮಿಯೊಬ್ಬರು ಬ್ಲೂಸ್ ಕ್ಲಬ್ಬಿನ ಕ್ಯಾಪ್ಟನ್ನರಾದ ಶ್ರೀ ನಂಜುಂಡಯ್ಯನವರಿಗೆ ಒಂದು ಚಿನ್ನದ ಉಂಗುರವನ್ನು ಬಹುಮಾನವಾಗಿ ಕೊಟ್ಟರು.

ಹರಿಕಥಾ ಕಾಲಕ್ಷೇಪ

ಶ್ರೀ ಸಂತೇಪೇಟೆಯಲ್ಲಿರುವ ಕುಂಚಿಟಿಗರ ಶ್ರೀರಾಮಮಂದಿರದಲ್ಲಿ ಈ ದಿವಸದ ಅಂಗವಾಗಿ ವೇ|| ಬ್ರ|| ಶ್ರೀ ಹರಿಕಥಾ ವಿದ್ವಾನ್ ವಿ. ನಾರಾಯಣ ಶಾಸ್ತ್ರಿಗಳವರಿಂದ ಶ್ರೀಮನ್ನಾರಾಯಣನ ಕಥಾ ರೂಪವಾಗಿ ಪ್ರತಿನಿತ್ಯವೂ ಸಾಯಂಕಾಲ ೬|| ಗಂಟೆಗೆ ನಡೆಯುತ್ತೆ. ಸರ್ವರಿಗೂ ಆಹ್ವಾನವೆಂದು ಮಂದಿರದ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಪ್ರಭುಗಳ ದಾನ

ಭಾರತೀಯ ವೈದ್ಯಶಾಸ್ತ್ರಕಲೆಯ ಯೋಗಕ್ಷೇಮ ಕ್ಲಬ್ಬಿಗೆ ಶ್ರೀಮನ್ಮಹಾರಾಜರವರು ೨ ಸಾವಿರ ರೂಪಾಯಿಗಳನ್ನು ಕರುಣಿಸಿದ್ದಾರೆ.

ಭಂಡಾರಕ್ಕೆ ಬೆಂಬಲ

ಬೆಂಗಳೂರು ಫಂಡು ಫ್ರೂಟ್ ಕಂಪೆನಿಯಲ್ಲಿರುವ ಶ್ರೀ ತಿಮ್ಮಯ್ಯನವರ ಪತ್ನಿ ಶ್ರೀಮತಿ ವರಲಕ್ಷ್ಮೀದೇವಮ್ಮನವರು ಮೈಸೂರು ರಾಮಕೃಷ್ಣಾಶ್ರಮದ ಪುಸ್ತಕ ಭಂಡಾರಕ್ಕೆ ೧೦೦ ರೂ. ಗಳನ್ನು ಉದಾರವಾಗಿ ದಾನ ಮಾಡಿದ್ದಾರೆ.

ಅಕ್ರಮ ಭೋಗ

ನಿನ್ನೆ ಮಧ್ಯಾಹ್ನ ಚಿಕ್ಕಪೇಟೆಯ ಚಿಕ್ಕಣ್ಣ ಎಂಬುವನು ಪಾರ್ವತಮ್ಮ ಎಂಬುವಳೊಡನೆ ಅಕ್ರಮ ಭೋಗ ಮಾಡಿದನೆಂದು ಪೋಲೀಸಿಗೆ ದೂರು ಬಂದು ಅವನ ಮೇಲೆ ಕೇಸ್ ಹೂಡಲಾಗಿದೆ. ಇವರಿಬ್ಬರ ಆದಾಯ [illegible]

ವಿಜಯ ನಗರ ಸ್ಮಾರಕೋತ್ಸವ

[illegible] ವಿಜಯನಗರ ಸ್ಮಾರಕೋತ್ಸವವನ್ನು ನಡೆಸುವ [illegible] ಕಾರ್ಯಕ್ರಮ [illegible]

ಹಾಲೆಂಡಿಯಾ ಆಡಳಿತ ?

ನೆದರ್‌ಲೆಂಡ್ಸ್‌ನ ಸರ್ಕಾರ ಇಂಗ್ಲೆಂಡಿಗೆ ಈ ಹೇಳಿಕೆಯಿತ್ತು ಹಾಲೆಂಡಿಯಾದಲ್ಲಿ [illegible] ಆಡಳಿತ ಮುಂದುವರಿಸಲು [illegible] ಮಾಡುವರು. [illegible]

ಬಿಷ್ಣುಪುರ್ ಬಳಿ ಹೋರಾಟ

ಬಿಷ್ಣುಪುರ್ ಬಳಿ [illegible] ಸಂಪೂರ್ಣ ನಾಶವಾಗಿದೆ [illegible]

ಜರ್ಮನ್ ಸೇನೆ ಬಿಡಾರ

ಜರ್ಮನ್ ಸೈನ್ಯ [illegible] ಸ್ಟೀಡನ್ ಜನರಲ್ [illegible]

ರಕ್ಷಣೆಯಲ್ಲಿ ಸಿಬ್ಬಂದಿಯಿಲ್ಲ

ಮಹಾವಿದ್ಯಾಲಯದ [illegible] ಕಾರ್ಯಕ್ಕೆ [illegible] ವಿದ್ಯಾರ್ಥಿಗಳು [illegible]

ಜಪಾನರ ಮುನ್ನಡೆ

ಚೀನಾದಲ್ಲಿ [illegible] ಜಪಾನರು [illegible] ತಿಳಿದುಬಂದಿದೆ.

ಮಿತ್ರರ ಕೈ ಮೇಲು

[illegible]

ಮಿತ್ರರ ಮುತ್ತಿಗೆಗಳು

[illegible]

ಆಕಾಶದಲ್ಲಿ ೩ ಸೂರ್ಯ

ನಿನ್ನೆ [illegible] ಆಕಾಶದಲ್ಲಿ ೩ ಸೂರ್ಯರನ್ನು ಕಂಡ [illegible] ಸೂರ್ಯನ ಸುತ್ತಲೂ [illegible]

ಇಂಫಾಲ್ ಬಳಿ ಗೆಲುವು

[illegible] ಇಂಫಾಲ್ [illegible] ಜಪಾನರ [illegible]

ಪಂಜಾಬ್ ಮಂತ್ರಿಗೆ ಕೆಲಸ ಹೋಯಿತು

ಪಂಜಾಬ್ [illegible] ಪಂಜಾಬ್ ಗವರ್ನರರು ಕೆಲಸದಿಂದ ತೆಗೆದುಹಾಕಿರುವುದಾಗಿ ನಿನ್ನೆ [illegible] ಪ್ರಕಟವಾಗಿದೆ.

ಇವರು ಮಂತ್ರಿಗಳಾಗಿದ್ದ [illegible] ಅನ್ಯಾಯವಾದ [illegible] ಪ್ರಧಾನಿ [illegible]

ಪೌಲೀಕರ್ ಬಿಡುಗಡೆ

ನಿನ್ನೆ [illegible] ಕಾರ್ಯಕರ್ತರು [illegible] ಗಂಟೆ [illegible]

[illegible]

[illegible]

ಜಪಾನಿ ಪ್ರಧಾನಿ [illegible]

[illegible]

ಕಡಲಾಳದಲ್ಲಿ ಇ-ಬೋಟ್ ಹಾವಳಿ

ಇಂಗ್ಲಿಷ್ ಕಡಲ್ಗಾಲುವೆಯಲ್ಲಿ ಬ್ರಿಟಿಷರ ಮೋಟರ್ ಟಾರ್ಪಿಡೊ ದೋಣಿಯೊಂದನ್ನು ಜರ್ಮನರ ಇ-ಬೋಟ್‌ಗಳು ಮುಳುಗಿಸಿತೆಂದೂ ಜರ್ಮನರ ಇ-ಬೋಟುಗಳಿಗೆ ಗುಂಡು ಹಾರಿಸಿ [illegible] ವರ್ತಮಾನ ಬಂದಿದೆ.

ಸ್ವಿಟ್ಜರ್ಲೆಂಡಿನಲ್ಲಿ ಅಮೆರಿಕನ್ ವಿಮಾನಗಳು

ಸ್ವಿಟ್ಜರ್ಲೆಂಡಿನ [illegible] ಅಮೆರಿಕನ್ ವಿಮಾನ ಒಂದನ್ನು ಸ್ವಿಸ್ ವೈಮಾನಿಕರು [illegible] ಅಮೆರಿಕ [illegible] ವಿಮಾನಗಳು [illegible]

ಅರಕನ್ನಿನಲ್ಲಿ ಜಪಾನರ ಹಿಮ್ಮೆಟ್ಟುವಿಕೆ

ಜಪಾನರು [illegible] ತಿಳಿದು ಬಂದಿದೆ.

ನಾಳೆಗೆ ಸಿದ್ಧವಾಗುವುವೆ ?

[illegible] ಭವನಗಳ [illegible] ತಿಳಿದು ಬಂದಿದೆ.

ಮಕ್ಕಳ ಅಧಿವೇಶನ

ನಿನ್ನೆ ಬೆಂಗಳೂರಿನ [illegible] ಅಧಿವೇಶನವು [illegible]

ಕಟ್ಟ ಕಡೆ ಸುದ್ದಿ

ವಾರ್ತೆ ಇಲಾಖೆಯ ಸಂತಾಪ

ಮೈಸೂರು —

[illegible]

ಸೆಕ್ರೆಟರಿ ರಾಣಿ ಕೋಳು ಸಿನಿಮಕ್ಕೆ ತುತ್ತು

'ಸರ್ಕಸ್ ಕಿಂಗ್' ಚಿತ್ರ ನಿರ್ಮಿಸಲು ಮುಂಬೈ ಭಾರತ್ ಪ್ರೊಡಕ್ಷನ್ಸ್ ಕಂಪೆನಿಯವರು ಇಲ್ಲಿನ ದೇವಾಲಯದ ಸರ್ಕಸ್ ಮೈದಾನದಲ್ಲಿ ಸರ್ಕಸ್ ರಾಣಿ ಪಾತ್ರ ವಹಿಸಿದ್ದ ಪ್ರಿಯರಾಣಿ ಎಂಬ ತರುಣಿಯನ್ನು ಸರ್ಕಸ್ಸಿನ ಸಿಂಹವೊಂದನ್ನೂ ಕೂಡಿಸಿ ಫಿಲಂ ತೆಗೆಯುವ ಸಂದರ್ಭದಲ್ಲಿ ಆ ಸಿಂಹವು ರಾಣಿಯ ಮೇಲೆ ಬಿದ್ದು ಮುಖದ ಸೌಂದರ್ಯವನ್ನು ನಾಶ ಮಾಡಿತೆಂದೂ ಕೂಡಲೇ ಆಕೆಯನ್ನು ರಕ್ಷಿಸಿ ಆಸ್ಪತ್ರೆಗೆ ಸಾಗಿಸಿದರೆಂದೂ ತಿಳಿದುಬಂದಿದೆ.

ಮುಂಬೈ ಸಾವು ೩೬೦

ಬೊಂಬಾಯಿ ಆಸ್ಪತ್ರೆಯ ದುರಂತದ ಪ್ರತ್ಯಕ್ಷವಾಗಿ ಇದುವರೆಗೂ ೩೬೦ ಶವಗಳು ಸಿಕ್ಕಿವೆ. ಇದಲ್ಲದೆ ಪತ್ತೆಯಿಲ್ಲದವರು ಹಲವರು. ಅನಾಹುತ ಪ್ರದೇಶದಲ್ಲಿ ಸಿಲಿಂಡರ್ ಮೋಲ ಎಂಬ ಕಟ್ಟಡ ಮಾತ್ರ ಉಳಿದಿದೆ. ಪುನರುಜ್ಜೀವನಗೊಳಿಸುವುದಕ್ಕೆ ಬೇಕಾಗುವ ಪ್ರಮಾಣದಲ್ಲಿ ಕೊರತೆಯನ್ನು ಪರಿಶೀಲಿಸಲು ಕೇಂದ್ರ ಸರ್ಕಾರದ ಉನ್ನತ ಅಧಿಕಾರಿಗಳು ಬೊಂಬಾಯಿಗೆ ಹೋಗಿರುತ್ತಾರೆ.

ಮುಂಬೈ ಸರ್ಕಾರದ ನೆರವು

ಬೊಂಬಾಯಿ ಬೆಂಕಿ ಅನಾಹುತದಲ್ಲಿ ಸತ್ತ ಸರ್ಕಾರಿ ನೌಕರರ ಕುಟುಂಬ ವರ್ಗಕ್ಕೆ ಬೊಂಬಾಯಿ ಸರ್ಕಾರದವರು ವೇತನ ಕೊಡಲು ನಿಶ್ಚಯಿಸಿದ್ದಾರೆ.

ಬೊಂಬಾಯಿಯಲ್ಲಿ ಮೈಸೂರು ಬ್ಯಾಂಕ್ ಶಾಖೆ

ಬರುವ ತಿಂಗಳು ೩ನೇ ತಾ|| ಬೊಂಬಾಯಿ ಸಂಸ್ಥಾನದ ರಾಜಧಾನಿಯಲ್ಲಿ ಮೈಸೂರಿನ ದಿವಾನರಾದ ಸರ್ ಎಂ. ವಿಶ್ವೇಶ್ವರಯ್ಯನವರಿಂದ ಮೈಸೂರು ಬ್ಯಾಂಕಿನ ಬೊಂಬಾಯಿ ಶಾಖೆ ಪ್ರಾರಂಭೋತ್ಸವ ನೆರವೇರುವುದಾಗಿದೆ.

ಮುಂಬೈ ಯೂನಿವರ್ಸಿಟಿ ಸಲಹೆ ತಿರಸ್ಕೃತ

ಬೊಂಬಾಯಿ ವಿಶ್ವವಿದ್ಯಾನಿಲಯದ ಸೆನೆಟ್ ಸಭೆ ತಿದ್ದುಪಡಿ ಬಾಲಕಿಯರಿಗೋಸ್ಕರವನ್ನು ಪ್ರತ್ಯೇಕವಾಗಿ ಸ್ಥಾಪಿಸಿದ ಸೋಫಿಯಾ ಕಾಲೇಜಿನೊಡನೆ ಸಂಬಂಧ ಕಲ್ಪಿಸಬೇಕೆಂದು ಸರ್ಕಾರಕ್ಕೆ ಸೂಚನೆ ಕೊಟ್ಟಿದ್ದರು. ಆ ಸೂಚನೆಯನ್ನೊಪ್ಪಲು ಸಾಧ್ಯವಿಲ್ಲವೆಂದು ಬೊಂಬಾಯಿ ಸರ್ಕಾರ ತಿಳಿಸಿದೆ.

ಗೌರ್ನರ್ ಹೆಸರಿನಲ್ಲಿ ಜಲಾಶಯ

ಮದರಾಸಿನ ಜಲಾಶಯಕ್ಕೆ 'ಸತ್ಯಮೂರ್ತಿ ಸಾಗರ' ವೆಂಬ ಹೆಸರಿಡಲು ಅಲ್ಲಿನ ಮುನಿಸಿಪಲ್ ಕಾಂಗ್ರೆಸ್ ಪಕ್ಷ ೩ ಬಾರಿ ಪ್ರಯತ್ನಿಸಿ ವಿಫಲಗೊಂಡಿತು. ಅನಂತರ ಅದಕ್ಕೆ 'ಪೂಂಡಿ ಜಲಾಶಯ' ವೆಂಬ ಹೆಸರಿಡಲಾಯಿತು. ಈಗ ಆ ಜಲಾಶಯದ ಹೆಸರನ್ನು 'ಹೋಪ್ ಜಲಾಶಯ' ಎಂದು ಮದರಾಸ್ ಗೌರ್ನರ್ ಸರ್ ಆರ್ಥರ್ ಹೋಪ್‌ರವರ ಜ್ಞಾಪಕಾರ್ಥವಾಗಿಡಬೇಕೆಂದು ಮದರಾಸ್ ಮೇಯರ್ ಸಲಹೆ ಕೊಟ್ಟಿರುವರು.

ಚುನಾವಣಾ ಪ್ರಚಾರ

ನ್ಯಾಷನಲಿಸ್ಟ್ ಪಕ್ಷದ ನಾಯಕರುಗಳಾದ ಶ್ರೀ ಟಿ. ಎಸ್. ರಾಜಗೋಪಾಲ ಅಯ್ಯಂಗಾರ್, ಶ್ರೀ ಕೆ. ಸಿ. ಸುಬ್ಬಣ್ಣ ಮತ್ತು ಶ್ರೀ ಟಿ. ಕೃಷ್ಣಯ್ಯ ಮುಂತಾದವರು ಜಿಲ್ಲಾ ಬೋರ್ಡು ಚುನಾವಣೆಗಳಲ್ಲಿ ತಮ್ಮ ಪಕ್ಷದ ಅಭ್ಯರ್ಥಿಗಳಿಗೆ ಬೆಂಬಲ ಕೊಡುವ ಉದ್ದೇಶದಿಂದ ಇದೇ ೨೮ನೇ ತಾ|| ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲೂ ೨೯ನೇ ತಾ|| ಕೃಷ್ಣರಾಜನಗರ ತಾಲ್ಲೂಕಿನಲ್ಲೂ, ೩೦ನೇ ತಾ|| ನಂಜನಗೂಡು ತಾ|| ನಲ್ಲೂ ಸಂಚರಿಸಿ ಅನೇಕ ಕಡೆಗಳಲ್ಲಿ ಬಹಿರಂಗ ಸಭೆ ನಡೆಸಿ ತಮ್ಮ ಪಕ್ಷದ ಧ್ಯೇಯ, ಕಾರ್ಯಕ್ರಮಗಳನ್ನು ಜನರಿಗೆ ತಿಳಿಸಲು ಹೋಗುವರು.

ಸೆಬಾಸ್ಟಪೋಲ್ ಸಮರ

ಸೆಬಾಸ್ಟಪೋಲ್ ಮೇಲೆ ರಷ್ಯನರು ಆಕ್ರಮಣ ... ಜರ್ಮನಿಯ ... ಹೋಗುತ್ತಿರುವರೆಂದು ... ವಿಫಲವಾಗಿದೆ ... ದೊರೆತಿಲ್ಲವೆಂದು ತಿಳಿದಿದೆ.

ಪಿಗ್ಗಿಂಗ್ ಶಾಸನ ವಜಾ

ದಕ್ಷಿಣಆಫ್ರಿಕಾದಲ್ಲಿ ಭಾರತೀಯರಿಗೆ ವಿರುದ್ಧವಾಗಿ ಬಂದಿದ್ದ ಪೆಗ್ಗಿಂಗ್ ಶಾಸನ ರದ್ದು ಮಾಡಲಾಗಿದೆಯೆಂದು ರಾಯಿಟರ್ ಅಧಿಕೃತ ಸುದ್ದಿ ಬಂದಿದೆಯೆಂದು ಭಾರತ ಸರ್ಕಾರ ತಿಳಿಸಿದ್ದಾರೆ.

ಏಜೆಂಟರು ಬೇಕು

ಮದರಾಸು ಪ್ರಸಿಡೆನ್ಸಿ, ಕೊಡಗು ಜಿಲ್ಲೆ ತಯಾರಾಗಿರುವ ಬಟ್ಟೆಗಳಿಗೆ ಮಂಡ್ಯ, ಹಾಸನ, ಕಡೂರು, ಚಿತ್ರದುರ್ಗ, ಶಿವಮೊಗ್ಗ, ಅರಸೀಕೆರೆ ಮತ್ತು ಬೆಂಗಳೂರು ಸಿಟಿ ಮತ್ತು ಕಂಟೋನ್ಮೆಂಟ್ ಈ ಸ್ಥಳಗಳಲ್ಲಿ ಏಜೆಂಟರಾಗಿ ಕೆಲಸ ಮಾಡುವವರು ಬೇಕಾಗಿದ್ದಾರೆ. ವಿವರಗಳಿಗೆ ಇವರಲ್ಲಿ ವಿಚಾರಿಸಿ:-

ಸ್ವಸ್ತಿಕ್ ಸ್ಟೋರ್ಸ್

ವಾಣಿಪ್ರಕಾಶ್ ಭವನ, ಮೈಸೂರು.

ಚಿತ್ರ ವ್ಯವಹಾರ

ನಿಂದಿಸುವ ಬದಲು ಘನತೆ ಬೆಳಗಿಸಿ

'ಭಕ್ತ ನಂದನಾರ್' ಎಂಬ ತಮಿಳು ಚಿತ್ರ ತೆರೆಗೆ ಬಂದಿದೆ. ಆ ಚಿತ್ರ ಕಥೆ ಬರೆದವರೂ, ನಿರ್ದೇಶಕರೂ, ನಿರ್ಮಾಪಕರೂ, ಪಾತ್ರಧಾರಿಗಳೂ ಕನ್ನಡಕ್ಕೂ ಕರ್ನಾಟಕಕ್ಕೂ ದ್ರೋಹ ಮಾಡಿರುವರೆಂದೂ, ಆ ಚಿತ್ರವನ್ನು ಕನ್ನಡಿಗರು ನೋಡಿ ಆನಂದಿಸಿದರೆ ನಾಡಿನ ಸ್ವಾಭಿಮಾನದಿಂದ ಆನಂದಿಸುವ ಮಾನಸಿಗೆ ಅವಮಾನವಾಗುವದೆಂದೂ ನಮ್ಮ ದಿನ ಪತ್ರಿಕೆಯೊಂದು ಪ್ರಕಟಿಸಿದೆ. ಆ ಪತ್ರಿಕೆಯ ಕನ್ನಡಾಭಿಮಾನ ಕೊಂಡಾಟ ಉಲ್ಲೇಖಿಸತಕ್ಕದ್ದು. ಯಾವುದೋ ಒಂದು ಚಿತ್ರದ ಒಂದು ಸನ್ನಿವೇಶವನ್ನು ತೆಗೆದುಕೊಂಡು ಅದನ್ನು ನಿಂದಿಸಹೊರಟು ಅದಕ್ಕಾಗಿ ಕನ್ನಡ ನಾಡಿನ ಇತಿಹಾಸವನ್ನು ಆತುರವಾಗಿ ಕೊಂಡಾಡುತ್ತಿರುವುದು ನಾಡಿನ ಘನತೆಗೆ ಕುಂದನ್ನುಂಟುಮಾಡುವಂತಾದ್ದಾಗಿದೆ. ಅಂಥ ಚಿತ್ರಗಳು ಮನರಂಜನೆಗಾಗಿ ತಯಾರಿಸಲ್ಪಡುತ್ತವೆ. ಕನ್ನಡನಾಡು ಜಗತ್ತಿನ ಮೇಲೆ ಸ್ವರ್ಗದಲ್ಲೇನಿಲ್ಲ. ಕನ್ನಡಿಗರೂ ಮಾನವಕೋಟಿಯಲ್ಲಿ ಒಂದು ಅಂಶವೇ. ಹೊರತು ದೇವಾಂಶಸಂಭೂತರಲ್ಲ. ಕನ್ನಡಿಗರಲ್ಲೂ ಹಲಕೆಲವರಲ್ಲಿ ಹೀನ ಲಕ್ಷಣ ಆಧಿಕ್ಯವಾಗಿರುವುದು ಆ ಸಂಗತಿಯನೆಲ್ಲ ಆದುದರಿಂದ ಅಸ್ಪೃಶ್ಯ ಜಾತಿಯ ಸನ್ನಿವೇಶ ಯಥಾರ್ಥವಾದರೂ ಚಿತ್ರಗಳಲ್ಲಿ ನಿರೂಪಿತವಾಗಿದ್ದರೆ ಅದಕ್ಕಾಗಿ ಚಳವಳಿ ಹೂಡುವುದು ಸಂಕುಚಿತ ಮನೋವೃತ್ತಿಯಾಗಿದೆ. ಅದರ ಬದಲು ಕನ್ನಡಿಗರ ಪ್ರತಿಭೆಯನ್ನು ಬೆಳಕಿಗೆ ತರುವ ಚಿತ್ರಗಳನ್ನು ನಾನಾ ಭಾಷೆಗಳಲ್ಲಿ ತಯಾರಿಸಿ ಜಗತ್ತಿನ ಮುಂದೆ ಕಾಣಿಸಿಕೆಗೆ ಕಳುಹಿ, ಕನ್ನಡಿಗರ ಯೋಗ್ಯತೆಯನ್ನು ಪ್ರಕಾಶಗೊಳಿಸುವುದಲ್ಲವೆ ಸತ್ಕಾರ್ಯ.

ಕಲಾಭಿಮಾನಿ

Edited, printed and published by A. R. Nagarajan, at the Sadhvi Press, D. Subbaiah Road, Mysore.

ಅಮೋಘವಾದ 4 ನೇ ವಾರ

27-4-44 ರಿಂದ

ವಾಣಿ

ಪೇಟ್. ಆರ್. ಜಿ. ಸಿ. ಶ್ರೀ ಪಿಕ್ಚರ್ಸ್ — ಶಿವಬಸವಸ್ವಾಮಿಯವರ ತಯಾರಿಕೆ

ಮೈಸೂರು ಚಾಮುಂಡೇಶ್ವರಿ ಟಾಕೀಸ್

ಅಪೇರಾ ಟಾಕೀಸ್ 27-4-1944 ರಿಂದ

3 ನೇ ವಾರ

ಪಿ. ಯು. ಚಿನ್ನಪ್ಪ, ಟಿ. ಆರ್. ರಾಜಕುಮಾರಿ, ನಾಗರ್ಕೋಯಿಲ್ ಶಿವನ್, ಎನ್. ಎಸ್. ಕೃಷ್ಣನ್ ಟಿ. ಎ. ಮಧುರಂ ಮುಂತಾದವರ ಪಾತ್ರ

ಕುಬೇರ-ಕುಚೇಲ

ಸ್ತ್ರೀಯರ ಸೌಕರ್ಯಕ್ಕೆ

ಸ್ತ್ರೀಯರಿಗೆ ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡು ಮಾಡಿರುತ್ತೇವೆ.

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿ ಪುಡಿ

ಉಪಯೋಗಿಸಿ.

ಪಿ. ಪ್ರಾಡಕ್ಟ್ಸ್, ದಿವಾನ್ಸ್ ರೋಡ್, ದೇವರಾಜ ಮಾರ್ಕೆಟ್, ಮೈಸೂರು

... ಲಕ್ಷ್ಮೀ ವಿಲಾಸ ... 4 ನೇ ನಂಬರ್ ... ಮತ್ತು ನಮ್ಮ ಸಂತೇಪೇಟೆ ಪೋಸ್ಟ್ ಆಫೀಸಿನಲ್ಲಿ ... 3 ನೇ ನಂಬರ್ ... ಅಂಗಡಿ ... ತೆರೆದಿದ್ದೇವೆ.

... ಕೊಟ್ಟರೆ ... ಕಳುಹಿಸಿಕೊಡುತ್ತೇವೆ.

ದಿವ್ಯವಾದ ಸಾಬೂನು

ಬೆಲೆಯಲ್ಲಿ ಕಿರಿದಾದರೂ ಗುಣದಲ್ಲಿ ಹಿರಿದು



... ಸ್ಯಾಂಡಲ್ ಸೋಪಿನಂತೆ ... ದೇಶೀಯ ... ಯನ್ನು ... ಮೈಸೂರಿನ ... ಗುಣವೂ ಸುಗಂಧವೂ ... ಸ್ವದೇಶಿ ...

ಮೈಸೂರು ಸ್ಯಾಂಡಲ್ ಸೋಪ್

ಸಂಪುಟ ೩] ಶುಕ್ರವಾರ ೩೦-೪-೪೪ [ಸಂಚಿಕೆ ೩೩೯

ಐರ್ಲೆಂಡಿನ ಮೇಲೆ – ಹೆಚ್ಚಿನ ದಿಗ್ಬಂಧನ

ಸೊತ್ತು ಕೊಳೆ ಪ್ರತಿಭಟಿಸಲು ನಿಲುವಳಿ ಸೂಚನೆ

ಕೊಹಿಮಾದಲ್ಲಿ ಅಂತ್ಯ ಕಾಳಗಕ್ಕೆ ಸಿದ್ಧತೆಗಳಾಗುತ್ತಿವೆ

ಬಸವ ಜಯಂತಿ ಸಂಗೀತ

ಮೈಸೂರು ೨೭

ರಾಜಧಾನಿಯ ವೀರಶೈವ ತರುಣ ಮಂಡಲಿಯವರು ಶ್ರೀ ಬಸವೇಶ್ವರ ಜಯಂತಿ ಮಹೋತ್ಸವ ಸಂದರ್ಭದಲ್ಲಿ ಇಂದು ರಾತ್ರಿ ೮ ಗಂಟೆಗೆ ವಾಣೀವಿಲಾಸ ರಸ್ತೆಯಲ್ಲಿನ ವೀರಶೈವ ಸಂಸ್ಕೃತ ಪಾಠಶಾಲೆಯಲ್ಲಿ ಸಂಗೀತ ರತ್ನ ಟಿ ಚೌಡಯ್ಯ ಮತ್ತು ಗೆಳೆಯರ ಸಂಗೀತವನ್ನೇರ್ಪಡಿಸಿರುವರು. ಸರ್ವರಿಗೂ ಆಹ್ವಾನ ಉಂಟೆಂದು ವ್ಯವಸ್ಥಾಪಕರು ತಿಳಿಸುತ್ತಾರೆ.

ದಾನ

ಬೊಂಬಾಯಿ ಇಂದ್ರಭವನದವರು ಶ್ರೀ ರಾಮಕೃಷ್ಣಾಶ್ರಮಕ್ಕೆ ೫೦೦ ರೂ. ದಾನ ಮಾಡಿದ್ದಾರೆ.

ಸ್ವಸ್ತಿಕ ಸಾಹಿತ್ಯ ಸಂಘ

ಮೇಲ್ಕಂಡ ಸಂಘದ ಆಶ್ರಯದಲ್ಲಿ ಇದೇ ಮಾಹೆ ೨೮ ನೇ ತಾರೀಖು ಶುಕ್ರವಾರ ಸಂಜೆ ೬-೩೦ ಗಂಟೆಗೆ ಬಸಪ್ಪಶಾಸ್ತ್ರಿಗಳವರ ಹೈಸ್ಕೂಲಿನಲ್ಲಿ ಶ್ರೀಮಾನ್ ಎಸ್. ಅನಂತನಾರಾಯಣರವರಿಂದ ಕಾವ್ಯವಾಚನವು ನಡೆಯುತ್ತದೆ. ಶ್ರೀ|| ಜಿ. ವೆಂಕಟಸುಬ್ಬಯ್ಯನವರು ಅಧ್ಯಕ್ಷತೆ ವಹಿಸುವರು.

ಫುಟ್‌ಬಾಲ್

ಕಲ್ಕತ್ತಾದಿಂದ ಬಂದಿರುವ ಬಾಟಾ ಫುಟ್‌ಬಾಲ್ ಕ್ಲಬ್ಬಿನವರು ನೆನ್ನೆ ಸಂಜೆ ದೊಡ್ಡಕೆರೆ ಮೈದಾನದಲ್ಲಿ ನಡೆದ ಸಿ ಪಿ ಸಿ ಚಿನ್ನದ ಪದಕದ ಪಂದ್ಯದಲ್ಲಿ ಮೈಸೂರು ಮಸ್ಲೀಂಸ್ ಕ್ಲಬ್ಬನ್ನು ೧ ಗೋಲಿನಿಂದ ಸೋಲಿಸಿದರು. ಕಲ್ಕತ್ತಾ ಮಹಮಡನ್ ಸ್ಪೋರ್ಟಿಂಗ್ ಆಟಗಾರರಾದ ಸಾಬೂರವರು ಗೋಲನ್ನು ಹೊಡೆದರು. ನಾಳೆ ದಿನ ಕೃಷ್ಣ ಕ್ಲಬ್ಬಿಗೂ ಬಾಟಾ ಕ್ಲಬ್ಬಿಗೂ ಪಂದ್ಯವಿರುತ್ತದೆ.

ಪೆಟ್ರೋಲ್ ರೇಷನ್ ಚೀಟಿ

ಮೇ, ಜೂ, ಜುಲೈ ತಿಂಗಳುಗಳಿಗೆ ಬೇಕಾಗುವ ಪೆಟ್ರೋಲ್ ಎಣ್ಣೆಯ ರೇಷನ್ ಚೀಟಿಗಳನ್ನು ಬರುವ ೧ ನೇ ತಾ|| ನಿಂದ ಆಯಾ ಸ್ಥಳದ ರೇಷನಿಂಗ್ ಅಧಿಕಾರಿಗಳ ಬಳಿ ಮೋಟಾರ್ ಮಾಲೀಕರುಗಳು ಪಡೆಯಬಹುದೆಂದು ಪ್ರಕಟನೆ ಹೊರಟಿದೆ.

ಮದರಾಸಿಗೆ ಹೊಸ ಪಿ. ಯಂ. ಜಿ.

ನಾಗಪುರದ ಪೋಸ್ಟ್ ಮಾಸ್ಟರ್ ಜನರಲ್ ಮಿ|| ಕೆ. ೯. ಸೇವೇಂದ್ರರವರನ್ನು ಮದರಾಸಿನ ಪೋಸ್ಟ್ ಮಾಸ್ಟರ್ ಜನರಲ್‌ರನ್ನಾಗಿ ವರ್ಗಾಯಿಸಲಾಗಿದೆ. ಮದರಾಸಿನಲ್ಲಿ ಪಿ. ಯಂ. ಜಿ ಆಗಿದ್ದ ರಹಮಾನ್‌ರವರು ಹೀನ್ನೆ ಲಾಂಗ್ ಅವಕಾಶಕ್ಕೆ ಹೋಗಿರುತ್ತಾರೆ.

ಮೋಟರ್ ಟ್ರೈನರ್

ಪ್ರಾರಂಭ ಸಭಾಧ್ಯಕ್ಷತೆ

ಲಂಡನ್ನಿನ ಜಿಲ್ಲೆಯೊಂದರಲ್ಲಿನ ಪ್ರಥಮ ಕೌನ್ಸಿಲಿಗೆ [illegible] ಅಧ್ಯಕ್ಷರನ್ನಾಗಿ [illegible] ಮೋಟರ್ ಟ್ರೈನರ್ [illegible] ದನು.

[illegible]

ಐರ್ಲೆಂಡ್ ನೌಕೆಗಳಿಗೆ ಸೌಲಭ್ಯ ತಪ್ಪಿತು

ಲಿಸ್‌ಬನ್‌ನಿಂದ ಹೊರಡುವ ಐರ್ಲೆಂಡಿನ ವ್ಯಾಪಾರ ಹಡಗುಗಳಿಗೆ ನಾವಿಸರ್ಟ್ ಕೊಡುವುದನ್ನು ಬ್ರಿಟಿಷ್ ಸರ್ಕಾರ ನಿಲ್ಲಿಸಿದೆ. ಇದರಿಂದ ಐರ್ಲೆಂಡಿಗೆ ಭಾರಿ ತೊಂದರೆಯಾಗುವುದೆಂದು ಹೇಳಲಾಗಿದೆ.

ಕಡಲ್ಗಾಲುವೆಯಲ್ಲಿ ನೌಕಾ ಘರ್ಷಣೆ

ಕಡಲ್ಗಾಲುವೆಯಲ್ಲಿ ಕೆಲವು ಜರ್ಮನ್ ಡಿಸ್ಟ್ರಾಯರ್ ಹಡಗುಗಳಿಗೂ ಮಿತ್ರರ ನೌಕೆಗಳಿಗೂ ಬುಧವಾರ ರಾತ್ರಿ ಘರ್ಷಣೆ ನಡೆಯಿತು. ಒಂದು ಜರ್ಮನ್ ಡಿಸ್ಟ್ರಾಯರನ್ನು ಮುಳುಗಿಸಲಾಯಿತೆಂದು ವರದಿ ಬಂದಿದೆ.

ಕೊಹಿಮಾದಲ್ಲಿ ಅಂತ್ಯ ಹೋರಾಟ

ಕೊಹಿಮಾದಲ್ಲಿ ಅಂತ್ಯ ಕದನಕ್ಕಾಗಿ ಸರ್ವ ಸಿದ್ಧತೆಗಳೂ ಭರದಿಂದ ಸಾಗಿವೆ. ಮಳೆಗಾಲಕ್ಕೆ ಇವನ್ನೇ ಮೂಲಸ್ಥಾನವನ್ನಾಗಿ ಮಾಡಿಕೊಳ್ಳಬೇಕೆಂದು ಜಪಾನರು ಇಷ್ಟಪಟ್ಟಿರುವಂತೆ ಕಂಡಿದೆ. ದೂರಪ್ರಾಚ್ಯದ ಕರ್ಮಕ್ಷೇತ್ರದ ಕದನವೆಷ್ಟು ಪ್ರಾಮುಖ್ಯವಾಗಿ ಕೊಹಿಮಾದಲ್ಲಿ ಕದನ ಜರುಗಬಹುದೆಂದು ಹೇಳಲಾಗಿದೆ.

ಎಸೆನ್‌ಗೆ ಏಟು

ರೂರ್ ಜಿಲ್ಲೆಯ ಮುಖ್ಯ ಕೈಗಾರಿಕಾ ನಗರ ಎಸೆನ್ ಮೇಲೆ ಮಿತ್ರ ವೈಮಾನಿಕರು ಜಯಪ್ರದವಾಗಿ ಬಾಂಬ್ ಧಾಳಿ ಮಾಡಿದರು.

ಜಪಾನರು ಮುದಾಂಗ್ ಕಳೆದುಕೊಂಡರು

ಎಂದು ಪರ್ವತಗಳಿಂದಲೂ ಜಪಾನರ ವರದಿಯಲ್ಲಿ ನ್ಯಾಂಕಿಯು ಮುಖ್ಯ ನಗರ ಮುದಾಂಗ್ ಅನ್ನು ಅಮೆರಿಕನ್ ಸೈನಿಕರು ತಮ್ಮ ವಶಪಡಿಸಿಕೊಂಡರೆಂದು ಜಪಾನ್ ವಾರ್ತೆ ತಿಳಿಸಿದೆ.

ಸೆಬಾಸ್ಟೋಪೋಲಿನಲ್ಲಿ ರಣರಂಗ

ಸೊವಿಯಟ್ ಸೈನ್ಯವು [illegible] ಸೆಬಾಸ್ಟೋಪೋಲ್ [illegible] ಬಂದಿದೆ.

ಕರಾಚಿ ಪೌರಸಭಾ ಅತಿರೇಕ

ಕರಾಚಿ ಪೌರಸಭೆಯಲ್ಲಿ ನಿಲುವಳಿ ಸೂಚನೆಗಳು ಸರ್ವೇಸಾಮಾನ್ಯವಾಗಿಹೋಗಿದೆ ದೇವರು ಸೃಷ್ಟಿಸಿದ ಜೀವಜಂತುಗಳೆಲ್ಲಾ ಬಾಳುವ ಹಕ್ಕುಗಳನ್ನು ನಾಶಮಾಡಲು ಸೊಸೈಟಿ ಸಾಕಲಿಂಗ ಬೆಲ್ಲಾ ಅಧಿಕಾರಿಯು ಕಠಿಣವಾಗಿ ಆಜ್ಞೆ ಇತ್ತಿರುವುದನ್ನು ಪ್ರತಿಭಟಿಸಲು ಈ ಸಭೆ ಮುಂದೆ ಹೋಗಬೇಕೆಂಬ ನಿಲುವಳಿ ಸೂಚನೆಯನ್ನು ಪೌರಸಭಾ ಸದಸ್ಯರೊಬ್ಬರು ತಂದಿದ್ದರು. ನಿಲುವಳಿ ಸೂಚನೆಯು ಅಸ್ವೀಕೃತವಾಯಿತೆಂದು ಸುದ್ದಿ ಬಂದಿದೆ.

ಪ್ರದರ್ಶನದಲ್ಲಿಯೂ ೩ ತಲೆ ಸೂರ್ಯ

ಎರಡು ದಿನ ೧೪ ರ ತೇದಿಗೆ ಸ್ವಲ್ಪ ದೂರ ಸಿನಾಗರು ಕಂಡ ಮೂರು ತಲೆ ಸೂರ್ಯನನ್ನು ಮಹಾಮ್ ಡೆಂಗ್ ಪ್ರದರ್ಶನಗಳಲ್ಲಿ ಹಲವರು ನೋಡಿದರೆಂದು ಸಮಾಚಾರ ಬಂದಿದೆ.

ಭಾರತದಲ್ಲಿ ೧೧೧ ವಿಮಾನ ನಿಲ್ದಾಣ

ಭಾರತದ ಮುಖ್ಯ ನಗರಗಳಲ್ಲೂ ಮತ್ತು ಇತರೆಡೆಗಳಲ್ಲೂ ೧೧|| ಕೋಟಿ ರೂ. ವೆಚ್ಚಮಾಡಿ ೧೧೧ ವಿಮಾನ ನಿಲ್ದಾಣಗಳನ್ನು ನಿರ್ಮಿಸಲು ಭಾರತ ಸರ್ಕಾರದವರು ೧೦ ವರ್ಷಗಳ ಯೋಜನೆಯೊಂದನ್ನು ತಯಾರಿಸಿರುವರು.

ಮುಂಬೈ ಘಟನೆ ವಿಚಾರಣಾ ಸಮಿತಿ

ಹೈಕೋರ್ಟಿನ ನ್ಯಾಯಾಧೀಶರೊಬ್ಬರ ಅಧ್ಯಕ್ಷತೆಯಲ್ಲಿ ಬೊಂಬಾಯಿ ಸ್ಫೋಟನ ಘಟನೆ ಕುರಿತು ವಿಚಾರಣಾ ಸಮಿತಿಯನ್ನು ನೇಮಿಸಲು ಕೇಂದ್ರ ಸರ್ಕಾರ ನಿರ್ಧರಿಸಿರುವರು. ಆ ಪ್ರಸಂಗದ ಪರಿಹಾರಕ್ಕಾಗಿ ಕೇಂದ್ರ ಸರ್ಕಾರ [illegible] ಕೊಟ್ಟಿದೆ.

ಉಪಾಧ್ಯಕ್ಷರು ಚುನಾಯಿತರಾದರು

[illegible]

ಮಾಯವಾಗಿದ್ದ ಹುಡುಗಿ ಸಿಕ್ಕಿದಳು

ಬೆಂಗಳೂರಿನಲ್ಲಿ ಮಾಯವಾಗಿದ್ದ [illegible] ಆಸ್ಪತ್ರೆಯೊಂದರಲ್ಲಿ [illegible] ವಾಗಿದೆ.

ಗಾಂಧಿಜೀ ಪ್ರತಿಮೆ ಪ್ರತಿಷ್ಠೆ

ಭಾರತೀ ಪರ್ವತ ಸ ಘದವರು ಕರಾಚಿಯಲ್ಲಿನ ಮುಖ್ಯಮಾರ್ಗದಲ್ಲಿ ಮಹಾತ್ಮಾಗಾಂಧಿಯವರ ಶಿಲಾ ಪ್ರತಿಮೆಯನ್ನು ಪ್ರತಿಷ್ಠಿಸಲು ನಿರ್ಧರಿಸಿರುವರು.

ಹಿಂದೂ ಮಹಾಸಭಾಧಿವೇಶನ

ಬರುವ ಮೇ ತಿಂಗಳ ೩೦|| ೩೦ ರಿಂದ ೩೧ ರ ಒಳಗೆ ಶ್ರೀ ಉಡುಪಿ ಕ್ಷೇತ್ರದಲ್ಲಿ ಜಿಲ್ಲಾ ಹಿಂದೂ ಮಹಾ ಸಭೆಯು ಮಹಾಧಿವೇಶನವನ್ನು ಜರಗಿಸುವುದಾಗಿ ನಿಶ್ಚಯಿಸಿದ್ದೇವೆ. ಹಿಂದೂಗಳ ಪ್ರಸಿದ್ಧ ಮುಖಂಡರಲ್ಲೊಬ್ಬರಾದ ಶ್ರೀಮಾನ್ ಧರ್ಮವೀರ ಡಾಕ್ಟರ್ ಬಿ. ಎಸ್. ಮೂಂಜೆಯವರು ಅಧಿವೇಶನದ ಅಧ್ಯಕ್ಷತೆಯನ್ನು ವಹಿಸಲೊಪ್ಪಿರುತ್ತಾರೆ. ಈ ಸಂಬಂಧವಾಗಿ ಭರದಿಂದ ಪ್ರಯತ್ನಗಳು ನಡೆಯುತ್ತಿವೆ. ಇದೇ ಸಮಯದಲ್ಲಿ ಸಮಗ್ರ ಕರ್ನಾಟಕದ ಹಿಂದೂ ಮಹಾಸಭೆಯ ಕಾರ್ಯಕರ್ತರ ಒಂದು ಸಮ್ಮೇಳನವನ್ನು ಜರಗಿಸಿ ಮುಂದಿನ ಕಾರ್ಯಕ್ರಮಗಳನ್ನು ನಿರ್ಧರಿಸಬೇಕಾಗಿ ನಿರ್ಧರಿಸಿದ್ದೇವೆ. ಆದ ಪ್ರಯುಕ್ತ ಕರ್ನಾಟಕದ ಎಲ್ಲಾ ಕಾರ್ಯಕರ್ತರುಗಳೂ ಈ ಸಮಾರಂಭಕ್ಕೆ ಬಂದು ಸಹಕರಿಸಬೇಕೆಂದು [illegible] ವಿನಂತಿಮಾಡಿಕೊಂಡಿದೆ [illegible]

ಸ್ಟೀನ್‌ಹೇವನ್ ವಾಪಸು

ಟರ್ಕಿಗೆ ಹೋಗಿದ್ದ ಅಮೆರಿಕಾ ರಾಯಭಾರಿ ಸ್ಟೀನ್‌ಹೇವನ್ ಅಂಕಾರಾದಿಂದ ಅಮೆರಿಕಾಕ್ಕೆ ಬಂದಿರುವರೆಂದು ವಾಷಿಂಗ್ಟನ್ನಿನಿಂದ ವರದಿಯಾಗಿದೆ.

ಮುಸೋಲಿನಿ ಎಲ್ಲಿರುವನು ?

ಲೇಕ್ ಕೋಮೋ ಜಿಲ್ಲೆಯ ಭವನದಲ್ಲಿ ಈಗ ಮುಸೋಲಿನಿ ವಾಸ ಮಾಡುತ್ತಿರುವನು ಇದು ಇದುವರೆಗೂ ಗೊತ್ತಾಗಿರಲಿಲ್ಲವೆಂದು ಆ ಜಿಲ್ಲೆ ಬಿಟ್ಟುಬಂದವರು ಹೇಳುತ್ತಾರೆ. ಉತ್ತರ ಇಟಲಿಯಲ್ಲಿ ಮುಸೋಲಿನಿ ಹಿಡಿಸಲಾಗಿರುವನೆಂದು ಇಲ್ಲಾ ಸಂಜೆ ಕ್ರಿಶ್ಚಿಯನ್ ಹಿಟ್ಲರ್-ಮುಸೋಲಿನಿ ಭೇಟಿ ನಡೆದಿರಬಹುದೆಂದು ಅವರ ಭಾವನೆ.

ಗ್ರೀಕ್ ಸರ್ಕಾರದ ರಾಜಿನಾಮೆ

ಕೊಹಿಮಾದ ಹೊರವಲಯದಿಂದ ಜಪಾನೀ ಪಡೆಗಳನ್ನು ಹಿಂದಕ್ಕೆ ಅಟ್ಟಲಾಗುತ್ತಿದೆ. ಕೊಹಿಮಾ-ದಿಮಾಪುರ ರಸ್ತೆಯನ್ನು ಜಪಾನರಿಂದ ಬಿಡಿಸಿಕೊಳ್ಳಲಾಗಿದೆ. ಈಗ ಕೊಹಿಮಾದಲ್ಲಿರುವ ಮಿತ್ರ ಪಡೆಗಳಿಗೆ ಯಾವ ಆತಂಕವೂ ಇಲ್ಲ.

ಚೀನಾದ ಮುಂದೋಟ

ಟೆಂಗ್‌ಚಾ ಬಳಿ ಜಪಾನರ ನೆಲೆ ಗ್ರಾಮಗಳನ್ನೆಲ್ಲಾ ಎದುರಿಸಿಕೊಂಡು ಚೀನೀಯರು ಮುನ್ನುಗ್ಗುತ್ತಿರುವರು. ಇಲ್ಲಿ ಹಲವು ಗ್ರಾಮಗಳು ಚೀಣೀ ಯೋಧರ ವಶವಾಗಿವೆ.

ಹಂಗಾಮಿ ಆರ್ಥಿಕ ಸಚಿವರು

ಭಾರತ ಸರ್ಕಾರದ ಆರ್ಥಿಕ ಸಚಿವ ಸರ್ ಜರೆಮಿ ರೈಸ್‌ಮನ್ನ ೨ ವಿಶೇಷ ಕಾರ್ಯ ನಿಮಿತ್ತ ಇಷ್ಟರಲ್ಲೇ ಇಂಗ್ಲೆಂಡಿಗೆ ಹೋಗುವರು. ಅಲ್ಲಿ ಆರ್ಥಿಕ ವಿಭಾಗ ಕಾರ್ಯದರ್ಶಿ ಮಿ॥ ಸಿ ಇ ಜೋನ್ಸ್‌ರವರ ಹಂಗಾಮಿಯಾಗಿ ಆರ್ಥಿಕ ಸಚಿವರ ಸ್ಥಾನದಲ್ಲಿರತಕ್ಕವರೆಂದು ಕೇಂದ್ರ ಸರ್ಕಾರದ ಆಜ್ಞೆಯಾಗಿದೆ.

ಜರ್ಮನ್ ಜಹಜುಗಳ ಜಲ ಸಮಾಧಿ

ಬ್ರಿಟಿಷ್ ಜಲಾಂತರ್ಗಾಮಿ ಜಹಜುಗಳು ಭೂಮಧ್ಯ ಸಮುದ್ರ ಮತ್ತು ಏಜಿಯನ್ ಸಮುದ್ರಗಳಲ್ಲಿ ಓಡಾಡುತ್ತಿದ್ದ ೨೨ ಜರ್ಮನ್ ಹಡಗುಗಳನ್ನು ಮುಳುಗಿಸಿರುವುದಾಗಿ ಮಿತ್ರ ಕಛೇರಿಯಿಂದ ಪ್ರಕಟಣೆ ಹೊರಟಿದೆ.

SAVE EMPTY
Beer Bottles
THE CHAMUNDI
BREWERY,
Post Box 47, MYSORE.

Edited, printed and published by A. R. Nagarajan, at the Sadhvi Press, D Subbiah Road, Mysore.

ಡಿಸ್ಟ್ರಿಕ್ಟ್ ಬೋರ್ಡು ಚುನಾವಣೆ—ಕಾಂಗ್ರೆಸ್ ಜಯ

ಸ್ವಂ. ವ.] ಚಿಕ್ಕಮಗಳೂರು

ಚಿಕ್ಕಮಗಳೂರು ತಾಲ್ಲೂಕಿನಿಂದ ಗ್ರೆಸ್ ಪಕ್ಷದ ಶ್ರೀ ಬಿ. ಪಿ ಬಸಪ್ಪನವರೂ, ಬಾಗಮನೆ ದೇವೇಗೌಡರೂ ಕಡೂರು ತಾಲ್ಲೂಕಿನಿಂದ ಕಾಂಗ್ರೆಸ್ ಪಕ್ಷದ ಶ್ರೀ ... ಬಸವಲಿಂಗಯ್ಯನವರೂ ಮತ್ತು ... ಯ್ಯನವರೂ ತರೀಕೆರೆ ತಾಲ್ಲೂಕಿನಿಂದ ಕಾಂಗ್ರೆಸ್ ಪಕ್ಷದ ಶ್ರೀ ಟಿ. ಸಿ ಬಸಪ್ಪನವರೂ ಮತ್ತು ನಿರ್ವಾಣಪ್ಪನವರೂ ಜಿಲ್ಲಾ ಬೋರ್ಡಿಗೆ ಚುನಾಯಿತರಾದರು.

ಬೊಲಿವಿಯಾ ಸ್ಥಿತಿ

ಜುಲೈ ೨ ಕ್ಕೆ ನಡೆಯಲಿರುವ ಪಾರ್ಲಿಮೆಂಟ್ ಚುನಾವಣೆ ಸಿದ್ಧತೆ ಸಂದರ್ಭದಲ್ಲಿ ಬೋಲಿವಿಯಾದಲ್ಲಿ ಕ್ರಾಂತಿ ಉಂಟಾಗಿರುವುದಲ್ಲದೆ ಅನೇಕ ಘಟನೆಗಳು ನಡೆದಿರುವ ಕಾರಣ ಅಪ್ಪ ಯಸ್ ... ಬೊಲಿವಿಯಾದಲ್ಲಿ ... ಜಾರಿಗೆ ... ಬಂದಿವೆ.

ಅಮೆರಿಕದಲ್ಲಿ ಬಿರುಗಾಳಿ ಅನಾಹುತ

ಅಮೆರಿಕದ ಕೆಲವು ಭಾಗಗಳಲ್ಲಿ ... ತನಕ ಅನೇಕ ಪ್ರಕರಣಗಳಲ್ಲಿ ಪ್ರಚಂಡ ಬಿರುಗಾಳಿ ಎದ್ದು ... ಮಂದಿಯನ್ನು ಕೊಂದು ... ಜನ ... ಗಾಯಪಡಿಸಿರುವ ಸಂಗತಿ ಈಗ ಹೊರಬಿದ್ದಿದೆ. ಈ ಬಿರುಗಾಳಿ ... ನಷ್ಟ ಉಂಟಾಗಿರುವುದಾಗಿ ... ತರವಾಗಿ ನಡೆದಿದೆಯೆಂದು ಗೊತ್ತಾಗಿದೆ.

MEDICINES
Take your requirements from
RAGHULAL & CO.,
1748, Sayaji Rao Road
(Upstairs, Mysore Hall),
MYSORE.
ಔಷಧಗಳು
ನಿಮಗೆ ಬೇಕಾಗುವುದನ್ನೆಲ್ಲ ಇವರಲ್ಲಿ ಕೊಂಡುಕೊಳ್ಳಿ.
ರಘುಲಾಲ್ ಅಂಡ್ ಕೊ
1748, ಸಯ್ಯಾಜೀರಾವ್ ರೋಡ್,
(ಮೈಸೂರು ಹಾಲ್ ಮಹಡಿ), ಮೈಸೂರು.

ಸ್ತ್ರೀಯರ ಗಮನಕ್ಕೆ

... ಶ್ರೀ ...

ನಮ್ಮಲ್ಲಿ ತಯಾರಾಗುವ ...

... ಬ್ರಾಂಡ್ ...

ಬೆಂಗಳೂರು

... ವಿನಾಯಕ ಮಂಡಿ, ದೇವರಾಜ ಮಾರ್ಕೆಟ್, ಮೈಸೂರು.

... ನೊಂದಾಯಿಸಿ 4 ನೇ ನಂಬರ್ ... ಮತ್ತು ... ಹೆಡ್ ಆಫೀಸಿನಲ್ಲಿ ... ನೇ ನಂಬರ್ ...

... ತರಿಸಬೇಕು ...

... ಪ್ರತಿಯಾಗಿ ... ಮತ್ತು ... ಕೊಡಲ್ಪಡುತ್ತದೆ.

ಪ್ರತಿ ದಿನ ೩ ಆಟಗಳು

4-5-44 ರಿಂದ

ಒಪೇರಾ

ಟಾಕೀಸ್

ನಾಗಯ್ಯ, ಕಮಲಾ ಕೊಟ್ನಿಸ್

ಮತ್ತು ನಾರಾಯಣರಾವ್

ಪಾತ್ರ ವಹಿಸಿರುವ



ಭಾಗ್ಯಲಕ್ಷ್ಮಿ

(ತೆಲುಗು ಭಾಷೆ)

ಸಂಪುಟ ೨] ಗುರುವಾರ ೪--೩--೪೩ [ಸಂಚಿಕೆ ೨೪೪

ಮಿತ್ರರು ಪಲೆಟ್ಟ್‌ಾ--ಖಾಲಿಮಾಡಿದರು

ಉಪವಾಸನಿದ್ದ ಮಗಳಿಗೆ ಅಕ್ಕಿ ಕಳುಹಿಸಿದುದು ಅಪರಾಧ

ಮಹಾತ್ಮರ ದೇಹಸ್ಥಿತಿ ಮತ್ತೆ ಚಿಂತಾಜನಕ ವಾಗಿದೆ

ಮಹಾತ್ಮರ ದೇಹಸ್ಥಿತಿ ರಕ್ತ ಹೀನವಾಗುತ್ತಿದೆ

[illegible] ದಿನಗಳ ಕೆಳಗೆ ಮಹಾತ್ಮರಿಗೆ ಮೂತ್ರಪಿಂಡ ರೋಗ ಪ್ರಾಪ್ತವಾಯಿತು. ಆಗಿನಿಂದಲೂ ಇನ್ನೂ ತನಕ ಅವರ ಆರೋಗ್ಯ ಉತ್ತಮಗೊಳ್ಳುವ ಸೂಚನೆ ಕಂಡಿಲ್ಲ. ಅವರ ಜೊತೆ ಉಪವಾಸ ಮತ್ತರ ಅತ್ಯಂತ ಕಳವಳಕ್ಕೀಡುಮಾಡಿದೆ. ಜಾಗ್ರತಿ ಗುಣಹೊಂದಿ ಮಹಾತ್ಮರ ನೀಡುತ್ತಿದ್ದರು. ಆಗಿನಿಂದ ಅವರ ಸಾಮಾನ್ಯ ಪರಿಸ್ಥಿತಿ ಸಮಾಧಾನಕರವಾಗಿಲ್ಲ. ರಕ್ತಚಲನ ತುಂಬಾ ದುರ್ಬಲವಾಗಿದೆ. [illegible] ಗಾಂಧಿಯವರಿಗೆ ರಕ್ತ ಕಡಿಮೆಯಾಗುತ್ತಿದೆ. ಅವರ ದೇಹಸ್ಥಿತಿ ಕಳವಳಕ್ಕೀಡಾಗಿದೆ ಎಂದು ತಿಳಿಸಿದೆ.

ಗಾಂಧೀ ಖುಲಾಸೆಯಾಗದಿದ್ದರೆ ಜಪಾನರಿಗೆ ಜಯವೇ?

[illegible] ಗಾಂಧೀಜಿಯವರು ಅನಾರೋಗ್ಯವಾಗಿರುವಾಗ ಅವರನ್ನು ಬಂಧನದಲ್ಲೇ ಇಟ್ಟುಕೊಂಡಲ್ಲಿ ಜಪಾನರು ಎಂಥಾ ಗೆಲ್ಲಲಾರದಂತಹ ಗೆಲುವನ್ನು ಅವರಿಗೆ ದೊರಕಿಸಿಕೊಡಲು ಸಹಕರಿಸಿದಂತಾಗುವುದು. ಎಂದು ಭಾರತದ ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿ ಶ್ರೀ ಪಿ. ಸಿ. ಜೋಶಿಯವರು ಹೇಳುತ್ತಾರೆ.

ಗೋಪ್ಯ ವಿಚಾರಣೆ

[illegible] ಯುದ್ಧ ಕಾಲದ ಜಾಗ್ರತಾ ಶಾಸನ [illegible] ಅನಾಹುತದ ವಿಚಾರಣೆಗಳನ್ನು ಗೋಪ್ಯವಾಗಿ ನಡೆಸಲಾಗುತ್ತಿದೆ. ಸೂಕ್ತ ಕಂಡ ವಿಷಯಗಳನ್ನು ಮಾತ್ರ ವರದಿ ಮೂಲಕ ಪ್ರಕಟಿಸಲಾಗುವುದು. ನ್ಯಾಯಾಧೀಶರು ವಿಚಾರಣಾ ಸಮಿತಿಗೆ [illegible] ಈ ಬಗ್ಗೆ ಎಲ್ಲ ಅಧಿಕಾರವನ್ನೂ ಒಪ್ಪಿಸಿರುವರು.

ಚುನಾವಣಾ ಫಲಿತಾಂಶ

ಸ್ವಂ.ಸು.] ತಿಪಟೂರು ೩

ತಿಪಟೂರು ತಾಲ್ಲೂಕು ಡಿಸ್ಟ್ರಿಕ್ಟ್ ಬೋರ್ಡ್ ಚುನಾವಣೆ ಫಲಿತಾಂಶ:— ಈ ಡಿಸ್ಟ್ರಿಕ್ಟ್ ಬೋರ್ಡಿಗೆ ತಿಪಟೂರು ತಾಲ್ಲೂಕಿನಿಂದ ಅವಿರೋಧವಾಗಿ ಮಾಜಿ ಎಂ. ಶಿವಬಸಪ್ಪನವರು, ಶ್ರೀ ಎಂ. ಆರ್. ಶಿವಪ್ಪನವರು, ಶ್ರೀ ಟಿ. ಜಿ. ತಿಮ್ಮೇಗೌಡರು, ಶ್ರೀ ಎಂ. ಬಿ. ರಂಗರಪ್ಪನವರು, ಕಾಂಗ್ರೆಸ್ ಪರವಾಗಿ ಶ್ರೀ ಎಂ. ಚೆಟ್ಟಪ್ಪನವರು, ಅರಗೊಂಡನಹಳ್ಳಿ ಶ್ರೀ ವೆಂಕಟೇಗೌಡರು [illegible] ೨೮ ನೇ ತಾರೀಖು ನಡೆದ ಚುನಾವಣೆ [illegible]

[illegible]

ರೈಸ್ಮಿಗೆ ಪೋಲೀಸ್ ರಕ್ಷಣೆ ಬೇಕಾಯಿತು

ಮೈಸೂರು ೪

ಸಿ. ಪಿ. ಸಿ. ಚಿತ್ರದ ಪರದೆಯ ಟೋಪರ್ [illegible] ಯಲ್ಲಿ ರೈಸ್ಮಿ [illegible] ಸನ್ಸ್ ಕ್ಲಬ್ಬಿನವರು ಮೈಸೂರು ಬ್ಲೂಸ್ ಕ್ಲಬ್ಬನ್ನು ೧ ಗೋಲಿನಿಂದ ಸೋಲಿಸಿದರು. ಎರಡನೆ ಅರ್ಧದ ಕೊನೆಯ ನಿಮಿಷಗಳಲ್ಲಾಗ ಬ್ಲೂಸ್ ಕ್ಲಬ್ಬಿನವರಿಗೆ ಒಂದು [illegible] ಕೊಡಲಿಲ್ಲವೆಂದ ಬ್ಲೂಸ್ [illegible] ರೂ ಆಟನೋಡದೆ ಮೈದಾನದಲ್ಲೇ ನಿಂತುಬಿಟ್ಟರು. ಪ್ರೇಕ್ಷಕ [illegible] ತೀರ್ಮಾನವನ್ನು ಪ್ರತಿಭಟಿಸಿ ಆಟದ ಮೈದಾನಕ್ಕೆ ನುಗ್ಗಿದರು [illegible] ಸಂದರ್ಭದಲ್ಲಿ ಬ್ಲೂಸ್ ಕ್ಲಬ್ [illegible] ಗೇಟ್ ಪಕ್ಕದಲ್ಲಿ [illegible] ಕೊಡದ [illegible] ಟೆನಿಸ್ [illegible] ರೇಫ್ರಿಯವರು [illegible] ಬಂದಿರುತ್ತದೆ. [illegible] ಪೋಲಿಸಿನವರು ರೆಫ್ರಿಯನ್ನು ದಿಕ್ಕರಿಸುತ್ತಿದ್ದ ಜನಗಳ ಗುಂಪನ್ನು ಚದುರಿಸಿದರು. [illegible] ರೆಫ್ರಿಯನ್ನು ಪೋಲೀಸಿನವರು [illegible] ಕರೆದುಕೊಂಡು ಹೋಗಿ ಬಿಟ್ಟರು.

ನಾಟಕ ಸ್ಪರ್ಧೆ

ಕಲಾಸೇವಕರ [illegible] ಮೈಸೂರು ನಾಟಕ ಸಂಘದ [illegible] ವರ್ಷ [illegible] ನಾಟಕ [illegible]

[illegible]

೧೯೪೨ ಸ್ಪೈಕ ೧೯ ಕಾಂಗ್ರೆಸ್

[illegible]

ಮಿತ್ರರು ಪಲೆಟ್ಟ್‌ಾ ಬಿಟ್ಟರು

ಆರಕಾನ್ ರಂಗದಲ್ಲಿನ ಪಲೆಟ್ಟಾ ಗ್ರಾಮವನ್ನು ಮಿತ್ರರು ಖಾಲಿ ಮಾಡಿರುತ್ತಾರೆ. ಈ ರಂಗದಲ್ಲಿ ತಮ್ಮ ಸ್ಥಾನಗಳನ್ನು ಪುನಃ ಸ್ಥಾಪನೆ ಮಾಡಿಕೊಳ್ಳುವ ದಕ್ಕಾಗಿ ಆಗ್ರಾ [illegible] ಖಾಲಿ ಮಾಡಲಾಯಿತೆಂದೂ ಶತ್ರು ತಮ್ಮನ್ನು ಅಟ್ಟಲಿಲ್ಲವೆಂದೂ ವಿ[illegible] ಪ್ರಕಟಿಸಿರುವರು.

ಕಟ್ಟ ಕಡೇ ಸುದ್ದಿ

ಸ್ವಂ.ಸು.ಪ್ರೋ] ಬೆಂಗಳೂರು ೪

ಜೋಗ್ ಪರಿಶೀಲನೆ

ಜೋಗ್ ಯೋಜನೆಯ ಕೆಲಸಗಳನ್ನು ಪರಿಶೀಲಿಸಿ ಸಲಹೆ ಕೊಡಬೇಕೆಂದು ಈಚೆಗೆ ಸರ್ಕಾರದವರು ಮದರಾಸ್ ಮತ್ತು ತಿರುವಾಂಕೂರು ಸರ್ಕಾರಗಳ ಕನ್ಸಲ್ಟಿಂಗ್ ಎಂಜನೀಯರಾದ ಮೇಜರ್ ಸರ್ ಹೆನ್ರಿ ಹವಾರ್ಡರವರಿಗೆ ಆಹ್ವಾನ ಕೊಟ್ಟಿದ್ದರು. ಈಗ ಅವರು ಬೆಂಗಳೂರಿಗೆ ಬಂದು ಜೋಗಿಗೆ ಹೋಗಿದ್ದಾರೆ.

ಆಯುರ್ವೇದ ಆಸ್ಪತ್ರೆಗೆ ಹಣ

ಆಯುರ್ವೇದ ಮತ್ತು ಯುನಾನಿ ಆಸ್ಪತ್ರೆಯ ಸಲಕರಣೆಗಾಗಿ ಸರ್ಕಾರದವರು ಅದಕ್ಕೆ ೫೦೦೦ ರೂ ಗಳನ್ನು ಮಂಜೂರು ಮಾಡಿದ್ದಾರೆ.

ಡಿಕಾಸ್ಟರಿಗೆ ದೊಡ್ಡ ಹುದ್ದೆ

[illegible]

ಕೊಹಿಮಾ ಬಳಿ ವಿಜಯ

ಕೊಹಿಮಾಕ್ಕೆ [illegible] ಜಪಾನರ [illegible] ಸ್ಥಾನಗಳನ್ನು [illegible] ಹಿಡಿದಿರುವರು.

ಪಟ್ಟಾಭಿಷೇಕ

ಪ್ರತಿ ವರ್ಷ ನಡೆಯುವ [illegible] ಸಂಕೇತ ಈ ವರ್ಷವೂ ಶ್ರೀ [illegible] ಲಾ. ರಾಮಯ್ಯನವರ ಮನೆಯವರು [illegible] ತಮ್ಮ ಧರ್ಮ ಕ್ಷೇತ್ರದಲ್ಲಿ ಶ್ರೀ ರಾಮಪಟ್ಟಾಭಿಷೇಕವನ್ನು ನೆರವೇರಿಸಿ [illegible] ರಾಜಸೇವಾ ಸಕ್ತ ಕರ್ನಲ್ ಗೋಪಾಲರಾವ್, ಶ್ರೀ ಎ. ವಿ. ಸುಬ್ರಹ್ಮಣ್ಯಯ್ಯರ್ ಮುಂತಾದ ಅನೇಕಾನೇಕ ಮಾನ್ಯ ಅತಿಥಿಗಳು ಸಮಾರಂಭಕ್ಕೆ ಬಂದಿದ್ದರು.

ವಿದ್ಯಾಭಿವೃದ್ಧಿಗೆ ಸಹಾಯ

ಮೈಸೂರು ಕುಂಚಿಟಿಗರ ಸಂಘದ ವಿದ್ಯಾಭಿವೃದ್ಧಿ ನಿಧಿಗೆ [illegible] ಮಲ್ಲಪ್ಪನವರು [illegible] ರೂ ಗಳನ್ನು [illegible] ಹಳ್ಳಿ [illegible] ರೂ ಗಳನ್ನೂ [illegible] ರಂಗಪ್ಪನವರು [illegible] ರೂ ಗಳನ್ನೂ [illegible] ರೂ ಗಳನ್ನೂ ಮೈಸೂರಿನ [illegible] ಕುಟುಂಬದವರು [illegible] ರೂ ಗಳನ್ನೂ ಚನ್ನೆನಿಂಗನಹಳ್ಳಿ ದಾಸಪ್ಪನವರು [illegible] ರೂ ಗಳನ್ನೂ ತಮ್ಮ ಮನೆಗಳಲ್ಲಿ ನಡೆದ ಲಗ್ನ ಸಮಾರಂಭದಲ್ಲಿ ಕೊಡುಗೆಯಾಗಿ ಕೊಟ್ಟಿರುತ್ತಾರೆ.

ಇಟಲಿಯಲ್ಲಿ ಶತ್ರು ಮುನ್ನಡೆ

ಇಟಲಿಯ [illegible] ಜರ್ಮನರು [illegible] ಮುನ್ನಡೆ ಬಂದಿದೆ.

ರೇಷ್ಮೆಹೊಂದಿದಕ್ಕೆ ೧೦೦ ರೂ. ಜುಲ್ಮಾನೆ

— ಮೊನ್ನೆ ತಿಳಿಸಿದಂತೆ ಹಾಸನದ ಸುಬ್ಬರಾಯಶೆಟ್ಟಿ, ರಾಮನಾಥಪುರದ ಸ್ವಾಮಿ ವೆಂಕಟರಮಣಯ್ಯ, ಮೈಸೂರು [illegible] ವಿಕ್ರಮ್ ಇವರುಗಳು ಸುಮಾರು [illegible] ರೂ. ಬೆಲೆ ಬಾಳುವಷ್ಟು ರೇಷ್ಮೆಯನ್ನು ಕಾನೂನು ವಿರುದ್ಧವಾಗಿ ಹೊಂದಿದ್ದರೆಂಬ ಆಪಾದನೆಯ ಮೇಲೆ ಈ ಎಲ್ಲ ನಗರದ ನ್ಯಾಯಾಧೀಶರು ಅವರಿಗೆ ೧೦೦ ರೂ. ದಂಡ ವಿಧಿಸಿದರು. ಮತ್ತು ಎಲ್ಲ ರೇಷ್ಮೆಯನ್ನು ಮೊಕದ್ದಮೆ [illegible] ಕೊಡಬೇಕೆಂದು ಆಜ್ಞೆ ಮಾಡಿರುವರು.

ಮುಸ್ಲಿಂ ಅನಾಥಾಲಯ

ಮೈಸೂರು ನಗರದ ಮುಸ್ಲಿಂ ಅನಾಥಾಲಯಕ್ಕೆ ಶ್ರೀ [illegible] ರನ್ನು ಅಧ್ಯಕ್ಷರನ್ನಾಗಿ [illegible]

ಮೊಮ್ಮಗಿಲ್ಲದವರಿಗೆ ಅಕ್ಕಿ ಕಳಿಸಿದರೂ ದಸ್ತೇ?

[illegible]

ಬಿಡನರ್ ದೇವಿ ಸಂಗೀತ

ಸ್ವಂ.ಸು.] ಬೆಂಗಳೂರು ೩

ಈ ತಿಂಗಳಿನ ಹಾರಕ್ಕೆ ಪ್ರಸಿದ್ಧ ಚಿತ್ರ ಗಾಯಿಕಿಯಾದ ಶ್ರೀಮತಿ ಕಾನನ್ ದೇವಿಯವರು ಅವರ ಪತಿ ಅಶೋಕ ಮೈತ್ರರವರೊಡನೆ ಬೊಂಬಾಯಿಂದ ಬೆಂಗಳೂರಿಗೆ ಬರುವರು. ಅಲ್ಲಿ ಅವರ ಸಂಗೀತ ಕಛೇರಿ ನಡೆಯಲು ಏರ್ಪಾಡುಗಳು ನಡೆದಿವೆ.

— —

ಭಾರತ ಸರಬರಾಜು ಅಧಿಕಾರಿ

ಭಾರತ ಸರ್ಕಾರದ ಸರಬರಾಜು ಉಪ ಸಂಚಾಲಕರಾದ ಮಿ॥ ಮ್ಯಾಕ್ ರ್ಕಡಾಲ್ ರವರು ಇಂದು ಬೆಂಗಳೂರಿಗೆ ಆಗಮಿಸಿದರು. ಸರ್ಕಾರದ ಅಧಿಕಾರಿಗಳಾಗಿರುವರು

ಕಲ್ಲಿದ್ದಲಿನೊಳಗೆ ರೇಷ್ಮೆ !

ಸ್ವಸ್ತಿ ರೈಲ್ವೆ ಸ್ಟೇಷನ್ ಹಳ್ಳಿ, ರಸ್ತೆ ಯಲ್ಲಿ ಕಲ್ಲಿದ್ದಲು ತುಂಬಿದ ಗಾಡಿಯೊಂದು ಸಾಗುತ್ತಿತ್ತು. ಗುಮಾಸ್ತರು ಮೇಲೆ ಕಲ್ಲಿದ್ದಲನ್ನು ಕೆದಕಿ ನೋಡಲಾಗಿ ಅಲ್ಲಿ ನೂರು ಪೌಂಡಿನಷ್ಟು ಕಚ್ಚಾ ರೇಷ್ಮೆ ಇದ್ದುದು ಕಂಡು ಬಂದಿತು. ಸಿಲ್ಕ್ ಕಂಟ್ರೋಲ್ ರಾಜ್ಯಾಧಿಕಾರಿಗಳು ಈ ಕಳ್ಳತನವನ್ನು ಪತ್ತೆ ಹಚ್ಚಿ ರೇಷ್ಮೆ ಮುಟ್ಟುಗೋಲು ಹಾಕಿಕೊಂಡಿರುವರು.

ಕೊಬ್ಬರಿ ಕಳ್ಳರು ಸಿಕ್ಕಿದರು

ಕಳೆದ ತಿಂಗಳು ೨೪ ರಲ್ಲಿ ಬೆಂಗಳೂರು ಸಿಟಿ ಸ್ಟೇಷನ್‌ನಲ್ಲಿದ್ದ ಗೂಡ್ಸ್ ಗಾಡಿಯಿಂದ ೬ ಚೀಲ ಕೊಬ್ಬರಿ ಮತ್ತು ಹುರುಳಿ ಮೂಟೆಗಳನ್ನು ಕದ್ದು ಹಾಕಿದ್ದ ಆಸಾಮಿಗಳನ್ನು ನೊನ್ನೆ ಪತ್ತೆ ಹಚ್ಚಿ ಹಿಡಿದು ಜೈಲಿಗೆ ರಿಮ್ಯಾಂಡ್ ಮಾಡಲಾಯಿತು.

Edited, printed and published by A. R. Nagarajan, at the Sadhvi Press, D. Subbiah Road, Mysore

ಮಲೇರಿಯಾ ಬಗ್ಗೆ ಚಲನ ಚಿತ್ರ

ಸುಪ್ರಸಿದ್ಧ ವ್ಯಂಗ್ಯ ಚಿತ್ರಕಾರರಾದ ವಾಲ್ಟ್ ಡಿಸ್ನಿಯವರು ಮಲೇರಿಯಾ ಪ್ರತಿಬಂಧಕ ಮತ್ತು ನಿವಾರಣೆ ವಿಚಾರವಾಗಿ ಪ್ರಚಾರ ಚಲನಚಿತ್ರ ನಿರ್ಮಿಸಿರುವರು. ಅದನ್ನು ಅಮೆರಿಕಾ ಯುದ್ಧ ಇಲಾಖೆಯವರು ಇಷ್ಟರಲ್ಲೇ ಭಾರತಕ್ಕೆ ಪ್ರದರ್ಶನಕ್ಕಾಗಿ ಕಳುಹಲಿದ್ದಾರೆ

ಅಖಿಲ ಭಾರತ ಕೀರ್ತನ ಸಮ್ಮೇಳನ

ಇದೇ ೧೧ ನೇ ತಾ॥ ನಿಂದ ನಾಲ್ಕು ದಿನಗಳು ಬೊಂಬಾಯಿ ನಗರದಲ್ಲಿ ಅಖಿಲ ಭಾರತ ಕೀರ್ತನ ಪರಿಷತ್ತು ಶ್ರೀ ಗೋಸ್ವಾಮಿ ಮಹಾರಾಜರ ಅಧ್ಯಕ್ಷತೆಯಲ್ಲಿ ನಡೆಯುವುದಾಗಿದೆ. ಅಲ್ಲಿ ಎಲ್ಲ ಭಾಷೆಗಳಲ್ಲೂ ಕೀರ್ತನೆ ನಡೆಸಲು ಯೋಚಿಸಿದೆ. ಕೀರ್ತನ ಪ್ರೇಮಿಗಳೆಲ್ಲರಿಗೂ ಆಹ್ವಾನವಿದೆಯೆಂದು ಗೊತ್ತಾಗಿದೆ.

ಸಿಲೋನಿನಲ್ಲಿ ಮಳೆಗೆ ಪ್ರತಿಬಂಧಕ

ಭಾನುವಾರ, ಬುಧವಾರ, ಶನಿವಾರಗಳನ್ನು ಬಿಟ್ಟು ಉಳಿದ ದಿನ ಯಾರೂ ಗೋವು, ಎಮ್ಮೆ, ಕುರಿ, ಆಡು ಮುಂತಾದುವನ್ನು ವಧಿಸಕೂಡದೆಂದು ಸಿಲೋನಿನ ಸಿವಿಲ್ ಡಿಫೆನ್ಸ್ ಕಮಿಷನರ್‌ರು ಆಜ್ಞಾಪಿಸಿರುವರು.

— —

ಪೋಲಿಂಗ್ ಬೂತ್ ಅನಾಯಕ

ನೆಲಮಂಗಲದ ತಾಲೂಕಿನ ದಾಬಸ್ ಪೇಟೆಯಲ್ಲಿ ಕಳೆದ ತಿಂಗಳು ೨೦ನೇ ತಾ॥ ಚುನಾವಣೆ ನಡೆದಾಗ ಪೋಲಿಂಗ್ ಆಫೀಸರ್ ಆದ ಸ್ಥಳದ ಅಮಲ್ದಾರರು ಪೋಲಿಂಗ್ ಬೂತಿನಲ್ಲಿ ಕುಳಿತು ತಮ್ಮ ಕೈವಾಡ ಅತಿಯಾಗಿ ನಡೆಸುತ್ತಿದ್ದರಿಂದಲೂ ಬೂತಿನಲ್ಲಿದ್ದ ಆಸೆಸರುಗಳು ಅದನ್ನು ಸೈರಿಸಲಾರದೆ ಹೊರಕ್ಕೆ ಎದ್ದು ಬಂದು ಬಿಟ್ಟರೆಂದೂ ವರದಿಯೊಂದು ತಿಳಿಸುತ್ತದೆ.

ಶತ್ರು ಏಟಿಗೆ ಬೀಳದೆ ಬಂದ ವಿಮಾನ

ಇಂಫಾಲ್ ಆಚೆ ಪಶ್ಚಿಮದಲ್ಲಿ ಮಿತ್ರ ವಿಮಾನ ಒಂದನ್ನು ಶತ್ರು ಸೈನಿಕರು ಎದುರಿಸಿ ಒಂದೇ ಸಮನೆ ಗುಂಡು ಹಾರಿಸಿದರು. ತತ್ಫಲವಾಗಿ ಅದರಲ್ಲಿದ್ದ ೬೦ ಮಂದಿ ಪೈಕಿ ೧೫ ಜನಕ್ಕೆ ಗಾಯಗಳಾದುವು. ವಿಮಾನ ಹಾರಲು ಸಹಕರಿಸುತ್ತಿದ್ದ ಪೆಟ್ರೋಲ್ ಎಣ್ಣೆ ಕೆಳಗಿನಿಂದಲೂ ಏಟು ತಗುಲಿ ಎಣ್ಣೆ ಸೋರುತ್ತಿತ್ತು. ಶತ್ರು ಏಟಿನಿಂದ ವಿಮಾನಕ್ಕೆ ನೂರು ರಂಧ್ರಗಳಾಗಿದ್ದವು. ಇಷ್ಟಾದರೂ ಆ ಮಿತ್ರ ವಿಮಾನ ತನ್ನ ಆಶ್ರಯವನ್ನು ಬಂದು ಸೇರಿತು.

ಜಪಾನರ ಕುಯುಕ್ತಿ ಬೇಯದು

ಅರಕಾನ್ ರಂಗದಲ್ಲಿ ಆಲ್ಲಲ್ಲಿ ರಾತ್ರಿ ಹೂಡಿರುವ ಮಿತ್ರ ಸೈನಿಕರಬಳಿಗೆ ಅವರ ಬಲ ಪರೀಕ್ಷಿಸಲು ಜಪಾನರುಬಂದು ಇಂಗ್ಲಿಷಿನಲ್ಲಿ ಏನೇನೊ ಪ್ರಶ್ನೆಗಳನ್ನು ಕೇಳುವುದುಂಟು. ಮಾಯಾ ಪರ್ವತ ತಪ್ಪಲಲ್ಲಿ ಬೀಡು ಬಿಟ್ಟಿರುವ ಬೆಲೂಚಿಸ್ಥಾನ ಸೈನಿಕರ ಹತ್ತಿರ ಒಂದು ಜಪಾನಯೋಧರು ಬಂದು ಕೆಪ್ಟನ್ ಬೇಕೆ ? ಎಂದು ಪ್ರಶ್ನೆ ಹಿಡಿದರೆಂದೂ ಆಗ ಅವರ ಪ್ರಶ್ನೆಗೆ ಉತ್ತರವಾಗಿ ಮಿತ್ರ ಯೋಧರು ಗ್ರೆನೇಡ್‌ಗಳನ್ನು ಎಸೆದರೆಂದೂ ಹತ್ತಿರಲು ಹಾಗಿ ಜಪಾನೀ ಸೈನಿಕರು ಈಗ ಬೆಲೂಚೀಸ್ಥಾನದ ಸೈನಿಕರನ್ನು ಮಾತಾಡಿಸುವ ತಂಟೆಗೇ ಹೋಗುವುದಿಲ್ಲವೆಂದೂ ವರದಿಗಳು ಬಂದಿವೆ.

— —

೨೨ರಲ್ಲಿ ೧೫ ಕಾಂಗ್ರೆಸ್

ಕೋಲಾರದ ಜಿಲ್ಲಾ ಬೋರ್ಡಿನ ೨೨ ಚುನಾಯಿತ ಸದಸ್ಯ ಪೀಠಗಳ ಪೈಕಿ ೧೫ ಕಾಂಗ್ರೆಸ್ ಪಕ್ಷದ ಉಮೇದುವಾರರು ಚುನಾಯಿತರಾಗಿ ಬಂದಿರುವರೆಂದು ಸುದ್ದಿ ಬಂದಿದೆ.

* * * *

ಮೈಸೂರು ಮಂಡಿಮೊಹಲ್ಲಾ ಟಿಂಬರ್ ವರ್ತಕರ ಸಹೋದರರ ಕುಮಾರರಾದ ಶ್ರೀ ಟಿ. ಸದಾಶಿವಯ್ಯನವರಿಗೆ ನಗೂನಹಳ್ಳಿ ಶ್ರೀ॥ ನರಸಿಂಹೇಗೌಡರ ಕುಮಾರಿ ಚಿ॥ ಸೌ॥ ಕೆಂಪಮ್ಮನವರನ್ನು ತಂದುಕೊಂಡು ನಾಳೆ ನಗೂನಹಳ್ಳಿಯಲ್ಲಿ ವಿವಾಹ ನಡೆಯುವದಾಗಿದೆ

ಚರ್ಚಿಲ್ ಎಲ್ಲಿರುವರನೆಲ್ಲಿ ?

ಕ್ರೋಷಿಯದಲ್ಲಿ ನಡೆದ ಫ್ಯಾಸಿಸ್ಟ್ ವಿರೋಧ ಸಮ್ಮೇಳನಕ್ಕೆ ಮಿ॥ ಚರ್ಚಿಲ್‌ರ ಮಗ ಮೇಜರ್ ರಾಂಡೋಲ್ಫ್ ಚರ್ಚಿಲ್‌ರು ಹಾಜರಾಗಿದ್ದರು. ಇವರು ಪ್ಯಾರಚೂಟಿನಲ್ಲಿ ಕ್ರೋಷಿಯಾಕ್ಕೆ ಹೋಗಿ ಇಳಿದರು

— —

ವಿವಾಹಗಳು

ರಾಜಧಾನಿ ಮಿಲ್ಲರ್ಸ್ ಅಡ್ವೋಕೇಟ್ ಶ್ರೀ॥ ಎನ್. ಶ್ರೀಕಂಠಯ್ಯನವರು ತಮ್ಮ ಕುಮಾರ ಚಿ॥ ಎಂ ಎಸ್. ಕೃಷ್ಣರಾವ್‌ರಿಗೆ ತಿರುಮಕೂಡ್ಲು ನರಸೀಪುರದ ಅಮಲ್ದಾರ್ ಶ್ರೀ॥ ಎಸ್. ಬಿ ವೆಂಕಟಸುಬ್ಬಯ್ಯನವರ ಕುಮಾರಿ ಚಿ॥ ಸೌ॥ ಪಾರ್ವತಮ್ಮನವರನ್ನು ತಂದುಕೊಂಡು ಇದೇ ೧೧ನೇ ತಾ॥ ತಿರುಮಕೂಡ್ಲು ಕ್ಷೇತ್ರದಲ್ಲಿ ಲಗ್ನ ಸಮಾರಂಭ ಜರುಗುವುದು.

* * * *

ರಾಜಧಾನಿ ಜೂನಿಯರ್ ಮೆಟ್ರಿಕ್ಯುಲೇಷನ್ ರ್ಸ್ಟ್ ಕಾಲೇಜ್ ಪ್ರಿನ್ಸಿಪಾಲ್ ಶ್ರೀ ಸಿ. ಸ. ಸುಬ್ರಹ್ಮಣ್ಯಶಾಸ್ತ್ರಿಗಳು ತಮ್ಮ ಮಗ ಶ್ರೀ ಎಂ. ಎಸ್. ಪುಟ್ಟಣ್ಣನವರಿಗೆ ತುಮಕೂರಿನ ಡಾ॥ ಎಲ್. ವಿ ರಾಜಾರಾವ್‌ರವರ ಮಗಳು ಚಿ॥ ಸೌ॥ ಸುಬ್ಬಲಕ್ಷ್ಮಮ್ಮನವರನ್ನು ತಂದುಕೊಂಡು ಇದೇ ೧೧ ನೇ ತಾ॥ ತುಮಕೂರಿನಲ್ಲಿ ಲಗ್ನ ನೆರವೇರಿಸುವರು.

— —

ಝಾನ್ಸಿ ಕ್ಷೇತ್ರದಲ್ಲಿ ರಷ್ಯರ ಆಕ್ರಮಣ

ಮುಖ್ಯವಾದ ಜಾಸಿ ರೈಲ್ವೆ ನಿಲ್ದಾಣಕ್ಕೆ ಪಶ್ಚಿಮ ದಿಕ್ಕಿನಲ್ಲಿ ರಷ್ಯ ಯೋಧರು ಆಕ್ರಮಣ ಕಾರ್ಯವನ್ನು ನಡೆಸುತ್ತಿರುವರೆಂದು ಒಂದು ವರದಿ ತಿಳಿಸುತ್ತದೆ.

ಲಾ ರೈಲ್ವೆ ಜಂಕ್ಷನ್‌ಗೆ ಹೊಡೆತ

ಪೋಲೆಂಡಿನ ರೈಲ್ವೆ ಜಂಕ್ಷನ್ ಲಾ ನಗರದ ಮೇಲೆ ರಷ್ಯನರು ಭೀಕರ ವಿಮಾನ ಧಾಳಿ ನಡೆಸಿ ಅಲ್ಲಿಂದ ಜರ್ಮನ್ ಯೋಧರನ್ನು ತುಂಬಿಕೊಂಡು ಹೊರಡಲನುವಾಗಿದ್ದ ರೈಲು ಬಂಡಿಗಳನ್ನು ಸೈನಿಕರ ಸಮೇತ ನುಚ್ಚು ನೂರು ಮಾಡಿರುವರು.

ಕಲ್ಲಿದ್ದಲು ಹಕೋಟೆ

ಜರ್ಮನ್ ತಿಂಗಳಿಂದ ಗಣಿಗಳಿಂದ ದಿನಾನಿತ್ಯ ಬರುವ ಕಲ್ಲಿದ್ದಲಿನ ಹಕೋಟೆಯನ್ನೆಲ್ಲಾ ಕೇಂದ್ರ ಸರ್ಕಾರದವರೇ ವಹಿಸಿಕೊಳ್ಳುತ್ತಾರೆ. ಎಲ್ಲ ವಿಧ ಕಲ್ಲಿದ್ದಲಿನ ಬೆಲೆಯನ್ನೂ ಸರ್ಕಾರವೇ ನಿಗದಿ ಮಾಡುವುದು.

ಅಮೋಘವಾದ 5 ನೇ ವಾರ

4-5-44 ರಿಂದ

★ ವಾಣಿ ★

ಹೆಚ್. ಆರ್. ಜಿ. ಸಿ. ಫ್ರೀ ಪಿಕ್ಚರ್ಸ್ — ಶಿವಬಸವಸ್ವಾಮಿಯವರ ತಯಾರಿಕೆ

ಮೈಸೂರು ಚಾಮುಂಡೇಶ್ವರೀ ಟಾಕೀಸ್

ಸ್ವೀಯರ ಸೌಕರ್ಯಕ್ಕೆ

ಹೊಸ ಯಂತ್ರಗಳಿಂದ ಶುದ್ಧವಾಗಿ ...

ಮನೆಯಲ್ಲಿ ತಯಾರಾಗುವ ಸುಪ್ರಸಿದ್ಧ

ಶ್ರೀ ಬ್ರಾಂಡ್ ಕಾಫಿ ಪುಡಿ

ಉಪಯೋಗಿಸಿ.

ಸ್ಟಾಕಿಸ್ಟು, ಬನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ದೇವರಾಜ ಮೊಹಲ್ಲಾ 4 ನೇ ನಂಬರ್ ರೇಷನ್ ಡಿಪೋ ಮತ್ತು

ಪೋಸ್ಟ್ ಆಫೀಸಿನಲ್ಲಿ ಡಿಪೋ 8 ನೇ ನಂಬರ್ ಡಿಪೋ

ವಾರ್ಜ್ ಬಂದಿಯಿತು ತೆರೆದಿರುತ್ತೆ.

ಹಾಗೂ ಮೊಹಲ್ಲಾ ರೇಷನ್ ಕಾರ್ಡುಗಳಿದ್ದರೂ

... ಪ್ರತಿಯಾಗಿ ಬಂದು ಮತ್ತು ... ಕೊಡಲ್ಪಡುತ್ತೆ

ಪ್ರತಿ ದಿನ ೩ ಆಟಗಳು

4-5-44 ರಿಂದ

ಅಪೇರಾ ಟಾಕೀಸ್



ನಾಗಯ್ಯ, ಕಮಲಾ ಕೋಟ್ನಿಸ್

ಮತ್ತು ನಾರಾಯಣರಾವ್

ಪಾತ್ರ ವಹಿಸಿರುವ

ಚೆಂಚು ಲಕ್ಷ್ಮಿ

(ತೆಲುಗು ಭಾಷೆ)

ಸಂಪುಟ ೨] ಶುಕ್ರವಾರ ೫-೫-೪೪ [ಸಂಚಿಕೆ ೨೪೫

ಗಾಂಧೀಜೀ ಬಿಡುಗಡೆಗೆ ಸರ್ಕಾರ ನಿಗ ಕೊಟ್ಟಿಲ್ಲ

ಅಸ್ಸಾಮಿನ ನಿವಾಸಿಗಳು ಬಂಗಾಳಕ್ಕೆ ಬರುತ್ತಿರುವರು

ಇಂಫಾಲ್ ಮುತ್ತಿಗೆ ಪ್ರತಿಭಟಿಸಲು ಸಿದ್ಧತೆ

ಅಗ್ನಿಪ್ರಮಾದ ಪ್ರದೇಶ ಮಿಲಿಟರಿ ವಶಕ್ಕಿಲ್ಲ

ಮುಂಬೈಲಿ ಅಸ್ಫೋಟನೆಗೊಳಗಾದ ಪ್ರದೇಶವನ್ನು ಮಿಲಿಟರಿಯವರು ಬಿಡುತ್ತಿರುವರೆಂದು ಹೊರಟ ಸುದ್ದಿ ಸುಳ್ಳೆಂದು ಮಿಲಿಟರಿ ಅಧಿಕಾರಿಗಳು ತಿಳಿಸಿರುವರು ಕಾರ್ನ್ಯಾಕ್‌ನಿಂದ ವಾಡಿ ಬಂದರಿನ ನಡುವಿನ ಪ್ರದೇಶವೆಲ್ಲಾ ಮಿಲಿಟರಿ ವಶಕ್ಕೆ ಹೋಗುವುದೆಂದು ಸುದ್ದಿ ಹಬ್ಬಿತ್ತು.

ಮುಂದಿನ ವಾರದಿಂದ ತನಿಖೆ

ಬೊಂಬಾಯಿ. ಅಸ್ಫೋಟನ ವಿಚಾರಣಾ ಸಮಿತಿಯವರು ಮುಂದಿನ ವಾರದಿಂದ ಮುಂಬೈನಲ್ಲಿ ಘಟನಾವಳಿಗಳ ವಿಚಾರಣೆ ಆರಂಭಿಸುವರು

೨೫ ಸಾವಿರ ಧಾನ್ಯ ಚೀಲ ಬೆಂಕಿಗೆ ಸಿಕ್ಕಿಲ್ಲ

ಮುಂಬೈ ಅಗ್ನಿಪ್ರಮಾದಕ್ಕೊಳಗಾದ ಭಗ್ನಾವಶೇಷವನ್ನು ತೆಗೆಯುವ ಕೆಲಸ ಇನ್ನೂ ಮುಗಿದಿಲ್ಲ ಅನೇಕ ಚಿನ್ನ ಬೆಳ್ಳಿ ವಸ್ತುಗಳು ಸಿಕ್ಕಿವೆ. ಬೆಂಕಿಗೆ ಸಿಕ್ಕದ ೨೫ ಸಾವಿರ ಚೀಲಗಳು ಧರ್ಮ ಧಾನ್ಯ ಸಮೇತ ಸಿಕ್ಕಿವೆ.

ಹರಿಕಥೆ

ಮೈಸೂರು ೩

ನಾಳೆ ಶನಿವಾರ ಹಳೇ ಅಗ್ರಹಾರದ ಶ್ರೀನಿವಾಸ ರಾಘವೇಂದ್ರ ಗಾಂಧರ್ವ ವಿದ್ಯಾ ಶ್ರೀರಾಮ ಮಂದಿರದಲ್ಲಿ ಶ್ರೀರಾಮ ಪಟ್ಟಾಭಿಷೇಕ ಸಲುವಾಗಿ ರಾತ್ರಿ ೧೦ ಗಂಟೆಗೆ ಹರಿಕಥಾ ವಿಶಾರದ ಶ್ರೀ ವಿ. ಸುಬ್ಬರಾಯರಿಂದ "ಶ್ರೀರಾಮ ಪಾದುಕಾ ಪಟ್ಟಾಭಿಷೇಕ" ವೆಂಬ ಹರಿಕಥೆ ನಡೆಯಲು ಏರ್ಪಾಡಾಗಿದೆ

೨ ಸಾರಿ ಡ್ರಾ ಆಗಿದ್ದ ಫುಟ್‌ಬಾಲ್ ಮ್ಯಾಚ್

ನಿನ್ನೆ ಸಂಜೆ ದೊಡ್ಡಕೆರೆ ಮೈದಾನದಲ್ಲಿ ಸಿ. ಸಿ. ಸಿ ಗೋಲ್ಡ್‌ಮೆಡಲ್ ಫುಟ್‌ಬಾಲ್ ಪಂದ್ಯಗಳ ಫೈನಲಿನಲ್ಲಿ ಹಿಂದೆ ಎರಡು ಸಾರಿ ಸಮವಾಗಿದ್ದ ಕಲ್ಯಾಣ್ ಬಾಯ್ಸ್ ಕ್ಲಬ್ ಆಟಗಾರರಿಗೂ ಮೈಸೂರು ರೈಲ್ವೆ ಕ್ಲಬ್ ಆಟಗಾರರಿಗೂ ಪುನಃ ಪಂದ್ಯ ನಡೆಯಿತು ಕಲ್ಯಾಣ್ ಬಾಯ್ಸ್ ಆಟಗಾರರು ೨ ಗೋಲು ಹೊಡೆದು ಜಯಶಾಲಿಗಳಾದರು ಆಟ ಮನೋರಂಜಕವಾಗಿತ್ತು

ಮೊಹಲ್ಲಾ ಪರಿಶೀಲನೆ

ರಾಜಧಾನಿ ಪೌರಸಭೆಯ ಕಾಂಗ್ರೆಸ್ ಪಕ್ಷದ ಸದಸ್ಯರುಗಳು ನಿನ್ನೆ ಭಾನುವಾರ ಬೆಳಗ್ಗೆ ೯ ಗಂಟೆಯಿಂದ ೧೧-೩೦ ಗಂಟೆವರೆಗೆ ಇಟ್ಟಿಗೆಗೂಡು ಮೊಹಲ್ಲಾದಲ್ಲಿ ಸಂಚರಿಸಿ ಮೊಹಲ್ಲಾ ಪರಿಶೀಲನೆ ನಡೆಸಿದರು. ನಿವಾಸಿಗಳು ತಮ್ಮ ಕುಂದುಕೊರತೆಗಳನ್ನು ಹೇಳಿಕೊಳ್ಳಬಹುದೆಂದು ಈ ಮೂಲಕ ತಿಳಿಸಲಾಗಿದೆ

೫೦ ರೂ. ದಂಡ

ಮೈಸೂರು ಪೇಟೆಯಲ್ಲಿ ಗೆಣಸು [illegible] ಹಣ್ಣನ್ನು [illegible] ಯಾವ ಪರ್ಮಿಟ್ಟಿಲ್ಲದೆ ಸಾಗಿಸುತ್ತಿದ್ದ ಶ್ರೀ [illegible] ಚನ್ನಪ್ಪನವರ [illegible] ನ್ಯಾಯಾಧೀಶರು [illegible] ಪೊಲೀಸು [illegible] ಡೈಸುವು. ಇವರನ್ನು ಸ್ಪೆಷಲ್ [illegible] ನ್ಯಾಯಾಧೀಶರ ಎದುರಿಗೆ ೫೦ ರೂ. ದಂಡ ಹಾಕಿದರು

ಮಹಾತ್ಮರನ್ನು ನೋಡಲು ದೇವದಾಸರಿಗೆ ಅವಕಾಶ

ಗಾಂಧೀಜಿಯವರ ಬಿಡುಗಡೆ ಬಗ್ಗೆ ಸರ್ಕಾರದವರ ನೀತಿ ಬದಲಾವಣೆಯಾಗಿದೆಯೆಂಬ ಬಗ್ಗೆ ಸೂಚನೆ ಏನೂ ಕಂಡುಬಂದಿಲ್ಲ. ಆದರೂ ಬೊಂಬಾಯಿ, ಇಂಡಿಯಾ ಮತ್ತು ಬ್ರಿಟಿಷ್ ಸರ್ಕಾರಗಳು ಈ ಅಂಶವನ್ನು ಪರಿಶೀಲಿಸುತ್ತಿರಲು ಸಾಧ್ಯ. ದೇವದಾಸ ಗಾಂಧಿಯವರು ಆಪೇಕ್ಷೆ ಪಟ್ಟರೆ ಪೂನಾಕ್ಕೆ ಹೋಗಲು ಅವಕಾಶ ಮಾಡಲಾಗುವಂತಿದೆ. ರಾಜಕೀಯ ರಂಗಗಳಲ್ಲಿ ಗಾಂಧೀಜಿಯವರ ಬಿಡುಗಡೆ ಬಗ್ಗೆ ಒತ್ತಾಯದ ಪ್ರಯತ್ನಗಳಾಗುತ್ತಿವೆ ಮುಂದಿನ ಬುಧವಾರ ವೈಸ್ರಾಯರ ಮಂತ್ರಿ ಮಂಡಲದಲ್ಲಿ ಈ ಪ್ರಶ್ನೆ ಪರಿಶೀಲಿಸಲ್ಪಡಬಹುದೆಂದು ನಿರೀಕ್ಷಿಸಲಾಗಿದೆ.

ಕೂಡಲೆ ಬಿಡುಗಡೆಯಾಗಬೇಕು

ಮುಂಬೈ ಪ್ರಜಾ ಸಂಘ, ಭಾರತೀಯ ಕೈಗಾರಿಕೆಗಳ ಸಂಘ, ಸೂರತ್ ವಾಣಿಜ್ಯ ಸಂಘ, ಮದರಾಸಿನ ಡಾ॥ ಅರುಂಡೇಲ್ ದೆಹ್ಲಿಯ ಡಾ॥ ಮುತ್ತುಲಕ್ಷ್ಮಿ ರೆಡ್ಡಿ ಮುಂತಾದವರು ಸರ್ಕಾರಕ್ಕೆ ವಿನಂತಿ ಮಾಡಿ ಕೂಡಲೆ ಮಹಾತ್ಮರನ್ನು ಬಿಡುಗಡೆ ಮಾಡಿರೆಂದರು. ಕೋಲದ್ವಾರಿ ಅಹಮದಾಬಾದಿನ ಒಟ್ಟು ನಗರಕರು ನಿನ್ನೆ ದಿನ ಅಂಗಡಿಗಳನ್ನು ಮುಚ್ಚಿ ಮಹಾತ್ಮರ ಆರೋಗ್ಯಕ್ಕಾಗಿ ಪ್ರಾರ್ಥನೆಗಳನ್ನು ನಡೆಸಿದರು. ಮದರಾಸಿನ ಭಾರತೀಯ ರಾಷ್ಟ್ರೀಯ ಸಂಘದವರು ಸಹ ಪ್ರಾರ್ಥನಾ ಕೂಟ ನಡೆಸಿದರು.

ಗಾಂಧೀಜೀ ಬಳಿಗೆ ಮೊಮ್ಮಗ

ದಕ್ಷಿಣ ಆಫ್ರಿಕಾದ ಮೊಮ್ಮಗನಾದ [illegible] ಗಾಂಧಿಯವರಿಗೆ ಆಗಾಖಾನ್ ಅರಮನೆಯಲ್ಲಿ [illegible] ಭೇಟಿಯಾಗಲು [illegible] ಶ್ರೀ [illegible] ಗೋರ್ಡನ್ ಭೇಟಿ ಮಾಡಿ ಮಹಾತ್ಮರ ಆರೋಗ್ಯದ ಬಗ್ಗೆ [illegible]

ಶತ್ರುಗಳು ಬ್ರಿಟನ್ ಬಿಟ್ಟರೆ?

ಬ್ರಿಟನ್ [illegible] ನಿಯಮ [illegible] ಕೊಳಿಸಲಾಗಿದೆ

ಇಂಫಾಲ್ ಉಳಿಸಿಕೊಳ್ಳುವ ಸಿದ್ಧತೆ

ಸಿರಸಾಲದಲ್ಲಿ ನಾನಾ ದಿಕ್ಕುಗಳಿಂದ ಜಪಾನರು ಇಂಫಾಲ್ ಮೇಲೆ ಬೀಳುವ ಸಂಭವ ಪ್ರತಿ ಗಂಟೆಯಲ್ಲೂ ನಿರೀಕ್ಷಿಸಲ್ಪಟ್ಟಿದೆ. ಆದಕಾರಣ ಮಿತ್ರರು ಜಪಾನರ ಇಂಫಾಲ್ ಮುತ್ತಿಗೆಯನ್ನು ಮುರಿಯಲು ಸಿದ್ಧರಾಗಿ ಕಾಳಗವಾದರೆಂದು ವರದಿಗಳು ಬಂದಿವೆ

ಇಟಲಿ ಮೇಲೆ ೩೦ ಸಾವಿರ ಟನ್ ಬಾಂಬು

ಭೂಮಧ್ಯ ಸಮುದ್ರ ತೀರದ ನೆಲೆಗಳಿಂದ ಹೊರಟ ಇಟಲಿಯಲ್ಲಿನ ಶತ್ರುಗಳ ಮೇಲೆ ಧಾಳಿ ಮಾಡಿ ಬಂದ ಮಿತ್ರ ವಿಮಾನಗಳು ಏಪ್ರಿಲ್ ತಿಂಗಳೊಂದರಲ್ಲಿ ೩೦,೦೦೦ ಟನ್ನುಗಳಷ್ಟು ಬಾಂಬುಗಳನ್ನು ಶತ್ರು ಗುರಿಗಳ ಮೇಲೆ ಸುರಿದು ಅಧಿಕ ನಷ್ಟಗೊಳಿಸಿವೆ ಹಿಂದೆ ಯಾವ ತಿಂಗಳಲ್ಲೂ ಇಷ್ಟು ಹೆಚ್ಚು ಬಾಂಬುಗಳನ್ನು ಸುರಿಸಿಲ್ಲ

ಶತ್ರು ವಾಪಸಾಗಲು ಅಡಚಣೆ

ಸಾಲೊಮನ್ಸ್, ನ್ಯೂಗಿನಿ ನ್ಯೂಬ್ರಿಟನ್‌ಗಳಿಂದ ವಾಪಸಾಗುತ್ತಿರುವ ಜಪಾನರ ಮೇಲೆ ಮಿತ್ರ ವೈಮಾನಿಕರು ಧಾಳಿ ಮಾಡಿ ಅವರು ವಾಪಸಾಗಲು ಬಹಳ ಅಡಚಣೆ ಒಡ್ಡುತ್ತಿರುವರು

ನಾಜಿ ಕೈಗಾರಿಕೆಗೆ ಸ್ಪೇನ್ ಜನಬಲ

ಜರ್ಮನಿ ಯುದ್ಧ ಕೈಗಾರಿಕಾ ಕಾರ್ಖಾನೆಗಳಲ್ಲಿ ದುಡಿಯಲು ಸ್ಪೇನಿನ ಪ್ರಜೆಗಳನ್ನು ಕಳುಹಿಸಲು ಏರ್ಪಡಿಸಿದ ಪ್ರಯತ್ನ ಗಳು ನಡೆದಿವೆ.

ಅ॥ ಭಾ॥ ಕಾಂ॥ ಕಛೇರಿ ಯೋಗಕ್ಷೇಮ

ಅಲಹಾಬಾದಿನಲ್ಲಿರುವ ಅಖಿಲ ಭಾರತ ಕಾಂಗ್ರೆಸ್ ಕಛೇರಿ [illegible]

ಪೌರಸಭೆಗಳ ಮೇಲೆ ಗಧಾ ಪ್ರಹಾರ

ಸೂರತ್ ಮತ್ತು ಅಹಮದಾಬಾದ್ ಪೌರಸಭೆಗಳವರು ಏಪ್ರಿಲ್ ೧೦ ರಲ್ಲಿ ಸಭೆ ಸೇರಿ, ರಾಜಕೀಯ ಕಾರಣಗಳ ದೃಷ್ಟಿಯಿಂದ ಪೌರಸಭೆಗಳು ಕೆಲಸ ನಿಲ್ಲಿಸಬೇಕೆಂದು ಠರಾವು ಮಾಡಿದ್ದರು ಇಂಥ ಪೌರಸಭೆಗಳು ಅನರ್ಹವಾದುವೆಂದು ಹೇಳಿ ಮುಂಬೈ ಸರ್ಕಾರದವರು ೩ ವರ್ಷಗಳ ತನಕ ಬೇರೆ ಅಧಿಕಾರಿಗಳು ಆ ಪೌರಸಭೆಗಳ ಆಡಳಿತ ನೋಡಿಕೊಳ್ಳಬೇಕೆಂದು ಆಜ್ಞಾಪಿಸಿರುವರು

ಸರ್ ರಾಧಾಕೃಷ್ಣ ಚೀನಾಕ್ಕೆ

ಇಷ್ಟರಲ್ಲೆ ಸರ್ ಎಸ್. ರಾಧಾಕೃಷ್ಣರವರು ಚೀನಾಕ್ಕೆ ತೆರಳಿ ಅಲ್ಲಿನ ವಿಶ್ವವಿದ್ಯಾನಿಲಯಗಳಿಗೆ ಭೇಟಿ ಯಿತ್ತು, ಭಾರತಕ್ಕೂ ಚೀನಾಕ್ಕೂ ಇರುವ ಸಾಂಸ್ಕೃತಿಕ ಸಂಬಂಧ ಮತ್ತು ಭಾರತ ಸಮಸ್ಯೆ ಇವುಗಳ ಬಗ್ಗೆ ಉಪನ್ಯಾಸಗಳನ್ನು ಮಾಡುವರಾಗಿ ದ್ದಾರೆ ಚೀನಾದ ಆಹ್ವಾನವೇ ಇವರ ಪ್ರಯಾಣಕ್ಕೆ ಕಾರಣ. ಹೋದಾಗ ಚುಂಗ್‌ಕಿಂಗ್ ಸರ್ಕಾರದ ಅತಿಥಿಗಳಾಗಿರುವರು. ಒಂದು ತಿಂಗಳು ಚೀನಾದಲ್ಲಿ ಸಂಚರಿಸುವರೆಂದು ತಿಳಿದುಬಂದಿದೆ.

ಬೇಸಿಗೆ ಯಾತ್ರೆ ಇಲ್ಲ

ಪಂಜಾಬ್ ಸರ್ಕಾರವು ಈ ವರ್ಷ ಸಿಮ್ಲಾಕ್ಕೆ ಹೋಗುವುದಿಲ್ಲವೆಂದು ತಿಳಿದುಬಂದಿದೆ. ಪ್ರತಿವರ್ಷವೂ ಸಿಮ್ಲಾಕ್ಕೆ ಹೋಗುವ ವಾಡಿಕೆಯಿತ್ತು.

ಅಸ್ಸಾಂನಿಂದ ಜನರು ಬಂಗಾಳಕ್ಕೆ

ಮೈಮೆನ್‌ಸಿಂಗ್ ರೈಲ್ವೆ ಸ್ಟೇಷನ್ ದ ಮೂಲಕ ಅಸ್ಸಾಂನಿಂದ ಜನರು ಹಿಂಡು ಹಿಂಡಾಗಿ ಬಂಗಾಳಕ್ಕೆ ಬರುತ್ತಿರುವರು. ಆ ನಿಲ್ದಾಣಕ್ಕೆ ಬರುವ ಜನರಿಗೆ ಜಿಲ್ಲಾ ಕಾಂಗ್ರೆಸ್ ಸಮಿತಿಯವರು ಆಹಾರ ಮತ್ತು ವೈದ್ಯೋಪಚಾರದ ನೆರವು ನೀಡುತ್ತಿರುವರು

ಬ್ರಿಟಿಷರು ಚೀನಾಕ್ಕೆ ಸಾಲ ಕೊಡುವರು

ಬ್ರಿಟಿಷ್ ಸರ್ಕಾರವು ಚೀನಾ ಸರ್ಕಾರಕ್ಕೆ ೫ ಕೋಟಿ ಪೌಂಡುಗಳನ್ನು ಸಾಲವಾಗಿ ಕೊಡಲು ಒಪ್ಪಿದೆ ಬ್ರಿಟಿಷರ ಸಹಾಯಕ್ಕೆ ಚೀನಾ ತನ್ನ ಕೃತಜ್ಞತೆಯನ್ನು ವ್ಯಕ್ತಪಡಿಸಿದೆ

ನದಿ ಪ್ರವಾಹದಿಂದ ವಿನಾಶ

[illegible] ನದಿಯಲ್ಲಿ ಈಗ ಭಾರಿ ಪ್ರವಾಹ [illegible] ೧೦,೦೦೦ [illegible] ಎಕರೆ [illegible] ೧೦,೦೦೦ [illegible]

ಗುಳ್ಳೇನರಿ ಅವಾಂತರ

ಸ್ವಂ.ಸು.] ಬೆಂಗಳೂರು ೪

ನಿನ್ನೆ ಬೆಂಗಳೂರು ಲಾಲ್‌ಬಾಗ್ ಹತ್ತಿರ ಹುಚ್ಚು ಹಿಡಿದಿದ್ದ ಗುಳ್ಳೇನರಿಯೊಂದು ಎಲ್ಲಿಂದಲೋ ಬಂದು ಕೈಗೆ ಸಿಕ್ಕಿದವರನ್ನೆಲ್ಲಾ ಕಚ್ಚಿ ಗಾಯಪಡಿಸಿತು. ೧೦ ವರ್ಷದ ಹುಡುಗಿಯೊಬ್ಬಳ ಕೆನ್ನೆ ಕಚ್ಚಿ ತೀವ್ರ ಗಾಯ ಪಡಿಸಿದೆ. ಅವಳ ಸ್ಥಿತಿ ಚಿಂತಾಜನಕವಾಗಿದೆ. ಇನ್ನೂ ನೀರಿ ಗುಳ್ಳೇನರಿ ಕಚ್ಚಿ ಬಿಡಿಸು ಕೊಂಡ...ಡಿದರೆಂದೂ ...ಗೊಂಡವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ಸಾಗಿಸಿರುವರೆಂದೂ ವಾರ್ತೆ ಬಂದಿದೆ. ಈ ಅವಾಂತರದಲ್ಲಿ ನಾಯಿ...ಯೊಂದ. ಗುಳ್ಳೆನರಿ ಆಡಿತಕ್ಕೆ ಸಿಕ್ಕಿ ಸತ್ತಿತು.

ಎಲ್. ಎಸ್ ಪರೀಕ್ಷೆ ಫಲ

ಲೋಯರ್ ಸೆಕೆಂಡರಿ ಪರೀಕ್ಷೆಯ ಫಲಿತಾಂಶ ಬೆಂಗಳೂರಿನಲ್ಲಿ ಹೊರಬಿದ್ದ ಮಾರನೆಯ ದಿನ ಇತರ ಕಡೆಗಳಲ್ಲಿ ಪ್ರಕಟಿಸಲು ತೀರ್ಮಾನಿಸಿ ... ಕೊಳ್ಳಲಾಗಿದೆಯೆಂದು ಗೊತ್ತಾಗಿದೆ. ಫಲಿತಾಂಶ ೬ನೇ ತಾ|| ಹೊರಬೀಳುವ ನಿರೀಕ್ಷಣೆ ಇದೆ.

ನಗರಾಭಿವೃದ್ಧಿ ಸಮಿತಿ

ನಗರಾಭಿವೃದ್ಧಿ ಉದ್ದೇಶ್ಯದಿಂದ ಮೈಸೂರಿನಲ್ಲಿರುವ ಹಾಗೆಯೇ ಬೆಂಗಳೂರಿನಲ್ಲೂ ನಗರಾಭಿವೃದ್ಧಿ ಸಲಹಾ ಸಮಿತಿಯನ್ನು ಏರ್ಪಡಿಸಲು ಸರ್ಕಾರದವರು ನಿಯಮಿಸುವವರಾಗಿದ್ದಾರೆಂದು ತಿಳಿದು ಬಂದಿದೆ.

ತುಂಗಭದ್ರಾ ನೀರು ಹಂಚಿಕೆ

ತುಂಗಭದ್ರಾ ನದಿ ನೀರು ಹಂಚಿಕೆ ವಿಷಯವಾಗಿ ಸಮಾಲೋಚನೆ ನಡೆಸಲು ಇತ್ತೀಚೆಗೆ ಮೈಸೂರು ಮತ್ತು ಮದರಾಸ್ ಸರ್ಕಾರಗಳ ಪ್ರತಿನಿಧಿಗಳ ಸಭೆ ಉದಕಮಂಡಲದಲ್ಲಿ ನಡೆಯುವದೆಂದು ಪ್ರಕಟವಾಗಿತ್ತಷ್ಟೆ. ಆ ಸಭೆ ಇದೇ ೮ನೇ ತಾ|| ಕೂಡುವುದೆಂದು ಗೊತ್ತಾಗಿದೆ.

ಪೋ|| ಡೆ|| ಕಮಿಷನರ್

ಮಿ|| ಜೆ. ಎಂ. ದೇಸಾಯ್ ಎಂಬುವರನ್ನು ... ಆನರರಿ ಪೋಲೀಸ್ ಡೆಪ್ಯೂಟಿ ಕಮೀಷನರನ್ನಾಗಿ ನೇಮಕ ಮಾಡಲಾಗಿದೆ.

ಪುಸ್ತಕ ಬಹಿಷ್ಕಾರ

ಪ್ರತೇಂದ್ರನಾಥ್ ಎಂಬುವರಿಂದ ಬರೆಯಲ್ಪಟ್ಟು, ಲಕ್ನೋ ನಲ್ಲಿ ಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟ "ಪೆರೋಲ್ ಪಾರ್" ಎಂಬ ಹಿಂದಿ ಪುಸ್ತಕದ ಪ್ರತಿಗಳಿಗೆ ... ದಲ್ಲಿ ಮುಟ್ಟುಗೋಲು ಹಾಕಲಾಗಿದೆ.

ವಂದನೆಗಳು

ಮೈಸೂರು ೪

ಮೈಸೂರು ಜಿಲ್ಲಾ ಬೋರ್ಡಿಗೆ ಈ ಜಿಲ್ಲೆಯ ಓಟುದಾರರು ೧೨ ಮಂದಿ ಕಾಂಗ್ರೆಸ್ ಪಕ್ಷದ ಉಮೇದುವಾರರಿಗೆ ತಮ್ಮ ಮತಗಳನ್ನು ಕೊಟ್ಟು ಚುನಾಯಿಸಿದುದಕ್ಕಾಗಿ ಮೈಸೂರು ಜಿಲ್ಲಾ ಚುನಾವಣಾ ಉಪಸಮಿತಿಯ ಶ್ರೀ|| ಟಿ. ಮರಿಯಪ್ಪನವರು ಅವರಿಗೆ ಈಮೂಲಕ ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸಿರುವರು.

ಶಾಸನ ಸಭೆಯ ಕಾಂಗ್ರೆಸ್ ಪಕ್ಷ

ಬರುವ ಜೂನ್ ೧೯ನೇ ತಾರೀಖಿನಲ್ಲಿ ಪ್ರಾರಂಭವಾಗಲಿರುವ ನ್ಯಾಯವಿಧಾಯಕ ಸಭೆಯ ಬಜೆಟ್ ಅಧಿವೇಶನಕ್ಕೆ ಕಳುಹಿಸಬೇಕಾದ ನಿರ್ಣಯಗಳನ್ನೂ, ಪ್ರಶ್ನೆಗಳನ್ನೂ, ಸೂಚನಾ ನಿರ್ಣಯಗಳನ್ನೂ ಮತ್ತು ತಿದ್ದುಪಡಿಗಳನ್ನೂ ತೀರ್ಮಾನಿಸಲು ನ್ಯಾಯವಿಧಾಯಕ ಸಭೆಯ ಮೈಸೂರು ಕಾಂಗ್ರೆಸ್ ಪಕ್ಷದ ಸಭೆಯು ಇದೇ ಮೇ ಮಾಹೆ ೧೩ ಮತ್ತು ೧೪ನೇ ತಾರೀಖುಗಳಲ್ಲಿ ಬೆಂಗಳೂರು ಅರಳೇಪೇಟೆಯಲ್ಲಿರುವ ಕಾಂಗ್ರೆಸ್ ಕಛೇರಿಯಲ್ಲಿ ಮಧ್ಯಾಹ್ನ ೩ ಗಂಟೆಗೆ ಸೇರುತ್ತದೆ. ಕಾಂಗ್ರೆಸ್ ಪಕ್ಷದ ಸದಸ್ಯರೆಲ್ಲರೂ ತಪ್ಪದೆ ದಯಮಾಡಿಸಬೇಕಾಗಿ ಪಕ್ಷದ ನಾಯಕರಾದ ಶ್ರೀ|| ಟಿ. ಸುಬ್ರಹ್ಮಣ್ಯನವರು ಕೋರಿರುತ್ತಾರೆ.

ನ್ಯಾಷನಲಿಸ್ಟ್ ಪಕ್ಷವಿರಲಿಲ್ಲವೇ?

ಹಿಂದೆಯೇ ನ್ಯಾಷನಲಿಸ್ಟ್ ಪಕ್ಷ ಒಂದು ಇತ್ತೆಂದೂ ಈಗ ಆ ಹೆಸರಿನ ಪಕ್ಷವನ್ನು ಸ್ಥಾಪಿಸಲಾಗದೆಂದೂ ಶ್ರೀ ಶಂಕರಲಿಂಗೇಗೌಡರು ನೋಟೀಸು ಕೊಟ್ಟಿದ್ದರಷ್ಟೆ. ಈ ಬಗ್ಗೆ ಇಂದಿನ ನ್ಯಾಷನಲಿಸ್ಟ್ ಪಕ್ಷದವರು ಸರ್ಕಾರದವರೊಡನೆ ಪತ್ರ ವ್ಯವಹಾರ ನಡೆಸಿದ್ದರಲ್ಲಿ ಇಂತಹ ಸಂಘವು ಹಿಂದೆ ಇತ್ತೇ ಇಲ್ಲವೇ ಎಂಬ ಬಗ್ಗೆ ತಮ್ಮಲ್ಲಿ ಯಾವ ದಾಖಲೆಯೂ ಇಲ್ಲವೆಂದು ಸರ್ಕಾರದವರು ತಿಳಿಸಿದ್ದಾರೆ.

ಕಾನೂನಿನ ವ್ಯಾಪ್ತಿ

ಒಟ್ಟು ಮತ್ತು ಚಿಲ್ಲರೆ ವ್ಯಾಪಾರಸ್ಥರು ಅಂದರೆ ಬೇರೆ ಪದಾರ್ಥಗಳನ್ನು ಮಾರುವವರು ಮತ್ತು ಅವರಲ್ಲಿ ಕೆಲಸ ಮಾಡುವವರು ಎಸೆನ್ಶಿಯಲ್ ಸರ್ವಿಸಸ್ ಕಾನೂನಿನ ನಿಯಮಗಳಿಗೆ ಬದ್ಧರಾಗಿರುವರೆಂದು ರೆಸಿಡೆನ್ಸಿ ಪ್ರಕಟನೆಯಾಗಿದೆ.

ಅಕ್ಕಿ ಪತ್ತೆ

ಸ್ವಂ.ಸು.] ತಿಪಟೂರು ೪

ಕಳೆದ ತಿಂಗಳು ೧೮ ನೇ ತಾ|| ತಿಪಟೂರು ರೈಲ್ವೆ ಪ್ಲಾಟ್‌ಫಾರಂನಲ್ಲಿ ಶಿವಮೊಗ್ಗದಿಂದ ಬೆಂಗಳೂರಿಗೆ ಹೋಗುವ ಪ್ಯಾಸಂಜರ್ ಗಾಡಿಯಲ್ಲಿ ಬಂಗಾಳಿ ತೂಕ ೫ ಮಣ ೧೬ ಸೇರು ತೂಕವುಳ್ಳ ಅಕ್ಕಿಯನ್ನು ಮಾರಿಗೆರೆ ದ್ಯಾವಯ್ಯ, ತಿಪಟೂರು ಟೌನಿನಲ್ಲಿರುವ ಆದಿನಾರಾಯಣಯ್ಯ ಎಂಬುವರು ಬ್ಲಾಕ್ ಮಾರ್ಕೆಟ್ಟಿನಲ್ಲಿ ಮಾರಲು ಮೇಲ್ಕಂಡ ಗಾಡಿಯಿಂದ ಅಕ್ಕಿಯನ್ನು ತರುತ್ತಿದ್ದುದನ್ನು ಹಿಡಿದು ಪೋಲೀಸರು ವಶಪಡಿಸಿಕೊಂಡು ತನಿಖೆ ನಡೆಸುತ್ತಿರುವರು.

ಶಂಕರ ಜಯಂತಿ

ಕಳೆದ ೨೭ನೇ ತಾ|| ಗುರುವಾರ ಪ್ರಾತಃಕಾಲ ೯ ಗಂಟೆಗೆ ಶಂಕರಾಚಾರ್ಯರವರ ಚಿತ್ರಪಟವನ್ನು ವಾದ್ಯದೊಂದಿಗೆ ಎಲ್ಲಾ ಬೀದಿಗಳಲ್ಲಿ ಮೆರವಣಿಗೆನಡಿಸಿ ನಂತರ ಶ್ರೀರಾಮಮಂದಿರದಲ್ಲಿ ಇರಿಸಿ ಮಂಗಳಾರತಿ ನಡೆಸಿದಮೇಲೆ ವಸಂತವನ್ನು ನೆರವೇರಿಸಲಾಯಿತು. ಬಹಳವಾಗಿ ಬ್ರಾಹ್ಮಣರು, ಸುವಾಸಿನಿಯರು ಸೇರಿದ್ದರು. ರಾತ್ರಿ ೮ ಗಂಟೆಯಲ್ಲಿ ಬೆಂಗಳೂರಿನಿಂದ ಬಂದಿದ್ದ ಶ್ರೀಮತಿ ಭಾಗೀರಥಿಬಾಯಿಯವರಿಂದ ಶಂಕರ ವಿಜಯವೆಂಬ ಹರಿಕಥೆ ನಡೆಸಲ್ಪಟ್ಟಿತು.

ಟಿ. ನರಸೀಪುರಕ್ಕೆ ಹೈಸ್ಕೂಲು

ಶ್ರೀ ಟಿ. ಎಸ್. ರಾಜಗೋಪಾಲಯ್ಯಂಗಾರ್‌ರವರು ವಿದ್ಯಾ ಮಂತ್ರಿಗಳನ್ನು ಕಂಡು ಟಿ. ನರಸೀಪುರಕ್ಕೆ ಒಂದು ಹೈಸ್ಕೂಲಿನ ಆವಶ್ಯಕತೆ ಬಹಳವಾಗಿದೆಯೆಂದು ಒತ್ತಿ ಹೇಳಲು, ಕಟ್ಟಡಕ್ಕೆ ಹಣವನ್ನು ಒದಗಿಸಿ ಪೌರಸಭೆಯವರು ನಿರ್ಣಯ ಮಾಡಿ ಕಳುಹಿಸಿದರೆ ಮಂಜೂರು ಮಾಡುವುದಾಗಿ ಸಚಿವರು ತಿಳಿಸಿರುವರು.

ದೃಷ್ಟಿ ನಿವಾಳಿಸ ಹೋಗಿ ಮನೆಗೇ ಬೆಂಕಿ ಇಟ್ಟಳು

ಬೆಂಗಳೂರು ಬಳೇ ಪೇಟೆ ಮನೆಯೊಂದರಲ್ಲಿ ಮಹಿಳೆಯೊಬ್ಬಳು ತನ್ನ ಕೂಸಿಗೆ ದೃಷ್ಟಿ ತೆಗೆಯಲು ಬೆಂಕಿ ಕಡ್ಡಿಗಳನ್ನು ಹಚ್ಚಿ ಹಿಡಿದಾಗ ಪಕ್ಕದಲ್ಲಿದ್ದ ಹುಲ್ಲು ರಾಶಿ 'ಭಗ್' ನೆ ಹತ್ತಿಕೊಂಡು ಮನೆಯೇ ಹತ್ತಿಕೊಂಡಿತು. ಭಾರಿ ಅಗ್ನಿ ಪ್ರಮಾದವಾಗುವಷ್ಟರಲ್ಲಿ ಬೆಂಕಿ ಆರಿಸಲಾಯಿತು. ಯಾರಿಗೂ ಅಪಾಯವಾಗಲಿಲ್ಲ.

Edited, printed and published by A. R. Nagarajan, at the Sadhvi Press, D. Subbiah Road, Mysore.

ಹುಚಾಂಗ್ ದ್ವಾರದಲ್ಲಿ ಶತ್ರು

ಚಂಗ್‌ಚಾಗೆ ದಕ್ಷಿಣಕ್ಕೆ ೫೦ ಮೈಲಿ ದೂರದಲ್ಲಿನ ಹುಚಾಂಗ್ ನಗರದ ಕಡೆಗೆ ಮುನ್ನುಗ್ಗುತ್ತಿದ್ದ ಜಪಾನ್ ಸೈನಿಕರು ಈಗ ಆ ನಗರದ ದಕ್ಷಿಣ ದ್ವಾರವನ್ನು ತಲುಪಿ ಒಳನುಗ್ಗಲು ಹೋರಾಟ ನಡೆಸುತ್ತಿರುವರೆಂದು ಚುಂಕಿಂಗ್‌ನಿಂದ ವರದಿಯಾಗಿದೆ.

ಪೆಸಿಫಿಕ್‌ನಲ್ಲಿ ಬ್ರಿಟಿಷ್ ನೌಕಾ ಪ್ರಬಲತೆ

ಬ್ರಿಟಿಷ್ ಯೋಧರೂ, ನೌಕಾಪಡೆಯವರೂ ನೈರುತ್ಯ ಶಾಂತಸಾಗರ ರಣರಂಗದಲ್ಲಿ ಜಪಾನರನ್ನು ಸದೆಬಡಿಯಲಾರಂಭಿಸಿದರೆಂದು ಅಧಿಕಾರಯುತ ಪ್ರಕಟಣೆ ಹೊರಟಿದೆ.

ಕೊಹಿಮಾದಲ್ಲಿ ಚುರುಕಿಲ್ಲ

ಕೊಹಿಮಾದಲ್ಲಿ ಹವಾಗುಣ ಹದಗೆಟ್ಟಿದೆ. ತತ್ಫಲವಾಗಿ ಯುದ್ಧಕಾರ್ಯಾಚರಣೆಯು ಸಾಮಾನ್ಯರೂಪವನ್ನು ತಾಳಿದೆ.

ನ್ಯೂಗಿನಿಯಲ್ಲಿ ಪ್ರಗತಿ

ಮಿತ್ರರು ನ್ಯೂಗಿನಿಯಲ್ಲಿ ಮುಂದೇ ಮುಂದೆ ಮುನ್ನಡೆ ಇಡುತ್ತಿದ್ದಾರೆ. ರಾಬೂಲ್ ಮೇಲೆ ೯೦ ಟನ್ ಬಾಂಬುಗಳನ್ನು ಸುರಿಸಿಯಿತು.

ವಿವಾಹ

ಮೈಸೂರು ಕಾಂಗ್ರೆಸ್ ಮುಂದಾಳುಗಳಾದ ಶ್ರೀ ಪಾಲಹಳ್ಳಿ ಸೀತಾರಾಮಯ್ಯನವರು ತಮ್ಮ ಕುಮಾರ ಶ್ರೀ|| ಎಸ್. ನಾರಾಯಣರಾಯರಿಗೆ ಬೆಂಗಳೂರಿನ ಜಮೀನ್ದಾರ್ ಶ್ರೀ|| ಎಸ್. ವೆಂಕಟರಮಣಯ್ಯನವರ ಪುತ್ರಿ ಚಿ|| ಸೌ|| ಸುಮ್ಮನನ್ನು ತಂದುಕೊಂಡು ಇದೇ ೧೦ ತಾ|| ಬೆಂಗಳೂರಿನಲ್ಲಿ ವಿವಾಹ ನಡೆಸುವರು.

MEDICINES

Take your requirements from
RAGHULAL & CO.,
1748, Sayaji Rao Road
(Upstairs, Mysore Hall),
MYSORE.

ಔಷಧಗಳು

ನಿಮಗೆ ಬೇಕಾಗುವುದನ್ನೆಲ್ಲ ಇವರಲ್ಲಿ ಕೊಂಡುಕೊಳ್ಳಿ.
ರಘುಲಾಲ್ ಅಂಡ್ ಕೊ.
1748, ಸಯ್ಯಾಜಿರಾವ್ ರೋಡ್,
(ಮೈಸೂರು ಹಾಲ್ ಮಹಡಿ), ಮೈಸೂರು.

ಪ್ರತಿ ದಿನ ೨ ಆಟಗಳು

4-5-44 ರಿಂದ

... ಪಿಕ್ಚರ್ಸ್

... ಕಮಲಾ ಕೋಟ್ನಿಸ್

...

ಶ್ರೀ ಲಕ್ಷ್ಮಿ

(ತೆಲುಗು ಭಾಷೆ)

ಸ್ತ್ರೀಯರ ಸೌಕರ್ಯಕ್ಕೆ

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿ ಪುಡಿ

ಉಪಯೋಗಿಸಿ.

ಡಿ. ಪುಟ್ಟಯ್ಯ, ದಿನಸಿಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ಪಿ. ಸೂ.—ಇಲ್ಲಿ ದೇವರಾಜ ಮೊಹಲ್ಲಾ 4 ನೇ ನಂಬರ್ ರೇಷನ್ ಡಿಪೋ ಮತ್ತು ನಮ್ಮ ಸಂತೇಪೇಟೆ ಹೆಡ್ ಆಫೀಸಿನಲ್ಲಿ ಡಿಪೋ 3 ನೇ ನಂಬರ್ ಇದೇ ಮಾರ್ಚಿ ಲಾಗಾಯಿತು ತೆರೆದಿರುತ್ತೆ.

ಈ ಎರಡು ಕಡೆಗಳಲ್ಲೂ ಸಿಟಿಯ ಯಾವ ಮೊಹಲ್ಲಾ ರೇಷನ್ ಕಾರ್ಡುಗಳಿಗೂ ಅನಿವಾರ್ಯ ಸಕ್ಕರೆ ಕೋಟಾಕ್ಕೆ ಪ್ರಕಾರವಾಗಿ ಅಕ್ಕಿ, ರಾಗಿ, ಮತ್ತು ಸಕ್ಕರೆ ಕೊಡಲ್ಪಡುವುದು.

ತುಂಗಭದ್ರಾ ನೀರಿನ ಹಂಚಿಕೆ

ಸ್ವಂ.ಸು.] ಬೆಂಗಳೂರು ೫

ತುಂಗಭದ್ರಾ ನದಿಯ ನೀರನ್ನು ಮೈಸೂರು ಮತ್ತು ಮದರಾಸ್ ಸರ್ಕಾರಗಳು ವ್ಯವಸಾಯಕ್ಕೆ ಉಪಯೋಗಿಸಿಕೊಳ್ಳುವ ಸಂಬಂಧದಲ್ಲಿ ಎರಡು ಸರ್ಕಾರಗಳಿಗೂ ನಡೆಯುತ್ತಿರುವ ವ್ಯವಹಾರವನ್ನು ಮುಂದುವರಿಸುವುದಕ್ಕಾಗಿ, ಇದೇ ೮ನೇ ತಾರೀಖು ಶಿಗ್ಗಾವಿಯಲ್ಲಿ ಎರಡೂ ಸರ್ಕಾರಗಳ ಪ್ರತಿನಿಧಿಗಳ ಸಭೆ ನಡೆಯುವುದು. ದಿವಾನರೂ ಮಾತುಕತೆಗಳಲ್ಲಿ ಭಾಗವಹಿಸುವರು. ಅಲ್ಲದೆ ಪಬ್ಲಿಕ್ ವರ್ಕ್ಸ್ ಸಚಿವರು, ನೀರಾವರಿ ಚೀಫ್ ಎಂಜನೀಯರು ಮತ್ತು ನೀರಾವರಿ ಸರ್ಕಲ್‌ನ ಸೂಪರಿಂಟೆಂಡಿಂಗ್ ಎಂಜನೀಯರು ಭಾಗವಹಿಸುವರು

ಬಾಡಿಗೆ ಹತೋಟಿ ಆಜ್ಞೆಯು ಜಾರಿ

ಅಲ್ಫ್ರೆಡ್ ನಿಕ್ಸನ್ ರಸ್ತೆಯಲ್ಲಿ ೧೪ ನೇ ನಂಬರಿನ ಮನೆಯು ಪಕ್ಕದ ಕಟ್ಟಡಕ್ಕೆ ಸೇರಿ ಇರುವುದರಿಂದ, ಅದನ್ನು ಬೆಂಗಳೂರು ಮಕ್ಕಳ ಆಸ್ಪತ್ರೆಯ ಅಧಿಕಾರಿಣಿಯಾದ ಡಾ|| ಮಿಸ್ ಲೊಜೋರವರಿಗೆ, ಬಾಡಿಗೆಗೆ ಕೊಡತಕ್ಕದ್ದೆಂದು, ಆ ಮನೆಯ ಮಾಲೀಕರಾದ ಶ್ರೀ ಜಿ. ಎಸ್. ಕಸ್ತೂರಿ, ೧೫, ಜಾನಕಿ ಕುಟೀರ, ಜುಹು, ಸಂಟ ಕ್ರಾಸ್, ಬೊಂಬಾಯಿ, ಇವರಿಗೆ (ಶ್ರೀ ಕಸ್ತೂರಿ ಶ್ರೀನಿವಾಸರಾಯರ ಪುತ್ರ) ಬೆಂಗಳೂರು ಜಿಲ್ಲಾ ಮ್ಯಾಜಿಸ್ಟ್ರೇಟರು ನೋಟೀಸ್ ಕೊಟ್ಟು, ಬಾಡಿಗೆಯನ್ನು ತಿಂಗಳೊಂದಕ್ಕೆ ೩೦ ರೂ ಗಳೆಂದು ಗೊತ್ತುಮಾಡಿರುತ್ತಾರೆ

ನಿಷ್ಪ್ರಹಾರ ಪದಾರ್ಥ ಮಾರಿದ್ದಕ್ಕೆ ದಂಡ

ನಿಷ್ಪ್ರಹಾರ ಪದಾರ್ಥಗಳನ್ನು ಮಾರಿದ್ದಕ್ಕಾಗಿ ಸಿಟಿ ಮ್ಯಾಜಿಸ್ಟ್ರೇಟರು ಗಾಂಧೀಂದ್ರ ಭವನದ ಮಾಲೀಕರಿಗೆ ೫೦ ರೂ. ಜುಲ್ಮಾನೆ ವಿಧಿಸಿದರು. ಇದೇ ತರಹ ಅಪರಾಧಕ್ಕೆ ಮೊದಲೊಂದಾವರ್ತಿ ಜುಲ್ಮಾನೆ ಪಡೆದಿರುವರು. ಇದು ಎರಡನೇ ಅಪರಾಧ.

ಬೆಲೆಗಳನ್ನು ಪ್ರದರ್ಶಿಸಬೇಕು

ಸಂಸ್ಥಾನದಲ್ಲಿ ಬ್ಲೇಡುಗಳು, ಸಿಗರೇಟುಗಳು, ಬ್ಯಾಟರಿಗಳು, ಆಟದ ಸಾಮಾನುಗಳು, ... ವ್ಯಾಪಾರ ಮಾಡುವವರು, ತಾವು ... ನಿಗದಿ ಮಾಡಿರುವ ಬೆಲೆಗಳ ಪಟ್ಟಿಯನ್ನು ಎಲ್ಲರಿಗೂ ಕಾಣುವಂತೆ ತಮ್ಮ ಅಂಗಡಿಗಳಲ್ಲಿ ತಗಲುಹಾಕಬೇಕೆಂದೂ, ... ಎಚ್ಚರಿಕೆ ಕೊಟ್ಟು ಪ್ರಕಟನೆ ಹೊರಡಿಸಿದ್ದಾರೆ.

ರೇಷನ್ ಸೆನ್ಸಸ್

ಮೈಸೂರು ಜನರಿಗೆ ಮತ್ತು ಊಟಕ್ಕೆ ಸಂಬಂಧಪಟ್ಟ ರೇಷನ್ ಕಾರ್ಡುಗಳನ್ನು ಈ ತಿಂಗಳ ೧೫ ರಿಂದ ಮತ್ತು ಆರು ತಿಂಗಳ ಕಾಲ ಜಾರಿಗೆ ತರಲಾಗುತ್ತದೆಂದು ತಿಳಿಸಲಾಗಿದೆ.

* * * *

ಮಾರ್ಚಿ ತಿಂಗಳಲ್ಲಿ ಜೀವನದ ಮಟ್ಟವು ಬೆಂಗಳೂರಿನಲ್ಲಿ ೦.೯ ಪಾಯಿಂಟುಗಳಷ್ಟು ಕಡಿಮೆಯಾಗಿದೆಯೆಂದು ಪ್ರಕಟಿಸಲಾಗಿದೆ.

* * * *

ಮೇ ೧೦ ರಿಂದ ೧೨ರ ವರೆಗೆ ಕೋಲಾರ ಸಂಸ್ಥಾನದಲ್ಲಿಯೂ, ಚಿತ್ರದುರ್ಗ, ಹೊಸಕೋಟೆ ಮತ್ತು ಮಳವಳ್ಳಿ ಟೌನುಗಳಲ್ಲಿಯೂ ೧೫ ರಿಂದ ೧೭ ರ ವರೆಗೂ ರೇಷನ್ ಸೆನ್ಸಸ್ಸನ್ನು ತೆಗೆದುಕೊಳ್ಳಲಾಗುವುದೆಂದು ಪ್ರಕಟಿಸಲಾಗಿದೆ

ಹೋಟೆಲ್ ತಿಂಡಿ ದರಗಳು ನಿಗದಿಮಾಡಿದೆ

ಸ್ವಂ ಸು] ಕೃಷ್ಣರಾಜನಗರ ೫.

ಇಲ್ಲಿನ ಹೋಟಲಿನವರು ತಿಂಡಿಗಳ ಬೆಲೆಯನ್ನು ಅವರ ಮನಸ್ಸು ಬಂದಂತೆ ಹೆಚ್ಚಿಸಿರುತ್ತಾರೆ. ಅಲ್ಲದೆ ಒಬ್ಬೊಬ್ಬರು ಒಂದೊಂದು ಬೆಲೆ ಇಟ್ಟಿರುತ್ತಾರೆ. ಇಡ್ಲಿ ದೋಸೆಗಳ ಆಕಾರವು ಸಣ್ಣದು, ಬೆಲೆ ಒಂದಕ್ಕೊಂದಾಗಿದೆ. ಅರ್ಧ ಲೋಟ ಕಾಫಿಗೆ ಒಂದಾಣೆ ಇಟ್ಟಿದ್ದಾರೆ. ಈ ಸಂಗತಿಯನ್ನು ಅಧಿಕಾರಿಗಳ ಗಮನಕ್ಕೆ ತರಲಾಗಿದೆ. ಆ ವಿಷಯವು ಹೋಟಲು ಮಾಲೀಕರಿಗೆ ತಿಳಿದು ಅವರಲ್ಲಿ ಪ್ರಮುಖರಾದವರು ಅಸಮ್ಮತಿಯಲ್ಲಿ ವರ್ತಿಸುವರು. ಈ ಊರಿನಲ್ಲಿ ಆಹಾರ ಪದಾರ್ಥಗಳು ಸುಲಭವಾಗಿ ಸಿಗುತ್ತಿದ್ದರೂ ಹೋಟೆಲ ಬೆಲೆಗಳನ್ನು ಹೆಚ್ಚಿಸುವುದು ಬಹಳ ಅನ್ಯಾಯ

ಮುನ್ಸಿಫ್ ಕೋರ್ಟ್

ಬೆಂಗಳೂರಿನ ಎರಡನೇ ಮುನ್ಸೀಫ್ ಕೋರ್ಟ್ ತಿಪಟೂರಿಗೆ ತಾ|| ೧೫-೫-೪೪ ರಲ್ಲಿ ಬರುತ್ತೆ. ತಿಪಟೂರಿನಿಂದ ಮುನ್ಸೀಫ್‌ರವರು ಬರುತ್ತಾರೆ. ಜಯದೇವ ಹಾಸ್ಟೆಲ್‌ನಲ್ಲಿ ಕೋರ್ಟ್ ತೆರೆಯಲ್ಪಡುತ್ತೆ. ಈಗಾಗಲೇ ಮನೆ ಬಾಡಿಗೆ ಜಾಸ್ತಿಯಾಗಿ ಬರತ್ತೆ

ಕಾಫಿ ಬೋರ್ಡ್ ಪ್ರತಿನಿಧಿ

ಸ್ವಂ. ಸು] ಚಿಕ್ಕಮಗಳೂರು ೫

ಇಂಡಿಯನ್ ಕಾಫಿ ಪ್ಲಾಂಟರುಗಳ ಜನರಲ್ ಮೀಟಿಂಗು ೨ ನೇ ತಾ|| ನಡೆಯಿತು. ಇತರ ಪರವಾಗಿ ಇಂಡಿಯನ್ ಕಾಫಿ ಬೋರ್ಡಿಗೆ ಶ್ರೀ ಟಿ ಸುಂದರನಾಥಯ್ಯರ್ ಬಿ ಎ, ರವರು ಪ್ರತಿನಿಧಿಯಾಗಿ ಚುನಾಯಿಸಲ್ಪಟ್ಟಿರುವರು

ಅಕಸ್ಮಿಕ ಮರಣ

ಸ್ವಂ ಸು] ತಿಪಟೂರು, ೪

ತಾ|| ೩-೫-೪೪ ನೇ ಬುಧವಾರ ಮಧ್ಯಾಹ್ನ ೧೨ ಗಂಟೆಯಲ್ಲಿ ತಿಪಟೂರು ಕೆರೆಯಲ್ಲಿ ೧೮ ವರ್ಷ ವಯಸ್ಸಿನ ... ಕೃಷ್ಣಮೂರ್ತಿ ಎಂಬ ಬಾಲಕನು ಸಂಗಡಿಗರನ್ನು ಒಗೆದು ... ನೀರಿನಲ್ಲಿ ಈಜಾಡುತ್ತಿರುವಾಗ ... ಮುಳುಗಿ ಪ್ರಾಣ ಬಿಟ್ಟನು

ಭಾರತ ಜನತಾ ರಂಗಭೂಮಿ

ಭಾರತ ಜನತಾ ರಂಗಭೂಮಿಯು ಮೈಸೂರು ಸಮಿತಿಯ ಪರ ಮೇ ದಿನಾಚರಣೆಯ ಸಂಬಂಧದಲ್ಲಿ ಶ್ರೀ ಎಸ್ ಅನಂತನಾರಾಯಣರವರು ಬರೆದ 'ಜನ್ಮಸ್ಥ' ಎಂಬ ನಾಟಕವನ್ನು ... ವಿದ್ಯಾಶಾಲೆಯಲ್ಲಿ ಇದೇ ೭ನೇ ತಾ|| ಸಂಜೆ ೮ ಗಂಟೆಗೆ ಅಭಿನಯಿಸುತ್ತಾರೆ ಎಲ್ಲರಿಗೂ ಆಹ್ವಾನವುಂಟು

ಮಿಷನರಿಗಳ ಕಾರ್ಯಕ್ಕೆ ಹಣವಿಲ್ಲ

ಮಿಷನರಿಗಳ ಸ್ವತಂತ್ರ ದೇಶಗಳಿಂದ ಬರುತ್ತಿರುವ ... ಶ್ರೀ ವಿ ಡಿ ಸಾವರ್ಕರು ... ಗೌರ್ನ್‌ಮೆಂಟ್ ... ಮಿಷನರಿಗಳಿಗೆ ಕೊಡಬಾರದೆಂದು ... ಎಲ್ಲಾ ಅಧಿಕಾರ ... ಮುದ್ರಿಸಿ ... ಎಲ್ಲಾ ... ಕೊಟ್ಟಿದ್ದಾರೆ

ಕಾಫಿನಾಡಿನಲ್ಲಿ ಉರಿ ಬೇಸಿಗೆ

ಕಾಫಿನಾಡಿನಲ್ಲಿ ... ಉರಿಬೇಸಿಗೆಯಾಗಿದೆ ೧೦೫ ಡಿಗ್ರಿ ... ಈ ಬೇಸಿಗೆಯಿಂದ ... ಹಕ್ಕಿ ಪಕ್ಷಿಗಳು ... ರೋಗಗಳು ಹರಡುತ್ತವೆ. ... ಬಿಡುತ್ತಿದ್ದಾರೆ

ಟಿ. ಸಿ. ನಟರಾಜನ್ ಔಷಧಾಲಯ

ಇದರಲ್ಲಿ ನೇತ್ರ ಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.

ಅವಶ್ಯಕವಾಗಿ ಬೇಕಾದ ಎಲ್ಲಾ ಇಂಗ್ಲೀಷ್ ಔಷಧಗಳೂ ದೊರೆಯುವುದಲ್ಲದೆ ಸಮಸ್ತ ... ರೋಗಗಳಿಗೂ ಚಿಕಿತ್ಸೆಯು ಬಹು ಸುಲಭ ಛಾರ್ಜಿನಿಂದ ಮಾಡಲ್ಪಡುತ್ತದೆ

... ಆಯುರ್ವೇದೀಯ ಔಷಧಗಳೆಲ್ಲವೂ ಇಲ್ಲಿ ದೊರೆಯುತ್ತವೆ

ರಾಜಧಾನಿಯಲ್ಲಿ ನೋಡಬೇಕಾದ ೧೦ ವಿಚಿತ್ರ ನೋಟಗಳು

೧ ಶ್ರೀರಾಮಪೇಟೆಯಲ್ಲಿ ಅಶ್ವತ್ಥಕಟ್ಟೆಯ ... ಕೊಳೆ!--ಹಿಂದೂ ಮತದ ... ಪರಮೋಧರ್ಮಃ ಮತ ...

೨. ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಮುಂದೆ ರಸ್ತೆಯಲ್ಲಿ ಉದ್ದಕ್ಕೂ ಇರುವ ಟ್ರಾಫಿಕ್ ಪೊಲೀಸಿನ ಕೋಟೆ ... (ಹಗಲು ಮಧ್ಯಾಹ್ನ ೩ ಗಂಟೆ).

೩. ಮಾರ್ಕೆಟ್ ಬಿಲ್ಡಿಂಗ್, ಲ್ಯಾನ್ಸ್‌ಡೌನ್ ಬಿಲ್ಡಿಂಗ್‌ನಲ್ಲಿ ರಾತ್ರಿಕಾಲದಲ್ಲಿ ... ಭಿಕ್ಷುಕರ-ತ್ಯಾಗಿಗಳ-ಬೈರಾಗಿಗಳ ಕ್ಯಾಂಪು.

೪. ಹಳೇ ಅಗ್ರಹಾರದಲ್ಲಿ ನಡುಬೀದಿಯಲ್ಲಿ ಸ್ಥಾಪಿತವಾಗಿರುವ ಬೂದಿಯ ಸಿದ್ಧಗಳು.

೫. ಸಿನಿಮಾ ಮಂದಿರಗಳ ಮುಂದೆ ೦-೩-೦ ಟಿಕೆಟ್ ಬೂತುಗಳಲ್ಲಿ ನೂಕು ನುಗ್ಗಲಿಗಿಂತ ... ನೋಡಲು ಟಿಕೆಟ್ಟಿಲ್ಲ! (ಸಂಜೆ ೬ ಗಂಟೆಗೆ)

ವಿವಾಹ ಮಹೋತ್ಸವ

ಶ್ರೀ ಎಂ ಸಿ ಲಿಂಗಪ್ಪನವರ ಕುಮಾರ ಬಿ|| ಎಂ ಎಲ್. ಲಿಂಗಪ್ಪನವರಿಗೆ ... ಶ್ರೀ ... ಕುಮಾರಿ ಸೌ|| ... ಜಾನಕಮ್ಮನವರ, ... ವಿವಾಹವು ... ಅನೇಕ ಜನ ಪುರ ಪ್ರಮುಖರು ... ಆಶೀರ್ವಾದದೊಂದಿಗೆ ನೆರವೇರಿತು.

BUY INDIAN
&
SAVE MONEY

The Chamundi
Brewery,
MYSORE SOUTH.

Edited, printed and published by A. R. Nagarajan at the Sadhvi Press, D. Sub ... Road, Mysore

ಶ್ರೀ ಯರ ಸೌ ಕ ಯರ ಕ್ಕೆ

... ಪ್ರತ್ಯೇಕವಾಗಿ ... ತಯಾರಾಗುವ ...

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿ ಪುಡಿ

ಉಪಯೋಗಿಸಿ

ಕೃಷ್ಣಪ್ಪ, ವಿನಾಯಕ ಮಂಡಿ, ದೇವರಾಜ ಮಾರ್ಕೆಟ್, ಮೈಸೂರು

ಹರಾಜು ಸಾರ್ವಜನಿಕ ಹರಾಜು

ಮುಂದಾಸ ... 'ಆಲಿವರ್ ಟೈಪ್ ರೈಟರ್' ... ಗಡಿಯಾರ ...

... ತಾ|| ೭-೫-೪೪ ನೇ ಭಾನುವಾರ ೧೦ ಗಂಟೆಗೆ

ಸಿಟಿ ಅಕ್ಷನೀರಿಂಗ್ ಕೋ.,

... ಎದುರು, ಮೈಸೂರು.

ಸಂಪುಟ ೨] ಭಾನುವಾರ ೭--೫--೪೪ [ಸಂಚಿಕೆ ೨೪೭

ಮಹಾತ್ಮರ ಆತ್ಮವಿಶ್ವಾಸ

ಬಿಡುಗಡೆಗೆ ವೈಸರಾಯರೇ ಜವಾಬ್ದಾರರು
ಗಾಂಧೀಜಿ ಬಿಡುಗಡೆಯ ದೃಶ್ಯಗಳು

ಅಭಿನಂದನಾ ಸಭೆ

ಮೈಸೂರು ೭

ಬಾಲಸೇವಾ ಸಮಾಜದ ಕಟ್ಟಡದಲ್ಲಿ ನೆನ್ನೆ ಸಾಯಂಕಾಲ ಮೈಸೂರು ಪೌರಸಭಾ ಉಪಾಧ್ಯಕ್ಷರಾದ ಮ|| ಬಿ. ನಾರಾಯಣಸ್ವಾಮಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಈ ಕೆಳಗೆ ಕಂಡ ಠರಾವುಗಳು ಸರ್ವಾನುಮತದಿಂದ ಅನುಮೋದಿತವಾದುವು :-

೧ ಈ ಸಭೆಯು ಪೂಜ್ಯ ಮಹಾತ್ಮಾ ಗಾಂಧಿಯವರ ಬಿಡುಗಡೆಯಿಂದ ಉಂಟಾದ ಆನಂದವನ್ನು ವ್ಯಕ್ತಪಡಿಸುತ್ತದೆ

೨ ಪೂಜ್ಯ ಬಾಪೂಜಿಯವರು ಕೂಡಲೆ ಗುಣಮುಖರಾಗಿ ಆಯುರಾರೋಗ್ಯವನ್ನು ಪಡೆದು ಮೊದಲಿನಂತೆ ಕೆಲಸಕಾರ್ಯಗಳನ್ನು ಮಾಡಲು ಶಕ್ತಿಯನ್ನು ಪಡೆಯುವಂತೆ ಭಗವಂತನು ಅನುಗ್ರಹಿಸಲೆಂದು ಪ್ರಾರ್ಥಿಸುತ್ತದೆ

೩ ಮಹಾತ್ಮರನ್ನು ಯಾವ ಷರತ್ತೂ ಇಲ್ಲದೆ ಬಿಡುಗಡೆ ಮಾಡಿರುವುದರಿಂದ ಇಂಡಿಯಾ ಸರ್ಕಾರವನ್ನು ಅಭಿನಂದಿಸುತ್ತದೆ.

ಭಾರತ ವಾಚನ

ನಾಳೆ ರಾತ್ರಿ (ಸೋಮವಾರ) ೯|| ಗಂಟೆ ಮೇಲೆ ಪೂರ್ಣಿಮಾ ಪ್ರಯುಕ್ತ ಡಿ. ಸಬ್ಬಯ್ಯನ ರಸ್ತೆ ಶ್ರೀ ರಾಮ ಪ್ರೆಸ್ ಮಹಡಿಯಲ್ಲಿ ಶ್ರೀ ಕೃಷ್ಣಗಿರಿ ಕೃಷ್ಣರಾಯರು ಭಾರತ ವಾಚನವನ್ನು ಮಾಡುವರು ಸರ್ವರಿಗೂ ಸ್ವಾಗತವಿದೆ.

ಎ. ಎಂ. ಕೃಷ್ಣಮೂರ್ತಿಗಳ ನಿಧನ

ಮೈಸೂರು ನಗರದಲ್ಲಿ ಹಲವು ವರ್ಷಗಳ ಕಾಲ ಪತ್ರಿಕೋದ್ಯೋಗಿಗಳಾಗಿದ್ದು, ಅನಂತರ ಬೆಂಗಳೂರಿನಲ್ಲಿ ತಾಯಿನಾಡು ಕಛೇರಿಯಲ್ಲಿ ಉಪಸಂಪಾದಕರಾಗಿ ಕೆಲಸ ಮಾಡುತ್ತಿದ್ದ ಶ್ರೀ ಅರಕಲಗೂಡು ಕೃಷ್ಣಮೂರ್ತಿಯವರು ಮೈಸೂರು ಕ್ಷಯರೋಗದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು ಗುಣವಾಗದೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ ಮೃತರ ಆತ್ಮಕ್ಕೆ ದೇವರು ಶಾಂತಿಯೀಯಲಿ.

ಜರ್ಮನಿಯ ಹೊಸ ಶಸ್ತ್ರ

ಜರ್ಮನಿಯು ಅಂಜೀ ರಂಗದಲ್ಲಿ ಒಂದು ಹೊಸ ಶಸ್ತ್ರ ಪ್ರಯೋಗ ಮಾಡುತ್ತಿದೆಯಂತೆ. ಇದೂ ಒಂದು ವಿಧವಾದ ಟ್ಯಾಂಕಿಯಂತಿದೆ. ಇದರಲ್ಲಿ ರೇಡಿಯೋ ಸಂಬಂಧದಿಂದ ಕೆಲಸಮಾಡುವಂಥ ಮದ್ದು ಗುಂಡು ಇಡಲಾಗಿದೆ. ಸಾರಥಿಯು ಇದನ್ನು ಒಂದು ಸಲ ಮೇಲಕ್ಕೆ ಹಾರಿಸಿ ಕೆಳಗಿಳಿಸಿ ಪುನಃ ಗುರಿಯ ಬೇಕಾದೆಡೆಗೆ ಬಿಡುತ್ತಾನೆ. ಅದು ಅಲ್ಲಿ ಸಿಡಿಸಬೇಕಾದದ್ದನ್ನು ಸಿಡಿಸಿ ಪುನಃ ಸಾರಥಿಯ ಬಳಿ ವಾಪಸ್ ಬರುತ್ತೆ- ಪುಟ ಚೆಂಡಿನಂತೆ!

ಬರ್ಮಾ ರಂಗದಲ್ಲಿ ಹೈಸ್ಫೋಟ

ಒಟ್ಟರ [illegible] ಗಳನ್ನು ಶಸ್ತ್ರಾಸ್ತ್ರ ತಡೆಗಟ್ಟಲು ಸ್ಫೋಟಿಸಿದೆ ಬರ್ಮಾ ಇಂಡಿಯಾ ಸರಹದ್ದಿನಲ್ಲಿ ಈಗ ನಡೆಯುತ್ತಿರುವ ಕಲಹ ಅವರೂ ಮಿತ್ರರ ವಿಮಾನಬಲವೂ ಜಪಾನರ [illegible] ಕವಾಗಿವೆ. ಹಿಂದೂ [illegible] ಎಲ್ಲಿಯವರೆಗೆ [illegible] ರಂಗವೆಂದು ಭಾವಿಸಬಾರದು ಎಂದು [illegible] ನದು ಹೇಳಿದ್ದಾರೆ

ಮಹಾತ್ಮರ ಬಿಡುಗಡೆಗೆ ವೇವಾಲರೇ ಕಾರಣ

ಮಹಾತ್ಮರ ಆರೋಗ್ಯವು ತೃಪ್ತಿಕರವಾಗಿಲ್ಲದ ಪ್ರಯುಕ್ತ ವೈದ್ಯರ ಅಭಿಪ್ರಾಯದಂತೆ ಇಂಡಿಯಾ ಸರ್ಕಾರದವರು ನಿನ್ನೆ ಬೆಳಗ್ಗೆ ಎಂಟು ಗಂಟೆಯಲ್ಲಿ ಅವರನ್ನು ಬಂಧವಿಮುಕ್ತರನ್ನಾಗಿ ಮಾಡಿದರು ಯಾವ ಷರತ್ತೂ ಇಲ್ಲದೆ ಬಿಡುಗಡೆಮಾಡಲಾಗಿದೆ. ಡಾ|| ಸುಶೀಲಾ ನಾಯರ್‌ರವರನ್ನು ಮಹಾತ್ಮರ ಜೊತೆಯಲ್ಲಿಯೇ ಬಿಟ್ಟುಬಿಡಲಾಯಿತು. ಇವರುಗಳನ್ನು ಬೊಂಬಾಯಿನ ಜೈಲುಗಳ ಸೂಪರಿಂಟೆಂಡೆಂಟರಾದ ಕರ್ನಲ್ ಭಂಡಾರಿಯವರು ಆಗಾಖಾನ್ ಅರಮನೆಯಿಂದಲೇ ಡಾ|| ಭಾರ್ಗವರವರ 'ಪರ್ಣಕುಟಿ' ಭವನಕ್ಕೆ ಕರೆತಂದು ಬಿಟ್ಟರು. 1934ರಲ್ಲಿ ಮಹಾತ್ಮರು ೨೧ ದಿವಸ ಉಪವಾಸ ನಡೆಸಿದ್ದು ಇಲ್ಲಿಯೇ ಹಾಗೂ ಅವರ ಕುಮಾರ ಶ್ರೀ ದೇವದಾಸರಿಗೆ ವಿವಾಹ ನಡೆದದ್ದು ಇಲ್ಲಿಯೇ!

ಗಾಂಧೀಜಿಯವರಿಗೆ ಬಹಳ ಬಳಲಿಕೆಯಿದೆ. ಯಾವ ಕೆಲಸ ಮಾಡಲೂ ಶಕ್ತರಾಗಿಲ್ಲ ಅವರೂ ಹೆಚ್ಚು ಬಳಲಿದ್ದಾರೆ ಬಿಡುಗಡೆಯ ಸುದ್ದಿಯನ್ನು ಕೇಳಿದೊಡನೆ ಜನರು ತಂಡೋಪತಂಡವಾಗಿ ಪರ್ಣಕುಟಿಯ ಬಳಿ ಬಂದು ನೆರೆದರು

ಸಹಪಾಠಿಗಳ ಖುಲಾಸೆ

ಮಹಾತ್ಮರ ಬಿಡುಗಡೆಯಾದೊಡನೆಯೇ ಅವರೊಡನೆ ಆಗಾಖಾನ್ ಅರಮನೆಯಲ್ಲಿದ್ದ ಬೊಂಬಾಯಿನ ಮಾಜಿ ಮಂತ್ರಿ ಡಾ|| ಗಿಲ್ಡರ್, ಮಹಾತ್ಮರ ಕಾರ್ಯದರ್ಶಿ ಶ್ರೀ ಪ್ಯಾರೇಲಾಲ್ ಮತ್ತು ಮಿ.ಸ್ ಮೀರಾಬೆನ್ ಇವರುಗಳನ್ನು ಖುಲಾಸೆ ಮಾಡಲಾಯಿತು ಇವರೂ ಪರ್ಣಕುಟಿಗೆ ಬಂದು ಸೇರಿದರು

ಮಹಾತ್ಮರಿಗೆ ರಕ್ತ ಹೀನತೆ

ಈಗ ಮಹಾತ್ಮರಿಗೆ ರಕ್ತಹೀನತೆಯೂ ಮೂತ್ರ ಕೋಶದ ತೊಂದರೆಯೂ ಉಂಟಾಗಿವೆಯೆಂದು ಡಾ|| ಗಿಲ್ಡರ್ ಮತ್ತು ಡಾ|| ಸುಶೀಲಾ ನಾಯರ್‌ರವರು ತಿಳಿಸಿದ್ದಾರೆ

ಕಡೆಯ ಪೂಜೆ

ಆಗಾಖಾನ್ ಅರಮನೆಯನ್ನು ಬಿಡುವುದಕ್ಕೆ ಮುಂಚೆ ಮಹಾತ್ಮರು [illegible] ಲ್ಲಿ ಮಹದೇವ ದೇಸಾಯಿ [illegible] ಮತಿ ಕಸ್ತೂರಿ ಬಾಯಿ [illegible] ಮಾಡಲಾಗಿತ್ತು ಅಲ್ಲಿ [illegible] ಅಲ್ಲಿ ಪುಷ್ಪಗಳನ್ನು ಇಟ್ಟು [illegible] ವರು ಈಗ ಅರಮನೆಯ [illegible] ವರದಿಂದ ಅಲ್ಲಿ ಕಾವಲಿಟ್ಟಿದ್ದ ದಸ್ತಿನವಾಲಕರನ್ನು ತೆಗೆಯಲಾಗಿದೆ

ಪರ್ಣಕುಟಿಯಲ್ಲಿ

ಮಹಾತ್ಮರನ್ನು ಸ್ವಾಗತಿಸಲು ಪರ್ಣಕುಟಿಯ ಬಳಿ ಸ್ವಾಮಿ ಆನಂದ್, ಶಾಂತಿಕುಮಾರ್ ಮೊರಾರ್ಜಿ, ಜಮ್ನಾದಾಸ್ ಗಾಂಧಿ ಮತ್ತು ಬೊಂಬಾಯಿ ನಗರಾಧ್ಯಕ್ಷ ಶ್ರೀ ನಾಗಿನ್ ದಾಸ್ ಮಾಸ್ತರ್, ಇವರು ಕಾದಿದ್ದರು ಶೇಟ ಭಾರ್ಗವರವರ ಕೈ ಹಿಡಿದುಕೊಂಡು ಮಹಾತ್ಮರು ಪರ್ಣಕುಟಿಯ ಮೆಟ್ಟಿಲು ಹತ್ತಿದರು ಅಲ್ಲಿ ಅವರಿಗೆ ಪ್ರಾರ್ಥನಾಲಯದ ಸಣ್ಣ ಕೊಠಡಿಯಂತೆ ಮಾಳಿಗೆ ಮಾಡಲಾಯಿತು.

"ಆರೋಗ್ಯವೇ ಪ್ರಥಮ ಚಿಂತೆ"

ನನ್ನ ಶರೀರದ ಆರೋಗ್ಯವನ್ನು ಕ್ರಮಪಡಿಸಿಕೊಳ್ಳುವುದೇ ನನ್ನ ಮೊದಲನೇ ಕೆಲಸ-ಎಂಬುದಾಗಿ ಮಹಾತ್ಮರು ತಮ್ಮನ್ನು ಭೇಟಿ ಮಾಡಿದವರಿಗೆ ತಿಳಿಸಿದರು ವೈದ್ಯರು ಅವಕಾಶ ಕೊಟ್ಟೊಡನೆಯೇ ಗಾಂಧಿಯವರು ಬೊಂಬಾಯಿಗೆ ಹೋಗಿ ಬರುವರು. ಇನ್ನು ಹದಿನೈದು ದಿನವಲ್ಲಿ ಅವರು ಗುಣವಾಗುವ ನಿರೀಕ್ಷಣೆ ಇದೆ

ಆಲಸ್ಯದಲ್ಲೂ ಆನಂದ

ಡಕ್ಟರ್ ಬಾಬಾಕೊಡನೆ ವಿನೋದ ಮಾಡುತ್ತ 'ಬಾಬೂಜಿಯವರ, ಕಸ್ತೂರಿ ಬಾಯಿ ಸ್ಮಾರಕ ನಿಧಿಯ ಬಗ್ಗೆ ಎಷ್ಟು ಮುಂದುವರಿದಿರುವಿರಿ?' ಎಂದು ಕೇಳಿದರು. "ತಮ್ಮ ಬಿಡುಗಡೆಯ ಸಂತೋಷ ಸೂಚನೆಗಾಗಿ ತಮ್ಮ ಬಳಿ [illegible] ಸಂಘರ್ಷದಲ್ಲಿ ತನಗೆ [illegible] ಲಕ್ಷ [illegible] ನ ನಿಧಿಯನ್ನು [illegible] ಅರ್ಪಿಸುವ ವಿಷಯದಲ್ಲಿ ತಮ್ಮ ಅಭಿಪ್ರಾಯವೇನು?" ಎಂದು ಧಕ್ಕರ್‌ರವರು ಕೇಳಿದರು ಮಹಾತ್ಮರು ಮುಗುಳ್ನಗೆ ನಕ್ಕು ಬಿಟ್ಟರು.

ಮಹಾತ್ಮರ ಆಶಾ ಭಾವನೆ

ವೈದ್ಯರುಗಳೆಲ್ಲರ ಭೇಟಿಯ ನಂತರ ಗಾಂಧಿಯವರಿಗೆ [illegible] ದಿಂದ ಎಲ್ಲರ [illegible] [illegible] ನನ್ನ [illegible] ಮಹಾತ್ಮರು [illegible] ತಿಳಿಸಿದ್ದಾರೆ

ಹೋರರು ಇಂಡಿಯಾ ಸೆಕ್ರೆಟರಿ?

ಸ್ಪೇನಿನಲ್ಲಿ ಬ್ರಿ|| ರಾಯಭಾರಿಯವರಾಗಿರುವ ಸರ್ ಸ್ಯಾಮ್ಯುಯಲ್ ಹೋರ್ ಇಂಗ್ಲೆಂಡಿಗೆ ಬಂದಿದ್ದಾರೆ ಪುನಃ ಹಿಂದಕ್ಕೆ ಹೋಗಲಾರರು. ಆಮೆರಿಯವರ ಸ್ಥಾನದಲ್ಲಿ ಅವರು 'ಇಂಡಿಯಾ ಸೆಕ್ರೆಟರಿಯಾಗಿ' ವರಿಂಬ ವದಂತಿ ಇದೆ

ಎಕ್ಸ್‌ರೇ ಪರೀಕ್ಷೆ

ತಮ್ಮ ಮುಂದಿನ ಕಾರ್ಯಕ್ರಮವೇನೆಂಬುದನ್ನು ಮಹಾತ್ಮರು ಗೊತ್ತು ಮಾಡಿಲ್ಲ. ಸೋಮವಾರ ವೈದ್ಯ ನಿಪುಣರು ಅವರನ್ನು ಪರೀಕ್ಷಿಸಿ ಎಕ್ಸ್‌ರೇ ತೆಗೆಯುವರು. ಬೊಂಬಾಯಿಗೆ ಭೇಟಿ ಕೊಟ್ಟು ಅನಂತರ ಅನುಕೂಲವಾದ ಒಂದು ಸ್ಥಳದಲ್ಲಿ ವಿಶ್ರಾಂತಿ ತೆಗೆದುಕೊಳ್ಳುವರು

ಜಪಾನ್ ನೌಕಾ ನಾಯಕನ ಮರಣ

ಯುದ್ಧ ರಂಗದಲ್ಲಿ ವಿಮಾನ ಸ್ಫೋಟದಿಂದ ತಮ್ಮ ಸೇನೆಗೆ ಆಜ್ಞೆ ಕೊಡುತ್ತಿದ್ದಾಗ ಜಪಾನಿನ ನೌಕಾ ಸೇನಾಪತಿ ಆ|| ಮಿನಿಚಿಕೋಗರವರು ಮೃತರಾದರೆಂದು ವರದಿಯಾಗಿದೆ ಹಿಂದೆ ಒಂದು ಬಾರಿ ಇವರು ಟೋಗೆಯೋ ಕತ್ತು ಹೋದರೆಂದು ವರದಿಯಾಗಿತ್ತು.

ವೈಸರಾಯರೇ ಜವಾಬ್ದಾರರು

ಮಹಾತ್ಮರ ಬಿಡುಗಡೆಯ ನಿರ್ಧಾರವು ವೈಸರಾಯರ ಜವಾಬ್ದಾರಿಯ ಮೇಲೆಯೇ ತೆಗೆದುಕೊಳ್ಳಲ್ಪಟ್ಟಿದೆಯೆಂದು ಲಂಡನ್ನಿನ ಅಧಿಕಾರ ವರ್ಗದಲ್ಲಿ ಹೇಳಲಾಗಿದೆ ಅದರೂ ಬ್ರಿಟಿಷ್ ಸರ್ಕಾರಕ್ಕೆ ಮುಂಚಿತವಾಗಿ ತಿಳಿಸಿಯೇ ಕಾರ್ಯಕ್ರಮವನ್ನು ಕೈಕೊಳ್ಳಲಾಗಿದೆಯೆಂದು ಹೇಳಲಾಗಿದೆ

ಭಾರತ ಸಮುದ್ರರಂಗದಲ್ಲಿ ಬ್ರಿಟಿಷ್ ಸಬ್‌ಮೆರಿನ್‌ಗಳು

ಪೂರ್ವ ಸಮುದ್ರರಂಗದಲ್ಲಿ ಜಪಾನೀಯರು ಮಾಡಿಕೊಂಡಿದ್ದ ವ್ಯವಹಾರ ಮಾರ್ಗಗಳನ್ನೆಲ್ಲಾ ನಿರ್ನಾಮ ಮಾಡುವಂಥ ಕಾರ್ಯವನ್ನು ಬ್ರಿ. ಸಬ್‌ಮೆರಿನ್‌ಗಳು ಈಗ ಕೈಗೊಂಡಿವೆ ಈಗಾಗಲೇ ೨೦೦ ಮೈಲಿಯಷ್ಟು ದೂರ ಬ್ರಿ|| ರ ತಮ್ಮ ವ್ಯವಸ್ಥೆಯನ್ನು ಮಾಡಿರುತ್ತಾರೆ ಇವಕ್ಕೆ ಇನ್ನ ರಿಗೂ ನೆದರ್‌ಲ್ಯಾಂಡ್ ಸಮುದ್ರದಲ್ಲಿ ಶತ್ರು ನೌಕಾ ಬಲವನ್ನು ನಿಷ್ಕ್ರಿಯ ಕೆಲಸ ಮಾಡಿದ ಬ್ರಿ|| ನೌಕಾ ನಿಪುಣರು ಕೈಗೂಡಿಸಿದ್ದಾರೆ ಇದರಿಂದ ಜಪಾನರ ಸರಕು ನೌಕೆಗಳು, ಸೈನ್ಯದ ನೌಕೆಗಳು ಎಲ್ಲವನ್ನೂ ಪಟ್ಟಿಸ ಕಾಣಿಸುವುವು.

ಅಗ್ನಿ ಪರ್ವತದ ಧಾಳಿ

ವೆಸ್ಟ್ ಇಂಡೀಸ್ [illegible] ಎಂಬ ಅಗ್ನಿ ಪರ್ವತವು [illegible] ಪಕ್ಕದ [illegible] ಆರಂಭಿಸಿದೆ ಇದರಿಂದ [illegible] ದ ಪ್ರವಾಹವು [illegible] ಬಹಳ ಆಸ್ತಿಯ ನಷ್ಟ [illegible] ಯಿಸುತ್ತಿದೆ

ಅಮೆರಿಕದಲ್ಲಿ ಹೊಸ ರಾಕೆಟ್ ಗನ್

[illegible]

ರೈಲಿಗೆ ಸಿಕ್ಕಿ ತಲೆ ಕತ್ತರಿಸಿತು

[ಸ್ವಂ ಸು] ಬೆಂಗಳೂರು ೬

ನಿನ್ನೆ ಬೆಳಗ್ಗೆ ಯಶವಂತಪುರದ ರೈಲ್ವೆ ಸ್ಟೇಷನ್ನಿನಲ್ಲಿ ಸೇಲಂ ಜಿಲ್ಲೆಯ [illegible] ಪಿಳ್ಳೆ ಎಂಬಾತನು ಪ್ಯಾಸೆಂಜರ್ ರೈಲಿಗೆ ಸಿಕ್ಕಿದುದರಿಂದ ಅವನ ತಲೆಯು ಕತ್ತರಿಸಲ್ಪಟ್ಟು ದೇಹವು ಕಂಬಿಗಳ ಮಧ್ಯೆ ಹತ್ತು ಅಡಿ ದೂರ ಎಳೆಯಲ್ಪಟ್ಟಿತೆಂದು ವರದಿಯಾಗಿದೆ. ಆತನು ನಿರುದ್ಯೋಗಿ ಎಂದು ಗೊತ್ತಾಗಿದೆ.

ವ್ಯಾಗನ್ನುಗಳಿಗೆ ಸಿಕ್ಕಿ ಮರಣ

ಬೆಂಗಳೂರು ಗೋರಿ ಪಾಳ್ಯದ ತಿಮ್ಮ ಎಂಬುವನು ಸಿಟಿ ರೈಲ್ವೆ ಸ್ಟೇಷನ್ನಿನಲ್ಲಿ ಗುಡಿಸುತ್ತಿದ್ದಾಗ ಅಕಸ್ಮಾತ್ ಎರಡು ವ್ಯಾಗನ್ನುಗಳ ಮಧ್ಯೆ ಎದೆಗೆ ಸಿಕ್ಕಿ ಕತ್ತರಿಸಿಹೋಗಿ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಾಗಿದ್ದನು. ಇಂದಿನ ಆತನು ಗುಣವಾಗದೆ ಮೃತಪಟ್ಟನು.

ಆರೋಗ್ಯಾಧಿಕಾರಿಗಳು

ಮೈಸೂರಿನಲ್ಲಿ ಮೆಡಿಕಲ್ ಇನ್ಸ್‌ಪೆಕ್ಟರಾಗಿರುವ ಶ್ರೀ ಸಿ. ವೆಂಕಟರಮಣಯ್ಯನವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ವರ್ಗಾಯಿಸಲಾಗಿದೆ. ಬೆಂಗಳೂರಿನಲ್ಲಿ ಮೆಡಿಕಲ್ ಇನ್ಸ್‌ಪೆಕ್ಟರಾಗಿರುವ ಶ್ರೀ ಸೀತಾರಾಮಯ್ಯನವರನ್ನು ಮೈಸೂರು ಕೃಷ್ಣರಾಜೇಂದ್ರ ಆಸ್ಪತ್ರೆಗೆ ವರ್ಗಾಯಿಸಲಾಗಿದೆ.

ತಿವಾರಿ ಪ್ರಕರಣ

ಬೆಂಗಳೂರು ಪೌರಸಭಾ ಸದಸ್ಯರಾದ ಶ್ರೀ ರಾಮಲಾಲ್ ತಿವಾರಿಯವರ ಮೇಲೆ ಇರುವ ಲಂಚದ ಅಪಾದನೆಯನ್ನು ಪರಿಶೀಲಿಸಲು ಬೆಂಗಳೂರು ಪೌರಸಭೆಯು ಈ ದಿನ ಈ ಕೆಳಗೆ ಕಂಡ ಸದಸ್ಯರ ಸಮಿತಿಯನ್ನು ನೇಮಿಸಿತು:—ಶ್ರೀಗಳಾದ ಹೆಚ್. ಸಿ ಸೂರ್ಯನಾರಾಯಣರಾವ್, (ಅಧ್ಯಕ್ಷರು) ಕೆ. ಎಂ. ನಾಗಣ್ಣ, ಕೆ. ಎ. ರಾಮಸ್ವಾಮಿ, ಎಲ್. ಎಸ್. ರಾಜು, ಎ ಜೆ. ಖಲೀಲ್.

ಸೀಮೆಎಣ್ಣೆ ಬೆಲೆ

[illegible] ನೀಡುವ ನಲ್ಲಿ ಸೀಮೆ ಎಣ್ಣೆ ದರಗಳನ್ನು ಸರ್ಕಾರದವರು ಗೊತ್ತುಮಾಡಿದ್ದಾರೆ. ಪ್ರತಿ ಮನೆಗೂ ಕೊಡುವ ಬುಡ್ಡಿ [illegible] ಉಪಯೋಗಿಸುವವರು ಇನ್ನು ಮುಂದೆ ೧೦॥ ಗ್ಯಾಲನ್ನಿನಿಂದ ೫೦ ಗ್ಯಾಲನ್‌ವರೆಗೆ ನಾಲ್ಕು ಆಣೆಯನ್ನು [illegible] ೨೦೦ ಗ್ಯಾಲನ್‌ವರೆಗೆ [illegible] ೨೦೧ ರಿಂದ ೫೦೦ ಗ್ಯಾಲನ್ ವರೆಗೆ [illegible] ೫೦೦ ರಿಂದ ೧೦೦೦ ಗ್ಯಾಲನ್‌ಗಳಿಗೆ ಒಂದು ರೂಪಾಯಿಯನ್ನೂ ಅದರ ಮೇಲಿನ ಪ್ರತಿ ಸಾವಿರ ಗ್ಯಾಲನ್ನಿಗೂ ಒಂದು ರೂಪಾಯಿಯನ್ನೂ ಕೊಡಬೇಕೆಂದು ವಿಧಾಯಕವಾಗಿದೆ.

ಹೊಳೇನರಸೀಪುರದ ಪೌರಸಭಾ ಚುನಾವಣೆ

ಈ ಕೆಳಗೆ ಕಂಡವರು ಪೌರ ಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಉಮೇದ್ವಾರರಾಗಿ ನಿಂತಿದ್ದಾರೆ:—

೧ ನೇ ಬ್ಲಾಕು—ಎಂ. ಎ. ರಾಮಾನುಜ ಯ್ಯಂಗಾರ್, ಕೆ. ಲಕ್ಷ್ಮಪ್ಪನವರು. ೨ ನೇ ಬ್ಲಾಕ್—ಟಿ. ಉಗ್ರಯ್ಯಶೆಟ್ಟರು, ಎಸ್. ಸಿ. ಸೂರ್ಯನಾರಾಯಣ ಶೆಟ್ಟರು. ೩ ನೇ ಬ್ಲಾಕು—ಎಸ್. ನಂಜಪ್ಪನವರು, ಬಿ. ಎ. ಪುಟ್ಟರಾಜು ಶೆಟ್ಟರು, ಕೆ. ಹೆಚ್. ನಾಗಲಿಂಗ ಶೆಟ್ಟರು. ೪ ನೇ ಬ್ಲಾಕು—ಕೆ. ಮುತ್ತಣ್ಣನವರು, ಚಲುವೇಗೌಡರು, ಜಿ. ವಿ ವೆಂಕಟಾಚಲ ಶೆಟ್ಟರು. ೫ ನೇ ಬ್ಲಾಕು—ಎಂ. ಅನಂತರಾಮಯ್ಯನವರು, ಆರ್. ಎಸ್. ರಾಮಣ್ಣನವರು, ಹೆಚ್. ಎಸ್. ಸೂರ್ಯನಾರಾಯಣರಾಯರು. ೬ ನೇ ಬ್ಲಾಕು—ಹೆಚ್. ಎ. ರಾಮಣ್ಣನವರು.

ಪೌರಸಭೆಯ ಸಂತೋಷ

ಬೆಂಗಳೂರು ಪೌರಸಭೆಯವರು ಈ ದಿನ ಒಂದು ವಿಶೇಷ ಅಧಿವೇಶನವನ್ನು ಕರೆದು ಮಹಾತ್ಮರ ಬಿಡುಗಡೆಗಾಗಿ ಸಂತೋಷವನ್ನು ಸೂಚಿಸಿ ಅವರಿಗೆ ಬೇಗ ಆರೋಗ್ಯವುಂಟಾಗಲೆಂದು ಪ್ರಾರ್ಥಿಸಿರುತ್ತಾರೆ.

ಇಂಫಾಲ್ ಮುತ್ತಿಗೆ ವಾಪಸು

ಮಳೆಗಾಲವು ಸಮೀಪಿಸುತ್ತಿರುವುದರಿಂದಲೂ ಕಾಲವು ಸ್ವಲ್ಪವೇ ಇರುವುದರಿಂದಲೂ ಜಪಾನರು ಇಂಫಾಲಿನ ಮೇಲೆ ನಡೆಸಬೇಕೆಂದಿದ್ದ ಸಂಪೂರ್ಣ ಮುತ್ತಿಗೆಯ ಪ್ರಯತ್ನವನ್ನು ಸದ್ಯಕ್ಕೆ ಮುನ್ನಾ ಮಾಡಿರಬಹುದೆಂದು ಹೇಳಲಾಗಿದೆ.

MEDICINES

Take your requirements from

RAGHULAL & CO.,

1748, Sayaji Rao Road, (Upstairs, Mysore Hall), MYSORE.

ಔಷಧಗಳು

ನಿಮಗೆ ಬೇಕಾಗುವುದನ್ನೆಲ್ಲ ಇವರಲ್ಲಿ ಕೊಂಡುಕೊಳ್ಳಿ.

ರಘುಲಾಲ್ ಅಂಡ್ ಕೋ.,

1748, ಸಯ್ಯಾಜೀರಾವ್ ರೋಡ್, (ಮೈಸೂರು ಹಾಲ್ ಮಹಡಿ), ಮೈಸೂರು.

Edited, printed and published by A. R. Nagarajan, at the Sadhvi Press, D. Subbiah Road, Mysore

ಪರೀಕ್ಷೆಗೆ ವಿದ್ಯಾರ್ಥಿಗಳ ಬಹಿಷ್ಕಾರ

ಕಾವ್ಯ ಕೇಳದ ಒಂದು ಪಠ್ಯ ಪುಸ್ತಕವನ್ನು ಕೊಡಲಿಲ್ಲವೆಂಬ ಕಾರಣದ ಮೇಲೆ ಡೆಲ್ಲಿ ವಿಶ್ವವಿದ್ಯಾಲಯದ ಎಲ್.ಎಲ್.ಬಿ ಪರೀಕ್ಷೆಯ ವಿದ್ಯಾರ್ಥಿಗಳು ಪ್ರಶ್ನೆಗಳಿಗೆ ಉತ್ತರವನ್ನೇ ಬರೆಯದೆ ಹೊರಗೆ ಎದ್ದು ಬಂದರು. ಸ್ವಲ್ಪ ಹೊತ್ತಿನ ಮೇಲೆ ರಿಜಿಸ್ಟ್ರಾರರು ಬಂದು ಪುಸ್ತಕವನ್ನು ಕೊಡುವುದಾಗಿ ಹೇಳಿದರು. ಆದರೆ ಕಾಲವು ಅತಿಕ್ರಮಿಸಿತ್ತು.

ತಾಳಿಗೂ ಚಿನ್ನವಿಲ್ಲ

ಮಧುರೆಯಲ್ಲಿ ಚಿನ್ನದ ವ್ಯಾಪಾರವು ನಿಂತುಹೋಗಿದೆ. ರಿಸರ್ವ್ ಬ್ಯಾಂಕಿನಲ್ಲಿ ಬಂಗಾರವಿಲ್ಲ ಎಂದುದೆ ಬೆಲೆಯಾದ್ದರಿಂದ ಜನರಿಗೆ ತುಂಬಾ ತೊಂದರೆಯಾಗಿದೆ. ಚಿನ್ನದ ವ್ಯಾಪಾರದ ಮೇಲೆ ಹಾಕಿರುವ ತೆರಿಗೆಯ ಹೊರೆಯೇ ಇದಕ್ಕೆ ಕಾರಣವೆಂದು ಹೇಳಲಾಗಿದೆ. ತಾಳಿಯನ್ನು ಮಾಡಿಸುವುದಕ್ಕೂ ಸ್ವಲ್ಪ ಬಂಗಾರ ದೊರೆಯುತ್ತಿಲ್ಲವೆಂದು ಸಹ ವರದಿಯಾಗಿದೆ.

ಪಂಜಾಬ್ ಪ್ರಕರಣದ ಪ್ರತಿಧ್ವನಿ

ಲಾಹೋರ್ ಪೌರ ಸಭಾ ಬಾಲಿಕಾ ಪಾಠಶಾಲಾ ಲೇಡಿ ಸೂಪರಿಂಟೆಂಡೆಂಟರಾದ ಶ್ರೀಮತಿ ದುರ್ಗಾದಾಸ್‌ರವರನ್ನು ಕೆಲಸದಿಂದ ವಜಾ ಮಾಡಿದ್ದಕ್ಕಾಗಿ ಪಂಜಾಬಿನ ಮಂತ್ರಿ ಮಿ॥ ಶೌಕತ್ ಹಯಾತ್ ಖಾನರನ್ನು ಗೌರ್ನರರು ವಜಾ ಮಾಡಿ ಬಹಳ ಕೋಲಾಹಲವಾಗಿದೆಯಷ್ಟೆ. ಈಗ ಆಕೆಯನ್ನು ಪುನಃ ಅದೇ ಸ್ಥಾನದಲ್ಲಿ ನೇಮಿಸಿರುವುದಾಗಿ ಗೊತ್ತಾಗಿದೆ.

ಬೇಕಾಗಿದೆ

ನಮ್ಮ ಕನ್ನಡನಾಡಿನ ಎಲ್ಲ ಕಡೆಗಳಲ್ಲಿಯೂ ಲಕ್ಷಾಂತರ ಪ್ರತಿಗಳನ್ನು ಖರ್ಚಾಗುವಂಥ "ಪ್ರತಿ ಮನೆಯ ಪುಸ್ತಕಗಳ" ಪ್ರಕಟಣಾ ಕಾರ್ಯವನ್ನು ಕೈಗೊಳ್ಳುವವರೂ,

ಕನ್ನಡ ಲಿಪಿಯನ್ನು ಬರಹಕ್ಕಿಂತಲೂ ಹೆಚ್ಚು ವೇಗದಿಂದ ಬರೆಯುವಂಥ "ಕನ್ನಡ ಟೈಪ್ ರೈಟರ್" ಯಂತ್ರದ ಸರಬರಾಜು ಕಾರ್ಯವನ್ನು ಕೈಗೊಳ್ಳುವವರೂ,

ಗಾಜಿನ ಚಿತ್ರಗಳಿಗೆ ಬದಲಾಗಿ "ಕಾಗದದ ಮೇಲಿನ ಚಿತ್ರಗಳನ್ನು" ಪರದೆಯ ಮೇಲೆ ತೋರಿಸುವಂಥ ಅತಿ ಸುಲಭ ಹೊಸತರದ "ಮ್ಯಾಜಿಕ್ ಲ್ಯಾಂಟರ್ನ್"ಗಳನ್ನು ತಯಾರುಮಾಡುವ ಕೆಲಸವನ್ನು ಕೈಗೊಳ್ಳುವವರೂ.

ಎಣ್ಣೆಯ ವಾಸನೆ, ಮಸಿ ಒತ್ತುವ ಮುಂತಾದ ಯಾವ ಕಷ್ಟವೂ ಇಲ್ಲದೆ ಸಾವಿರಗಟ್ಟಲೆ "ಡೂಪ್ಲಿಕೇಟುಗಳ"ನ್ನು ತಯಾರಿಸುವ ಕೆಲಸವನ್ನು ಕೈಗೊಳ್ಳುವವರೂ ಬೇಕಾಗಿದ್ದಾರೆ.

ಪ್ರತಿ ಕೆಲಸಕ್ಕೂ [illegible] ಟಿಕೆಟ್ಟಿನ ವಿನಃ ಯಾಗಿ [illegible] ಬರೆಯಿರಿ

ಕೆ. ಅನಂತಸುಬ್ಬರಾಯ,

ರಾಜಕಾರ್ಯ ಅಗ್ರಹಾರ, ಮೈಸೂರು.

ಸೈನಿಕರ ವಿನೋದಕ್ಕೆ ೨೦...

ಸಂಗೀತ, ನರ್ತನ ಮುಂತಾದ ಕಾರ್ಯಕ್ರಮಗಳನ್ನು ಮಾಡಿ ಆಗಾಗ್ಗೆ ಭಾರತೀಯ ಸೈನಿಕರಿಗೆ ಮನೋರಂಜನೆಯನ್ನು ಮಾಡಲು ಸ್ವಲ್ಪ ಇಲಾಖೆಯವರು ೨೦ ಲಕ್ಷ ರೂಪಾಯಿ [illegible] ಯನ್ನು ಮಾಡಿರುವುದಕ್ಕೆ ಇಂಡಿಯಾ ಸರ್ಕಾರದವರು ಒಪ್ಪಿಗೆ ಇತ್ತಿದ್ದಾರೆ.

ಅಮೇರಿಕಾಕ್ಕೆ ಕೊಟ್ಟ ನಿಲ್ದಾಣಗಳ ಉಪಯೋ...

ಎಂಥ ಕಾಲಗಳ ಅವಧಿಗೆ [illegible] ಕೆಲವು ನಿಲ್ದಾಣಗಳನ್ನು ಇಂಗ್ಲೆಂಡು ಅಮೇರಿಕಾಕ್ಕೆ ಕೊಟ್ಟಿರುವುದಷ್ಟೆ. ಮುಂದೆ ಯುದ್ಧ ಕಾಲವು ಭಾಗ ಪಡೆದ ಇವರು ಇವುಗಳಲ್ಲಿ ಈ ನಿಲ್ದಾಣಗಳನ್ನು ಇಂಗ್ಲೆಂಡು ಆಕ್ರಮಿಸಿಕೊಂಡು ಉಪಯೋಗಿಸುತ್ತದೆಯೇ? ಎಂಬ ಪ್ರಶ್ನೆಗೆ ಇಲ್ಲ, ಎಂಬುದಾಗಿ ಮಿ॥ ಅಟ್ಲಿಯವರು ಪಾರ್ಲಿಮೆಂಟಿನಲ್ಲಿ ಹೇಳಿದ್ದಾರೆ.

ರಾಮೆಲ್ಲರ ಪರಿಶೀಲ...

ಮೆಡಿಟರೇನಿಯನ್ ಸಮುದ್ರತೀರದ ಕಾವಲು ವ್ಯವಸ್ಥೆಗಳನ್ನು ಜರ್ಮನಿಯ ಸೇನಾನಿ ರಾಮೆಲ್ಲರು ಪರಿಶೀಲಿಸುತ್ತಿರುವುದಾಗಿ ಗೊತ್ತಾಗಿದೆ.

ನೋಟೀಸ್

ಮೈಸೂರು ಸಿಟಿ ಮುನ್ಸಿಪಲ್ ಕೌನ್ಸಿಲ್ ಪ್ರೆಸಿಡೆಂಟರವರ ಆಫೀಸಿನಿಂದ

ಮೈಸೂರು ಸಿಟಿ ಮುನ್ಸಿಪಾಲಿಟಿ ಆಕ್ಟಿನ ೬೩, ೬೪ ಸೆಕ್ಷನ್ ಪ್ರಕಾರ ಮೈಸೂರು ಸಿಟಿ ಮೊಹಲ್ಲಾ, [illegible] ಮೊಹಲ್ಲಾ, [illegible] ಮೊಹಲ್ಲಾ, ದೇವರಾಜ ಮೊಹಲ್ಲಾ [illegible] ವಾಸಸ್ಥರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ :—

ಸಿಟಿ ಮುನ್ಸಿಪಾಲಿಟಿಯಲ್ಲಿ [illegible] ನೇ ಸಾಲಿಗೆ ನಡೆದಿರತಕ್ಕ ಮನೆಗಳ ಬಾಬತು ಜನರಲ್ ರಿವಿಷನ್ ಅಸೆಸ್ಮೆಂಟ್ ರಿಜಿಸ್ಟರುಗಳನ್ನು ತಯಾರಿಸಿ ಮುನ್ಸಿಪಲ್ ಆಫೀಸಿನಲ್ಲಿ ಇಡಲಾಗಿದೆ. ಇಷ್ಟವುಳ್ಳವರು ಅಂದರೆ ಮನೆ ಮಾಲೀಕರಾಗಲಿ ಅನುಭೋಗದಾರರಾಗಲಿ ಅವರ ಏಜೆಂಟರಾಗಲಿ ಆಫೀಸು ಇರತಕ್ಕ ದಿನಗಳಲ್ಲಿ ಮಧ್ಯಾಹ್ನ ೩ ಘಂಟೆ ಯಿಂದ ೫ ಘಂಟೆವರೆವಿಗೆ ಬಂದು ನೋಡಿಕೊಂಡು ಹೋಗಬಹುದು. ಅಲ್ಲದೆ ರಿಜಿಸ್ಟರಿನ ನಕಲು ಬೇಕಾದ ಎಕ್ಸ್‌ಟ್ರಾಕ್ಟನ್ನು ಫೀಜು ಇಲ್ಲದೆ ತಾವೇ ಬರೆದುಕೊಳ್ಳಬಹುದು. ಈ ರಿಜಿಸ್ಟರುಗಳಿರತಕ್ಕ ಕಂದಾಯದ ದರದಲ್ಲಿ ತಕರಾರ್ ಉಳ್ಳವರು ಈ ನೋಟೀಸು ಪ್ರಕಟವಾದ ದಿವಸದಿಂದ ೩೦ ದಿವಸದೊಳಗಾಗಿ ತಮ್ಮ ತಕರಾರನ್ನು ಲಿಖಿತದ ಮೂಲಕ ಈ ಆಫೀಸಿಗೆ ಕಳುಹಿಸಬಹುದು. ಆ ಮಿಯಾದು ಮೀರಿ ಬಂದ ತಕರಾರುಗಳನ್ನು ಗಮನಿಸಲಾಗುವುದಿಲ್ಲವೆಂದು ತಿಳಿಸಿದೆ.

ಆರ್. ರಾಮಚಂದ್ರರಾವ್

ಛಾರ್ಜಿನಲ್ಲಿರುವ, ಪ್ರೆಸಿಡೆಂಟ್, ಸಿಟಿ ಮುನ್ಸಿಪಲ್ ಕೌನ್ಸಿಲ್, ಮೈಸೂರು.

ತಾ॥ 1-5-44

ಸ್ತ್ರೀಯರ ಸೌಕರ್ಯಕ್ಕೆ

[illegible] ಪ್ರತ್ಯೇಕವಾಗಿ ವ್ಯಾಪಾರ ಕೊಡುವ ಏರ್ಪಾಡುಮಾಡಲಾಗಿರುತ್ತೆ

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲೀ ಬ್ರಾಂಡ್ ಕಾಫಿ ಪುಡಿ

ಉಪಯೋಗಿಸಿ.

ಆ. ಪುಟ್ಟಸ್ವಾಮಿ, ವಿನಾಯಕ ಮಂಡಿ, ದೇವರಾಜ ಮಾರ್ಕೆಟ್, ಮೈಸೂರು

[illegible] ಸಿಟಿಯ ಎಲ್ಲಾ ಮೊಹಲ್ಲಾ [illegible]

[illegible] ಸಕ್ಕರೆ ಕೊಡಲ್ಪ

WEEKLY EDITION

ಸಂಪುಟ ೮]　　ಸೋಮವಾರ ೮--೫--೪೪　　[ಸಂಚಿಕೆ ೨೯

ಮಿತ್ರರು ಬುಧೆಡಾಂಗ್ ಖಾಲಿ ಮಾಡಿದರು.

'ನನ್ನ ಆರೋಗ್ಯದಬಗ್ಗೆ ಚಿಂತಿಸಬೇಡಿ'—ಮಹಾತ್ಮ ಗಾಂಧಿ

ಸುರ್ಮಾ ಕಣಿವೆ ಮೇಲೆ ಜಪಾನರು ಬಾಂಬು ಹಾಕಿದರು

ನನ್ನ ಚಿಂತೆ ಬೇಡ

"ನನ್ನ ಪ್ರಾಣದ ವಿಷಯವಾಗಿಯಾಗಲಿ ಆರೋಗ್ಯದ ವಿಷಯವಾಗಿಯಾಗಲಿ ಚಿಂತಿಸಬೇಡಿ. ಎಲ್ಲವೂ ಜಗನ್ನಿಯಾಮಕನ ಅಧೀನ. ಭಗವಂತನ ಸನ್ನಿಧಿಯಲ್ಲಿರುವವನು ಎಂಬುದಾಗಿ, ನಿಮ್ಮ ಆರೋಗ್ಯ ಹ್ಯಾಗಿದೆ? ಎಂದು ಪ್ರಶ್ನಿಸಿದವರಿಗೆಲ್ಲಾ ಗಾಂಧಿಜೀ ಉತ್ತರವಿತ್ತಿರುವರು.

ಹರಿಜನೋದ್ಧಾರಕ್ಕೆ ಮಹಾತ್ಮರ ಮನವಿ

ಮೊನ್ನೆ ಹೆಂಗಸರು ಮುಖ್ಯವಾಗಿಯಾಗಿ ಬಹುಮಂದಿ ಪರ್ಣಕುಟಿಬಳಿ ನೆರೆದಿದ್ದು ಪ್ರಾರ್ಥನಾ ಸಮಯಗಳಲ್ಲಿ ಮಹಾತ್ಮರ ದರ್ಶನ ತೆಗೆದುಕೊಂಡರು. ಮಹಾತ್ಮರು ಪ್ರಾರ್ಥನೆ ಮುಗಿದ ಮೇಲೆ ಹರಿಜನೋದ್ಧಾರಕ್ಕಾಗಿ ಎಲ್ಲರೂ ನಿಧಿ ಒದಗಿಸಬೇಕೆಂದು ಮನವಿಮಾಡಿಕೊಂಡರು.

ಮುಂದೇನು ?

ಸಂಪೂರ್ಣ ಆರೋಗ್ಯ ಹೊಂದಿದ ಕೂಡಲೆ ಮಹಾತ್ಮರು ವೈಸರಾಯ್ ವೇವಲ್ ರೊಡನೆ ಸಂಧಾನ ಆರಂಭಿಸುವರೆಂದೂ, ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯರನ್ನ ಕಾಣಲು ಅವಕಾಶ ಕೊಡಿರೆಂದು ಸರ್ಕಾರದವರನ್ನು ಕೇಳುವರೆಂದೂ ದೆಹಲಿ ರಾಜಕೀಯ ಆವರಣವಲ್ಲಿ ಹೇಳಲಾಗುತ್ತಿದೆ.

ಭಕ್ತರ ಪ್ರವಾಹ

ಶನಿವಾರ ಮಧ್ಯಾಹ್ನ ಪರ್ಣಕುಟಿಗೆ ಗಾಂಧೀ ಭಕ್ತರು ಪ್ರವಾಹದೋಪಾದಿಯಲ್ಲಿ ಒಂದೇ ಸಮನೆ ಹೋಗಿ ಬರುತ್ತಿದ್ದರು. ತಮ್ಮ ಬಳಿಗೆ ಬಂದ ಪ್ರತಿಯೊಬ್ಬರೊಂದಿಗೂ ಮಹಾತ್ಮರು ಒಂದೊಂದು ಮಾತಾಡುತ್ತಿದ್ದರು.

ಕುವರರ ಆಗಮನ

ಮಹಾತ್ಮರ ಪುತ್ರರಾದ ಶ್ರೀ ರಾಮದಾಸ ಗಾಂಧಿಯವರು ಪರ್ಣಕುಟಿಗೆ ನಿನ್ನೆ ಆಗಮಿಸಿದರು. ಶ್ರೀ ದೇವದಾಸ್ ಗಾಂಧಿಯವರೂ ಶೀಘ್ರದಲ್ಲೇ ಬರುವ ನಿರೀಕ್ಷಣೆ ಇದೆ.

ವೈದ್ಯರಿಗೂ ಮಹಾತ್ಮರಿಗೂ ಭಿನ್ನಾಭಿಪ್ರಾಯ

ಮಹಾತ್ಮರು ಸ್ವತಹಾ ಊಹಿಸಿರುವುದಕ್ಕಿಂತ ಹೆಚ್ಚು ಖಾಯಿಲೆ ಬಿದ್ದಿರುವರೆಂಬ ವೈದ್ಯರ ಅಭಿಪ್ರಾಯವನ್ನು ಮಹಾತ್ಮರು ಒಪ್ಪಿಲ್ಲ. ಆದರೂ ಅವರ ಪೋಷಣೆಯಲ್ಲಿರುವಷ್ಟು ಕಾಲವೂ ಅವರ ಆಜ್ಞೆಗೆ ಒಳಪಡುವರು.

ಸೇವಾಗ್ರಾಮದಲ್ಲಿ ಸಿದ್ಧತೆ

ಗಾಂಧಿಯವರು ಸೇವಾಗ್ರಾಮಕ್ಕೆ ಹಿಂದಿರುಗುವ ನಿರೀಕ್ಷಣೆ ಮೇಲೆ ಅಲ್ಲಿರುವ ಮಹಾತ್ಮರ ಗುಡಿಸಲಿನಲ್ಲಿ ಸಕಲಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆಯೆಂದು ವರ್ತಮಾನ ಬಂದಿದೆ. ವಾರ್ಧಾ ಮತ್ತು ಸೇವಾಗ್ರಾಮದಲ್ಲಿ ಸಕ್ಕರೂ ಆನಂದಭರಿತರಾಗಿದ್ದಾರೆ.

[illegible] ಪುಷ್ಪವೃಷ್ಟಿ

ಗಾಂಧಿಜೀಯವರ ಪ್ರತಿನಿಧಿಗಳೊಬ್ಬರು ಪ್ರತಿದಿನ ಸಂಜೆ ಆಘಾಖಾನರ ಅರಮನೆ ಆವರಣಕ್ಕೆ ಹೋಗಿ ಅಲ್ಲಿರುವ ಕಸ್ತೂರಿಬಾ ಮತ್ತು ಮಹದೇವ ದೇಸಾಯಿ [illegible] ಸಮಾಧಿ [illegible] ಹೂವಿನ ಹಂದರಗಳನ್ನು ಅರ್ಪಿಸಿ ಬರಲು ಏರ್ಪಾಡು ಮಾಡಲಾಗಿದೆಯೆಂದು ತಿಳಿದು ಬಂದಿದೆ.

ಸುಬ್ರಹ್ಮಣ್ಯಂ ಹೇಳಿಕೆ

ರಾಷ್ಟ್ರೀಯ ಸರ್ಕಾರ ಸ್ಥಾಪನೆಯೊಂದೇ ಮಹಾತ್ಮರಿಗೆ ಶಾಂತಿ ಒದಗಿಸುತ್ತದೆ ಎಂದು ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಟಿ. ಸುಬ್ರಹ್ಮಣ್ಯಂರವರು ಗಾಂಧಿಜೀ ಖುಲಾಸೆ ಬಗ್ಗೆ ಸಂತೋಷ ವ್ಯಕ್ತಪಡಿಸುತ್ತಾ ನುಡಿದಿರುವರು.

ಆಯುರ್ವೇದ ಸಿದ್ಧೌಷಧಿ ಕೊಡಿರೆಂಬ ಸಲಹೆ.

ಪೂನಾದ ನಾಲ್ಕು ಮಂದಿ ವೈದ್ಯರು ಪರ್ಣಕುಟಿಗೆ ಹೋಗಿ ಡಾ|| ಸುಶೀಲಾ ನಾಯರ್ ರೊಡನೆ ಕಲೆತು ಗಾಂಧಿಜೀ ಖಾಯಿಲೆಯ ಪೂರ್ವಾಪರ ಸಂಗತಿಗಳನ್ನೆಲ್ಲಾ ವಿಚಾರಿಸಿಕೊಂಡು ರಕ್ತ ಹೀನತೆ ನಿವಾರಣೆಗೆ ಆಯುರ್ವೇದ ಸಿದ್ಧೌಷಧಿಯೊಂದನ್ನು ಶಿಫಾರಸು ಮಾಡಿರ ಪುದಾಗಿ ಸುದ್ದಿ ಬಂದಿದೆ.

ಊರೆ ಇಲ್ಲದೆ ನಡೆದರು

ಮೊನ್ನೆ ಸಂಜೆ ತಮ್ಮ ಕೋಣೆಯಿಂದ ಹೊರಗಿನ ಆವರಣಕ್ಕೆ ಯಾವ ಊರೆಯ ಸಹಾಯವೂ ಇಲ್ಲದೆ ಗಾಂಧಿಯವರು ಪ್ರಾರ್ಥನೆಗಾಗಿ ನಡೆದು ಬಂದರು. ಸ್ವಲ್ಪ ಬೇಯಿಸಿದ ಪದಾರ್ಥ, ಹಣ್ಣು, ಹಂಪಲು, ಆಡಿನ ಹಾಲು ಇವನ್ನು ಸೇವಿಸಿ ಜಾಗ್ರತೆ ಮಲಗಿದರು.

ಮುಂಬೈಗೆ ಹೋಗುವ ಅಪೇಕ್ಷೆ

ಮುಂಬೈ ಜುಹು ಹವಾ ಸೇವಿಸಲು ಮಹಾತ್ಮರು ಆದಷ್ಟು ಬೇಗ ಅಲ್ಲಿಗೆ ಹೋಗಲು ಬಯಸಿದ್ದಾರೆ. ಎರಡು ತಿಂಗಳ ಹಿಂದೆ ಅಲ್ಲಿ ಅವರ ದಸ್ತಗಿರಿಯಾದುದು.

ಸ್ಟಾಲಿನ್‌ರಿಗೆ ಅಪೇಕ್ಷೆ ಇದೆ

ರೋಂ ಗುರುಪೀಠದವರೊಂದಿಗೆ ಮಾ|| ಸ್ಟಾಲಿನ್‌ರು ಒಂದು ಒಪ್ಪಂದಕ್ಕೆ ಬರಲು ಇಷ್ಟಪಟ್ಟವರಾಗಿರುವರೆಂದು ಪೋಲಿಷ್ ಕ್ಯಾಥೋಲಿಕ್ ಗುಂಪುಗಳು ಪ್ರಕಟಿಸಿರುವರು.

ಮಿತ್ರರು ಮುಂದೆ ಎದುರಿಸಬೇಕಾದುದು ?

ತನ್ನ ದಳನಾಯಕರನ್ನು [illegible] ಸಮಾವೇಶಯಿಸುತ್ತಾ ಜನರಲ್ [illegible] ಮಾರ್ಲ್ ರೋಮೆಲ್‌ರ [illegible] ಕಾರಕ ಪಟಿನೆಗಳನ್ನು ಎದುರಿಸಬೇಕಾಗಿದೆ ಯೆಂದು ನುಡಿದಿರುವರು.

ಪರೀಕ್ಷೆಗಳ ಫಲಿತಾಂಶ

ಮೈಸೂರು, ೮

ಈ ದಿನ ಎಸ್. ಎಸ್. ಎಲ್. ಸಿ. ಇಂಟರ್‌ಮೀಡಿಯಟ್, ಬಿ. ಎಸ್. ಸಿ. ಬಿ. ಎಸ್. ಸಿ. ಆನರ್ಸ್, ಬಿ.ಎ. ಆನರ್ಸ್ ಮತ್ತು ಬಿ. ಎ. ಪರೀಕ್ಷೆಗಳ ಫಲಿತಾಂಶಗಳು ಹೊರಬಿದ್ದಿವೆ. ರಿಸಲ್ಟ್ ತಿಳಿದುಕೊಳ್ಳಲಪೇಕ್ಷಿಸುವ ವಿದ್ಯಾರ್ಥಿಗಳು ನಮ್ಮ ಆಫೀಸಿಗೆ ಬಂದು ಪ್ರಕಟಣೆಗಳನ್ನು ನೋಡಿಕೊಂಡು ಹೋಗಬಹುದು.

ರೇಸ್ ಪತ್ರ.

ನಿನ್ನೆ ರಾತ್ರಿ ಮೈಸೂರಿಂದ ೯ ಗಂಟೆಗೆ ಹೊರಟ ಗೂಡ್ಸ್ ರೈಲಿನ ಎಂಜಿನ್ ಟೆಂಡರಿನಲ್ಲಿ ಎಸ್ಪತ್ತೆಂದು ಪೌಂಡುಗಳಷ್ಟು ರೇಸ್ಟು ಇದ್ದವನ್ನು ರೈ|| ಪೋ|| ಇ|| ಪುಟ್ಟಸ್ವಾಮಿ, ಹೆಡ್ ಕಾ|| ಕರಿಯಪ್ಪ, ಹನುಮಂತರಾವ್, ಶ್ರೀನಿವಾಸಮೂರ್ತಿ ಮುಂತಾದವರುಗಳು ಪತ್ತೆ ಹಚ್ಚಿದ್ದಾರೆ.

ನಿನ್ನೆ ಬೆಳಗಿನ ಎಕ್ಸ್‌ಪ್ರೆಸ್‌ನಲ್ಲಿ ಮೂವರು ಅನಿಕರ್ನಾಟಕರು [illegible] ಗಳಷ್ಟು ಮಾಲು ಎಂಟು ಪೌಂ. ರೇಸ್ಟನ್ನು ಇಟ್ಟುಕೊಂಡು ಬೆಂಗಳೂರಿಗೆ ಹೋಗುತ್ತಿದ್ದುದನ್ನು ರೈ|| ಪೋಲೀಸಿನವರು ಕನ್ನಾಂಬಾಡಿ ಹತ್ತಿರ ಕಂಡು ಹಿಡಿದಿದ್ದಾರೆ.

ಫುಟ್‌ಬಾಲ್

ಮೈಸೂರು ಮೊಹಲ್ಲ ಕೆರೆ ಮೈದಾನದಲ್ಲಿ ನಿನ್ನೆ ದಿವಸ ಸಂಧ್ಯಾಕಾಲ ಟ್ರೈನ್ ಸೆಮಿ ಫೈನಲ್ಸ್ ಪಂದ್ಯವು ಕಿಲ್ಲಾ ಕ್ಲಬ್ ನವರಿಗೂ ಸೆಲ್ಲೂರ ಟೀಮಿಗೂ ನಡೆದು ಬಾಟಿಲವರು ಒಂದು ಗೋಲಿನಿಂದ ವಿಜಯಿಗಳಾದರು. ಎರಡು ಟೀಮಿ ನವರ ಕ್ರೀಡಾ ವೈಖರಿಯೂ ಸೊಗಸಾಗಿತ್ತು. ಸೆಲ್ಲೂರು ಟೀಮಿನವರು ಬಹಳ ಕಷ್ಟಪಟ್ಟು ಆಡಿದರು.

ಮಿತ್ರರು ಭೂಕೆಡಾಂಗ್ ಬಿಟ್ಟರು

ಆರಕನ್ [illegible] ಮಿತ್ರಪಡೆಗಳು ತಮ್ಮ ಸ್ಥಾನಗಳ ಪುನರ್ ವ್ಯವಸ್ಥೆ ಕಾರ್ಯವನ್ನು [illegible] ನಡೆಸಿಕೊಂಡವೆಂದೂ [illegible] ಪ್ರದೇಶದಿಂದ ಮಿತ್ರರು ಭೂ [illegible] ಪ್ರಕಟನೆ ಹೊರಟಿದೆ.

ಸುರ್ಮಾ ಕಣಿವೆ ಮೇಲೆ ಜಪಾನರ ಧಾಳಿ

ಸುರ್ಮಾ ಕಣಿವೆ ಭಾಗಗಳ ಮೇಲೆ ಜಪಾನರು ಏಪ್ರಿಲ್ [illegible] ತಾ|| [illegible] ಆಕ್ರಮಣ ನಡೆಸಿದರೆಂದೂ ಅಲ್ಲೆಲ್ಲಾ ಪ್ರಬಲ ಬಾಂಬುಗಳನ್ನೆಸೆದರೆಂದೂ [illegible] ಬಹಳಷ್ಟು ಸಾವು ನೋವು, ನಷ್ಟ [illegible] ವಿಷಯವಾಗಿ ಅಸ್ಸಾಂ ಸರ್ಕಾರ ಇದೇ ತಿಂಗಳ ತಾ|| ಹೊರಡಿಸಿದ ಪ್ರಕಟಣೆ ಈಗ ಬೆಳಕಿಗೆ ಬಂದಿದೆ.

ಕೊಹಿಮಾ ಕಾಳಗ

ಕೊಹಿಮಾ ಸಮರದಲ್ಲಿ ಭೀಕರತೆ ಹೆಚ್ಚಿದೆ. ಶತ್ರುಗಳು ಮಿತ್ರರನ್ನ ಒಂದು ಸ್ಥಾನದಿಂದ ಓಡಿಸಿದರು. ಆದರೆ ಮಿತ್ರರು ಸ್ವಲ್ಪ ಹೊತ್ತಿನಲ್ಲಿ ಆ ಸ್ಥಾನವನ್ನು ಪುನಃ ಆಕ್ರಮಿಸಿದರು. ಜಿಲ್ಲಾ ಕಮಿಷನರರ ಬಂಗಲೆ ಪ್ರದೇಶದಲ್ಲಿ ಜಪಾನರು ಬಂಡೆಗಳನ್ನು ಅಡ್ಡ ಇಟ್ಟರು. ಮಿತ್ರರ ಟ್ಯಾಂಕ್ ದಳ ಆ ಅಡಚಣೆಯನ್ನು ತೆಗೆದುಹಾಕಿತು.

ಕಟ್ಟ ಕಡೇ ಸುದ್ದಿ

ಎಲ್. ಎಸ್. ಪ್ರಥಮ ಸ್ಥಾನ

ಸ್ವಂ. ವಾ. [illegible]]　　ಬೆಂಗಳೂರು, ೮

ಸಂಸ್ಥಾನದ ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಶ್ರೀ ಹಿ. ಸಿ. ಗ. [illegible] ಎಂಬ ವಿದ್ಯಾರ್ಥಿ ಮೊದಲನೇ ಸ್ಥಾನ ಪಡೆದಿರುವನು.

ಎಸ್. ಎಸ್. ಎಲ್. ಸಿ. ಯಲ್ಲಿ ಪ್ರಥಮ ೫ ಸ್ಥಾನ ಪಡೆದವರು

ಶ್ರೀಯುತರುಗಳಾದ ಎಸ್. ನಾರಾಯಣಸ್ವಾಮಿ, ಟಿ. ಕೆ. ಶ್ರೀರಂಗಶೆಟ್ಟಿ, ಆರ್. ವಿ. ಪದ್ಮನಾಭ, ಬಿ. ಎಸ್. ಗೋಪಾಲಕೃಷ್ಣಶೆಟ್ಟಿ, ಸಿ. ಆರ್. ವೆಂಕಟರಾವ್, ಎ. ಶ್ರೀಕಂಠ ಈ ವಿದ್ಯಾರ್ಥಿಗಳು ಸಂಸ್ಥಾನದ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಮೊದಲನೆ ೫ ಸ್ಥಾನಗಳಲ್ಲಿ ತೇರ್ಗಡೆ ಹೊಂದಿರುವವರು. ಪರೀಕ್ಷೆಗೆ ಕುಳಿತವರಲ್ಲಿ ಶೇಕಡಾ [illegible] ವಿದ್ಯಾರ್ಥಿಗಳು ಉತ್ತೀರ್ಣರಾಗಿರುವರು. [illegible] ರಷ್ಟು ಕಟ್ಟಕೊನೆಗೆ [illegible] ತೇರ್ಗಡೆಯಾಗಿದೆ.

ದಂಡಿನ ನ್ಯಾಯಾಧೀಶರು ಮೈಸೂರು ಸರ್ವೀಸಿಗೆ

ಬೆಂಗಳೂರು ದಂಡಿನ ಜಿಲ್ಲಾಧೀಶರಾದ ಶ್ರೀ ಮಾದಪ್ಪನವರು ಜಿಲ್ಲಾ ನ್ಯಾಯಾಧೀಶರಾಗಿ ಮೈಸೂರು ಸರ್ವೀಸಿಗೆ [illegible] ಸಂಭವ ವಿದೆಯೆಂದು ಹೇಳಲಾಗಿದೆ.

ರಿಜಿಸ್ಟ್ರಾರ್

ಇದೇ ಜುಲೈ ತಿಂಗಳಿಗೆ [illegible] ನ್ಯಾಯಾಧೀಶರಾದ ಶ್ರೀ ಕೃಷ್ಣರಾವ್ [illegible] ರವರು ಕೆಲಸದಿಂದ ರಿಟೈರ್ [illegible] ಗೊತ್ತಾಗಿದೆ.

ನೂರಿನ ಕಮಿಷನರ್

ಸಂಸ್ಥಾನದ ಸಿವಿಲ್ ಸರ್ವೀಸ್ [illegible] ನೂರಿನ ಕಮಿಷನರ್ [illegible]

ಸರ್ಕಾರದಿಂದ ಮಂಜೂರು

[illegible] ಗೊತ್ತಾಗಿದೆ.

ವಾರ ಭವಿಷ್ಯ

ತಾ|| ೯-೫-೪೪ ರಿಂದ ೧೫-೫-೪೪ ರವರೆಗೆ
(ಶ್ರೀ ನಿತ್ಯಾನಂದ ಸ್ವಾಮಿಗಳಿಂದ)

ಮೇಷ— ಇಚ್ಛಾ ಶಕ್ತಿ ಕಲ್ಪನಾಶಕ್ತಿಗಳ ಮೂಲಕ ಯೋಚನೆ ಮಾಡಿ ಗೊತ್ತುಮಾಡಿಕೊಂಡಂತೆ ನಿಮ್ಮ ಶಕ್ತಿ ಕೈಮೀರಿದರೂ ಕಷ್ಟಪಡಬೇಕಾಗಿ ಬರುವುದು. ಆರೋಗ್ಯ, ಮಾನಸಿಕ ಸ್ಥಿತಿ ಸಾಧಾರಣ. ಆರ್ಥಿಕ ತೊಂದರೆ ಮಿತ್ರರ ಸಹಾಯದಿಂದ ದೂರವಾಗಬಹುದು. ಚಿಕ್ಕ ಪ್ರವಾಸ ಬಸ್ಸಿನ ಉತ್ತಮ. ತಾ|| ೯-೫-೧೦-೧೧ ಶುಭ

ವೃಷಭ— ಆಚಾರ ಮೇಲೋಕೆ ಆವನೆ ಬಾಮು ತಿಳಿದುಕೊಂಡಂತೆ ಮಾಡಬೇಕು ವ್ಯಾಪಾರ ಸೌಕರ್ಯಗಳಲ್ಲಿ ನುಡಿದಂತೆ ನಡೆದು ಕೊಳ್ಳಿ. ಹಾನಿಯಾಗಲಾರದು. ಆರೋಗ್ಯ, ಆರ್ಥಿಕ, ಮಾನಸಿಕ ಸ್ಥಿತಿಗಳು ಚೆನ್ನಾಗಿರುವುವು. ತಾ|| ೯-೧೦-೧೧ ವ್ಯವಸ್ಥಿತ ಭೇಟಿ ಜಸ, ಲಾಭ, ಸುಖ

ಮಿಥುನ— ಆರೋಗ್ಯ ಸ್ವಲ್ಪ ದುರ್ಬಲ ಮಾನಸಿಕಸ್ಥಿತಿ ಚೆನ್ನಾಗಿರಲಾರದು. ಆರ್ಥಿಕ ಅಭಿವೃದ್ಧಿ ಕಡಿಮೆ ಖರ್ಚು ಹೆಚ್ಚುವುದು ನೌಕರಿ, ಪ್ರವಾಸ, ವ್ಯಾಪಾರಗಳಲ್ಲಿ ನಷ್ಟವಿಲ್ಲ. ಆದರೆ ತಾ|| ೯-೧೧-೧೩-೧೪ ರಂದು ಅಲ್ಪ ಪ್ರವಾಸ ಖರ್ಚು ಹೆಚ್ಚು.

ಕರ್ಕ— ಉದ್ಯೋಗ, ನೌಕರಿ, ಪ್ರವಾಸಗಳಲ್ಲಿ ದಸ್ತು, ಭಯ, ಮಾನಸಿಕಸ್ಥಿತಿಗಳು ಸರಿಯಾಗಿಲ್ಲದೆ ಬೇಜಾರಾದರೂ, ಆರ್ಥಿಕ ಸ್ಥಿತಿ ಶಕ್ತಿವಿದ್ದರೂ ಮಿತ್ರರಿಂದ ಸಹಾಯ ದೊರಕಿ, ಕಷ್ಟ ದೂರವಾಗುವುದು, ಪತ್ನಿ, ಮಕ್ಕಳ ಆರೋಗ್ಯದ ಕಡೆ ಲಕ್ಷ್ಯವಿರಲಿ ತಾ|| ೧೦.೧೧-೧೨ ಪತ್ರ ಬರುವುದು

ಸಿಂಹ— ಆರೋಗ್ಯ ಮಾನಸಿಕ ಸ್ಥಿತಿ ಚೆನ್ನಾಗಿರಲಾರದು, ವ್ಯಾಪಾರ, ನೌಕರಿ ಪ್ರವಾಸಗಳಲ್ಲಿ ಮನಸ್ಸಿಲ್ಲದೆ ಹಾನಿ ಸಂಭವ ತಾ|| ೯-೧೦-೧೧-೧೨ ಮಿತ್ರ ಸಹಾಯ

ಕನ್ಯಾ— ಜಾಣತನದಿಂದ ಮಾಡುವುದಕ್ಕೆ ಬಾಲಿ ಸಂತೋಷಪಡುವಿರಿ. ಆರೋಗ್ಯ, ಆರ್ಥಿಕ, ಮಾನಸಿಕ, ವ್ಯಾಪಾರ, ಉದ್ಯೋಗ, ನೌಕರಿ, ಪ್ರವಾಸ, ಮಂಗಳ ಕಾರ್ಯಾದಿ ದೃಷ್ಟಿಯಿಂದ ಉತ್ತಮ. ತಾ|| ೯-೧೦-೧೧-೧೨ ಅಲ್ಪ ಪ್ರವಾಸ, ಖರ್ಚು

ತುಲಾ— ಆರೋಗ್ಯ, ಮಾನಸಿಕ ಸ್ಥಿತಿ ಉತ್ತಮ. ಮಾನಸಿಕತೆ ಬಹಳ, ಸ್ತ್ರೀ ವಿಷಯದಲ್ಲಿ ಜಾಗರೂಕರಾಗಿರಬಹುದು. ಆತ್ಮ ಪ್ರಮಾಣ ಮಾಡಿಕೊಳ್ಳಿ. ಅನರ್ಥವಾದೀತು ಮಂಗಳ ಕಾರ್ಯಗಳು ಉತ್ತಮ. ತಾ|| ೯-೧೦-೧೧-೧೨ ಸಂತೋಷ, ಖರ್ಚು.

ವೃಶ್ಚಿಕ— ಸ್ವಜನರಿಂದ ಸಂತೋಷ ಕಾರ್ಯಗಳು ಉತ್ತಮ. ಮಾನಸಿಕ, ಆರ್ಥಿಕ ಆರೋಗ್ಯ ಚೆನ್ನಾಗಿದೆ. ಲಾಭವಾಗಿ ಬರತಕ್ಕ ಬಾಕಿ ವಸೂಲಾಗಿ ಮನಸ್ಸಿಗೆ ಹರ್ಷ. ತಾ|| ೮-೯-೧೧-೧೨ ಪತ್ರಾಗಮನ.

ಧನು— ಆರೋಗ್ಯ, ಆರ್ಥಿಕ ಸ್ಥಿತಿ ಉತ್ತಮವಾದರೂ, ಮಾನಸಿಕ ಚೆನ್ನಾಗಿರಲಾರದು. ವ್ಯಾಪಾರ, ಉದ್ಯೋಗ, ನೌಕರಿಗಳಲ್ಲಿ ಪ್ರತಿಸ್ಪರ್ಧಿಯಿಂದ ಹಾನಿ. ಮಂಗಳ ಕಾರ್ಯ ಪ್ರವಾಸ ಸುಖವಾಗಿ ನೆರವೇರುವುವು. ತಾ|| ೮-೧೧-೧೨-೧೩ ಕಲಹ, ನಿಷ್ಪ್ರಯೋಜಕ

ಮಕರ— ಸರಳ ಸ್ವಭಾವನ್ನು ನೋಡಿ ಸಂತೋಷ ಪಡುವವನೇ ಶ್ರೇಷ್ಠ ಪುರುಷ ಮಾನಸಿಕ ವ್ಯಥೆ ತಪ್ಪಿಸಿಕೊಳ್ಳಬೇಕು, ಆರೋಗ್ಯ, ಆರ್ಥಿಕ ಚೆನ್ನಾಗಿದ್ದರೂ, ಮಾನಸಿಕ ಚೆನ್ನಾಗಿರಲಾರದು. ವ್ಯಾಪಾರ, ನೌಕರಿ, ಪ್ರವಾಸಗಳಲ್ಲಿ ಕೈಕೆಳಗಿನ ಜನರಿಂದ ತೊಂದರೆ. ಮಂಗಲ ಕೆಲಸಗಳಿಗೆ ಜಯ. ತಾ|| ೮-೧೦-೧೪ ವಾರ್ತೆ, ಮನೋವ್ಯಥೆ

ಕುಂಭ— ದೇವರು ಕೊಟ್ಟ ಕಾಲದಲ್ಲಿ ದಾನ, ಧರ್ಮಮಾಡಿ ಪುಣ್ಯ ಸಂಪಾದಿಸಿ ಆರೋಗ್ಯ, ಆರ್ಥಿಕ, ಮಾನಸಿಕ ಸ್ಥಿತಿ ಉತ್ತಮವಿದ್ದು ಶತ್ರು ರಾಜಿಗೆ ಬರಬಹುದು. ಉದ್ಯೋಗ, ನೌಕರಿ, ಪ್ರವಾಸ, ದಾನ ಧರ್ಮಗಳಲ್ಲಿ ಅಭಿವೃದ್ಧಿ, ಪ್ರಗತಿ. ಸಾಧು ಸಜ್ಜನರ ಸಂದರ್ಶನ. ತಾ|| ೮-೧೧-೧೨ ಕ್ಲೇಶ

ಮೀನ— ಖರ್ಚು ಬಾಬು ಜಾಸ್ತಿ. ಆರೋಗ್ಯ, ಮಾನಸಿಕಸ್ಥಿತಿ ಉತ್ತಮ. ನಿಮ್ಮ ನಂಬಿಗೆಗಳಾದ್ದರಿಂದ ಮಿತ್ರರಿಂದ ಸಹಾಯ ಖಂಡಿತ ದೊರೆಯುವುದು. ವ್ಯಾಪಾರ, ನೌಕರಿ, ಉದ್ಯೋಗ, ಪ್ರವಾಸ ಉತ್ತಮ. ತಾ|| ೮-೧೦-೧೨ ಪತ್ರ ನಿರೀಕ್ಷಣೆ, ಮಿತ್ರ ಭೇಟಿ.

ಟಾರ್ಪೆಡೋವಿಂದ ಪಾರಾಗಲು ಟೆಲಿಗ್ರಾಂ ಸಹಾಯ

ಹಡಗುಗಳು ಟಾರ್ಪೆಡೊ ಹೊಡೆತಕ್ಕೆ ಸಿಕ್ಕದೆ ಪಾರಾಗಲು ಸಹಕರಿಸುವಂಥಾ ಹೊಸ ವಿಧಾನದ ಟೆಲಿಗ್ರಾಮ್ ನಿಯಮಗಳನ್ನು ಕಂಡು ಹಿಡಿದಿರುವುದಾಗಿ ನ್ಯೂಯಾರ್ಕಿನ ಜೆನರಲ್ ಎಲಿಯೇಕ್ ಕಾರ್ಪೊರೇಷನ್ ಜನರಲ್ ಮ್ಯಾನೇಜರ್‌ರವರು ತಿಳಿಸುವರು.

ಕರಿ ಬಾವುಟ ಪ್ರದರ್ಶನ

ಮಂತ್ರಿಗಳು ತಮ್ಮ ಪದವಿ ಸ್ವೀಕಾರ ಕಾಲದಲ್ಲಿ ತಮಗೆಲ್ಲಾ ಗೋಧಿ ಹಿಟ್ಟನ್ನು ಒದಗಿಸಲು ಭರವಸೆ ಕೊಟ್ಟಿದ್ದು ಇನ್ನೂ ಆ ಭರವಸೆಯಂತೆ ನಡೆದುಕೊಂಡಿಲ್ಲವಾಗಿ ಪೆಷಾವರಿನ ಬಡಜನರು ಕರಿ ಬಾವುಟಗಳನ್ನು ಹಿಡಿದು ಮೆರವಣಿಗೆ ನಡೆಸಿ ಸಭೆ ಸೇರಿ ಮಂತ್ರಿಗಳನ್ನು ವಿರೋಧಿಸುವ ಠರಾವುಗಳನ್ನು ಪಾಸುಮಾಡಿದ್ದಾರೆ

ವ್ಯವಸಾಯ ಸಮ್ಮೇಳನ

ನಂಜನಗೂಡು ೮

ನಂಜನಗೂಡಿನಲ್ಲಿರುವ ಶ್ರೀ ಶ್ರೀಕಂಠೇಶ್ವರ ವ್ಯವಸಾಯ ಸಂಘದವರು ಇದೇ ಮಾಹೆ ೧೧ ಮತ್ತು ೧೨ ನೇ ತಾ|| ಗಳಲ್ಲಿ ವ್ಯವಸಾಯ ಸಮ್ಮೇಳನವನ್ನು ನಂಜನಗೂಡಿನಲ್ಲಿ ನಡೆಸಲು ಏರ್ಪಡಿಸಿದ್ದಾರೆ. ಸ್ಥಳೀಯ ಸಂಸ್ಥೆಗಳ ಸಚಿವರಾದ ಶ್ರೀಮಾನ್ ಹೆಚ್. ಬಿ. ಗುಂಡಪ್ಪಗೌಡರು, ಸಮ್ಮೇಳನದ ಆರಂಭ ಮಹೋತ್ಸವವನ್ನೂ, ಮೈಸೂರು ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟ್ ರಾದ ಶ್ರೀಮಾನ್ ಕೆ. ಸಿ. ಸಣ್ಣಣ್ಣನವರು ಸಮ್ಮೇಳನದ ಅಧ್ಯಕ್ಷತೆಯನ್ನೂ, ಮೈಸೂರು ಜಿಲ್ಲಾ ಡೆಪ್ಯುಟಿ ಕಮೀಷನರ್‌ರಾದ ಶ್ರೀಮಾನ್ ಸಿ. ಎಂ. ಹೆಚ್. ರಣಜೋಧಸಿಂಗ್‌ರವರು ಸಮ್ಮೇಳನಕ್ಕೆ ಸಂಬಂಧಿಸಿದ ವಸ್ತು ಪ್ರದರ್ಶನದ ಪ್ರಾರಂಭೋತ್ಸವವನ್ನೂ ಮತ್ತು ಮೈಸೂರು ಸಂಸ್ಥಾನದ ವ್ಯವಸಾಯದ ಇಲಾಖಾ ಡೈರೆಕ್ಟರ್ ರಾದ ಶ್ರೀಮಾನ್ ಎಂ. ಜೆ. ನರಸಿಂಹನ್‌ರವರು ಬಹುಮಾನ ವಿನಿಯೋಗ ಸಮಾರಂಭದ ಅಧ್ಯಕ್ಷತೆಯನ್ನೂ ವಹಿಸಿ, ದಯಮಾಡಿ ಒಪ್ಪಿರುತ್ತಾರೆ. ವಸ್ತು ಪ್ರದರ್ಶನದಲ್ಲಿ (೧) ದನ್ನೀಯು ರಕ್ಷಣಾಬಲದ ಪ್ರದರ್ಶನ, (೨) ರೇಷ್ಮೆ ಕೈಗಾರಿಕೆಯ ಪ್ರದರ್ಶನ (೩) ವ್ಯವಸಾಯ ಇಲಾಖೆಯ ಪ್ರದರ್ಶನ (೪) ಗ್ರಾಮಾಭಿವೃದ್ಧಿಗೆ ಸಂಬಂಧಿಸಿದ ಪ್ರದರ್ಶನ (೫) ಅರಣ್ಯ ಇಲಾಖೆಗೆ ಸಂಬಂಧಿಸಿದ ಪ್ರದರ್ಶನ, (೬) ಆಯುರ್ವೇದ ಪ್ರದರ್ಶನ (೭) ಅಕ್ಷರ ಪ್ರಚಾರ ಪ್ರದರ್ಶನ ಮತ್ತು (೮) ಫಲ ಪುಷ್ಪ ಪ್ರದರ್ಶನ ಮುಂತಾದುವುಗಳನ್ನು ಮುಖ್ಯ ಅಂಗಗಳಾಗಿ ಏರ್ಪಡಿಸಲಾಗಿದೆ.

ನೆಲಗಡಲೆಕಾಯಿಂದ ಬಟ್ಟೆ ತಯಾರಿ!

ನೆಲಗಡಲೆಕಾಯಿ ಸಸ್ಯದಿಂದ ಒಂದು ರೀತಿಯ ಎಳೆ ತೆಗೆಯಬಹುದಾಗಿದೆ. ಆ ಎಳೆಗಳು ಸಿಲ್ಕಿನಷ್ಟು ಉಲ್ಲನ್ ಆಥಾ ಕಾಟನ್‌ಗಳ ಜೊತೆಯಲ್ಲಿ ಆ ಎಳೆಗಳನ್ನು ಸೇರಿಸಿಕೊಂಡು ಬಟ್ಟೆಯಾಗಿ ಉಪಯೋಗಿಸಬಹುದು. ಅಲ್ಲದೆ ನೆಲಗಡಲೆಕಾಯಿ ಎಳೆಗಳ ದ್ದೇ ಪ್ರತ್ಯೇಕ ಬಟ್ಟೆ ತಯಾರಿಸಲು ಸಾಧ್ಯವಾಗಿದೆ. ಇತರೇ ಹಲವು ಬೀಜಗಳಿಂದ ತಯಾರಾಗುತ್ತಿರುವ ಬಟ್ಟೆಗಳಿಗಿಂತಲೂ ನೆಲಗಡಲೆಕಾಯಿ ಎಳೆಯಿಂದ ನೇಯ್ದ ಬಟ್ಟೆ ಉತ್ತಮ ಎಂದು ಗೊತ್ತಾಗಿದೆ ನೆಲಗಡಲೆಕಾಯನ್ನು ಅಧಿಕವಾಗಿ ಬೆಳೆಯುವ ಇಂಡಿಯಾ ದೇಶಕ್ಕೆ ಈ ವಿಧವಾದ ಬಟ್ಟೆ ತಯಾರಿಯಿಂದ ಉತ್ತಮ ಭವಿಷ್ಯ ಪ್ರಾಪ್ತವಾಗುವುದೆಂದು ಹೇಳಲಾಗಿದೆ

ದ. ಕ. ಜಿಲ್ಲಾ ಮಹಾಸಭಾಧಿವೇಶನ

ಈ ತಿಂಗಳು ೨೦, ೨೧ನೇ ತಾ|| ಉಡುಪಿ ಕ್ಷೇತ್ರದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಹಿಂದೂ ಮಹಾಸಭಾಧಿವೇಶನ ಡಾ|| ಬಿ. ಎಸ್. ಮೂಂಜೆಯವರ ಅಧ್ಯಕ್ಷತೆಯಲ್ಲಿ ನಡೆಯುವುದೆಂದು ತಿಳಿದಿದೆ. ಸ್ವಾಗತ ಸಮಿತಿಯು ಪ್ರತಿಷ್ಠಿತ ಸದಸ್ಯರು ೧೦ ರೂ. ಸಾಮಾನ್ಯ ಸದಸ್ಯರು ೫ ಪ್ರತಿನಿಧಿಗಳು ೨ ರೂ. ಈ ರೀತಿಯ ಅಧಿವೇಶನಕ್ಕೆ ಹೋಗಿಬರಲಿಚ್ಛಿಸುವವರು ಮೇ ೧೫ನೇ ತಾ|| ನೊಳಗೆ ಸ್ವಾಗತ ಸಮಿತಿ ಕಾರ್ಯದರ್ಶಿಗಳಿಗೆ ಹಣ ಕಳುಹಿಸಬೇಕೆಂದು ಪ್ರಕಟವಾಗಿದೆ. ಇತರ ಎಲ್ಲ ಸಿದ್ಧತೆಗಳೂ ಭರದಿಂದ ಸಾಗಿವೆ.

ಟೆಲಿವಿಷನ್ ಅತಿ ಬೇಗ ಸ... ತಿಳಿಸುವುದು

ಯುದ್ಧಾನಂತರ ಅತ್ಯಂತ ಚಿಕ್ಕ ... ಟೆಲಿವಿಷನ್ ಸ್ಟೇಷನ್ ಸಹ ಅಗ್ಗದ ಪ್ರಮಾಣದ, ... ವಿನೋದ ಅನಾಹುತ ಪ್ರಸಂಗಗಳು ಸಮ್ಮೇಳನಗಳು ಮುಂತಾದ ಸುದ್ದಿ ... ಗಳನ್ನು ಆಗ ಜರುಗಿದ ಒಂದೆರಡು ಗಂಟೆ ಒಳಗಾಗಿ ಭೂಮಂಡಲದ ... ವ ಮೂಲೆಗಾದರೂ ತಿಳಿಸಬಲ್ಲುದೆಂದು ಟೆಲಿವಿಷನ್ ಯಂತ್ರ ಪರಿಣತರುಗಳು ... ವರು.

ಶಾಂತಿಸಾಧನೆಗೆ ಜರ್ಮನ್ ವ್ಯಾಪಾರಗಾರರ ಪ್ರಯತ್ನ

ಜರ್ಮನ್ ಕೈಗಾರಿಕೋದ್ಯಮಿಗಳು ... ರನ್ನು ಉರುಳಿಸಲು ಸಿದ್ಧಮಾಡುತ್ತಿದ್ದಾರೆ. ಇದು ವಾಷಿಂಗ್‌ಟನ್‌ಗೆ ಬಂದ ... ರಿ ಸುದ್ದಿ. ಇದರ ಜೊತೆಗೆ ಈ ಟೆಕ್ನೀ... ಸ್ಥೆಗಳಲ್ಲಿರುವ ಸುಮಾರು ೨೦೦೦ ವ್ಯಾಪಾರಗಾರರೂ ಜರ್ಮನಿಗೆ ... ತ್ತು ಸಿದ್ಧಮಾಡುತ್ತಿದ್ದಾರೆ. ಅವರು ... ನಿಯು ಗೆದ್ದಿರುವ ರಾಷ್ಟ್ರಗಳನ್ನೆಲ್ಲ ... ಬಿಡುವುದೂ ಹಿಟ್ಲರನನ್ನು ಸಹ ... ಕೊಲ್ಲುವುದೂ ಸೇರಿವೆ. ಮತ್ತು ... ಮುಂದೆ ಜರ್ಮನಿಯಲ್ಲಿ ಯಾವ ... ಕ್ರಾಂತಿಕಾರಕ ಕೃತ್ಯಗಳೂ ನಡೆ... ತಡೆಹಿಡಿಯಲಾಗಿದೆ.

ಪಾಯಿಸ ಸಮಾರಾಧ...

ಮಹದೇವಾಪುರ ಮಹಾದೇವ ಸೇವಾ... ರ. ಗಾಂಧೀಜೀ ಯವರ ಬಿಡುಗಡೆ... ಸಂತೋಷವಾಗಿಂದು ಬಡಬಗ್ಗರಿಗೆ ಸಮಾರಾಧನೆ ನಡೆಸಿದರು.

Edited, printed and published by A. R. Nagraj at the Sadhvi Press, D... High Road, Mysore.

ಶ್ರೀ ಶ್ರೀಕಂಠೇಶ್ವರ ವ್ಯವಸಾಯ ಸಂಘ, ನಂಜನಗೂಡು

ಮೇಲ್ಕಂಡ ಸಂಘದ ಆಶ್ರಯದಲ್ಲಿ:—

ವ್ಯವಸಾಯ ಸಮ್ಮೇಳನ ಮತ್ತು ವಸ್ತು ಪ್ರದರ್ಶನ

ಇದೇ ಮಾಹೆ ೧೧ ಮತ್ತು ೧೨ ನೇ ತಾ|| ಗಳಲ್ಲಿ ನಡೆಯಲು ನಿರ್ಧಾರವಾಗಿದೆ

ಸಮ್ಮೇಳನ ಸದಸ್ಯತ್ವದ ಚಂದಾ : ಒಂದು ರೂಪಾಯಿ

ಸ್ವಾಗತ ಸಮಿತಿಯ ಸದಸ್ಯತ್ವದ ಚಂದಾ : ಮೂರು ರೂಪಾಯಿ

... ಸಂಘದ ವಿವರಗಳಿಗಾಗಿ ಕಾರ್ಯದರ್ಶಿಯವರೊಡನೆ ಪತ್ರವ್ಯವಹಾರ ಮಾಡಿ

ಬಿ. ಸಿ. ಪಂಡಿತ್, ... ಕಾರ್ಯದರ್ಶಿ

ಬಿ. ಎಸ್. ಎಸ್. ಆರಾಧ್ಯ, ಜನರಲ್ ಸೆಕ್ರೆಟರಿ.

ಸ್ತ್ರೀಯರ ಸೌಕರ್ಯಕ್ಕೆ

... ಸ್ತ್ರೀಯರ ಉಪಯೋಗಕ್ಕಾಗಿ ...

ನಮ್ಮಲ್ಲಿ ತಯಾರಾಗುವ ಸುಪ್ರಸಿದ್ಧ

ಲಿಲ್ಲಿ ಬ್ರಾಂಡ್ ಕಾಫಿ ಪುಡಿ

ವಿಶೇಷತೆ

೧. ಪುಷ್ಟಿಯನ್ನು, ಬಣ್ಣವನ್ನು, ದೇವರಾಜ ಮಾರ್ಕೆಟ್, ...

